ಕಿತ್ತೂರು ಸಂಸ್ಥಾನದ ಆಡಳಿತ ವಿಭಾಗ-ವಿಸ್ತಾರ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ)

ಸಂಶೋಧಕರು
ನರಹರಿ ಕೆ.ಎನ್.

ಮಾರ್ಗದರ್ಶಕರು
ಡಾ. ಕೆ.ಜಿ. ಭಟ್‌ಸೂರಿ
ಶಾಸನಶಾಸ್ತ್ರ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೨

ಕಿತ್ತೂರು ಸಂಸ್ಥಾನದ ಆಡಳಿತ ವಿಭಾಗ-ವಿಸ್ತಾರ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ)

ಸಂಶೋಧಕರು

ನರಹರಿ ಕೆ.ಎನ್.

ಮಾರ್ಗದರ್ಶಕರು

ಡಾ. ಕೆ.ಜಿ. ಭಟ್‌ಸೂರಿ

ಶಾಸನಶಾಸ್ತ್ರ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೨

ಪ್ರಮಾಣ ಪತ್ರ

ಕಿತ್ತೂರು ಸಂಸ್ಥಾನದ ಆಡಳಿತ ವಿಭಾಗ-ವಿಸ್ತಾರ ಎಂಬ ವಿಷಯದ ಕುರಿತು ಡಾ. ಕೆ.ಜಿ. ಭಟ್‌ಸೂರಿ ಅವರ ಮಾರ್ಗದರ್ಶನದಲ್ಲಿ ಸಂಶೋಧನಾ ಅಧ್ಯಯನ ಮಾಡಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ.

ಈ ಮಹಾಪ್ರಬಂಧವನ್ನು ಇದುವರೆಗೂ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : ೧೦.೦೪.೨೦೧೨

ನರಹರಿ ಕೆ.ಎನ್.
ಸಂಶೋಧನ ವಿದ್ಯಾರ್ಥಿ
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ದೃಢೀಕರಣ ಪತ್ರ

ಕಿತ್ತೂರು ಸಂಸ್ಥಾನದ ಆಡಳಿತ ವಿಭಾಗ-ವಿಸ್ತಾರ ಎಂಬ ವಿಷಯದ ಕುರಿತು ನರಹರಿ ಕೆ.ಎನ್. ಅವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನಾ ಅಧ್ಯಯನ ಮಾಡಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದಾರೆ.

ಈ ಮಹಾಪ್ರಬಂಧವನ್ನು ಇದುವರೆಗೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೧೦.೦೪.೨೦೧೨

ಡಾ. ಕೆ.ಜಿ. ಭಟ್‌ಸೂರಿ
ಮಾರ್ಗದರ್ಶಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ವೀರರಾಣಿ ಕಿತ್ತೂರು ಚೆನ್ನಮ್ಮ





ಕಿತ್ತೂರು ಸಂಸ್ಥಾನ: ಆಡಳಿತ ವಿಭಾಗ ಮತ್ತು ವಿಸ್ತಾರ





ಪರಿವಿಡಿ

ಅಧ್ಯಾಯ ನಾಲ್ಕು

ಅಧ್ಯಾಯ ಐದು

ಅಧ್ಯಾಯ ೧

ಅಧ್ಯಯನದ ಅಗತ್ಯ, ವ್ಯಾಪ್ತಿ ಮತ್ತು ವಿಧಾನ

೧.೧ ಪೀಠಿಕೆ

ಬದುಕು-ಬೇರು, ಧರ್ಮ, ಕಲೆ, ಸಾಹಿತ್ಯ, ಶಿಕ್ಷಣ ಇವೆಲ್ಲವೂ ಪರಂಪರೆಯ ಅಂಗ. ಯಾವುದೇ ರಾಜಪರಂಪರೆಯಾಗಲಿ ಅಥವಾ ಆಡಳಿತವಾಗಲಿ ಅಥವಾ ಧರ್ಮ ಪೀಠವಾಗಲಿ ಇವನ್ನು ಅರಿಯಬೇಕಾದರೆ ಇದು ನಡೆದು ಬಂದ ದಾರಿಯನ್ನು ತಿಳಿಯಬೇಕು. ಇದನ್ನೇ ಪ್ರಭುದೇವರು ಹಿಂದಣಹೆಜ್ಜೆಯನರಿಯದೇ ಮುಂದಣದನೇನ ಬಲ್ಲರು[೧] ಎಂದಿದ್ದಾರೆ. ನಾವು ಇತಿಹಾಸ ಅಧ್ಯಯನ ಮಾಡುವಾಗ ಭೂತ, ವರ್ತಮಾನ, ಭವಿಷ್ಯತ್ತಿನ ಕೊಂಡಿಯಂತೆ ಅಧ್ಯಯನ ಮಾಡುವ ಅವಶ್ಯಕತೆ ಇದೆ.

'No Source No History' ಮೂಲ ಆಕರಗಳಿಲ್ಲದೇ ಇತಿಹಾಸವಿಲ್ಲ. ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಜೀವನ ವಿಧಾನಗಳನ್ನು ತಿಳಿಯಬೇಕಾದರೆ ಮೂಲ ಆಕರಗಳ ಅಧ್ಯಯನ ಅವಶ್ಯಕ. ಇದು ಇತಿಹಾಸ. ಸಂಸ್ಕೃತ ಶಬ್ದ ಇತಿಹಾಸ ಎಂಬ ಪದ ಹಿಸ್ಟರಿ ಎಂಬ ಆಂಗ್ಲ ಪದಕ್ಕೆ ಸಮಾನ. ಆಂಗ್ಲ ಹಿಸ್ಟರಿ ಎಂಬ ಪದ ಗ್ರೀಕ್ ಪದದಿಂದ ಉತ್ಪತ್ತಿಯಾಗಿದೆ. ಹಿಸ್ಟೋರಿಯಾ ಇದರ ಅರ್ಥ ಬಲೆಯನ್ನು ನೇಯುವುದು. ಅಂದರೆ ಇತಿಹಾಸವನ್ನು ಕಟ್ಟುವುದು ಎಂದರ್ಥ.[೨] ಇತಿಹಾಸ = ಇತಿ + ಹ + ಆಸ್ ಅಂದರೆ ವಾಸ್ತವಿಕ ನಡೆದ ಘಟನೆಗಳ ನಿರೂಪಣೆ. ಈ ಶಬ್ಧ ಪ್ರಥಮವಾಗಿ ಚಾಂದೋಗ್ಯ ಉಪನಿಷತ್ತಿನಲ್ಲೂ ಇದೆ.[೩] ಕರ್ನಾಟಕವನ್ನು ಕಾವೇರಿಯಿಂದ ಮಾ ಗೋದಾವರಿವರಮಿರ್ಪ ನಾಡ ಎಂದು ಕರೆಯಲಾಗಿದೆ.[೪] ಈ ಭಾಗ ಭೌಗೋಳಿಕವಾಗಿ ವಿಶಾಲವಾದ ಭೂಭಾಗವನ್ನು ಹೊಂದಿದೆ. ಚರಿತ್ರೆಯು ಭೂಗೋಳದ ಭಾಗ ವಾಗಿರದೇ ದೇಶದ ಸಾಮಾಜಿಕ, ಆರ್ಥಿಕ, ಮತ್ತು ರಾಜಕೀಯ ವಿಷಯಗಳನ್ನು ಅಧ್ಯಯನ ಮಾಡುತ್ತದೆ. ಇದು ನಮ್ಮ ಸಮಾಜದ ಪ್ರಗತಿಗೆ–ವಿಗತಿಗೆ ಕಾರಣವಾಗಿದೆ.[೫]

ಪ್ರಸ್ತುತ ಕಿತ್ತೂರು ಗ್ರಾಮವು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನಲ್ಲಿದೆ. ಈ ಗ್ರಾಮವು ಬೆಳಗಾವಿ ಮತ್ತು ಧಾರವಾಡ ನಗರದ ರಾಷ್ಟ್ರೀಯ ಹೆದ್ದಾರಿ ನಂ. ೪ರ ಮೇಲಿದೆ. (ಧಾರವಾಡದಿಂದ ೩೧ ಕಿ.ಮೀ. ಹಾಗೂ ಬೆಳಗಾವಿಯಿಂದ ೪೨ ಕಿ.ಮೀ. ಅಂತರದಲ್ಲಿದೆ) ೧೨ನೇ ಶತಮಾನದ ಪೂರ್ವದಲ್ಲಿ ಈ ಭಾಗವು ಕದಂಬರ ಸಾಮ್ರಾಜ್ಯದ ಅವಿಭಾಜ್ಯ ಅಂಗವಾಗಿ ಆದಾಯದ ಕೇಂದ್ರ ಸ್ಥಾನವಾಗಿತ್ತು. ಈ ಗ್ರಾಮದ ಸಮೀಪವಿರುವ ಹೊಂಡದ ಬಸವಣ್ಣನ ಗುಡಿಯಲ್ಲಿ ಗೋವಾ -ಕದಂಬರ ದೊರೆ ಜಯಕೇಶಿಯ ಕಾಲದ ಶಾಸನ ದೊರೆತಿದ್ದು ಈ ಶಾಸನವು ಕಿತ್ತೂರು ಗ್ರಾಮದ ಹೆಸರನ್ನು ಸೂಚಿಸುತ್ತದೆ.[೬]

ಗೀಜಗನ ಹಳ್ಳಿಯನು ಕಿತ್ತು ಕಟ್ಟಿದನಾಗ
ಪಗಡಿ ಪಟ್ಟದ ಪೇಟೆ ಅಂದ ಚೆಂದ
ಕಿತ್ತು ಕಟ್ಟಿದ ಊರು ಕಿತ್ತೂರು ಹೆಸರಾಗಿ
ಕನ್ನಡದ ನಾಡಲಿ ಬೆಳಕು ತಂದ[೭]

ಕಿತ್ತೂರಿನ ಮೊದಲಿನ ಹೆಸರು 'ಗೀಜಗನಹಳ್ಳಿ', 'ಗೀಜಗನ ಗುಡ್ಡ' ಎಂದು ಕರೆಯಲಾಗುತ್ತಿತ್ತು.[೮] ಹದಿನಾರನೇ ಶತಮಾನದ ಆದಿಯಲ್ಲಿ ಕಿತ್ತೂರು ಪ್ರದೇಶವು ದಟ್ಟವಾದ ಅರಣ್ಯದಿಂದ ಕೂಡಿತ್ತು. ಅನೇಕ ಪಕ್ಷಿಗಳ ಕಿಲ ಕಿಲ ನಾದ ಮತ್ತು ಗೀಜಗನ ಹಕ್ಕಿಗಳ ಗುಂಪುಗಳ ಹಾರಾಟದಿಂದ ಈ ಅರಣ್ಯವನ್ನು ಹೆಚ್ಚಾಗಿ ಗೀಜಗನ ಹಳ್ಳಿ ಎಂದು ಕರೆದಿರುವ ಸಾಧ್ಯತೆ ಇದೆ. ಕಿತ್ತೂರಿಗೆ ಗೀಜಗನ ಹಳ್ಳಿ, ಗೀಜಗನ ಗುಡ್ಡ ಎಂದು ಕರೆದರೂ ಅದು ಅರಣ್ಯ ಪ್ರದೇಶವೆಂದು ಕರೆಯಲ್ಪಟ್ಟರೂ, ಗೀಜಗನ ಹಳ್ಳಿಯೇ ಬೇರೆ ಎಂಬಂತೆಯೇ ಪ್ರಚಾರಕ್ಕೆ ಬಂದಿತು. ಆದರೆ ಕ್ರಿ.ಶ. ೧೬೮೨ರಲ್ಲಿ ಸಂಪಗಾಂವ್‌ದಿಂದ ಕಿತ್ತೂರಿಗೆ ರಾಜಧಾನಿಯ ಸ್ಥಳಾಂತರವಾದುದರಿಂದ ಗೀಜಗನಹಳ್ಳಿಯ ಬದಲು ಮೂಲ ಹೆಸರು ಕಿತ್ತೂರು ಎಂಬ ಪದವೇ ಈ ಪ್ರದೇಶಕ್ಕೆ ಅನ್ವಯವಾಗುತ್ತದೆ. ಎಂ.ಎಂ. ಕಲಬುರ್ಗಿ ಅವರು ಕಿರಿದಾದ ಊರು ಕಿತ್ತೂರು ಎಂದಿದ್ದಾರೆ.[೯]

ಪೂರ್ವಾಧ್ಯಯನಗಳ ಸಮಿಕ್ಷೆ : ಒಂದು ಸಂಸ್ಥಾನದ ಇತಿಹಾಸ ಮತ್ತು ಸಂಸ್ಕೃತಿಯನ್ನು ತಿಳಿಯುವಾಗ ಈವರೆಗೆ ನಡೆದ ಪೂರ್ವ ಅಧ್ಯಯನ ಸಮೀಕ್ಷೆ ಅತ್ಯಗತ್ಯ. ಈ ಪೂರ್ವ ಅಧ್ಯಯನಗಳನ್ನು ಪೂರಕವಾಗಿಟ್ಟುಕೊಂಡಾಗಲೇ ಇವುಗಳಿಂದ ಹೊಸ ಹೊಸ ವಿಷಯಗಳನ್ನು ಹೊರಗೆಡಹಲು ಸಾಧ್ಯ. ಈ ಹಿನ್ನೆಲೆಯಲ್ಲಿ ಕಿತ್ತೂರು ಸಂಸ್ಥಾನಕ್ಕೆ ಸಂಬಂಧಿಸಿದ ಸಂಶೋಧನ ಕೃತಿಗಳು, ಲೇಖನಗಳು ಮತ್ತು ಪ್ರಬಂಧಗಳ ಅವಲೋಕನವನ್ನು ಇಲ್ಲಿ ಮಾಡಲಾಗಿದೆ.

೧.೧.೧. ಪ್ರಕಟಿತ ಕೃತಿಗಳು

ಶಿವಬಸವ ಶಾಸ್ತ್ರಿಯವರು ಬರೆದ "ತುರಕಾರಿ ಪಂಚಮರ ಇತಿಹಾಸ" ಎಂಬ ಗ್ರಂಥದಲ್ಲಿ ಮಲ್ಲಸರ್ಜನ ಕಾಲಕ್ಕೆ ಸಂಬಂಧಿಸಿದಂತೆ ಮಲ್ಲಸರ್ಜನು ಕಾದರೊಳ್ಳಿ ದೇಶಗತ್ತಿ ಮತ್ತು ತಡಕೋಡ ದೇಶಗತ್ತಿಯನ್ನು ವಶಪಡಿಸಿಕೊಂಡು ಆ ದೇಸಾಯಿಯರಿಗೆ ಕೆಲವು ಜಮೀನುಗಳ ಮೇಲಿನ ಹಕ್ಕನ್ನು ಬಿಟ್ಟುಕೊಟ್ಟನೆಂಬ ಎಂಬ ವಿಷಯವಿದೆ. ಈ ಗ್ರಂಥದಲ್ಲಿ ಮಲ್ಲಸರ್ಜನ ವ್ಯಕ್ತಿತ್ವವನ್ನ ಹೆಚ್ಚಾಗಿ ಬಿಂಬಿಸಲು ಪ್ರಯತ್ನ ಮಾಡಲಾಗಿದೆ. ಇಲ್ಲಿ ಕೇವಲ ಕೆಲವೇ ಕರ್ಯಾತುಗಳ ಹೆಸರಿರುವುದೇ ವಿನಃ ಅವುಗಳ ವ್ಯಾಪ್ತಿ, ಆಥವಾ ವಿಸ್ತಾರದ ಬಗ್ಗೆ ಇಲ್ಲಿ ದಾಖಲಿಸಿಲ್ಲ.[೧೦]

ಚೆನ್ನಕ್ಕ ಪಾವಟೆಯವರು ಬರೆದ "ಕಿತ್ತೂರು ಕಥನ" ಎಂಬ ಗ್ರಂಥದಲ್ಲಿ ಒಟ್ಟು ೨೯ ಲೇಖನಗಳಿವೆ. ಇವುಗಳನ್ನು ಮೂರು ವಿಭಾಗಗಳನ್ನಾಗಿ ವಿಂಗಡಿಸಲಾಗಿದ್ದು ಕಿತ್ತೂರು ಸ್ವಾತಂತ್ರ್ಯ ಸಂಗ್ರಾಮ, ಕಿತ್ತೂರು-ಬೆಳವಡಿಯ ಐತಿಹಾಸಿಕ ದಾಖಲೆಗಳು, ಮತ್ತು ರಾಣಿ ಚೆನ್ನಮ್ಮ, ಇತಿಹಾಸ ಮಂಡಲದ ಮಹನೀಯರು, ೧೨೭ ಕೋಟೆಗಳು, ಕಿತ್ತೂರು ೧೪ ಕರ್ಯಾತುಗಳಲ್ಲಿ ಪಸರಿಸಿತ್ತು ಎಂದು ತಿಳಿಸಿದೆ. ಈ ಗ್ರಂಥವು ಕಿತ್ತೂರು ಪರಿಸರದ ಬಗ್ಗೆ ವಿವರಣೆಯನ್ನು ನೀಡುತ್ತದೆ.

ಎರಡನೆ ಭಾಗದಲ್ಲಿ ಕಿತ್ತೂರು ಮತ್ತು ಬೆಳವಡಿ ಐತಿಹಾಸಿಕ ದಾಖಲೆಗಳು ಗ್ರಂಥದಲ್ಲಿ ಕಿತ್ತೂರು ಗತವೈಭವ, ಕಿತ್ತೂರ ಕದನ ಗೀತೆ, ತಲ್ಲೂರ ರಾಯನಗೌಡರ ಕಡಲಾಚೆಯ ಕಾಗದಗಳು, ತಲ್ಲೂರು ರಾಯನಗೌಡರು ಸಂಗ್ರಹಿಸಿದ ಪ್ರಾದೇಶಿಕ ಐತಿಹಾಸಿಕ ದಾಖಲೆಗಳು ಮತ್ತು ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಕಂಪನಿ ಸರಕಾರದ ಪತ್ರ ವ್ಯವಹಾರಗಳ ಕುರಿತಿದೆ.[೧೧] ಶ್ರೀ ವಿ.ಜಿ. ಪಾಟೀಲರು ಬರೆದ "ಕಿತ್ತೂರು ಚೆನ್ನಮ್ಮ" ಗ್ರಂಥದಲ್ಲಿ ಕಿತ್ತೂರಿನ ಪರಿಚಯ, ಅಲ್ಲದೇ ನಕ್ಷೆಯನ್ನು ನೀಡಿ ಈ ಸಾಮ್ರಾಜ್ಯದ ವಿಸ್ತಾರದ ಬಗ್ಗೆ ಗಮನ ಸೆಳೆಯಲಾಗಿದೆ. ಆದರೆ ಸಾಮ್ರಾಜ್ಯದ ವ್ಯಾಪ್ತಿಯ ಬಗ್ಗೆ ಎಲ್ಲೂ ವಿವರಿಸಿಲ್ಲ. ಬ್ರಿಟೀಷ್ ಅಧಿಕಾರಿಗಳ ಪಾತ್ರ, ದತ್ತಕ ವಿಚಾರ ಹಾಗೂ ರಾಯಭಾರಿಯ ಬೌದ್ಧಿಕ ಕೌಶಲ್ಯದ ಬಗ್ಗೆ ಈ ಗ್ರಂಥದಲ್ಲಿ ವಿವರಿಸಲಾಗಿದೆ.[೧೨] ಶ್ರೀ ಸದಾಶಿವ ಒಡೆಯವರವರು ಬರೆದ "ರಾಣಿ ಚೆನ್ನಮ್ಮ" ಗ್ರಂಥದಲ್ಲಿ ಕಿತ್ತೂರಿನ ದೀರ್ಘಕಾಲದ ಇತಿಹಾಸ ದಲ್ಲಿ ೧೨ ಜನ ಅರಸರು ಆಗಿಹೋದರು. ಅವರಲ್ಲಿ ಕಿತ್ತೂರು ಅರಸು ಮನೆತನದ ೫ನೇ ಅಧಿಪತಿ ಅಲ್ಲಪ್ಪಗೌಡ ಸರದೇಸಾಯಿ ಕಾಲದಲ್ಲಿ ಕಿತ್ತೂರು ರಾಜ್ಯದ ರಾಜಧಾನಿಯಾಯಿತು. ಇಲ್ಲಿ ಕೋಟೆಯನ್ನು ಕಟ್ಟಿ ಆಡಳಿತದ ಪ್ರಮುಖ ಕೇಂದ್ರವನ್ನಾಗಿ ಮಾಡಿಕೊಂಡ ಎಂಬ ವಿಷಯ ವನ್ನು ಒಳಗೊಂಡಿದೆ.[೧೩]

ಶ್ರೀ ತಲ್ಲೂರು ರಾಯನಗೌಡರು ಸಂಪಾದಿಸಿ ಬರೆದ "ಮಲ್ಲಸರ್ಜನ ದುಂದುಭಿ" ಗ್ರಂಥ, ಲಾವಣಿ, ಜಾನಪದ ಗೀತೆಗಳಿಂದ ಕೂಡಿದ್ದು, ಕಿತ್ತೂರ ಇತಿಹಾಸದ ಮೇಲೆ ಬೆಳಕನ್ನು ಚೆಲ್ಲಿದೆ. ಕಿತ್ತೂರನ್ನು ನುಂಗಿ ನೀರು ಕುಡಿದ ಟಿಪ್ಪು, ಪೇಶ್ವೆ, ಆಂಗ್ಲರೇ ಹೇಳ ಹೆಸರಿಲ್ಲದೆ ಹೋಗಿರು ವಾಗ, ಹಾಗೂ ಉಳಿಯಬೇಕೆಂದು ದೇಶದ ೭೦೦ ಸಂಸ್ಥಾನಗಳು ಅಳಿದು ಹೋಗಿರುವಾಗ, ಎಂದಿಗೂ ಅಮರ ಕೀರ್ತಿಯನ್ನು ಗಳಿಸಿದ ಕಿತ್ತೂರು ಇಂದಿಗೂ ಅಜರಾಮರವಾಗಿ ಉಳಿದಂತಾಗಿದೆ ಎಂದು ಮಲ್ಲೇಂದ್ರಭೂಪ ಕಾವ್ಯದಲ್ಲಿ ವೀರರಾಣಿ ಚೆನ್ನಮ್ಮನನ್ನು ಹೊಗಳಿದ್ದಾನೆ. ಅದರಲ್ಲಿ ಚೆನ್ನಮ್ಮನ ಸಾಮ್ರಾಜ್ಯ ಎಂದೆಂದೂ ಮರೆಯದ ವೀರ ಸಾಮ್ರಾಜ್ಯ ಎಂದು ದಾಖಲಿಸಿದೆ.[೧೪] ಗ.ಸ. ಹಾಲಪ್ಪ ನವರು ಬರೆದ 'ಭಾರತ ಸ್ವಾತಂತ್ರ್ಯದ ಬೆಳ್ಳಿ ಚುಕ್ಕಿ' ಗ್ರಂಥದಲ್ಲಿ ಕಿತ್ತೂರು ಸಂಸ್ಥಾನದ ಮೂಲ ರಾಜರುಗಳು, ಆಂಗ್ಲ ಅಧಿಕಾರಿಗಳ ಬಗ್ಗೆ ವಿವರಣೆ ನೀಡಲಾಗಿದೆ. ಕಿತ್ತೂರು ಸಂಸ್ಥಾನ ಮತ್ತು ಆಂಗ್ಲ ಅಧಿಕಾರಿಗಳ ನಡುವೆ ನಡೆದ ಯುದ್ಧದ ಸಿದ್ಧತೆಯನ್ನು ಈ ಗ್ರಂಥದಲ್ಲಿ ಉಲ್ಲೇಖಿಸ ಲಾಗಿದೆ. ಸ್ಟಿವನ್‌ಸನ್ ಮತ್ತು ಎಲಿಯಟ್‌ರ ಸಲಹೆಯನ್ನು ಚಾಪ್ಲಿನ್‌ನು ತಿರಸ್ಕರಿಸಿದ ಪರಿಣಾಮ ವಾಗಿ ಸಂದಾನದ ಎಲ್ಲ ಪ್ರಯತ್ನಗಳು ವಿಫಲವಾದ ವಿಷಯ ಉಲ್ಲೇಖಿತವಾಗಿದೆ.[೧೫] ತಲ್ಲೂರು ರಾಯನ ಗೌಡರು ಪಾಟೀಲ್ ಸಂಪಾದಿಸಿದ "ಮಲ್ಲಸರ್ಜನನ ಕಾವ್ಯ" ಗ್ರಂಥದಲ್ಲಿ ಅಲ್ಲಲ್ಲಿ ಶೋಕರಸ, ವೀರರಸ, ಭಕ್ತಿರಸಗಳಿಂದ ತುಂಬಿದ ಚೌಪದಿಗಳನ್ನು ಕಾಣಬಹುದು. ಈ ಕಾವ್ಯವನ್ನು ರುದ್ರ ಕವಿ ಬರೆದನೆಂದು ಹೇಳಲಾಗಿದೆ. ಈ ಗ್ರಂಥದಲ್ಲಿ ಅನೇಕ ಹಾಡುಗಳು, ಸಾಂಗತ್ಯ ಮತ್ತು ಕಾವ್ಯವನ್ನು ಬರೆದಿದ್ದಾನೆ. ಈ ಕಾವ್ಯದ ಮೂಲವಸ್ತು ಮಲ್ಲಸರ್ಜನನ ಜೀವನದ ಕಥೆ ಯಾಗಿದೆ. ಮಲ್ಲಸರ್ಜನನ ಆಡಳಿತ, ಟಿಪ್ಪುವಿನಿಂದ ಬಂಧನ, ಪೇಶ್ವೆ ಮತ್ತು ಬ್ರಿಟೀಷರ ತುಳಿತಕ್ಕೆ ಗುರಿಯಾದ ರೀತಿ ಈ ಗ್ರಂಥದಲ್ಲಿದೆ.[೧೬]

ವಿ.ಜಿ. ಪಾಟೀಲ್‌ರು ಬರೆದ "ಕಿತ್ತೂರು ದೊರೆ ಮಲ್ಲಸರ್ಜ" ಗ್ರಂಥದಲ್ಲಿ ಕಿತ್ತೂರು ಸಂಸ್ಥಾನದ ಪರಿಚಯ ೧೭೮೨ ರಿಂದ ೧೮೧೬ರ ವರೆಗೆ ದೊರೆ ಮಲ್ಲಸರ್ಜನನ ಆಡಳಿತದ ಕುರಿತಿದೆ. ಇದರಲ್ಲಿ ೧೪ ಕರ್ಯಾತುಗಳ ಬಗ್ಗೆ ಸಂಕ್ಷಿಪ್ತ ವಿವರಣೆ ನೀಡಲಾಗಿದೆ. ಮಲ್ಲಸರ್ಜನನಿಗೆ ಆಂಗ್ಲ ಅಧಿಕಾರಿಯಾದ ಕರ್ನಲ್ ಕಲೋಸ್‌ರಿಂದ ದೊರೆತ ಬಿರುದು 'ಶಮಶೇರ್ ಜಂಗ್ ಬಹದ್ದೂರ್ ಸರ್‌ದೇಸಾಯಿ' ಹಾಗೂ ಸವಾಯಿ ಮಾಧವರಾಯನು ಈತನಿಗೆ ಪ್ರತಾಪ್‌ರಾವ್ ಎಂಬ ನೂತನ ಪದವಿಯನ್ನು ಕೊಟ್ಟು ಗೌರವಿಸಿದ ಬಗ್ಗೆ ಈ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ. ಇದರ ಸವಿನೆನಪಿಗಾಗಿ ಮಲ್ಲಸರ್ಜನನು ನಂದಗಡದ ಬಳಿಯಲ್ಲಿ "ಪ್ರತಾಪಗಡ" ಎಂಬ ಹೊಸ ಕಿಲ್ಲೆಯನ್ನು ಕಟ್ಟಿಸಿದ್ದನ್ನು ದಾಖಲಿಸಿದೆ.[೧೭] ನಿಂಗಣ್ಣ ಸಣ್ಣಕ್ಕಿ ಮತ್ತು ಶಿವಲಿಂಗಯ್ಯ ಬಾವಿಕಟ್ಟಿ ಇವರು ಬರೆದ "ಜಾನಪದದಲ್ಲಿ ಕಿತ್ತೂರು" ಗ್ರಂಥದಲ್ಲಿ ಕಿತ್ತೂರು ನಾಡಿನ ಬಗೆಗೆ, ರಾಣಿ ಚೆನ್ನಮ್ಮಳ ಶೌರ್ಯದ ಕುರಿತು, ಸಂಗೊಳ್ಳಿ ರಾಯಣ್ಣನ ವ್ಯಕ್ತಿತ್ವದ ಹಾಗೂ ಕಿತ್ತೂರು ಸಂಸ್ಥಾನದ ವೀರರ ಬಗ್ಗೆ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಇದರಲ್ಲಿ ಲಾವಣಿಗಳು, ಚೌಪದಿಗಳು, ತ್ರಿಪದಿಗಳು, ಕೋಲು ಪದಗಳನ್ನು ಒಳಗೊಂಡಿದೆ.[೧೮]

ದೊಡ್ಡ ಬಾವೆಪ್ಪ ಮೋಗಿಯವರು ಬರೆದ "ಪಾರಸಿ ಕಾಗದ ಪತ್ರಗಳು" ಗ್ರಂಥದಲ್ಲಿ ಕಿತ್ತೂರು ಸಂಸ್ಥಾನಕ್ಕೆ ಸಂಬಂಧಿಸಿದ ಕೆಲವು ಮರಾಠಿ ಪತ್ರಗಳ ಕುರಿತಿದೆ. ಇದರಲ್ಲಿರುವ ಪತ್ರಗಳು ಪಾರ್ಸಿ ಮತ್ತು ಮರಾಠಿ ಭಾಷೆಯಲ್ಲಿವೆ. ಇವು ಹೆಚ್ಚಾಗಿ ಮರಾಠಿ ಮೋಡಿ ಭಾಷೆಯಲ್ಲಿದ್ದು, ಕಿತ್ತೂರಿನ ಇತಿಹಾಸಕ್ಕೆ ಸಂಬಂಧಿಸಿದೆ.[೧೯] ಜಿ.ವಿ. ಕೊಂಗವಾಡರವರು ಸಂಪಾದಿಸಿದ "ಕಿತ್ತೂರು ಇತಿಹಾಸ" ಗ್ರಂಥದಲ್ಲಿ ಒಟ್ಟು ೮ ಲೇಖನಗಳಿದ್ದು, ಕಿತ್ತೂರು ಚೆನ್ನಮ್ಮ, ಮರಾಠಿ ಕಡತದಲ್ಲಿ ಕಿತ್ತೂರಿನ ಇತಿಹಾಸ, ಕಿತ್ತೂರು ದೇಶ ಭಕ್ತಿ, ಕಿತ್ತೂರಿನ ಚಿರಸ್ಮರಣೀಯ ಸಾಂಸ್ಕೃತಿಕ ಕಲಾ ಇತಿಹಾಸ, ರಾಜಕೀಯ, ಕಲೆ, ವಾಸ್ತುಶಿಲ್ಪ ಮತ್ತು ಮೋಡಿ ಬರಹಗಳನ್ನು ವಿವರಿಸಲಾಗಿದೆ.[೨೦] ಕೃಷ್ಣಮೂರ್ತಿ ಪುರಾಣಿಕರವರು ಬರೆದ "ಕಿತ್ತೂರು ಚೆನ್ನಮ್ಮ" ಗ್ರಂಥದಲ್ಲಿ ಐತಿಹಾಸಿಕ ಕಿತ್ತೂರು, ರಾಜ ಮನೆತನ, ಕಿತ್ತೂರು ರಾಣಿ ಚೆನ್ನಮ್ಮಳ ಬಾಲ್ಯ, ವಿದ್ಯಾಭ್ಯಾಸ, ಮಲ್ಲಸರ್ಜನನೊಂದಿಗೆ ವಿವಾಹ, ರಾಜ್ಯದ ಆಡಳಿತದ ಹೊಣೆಗಾರಿಕೆ, ಚೆನ್ನಮ್ಮಳ ಸ್ವಾಭಿಮಾನ ಹಾಗೂ ಸ್ವಾತಂತ್ರ್ಯಗಳ ಕುರಿತಿದೆ.[೨೧] ಕೃಷ್ಣಮೂರ್ತಿ ಪುರಾಣಿಕರವರು ರಚಿಸಿದ ಇನ್ನೊಂದು 'ವೀರರಾಣಿ ಕಿತ್ತೂರುಚೆನ್ನಮ್ಮ' ಗ್ರಂಥದಲ್ಲಿ ಕಿತ್ತೂರು ಚೆನ್ನಮ್ಮಳ ಇತಿಹಾಸ, ಇಂಗ್ಲೀಷರ ರಾಜ್ಯ ದಾಹ, ಥ್ಯಾಕರೆಯ ನಡವಳಿಕೆ, ಕಂಪನಿ ಆಡಳಿತದ ಉದ್ದೇಶಗಳನ್ನು ಹೇಳಲಾಗಿದೆ.[೨೨]

ಶಿವರಾಮುರವರು "ಕನ್ನಡದ ಕಡುಗಲಿಗಳು" ಗ್ರಂಥದಲ್ಲಿ ಕರ್ನಾಟಕದ ಅನೇಕ ಐತಿಹಾಸಿಕ ವ್ಯಕ್ತಿಗಳ ಬಗ್ಗೆ ವಿವರಿಸಿದ್ದಾರೆ. ಇದರಲ್ಲಿ ಕಿತ್ತೂರು ರಾಣಿ ಚೆನ್ನಮ್ಮನ ಇತಿಹಾಸವೂ ಇದೆ. ಚೆನ್ನಮ್ಮ ರಾಣಿ ತನ್ನ ಸಮೀಪದ ಬಂಧುವಾದ ಮಾಸ್ತಮರಡಿಯ ಬಾಳಪ್ಪ ಗೌಡನ ಮಗ ಶಿವಲಿಂಗ ಬಾಲಕನನ್ನು ದತ್ತು ಪಡೆದುಕೊಂಡ ವಿಷಯ ಈ ಗ್ರಂಥದಲ್ಲಿದೆ. ಸಂಸ್ಥಾನದ ಖಜಾನೆಯ ಬೀಗವನ್ನು ಮೊಹರು ಮಾಡಿದ ಹಾಗೂ ಅದರ ಒಳಗಿರುವ ಸಂಪತ್ತನ್ನು ಸಾಗಿಸಿದ್ದನ್ನು

ಇಲ್ಲಿ ದಾಖಲಿಸಿದೆ. ಕುನ್ನೂರು ಮಲ್ಲಪ್ಪನು ಥ್ಯಾಕರೆಗೆ ಪತ್ರ ಬರೆದ ವಿಷಯವನ್ನು ಕೂಡಾ ಉಲ್ಲೇಖಿಸಿಲಾಗಿದೆ. ಆಂತರಿಕ ವಿಷಯಗಳ ಕುರಿತು ಆಂಗ್ಲರಿಗೆ ಸುಳುವು ನೀಡಿದ ಅಂಶಗಳು ಈ ಗ್ರಂಥದಲ್ಲಿದೆ.[೨೩]

ಅರ್ಕಸಾಲಿ ವೃಷಭೇಂದ್ರಾಚಾರ್ಯರು ಬರೆದ ವೀರರಾಣಿ ಕಿತ್ತೂರು ಚೆನ್ನಮ್ಮ ಗ್ರಂಥದಲ್ಲಿ ಕಿತ್ತೂರು ನಾಡು, ಇತಿಹಾಸ, ಮಲ್ಲಸರ್ಜನ ಆಳ್ವಿಕೆ, ಚೆನ್ನಮ್ಮರಾಣಿಯ ಪಾತ್ರ, ಬ್ರಿಟೀಷರ ದಬ್ಬಾಳಿಕೆ ಹಾಗೂ ಚಾಪ್ಲಿನ್ ಮತ್ತು ರಾಣಿಯ ನಡುವೆ ನಡೆದ ಪತ್ರ ವ್ಯವಹಾರ ಹೀಗೆ ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲಿದೆ.[೨೪] ಸುಲೋಚನಾ ಪೋತ್ನಿಸ್‌ರು ಬರೆದ "ಸ್ವಾತಂತ್ರ್ಯ ಸಂಗ್ರಾಮದ ಧ್ರುವತಾರೆ ಕಿತ್ತೂರು ರಾಣಿ ಚೆನ್ನಮ್ಮ" ಗ್ರಂಥ ಕಿತ್ತೂರು ಚೆನ್ನಮ್ಮಳ ಇತಿಹಾಸ, ಕೋಟೆ, ಅರಮನೆ, ಗುರುಮನೆ, ದೇಸಾಯಿಯರ ಸಮಾಧಿಗಳ ವಿಷಯವನ್ನೊಳಗೊಂಡ ಗ್ರಂಥ ವಾಗಿದೆ.[೨೫]

ವಿ.ಜಿ. ಮಾರಿಹಾಳರು ಬರೆದ "ಮಹಾರಾಣಿ ಕಿತ್ತೂರು ಚೆನ್ನಮ್ಮಾಜಿ" ಗ್ರಂಥದಲ್ಲಿ ಕಿತ್ತೂರು ಸಂಸ್ಥಾನದ ಮೇಲೆ ಬ್ರಿಟೀಷರ ದಬ್ಬಾಳಿಕೆ, ಬ್ರಿಟಿಷರ ದೃಷ್ಟಿಯಲ್ಲಿ ಚೆನ್ನಮ್ಮ, ಕಿತ್ತೂರಿನ ಸೋಲಿಗೆ ಕಾರಣಗಳು, ಚೆನ್ನಮ್ಮನ ರಾಜನೀತಿ ಹಾಗೂ ಜಾನಪದದಲ್ಲಿ ಚೆನ್ನಮ್ಮ ಅಧ್ಯಾಯಗಳನ್ನೊಳ ಗೊಂಡಿದೆ.[೨೬] ಎಸ್.ಡಿ. ಇಂಚಲರವರು "ಕಿತ್ತೂರಿನ ಸ್ವಾತಂತ್ರ್ಯ ಸಂಗ್ರಾಮ"ದಲ್ಲಿ ಕಿತ್ತೂರು ಸಂಸ್ಥಾನದ ಸಂಕ್ಷಿಪ್ತ ಚರಿತ್ರೆ ಕಿತ್ತೂರು ಸಂಸ್ಥಾನದ ಪ್ರಸಿದ್ಧ ಪಟ್ಟಣಗಳ ಕುರಿತು ಬೆಳಕು ಚೆಲ್ಲಿದ್ದಾರೆ. ಶಿವಲಿಂಗರುದ್ರಸರ್ಜನ ಮರಣದ ನಂತರ ಸಂಸ್ಥಾನದಲ್ಲಿ ಉಂಟಾದ ಒಡಕನ್ನು ಬ್ರಿಟೀಷರ ಗಮನಕ್ಕೆ ತಂದು ಕಿತ್ತೂರಿನ ಪರಿಸ್ಥಿತಿಯ ಬಗ್ಗೆ ಚಿತ್ರಿಸಿದ್ದಾರೆ.[೨೭] ಜಯದೇವಿ ಗಾಯಕವಾಡರವರು "ವೀರರಾಣಿ ಚೆನ್ನಮ್ಮ" ಗ್ರಂಥವನ್ನು ಬರೆದಿದ್ದಾರೆ. ಇದರಲ್ಲಿ ಕಿತ್ತೂರಿನ ಐತಿಹಾಸಿಕ ಹಿನ್ನೆಲೆ, ಮಲ್ಲಸರ್ಜನನ ಆಳ್ವಿಕೆ, ಶಿವಲಿಂಗ ರುದ್ರಸರ್ಜನ ಕಾಲ, ರಾಣಿ ಚೆನ್ನಮ್ಮ, ಕಿತ್ತೂರಿನ ಸೋಲು, ಹಾಗೂ ರಾಣಿ ಚೆನ್ನಮ್ಮಳ ಕಡೆಯ ದಿನದ ಬಗ್ಗೆ ಹಾಗೂ ಜನಮನದಲ್ಲಿ ರಾಣಿ ಚೆನ್ನಮ್ಮಳ ವ್ಯಕ್ತಿತ್ವವನ್ನು ವಿವರಿಸಿದ್ದಾರೆ.[೨೮]

ಜಿ.ವಿ. ಶಾಸ್ತ್ರಿಯವರು ಬರೆದ "ವೀರರಾಣಿ ಕಿತ್ತೂರು ಚೆನ್ನಮ್ಮ" ಗ್ರಂಥದಲ್ಲಿ ಕಿತ್ತೂರಿನ ಐತಿಹಾಸಿಕ ಹಿನ್ನೆಲೆಯಲ್ಲಿ ಅರಸರ ವಂಶಾವಳಿ, ಮಲ್ಲಸರ್ಜನನ ಆಡಳಿತ, ಮುನ್ರೋ ಚೆನ್ನಮ್ಮ ರಾಣಿಗೆ ಬರೆದ ಪತ್ರಗಳ ವಿವರಿಸಿದ್ದಾರೆ.[೨೯] ಬಾಳಣ್ಣ ಶೀಗಿಹಳ್ಳಿಯವರು ಬರೆದ 'ಬೆಳಗಾವಿ ಜಿಲ್ಲೆಯ ವೀರಶೈವ ದೇಶಗತ್ತಿಗಳು' ಗ್ರಂಥದಲ್ಲಿ ಕಿತ್ತೂರು ದೇಶಗತ್ತಿಯ ಕುರಿತು ವಿವರಿಸಿದ್ದಾರೆ. ಇದರಲ್ಲಿ ಪೇಶ್ವೆಯರ ಕಾಲ, ಅವರೊಂದಿಗೆ ಮಾಡಿಕೊಂಡ ಒಪ್ಪಂದಗಳು, ಮಲ್ಲಸರ್ಜನ ಆಳ್ವಿಕೆ ಹಾಗೂ ಚೆನ್ನಮ್ಮನ ಕಾಲ ಕುರಿತಿದೆ.[೩೦] ಗೋವಿಂದ ನಾರಾಯಣ ರಚಿಸಿದ "ಕಿತ್ತೂರು ಚೆನ್ನಮ್ಮ" (ಜೀವನ ಚರಿತ್ರೆ) ಕೃತಿಯಲ್ಲಿ ಕಿತ್ತೂರಿಗೆ ಬ್ರೀಟಿಷರ ಆಗಮನ, ಕಿತ್ತೂರಿನ ಮೇಲೆ ಆಡಳಿತದ ದಾಹ, ಕಿತ್ತೂರು ಸಂಸ್ಥಾನದ ಏಳಿಗೆ, ರಾಜಕೀಯ ಇತಿಹಾಸ, ೧೮೨೪ರ ಯುದ್ಧ, ಥ್ಯಾಕರೆಯ

ಹುನ್ನಾರ, ಚಾಪ್ಲೀನನ ಪತ್ರಗಳು, ಕಿತ್ತೂರಿನ ಮೇಲೆ ಆಕ್ರಮಣ ಮತ್ತು ವಶ ಇವುಗಳ ಕುರಿತು ಬರೆಯಲಾಗಿದೆ.[೩೧]

'ಕಿತ್ತೂರು ಸಂಸ್ಥಾನದ ಸಾಹಿತ್ಯ' ಭಾಗ-೧ ಮತ್ತು ೨ನೇ ಕೃತಿ, ಎಂ.ಎಂ. ಕಲಬುರ್ಗಿ ಮತ್ತು ಚೆನ್ನಕ್ಕ ಪಾವಟೆಯವರ ಸಂಪಾದಕತ್ವದಲ್ಲಿ ರಚಿಸಿದ ಗ್ರಂಥ. ಈ ಗ್ರಂಥವು ಕಿತ್ತೂರು ಇತಿಹಾಸದಲ್ಲಿ ಒಂದು ಮೈಲುಗಲ್ಲು ಎಂದೇ ಹೇಳಬಹುದು ಏಕೆಂದರೆ ಈ ಗ್ರಂಥದಲ್ಲಿ ಕಿತ್ತೂರು ಸಂಸ್ಥಾನ ಕುರಿತ ಜಾನಪದ ಸಾಹಿತ್ಯಗಳನ್ನು ರಚಿಸಲಾಗಿದೆ. ಇಲ್ಲಿಯ ಸಮಕಾಲಿನ ಅನೇಕ ವಿಷಯಗಳ ಲಾವಣಿಯರೂಪದಲ್ಲಿವೆ. ಇದರಲ್ಲಿ ೨೩ ಜಾನಪದ ಹಾಡುಗಳನ್ನು ಸಂಗ್ರಹಿಸಲಾಗಿದೆ.[೩೨]

೧. ಮಲ್ಲೇಂದ್ರ ಭಕ್ತ ತರಂಗಿಣಿ ೨. ಮಲ್ಲೇಂದ್ರ ಪೂಜಾವಿಲಾಸ ೩. ಮಲ್ಲೇಂದ್ರ ಪೂಜಾವಿಲಾಸ ತಾರಾವಳಿ ೪. ಮಲ್ಲೇಂದ್ರ ಮಾನಸೋಲ್ಲಾಸ, ೫. ಮಲ್ಲೇಂದ್ರ ವಿಜಯ, ೬. ಗಣೇಶೋತ್ಸವ, ೭. ಕಿತ್ತೂರು ಮಲ್ಲಸರ್ಜನ ಪದಗಳು, ೮. ವೀರಪ್ಪ ದೇಸಾಯಿ, ೯. ಕಿತ್ತೂರ ಅರಸರ ಕೋಲುಪದ ೧೦. ಮಲ್ಲಸರ್ಜನ ಕಾವ್ಯ, ೧೧. ಕಿತ್ತೂರ ಮಲ್ಲಸರ್ಜನ ಲಾವಣಿ, ೧೨. ಸೂಳೆಸರ್ಜರ ಪ್ರಣಯ, ೧೩. ಶಿವಲಿಂಗ ರುದ್ರಸರ್ಜ ೧೪. ಕರಿಯಾತಿ ಕಾಳಗ ೧೫. ಕಿತ್ತೂರ ಮಿಂಚಿನ ಕಾಳಗ ೧೬. ವೀರರಾಣಿ ಚೆನ್ನವ್ವ ೧೭. ಚೆನ್ನಮ್ಮ ರಾಣಿ ೧೮. ಕಿತ್ತೂರಿನ ಮುತ್ತಿಗೆ ೧೯. ಚೆನ್ನಮ್ಮ ರಾಣಿಯ ಕೊನೆಯ ಕಾಳಗ ೨೦. ಕಿತ್ತೂರ ರಾಣಿಯ ಅಂತ್ಯ, ೨೧. ಕಿತ್ತೂರ ರಾಣಿಯ ಸೊಸೆ, ೨೨. ಈರವ್ವನ ದುರಂತ ಮರಣ ೨೩. ಕಿತ್ತೂರಿನ ಕೊನೆಯ ಕಾಳಗ

ಮೇಲಿನ ಕೃತಿಗಳಲ್ಲಿ ಮೊದಲಿನ ಏಳು ಕೃತಿಗಳು ಶಿಷ್ಟರಚನೆಗಳು. ಉಳಿದವು ಜಾನಪದ ರಚನೆಗಳಾಗಿವೆ. ಶಿಷ್ಟಪದ ರಚನೆಗಳಲ್ಲಿ ಐದು ಕೃತಿಗಳ ಕರ್ತೃ ಅಣ್ಣಿಗೆರೆ ಅಮೃತೇಶನ ಭಕ್ತ ಕಾಶಿರಾಜ ಎಂದು ತಿಳಿದು ಬರುತ್ತದೆ.

ಮಲ್ಲೇಂದ್ರ ಭಕ್ತಿತರಂಗಿಣಿ, ಮಲ್ಲೇಂದ್ರ ಪೂಜಾವಿಲಾಸ, ಮಲ್ಲೇಂದ್ರ ಪೂಜಾವಿಲಾಸ ತಾರಾವಳಿ, ಮಲ್ಲೇಂದ್ರ ಮಾನಸೋಲ್ಲಾಸ, ಮಲ್ಲೇಂದ್ರ ವಿಜಯ ಮೊದಲಾದ ಐದು ಕೃತಿಗಳು ಕಿತ್ತೂರು ಸಂಸ್ಥಾನದ ದೊರೆ ಮಲ್ಲಸರ್ಜನನ ಮೇಲೆ ಬೆಳಕು ಚೆಲ್ಲಿದೆ. ಚಾರಿತ್ರಿಕಮಹತ್ವವಿಲ್ಲದ ಮಲ್ಲಸರ್ಜನು ವಿವಿಧ ಸಂದರ್ಭಗಳಲ್ಲಿ ಕೈಕೊಂಡ ಪೂಜಾ ಪ್ರಸಂಗ ಏರ್ಪಡಿಸಿದ ಪುರಾಣ ಪ್ರವಚನಗಳನ್ನು ಕುರಿತು ವರ್ಣನಾತ್ಮಕವಾಗಿ ಕಾವ್ಯಶೈಲಿಯಲ್ಲಿ ರಚಿಸಿದ ಕೃತಿಗಳಾಗಿವೆ. ಮಲ್ಲೇಂದ್ರ ಭಕ್ತಿತರಂಗಿಣಿ ಕೃತಿಯಲ್ಲಿ ಮಲ್ಲಸರ್ಜನನ ತಂದೆ ವೀರಭದ್ರ ಬಹದ್ದೂರ ದೇಸಾಯಿ ಪತ್ನಿ ರುದ್ರಾಂಬೆ, ಪುತ್ರರಾದ ರುದ್ರಸರ್ಜ ಮತ್ತು ಶಿವಲಿಂಗ ಸರ್ಜ ಎಂದು ಹೇಳಲಾಗಿದೆ. ಈ ಕೃತಿಯಲ್ಲಿ ಶಿವಲಿಂಗನ ಮದುವೆ, ಶಕ ವರ್ಷ ೧೭೨೫ರಲ್ಲಿ ಏರ್ಪಡಿಸಿದ ಭೀಮ ಕವಿಯ ಬಸವಪುರಾಣ ಪ್ರವಚನ, ಅನೇಕ ತೀರ್ಥಕ್ಷೇತ್ರಗಳಲ್ಲಿ ಕೈಕೊಂಡ ಗಣಾರಾಧನೆಗಳ ವಿವರವಿದೆ.

ಮಲ್ಲೇಂದ್ರ ಪೂಜಾವಿಲಾಸ ಕೃತಿಯಲ್ಲಿ ಮಲ್ಲಸರ್ಜನ ಅಜ್ಜ ಮುದಿಮಲ್ಲಸರ್ಜನಿಂದ ಶಿವಲಿಂಗ ಸರ್ಜನವರೆಗೆ ವಂಶಾವಳಿ ನೀಡಲಾಗಿದೆ. ಶಿವಲಿಂಗ ಸರ್ಜನಿಗೆ ವೀರಸರ್ಜನೆಂಬ ಸಹೋದರನಿದ್ದ ಬಗ್ಗೆ ಮತ್ತು ರುದ್ರಸರ್ಜನ ಚೆನ್ನಮ್ಮನ ಉದರದಲ್ಲಿ ಜನಿಸಿದವನೆಂಬ ಸಂಗತಿ ಗಳನ್ನು ಇದು ತಿಳಿಸುತ್ತದೆ. ಶಕವರ್ಷ. ೧೭೨೭ರಲ್ಲಿ ಈ ಕೃತಿಯನ್ನು ಬರೆದು ಮುಗಿಸಿದುದಾಗಿ ಗ್ರಂಥಕರ್ತೃ ಹೇಳಿಕೊಂಡಿದ್ದಾನೆ. ಮಲ್ಲೇಂದ್ರ ಪೂಜಾವಿಲಾಸ, ತಾರಾವಳಿ ಕೃತಿ, ದೊರೆ ಮಲ್ಲಸರ್ಜನ ಪತ್ನಿ ರುದ್ರಾಂಬೆ ಮತ್ತು ಸಚಿವ ವೀರಸಂಗಪ್ಪನ ನೆರವಿನೊಂದಿಗೆ ಜಂಗಮಾರಾಧನೆ ಕೈಕೊಂಡ ಪ್ರಸಂಗವನ್ನು ವಿವರಿಸುತ್ತದೆ.

ಮಲ್ಲೇಂದ್ರ ಮಾನಸೋಲ್ಲಾಸ ಕೃತಿ, ಅಣ್ಣಿಗೆರೆ ಅಮೃತೇಶನ ಭಕ್ತ ಕಾಶಿರಾಜನಿಂದ ರಚಿಸಲ್ಪಟ್ಟಿದೆ. ಈ ಕೃತಿ ಮಲ್ಲಸರ್ಜನ ಕಿತ್ತೂರು ರಾಜ್ಯ ಹದಿನಾಲ್ಕು ಕಾರ್ಯಾತುಗಳಲ್ಲಿ ವಿಭಾಗಿಸಲ್ಪಟ್ಟಿತು ಎಂದಿದೆ. 'ಮಲ್ಲೇಂದ್ರ ವಿಜಯ' ಕೃತಿಯು ಮಲ್ಲಸರ್ಜನು ಟಿಪ್ಪುವಿನೊಡನೆ ನಡೆಸಿದ ಯುದ್ಧಗಳ ವಿವರವನ್ನು ನೀಡುತ್ತದೆ. ರುದ್ರಾಂಬೆ ತನ್ನೆರಡು ಮಕ್ಕಳ ಜವಾಬ್ದಾರಿಯನ್ನು ಚೆನ್ನಮ್ಮನಿಗೆ ಒಪ್ಪಿಸಿ ಸಾವನ್ನಪ್ಪಿದ ಪ್ರಸಂಗವನ್ನು ಅರಹುತ್ತದೆ. ಕಲ್ಯಾಣದ ಶರಣರು, ಚಿತ್ರದುರ್ಗ, ಅರಭಾವಿ ಮಠಗಳ ಪ್ರಸ್ತಾಪವನ್ನು ಈ ಕೃತಿಯಲ್ಲಿ ಮಾಡಲಾಗಿದೆ.

ಗಣೇಶೋತ್ಸವ ಕೃತಿ ಗಣೇಶ ಮೂರ್ತಿಯ ಸ್ಥಾಪನೆ, ಪೂಜಾ ವಿವರಗಳನ್ನು ನೀಡುತ್ತದೆ. "ಕಿತ್ತೂರು ಮಲ್ಲಸರ್ಜನ ಪದಗಳು" ಕೃತಿ ಮಲ್ಲಸರ್ಜನನ್ನು ಕುರಿತು ರಚಿಸಿದ ಶೃಂಗಾರನಿಷ್ಠ ಪದಗಳ ಸಂಗ್ರಹವಾಗಿದ್ದು, ಕನ್ನಡ ಮತ್ತು ಮರಾಠಿ ಭಾಷೆಯಲ್ಲಿವೆ. ಕೆಲವು ಭಕ್ತಿಗೀತೆಗಳೂ ಇವೆ.

ಎಂಟರಿಂದ ಇಪ್ಪತ್ಮೂರರ ವರೆಗಿನ ೧೬ ಕೃತಿಗಳು, ಜಾನಪದ ಹಾಡುಗಳನ್ನೊಳಗೊಂಡಿವೆ. ಪ್ರಪ್ರಥಮವಾಗಿ ಬ್ರೀಟಿಷರ ವಿರುದ್ಧ ಬಂಡೆದ್ದು ಸ್ವಾತಂತ್ರ್ಯ, ಸ್ವಾಭಿಮಾನಗಳ ಪ್ರತೀಕವಾಗಿ ಜನಮನ ವನ್ನಾಳಿದ ಕಿತ್ತೂರ ರಾಣಿ ಚೆನ್ನಮ್ಮನ ಕುರಿತಾದ ದಾಖಲೆಗಳನ್ನು ಬ್ರಿಟೀಷ್ ಅಧಿಕಾರಿಗಳು (ಇದರಲ್ಲಿ ಇಲ್ಲಿನ ಕುತಂತ್ರಿಗಳ ಪಾಲೂ ಇದೆ) ನಾಶಪಡಿಸಿ, ಏಕಮುಖವಾಗಿ ಬರೆಸಿ, ಸತ್ಯಸಂಗತಿ ಕಾಣದೇ ಹೋಗಿ, ಮರೆಮಾಚಿಕೊಂಡಿರುವುದು ಸ್ಪಷ್ಟವಾಗಿದೆ. ಇದರಿಂದಾಗಿ ಚೆನ್ನಮ್ಮನ ಸಾಹಸ ಕಥೆ, ಇತಿಹಾಸ ರಚನೆಯ ದಾಖಲೆಗಳು ಮೂಲಸತ್ವವಾಗಿರದೆ ಜನಪದರ ಬಾಯಲ್ಲಿ ರಾಣಿ ಚೆನ್ನಮ್ಮ ಹಾಗೂ ಕಿತ್ತೂರು ನಾಡಿನಲ್ಲಿ ನಡೆದ ಎಲ್ಲ ಘಟನೆಗಳು ಜಾನಪದದ ಪ್ರಕಾರಗಳಲ್ಲಿ ಸೆರೆ ಹಿಡಿಯಲಾಗಿದೆ.

೧.೧.೨. ಸಂಶೋಧನಾ ಲೇಖನಗಳು

ಎಸ್.ಆರ್. ಗುಂಜಾಳ್‌ರವರ ಸಂಪಾದಕತ್ವದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಲೇಖನವನ್ನು ಸೂರ್ಯನಾಥ ಕಾಮತ್‌ರವರು ಬರೆದಿದ್ದಾರೆ. ಈ ಲೇಖನದಲ್ಲಿ ಕರ್ನಾಟಕದ ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ಗಮನಿಸುವಾಗ ೧೬ನೇ ಶತಮಾನದಿಂದ ಆರಂಭವಾದ ಕಿತ್ತೂರು ಸಂಸ್ಥಾನದ ಬಗ್ಗೆ, ರಾಣಿ ಚೆನ್ನಮ್ಮ, ಮಲ್ಲಸರ್ಜನ ಹಾಗೂ ಶಿವಲಿಂಗಸರ್ಜನನ ಬಗ್ಗೆ ವಿವರಿಸಲಾಗಿದೆ.

೧೮೩೧ರ ಸರ್ದಾರ ಗುರುಸಿದ್ದಪ್ಪ ಎಂಬ ಕಿತ್ತೂರಿನ ಮಂತ್ರಿ ಕಿತ್ತೂರಿನ ದತ್ತಕ ವಿಚಾರದಲ್ಲಿ ಬ್ರಿಟಿಷರ ವಿರುದ್ಧ ಬಂಡಾಯ ಹೂಡಿ ಬಂಧನವಾದುದನ್ನು ಉಲ್ಲೇಖಿಸಲಾಗಿದೆ.[೩೩]

ಕೆ.ಎನ್. ಚಿಟ್ನೀಸ್‌ರು ಪ್ರಕಟಿಸಿದ "ಮರಾಠಾ ಮತ್ತು ಕಿತ್ತೂರು ಸಂಬಂಧಗಳು" ಲೇಖನದಲ್ಲಿ ೧೭೮೭ರ ಗಜೇಂದ್ರಗಡ ಒಪ್ಪಂದದ ಪ್ರಕಾರ ಟಿಪ್ಪು ಮರಾಠರಿಗೆ ಬಾದಾಮಿ, ನರಗುಂದ ಮತ್ತು ಕಿತ್ತೂರನ್ನು ಬಿಟ್ಟುಕೊಟ್ಟ ವಿಷಯವಿದೆ. ಅಲ್ಲದೆ ನಾನಾ ಫಡ್ನೀಸ್‌ನು ೨೫ ಜುಲೈ, ೧೭೮೭ ರಂದು ಕಿತ್ತೂರಿನ ಪ್ರಾಂತ್ಯಾಧಿಕಾರಿಗಳಿಗೆ ತನ್ನ ವ್ಯಾಪ್ತಿಯಲ್ಲಿ ಬರುವಂತೆ ಕಾರಬಾರಿಗಳಿಗೆ ತಿಳಿಸಿದ ಮತ್ತು ಕಿತ್ತೂರಿಗೆ ಸಂಬಂಧಿಸಿದ ತಾಳೆಬಂಧ ದೊರೆತಿದ್ದು ಇದು ಸವಾಯಿ ಮಾಧವರಾವ್ ಮತ್ತು ಮಲ್ಲಸರ್ಜನನಿಗೆ ಬರೆದಂತಹ ದಾಖಲೆಯಾಗಿದೆ.[೩೪] ಕೆ.ಎನ್. ಚಿಟ್ನೀಸ್‌ರ "ಪೇಶ್ವೆಯವರ ಕಾಲದ ಭೂ ಆದಾಯಗಳು" ಲೇಖನದಲ್ಲಿ ಕಿತ್ತೂರು ಸಂಸ್ಥಾನದ ಭೂ ಕಂದಾಯ ಹಾಗೂ ಇಲ್ಲಿ ಬೆಳೆಯುವ ಧಾನ್ಯಗಳ ಕುರಿತಿದೆ.[೩೫] ಕೆ.ಎನ್. ಚಿಟ್ನೀಸ್‌ರವರು ಬರೆದ ಇನ್ನೊಂದು ಲೇಖನ "ಉತ್ತರ ಕರ್ನಾಟಕದ ಕಂದಾಯ ಆಡಳಿತದ ಮೇಲೆ ಮರಾಠರ ಪ್ರಭಾವ" ಲೇಖನದಲ್ಲಿ ಪೇಶ್ವೆಯ ಆಡಳಿತ, ಉತ್ತರ ಕರ್ನಾಟಕದ ಕಂದಾಯ ಪದ್ಧತಿ ಕುರಿತಿದೆ. ಈ ಲೇಖನದಲ್ಲಿ ಕ್ರಿ.ಶ. ೧೭೮೩ರ ಕಿತ್ತೂರು ತಾಲೂಕಿನ ಆದಾಯದ ಮೂಲಗಳ ಕುರಿತು ಚರ್ಚಿಸಲಾಗಿದೆ.[೩೬]

ಕೆ.ಎನ್. ಚಿಟ್ನೀಸ್‌ರವರು "೧೮ನೇ ಶತಮಾನದ ಉತ್ತರಾರ್ಧದಲ್ಲಿ ಕಿತ್ತೂರಿನ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳು" ಲೇಖನದಲ್ಲಿ ಬೆಳವಡಿ ಕರ್ಯಾತ, ಸಂಪಗಾವಿ ಕರ್ಯಾತ, ಅಂಬಡಗಟ್ಟಿ ಕರ್ಯಾತ, ನೇಸರ್ಗಿ ಕರ್ಯಾತ, ಗೋಲಿಹಳ್ಳಿ ಕರ್ಯಾತ, ಹೀಗೆ ೧೮ ಕರ್ಯಾತುಗಳ ಕಂದಾಯದ ಬಗ್ಗೆ ಚರ್ಚಿಸಿದ್ದಾರೆ.[೩೭] ಓಂಕಾರ ಕಾಕಡೆರವರು ಬರೆದ "ಅಳಿದು ಹೋಗುತ್ತಿರುವ ಕಿತ್ತೂರು ಸಂಸ್ಥಾನದ ಅವಶೇಷಗಳು" ಲೇಖನದಲ್ಲಿ ಕಿತ್ತೂರು ರಾಣಿ ಚೆನ್ನಮ್ಮಳ ವ್ಯಕ್ತಿತ್ವದ ಬದುಕು, ಹೋರಾಟ, ದೇಶಪ್ರೇಮ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವಳು ವಹಿಸಿದ ಪಾತ್ರ ಕುರಿತಿದೆ.[೩೮] ಭಾರತಿ ಚಿಂ. ಜೋರಾಪುರರವರು ಬರೆದ "ವೀರರಾಣಿ ಚೆನ್ನಮ್ಮಾಜಿ" ಕುರಿತ ಲೇಖನದಲ್ಲಿ ಕಿತ್ತೂರಿನ ಇತಿಹಾಸವನ್ನು ದಾಖಲಿಸಿದೆ.[೩೯] ಎಮ್.ವೈ. ಸಾವಂತ್‌ರವರು ಬರೆದ "ಕಿತ್ತೂರು ಮರಾಠಾ ಸಂಬಂಧ" ಲೇಖನದಲ್ಲಿ ೧೮೧೭ರ ಮುನ್ರೋ ಒಪ್ಪಂದದ ಪ್ರಕಾರ ಶಿವಲಿಂಗ ರುದ್ರಸರ್ಜನ ಕಾಲದಲ್ಲಿ ಬೆಳಗಾವಿ ಕಿಲ್ಲೆಯನ್ನು ಆಂಗ್ಲರು ಪಡೆದುಕೊಳ್ಳಲು ಕಿತ್ತೂರು ಸಹಾಯ ಮಾಡಿತು. ಅದರಂತೆ ೧೭೯೩ರ ತಾಳೆಬಂಧದ ಪ್ರಕಾರ ಆಭಾಜಿ ಬಾಜಿರಾವ್ ಮರಾಠ ಆಡಳಿತಾಧಿಕಾರಿಯಾಗಿ ಕಿತ್ತೂರಿಗೆ ನೇಮಕಗೊಂಡ ವಿಷಯವಿದೆ.[೪೦]

ಅನ್ನಪೂರ್ಣ ಫ. ಹತ್ತಿಮತ್ತೂರುರವರು ಬರೆದ "ಕಿತ್ತೂರು ರಾಜ್ಯದ ಸ್ಥಳನಾಮಗಳ ಅಧ್ಯಯನ" ಲೇಖನದಲ್ಲಿ ಮಲ್ಲಸರ್ಜನನ ಕಾಲದ ೧೮ ಕರ್ಯಾತುಗಳು ಹಾಗೂ ಆ ಊರಿನ ಹೆಸರು ಮತ್ತು ನಿಸರ್ಗವಾಚಿ, ವಸತಿವಾಚಿ, ಜಲವಾಚಿ, ನಿರ್ಮಾಣವಾಚಿ ಸ್ಥಳನಾಮಗಳ ಕುರಿತಿದೆ.[೪೧] ಎಮ್.ವೈ ಸಾವಂತ್‌ರವರು ಪ್ರಕಟಿಸಿದ "ಮರಾಠರ ಕಾಲದಲ್ಲಿ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿದ್ದ

ತೆರಿಗೆಗಳು ಒಂದು ಅಧ್ಯಯನ" ಲೇಖನದಲ್ಲಿ ಆ ಕಾಲದ ಸುಂಕಗಳು, ತೆರಿಗೆಗಳು ಮತ್ತು ಇತರ ಶುಲ್ಕಗಳ ಕುರಿತಿದೆ.[೨೨]

ಜಿ.ವಿ. ಕೊಂಗವಾಡ ಸಂಪಾದಕತ್ವದಲ್ಲಿ ಪ್ರಕಟಿಸಿದ "ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಕಿಡಿ ಕಿತ್ತೂರು ಇತಿಹಾಸ" ಗ್ರಂಥದ ಲೇಖನಗಳಲ್ಲಿ ಸೂರ್ಯನಾಥ ಕಾಮತರು ಕಿತ್ತೂರು ರಾಣಿ ಚೆನ್ನಮ್ಮಳ ಕುರಿತು ಬರೆದಿದ್ದಾರೆ. ಇಲ್ಲಿ ಮಲ್ಲಸರ್ಜನನ ತರುವಾಯ ಚೆನ್ನಮ್ಮ ಅಧಿಕಾರಕ್ಕೆ ಬರಬೇಕಾದ ಸಂದರ್ಭವನ್ನು ಹಾಗೂ ಚೆನ್ನಮ್ಮ ಬ್ರೀಟಿಷರಿಂದ ಎದುರಿಸಿದ ಅನೇಕ ಸಮಸ್ಯೆಗಳನ್ನು, ಥ್ಯಾಕರೆಯ ನೀತಿಯನ್ನು ವಿರೋಧಿಸಿ, ೨೩ ಅಕ್ಟೋಬರ ೧೮೨೪ಳ ರಂದು ಬ್ರೀಟಿಷರ ವಿರುದ್ಧ ಜಯ ಗಳಿಸಿದ ಅಂಶವನ್ನು ತಿಳಿಸಿದ್ದಾರೆ. ಅ. ಸುಂದರರವರು ಕಿತ್ತೂರು ನಾಡು, ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪವನ್ನು ಕುರಿತು ಬರೆದಿದ್ದಾರೆ. ಇದರಲ್ಲಿ ಕಿತ್ತೂರು ಕೋಟೆ, ಕಾವಲುಗೋಪರ ಅರಮನೆಯ ವಿನ್ಯಾಸ, ತಳವಿನ್ಯಾಸ ಮೊಗಸಾಲೆ, ಬಯಲುಕೊಳ, ಅರಮನೆಯ ಅಡಿಗೆಮನೆ, ಪಡಸಾಲೆ ಹಾಗೂ ಅಲ್ಲಿ ಬಳಸಿದ ಕಲ್ಲುಗಳು ಮತ್ತು ಇತರ ಶಿಲ್ಪಗಳ ಬಗ್ಗೆ ಆಧಾರವಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಎಂ.ವೈ. ಸಾವಂತರವರ "ಮರಾಠಿ (ಮೋಡಿ) ಕಡತಗಳಲ್ಲಿ ಕಿತ್ತೂರು ಇತಿಹಾಸ" ಲೇಖನದಲ್ಲಿ ಅನೇಕ ಚಾರಿತ್ರಿಕ ಲೇಖನಗಳನ್ನು, ತಾಳೆಬಂದ, ನಿವಡಪತ್ರ ಹಾಗೂ ಕಿತ್ತೂರಿನ ಸಂಬಂಧದ ಆಡಳಿತದ ವ್ಯವಹಾರಗಳ ಕುರಿತು ತಿಳಿಸಿದ್ದಾರೆ. ಶ್ರೀ ವಿ.ಜಿ. ಮಾರಿಹಾಳರವರು "ಮಹಾರಾಣಿ ಕಿತ್ತೂರು ಚೆನ್ನಮ್ಮನ ಜೀವನ ಮತ್ತು ಸಾಧನೆ" ಲೇಖನದಲ್ಲಿ ಇಲ್ಲಿಯ ವೀರಪರಂಪರೆ, ಕಿತ್ತೂರಿನ ವಂಶಾವಳಿ ಚೆನ್ನಮ್ಮನ ದತ್ತಕ ವಿಚಾರ, ಸಂಧಾನದ ಪ್ರಯತ್ನಗಳು, ಪತ್ರ ವ್ಯವಹಾರಗಳು, ಹೀಗೆ ಅನೇಕ ಲಾವಣಿಗಳನ್ನು ಉದಹರಿಸುತ್ತಾ ಕಿತ್ತೂರಿನ ಇತಿಹಾಸವನ್ನು ಚಿತ್ರಿಸಿದ್ದಾರೆ. ಚೆನ್ನಮ್ಮಳ ಸ್ವಾಭಿಮಾನ ಮತ್ತು ದೇಶಾಭಿಮಾನ ಹಾಗೂ ಆಕೆಯ ನಿಷ್ಠೆಯನ್ನು ತಿಳಿಯಬಹುದು. ಸಿ.ವಿ ಮಠದರವರು ಈ ಗ್ರಂಥದಲ್ಲಿ ಬರೆದ "ಕಿತ್ತೂರಿನ ರಾಜಪೀಠ" ಲೇಖನದಲ್ಲಿ ವೀರಶೈವ ಮಠದ ಪಾತ್ರ, ಕಲ್ಮಠ ಮತ್ತು ಕಿತ್ತೂರು ಚೆನ್ನಮ್ಮ, ಮಠ ಬೆಳೆದು ಬಂದ ದಾರಿ, ಸಂಸ್ಥಾನದ ಇತಿಹಾಸದಲ್ಲಿ ಮಠದ ಪಾತ್ರ ಕುರಿತು ತಿಳಿಸಿದ್ದಾರೆ. ಚೆನ್ನಕ್ಕ ಪಾವಟೆಯವರು ಬರೆದ ಲೇಖನ "ಕಿತ್ತೂರು ದೇಶಗತ್ತಿ: ಜಾನಪದ ಸಾಹಿತ್ಯ" ಲೇಖನದಲ್ಲಿ ಚೆನ್ನಮ್ಮನ ಸ್ವಾಭಿಮಾನ ದತ್ತಕ ಪ್ರಕರಣ, ಕಿತ್ತೂರು ಸಾಹಿತ್ಯ, ಥ್ಲೀಟರ್ ಲಾವಣಿಗಳ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ಹೆಚ್.ಆರ್. ರಘುನಾಥ ಭಟ್‌ರವರು "ಕಿತ್ತೂರು ಚಿರಸ್ಮರಣೆಯ ಸಾಂಸ್ಕೃತಿಕ ಕಲಾ ಇತಿಹಾಸ" ಲೇಖನದಲ್ಲಿ ಕಿತ್ತೂರು ಸಂಸ್ಥಾನದ ಕಲಾ ವಾಸ್ತುಶಿಲ್ಪ, ಅರಮನೆಯ ವಿನ್ಯಾಸ, ನೀರಿನ ಸರಬರಾಜು ವ್ಯವಸ್ಥೆ, ರಾಜಗುರುಗಳ ಸಮಾಧಿಗಳು, ಹಾಗೂ ಕಿತ್ತೂರು ಬಂಡಾಯ ಕುರಿತು ತಿಳಿಸಿದ್ದಾರೆ. ಸುಲೋಚನಾ ಸಂ. ಮಟ್ಟಿಯವರು ಬರೆದ "ರಾಣಿ ಚೆನ್ನಮ್ಮ ಮತ್ತು ಸ್ವಾತಂತ್ರ್ಯ ಚೇತನ"ದಲ್ಲಿ ಚೆನ್ನಮ್ಮನ ದಕ್ಷತೆ ಕುರಿತ ಲಾವಣಿಗಳು, ಮಲ್ಲಸರ್ಜನನ ವ್ಯಕ್ತಿತ್ವ ಕುರಿತ ಲಾವಣಿಗಳು, ದತ್ತಕ ಪದ್ಧತಿ, ಸಂಗೋಳ್ಳಿ ರಾಯಣ್ಣನ ನಿಷ್ಠೆ ಬಗ್ಗೆ ಹೇಳಲಾಗಿದೆ. ವಿ.ಸಿ. ಮಾಲಗತ್ತಿಯವರು "ಕಿತ್ತೂರು ರಾಣಿ ಚೆನ್ನಮ್ಮನ ಇತಿಹಾಸ ಮತ್ತು ಸಂಸ್ಕೃತಿ–ಮುಂದೇನು" ವಿಷಯವಾಗಿ ಲೇಖನವನ್ನು ಬರೆದು ಕಿತ್ತೂರು ಇತಿಹಾಸದ ಮೇಲೆ ಹೆಚ್ಚಿಗೆ

ಸಂಶೋಧನೆ ನಡೆಯಬೇಕೆಂಬುದನ್ನು ತಿಳಿಸಿದ್ದಾರೆ. ವಿ.ಜಿ. ಮಾರಿಹಾಳರವರ ಗ್ರಂಥದಲ್ಲಿ ಶೂರ ಸಂಗೊಳ್ಳಿ ರಾಯಣ್ಣ ಎಂಬ ಲೇಖನವನ್ನು ಪ್ರಕಟಿಸಿ ರಾಯಣ್ಣನ ಶೌರ್ಯ ಮತ್ತು ಆತನ ವಿಷಯವಾಗಿ ಬರೆದ ಲಾವಣಿಗಳನ್ನು ಕುರಿತು ತಿಳಿಸಿದ್ದಾರೆ.[೪೩]

ಕಿತ್ತೂರ ರಾಣಿ ಚೆನ್ನಮ್ಮಾಜಿಯವರ ವಿಜಯೋತ್ಸವ ಸಮಿತಿ ಪ್ರಕಟಿಸಿದ ಸ್ಮರಣ ಸಂಚಿಕೆಯಲ್ಲಿ "ಕಿತ್ತೂರು ದುಂದುಭಿ" ಗ್ರಂಥದಲ್ಲಿ ಸಂಜೀವ ಲದ್ದಿಮಠ ಎಂಬುವರು ಬರೆದ "ಅಮರ ಕಿತ್ತೂರು ನಾಡು" ಲೇಖನದಲ್ಲಿ ಕಿತ್ತೂರು ಬೆಳೆದು ಬಂದ ರೀತಿ, ಕಿತ್ತೂರಿನ ಕರ್ಯಾತುಗಳ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ಇದೇ ಸ್ಮರಣ ಸಂಚಿಕೆಯಲ್ಲಿ ಶ್ರೀಮತಿ ಶಾಂತಾದೇವಿ. ಸ. ಮಾಳವಾಡರವರು "ಕ್ರಾಂತಿಯ ಕಿಡಿ" ಲೇಖನದಲ್ಲಿ ಕಿತ್ತೂರು ರಾಣಿ ಚೆನ್ನಮ್ಮನ ಇತಿಹಾಸ, ಚೆನ್ನಮ್ಮ ಕೈಗೊಂಡ ಯುದ್ಧದ ಕುರಿತಿದೆ.

ಸ.ರಾ. ಸುಳಕೋಡರವರ ಸಂಪಾದಕತ್ವದಲ್ಲಿ ಕಿತ್ತೂರು ಸಂಸ್ಥಾನ ಮತ್ತು ಸ್ವಾತಂತ್ರ್ಯ ಸಂಗ್ರಾಮ ಎಂಬ ಲೇಖನಗಳ ಸಂಗ್ರಹಗಳನ್ನು ಪ್ರಕಟಿಸಲಾಗಿದೆ. ಈ ಗ್ರಂಥದಲ್ಲಿ ಕಿತ್ತೂರು ನಾಡಿನ ಸ್ವಾತಂತ್ರ್ಯ ಹೋರಾಟ, ಲಾವಣಿಗಳು, ಜಾನಪದ ಗೀತೆಗಳು, ಕವಿತೆಗಳ ಕುರಿತಿದೆ. ಬುದ್ದಣ ಹಿಂಗಮಿರೆಯವರು ಬರೆದ ಲೇಖನ "ಕಿತ್ತೂರಿನ ಬೆಳಕು" ಕಿತ್ತೂರಿನ ಇತಿಹಾಸದ ಕುರಿತಿದೆ. ಮನು ಬಳಿಗಾರರವರು "ಸ್ವಾತಂತ್ರ್ಯ ಸಂಗ್ರಾಮದ ಬೆಳ್ಳಿಚುಕ್ಕಿ ಕಿತ್ತೂರು ಚೆನ್ನಮ್ಮ" ಲೇಖನದಲ್ಲಿ ಕೆಲವು ಲಾವಣಿಗಳನ್ನು ಉದಾಹರಿಸುತ್ತಾ ಚೆನ್ನಮ್ಮನ ವ್ಯಕ್ತಿತ್ವವನ್ನು ವಿವರಿಸಿದ್ದಾರೆ. ಚೆನ್ನಕ್ಕ ಪಾವಟೆಯವರು "ಜಾನಪದ ಕವಿಗಳ ಕಲ್ಪನೆಯಲ್ಲಿ ಕಿತ್ತೂರು ಸಂಸ್ಥಾನ ಲೇಖನದಲ್ಲಿ ಮಲ್ಲೇಂದ್ರ ಮಾನಸೋಲ್ಲಾಸ ಕಿತ್ತೂರು ಮಲ್ಲಸರ್ಜನನ ಪದಗಳು ಎಂಬ ಕೃತಿಯನ್ನು ಬರೆದವರು ಅಣ್ಣಿಗೇರಿಯ ಅಮೃತೇಶ್ವರ ದೇವರ ಭಕ್ತನಾದ ಕಾಶಿರಾಜ,[೪೪] ಮಲ್ಲೇಂದ್ರ ಭಕ್ತಿ ತರಂಗಿಣಿ, ಮಲ್ಲೇಂದ್ರ ಪೂಜಾ ವಿಲಾಸ, ಮಲ್ಲೇಂದ್ರ ಪೂಜಾ ವಿಲಾಸ ತಾರಾವಳಿ, ಮಲ್ಲೇಂದ್ರ ವಿಜಯ, ಗಣೇಶೋತ್ಸವ, ಕಿತ್ತೂರು ಮಲ್ಲಸರ್ಜನನ ಪದಗಳು, ಕಿತ್ತೂರು ಅರಸರ ಕೋಲು ಪದಗಳು, ಮಲ್ಲಸರ್ಜನ ಕಾವ್ಯ, ಕರಿಯಾತಿ ಇವುಗಳ ಬಗ್ಗೆ ಬರೆದಿದ್ದಾರೆ. ರಾಜಶೇಖರ ಇಚ್ಚಂಗಿಯವರ "ಲಾವಣಿ ಸಾಹಿತ್ಯದಲ್ಲಿ ಕಿತ್ತೂರು ಸಂಸ್ಥಾನ"ದಲ್ಲಿ ಪ್ರಾಚೀನ ಕಿತ್ತೂರು ನಾಡು, ಜಾನಪದ, ಲಾವಣಿಗಳಲ್ಲಿ ಕಿತ್ತೂರಿನ ಬಗ್ಗೆ ವಿಮರ್ಶೆ, ಚನ್ನಮ್ಮನ ಶೌರ್ಯ ಕುರಿತು ಬರೆದಿದ್ದಾರೆ. ಆರ್.ಎಫ್. ಚೋಬಾರಿ ಯವರು "ಕಿತ್ತೂರು ಸಂಸ್ಥಾನದ ವೈಭವ" ಲೇಖನದಲ್ಲಿ ಕಿತ್ತೂರು ಸಂಸ್ಥಾನ ಮತ್ತು ಬ್ರೀಟಿಷರು, ದತ್ತಕ ಪುತ್ರರ ವಿವಾದ, ಕರ್ಯಾತುಗಳು, ಇಲ್ಲಿಯ ೨೮೨ ಗ್ರಾಮಗಳು, ಈ ಕಾಲದ ಕವಿಗಳು, ವಿದ್ವಾಂಸರು, ನ್ಯಾಯಾಧೀಶರುಗಳು, ಸಾಹಿತಿಗಳ ಬಗ್ಗೆ ತಿಳಿಸಿದ್ದಾರೆ.[೪೫] ಎಸ್.ಕೆ. ಜೋಶಿಯವರು "ಕಿತ್ತೂರು ನಾಡಿನ ಕೋಟೆಗಳು" ಲೇಖನದಲ್ಲಿ ಕಿತ್ತೂರಿನ ಕೋಟೆ, ರಾಜಕೀಯ ಇತಿಹಾಸಗಳ ಕುರಿತು ಮಾಹಿತಿ ನೀಡಿದ್ದಾರೆ. ಸಿ.ವಿ. ಮಠದರವರು "ರಾಣಿ ಚೆನ್ನಮ್ಮಾಜಿ ಹಾಗೂ ಕಿತ್ತೂರಿನ ಕ್ರಾಂತಿ" ಲೇಖನದಲ್ಲಿ ಚೆನ್ನಮ್ಮನ ಮೂಲ, ಮಲ್ಲಸರ್ಜನನ ಆಡಳಿತ, ಆತನ ಮರಣ, ಬ್ರೀಟಿಷರ ಸೋಲು, ಬ್ರೀಟಿಷರ ಒಡೆದು ಆಳುವ ಕುಟಿಲ ನೀತಿ, ಕಿತ್ತೂರಿನ ವೀರರು,

ಮುಂತಾದ ವಿಷಯಗಳ ಕುರಿತಿದೆ. ಸ.ರಾ. ಸುಳಕೊಡೆಯವರು ಬರೆದ "ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ವೀರತ್ವದ ಪ್ರತೀಕ" ಲೇಖನದಲ್ಲಿ ಕಿತ್ತೂರಿನ ಸಂಸ್ಥಾನವನ್ನಾಳಿದ ಅರಸರು, ಚೆನ್ನಮ್ಮಳ ಸ್ವಾಭಿಮಾನ, ಧೈರ್ಯ, ಇವುಗಳ ಬಗ್ಗೆ ತಿಳಿಸಿದ್ದಾರೆ. ಶ್ರೀಮತಿ ಲೀಲಾ ಚ. ಕಲಕೋಟಿ ಇವರು ಬರೆದ "ಕಿತ್ತೂರು ರಾಣಿ ಚೆನ್ನಮ್ಮಳ ಶೌರ್ಯ ಮತ್ತು ಸಾಹಸ" ಲೇಖನದಲ್ಲಿ ಆಂಗ್ಲರ ಸಾಮ್ರಾಜ್ಯವನ್ನು ಬುಡಸಮೇತ ಕಿತ್ತೆಸೆದು ಹಾಕಲು ಆರಂಭವಾಗಿರುವದು ಕಿತ್ತೂರಿಂದಲೇ ಎಂದಿದೆ.[೪೭] ಚೆನ್ನಮ್ಮನ ಬಾಲ್ಯ, ವಿವಾಹ, ಚೆನ್ನಮ್ಮಳ ಜವಾಬ್ದಾರಿ, ಥ್ಯಾಕರೆಯ ಕುತಂತ್ರ ನೀತಿ, ಆಂಗ್ಲ ಅಧಿಕಾರಿಗಳ ಹೆಸರುಗಳು ಇಲ್ಲಿವೆ. ಆರ್.ಎಸ್. ಚಾಪಗಾವಿಯವರು ಬರೆದ ಲೇಖನ "ಹುತಾತ್ಮಳಾದ ಮಾಯವ್ವ" ಲೇಖನದಲ್ಲಿ ಸಂಗೊಳ್ಳಿ ರಾಯಣ್ಣನ ಸಹೋದರಿ ಮಾಯವ್ವಳ ಪಾತ್ರವನ್ನು ವಿವರಿಸಿದ್ದಾರೆ. ಸಂಗೊಳ್ಳಿ ರಾಯಣ್ಣ ಮತ್ತು ಆತನ ಸಂಗಡಿಗರನ್ನು ಹಿಡಿಯಲು ಬ್ರೀಟಿಷರು ಮಾಡಿದ ತಂತ್ರ ಇದನ್ನು ರಾಯಣ್ಣನಿಗೆ ತಿಳಿಸಿದ ಮಾಯವ್ವಳ ಬಗ್ಗೆ ಹಾಗೂ ರಾಯಣ್ಣ ಅಲ್ಲಿಂದ ಪಾರಾದ ಬಗ್ಗೆ ವಿವರಿಸಿದ್ದಾರೆ. ರಾಯನಗೌಡ ಪಾಟೀಲರು ಬರೆದ "ಕಿತ್ತೂರು ಸಂಸ್ಥಾನದ ಇತಿಹಾಸದಲ್ಲಿ ಬರುವ ಮಲ್ಲವ್ವ ರಾಣಿ ಮತ್ತು ರುದ್ರಮ್ಮ ರಾಣಿ" ಲೇಖನದಲ್ಲಿ ಮಾಳ್ವ ರುದ್ರಸರ್ಜನ ರಾಣಿ ಮಲ್ಲವ್ವ ರಾಣಿಯ ರಾಜ್ಯಭಾರ, ಹಾಗೂ ಮಲ್ಲಸರ್ಜನನ ಥಾಣಿ ರುದ್ರವ್ವ ತಲ್ಲೂರು ದೇಸಾಯಿಯರ ಮಗಳು ಇವರು ನಡೆಸಿದ ರಾಜಕೀಯ ಚಟುವಟಿಕೆಗಳು ಹಾಗೂ ಮುತ್ಸದ್ದಿತನ ವಿಷಯದ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ಸುನಿತಾ ಮೊರಬರವರು ಬರೆದ "ಕಿತ್ತೂರು ಚೆನ್ನಮ್ಮ" ಲೇಖನದಲ್ಲಿ ಅನೇಕ ಲಾವಣಿಗಳ ಮೂಲಕ ಚೆನ್ನಮ್ಮನ ಶೌರ್ಯವನ್ನು, ತಾಯ್ನಾಡಿನ ಪ್ರೇಮ, ಅಭಿಮಾನವವನ್ನು ಕಣ್ಣಿಗೆ ಕಟ್ಟುವಂತೆ ತಿಳಿಸಿದ್ದಾರೆ. ಎಸ್.ಎಸ್. ರೇವಣ್ಣನವರ ಬರೆದ "ಸ್ವಾತಂತ್ರ್ಯ ಸ್ಫೂರ್ತಿ ವೀರರಾಣಿ ಕಿತ್ತೂರು ಚೆನ್ನಮ್ಮ" ಲೇಖನದಲ್ಲಿ ಅಕ್ಟೋಬರ ೨೩ರ ವಿಜಯೋತ್ಸವ ಹಾಗೂ ಚೆನ್ನಮ್ಮಳ ಕಡೆಯ ದಿನಗಳ ಕುರಿತಾಗಿದೆ. ಈ ಗ್ರಂಥದಲ್ಲಿ ಕಿತ್ತೂರು ಕ್ರಾಂತಿ, ವೀರಗಾಥೆ ಎಂಬ ಲಾವಣಿಗಳ ಸಂಗ್ರಹ ಇದೆ.

೧.೧.೩. ಪ್ರಬಂಧಗಳು

ಮಲ್ಲಿಕಾರ್ಜುನ ಮಿಂಚ್‌ರವರ "Rani Channamma : Her revolt against the British Rule" ಮಹಾಪ್ರಬಂಧದಲ್ಲಿ ದಂಗೆಗೆ ಕಾರಣಗಳು ಮತ್ತು ಪರಿಣಾಮಗಳ ಕುರಿತಿದೆ. ಇಕ್ಬಾಲ್ ಅಹ್ಮದ್‌ರವರ "ಕಿತ್ತೂರು ನಾಡಿನ ಇತಿಹಾಸ ಮತ್ತು ಸಂಸ್ಕೃತಿ ಒಂದು ಅಧ್ಯಯನ" ಮಹಾಪ್ರಬಂಧದಲ್ಲಿ ಅಧ್ಯಯನದ ಉದ್ದೇಶ ಮತ್ತು ಅಗತ್ಯ, ಕಿತ್ತೂರು ನಾಡಿನ ಸಾಂಸ್ಕೃತಿಕ ಚರಿತ್ರೆ, ಬ್ರಿಟೀಷರ ಆಳ್ವಿಕೆಯ ಇತಿಹಾಸ ಮತ್ತು ಬಂಡಾಯ, ಕಿತ್ತೂರು ನಾಡಿನ ಧರ್ಮ, ಸಮಾಜ ಹಾಗೂ ರಾಜಗುರು ಪೀಠ ಮತ್ತು ಕಿತ್ತೂರು ನಾಡಿನ ವೀರಪರಂಪರೆ, ಕಿತ್ತೂರು ನಾಡಿನ ವೀರರ ಕುರಿತಿದೆ.

ಕೆ.ಆರ್. ಮೆಳವಂಕಿಯವರ "ಸಂಸ್ಥಾನಿಕರ ಐತಿಹಾಸಿಕ ಸಾಹಿತ್ಯ" (ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ) ಗ್ರಂಥದಲ್ಲಿ ಉತ್ತರ ಕರ್ನಾಟಕದ ಪ್ರಮುಖ ಸಂಸ್ಥಾನಿಕರಲ್ಲಿ ಕಿತ್ತೂರು ದೇಶಗತ್ತಿಗಳು ಹಾಗೂ ಇಲ್ಲಿಯ ರಾಜಕೀಯ ಇತಿಹಾಸ ಥ್ಯಾಕರೆ ಯೊಂದಿಗೆ ಯುದ್ಧ, ಇವುಗಳ ಬಗ್ಗೆ ಹೆಚ್ಚು ಒತ್ತು ನೀಡಿದ್ದಾರೆ. ಸಂಸ್ಥಾನಿಕರ ಆಡಳಿತದ ಬಗ್ಗೆ ತಿಳಿಸುತ್ತಾ ೧೪ ಕರ್ಯಾತುಗಳು ಇದ್ದ ಬಗ್ಗೆ ತಿಳಿಸಿದ್ದಾರೆ.

ಶೈಲಾ ಬಿ. ಪೂಜಾರ್‌ರವರ "ಕಿತ್ತೂರು ಚೆನ್ನಮ್ಮನ ಕಾಲದ ಇತಿಹಾಸ ಮತ್ತು ಸಂಸ್ಕೃತಿ" ಎಂ.ಫಿಲ್ ಪ್ರಬಂಧದಲ್ಲಿ ಭೌಗೋಳಿಕ ಪರಿಸರ, ಆಕರಗಳು, ಕಿತ್ತೂರು ಸಂಸ್ಥಾನದ ರಾಜಕೀಯ ಚರಿತ್ರೆ, ಕಿತ್ತೂರು ಸಂಸ್ಥಾನದ ಆಡಳಿತ ಮತ್ತು ಪದಾಧಿಕಾರಿಗಳು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಿತ್ತೂರು, ಕಿತ್ತೂರಿನ ಯುದ್ಧಗಳು, ಕಿತ್ತೂರು ಸಂಸ್ಥಾನದ ವಾಸ್ತುಶಿಲ್ಪ ಕುರಿತಿದೆ. ಸುರೇಶ್ ಎಸ್. ಭಂಗಿಯವರ "ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮ ಒಂದು ರಾಜಕೀಯ ಅಧ್ಯಯನ" ಎಂ.ಫಿಲ್ ಸಂಶೋಧನಾ ಪ್ರಬಂಧದಲ್ಲಿ ರಾಣಿ ಚೆನ್ನಮ್ಮಳ ಜೀವನ ಮತ್ತು ಸಾಧನೆ, ಸ್ವಾತಂತ್ರ್ಯಕ್ಕಾಗಿ ಬ್ರಿಟೀಷರ ವಿರುದ್ಧ ಹೋರಾಟ, ರಾಜಕೀಯ ಆಡಳಿತ, ಕಿತ್ತೂರಿನ ಸಂಸ್ಥಾನದ ಅವನತಿಗಳನ್ನೊಳಗೊಂಡಿದೆ.

೧.೨. ಅಧ್ಯಯನದ ಉದ್ದೇಶ

ಒಟ್ಟಾರೆ ಈ ಮೇಲಿನ ಪೂರ್ವ ಅಧ್ಯಯನಗಳ ಸಮೀಕ್ಷೆ ಮಾಡಿದಾಗ ಕಿತ್ತೂರು ಪ್ರದೇಶಕ್ಕೆ ಸಂಬಂಧಿಸಿದ ಕಿತ್ತೂರಿನ ರಾಜಕೀಯ ಇತಿಹಾಸ, ಸಾಹಿತ್ಯಕ ಮತ್ತು ಜಾನಪದಗಳ ಸ್ಮಾರಕಗಳ ಮತ್ತು ಶಾಸನಗಳ ಅಧ್ಯಯನದ ಬಗ್ಗೆ ಹೆಚ್ಚು ಮಹತ್ವವನ್ನು ನೀಡಲಾಗಿದೆ. ಆದರೆ ಈವರೆಗೆ ಕಿತ್ತೂರು ಸಂಸ್ಥಾನದ ಆಡಳಿತ ವಿಭಾಗಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾದ ವಿವರವಾದ ಅಧ್ಯಯನ ನಡೆದಿಲ್ಲ. ಮೇಲಿನ ಪೂರ್ವಾಧ್ಯಯನಗಳ ಪೂರಕವಾಗಿಟ್ಟುಕೊಂಡು, ಎಲ್ಲ ಕೃತಿ, ಲೇಖನ, ಪ್ರಬಂಧಗಳನ್ನು ಅವಶ್ಯಕತೆಗೆ ಅನುಗುಣವಾಗಿ ಬಳಸಿಕೊಂಡು, ಕಿತ್ತೂರು ಸಂಸ್ಥಾನದ ಆಡಳಿತ ವಿಭಾಗಗಳನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡುವುದೇ ಈ ಮಹಾಪ್ರಬಂಧದ ಉದ್ದೇಶವಾಗಿದೆ.

೧.೩. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಸಂಶೋಧನಾ ಅಧ್ಯಯನದ ವ್ಯಾಪ್ತಿ ಕ್ರಿ.ಶ. ೧೭೦೦ ರಿಂದ ೧೮೩೦ರವರೆಗಿನ ಕಾಲದ್ದಾಗಿದೆ. ಕಿತ್ತೂರು ಸಂಸ್ಥಾನವನ್ನು ಆಳಿದ ೧೨ ಜನ ಅರಸರುಗಳಲ್ಲಿ ದಾಖಲೆಗಳು ಸಿಗುವುದು ಕೇವಲ ಮಲ್ಲಸಜ್ಜನನ ಕಾಲದಿಂದಲೇ ಆಗಿದೆ. ಈ ಹಿನ್ನೆಲೆಯಲ್ಲಿ ಮಲ್ಲಸರ್ಜನನ ಕಾಲದಿಂದ ಹಿಡಿದು ಕಿತ್ತೂರು ಚೆನ್ನಮ್ಮಳ ಕಾಲದವರೆಗಿನ ಸಂಸ್ಥಾನಕ್ಕೆ ಸಂಬಂಧಿಸಿದ ಮೋಡಿ ಬರಹಗಳು, ಪತ್ರ ವ್ಯವಹಾರಗಳು, ಕೈಫಿಯತ್ತುಗಳನ್ನು ಪೂರಕವಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

೧.೪. ಅಧ್ಯಯನದ ವಿಧಾನ

ಕಿತ್ತೂರು ಸಂಸ್ಥಾನದ ಆಡಳಿತ ವಿಭಾಗಗಳ ವಸ್ತುನಿಷ್ಠವಾದ ಅಧ್ಯಯನಕ್ಕೆ ಈ ಕೆಳಗಿನ ಆಕರಗಳನ್ನು ಪ್ರಧಾನವಾಗಿ ಅಧ್ಯಯನಕ್ಕೆ ಬಳಸಲಾಗಿದೆ.

೧. ಮೋಡಿ ಬರಹದ ದಾಖಲೆಗಳು

೨. ಪತ್ರ ವ್ಯವಹಾರಗಳು

೩. ಕೈಫಿಯತ್ತು

ಪ್ರಸ್ತುತ ಈ ಅಧ್ಯಯನವನ್ನು ಮಾಡುವಾಗ ಕೆಲವೊಂದು ವಿಷಯ ನಿರೂಪಣೆಯಲ್ಲಿ ವಿಧಾನ ಕ್ರಮವನ್ನು ಅನುಸರಿಸಲಾಗಿದೆ. ಮೊದಲ ಹಂತದಲ್ಲಿ ಕಿತ್ತೂರಿನ ವಿಷಯಕ್ಕೆ ಸಂಬಂಧಿಸಿದಂತೆ ಕೃತಿಗಳು, ಲೇಖನಗಳು ಮತ್ತು ಪ್ರಬಂಧಗಳನ್ನು ಪರಿಶೀಲಿಸಲಾಗಿದೆ. ಇದರೊಟ್ಟಿಗೆ ಅಕಾರಾದಿ ಯಲ್ಲಿ ಪಟ್ಟಿಯನ್ನು ತಯಾರಿಸಿಕೊಳ್ಳಲಾಯಿತು. ಪ್ರಕಟಿತ ಮಾಹಿತಿಯನ್ನು ಪಡೆದ ನಂತರ ಕ್ಷೇತ್ರ ಕಾರ್ಯವನ್ನು ಕೈಗೊಳ್ಳಲಾಗಿದೆ. ಕ್ಷೇತ್ರ ಕಾರ್ಯವನ್ನು ಪುಣೆಯ ಪತ್ರಾಗಾರದ ರೂಮಾಲ್‌ಗಳನ್ನು, ಕೈಫಿಯತ್ತುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕೊಲ್ಲಾಪುರದ ಪತ್ರಾಗಾರದ ಇಲಾಖೆಯಲ್ಲಿ ೧೧ ಮೋಡಿ ಬರಹದ ಪತ್ರಗಳ ಪ್ರತಿಗಳನ್ನು ಸಂಗ್ರಹಿಸಲಾಗಿದೆ. ಪುಣೆ ಡೆಕ್ಕನ್ ಕಾಲೇಜಿನ ವಸ್ತುಸಂಗ್ರಹಾಲಯದಲ್ಲಿರುವ ರೂಮಾಲುಗಳನ್ನು ಪರಿಶೀಲಿಸಿ ಸುಮಾರು ೨೦ಕ್ಕೂ ಹೆಚ್ಚು ದಾಖಲೆಗಳನ್ನು ಪರಿಶೀಲಿಸಲಾಗಿದೆ. ಆನುಷಂಗಿಕ ಆಕರಗಳಾದ ವಿ.ವಿ. ಖರೆಯವರು ಬರೆದ ಹಿಂದು-ಮರಾಠಾ ದಾಖಲೆಗಳು, ಕೆ.ಎನ್. ಚಿಟ್ನೀಸ್ ಬರೆದ ಲೇಖನ ಮತ್ತು ನಿಯತಕಾಲಿಕೆಗಳಲ್ಲಿ ಪ್ರಕಟಿಸಿದ ಲೇಖನಗಳನ್ನು, ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದರ ಜೊತೆಗೆ ಅಧ್ಯಯನಕ್ಕನು ಗುಣವಾಗಿ ಜಾನಪದ ಆಕರಗಳನ್ನು ಬಳಸಿಕೊಂಡು, ಪ್ರಸ್ತುತ ಸಂಶೋಧನಾ ಮಹಾಪ್ರಬಂಧವನ್ನು ಒಂದು ವ್ಯವಸ್ಥಿತ ಚೌಕಟ್ಟಿಗೆ ಒಳಪಡಿಸಿ ಅಧ್ಯಯನ ಕೈಗೊಳ್ಳಲಾಗಿದೆ. ವಿಷಯ ನಿರೂಪಣೆಯ ಸಂದರ್ಭದಲ್ಲಿ ಅವಶ್ಯಕವೆನಿಸಿದ ನಕ್ಷೆಗಳು, ರೇಖಾಚಿತ್ರಗಳು ಹಾಗೂ ಮೋಡಿ ಪತ್ರಗಳ ಪ್ರತಿಯನ್ನು ಅನುಬಂಧದಲ್ಲಿ ಕೊಡಲಾಗಿದೆ.

ಒಟ್ಟಾರೆಯಾಗಿ ಈ ಅಧ್ಯಾಯದಿಂದ ತಿಳಿದು ಬರುವ ಅಂಶಗಳೆನೆಂದರೆ ಈ ಮೇಲಿನ ಎಲ್ಲ ಕೃತಿಗಳಲ್ಲೂ ಕಿತ್ತೂರು ಸಂಸ್ಥಾನದ ಚೆನ್ನಮ್ಮ ಮತ್ತು ಮಲ್ಲಸರ್ಜನನ್ನ ಕೇಂದ್ರವಾಗಿಟ್ಟುಕೊಂಡು ಕೃತಿಗಳನ್ನು ರಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈವರೆಗಿನ ಪ್ರಕಟಿತ ದಾಖಲೆಗಳೊಂದಿಗೆ, ಅಪ್ರಕಟಿತ ಮಾಹಿತಿ ಒಂದೊಡೆ ಸೇರಿಸಿ ಕಿತ್ತೂರು ಸಂಸ್ಥಾನದ ಆಡಳಿತ ವಿಭಾಗಗಳ ಕುರಿತು ಈ ಮಹಾಪ್ರಬಂಧ ರಚಿಸುವ ಕಿರುಪ್ರಯತ್ನ ಇದಾಗಿದೆ.

ಅಡಿಟಿಪ್ಪಣಿ

೧. ಮಲ್ಲಾಪುರ ಬಿ.ವಿ. (ಸಂ), **"ಅಲ್ಲಮಪ್ರಭುದೇವರ ಸಮಗ್ರ ವಚನ"** ಸಂಪುಟ-೨, ಆವೃತ್ತಿ ೨, ವಚನ ೩೧೨, ೨೦೦೧.

೨. ನಾಯಕ ಹಾ.ಮಾ (ಪ್ರ.ಸಂ) **"ಕನ್ನಡ ವಿಶ್ವಕೋಶ ಸಂ-೨"** ಪು.೩೬೯, ೧೯೭೦.

೩. ರಾಮಚಂದ್ರ ಶಾಸ್ತ್ರಿ ಎಸ್ (ಅನು) **"ಸಂಸ್ಕೃತ ಸಾಹಿತ್ಯದ ಇತಿಹಾಸ"**, ಪು,೬೦-೬೩, ೧೯೮೦.

೪. ಎಂ.ಎಂ. ಕಲಬುರ್ಗಿ (ಸಂ.), **"ಆಡಳಿತ ವಿಭಾಗಗಳು"**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,

೫. ಅದೇ, ಪು. ೧.

೬. JBBRAS, Volume 9, PP 304.

೭. ಮುಪ್ಪಯ್ಯನವರಮಠ ವ್ಹಿ. ಎಸ್. (ಸಂ.), **"ಕಿತ್ತೂರು ದುಂದುಭಿ"**, ಪುಟ ೭, ೧೯೯೬.

೮. ಈಶ್ವರ್ ಎಂ. ಸಣಕಲ್ **"ಗರಗದ ಮಡಿವಾಳ ಮಹಾತ್ಮೆ"** ಪು ೧೧.

೯. ಕಲಬುರ್ಗಿ, ಎಂ.ಎಂ. **"ಕನ್ನಡ ನಾಮ ವಿಜ್ಞಾನ"**.

೧೦.ಸಿದ್ಧಾಂತಿ ಶಿವಬಸವ ಶಾಸ್ತ್ರಗಳು, **"ತುರಕಾರಿ ಪಂಚಮರ ಇತಿಹಾಸ"**, ೧೯೨೯.

೧೧.ಚೆನ್ನಕ್ಕ ಪಾವಟೆ, **"ಕಿತ್ತೂರು ಕದನ"**, ೨೦೦೨.

೧೨.ಪಾಟೀಲ ವ್ಹಿ.ಜಿ., **"ಕಿತ್ತೂರು ಚೆನ್ನಮ್ಮ"**, ೧೯೫೪.

೧೩.ಸದಾಶಿವ ಒಡೆಯರ, **"ರಾಣಿ ಚೆನ್ನಮ್ಮ"**, ೧೯೮೧.

೧೪.ತಲ್ಲೂರು ರಾಯನಗೌಡ್ರ, (ಸಂ.) **"ಮಲ್ಲಸರ್ಜನ ದುಂದುಭಿ"**, ೧೯೫೦

೧೫.ಹಾಲಪ್ಪ ಗ.ಸ., **"ಭಾರತ ಸ್ವಾತಂತ್ರ್ಯದ ಬೆಳ್ಳಿ ಚುಕ್ಕಿ"**, ಪು. ಸಂಖ್ಯೆ ೮೨, ೧೯೬೮.

೧೬.ತಲ್ಲೂರು ರಾಯನಗೌಡ್ರ, (ಸಂ.) **"ಮಲ್ಲಸರ್ಜನನ ಕಾವ್ಯ"**, ೧೯೫೦.

೧೭.ಪಾಟೀಲ, ವಿ.ಜಿ. **"ಕಿತ್ತೂರು ದೊರೆ ಮಲ್ಲಸರ್ಜ"**, ೧೯೫೩.

೧೮.ನಿಂಗಣ್ಣ ಸಣ್ಣಕ್ಕಿ ಮತ್ತು ಶಿವಲಿಂಗಯ್ಯ ಭಾವಿಕಟ್ಟಿ, **"ಜಾನಪದದಲ್ಲಿ ಕಿತ್ತೂರು"**, ೧೯೭೯.

೧೯.ದೊಡ್ಡಭಾವೆಪ್ಪ ಚೆನ್ನಬಸಪ್ಪ ಮೂಗಿ, **"ಪಾರಸಿ ಕಾಗದ ಪತ್ರಗಳು"**, ೧೯೪೮.

೨೦.ಕೊಂಗವಾಡ, ಜಿ.ವಿ. (ಸಂ.), **"ಕಿತ್ತೂರು ಇತಿಹಾಸ,"** ೧೯೯೮.

೨೧.ಕೃಷ್ಣಮೂರ್ತಿ ಪುರಾಣಿಕ, **"ಕಿತ್ತೂರು ಚೆನ್ನಮ್ಮ"**, ೧೯೭೪.

೨೨.ಅದೇ, **"ವೀರರಾಣಿ ಕಿತ್ತೂರು ಚೆನ್ನಮ್ಮ"**, ೧೯೭೩.

೨೩.ಶಿವರಾಮು, **"ಕನ್ನಡದ ಕಡುಗಲಿಗಳು"**, ೧೯೬೭.

೨೪.ಅರ್ಕಸಾಲಿ ವೃಷಭೇಂದ್ರಾಚಾರ್ಯ, **"ವೀರ ರಾಣಿ ಕಿತ್ತೂರು ಚೆನ್ನಮ್ಮ,"** ೨೦೦೯.

೨೫.ಸುಲೋಚನಾ ಪೋತ್ನಿಸ್, **"ಸ್ವಾತಂತ್ರ್ಯ ಸಂಗ್ರಾಮದ ಧ್ರುವತಾರೆ ಕಿತ್ತೂರು ರಾಣಿ ಚೆನ್ನಮ್ಮ,"** ೨೦೦೯.

೨೬.ಮಾರಿಹಾಳ ವಿ.ಜಿ., **"ಮಹಾರಾಣಿ ಕಿತ್ತೂರು ಚೆನ್ನಮ್ಮಾಜಿ"**, ೨೦೧೧.

೨೭.ಇಂಚಲ್ ಎಸ್.ಡಿ., **"ಕಿತ್ತೂರು ಸ್ವಾತಂತ್ರ್ಯ ಸಂಗ್ರಾಮ"**, ೧೯೫೭.

೨೮.ಜಯದೇವಿ ಗಾಯಕವಾಡ, **"ವೀರರಾಣಿ ಚೆನ್ನಮ್ಮ"**, ೨೦೦೪.

೨೯.ಶಾಸ್ತ್ರಿ ಜಿ.ವಿ., **"ವೀರರಾಣಿ ಕಿತ್ತೂರು ಚೆನ್ನಮ್ಮಾ"**, ೨೦೦೨

೩೦.ಬಾಳಣ್ಣ ಶೀಗಿಹಳ್ಳಿ, **"ಬೆಳಗಾವಿ ಜಿಲ್ಲೆಯ ವೀರಶೈವ ದೇಶಗತ್ತಿಗಳು"**, ೧೯೮೯.

೩೧.ಗೋವಿಂದ ನಾರಾಯಣ, **"ಕಿತ್ತೂರು ಚೆನ್ನಮ್ಮಾ" (ಜೀವನ ಚರಿತ್ರೆ)**, ೨೦೧೧.

೩೨.ಕಲಬುರ್ಗಿ ಎಂ.ಎಂ. ಮತ್ತು ಚೆನ್ನಕ್ಕಾ ಪಾವಟೆ (ಸಂ.), **"ಕಿತ್ತೂರು ಸಂಸ್ಥಾನದ ಸಾಹಿತ್ಯ ಭಾಗ ೧"**, ೧೯೯೯.

೩೩.ಗುಂಜಾಳ್, ಎಸ್. ಆರ್. (ಸಂ.) **"ಬೆಳಗಾವಿ ಬೆಳಕು"**, ೨೦೦೩.

೩೪.ಚಿಟ್ನೀಸ್, ಕೆ.ಎನ್. **"ಮರಾಠ ಕಿತ್ತೂರು ಸಂಬಂಧಗಳು"**, ೧೯೭೧.

೩೫.ಅದೇ.

೩೬.ಅದೇ.

೩೭.ಅದೇ.

೩೮.ಓಂಕಾರ ಕಾಕಡೆ, **ಸುಧಾ ವಾರಪತ್ರಿಕೆ**, ೧೩ ಡಿಸೆಂಬರ್ ೨೦೦೧,

೩೯.ಭಾರತಿ ಚಿಂ. ಜೋರಾಪುರ, **"ವೀರರಾಣಿ ಚೆನ್ನಮ್ಮಾಜಿ ವಿಜಯೋತ್ಸವ ಪತ್ರಿಕೆ,"** ೧೯೭೧.

೪೦.ಸಾವಂತ್, ಎಂ. ವೈ. **"ಕಿತ್ತೂರು ಮರಾಠ ಸಂಬಂಧ,"** ಪು. ೧೮೭, ೧೯೯೮.

೪೧.ಅನ್ನಪೂರ್ಣ ಫ. ಹತ್ತಿಮತ್ತೂರು, **"ಕಿತ್ತೂರು ರಾಜ್ಯದ ಸ್ಥಳನಾಮಗಳ ಅಧ್ಯಯನ,"** ಪು. ೨೮೨, ೧೯೯೯.

೪೨.ಸಾವಂತ್, ಎಂ. ವೈ. **"ಮರಾಠರ ಕಾಲದಲ್ಲಿದ್ದ ಉತ್ತರ ಕರ್ನಾಟಕದ ಪ್ರಚಲಿತ ತೆರಿಗೆಗಳು"**, ಪು. ೨೫೪, ೧೯೯೯.

೪೩.ಕೊಂಗವಾಡ, ಜಿ.ವಿ. (ಸಂ.) **"ಕಿತ್ತೂರ ಇತಿಹಾಸ"**, ಪು. ೨೬-೩೩, ೧೯೯೮.

೪೪.ಸುಳಕೋಡೆ, ಸ. ರಾ. (ಸಂ.) **"ಕಿತ್ತೂರು ಸಂಸ್ಥಾನ ಮತ್ತು ಸ್ವಾತಂತ್ರ್ಯ ಸಂಗ್ರಾಮ"**, ಪುಟ ೧೭, ೨೦೧೧.

೪೫.ಅದೇ ಪುಟ ೫೩, ೨೦೧೧.

೪೬.ಅದೇ ಪುಟ ೭೭, ೨೦೧೧.

ಅಧ್ಯಾಯ ೨

ಪ್ರಾಕೃತಿಕ ಹಿನ್ನೆಲೆ, ಭೌಗೋಳಿಕ ಪ್ರಭಾವ ಮತ್ತು ಕಿತ್ತೂರು ಸಂಸ್ಥಾನದ ಸಂಕ್ಷಿಪ್ತ ಇತಿಹಾಸ

೨.೧. ಪ್ರಾಕೃತಿಕ ಮತ್ತು ಭೌಗೋಳಿಕ ಹಿನ್ನೆಲೆ

ಕಿತ್ತೂರು ಪ್ರಸ್ತುತ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ೧೨೪ ಗ್ರಾಮಗಳಲ್ಲಿ ಒಳಪಡುವ ಒಂದು ಗ್ರಾಮ. ೧೨°-೩೫° ಉತ್ತರ ಅಕ್ಷಾಂಶ ೭೪°-೫೧° ಪೂರ್ವ ರೇಖಾಂಶಗಳ ಮೇಲಿರುವ ಕಿತ್ತೂರು ರಾಷ್ಟ್ರೀಯ ಹೆದ್ದಾರಿ-೪ರ ಬದಿಯಲ್ಲಿದೆ. ಪಶ್ಚಿಮದಿಂದ ಪೂರ್ವದೆಡೆಗೆ ಸಾಗಿ ಹೋಗುವ ಮಲಪ್ರಭಾ ನದಿಯು, ಬೈಲಹೊಂಗಲ ತಾಲ್ಲೂಕನ್ನು ಉತ್ತರ ಮತ್ತು ದಕ್ಷಿಣವೆಂದು ಎರಡು ಭಾಗಗಳನ್ನಾಗಿಸಿದೆ. ಕಿತ್ತೂರು ಪ್ರದೇಶ ಬೈಲಹೊಂಗಲ ತಾಲ್ಲೂಕಿನ ದಕ್ಷಿಣ ಭಾಗದಲ್ಲಿದ್ದು, ಪಶ್ಚಿಮ ಘಟ್ಟಗಳ ಸೆರಗಿನಲ್ಲಿದೆ. ಈ ಗ್ರಾಮವು ಐತಿಹಾಸಿಕ ಮಹತ್ವದ ಸ್ಥಾನವನ್ನು ಪಡೆದು ಜನಮನದಲ್ಲಿ ನೆಲಸಿದೆ. ಇಂತಹ ಗ್ರಾಮದ ಪರಿಸರದ ಐತಿಹಾಸಿಕ ಮಹತ್ವವನ್ನು ತೋರಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

> "ಬಿತ್ತರದ ಕೋಟೆಯಿಂ ಕೊತ್ತಳದ ಸೊಬಗಿನಿಂ
> ಸುತ್ತಲೂ ಹಬ್ಬಿರುವ ಹೆಸರಾಂತ ಅಗಳದಿಂ
> ಭಿತ್ತಿ ಭಿತ್ತಿಯೊಳೆತ್ತಲುಂ ಹಸ್ತಕೌಶಲ್ಯದಿಂ ಮೆರೆವ ಚಿತ್ರದಿಂದೆ
> ಉತ್ತರದ ಧ್ರುವನೋಳ್ಪ ಗಚ್ಚಿನಾ (ಪ್ರಖ್ಯಾತ) ಕೊಳವಿಂ
> ಮುತ್ತು ಮಾಣಿಕ ಪಚ್ಚರತ್ನಗಳ ಕೋಣೆಯಿಂ
> ಕಿತ್ತೂರಿನರಮನೆಯು ಕರ್ನಾಟ ದೇಶದೊಳ್ ಕೀರ್ತಿಯಂ ಪೊಂದಿರುವುದು"[೧]

ಇಂತಹ ಹಾಡುಗಳಿಂದ ಅನೇಕ ಕವಿಗಳಿಂದ ಹೊಗಳಲ್ಪಟ್ಟ ಐತಿಹಾಸಿಕ ಪ್ರಸಿದ್ಧ ಕಿತ್ತೂರು ಪುಣೆ-ಬೆಂಗಳೂರು ಹೆದ್ದಾರಿಯ ಮೇಲೆ ನೆಲೆಸಿರುವ ಒಂದು ಪಟ್ಟಣ. ಕಿತ್ತೂರು ಎಂದೊಡನೆ ಇಲ್ಲಿ ನೆನಪಿಗೆ ಬರುವುದು ರಾಣಿ ಚೆನ್ನಮ್ಮನ ಹೆಸರು ಮಾತ್ರ. ಒಂದು ಕಾಲದಲ್ಲಿ ಸೂರ್ಯ ಮುಳಗದ ಸಾಮ್ರಾಜ್ಯವೆಂದು ಹೆಸರು ಗಳಿಸಿದ್ದ ಬ್ರಿಟಿಷ್ ಚಕ್ರಾಧಿಪತ್ಯದ ವಿರುದ್ಧ ಬಂಡಾಯವೆದ್ದು ಹೋರಾಡಿದ ಅರಸು ಮನೆತನಗಳಲ್ಲಿ ಚೆನ್ನಮ್ಮನೇ ಮೊದಲಿಗಳು.[೨]

ಕರ್ನಾಟಕದ ಇತಿಹಾಸದಲ್ಲಿ ಅಂದು ಕಿತ್ತೂರು ಸಂಸ್ಥಾನವು ಉಚ್ಛ್ರಾಯ ಸ್ಥಿತಿಯಲ್ಲಿದ್ದು, ಅಂದು ಅನೇಕ ಹಳ್ಳಿಗಳಿಂದ ಕೂಡಿದ ಒಂದು ಪ್ರಾಂತ್ಯವಾಗಿತ್ತು. ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಇದೊಂದು ಅವಿಸ್ಮರಣೀಯ ನಾಡು. ಈ ಸಂಸ್ಥಾನದ ಆಡಳಿತ ಕೇಂದ್ರ ಬಿಂದು ಕಿತ್ತೂರು. ಕಿತ್ತೂರು ಕೃಷಿ ಪ್ರಧಾನ ನಾಡಾಗಿದ್ದುದರಿಂದ ಅರಸರು ಇಲ್ಲಿಯ ನೀರಾವರಿ ಸೌಕರ್ಯಗಳಿಗೆ ಹೆಚ್ಚು ಮಹತ್ವ ಕೊಟ್ಟಿದ್ದರು. ಕಿತ್ತೂರಿನ ಸುತ್ತಲು ಅನೇಕ ಕೆರೆಗಳಿವೆ. ಅರಿಸಿನಗೆರೆ, ತುಂಬುಗೆರೆ, ಸಕ್ಕರೆಗೆರೆ, ಚಂದರಕೆರೆ, ಪರಸನಹಟ್ಟಿಕೆರೆ, ಖಾನಬಾಯಿ ಒಡ್ಡು

ಇತ್ಯಾದಿಗಳು ಈ ಪ್ರದೇಶದಲ್ಲಿದ್ದು, ವ್ಯವಸಾಯಕ್ಕೆ ಸಮೃದ್ಧವಾಗಿವೆ. ಶೀಗಿಹಳ್ಳಿ ಎಂಬ ಹಳ್ಳಿಯಲ್ಲಿ ಎಂಬತ್ತು ಜೊತೆ ಎತ್ತುಗಳಿಂದ ನೀರೆತ್ತುವ ಯಾತದ ಯೋಜನೆಯಿಂದ ಆಗ ತಟ್ಟಿಹಳ್ಳದ ನೀರು ೪೦೦ ಎಕರೆ ತೋಟಗಳಿಗೆ ನೀರಾವರಿ ಸೌಲಭ್ಯದ ವ್ಯವಸ್ಥೆ ಮಾಡಲಾಗಿತ್ತೆಂದು ಇಲ್ಲಿರುವ ಕುರುಹುಗಳಿಂದ ತಿಳಿದುಬರುತ್ತದೆ.[೬]

ಕಿತ್ತೂರಿನ ಪಶ್ಚಿಮ ಭಾಗವು ಕಾಡಿನಿಂದ ಕೂಡಿದ ಗುಡ್ಡಗಾಡು ಪ್ರದೇಶವಾಗಿದೆ. ಅದರಲ್ಲಿ ಖಾನಾಪುರದ ಉತ್ತರ ಭಾಗದಲ್ಲಿರುವ ಗುಡ್ಡಗಳು ಬಹಳ ಎತ್ತರವಾಗಿಯು, ಕಲ್ಲುಬಂಡೆ ಗಳಿಂದ ಕೂಡಿದವು ಆಗಿವೆ. ಕಿತ್ತೂರಿನ ಉತ್ತರ ಮೇರೆ ಬೆಳಗಾವಿಯಿಂದ ದಕ್ಷಿಣಕ್ಕೆ ಸುಮಾರು ೨೦ ಕೀ.ಮಿ. ಹತ್ತಿರವಿದ್ದರೆ, ದಕ್ಷಿಣದ ಮೇರೆ ಧಾರವಾಡದಿಂದ ಉತ್ತರಕ್ಕೆ ಸುಮಾರು ೨೫ ಕೀ.ಮೀ ದೂರದಲ್ಲಿದೆ. ಪಶ್ಚಿಮದ ಮೇರೆ ತಾವರೆಗಟ್ಟಿಯವರೆಗೂ ಇದೆ. ಪೂರ್ವದಲ್ಲಿ ಇದರ ಮೇರೆಯು ಯಕ್ಕುಂಡಿಯವರೆಗೂ ಇದ್ದು, ಬೈಲುಸೀಮೆಯ ಪ್ರದೇಶವಾದ ಬೈಲಹೊಂಗಲ, ಮುರಗೋಡು, ದೊಡವಾಡ, ತಡಕೋಡು ಮತ್ತು ಗರಗ ಪಟ್ಟಣಗಳನ್ನು ಹೊಂದಿದೆ. ಈ ಮೇಲಿನ ಭಾಗಗಳಲ್ಲಿ ಮಳೆಗಾಲದಲ್ಲಿ ವಿಶೇಷ ಮಳೆಯಾಗುತ್ತಿದ್ದು, ಬೇಸಿಗೆ ಕಾಲದಲ್ಲಿ ಪ್ರಖರ ವಾದ ಬಿಸಿಲು ಕೂಡಾ ಹೊಂದಿದೆ.[೭]

ಕಿತ್ತೂರು ನಾಡು ಬ್ರಿಟಿಷರು ವಶಪಡಿಸಿಕೊಂಡ ಮೇಲೆ ಹಾಳಾಗಿದ್ದರೂ ಕೂಡಾ ಹೆಚ್ಚು ಕಡಿಮೆ ಇದರ ಪೂರ್ಣ ವಿನ್ಯಾಸವನ್ನು, ಪ್ರಾಕೃತಿಕ ಹಿನ್ನಲೆಯನ್ನು ತಿಳಿಯಲು ಸಾಧ್ಯವಾಗುವಷ್ಟು ಸುಸ್ಥಿತಿಯಲ್ಲಿದೆ. ಕಿತ್ತೂರು ನಾಡು ಬಯಲು ಸೀಮೆ ಹಾಗೂ ಮಲೆನಾಡಿನ ಪರಿಸರವನ್ನು ಹೊಂದಿದ್ದು, ಇದರ ಪೂರ್ವ ಭಾಗವು ಬಯಲು ಸೀಮೆಯಾಗಿದ್ದರೆ, ಪಶ್ಚಿಮ ಭಾಗವು ಮಲೆನಾಡಿನ ಅಂಚಿನಲ್ಲಿದೆ. ಪೂರ್ವಭಾಗದಲ್ಲಿ ಅಲ್ಲೊಂದು ಇಲ್ಲೊಂದು ಗಿಡಗಳನ್ನು ಬಿಟ್ಟರೆ ಬಯಲು ಪ್ರದೇಶವೇ ಹೆಚ್ಚಾಗಿ ಕಂಡು ಬರುತ್ತದೆ. ಇಲ್ಲಿ ಡೆಕ್ಕನ್ ಟ್ರಾಪ್ ಎಂಬ ಕರಿ ಕಲ್ಲಿನ ಪದರವೇ ಹೆಚ್ಚು.[೮] ಇದು ಗಟ್ಟಿಮುಟ್ಟಾದ ಕಲ್ಲಾಗಿದ್ದು, ಕಿತ್ತೂರಿನ ಕೋಟೆಗೆ ಈ ಕಲ್ಲನ್ನೇ ಹೆಚ್ಚಾಗಿ ಬಳಸಲಾಗಿದೆ. ಕಿತ್ತೂರಿನ ಪಶ್ಚಿಮ ಭಾಗದಲ್ಲಿ ವಿಶೇಷವಾಗಿ ದೊರೆಯುವ ಕಂದು ಬಣ್ಣದ ನಸುಗೆಂಪಿನ ಹೆಮಟೈಟ್ ಕ್ವಾರ್ಟಜೈಟ್ ಕಲ್ಲಿನ ಗುಡ್ಡಗಳಿವೆ. ಈ ಪ್ರದೇಶದಲ್ಲೆಲ್ಲಾ ಹೆಚ್ಚಾಗಿ ಹಸಿರು ಹುಲ್ಲುಗಾವಲು ಮತ್ತು ನಿತ್ಯ ಹರಿದ್ವರ್ಣ ಕಾಡುಗಳಿಂದ ಕೂಡಿದೆ. ಅರಮನೆ ಮತ್ತು ಇತರ ಕಟ್ಟಡಗಳಲ್ಲಿ ಈ ನಸುಗೆಂಪಿನ ಕ್ವಾರ್ಟಜೈಟ್ ಕಲ್ಲನ್ನೆ ಬಳಸಲಾಗಿದೆ. ಇದರ ಬಣ್ಣವು ಆಕರ್ಷಕವಾಗಿದ್ದು, ಕಟ್ಟಡಕ್ಕೆ ಶೋಭೆಯನ್ನು ಕೊಡುತ್ತದೆ. ಪ್ರಾಕೃತಿಕ ಈ ಸಂಪತ್ತಿನ ಪ್ರಭಾವ ಕಿತ್ತೂರಿನ ಮಹತ್ವವನ್ನು ಹೆಚ್ಚಿಸಿದೆ.

ಈ ಗ್ರಾಮದ ನೈರುತ್ಯ ದಿಕ್ಕಿಗೆ ಕೋಟೆಯ ಹೊರಗಡೆ ಒಂದು ನೈಸರ್ಗಿಕ ದಿಬ್ಬವಿದೆ. ಅದನ್ನು 'ಗಡಾದಮರಡಿ' ಎಂದು ಕರೆಯುತ್ತಾರೆ. ಈ ದಿನ್ನೆಯ ಮೇಲೆ ನಿಂತು ನೋಡಿದಾಗ ಬಹುದೂರದವರೆಗೆ ನೋಡಲು ಒಂದು ವೀಕ್ಷಣಾ ಗೋಪುರವನ್ನು ಸಂಸ್ಥಾನದ ಕಾಲದಲ್ಲಿ ನಿರ್ಮಿಸ ಲಾಯಿತು. ಇದರ ಮೇಲೆ ನಿಂತು ನೋಡಿದಲ್ಲಿ ಕನಿಷ್ಠ ೪-೫ ಕಿ.ಮೀ ದೂರದವರೆಗೆ ವೈರಿಗಳು

ಬರುವುದನ್ನು ವೀಕ್ಷಿಸಬಹುದೆಂಬುದು ತಜ್ಞರ ಅಭಿಪ್ರಾಯ. ಈ ಗಡಾದಮರಡಿಯು ಕೇವಲ ರಕ್ಷಣಾ ದೃಷ್ಟಿಯಿಂದಲ್ಲದೆ, ನಿಸರ್ಗ ಸೌಂದರ್ಯವನ್ನು ಸವಿಯಲು ಅನುಕೂಲವಾದ ಗುಡ್ಡವಾಗಿದ್ದು ಪ್ರಾಕೃತಿಕವಾಗಿ ಪ್ರಭಾವ ಬೀರಿದೆ.

೨.೧.೧. ಭೂಗುಣ ಅಥವಾ ಮಣ್ಣುಗಳು

ಕಿತ್ತೂರಿನ ಸುತ್ತಮುತ್ತಲಿನ ನೈಸರ್ಗಿಕ ಸಂಪನ್ಮೂಲಗಳಲ್ಲಿ ಭೂಗುಣ ಅಥವಾ ಮಣ್ಣು ಅತೀ ಮುಖ್ಯವಾಗಿದೆ. ಕೇವಲ ಮಣ್ಣು ಉಂಟಾಗಬೇಕಾದರೆ ಹಲವಾರು ಸಾವಿರ ವರ್ಷಗಳೇ ಹಿಡಿಯುವವು. ಇದು ಮಾನವನ ಅಳಿವು-ಉಳಿವುಗಳಿಗೆ ಆಧಾರವಾಗಿದೆ. ಈ ಸಂಪತ್ತು ಬಹಳ ವೇಗದ ಗತಿಯಲ್ಲಿ ಕ್ಷೀಣಿಸುತ್ತಿದೆ. ಮಣ್ಣಿನ ವಿವಿಧ ಪ್ರಮಾಣದಲ್ಲಿ ಶಿಥಿಲವಾದ ಖನಿಜವು ಹಾಗೂ ನಶಿಸುತ್ತಿರುವ ಸಾವಯವ ವಸ್ತುಗಳಿಂದ ಪದರ ರೂಪದಲ್ಲಿ ಸಂಘಟನೆಯಾದ ನೈಸರ್ಗಿಕ ವಾದ ಸ್ವಾಭಾವಿಕ ಸಂಪತ್ತಾಗಿದೆ. ಹದವಾದ ಮಟ್ಟದ ನೀರು, ಗಾಳಿ ಇದ್ದಾಗ ಸಸ್ಯಗಳ ನಿಲುವುಗೆ ಆಧಾರವಾಗಿ ಇಲ್ಲಿ ಭೂಗುಣ ರಚನೆಯಾಗುತ್ತದೆ. ಈ ಭಾಗದಲ್ಲಿ ಮುಖ್ಯವಾಗಿ ಐದು ತರಹದ ಮಣ್ಣುಗಳು ಕಂಡುಬರುತ್ತದೆ. ಜಂಬಿಟ್ಟಿಗೆ ಮಣ್ಣು, ಮಧ್ಯಮ ಆಳದ ಕಪ್ಪು ಮಣ್ಣು, ದಟ್ಟವಾದ ಕಪ್ಪು ಮಣ್ಣು, ಕೆಂಪು ಮಣ್ಣು, ಕೆಂಪು ಹಾಗೂ ಕಪ್ಪು ಮಿಶ್ರಿತ ಮಣ್ಣು ಈ ನಾಡಿನ ಭೂಗುಣವಾಗಿದೆ.[೬]

೨.೧.೨. ಕಿತ್ತೂರು ಸಂಸ್ಥಾನದ ಪ್ರಾಕೃತಿಕ ವಿಭಾಗಗಳು

೧. ಮಲೆನಾಡು

೨. ಗಡಿನಾಡು ಮತ್ತು

೩. ಎರೆನಾಡು ಪ್ರದೇಶಗಳು

ಕಿತ್ತೂರು ಸಂಸ್ಥಾನಕ್ಕೆ ಸಂಬಂಧಿಸಿದ ಪಶ್ಚಿಮ ಭಾಗವು ಹೆಚ್ಚು ಮಳೆ ಬೀಳುವ ಪ್ರದೇಶ ವಾಗಿದ್ದು, ಇದು ಬೈಲಹೊಂಗಲ ತಾಲೂಕಿನ ಪಶ್ಚಿಮ ಭಾಗ ಹಾಗೂ ಖಾನಾಪುರ ತಾಲೂಕಿನ ಗ್ರಾಮಗಳನ್ನು ಹೊಂದಿದೆ. ಇಲ್ಲಿ ಹೆಚ್ಚು ಮಳೆ ಬೀಳುವುದರಿಂದಲೂ ದಟ್ಟವಾದ ಸಸ್ಯವರ್ಗಗಳಿ ರುವುದರಿಂದಲೂ ವನ್ಯ ಪ್ರಾಣಿಗಳು ಜೀವಿಸುವ ಪ್ರದೇಶವಾಗಿದೆ. ಈ ಮಲೆನಾಡು ಪ್ರದೇಶ ಸಹ್ಯಾದ್ರಿ ಘಟ್ಟಗಳಿಂದ ಕೂಡಿದ ಬೆಟ್ಟಮಯ ಪ್ರದೇಶವಾಗಿದೆ. ಇದು ಬೆಳಗಾವಿ ಜಿಲ್ಲೆಯ ಪಶ್ಚಿಮ ಭಾಗಕ್ಕೆ ಹಾದು ಹೋದ ಮಧ್ಯ ಸಹ್ಯಾದ್ರಿಯು ಸಮುದ್ರ ತಳದಿಂದ ಸುಮಾರು ೩,೦೨೦ ಅಡಿ ಎತ್ತರಕ್ಕಿದೆ. ಇಲ್ಲಿ ಅನೇಕ ಸಣ್ಣ-ಪುಟ್ಟ ಬೆಟ್ಟ-ಗುಡ್ಡಗಳ ಸಾಲುಗಳು ಅಡ್ಡಗಲಕ್ಕೂ ಹಬ್ಬಿರುವುದನ್ನು ಕಾಣಬಹುದು. ಇಲ್ಲಿ ಅಲ್ಲಲ್ಲಿ ಇರುವ ಭಾರಿ ಪ್ರಮಾಣದ ಬಿರುಕುಗಳು ಬೆಟ್ಟ -ಗುಡ್ಡಗಳು ಕಾಲಾಂತರದಲ್ಲಿ ಶಿಲಾಶಿಥಿಲಕರಣದಿಂದಲೂ ನದಿ ಹಾಗೂ ಗಾಳಿಯ ಕಾರ್ಯಾಚರಣೆ ಯಿಂದಲೂ ಮಾರ್ಪಾಟು ಹೊಂದಿ ವಿಶಾಲ ಹಾಗೂ ಆಳವಾದ ಕಣಿವೆಗಳನ್ನು ನಿರ್ಮಿಸಿರುವವು.[೭]

೨.೧.೩. ಗಡಿನಾಡು ಪ್ರದೇಶಗಳು

ಕಿತ್ತೂರಿನ ಪೂರ್ವಭಾಗವನ್ನು ಗಡಿನಾಡು ಪ್ರದೇಶ ಎಂದು ಕರೆಯಬಹುದು. ಕಾರಣ ಪೂರ್ವಕ್ಕೆ ಎರೆನಾಡು ಹಾಗೂ ಪಶ್ಚಿಮಕ್ಕೆ ಮಲೆನಾಡು ಪ್ರದೇಶಗಳ ನಡುವೆ ಇರುವ ಪ್ರದೇಶ ವನ್ನೇ ಗಡಿನಾಡೆಂದು ಕರೆಯಬಹುದು. ಇಲ್ಲಿ ದಟ್ಟವಾದ ಅರಣ್ಯ, ಎತ್ತರವಾದ ಗುಡ್ಡಗಾಡು ಗಳು ವಿರಳವಾಗಿವೆ. ಈ ಪ್ರದೇಶವು ಸಮುದ್ರ ಮಟ್ಟದಿಂದ ಸುಮಾರು ೨೦೦೦-೨೫೦೦ ಅಡಿ ಎತ್ತರದಲ್ಲಿದೆ. ಈ ಪ್ರದೇಶದಲ್ಲಿದ್ದ ಗುಡ್ಡಗಾಡುಗಳಿಂದ ಹರಿದು ಬಂದ ನದಿ, ಹಾಗೂ ಹಳ್ಳಗಳಿಂದ ಸಾಗಿ ಬಂದ ಫಲವತ್ತಾದ ರೇವೆ ಮಣ್ಣುಗಳಿಂದ ಕೂಡಿದೆ. ಹಳ್ಳಗಳಿಂದ ಸವಕಳಿ ಯಾಗಿ ಬಂದ ಈ ರೇವೆ ಮಣ್ಣು ಈ ಪ್ರದೇಶದಲ್ಲಿ ಹರಡಿರುವುದರಿಂದ ಇದನ್ನ ಗಡಿನಾಡಿನ ಪ್ರದೇಶವೆಂದು ಕರೆಯುತ್ತಾರೆ. ಇದನ್ನ 'ಕುಂದರನಾಡು' ಎಂದು ಕೂಡಾ ಕರೆಯುತ್ತಾರೆ. ಇಲ್ಲಿ ಫಲವತ್ತಾದ ಕಸುವಿನಿಂದ ಕೂಡಿದ ಈ ಪ್ರದೇಶವು ಎಂ.ಕೆ. ಹುಬ್ಬಳ್ಳಿ, ಗಂದಿಗವಾಡ ಹಾಗೂ ಸಂಗೊಳ್ಳಿ ಪ್ರದೇಶಗಳನ್ನು ಒಳಗೊಂಡಿದೆ.

೨.೧.೪. ಎರೆನಾಡು

ಎರೆನಾಡು ಕಿತ್ತೂರು ಸಂಸ್ಥಾನದ ಪೂರ್ವಭಾಗದಲ್ಲಿರುವ ಈ ಪ್ರದೇಶವನ್ನು ಬಯಲು ಸೀಮೆಯೆಂದು ಕೂಡಾ ಕರೆಯುತ್ತಾರೆ. ಬೆಳವಡಿ, ಬಾಗೇವಾಡಿ ಮತ್ತು ಸಂಪಗಾಂವ ಕರಿಯಾತಿನಲ್ಲಿ ಬರುವ ಪ್ರದೇಶಗಳು ಈ ಬಯಲು ಸೀಮೆ ಪ್ರದೇಶಗಳಾಗಿವೆ. ಇಲ್ಲಿ ಹೆಚ್ಚಾಗಿ ಫಲವತ್ತಾದ ಎರೆ ಭೂಮಿಯಿಂದ ಕೂಡಿದ ಹಾಗೂ ಒಕ್ಕಲುತನಕ್ಕೆ ಯೋಗ್ಯವಾದ ಕಪ್ಪುಮಣ್ಣಿನಿಂದ ಕೂಡಿದ ಭೂಮಿಯನ್ನು ಹೊಂದಿದೆ. ಇಲ್ಲಿ ಬೆಸಾಲ್ಟ ಶಿಲೆ ಗಟ್ಟಿಯಾಗಿರದೆ, ಶಿಲಾಭಿದ್ರಿಕರಣಕ್ಕೆ ಬಹುಬೇಗ ಎಡೆಮಾಡಿಕೊಡುತ್ತದೆ. ಹಳ್ಳ ತಗ್ಗುಗಳು ಹೆಚ್ಚು ಆಳವಾಗಿರದೆ, ಸಮತಟ್ಟಾದ ಭೂಮಿಯನ್ನು ಕಾಣುತ್ತೇವೆ. ಇಲ್ಲಿ ಸುಣ್ಣದ ಕಲ್ಲು ಶಿಲೆಗಳು ಹೆಚ್ಚಾಗಿರುವುದು ಇಲ್ಲಿಯ ವೈಶಿಷ್ಟವಾಗಿದೆ. ಈ ಪ್ರದೇಶದಲ್ಲಿ ಮಳೆಯು ಕಡಿಮೆ, ಹಾಗಾಗಿ ಬಿಸಿಲಿನ ತಾಪಕ್ಕೆ ಭೂಮಿಯ ಮಣ್ಣು ಕಪ್ಪಾಗಿ ರುತ್ತದೆ. ಗಿಡಗಳು ಬಹಳ ವಿರಳವಾಗಿದ್ದು, ಈ ಪ್ರದೇಶವು ಸಮುದ್ರ ಮಟ್ಟದಿಂದ ಸುಮಾರು ೧೫೦೦ ಅಡಿ ಎತ್ತರಕ್ಕಿದೆ.[೮]

೨.೧.೫. ಖನಿಜ ಸಂಪತ್ತು

ಈ ಭಾಗದಲ್ಲಿ ಬೆಲೆಯುಳ್ಳ ಖನಿಜಗಳು ಹೇರಳವಾಗಿ ದೊರೆಯದಿದ್ದರೂ, ಇಲ್ಲಿ ಮ್ಯಾಂಗನೀಸ್ ಅದಿರು, ಬಾಕ್ಸೈಟ್, ಸುಣ್ಣದ ಕಲ್ಲು, ಜೇಡಿಮಣ್ಣು, ಬೆಣಚು ಶಿಲೆ, ಮರಳು ಕಲ್ಲು ಹಾಗೂ ಎರಕದ ಮರಳು ಇಲ್ಲಿ ದೊರೆಯುತ್ತವೆ. ಖಾನಾಪುರ ತಾಲೂಕಿನಲ್ಲಿ ಹೆಚ್ಚಾಗಿ ಬಾಕ್ಸೈಟ್ ಅದಿರು ಹಾಗೂ ಮ್ಯಾಂಗನೀಜ್ ಅದಿರುಗಳು ದೊರೆಯುತ್ತಿದ್ದು, ಜೊತೆಗೆ ಜೇಡಿ ಮಣ್ಣು, ಬೆಣಚುಕಲ್ಲು ಕೂಡಾ ದೊರೆಯುತ್ತದೆ. ಮರಳು ಕಲ್ಲುಗಳು ಸವದತ್ತಿ ತಾಲೂಕಿನ ಕೆಲವು ಭಾಗಗಳಲ್ಲಿ ದೊರೆಯುತ್ತದೆ. ಎರಕದ ಮರಳು ಖಾನಾಪುರ ತಾಲೂಕಿನಲ್ಲಿ ಹರಿಯುವ ಮಲಪ್ರಭಾ ನದಿಯ ತೀರಪ್ರದೇಶದಲ್ಲಿ ವಿಪುಲವಾಗಿ ದೊರೆಯುತ್ತದೆ. ಅಲ್ಲದೆ ಬಡವರ

ಬೆಳ್ಳಿ ಎಂದು ಹೆಸರಾಗಿರುವ ಹಿಂಡಾಲಿಯಮ್ ಪಾತ್ರೆಗಳನ್ನು ಬಾಕ್ಸೈಟ್ ಅದಿರುಗಳಿಂದ ತಯಾರಿಸುತ್ತಿದ್ದು, ಬೆಳಗಾವಿ ಜಿಲ್ಲೆಯ ಹೊರವಲಯದಲ್ಲಿ ಅಲ್ಯೂಮಿನಿಯಂ ಕಾರ್ಖಾನೆಗಳು ತಲೆಎತ್ತಿವೆ.[೯]

೨.೧.೬. ಹವಾಮಾನ

ಹವಾಮಾನ ಈ ಪ್ರದೇಶದ ವಾಯುಗುಣ, ಉಷ್ಣಾಂಶ, ಹವೆಯ ಒತ್ತಡ, ಆರ್ಧ್ರತೆ ಹಾಗೂ ಮಳೆ ಇವುಗಳನ್ನು ಆಧರಿಸಿದೆ. ಈ ಎಲ್ಲಾ ಘಟಕಗಳು ಆಯಾಸ್ಥಳದ ಸನ್ನಿವೇಶಕ್ಕನು ಗುಣವಾಗಿ ಭೌಗೋಳಿಕ ಪರಿಸರದ ಮೇಲೆ ವಾಯುಗುಣದ ಪ್ರಭಾವ ಮಾನವನ ಪ್ರಗತಿಯ ಪ್ರತಿ ಹೆಜ್ಜೆಯಲ್ಲೂ ಗುರುತಿಸಬಹುದು. ಕಿತ್ತೂರಿನ ಪಶ್ಚಿಮ ಭಾಗದಲ್ಲಿ ಸಮಶೀತೋಷ್ಣ ಹವಾಮಾನವಿದ್ದು, ಪೂರ್ವದಲ್ಲಿ ಒಣಹವೆ ಕಂಡುಬರುತ್ತದೆ. ಜಿಲ್ಲೆಯ ಅಂಕಿ-ಅಂಶಗಳನ್ನು ಗಮನಿಸಿದಾಗ ಪಶ್ಚಿಮ ಭಾಗದಲ್ಲಿ ಅತೀಹೆಚ್ಚು ಅಂದರೆ ೧,೨೮೭ ಮಿ.ಮಿ ಮಳೆಯಾಗುತ್ತದೆ. ಪೂರ್ವಭಾಗದಲ್ಲಿ ಅತೀಕಡಿಮೆ ಮಳೆಯಾಗಿದ್ದು. ಸುಮಾರು ೪೫೨.೫ ಮಿ.ಮಿ ಮಳೆಯಾಗಬಹುದೆಂದು ಹವಾಮಾನ ಇಲಾಖೆಯ ವರದಿಯಲ್ಲಿ ತಿಳಿಸಿದೆ. ಇಲ್ಲಿ ಮಳೆಯ ಪ್ರಮಾಣವು ಪಶ್ಚಿಮದಿಂದ ಪೂರ್ವಕ್ಕೆ ಕಡಿಮೆಯಾಗುತ್ತಾ ಹೋಗುತ್ತಿದೆ. ಒಟ್ಟಾರೆ ಇಲ್ಲಿಯ ಹವಾಮಾನ ಮಳೆಗಾಲವನ್ನು ಬಿಟ್ಟರೆ ಉಳಿದ ಕಾಲದಲ್ಲಿ ಅನುಕೂಲಕರವಾದ ಮಧ್ಯಮ ವಾತಾವರಣವಿರುತ್ತದೆ.[೧೦]

೨.೧.೭. ಅರಣ್ಯ ಸಂಪತ್ತು

ಕಿತ್ತೂರು ಸಂಸ್ಥಾನದ ಪಶ್ಚಿಮ ಭಾಗದಲ್ಲಿ ಅರಣ್ಯ ಸಂಪತ್ತು ಮತ್ತು ವನ್ಯ ಸಂಪತ್ತುಗಳು ವಿಫುಲವಾಗಿದ್ದು, ಇದನ್ನ ಸಸ್ಯಸಂಪನ್ಮೂಲ ಪ್ರದೇಶವೆಂದು ಕರೆಯುವುದುಂಟು. ಖಾನಾಪುರ ತಾಲೂಕಿನ ಹೆಚ್ಚಿನ ಪ್ರದೇಶಗಳು ಅರಣ್ಯ ಭೂಮಿಯನ್ನು ಹೊಂದಿದೆ. ಒಂದು ಕಾಲದಲ್ಲಿ ಜಿಲ್ಲೆಯ ಜೀವನಮಟ್ಟ ಮತ್ತು ಸಂಪತ್ತನ್ನು ಅಳೆಯುವಲ್ಲಿ ಅರಣ್ಯ ಸಂಪತ್ತು ಮಹತ್ವದ ಪಾತ್ರವನ್ನು ವಹಿಸಿದೆ. ಸಸ್ಯವರ್ಗವು ಇಲ್ಲಿಯ ವಾಯುಗುಣವನ್ನು ಅವಲಂಭಿಸಿರುತ್ತದೆ. ಮಳೆ ಹೆಚ್ಚು ಬೀಳುವ ಪ್ರದೇಶಗಳಲ್ಲಿ ದಟ್ಟವಾದ ಅರಣ್ಯಗಳು ಹಾಗೂ ಮಳೆ ಕಡಿಮೆಯಾದಂತೆ ಸಸ್ಯವರ್ಗದ ಬೆಳವಣಿಗೆಯು ಕುಂಠಿತಗೊಂಡು, ಅರಣ್ಯದ ಬದಲು ಮುಳ್ಳು ಅಥವಾ ಕುರುಚಲು ಸಸ್ಯಗಳು ಬೆಳೆಯಬಹುದು. ಖಾನಾಪುರ ತಾಲೂಕಿನಲ್ಲಿ ಅತೀ ಹೆಚ್ಚು ಕಾಡಿನ ಪ್ರದೇಶವಿದ್ದು, ಸುಮಾರು ೩೫ ಮೈಲಿ ಅಗಲವಾದ ದಟ್ಟವಾದ ಅರಣ್ಯವಿತ್ತು. ಈ ಅರಣ್ಯ ಪ್ರದೇಶವನ್ನು ಮನ್ಸೂನ್ ಕಾಡುಗಳು ಎಂದು ಕರೆಯುತ್ತಿದ್ದರು. ಈ ಕಾಡುಗಳಲ್ಲಿ ಋತುಮಾನಕ್ಕನುಸಾರವಾಗಿ ಎಲೆಗಳು ಉದುರಿ ಭೂಮಿಯ ಮಣ್ಣು ಫಲವತ್ತತೆಯಿಂದ ಕೂಡಿ ಕಾಡು ಹೆಚ್ಚಾಗಿ ಬೆಳೆಯಲು ಸಹಾಯಕವಾಗುತ್ತಿತ್ತು. ಸಾಗವಾನಿ, ನಂದಿ, ಕರಿಮತ್ತಿ, ಹೊನ್ನೆ, ಬೀಟೆ, ಸಾಲ, ಬಿದಿರು, ಹಲಸು ಮುಂತಾದ ಕಟ್ಟಿಗೆಗಳು ಈ ಕಾಡುಗಳಲ್ಲಿ ದೊರೆಯುತ್ತಿದ್ದವು.

ಕಿತ್ತೂರಿನ ಪೂರ್ವಭಾಗಕ್ಕೆ ಹೋದಂತೆ ಮಳೆಯು ತೀರಾ ಕಡಿಮೆಯಾಗುತ್ತಾ ಹೋಗಿ ಒಳನಾಡಿನಲ್ಲಿ ಬಿದಿರು, ಜಾಲಿ, ಬೇವಿನಗಿಡ, ಮಾವಿನಗಿಡ, ಈಚಲು ಮರ, ಕಿತ್ತಾಳೆ, ಮಂಡಕಳ್ಳಿ ಮುಂತಾದ ಮುಳ್ಳಿನ ಕಂಟಿಗಳ ಗಿಡಗಳನ್ನು ಈ ಪ್ರದೇಶದಲ್ಲಿ ಕಾಣಬಹುದು.[೧೧]

೨.೧.೮. ನದಿ

ಈ ನಾಡಿನ ಜೀವನದಿಯೆಂದೇ ಕರೆದಿರುವ ಮಲಪ್ರಭೆಯು ಖಾನಾಪುರ ತಾಲೂಕಿನಿಂದ ಹರಿದು ಬೈಲಹೊಂಗಲ ತಾಲೂಕಿನ ಮೂಲಕ ಸವದತ್ತಿಯ ಮಾರ್ಗವಾಗಿ ಹರಿಯುತ್ತದೆ. ಈ ನದಿಯು ಇಲ್ಲಿಯ ರೈತರಿಗೆ ನೀರಾವರಿ ಸೌಕರ್ಯಕ್ಕೆ ಅನುಕೂಲಕರವಾದ ದೊಡ್ಡ ನದಿಯಾಗಿದೆ. ಇದಕ್ಕೆ 'ನವಿಲು ತೀರ್ಥ' ಎಂಬಲ್ಲಿ ಆಣೆಕಟ್ಟನ್ನು ಹಾಕಿ ನೀರನ್ನು ತಡೆಹಿಡಿಯಲಾಗಿದೆ.

೨.೧.೯. ಕೃಷಿ

ಕಿತ್ತೂರು ಕೃಷಿ ಪ್ರಧಾನ ನಾಡಾಗಿರುವುದರಿಂದ ಇಲ್ಲಿಯ ಅರಸರು ನೀರಾವರಿ ಸೌಕರ್ಯಗಳಿಗೆ ಹೆಚ್ಚು ಮಹತ್ವವನ್ನು ನೀಡಿದ್ದರು. ಕಿತ್ತೂರಿನ ಸುತ್ತಮುತ್ತಲು ಅನೇಕ ಕೆರೆಗಳಿವೆ. ಅರಿಶಿನಗೆರೆ, ತುಂಬುಗೆರೆ, ಸಕ್ಕರೆಗೆರೆ, ಚಂದನಕೆರೆ, ಪರಸನಹಟ್ಟಿ ಕೆರೆ, ಖಾನಬಾಯಿ ಒಡ್ಡು ಈ ಪ್ರದೇಶದಲ್ಲಿ ಸಮೃದ್ಧವಾಗಿದೆ. ಶೀಗಿಹಳ್ಳಿಯಲ್ಲಿ ೮೦ ಜೊತೆ ಎತ್ತುಗಳಿಂದ ನೀರೆತ್ತುವ ಯಾತದ ಯೋಜನೆಯಿಂದ ಆಗ ತಟ್ಟಿಹಳ್ಳದ ನೀರನ್ನು ನಾಲ್ಕು ನೂರು ಎಕರೆ ಭೂಮಿಗಳಿಗೆ ಹಾಯಿಸುತ್ತಿದ್ದರು. ಅದರ ಅವಶೇಷಗಳು ಇಂದಿಗೂ ಇವೆ.[೧೨]

ಬ್ರಿಟೀಷರ ವಿರುದ್ಧ ಹೋರಾಡಿದ ಭಾರತೀಯ ಅರಸು ಮನೆತನಗಳಲ್ಲಿ ಪ್ರಮುಖ ಪಾಲುದಾರರಾದವರಲ್ಲಿ ಕಿತ್ತೂರು ಅರಸು ಮನೆತನವು ಒಂದು. ವಿಜಯನಗರದ ಪತನದ ತರುವಾಯ ಕರ್ನಾಟಕದಲ್ಲಿ ಸಂಸ್ಥಾನಿಕರ ಆಳ್ವಿಕೆಗೆ ಒಳಪಟ್ಟಿತು. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನಲ್ಲಿ ಆಳಿದ ಕಿತ್ತೂರು ಸಂಸ್ಥಾನವು ಆಂಗ್ಲರ ಅಧಿಪತ್ಯವನ್ನು ಕೆಡಹುವಲ್ಲಿ ಕ್ರಾಂತಿಕಾರಕ ಹೆಜ್ಜೆಯನ್ನಿರಿಸಿದೆ ಎಂದಷ್ಟೆ ಹೇಳಬಹುದು.[೧೩] ಕಿತ್ತೂರು ಸಂಸ್ಥಾನ ಬ್ರಿಟೀಷರ ವಿರುದ್ಧ ಧ್ವನಿ ಎತ್ತಿದ ಭಾರತದ ಪ್ರಪ್ರಥಮ ದೇಶಗತ್ತಿಯಾಗಿದೆ.

೨.೨. ಕಿತ್ತೂರಿನ ಇತಿಹಾಸ

೧೬ನೇ ಶತಮಾನದ ಕೊನೆಯ ಭಾಗದಲ್ಲಿ, ಬಿಜಾಪುರದ ಬಾದಷಹನ ದಂಡಯಾತ್ರೆಯ ಕಾಲದಲ್ಲಿ, ಹಿರೇಮಲ್ಲಶೆಟ್ಟಿ ಮತ್ತು ಚಿಕ್ಕಮಲ್ಲಶೆಟ್ಟಿ ಎಂಬ ಸಹೋದರರಿಬ್ಬರೂ ಸಂಪಗಾವಿಯಲ್ಲಿ ಬಂದು ನೆಲೆಸಿದರು. ವೀರಶೈವರಾದ ಇವರು ಬಿಜಾಪುರದ ಸೈನ್ಯದಲ್ಲಿ ಸೇರಿ ಧೈರ್ಯದಿಂದ ಹೋರಾಡಿ, ಬಿಜಾಪುರದ ಬಾದಷಹರಿಂದ ಮೆಚ್ಚಿಗೆಯನ್ನು ಪಡೆದುಕೊಂಡು ಹಿರೇಮಲ್ಲ ಶೆಟ್ಟಿಗೆ "ಶೇಮಶೇರ್ ಜಂಗ ಬಹದ್ದೂರ" ಎಂಬ ಬಿರುದನ್ನು ನೀಡಿ, ಹುಬ್ಬಳ್ಳಿಯ ಸರದೇಶಮುಖ ದಾನವಾಗಿ ಕೆಲವು ಪ್ರಾಂತ್ಯಗಳನ್ನು ನೀಡಿ, ಸಂಪಗಾಂವ ಪ್ರಾಂತ್ಯ ಕಿತ್ತೂರು ಸಂಸ್ಥಾನದ ಸ್ಥಾಪನೆಯ ಮೂಲವೆಂದು ಹೆಸರಿಸಲಾಯಿತು. ಈ ಪ್ರಾಂತ್ಯವನ್ನು ಕಿತ್ತೂರು ರಾಜ್ಯವೆಂದು ಕರೆಯುತ್ತಿದ್ದು ನಾಡಿನ ಅಧಿಪತಿಗಳಾಗಿ ರಾಜ್ಯವಾಳತೊಡಗಿದರು. ಅಂದಿನಿಂದ ಅವ್ಯಾಹತವಾಗಿ ೧೫೮೫ರಿಂದ ೧೮೨೪ರವರೆಗೆ ಸುಮಾರು ೨೪೦ ವರ್ಷಗಳ ಕಾಲ ರಾಜ್ಯವನ್ನಾಳಿದರು.[೧೪] ಬಿಜಾಪುರದ ಆದಿಲ್‌ಶಾಹಿಯ ಪತನದ ನಂತರ, ಹಿರೇಮಲ್ಲಪ್ಪ ಶೆಟ್ಟಿಯಿಂದ ಅಧಿಪತಿಯಾದ ಅಲ್ಲಪ್ಪಗೌಡನೆಂಬುವನು ಅಧಿಕಾರಕ್ಕೆ ಬಂದಾಗ ಆತನ ಕಾಲದಲ್ಲಿ, ಕಿತ್ತೂರು ರಾಜ್ಯದ ರಾಜಧಾನಿಯಾಯಿತು. ಅಲ್ಲಿಯವರೆಗೆ ಆ

ಹಳ್ಳಿಗೆ 'ಗೀಜಗನಹಳ್ಳಿ' ಎಂದು ಕರೆಯುತ್ತಿದ್ದರು.[೧೫] ಆದಿಲ್ ಶಾಹಿಯ ಪತನಾನಂತರ ಅಬ್ದುಲ್ ರಾವುಫಖಾನನೆಂಬ ಸರದಾರನು, ಔರಂಗಜೇಬನಿಂದ 'ದಿಲ್‌ವಾರಖಾನ ಬಹದ್ದೂರ ದಿಲ್‌ವಾರ ಜಂಗ' ಎಂಬ ಬಿರುದನ್ನು ನೀಡಿ, ಬಿಜಾಪುರದ ಭಾಗದ ಮುಖ್ಯಸ್ಥರನ್ನಾಗಿ ನಿಯಮಿಸಲಾಯಿತು. ಇವನೇ ಸವಣೂರು ನವಾಬರ ಮೂಲ ಪುರುಷನೆಂದು ಕರೆಯುತ್ತಾರೆ. ಕಿತ್ತೂರಿನ ದೇಸಾಯಿಯಾದ ಮುದಿಮಲ್ಲಪ್ಪ ದೇಸಾಯಿಯವರ ಕಾಲದಲ್ಲಿ ಸವಣೂರಿನ ನವಾಬ ರಾವುಫಖಾನನೊಂದಿಗೆ ಒಪ್ಪಂದ ಮಾಡಿಕೊಂಡು, ಕಿತ್ತೂರು ಸಂಸ್ಥಾನ ಆದಿಲ್‌ಷಾಹಿ ಆಳ್ವಿಕೆ ತಪ್ಪಿ ಮೊಗಲರ ಆಳ್ವಿಕೆಗೆ ಒಳಪಟ್ಟಿತು.[೧೬]

ಔರಂಗಜೇಬನ ಪತನಾನಂತರ ದಕ್ಷಿಣ ಭಾರತದಲ್ಲಿ ಮೊಘಲರ ಪ್ರಭಾವ ಕಡಿಮೆಯಾದಂತೆ ಕಿತ್ತೂರು ಸಂಸ್ಥಾನ ಸ್ವತಂತ್ರ ಅಸ್ತಿತ್ವವನ್ನು ಪಡೆದುಕೊಂಡಿತು. ಆಗ ಚಿಕ್ಕಮಲ್ಲಪ್ಪ ದೇಸಾಯಿಯ ಮಗ ಶಿವನಗೌಡ ಸರ್‌ದೇಸಾಯಿ ಸುಮಾರು ೨೭ವರ್ಷಗಳ ಕಾಲ ಆಳ್ವಿಕೆ ಮಾಡಿದನು. ನಂತರ ಬಂದ ಸಂಸ್ಥಾನದ ಉತ್ತರಾಧಿಕಾರಿಯಾದ ರುದ್ರಸರ್ಜ ಅಥವಾ ಮಾಳವ ರುದ್ರಸರ್ಜ ೧೭೩೪ರಲ್ಲಿ ಅಧಿಕಾರವನ್ನು ವಹಿಸಿಕೊಂಡನು. ಈತನ ಕಾಲದಲ್ಲಿ ತನ್ನ ಸ್ವಂತ ಸುಖಕ್ಕಾಗಿ ಆಡಳಿತದ ಬಗ್ಗೆ ಕಾಳಜಿ ವಹಿಸಿಲಿಲ್ಲ. ಈತನ ಪತ್ನಿ ಮಲ್ಲಮ್ಮ ಹಾಗೂ ಈತನ ತಮ್ಮ ಮಲ್ಲಪ್ಪ ಎಂಬುವರು ಆಡಳಿತವನ್ನು ನೋಡಿಕೊಳ್ಳಬೇಕಾಯಿತು. ಕಾರಣ ಮಾಳ್ವರುದ್ರಸರ್ಜನನು ಒಬ್ಬ ಮುಸ್ಲಿಂ ನರ್ತಕಿಯಲ್ಲಿ ಅನುರಕ್ತನಾಗಿ ಆಕೆಯ ಪ್ರಣಯದಲ್ಲಿ ಪಾಲ್ಗೊಂಡು ರಾಜ್ಯಭಾರವನ್ನು ಮರೆತುಬಿಟ್ಟನು. ಆತನ ಪತ್ನಿ ಮಲ್ಲಮ್ಮನೇ ಕಿತ್ತೂರಿನ ಆಡಳಿತದ ಜವಾಬ್ದಾರಿಯನ್ನು ನಿರ್ವಹಿಸಲು ಪ್ರಾರಂಭಿಸಿದಳು. ಆಕೆ ತನ್ನ ಪತಿಯ ಅನುಪಸ್ಥಿತಿಯಲ್ಲಿ ಸಂಸ್ಥಾನದ ಆಡಳಿತ ಹಾಳಾಗದಂತೆ ನೋಡಿಕೊಂಡಳು. ಆಕೆ ಕಿತ್ತೂರು ಸಂಸ್ಥಾನದ ಮೊದಲ ರಾಣಿ ಎನಿಸಿಕೊಂಡಳು.[೧೭]

ರುದ್ರಸರ್ಜನನು ಬಹಳ ಭಾವುಕ ವ್ಯಕ್ತಿ. ನರ್ತಕಿಯೊಂದಿಗೆ ಅವನ ಪ್ರೇಮ ಎಷ್ಟು ಆಳವಾಗಿತ್ತೆಂದರೆ ಅವಳನ್ನು ಬಿಟ್ಟು ಒಂದು ಕ್ಷಣವೂ ಇರಲಾರದಂತಹ ಪರಿಸ್ಥಿತಿಯನ್ನ ತಂದುಕೊಂಡನು. ಇದರಿಂದ ಅವಳಿಗಾಗಿ ಧರ್ಮ ಹಾಗೂ ಸಮಾಜಿಕವಾಗಿ ಬಹಿಷ್ಕಾರವನ್ನು ಅನುಭವಿಸಬೇಕಾಯಿತು. ಆ ಕಾಲದ ರಾಜರುಗಳ ಪದ್ಧತಿಯಂತೆ ಅವನು ಆಕೆಯನ್ನು ಉಪಪತ್ನಿಯಂತೆ ಇಟ್ಟುಕೊಂಡು ತನ್ನ ಪಟ್ಟದ ರಾಣಿಯೊಂದಿಗೆ ಗಂಭೀರವಾದ ಜೀವನವನ್ನು ನಡೆಸಿಕೊಂಡು ರಾಜ್ಯಭಾರವನ್ನು ಮುಂದುವರೆಸಬಹುದಾಗಿತ್ತು, ಆದರೆ ಆತ ನರ್ತಕಿಗೆ ಅಧಿಕೃತ ಪತ್ನಿಯ ಸ್ಥಾನವನ್ನು ಕೊಡಲು ಬಯಸಿದನು. ಇದರಿಂದ ಈ ಸಂಬಂಧಕ್ಕೆ ಸಾಮಾಜಿಕ ಹಾಗೂ ಧಾರ್ಮಿಕ ಭದ್ರತೆಯನ್ನು ಕೊಡಬೇಕೆಂದು ಒತ್ತಾಯಿಸಿದನು. ಆಕೆಯನ್ನು ತನ್ನ ಧರ್ಮಕ್ಕೆ ಮತಾಂತರ ಮಾಡಿಸಿಕೊಂಡು ನಿರಂಜನಿ ಎಂಬ ಹೆಸರಿನಲ್ಲಿ ದೀಕ್ಷೆ ಕೊಡಿಸಲು ಯೋಚಿಸಿದನು. ಅರಮನೆ-ಗುರುಮನೆ, ಊರಿನಲ್ಲೆಲ್ಲಾ ಈ ವಿಷಯ ದೊಡ್ಡ ಚರ್ಚೆಯಾಗಿ, ಕಲ್ಮಠದ ಶ್ರೀಗಳ ಎದುರಿನಲ್ಲಿ ರಾಜಮನೆತನದವರು, ಪುರ ಪ್ರಮುಖರು ಸಭೆ ಸೇರಿ ಚರ್ಚಿಸಿದರು. ಆಗ ಅವರು ತೀರ್ಮಾನಿಸಿದಂತೆ ನಿರಂಜನಿಯ ಹುಚ್ಚನ್ನು ಬಿಟ್ಟು ರುದ್ರಸರ್ಜನು ರಾಜ್ಯಭಾರದ ಹೊಣೆಯನ್ನು ಹೊತ್ತುಕೊಂಡು ಹೋಗಬೇಕು.

ಇಲ್ಲವೇ ರಾಜ ಪದವಿಯನ್ನು ಬಿಟ್ಟುಕೊಡಬೇಕು ಎಂದು ಸಭೆ ತೀರ್ಮಾನಿಸಿತು. ರಾಜ ಗುರುಗಳು ಸಾಕಷ್ಟು ತಿಳಿ ಹೇಳಿದರೂ ರುದ್ರಸರ್ಜ ಮಾತ್ರ ನನ್ನ ನಿಲುವಿಗೆ ಅಂಟಿಕೊಂಡನು. ತನ್ನ ಪ್ರಿಯತಮೆಗಾಗಿ ರಾಜಪದವಿಯನ್ನೇ ಬಿಟ್ಟು ಕೊಡುವ ನಿರ್ಣಯಕ್ಕೆ ಬಂದನು. ಆಕೆಗೆ ದೀಕ್ಷೆ ಕೊಟ್ಟು ಅಧಿಕೃತವಾಗಿ ವೀರಶೈವ ಪದ್ಧತಿಯಂತೆ ವಿವಾಹ ಮಾಡಿಸಲು ರಾಜಗುರುಗಳನ್ನು ಬೇಡಿಕೊಂಡನು. ಆದರೆ ಇದಕ್ಕೆ ರಾಜಗುರುಗಳು ಒಪ್ಪಲಿಲ್ಲ. ರುದ್ರಸರ್ಜನನ ತಮ್ಮ ಮಲ್ಲಪ್ಪನು ಕೂಡಾ ಅಣ್ಣನ ನೀತಿಯನ್ನು ಬಲವಾಗಿ ವಿರೋಧಿಸಿದನು.

ಕುಲಗುರುಗಳಾದ ನರೇಂದ್ರದ ಪಟ್ಟದೇವರು ಕೂಡಾ ದೀಕ್ಷೆ ಕೊಡಲು ಒಪ್ಪಲಿಲ್ಲ. ಆದ್ದರಿಂದ ರುದ್ರಸರ್ಜನನು ಒಕ್ಕುಂದದ ಪಟ್ಟದೇವರ ಕಾಲಿಗೆ ಬಿದ್ದು ಬೇಡಿಕೊಂಡಾಗ ಅವರು ನಿರಂಜನಿಗೆ ಲಿಂಗಾಯತ ಧರ್ಮದ ದೀಕ್ಷೆಯನ್ನು ಕೊಟ್ಟು ಧಾರ್ಮಿಕ ಸಂಪ್ರದಾಯದಂತೆ ಇವರ ವಿವಾಹ ವನ್ನು ಮಾಡಿದರು. ಅಂದಿನಿಂದ ಈತನಿಗೆ 'ಫಕೀರರುದ್ರಸರ್ಜ' ಎಂದು ಕರೆಯಲಾಯಿತು. ತರುವಾಯ ಕಿತ್ತೂರಿನಿಂದ ಗಡಿಪಾರಾಗಿ ಬಹಿಷ್ಕೃತ ಜೀವನವನ್ನು ನಡೆಸಲು ರಾಜಗುರುಗಳ ಅಪ್ಪಣೆಯಂತೆ ಅವರು ಎರಡನೇ ರಾಜಧಾನಿಯಾದ ದೇಶನೂರಿನಲ್ಲಿ ಇರಲು ಎಲ್ಲಾ ವ್ಯವಸ್ಥೆ ಮಾಡಲಾಯಿತು. ಅಲ್ಲಿ ಇವರಿಗೆ ಅರಮನೆ ಕೋಟೆಗಳನ್ನು ಕಟ್ಟಿಸಿಕೊಡಲಾಯಿತು. ಆ ಕೋಟೆಗೆ ರುದ್ರಗಡ ಎಂದು ಹೆಸರಾಯಿತು.[೧೮]

ದೇಶನೂರು ಗುಡ್ಡದ ಮೇಲಿರುವ ರಮ್ಯವಾದ ನಿಸರ್ಗದ ಸುಂದರ ತಾಣದಲ್ಲಿ ರುದ್ರಸರ್ಜ ಮತ್ತು ನಿರಂಜನಿಗಾಗಿ ಒಂದು ಮಹಲ್‌ನ್ನು ಕಟ್ಟಿಸಿ ಅದಕ್ಕೆ 'ನಿರಂಜನಿ ಮಹಲ್' ಎಂದು ಕರೆದರು. ಅದು ಇಂದಿಗೂ ಪ್ರಸಿದ್ಧಿ ಪಡೆದುಕೊಂಡಿದೆ. ತರುವಾಯ ರಾಣಿ ಮಲ್ಲಮ್ಮ ರಾಜ್ಯದ ಆಡಳಿತವನ್ನು ನಡೆಸಿಕೊಂಡು ಬಂದಾಗ ೧೭೪೬ರಲ್ಲಿ ಸವಣೂರು ನವಾಬನು ಪೇಶ್ವೆಗಳೊಡನೆ ಯುದ್ಧ ಮಾಡಿ ಸೋತಾಗ ಕಿತ್ತೂರು ಸಂಸ್ಥಾನ ಪೇಶ್ವೆಗಳ ಆಡಳಿತಕ್ಕೆ ಒಳಗಾಯಿತು. ೧೭೪೯ರ ವೇಳೆಗೆ ಮಾಳ್ವರುದ್ರಸರ್ಜನು, ತನ್ನ ತಮ್ಮನ ಮಗನಾದ ವೀರಪ್ಪಗೌಡ ಸರ್‌ದೇಸಾಯಿಗೆ ಪಟ್ಟವನ್ನು ಕಟ್ಟಿ ಕೆಲವೇ ದಿನಗಳಲ್ಲಿ ಕೊನೆಯುಸಿರೆಳೆದನು. ಈತ ತೀರಿಕೊಂಡ ಕೆಲವೇ ದಿನ ಗಳಲ್ಲಿ ನಿರಂಜನಿಯು ಮರಣ ಹೊಂದಿದ್ದರಿಂದ ಇವರಿಬ್ಬರ ಸಮಾಧಿಯನ್ನು ರಾಜಮರ್ಯಾದೆಯಂತೆ ಕಿತ್ತೂರಿನ ಕಲ್ಮಠದ ಆವರಣದಲ್ಲಿ ಮಾಡಲಾಯಿತು. ಇದರಲ್ಲಿ ಹಿಂದೂ-ಅರೇಬಿಯನ್ ಶೈಲಿಯ ಸಮಾಧಿಯನ್ನು ಕಾಣಬಹುದು. ವೀರಪ್ಪಗೌಡ ಸರ್ ದೇಸಾಯಿಯು ಸಮರ್ಥ ಆಡಳಿತಗಾರ ನಾಗಿದ್ದು, ೧೭೪೯ರಿಂದ ೧೭೮೨ರ ಆಡಳಿತ ನಡೆಸಿ, ಕಿತ್ತೂರು ಸಂಸ್ಥಾನದಲ್ಲಿ ಪ್ರಖ್ಯಾತ ದೊರೆ ಎನಿಸಿಕೊಂಡನು. ೧೭೭೮ರಲ್ಲಿ ಹೈದರಾಲಿಯು ಪೇಶ್ವೆಯನ್ನು ಸೋಲಿಸಿ ಮಹಾರಾಷ್ಟ್ರದ ದಕ್ಷಿಣ ದಿಕ್ಕಿನ ಕೆಲವು ಭಾಗಗಳನ್ನು ವಶಪಡಿಸಿಕೊಂಡನು. ಅಲ್ಲಿಯವರೆಗೆ ಪೇಶ್ವೆಯ ವಶದಲ್ಲಿದ್ದ ಕಿತ್ತೂರು ಬಿಡುಗಡೆಯಾಯಿತು. ಆಗ ವೀರಪ್ಪಗೌಡನು ಹೈದರಾಲಿಗೆ ಕಪ್ಪಕಾಣಿಕೆಯನ್ನು ನೀಡಿ ಒಪ್ಪಂದ ಮಾಡಿಕೊಂಡನು. ಹೀಗೆ ಸಂಸ್ಥಾನವು ಸ್ವತಂತ್ರವಾಗಲು ಕಿತ್ತೂರಿಗೆ ಪರಸೆಗಡ ಮತ್ತು ಸಂಪಗಾಂವ ಸೇರ್ಪಡೆಯಾಯಿತು. ೧೭೭೮ರಲ್ಲಿ ವೀರಪ್ಪ ದೇಸಾಯಿಯು ತಾಸ್‌ಗಾಂವಿನ ಪಟವರ್ಧನ ಪರಶುರಾಮ

ಬಾವುವನ್ನು ಸೋಲಿಸಿ ಗೋಕಾಕ ಮತ್ತು ಸೌದತ್ತಿಯನ್ನು ತನ್ನ ವಶಕ್ಕೆ ತೆಗೆದುಕೊಂಡನು. ಅದೇ ವರ್ಷ ಸವಣೂರು ನವಾಬನಿಂದಲೂ ಗೋಕಾಕನ್ನು ಪಡೆದುಕೊಂಡನು. ಹೀಗೆ ಸಾಮ್ರಾಜ್ಯ ವನ್ನು ವಿಸ್ತರಿಸಿ ಒಬ್ಬ ಯಶಸ್ವಿ ದೊರೆಯಾದನು.

ವೀರಪ್ಪ ಸರ್ ದೇಸಾಯಿ ಮಠಮಾನ್ಯಗಳಿಗೆ, ದೇವಸ್ಥಾನಗಳಿಗೆ, ಆರ್ಥಿಕ ಸಹಾಯ ನೀಡಿ ದೇವಾಲಯಗಳನ್ನು ಪುನರುಜ್ಜೀವನಗೊಳಿಸಿದನು. ದಾನಪತ್ರದ ಒಕ್ಕಣೆಯಲ್ಲಿ ದೇವರ ಹುಬ್ಬಳ್ಳಿ, ಅಜಮ್‌ನಗರ, ಖಾನಾಪುರ, ಸೂಪಾ, ಗೋಕಾಕ, ಸೌದತ್ತಿಗಳಿಗೆ ಉಂಬಳಿಯನ್ನು ನೀಡಿ ಕಿತ್ತೂರು ಒಡೆಯ ವೀರಪ್ಪಗೌಡ ಸರ್ ದೇಸಾಯಿ ಶಮ್‌ಷದ್ ಜಂಗ ದೇಸಾಯಿ ಎಂಬ ಬಿರುದನ್ನು ಪಡೆದುಕೊಂಡನು.[೧೯]

ತಾಸ್‌ಗಾಂವಿನ ಪಟವರ್ಧನ ಪರಶುರಾಮ ಭಾವು, ವೀರಪ್ಪ ಸರ್ ದೇಸಾಯಿಯ ಮೇಲೆ ಸೇಡು ತೀರಿಸಿಕೊಳ್ಳಲು ಸಮಯ ಕಾಯುತ್ತಿದ್ದನು. ೧೭೭೮ರಲ್ಲಿ ಆಕಸ್ಮಿಕವಾಗಿ ಮುತ್ತಿಗೆ ಹಾಕಿ ಕಿತ್ತೂರು ಸಂಸ್ಥಾನದಿಂದ ಗೋಕಾಕನ್ನು ಮರಳಿ ಪಡೆಯಲು ಯಶಸ್ವಿಯಾದನು. ಈ ಯುದ್ಧದಲ್ಲಿ ದುರ್ದೈವವಶಾತ್ ವೀರಪ್ಪ ಸರ್ ದೇಸಾಯಿ ಈತನ ಸೆರೆಗೆ ಸಿಕ್ಕು ವೀರಪ್ಪ ದೇಸಾಯಿಯನ್ನು ಮೀರಜ್‌ನ ಜೈಲಿನಲ್ಲಿಟ್ಟು ವಿಷವುಣಿಸಿ ಕೊಲ್ಲಿಸಿದನು. ಈ ವಿಷಯ ತಿಳಿದ ಕಿತ್ತೂರು ಸಂಸ್ಥಾನದ ಅಧಿಕಾರಿಗಳು ಮೀರಜ್‌ಗೆ ಹೋಗಿ ಶವವನ್ನು ತಂದನಂತರ ಕಿತ್ತೂರಿನ ಕಲ್ಮಠದಲ್ಲಿ ಸಮಾಧಿ ಮಾಡಿಸಲಾಯಿತು. ಹೀಗೆ ಮರಾಠರ ವಶದಿಂದ ಬಿಡುಗಡೆ ಹೊಂದಿ, ಸ್ವತಂತ್ರನಾಗಿ ಪ್ರಬಲ ನಾಗುತ್ತಿದ್ದ ವೀರಪ್ಪ ದೇಸಾಯಿಯನ್ನು ಕಂಡು, ಮರಾಠರು ಒಳಗೊಳಗೆ ದ್ವೇಷಿಸುತ್ತಾ ಕತ್ತಿ ಮಸಿಯುತ್ತಿದ್ದರು. ಕಿತ್ತೂರಿನ ಸಂಸ್ಥಾನದಲ್ಲಿದ್ದ ಕೆಲವರು ಈತನ ವಿರುದ್ಧ ಪಿತೂರಿ ಮಾಡಿ ಕೊಂಡಿರುವ ಸಾಧ್ಯತೆ ಇದೆ.

ವೀರಪ್ಪ ದೇಸಾಯಿಗೆ ಗಂಡು ಸಂತಾನವಿರಲಿಲ್ಲ. ಆತನ ಪತ್ನಿ ಪಾರ್ವತವ್ವ ಕಲ್ಮಠದ ಗುರುಗಳ ಹಾಗೂ ಸಂಸ್ಥಾನದ ಅಧಿಕಾರಿಗಳ ಜೊತೆಗೆ ಚರ್ಚಿಸಿ ಮುಂದಿನ ಉತ್ತಾರಾಧಿಕಾರತ್ವಕ್ಕೆ ದತ್ತು ಮಗನನ್ನು ಪಡೆದು ಸಿಂಹಾಸನವನ್ನು ಮುನ್ನೆಡೆಸಲು ತೀರ್ಮಾನಿಸಿದಳು. ಆಗ ಸಂಸ್ಥಾನದ ಸಮೀಪದ ಬಂಧುಗಳಾದ ಬೋಗೂರಿನ ಗೌಡರ ಮಗನಾದ ಮಲ್ಲಸರ್ಜನನ್ನು ದತ್ತು ತೆಗೆದು ಕೊಳ್ಳಲಾಯಿತು. ಮಲ್ಲಸರ್ಜನನ ಸಿಂಹಾಸನಕ್ಕೆ ಬಂದಾಗ ಕೇವಲ ೧೭ ವರ್ಷದ ಹರೆಯ. ಆತ ಸಿಂಹಾಸನ ಏರಿದ ಮೇಲೆ ಒಂದೆರಡು ವರ್ಷಗಳಲ್ಲಿಯೇ ತಲ್ಲೂರ ರಾಯನಗೌಡನ ಮಗಳಾದ ರುದ್ರಮ್ಮಳನ್ನು ವಿವಾಹವಾದನು.

ಮುಂದೆ ಮೂರು ವರ್ಷಗಳಲ್ಲಿಯೇ ಮೈಸೂರಿನ ಟಿಪ್ಪುಸುಲ್ತಾನನು ಶ್ರೀರಂಗ ಪಟ್ಟಣದ ಒಪ್ಪಂದದ ಮೇರೆಗೆ ಕಿತ್ತೂರನ್ನು ಮರಾಠರಿಗೆ ಬಿಟ್ಟುಕೊಡಬೇಕಾಯಿತು. ಆಗ ಪರಶುರಾಮ ಭಾವು ಎಂಬ ಸರದಾರನ ವಶಕ್ಕೆ ಬಂದ ಕಿತ್ತೂರು, ಧಾರವಾಡ ಪ್ರಾಂತಕ್ಕೆ ಸೇರಿಸಲ್ಪಟ್ಟಿತು. ಕೊಲ್ಹಾಪುರದವರಿಗೂ ಪರಶುರಾಮ ಭಾವುವಿಗೂ ನಡೆದ ಘರ್ಷಣೆಯ ಸಂಧಿಯನ್ನು ಸಾಧಿಸಿ,

ಕಿತ್ತೂರ ಸಂಸ್ಥಾನವು ಮತ್ತೆ ಸ್ವತಂತ್ರವಾಯಿತು. ಆಗ ಅದರ ಉತ್ಪನ್ನವು ಸುಮಾರು ಐದು ಲಕ್ಷವಿದ್ದು, ಮಲ್ಲಸರ್ಜ ದೇಸಾಯರು ೧೦೦೦ ರಾವುತರನ್ನೂ, ೪೦೦೦ ಕಾಲಾಳುಗಳನ್ನೂ ಇಟ್ಟು ಕೊಂಡಿದ್ದರು. ಮುಂದೆ ಧೋಂಡುಜೀ ವಾಘನೆಂಬ ಮರಾಠಾ ಸರದಾರನ ಹಾವಳಿಯನ್ನು ತಪ್ಪಿಸಿ ಕೊಳ್ಳಲು, ಕಂಪನಿ ಸರಕಾರದವರಿಗೆ ಸಹಾಯ ಮಾಡಿ, ಸಂಗೊಳ್ಳಿಯ ಕೋಟೆಯನ್ನು ಅವರಿಗೆ ಕೊಟ್ಟು, ಅವರ ಆಶ್ರಯದಿಂದ ತಮ್ಮ ಸ್ವಾತಂತ್ರ್ಯವನ್ನು ಕಾಯ್ದುಕೊಂಡರು.

ಎರಡನೆಯ ಬಾಜೀರಾವ ಪೇಶ್ವೆಯು ಬಳ್ಳಾರಿಯ ದಿಗ್ವಿಜಯವನ್ನು ಮುಗಿಸಿಕೊಂಡು ಪುಣೆಗೆ ಮರುಳುವಾಗ ೧೮೧೩ರಲ್ಲಿ ಮಲ್ಲಸರ್ಜನ ದೇಸಾಯಿಯನ್ನು ಪುಣೆಗೆ ಕರೆದುಕೊಂಡು ಹೋದನು. ಪೇಶ್ವೆ ಮತ್ತು ಮಲ್ಲಸರ್ಜನ ದೇಸಾಯರ ನಡುವೆ ಒಪ್ಪಂದವಾಗಿ ಪೇಶ್ವೆಯರಿಗೆ ಪ್ರತಿವರ್ಷಕ್ಕೆ ೧,೭೫,೦೦೦ ರೂ.ಗಳು ಕಪ್ಪಕಾಣಿಕೆಯಾಗಿ ಸಲ್ಲತಕ್ಕದ್ದೆಂದೂ, ಇದಕ್ಕೆ ಪ್ರತಿಯಾಗಿ ಕಿತ್ತೂರು ಸಂಸ್ಥಾನಕ್ಕೆ ರಾಜಮರ್ಯಾದೆಯೆಂದು ೬೯೦೦ ರೂಗಳನ್ನು ಕಳುಹಿಸುತ್ತಿದ್ದರು. ಇದರಿಂದ ಪೇಶ್ವೆ ಸರ್ಕಾರ ಹಾಗೂ ಕಿತ್ತೂರು ಸಂಸ್ಥಾನಗಳ ನಡುವೆ ಸಾಮರಸ್ಯ ಬೆಳೆಯಿತು. ಮಲ್ಲಸರ್ಜನು ಕಿತ್ತೂರನ್ನು ಸ್ವಾತಂತ್ರ್ಯ ರೀತಿಯಿಂದ ಆಳಬಹುದೆಂದೂ ಗೊತ್ತಾಯಿತು. ಮಲ್ಲಸರ್ಜ ದೇಸಾಯರಿಗೆ ಬಹುಮಾನವಾಗಿ 'ಪ್ರತಾಪರಾವ' ಬಿರುದನ್ನು, ಸವಾಯಿ ಮಾಧವರಾಯರಿಂದ ಕೊಡಲ್ಪಟ್ಟಿತು.[೨೦] ಈ ಬಿರುದಿನ ಸವಿನೆನಪಿಗಾಗಿ ಸ್ಮಾರಕವೆಂದು ಕಿತ್ತೂರಿನ ಮಲ್ಲಸರ್ಜ ದೇಸಾಯಿ ನಂದಗಡ ಗ್ರಾಮಕ್ಕೆ ಸಮೀಪ ದಲ್ಲಿ 'ಪ್ರತಾಪಗಡ' ವೆಂಬ ಕೋಟೆಯನ್ನು ಕಟ್ಟಿಸಿದರು.[೨೧] ಪ್ರಸ್ತುತ ಇದು ಖಾನಾಪುರ ತಾಲ್ಲೂಕಿ ನಲ್ಲಿದೆ.

ಕಿತ್ತೂರಿನ ರಾಜಪರಂಪರೆಯಲ್ಲಿ ಹನ್ನೊಂದನೆಯವನಾದ ಮಲ್ಲಸರ್ಜದೇಸಾಯಿಗೆ 'ಪ್ರತಾಪರಾವ ಸರದೇಸಾಯಿ' ಶಮಶೇರ ಜಂಗ ಬಹಾದ್ದೂರ' ಎಂಬ ಬಿರುದುಗಳಿದ್ದವು.[೨೨] ಈತನು ೧೭೮೨ ರಿಂದ ೧೮೧೬ರವರೆಗೆ ಒಳ್ಳೆ ಸುವ್ಯವಸ್ಥೆಯಿಂದಲೂ, ಕಿತ್ತೂರಿನ ರಾಜ್ಯಭಾರ ಮಾಡಿದನು. ಇವನ ಆಳ್ವಿಕೆಯು ಕಿತ್ತೂರ ರಾಜ್ಯದ ಇತಿಹಾಸದಲ್ಲಿ ಸುವರ್ಣಕಾಲವೆಂದು ಹೇಳಲಾಗಿದೆ. ಕಿತ್ತೂರ ದೇಸಾಯರಲ್ಲಿ ಮಲ್ಲಸರ್ಜನನು ಪರಧರ್ಮ ಸಹಿಷ್ಣು ಆಗಿದ್ದನೆಂದು ಪ್ರತೀತಿ ಇದೆ. ಇವನಿಗೆ ರುದ್ರಮ್ಮಳೆಂಬ ಹಿರಿಯ ಮತ್ತು ಚೆನ್ನಮ್ಮಳೆಂಬ ಕಿರಿಯ ಪತ್ನಿಯರಿದ್ದರು. ಇವರು ಈಶ್ವರನಿಗೆ ಗಂಗೆ-ಗೌರಿಯರಂತೆ ಶೋಭಿಸುತ್ತಿದ್ದರು. ರುದ್ರವ್ವನು ತಲ್ಲೂರು ದೇಸಾಯಿಯರ ಮಗಳಾಗಿದ್ದಳು. ಚೆನ್ನಮ್ಮನು ಬೆಳಗಾವಿಯಿಂದ ಉತ್ತರಕ್ಕೆ ೬ ಮೈಲಿ ದೂರದಲ್ಲಿರುವ ಕಾಗತಿಯ ದೇಸಾಯಿಯರ ಮಗಳು. ಈಕೆಯ ತಂದೆ ದೂಳಪ್ಪಗೌಡ, ತಾಯಿ ಪದ್ಮಾವತಿಯರ ಒಬ್ಬಳೇ ಮಗಳು. ಈಕೆಗೆ ಕೊಂಕಣಿ, ಮರಾಠಿ, ಹಿಂದಿ ಭಾಷೆಗಳ ಪರಿಚಯವಿತ್ತು. 'ಬೆಳೆಯುವ ಸಿರಿ ಮೊಳಕೆಯಲ್ಲೇ' ಎಂಬ ಗಾದೆಯಂತೆ ಚಿಕ್ಕವಯಸ್ಸಿನಲ್ಲಿಯೇ ಈಕೆಯ ಚಪಲತೆ, ಜಾಣ್ಮೆ, ಚತುರತೆಗಳು ಕಂಡುಬರುತ್ತಿದ್ದವು. ಕಿತ್ತೂರಿಗೆ ಬರುವ ಮೊದಲೇ ಯುದ್ಧದ ಕಲೆಯನ್ನು ಅರಿತಿದ್ದಳು. ಚೆನ್ನಮ್ಮಾಳ ಬಗ್ಗೆ ಜಾನಪದ ಕವಿಗಳು ಈ ರೀತಿ ಪ್ರಶಂಸೆ ಮಾಡಿದ್ದಾರೆ.

"ಮಲ್ಲಸರ್ಜನ ನಾರಿ ಮೂಲೋಕ ಸುಂದರಿ
ಮಾಲೊಳಗೆ ರತ್ನದ ಹರಳ ಕೋಲಿ
ಮಾಲೊಳಗೆ ರತ್ನದ ಹರಳ ಚೆನ್ನಮ್ಮ
ಆರೂತಿ ಬೆಳಕ ನಗಿಯಾತಿ ||
ಕಾಕತಿ ದೊರೆಮಗಳು ತಾಕತ್ತು ಸಿರಮಗಳು
ಬೇಕಾದ ಮಡದಿ ಮಲ್ಲಸರ್ಜನ ಚೆನ್ನವ್ವ
ನಾಕು ದಿಕ್ಕಿಗೆ ಮನ್ನಣೆ"[೨೩]

ಮಲ್ಲಸರ್ಜನನ ಕಿರಿಯ ರಾಣಿಯಾದ ಚೆನ್ನಮ್ಮ ರಾಜಕಾರಣದಲ್ಲಿ ಮಂತ್ರಿಯಾಗಿಯೂ, ರಣರಂಗದಲ್ಲಿ ಸೇನಾಧಿಪತಿಯಾಗಿಯೂ, ಧರ್ಮಕಾರ್ಯದಲ್ಲಿ ಪತ್ನಿಯಾಗಿಯೂ, ಸೇವೆಯಲ್ಲಿ ದಾಸಿಯಾಗಿಯೂ ಕೆಲಸಮಾಡುವವಳಾಗಿದ್ದಳು. ಆದುದರಿಂದ ಮಲ್ಲಸರ್ಜನನಿಗೆ ಇವಳು ಸುವರ್ಣಕ್ಕೆ ಸುಗಂಧ ಬೆರೆತಂತೆ, ಇವನ ಆಳ್ವಿಕೆಗೆ ಆಧಾರವಾಗಿದ್ದಳು.[೨೪] ರುದ್ರವ್ವನಿರುವಾಗಲೇ ಎರಡನೇ ಪತ್ನಿಯಾಗಿ ಆಗಮಿಸಿದ ತರುಣಿಯಾದ ಚೆನ್ನಮ್ಮ ಅರಮನೆಯನ್ನು ಪ್ರವೇಶಿಸಿದಾಗ ಸವತಿ ಮತ್ಸರದ ಗಾಳಿ ಸುಳಿದಾಡಲಿಲ್ಲ. ಬದಲಿಗೆ ಇಬ್ಬರೂ ಒಂದೇ ಮನಸ್ಸಿನಿಂದ ಕಿತ್ತೂರನ್ನು ಬೆಳೆಸಲು ಪ್ರಯತ್ನಿಸಿದರು. ಇದರಿಂದ ಕಿತ್ತೂರ ಅರಮನೆ ಕೇವಲ ಸಿರಿಮನೆಯಾಗಿರದೆ, ಜನರಿಗೆ ಸದುಪದೇಶ ಮಾಡುವ ಗುರುಮನೆಯೂ ಆಗಿತ್ತೆಂದು ಹೇಳಬಹುದು.[೨೫]

ಕಿತ್ತೂರು ರಾಜ್ಯದಲ್ಲಿ ಆಗ ನಂದಗಡ, ಖಾನಾಪೂರ, ಬೈಲಹೊಂಗಲ, ಕಿತ್ತೂರ, ಸಂಪಗಾಂವಿ, ದೇಶನೂರ ಮುಂತಾದ ಪ್ರಸಿದ್ಧ ಪಟ್ಟಣಗಳಿದ್ದವು.[೨೬] ಕಿತ್ತೂರಿನಲ್ಲಿ ಬೆಲ್ಲ, ಬಳೆಗಳು ಹೆಚ್ಚು ಜನಪ್ರಿಯವಾಗಿದ್ದವು. ಕಿತ್ತೂರಿನಲ್ಲಿ ಬಣ್ಣ-ಬಣ್ಣದ ವಸ್ತ್ರಗಳಿಗೆ ಮಧ್ಯಪೂರ್ವ ಮತ್ತು ದಕ್ಷಿಣ ಆಫ್ರಿಕಾ ರಾಷ್ಟ್ರಗಳಿಂದಲೂ ಬೇಡಿಕೆ ಇತ್ತಂತೆ.[೨೭] ನಂದಗಡ ಪಟ್ಟಣವು ಆಗಿನ ಕಾಲದಲ್ಲಿ ಸುಪ್ರಸಿದ್ಧ ವ್ಯಾಪಾರಿ ಕೇಂದ್ರವಾಗಿತ್ತು. ಇಲ್ಲಿ ಕೊಂಕಣ ಪ್ರಾಂತ್ಯದಿಂದ ಬರುವ ಸರಕುಗಳು ಮೊದಲು ನಂದಗಡಕ್ಕೆ ಬಂದು ಅಲ್ಲಿಂದ ಬೇರೆ-ಬೇರೆ ಪ್ರದೇಶಗಳಿಗೆ ಸಾಗಿಸಲಾಗುತ್ತಿತ್ತು. ಹೀಗಾಗಿ ನಂದಗಡವು ಕೂಡಾ ಪ್ರಮುಖ ವ್ಯಾಪಾರಿ ಕೇಂದ್ರವಾಗಿತ್ತು. ಸಂಪಗಾಂವ ಕೂಡಾ ವ್ಯಾಪಾರಿ ಕೇಂದ್ರವಾಗಿದ್ದು, ಇಲ್ಲಿ ಬಟ್ಟೆಯ ವ್ಯಾಪಾರ ಉತ್ತಮ ಸ್ಥಿತಿಯಲ್ಲಿತ್ತು. ಬೈಲಹೊಂಗಲದಲ್ಲಿ ಧೋತರ ಮತ್ತು ಸೀರೆಗಳ ವ್ಯಾಪಾರವು ಭರದಿಂದ ಸಾಗಿದ್ದವು. ಹೀಗಾಗಿ ಕಿತ್ತೂರು ಸಂಸ್ಥಾನದಲ್ಲಿ ಎಲ್ಲಾ ತರಹದ ವ್ಯಾಪಾರವು ಉತ್ತಮ ನಡೆಯುತ್ತಿತ್ತೆಂದು ತಿಳಿದು ಬರುತ್ತದೆ. ಬಳೆ ತಯಾರಿಕೆ ಹಾಗೂ ಮಡಿಕೆ-ಕುಡಿಕೆಗಳ ತಯಾರಿಕೆ ಊರ್ಜಿತ ಸ್ಥಿತಿಯಲ್ಲಿದ್ದು, ಆರ್ಥಿಕವಾಗಿ ಸಮೃದ್ಧಿಯನ್ನು ಹೊಂದಿತ್ತು.[೨೮]

ಬ್ರಿಟೀಷ ಅಧಿಕಾರಿ ವೆಲ್ಲಸ್ಲಿಯು ಕಿತ್ತೂರಿನೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದನು. ಅಲ್ಲದೆ ಕಿತ್ತೂರಿಗೆ ಭೇಟಿ ನೀಡಿ ಸುಮಾರು ಆರು ದಿವಸಗಳ ಕಾಲ ಕಿತ್ತೂರಿನಲ್ಲಿಯೇ ಉಳಿದನು. ವೆಲ್ಲಸ್ಲಿಯ ಸೈನ್ಯಕ್ಕೆ ಮಲ್ಲಸರ್ಜನನು ನೂರು ಕುದುರೆಗಳನ್ನು ಮತ್ತು ನೂರು ಕಾಲ್ದಳಗಳನ್ನು ಕಳುಹಿಸಿ ನದಿಯನ್ನು ದಾಟಲು ನಾವೆಗಳ ವ್ಯವಸ್ಥೆಯನ್ನು ಮಾಡಿದನು. ಇದಕ್ಕಾಗಿ ಸಂಗೊಳ್ಳಿಯಲ್ಲಿ

ಒಂದು ಸಣ್ಣ ಕೋಟೆಯನ್ನು ಬ್ರೀಟಿಷರಿಗೆ ಬಿಟ್ಟು ಕೊಟ್ಟನು. ಈತನ ನಿಷ್ಠೆ ಮತ್ತು ಆರ್ಥಿಕ ಸಹಾಯದಿಂದ ಸಂತೃಪ್ತಿ ಹೊಂದಿದ ವೆಲ್ಲಸ್ಲಿಯು ಕಿತ್ತೂರು ದೇಶಗತ್ತಿಯ ಉಪಭೋಗವನ್ನು ಮುಂದುವರೆಸಲು ಅನುಮತಿ ನೀಡಿದನು.[೨೯] ೧೮೧೬ರಲ್ಲಿ ಮಲ್ಲಸರ್ಜನ ದೊರೆಗೆ ಬೇನೆಯು ಉಲ್ಬಣಗೊಂಡು ಮರಣ ಹೊಂದಿದನು.

ಮಲ್ಲಸರ್ಜ ದೇಸಾಯರ ತರುವಾಯ ರುದ್ರಮ್ಮನ ಹಿರಿಯ ಮಗನಾದ ಶಿವಲಿಂಗ ರುದ್ರಸರ್ಜನೆಂಬುವನು ಕ್ರಿ.ಶ. ೧೮೧೬ರಲ್ಲಿ ಪಟ್ಟವೇರಿದನು. ಆಂಗ್ಲ ಕಂಪನಿ ಸರಕಾರದವರೊಡನೆ ಸಹಕಾರದಿಂದ ನಡೆದುಕೊಂಡು, ತನ್ನ ಸಂಸ್ಥಾನದ ಸ್ವಾತಂತ್ರ್ಯವನ್ನು ಕಾಯ್ದುಕೊಂಡಿತು. ೧೮೧೮ರಲ್ಲಿ ಇಂಗ್ಲಿಷರು ಪೇಶ್ವೆಯರು ಅಧಿಕಾರದಲ್ಲಿದ್ದ ಬೆಳಗಾವಿಯ ಕೋಟೆಯನ್ನು ಮುತ್ತಿಗೆ ಹಾಕಿದಾಗ ಶಿವಲಿಂಗ ರುದ್ರಸರ್ಜನು, ಬ್ರಿಟೀಷರಿಗೆ ೧೦೦ ಸವಾರರನ್ನೂ ಬಹಳಷ್ಟು ಇನ್ನಿತರ ಸಾಮಗ್ರಿಗಳನ್ನೂ ಕೊಟ್ಟು ನೆರವಿತ್ತನು.[೩೦] ಆದರೂ ಕಂಪನಿ ಸರಕಾರದ ಸಾಮ್ರಾಜ್ಯ ಲಾಲಸೆಯ ಕಾರ್ಮೋಡಗಳು ಕಿತ್ತೂರ ಸಂಸ್ಥಾನದ ಸ್ವಾತಂತ್ರ್ಯದ ಸೂರ್ಯನನ್ನು ಮುಸುಕತೊಡಗಿದ್ದರಿಂದ ಕಿತ್ತೂರಿನ ಭವಿಷ್ಯವು ಮಸಕಾಗತೊಡಗಿತು. ಕಿತ್ತೂರ ಪ್ರಾಂತ ಆಗ ಧಾರವಾಡ ಕಲೆಕ್ಟರನ ಆಡಳಿತಕ್ಕೆ ಒಳಪಟ್ಟಿತ್ತು.[೩೧] ಜಿಲ್ಲಾಧಿಕಾರಿಯಾಗಿದ್ದ ಥ್ಯಾಕರೇ ಸಾಹೇಬನು ಧೂರ್ತನೂ, ಮಹತ್ವಾಕಾಂಕ್ಷಿಯೂ ಆಗಿದ್ದು, ಭಾರತದಲ್ಲಿ ಬ್ರಿಟಿಷ್ ರಾಜ್ಯ ವಿಸ್ತಾರದ ಕನಸು ಕಟ್ಟುತ್ತಿದ್ದನು. ದೇಶೀಯ ಸಂಸ್ಥಾನಗಳನ್ನು ಯಾವದೊಂದು ನೆಪದಿಂದ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿಸುವ ಧೋರಣೆಯನ್ನನುಸರಿಸಿ ರಾಜಕೀಯ ರಂಗದಲ್ಲಿ ಅವನು ಚದುರಂಗದಾಟಕ್ಕೆ ಪ್ರಾರಂಭಿಸಿದನು.

ಕ್ರಿ.ಶ. ೧೮೨೪ನೆಯ ಸೆಪ್ಟಂಬರ ೧೧ನೆಯ ದಿನಾಂಕ ಕಿತ್ತೂರಿನ ದೂತನೊಬ್ಬನು ಕಿತ್ತೂರಿನ ಶಿವಲಿಂಗಪ್ರಭು ದೇಸಾಯಿ ಮರಣೋನ್ಮುಖನಾಗಿರುವನೆಂದು ಹೇಳಿ ಧಾರವಾಡದ ಥ್ಯಾಕರೇ ಸಾಹೇಬನ ಕೈಯ್ಯಲ್ಲಿ ಒಂದು ಪತ್ರವನ್ನು ಕೊಟ್ಟನು. ಅದು ಜುಲೈ ೧೦ರ ಪತ್ರವಾಗಿದ್ದು, ಅದರಲ್ಲಿ ಶಿವಲಿಂಗಪ್ರಭುವು ಮಾಸ್ತಮರ್ಡಿ ಗೌಡರ ಮಗನನ್ನು ದತ್ತಕ ತೆಗೆದುಕೊಂಡ ವಿಷಯವು ಪ್ರಸ್ತಾಪಿಸಲ್ಪಟ್ಟಿತ್ತು. ಮಕ್ಕಳಿಲ್ಲದೆ ಮರಣಹೊಂದಿದ ಶಿವಲಿಂಗ ಪ್ರಭುವು ದತ್ತಕ ತೆಗೆದುಕೊಂಡನೆಂಬ ಸುದ್ದಿಯನ್ನು ಕೇಳಿದ ಕಲೆಕ್ಟರನು ಅದನ್ನು ನಂಬದೆ ಸಂಶಯ ಪಟ್ಟನು. ದತ್ತಕ ವಿಧಾನವು ಶಿವಲಿಂಗಪ್ರಭುವು ಜೀವಿಸಿರುವಾಗ ನಡೆಯಲೇ ಇಲ್ಲವೆಂದು ಸಾಧಿಸಿದನು. ಧಾರವಾಡದಿಂದ ಕೂಡಲೇ ಸಿವ್ಹಿಲ್ ಸರ್ಜನ ಕಳುಹಿಸಿಕೊಟ್ಟನು. ಶಿವಲಿಂಗ ರುದ್ರಸರ್ಜನ ಪ್ರಕೃತಿಯನ್ನು ಪರೀಕ್ಷಿಸುವ ನೆಪದಿಂದ, ಕಿತ್ತೂರಿನಲ್ಲಿ ನಡೆದಿರುವ ಒಳಗುಟ್ಟನ್ನೆಲ್ಲ ತಿಳಿಯಲೆಂದೇ ಈ ಸರ್ಜನನನ್ನು ಕಳಿಸಲ್ಪಟ್ಟನೆಂದಿದೆ.[೩೨]

ಧಾರವಾಡಕ್ಕೆ ದೂತನು ಪತ್ರವನ್ನು ತರುವ ಮುಂಚೆಯೇ ಶಿವಲಿಂಗ ಪ್ರಭುವು ತೀರಿಕೊಂಡನು. ಮರಣವು ಸಂಭವಿಸಿ ಹಲವಾರು ಗಂಟೆಗಳು ಕಳೆದಿರಬಹುದೆಂದೂ ವರದಿಯನ್ನು ಕಳಿಸಿದನು. ಸಂಸ್ಥಾನವನ್ನು ಕಬಳಿಸುವ ಮಹತ್ವಾಕಾಂಕ್ಷಿಯಾದ ಕಲೆಕ್ಟರನು ಇದರಿಂದ ದತ್ತಕವನ್ನು ಸಹಜವಾಗಿ ನಿರಾಕರಿಸುವ ಕುರಿತು ಚಿಂತಿಸಿದನು. ಕಿತ್ತೂರ ದೇಸಾಯಿಯರು ಜೀವಿಸಿರುವಾಗ ದತ್ತಕ ತೆಗೆದುಕೊಳ್ಳುವ ಕುರಿತು ತನ್ನ ಜೊತೆಗೆ ಎಂದೂ ಆಲೋಚಿಸಿಲ್ಲವೆಂದೂ, ಅದರ ಬಗೆಗೆ

ಅನುಮತಿಗಾಗಿ ಕೇಳಿಕೊಂಡಿಲ್ಲವೆಂದೂ, ಆದುದರಿಂದ ಅವರು ದತ್ತಕ ತೆಗೆದುಕೊಳ್ಳಲು ಸಾಧ್ಯವಿಲ್ಲ ವೆಂದೂ ತೀರ್ಮಾನಿಸಿದನು ಮತ್ತು ಸರಕಾರಕ್ಕೆ ಹಾಗೇ ಬರೆದು ತಿಳಿಸಿದನು. "ದತ್ತಕ ಮಗನನ್ನು ಮನ್ನಿಸುವದಿಲ್ಲ; ದತ್ತಕ ಮಗನು ದೇಸಾಯರ ವಂಶಜನೆಂದು ಕಂಡುಬಂದರೆ ಅದರಂತೆ ವಿಚಾರಿಸಿ ತಿಳಿಸಬೇಕು" ಎಂದು ಕಂಪನಿ ಸರಕಾರ ಥ್ಯಾಕರೇ ಸಾಹೇಬನಿಗೆ ವಿಧಿಸಿತು.[೩೩] ಆಗ ದೇಸಾಯರ ಮನೆತನದಲ್ಲಿ ಮೃತಪಟ್ಟ ಶಿವಲಿಂಗಪ್ರಭುವಿನ ಮಲತಾಯಿಯಾದ ಚೆನ್ನಮ್ಮ, ಹೆಂಡತಿಯಾದ ಈರಮ್ಮ ಮತ್ತು ದೇಸಾಯಿಯ ತಮ್ಮನ ವಿಧವೆ ಹೀಗೆ ಮೂವರೇ ವಿಧವೆಯರು ಉಳಿದಿರುವ ರೆಂದೂ ಸಮೀಪದ ವಾರಸದಾರರು ಯಾರೂ ಇರುವದಿಲ್ಲವೆಂದೂ ದತ್ತಕ ಮಗನೆಂಬವನು ದೇಸಾಯರ ಮನೆತನಕ್ಕೆ ಸಂಬಂಧಿಕನಲ್ಲವೆಂದೂ, ದತ್ತಕವು ನಿಜವಲ್ಲ ವೆಂದು ತಿಳಿದರೂ, ದತ್ತಕಮಗನು ತೀರ ಚಿಕ್ಕವನಿದ್ದುದರಿಂದ ಸರಕಾರವೇ ಸಂಸ್ಥಾನದ ವ್ಯವಸ್ಥೆ ಯನ್ನು ನೋಡಿಕೊಳ್ಳಬೇಕಾಗುವದೆಂದೂ, ಕಂಪನಿ ಸರಕಾರಕ್ಕೆ ಕಲೆಕ್ಟರನು ವರದಿಮಾಡಿದನು.[೩೪] ಅದರಂತೆ ಸಂಸ್ಥಾನದ ವ್ಯವಸ್ಥೆಯನ್ನು ತನ್ನ ಕೈಯ್ಯಲ್ಲಿಟ್ಟುಕೊಂಡು ಕುನ್ನೂರು ಮಲ್ಲಪ್ಪ ಹಾಗು ವೆಂಕಟರಾವ ಎಂಬ ಇಬ್ಬರನ್ನು ಕಾರಭಾರಿಗಳೆಂದು ನಿಯಮಿಸಿ ಸಂಸ್ಥಾನದ ಎಲ್ಲ ಧನ-ಧಾನ್ಯ, ವಸ್ತು ಒಡವೆ ಗಳನ್ನೂ, ಖಜಾನೆಯನ್ನೂ ವಶಪಡಿಸಿಕೊಂಡು ಮೊಹರು ಮಾಡಿಟ್ಟು ಧಾರವಾಡಕ್ಕೆ ಮರಳಿದನು.

ಇದರಿಂದ ಸಂಸ್ಥಾನದಲ್ಲಿ ಪ್ರಭಲವಾದ ಒಡಕು ಉಂಟಾಯಿತು. ಈ ಬಗೆಯಾದ ಇಬ್ಭಾಗ ವಾಗಲಿಕ್ಕೆ ಬ್ರಿಟೀಷರ ಮುತ್ಸದ್ದಿತನವೇ ಕಾರಣವಾಯಿತು. ಕುನ್ನೂರ ಮಲ್ಲಪ್ಪಶೆಟ್ಟಿಯನ್ನು ಕಾರಭಾರಿ ಗಳೆಂದು ನೇಮಿಸಿದ್ದರಿಂದ ಕಿತ್ತೂರಿನ ಮುಂದಾಳುಗಳು ಅವನ ರಾಜನಿಷ್ಠೆಯ ಬಗ್ಗೆ ಸಂಶಯಿಸಿದರು. ಶಿವಲಿಂಗ ಪ್ರಭುವು ಮರಣಹೊಂದುವ ಮುಂಚೆಯೇ ಮಾಸ್ತಮರ್ಡಿಯ ಗೌಡರ ಮಗನನ್ನು ದತ್ತಕ ತೆಗೆದುಕೊಂಡಿದ್ದಾರೆಂದು ಕುನ್ನೂರ ಮಲ್ಲಪ್ಪನಿಂದ ರೆಸಿಡೆಂಟನಿಗೆ (ಆಂಗ್ಲ ಅಧಿಕಾರಿ) ಗುಪ್ತ ವರದಿಗಳು ಹೋದವು. ಮಲ್ಲಪ್ಪಶೆಟ್ಟಿಯು ಕಲೆಕ್ಟರನ ನಿಕಟವರ್ತಿಯಾಗಿದ್ದರಿಂದ ಸಂಸ್ಥಾನದಲ್ಲಿ ನಡೆಯುತ್ತಿರುವ ಅನೇಕ ಸಂಗತಿಗಳನ್ನು ಸರಕಾರಕ್ಕೆ ರಹಸ್ಯವಾಗಿ ತಿಳಿಸುತ್ತ ಹೋದನು. ಆದುದರಿಂದ ಎರಡೂ ಪಕ್ಷಗಳಲ್ಲಿ ಉದ್ಭವಿಸಿದ ದ್ವೇಷದ ಉಗಿ, ಉಲ್ಬಣವಾಗಿ ಕಿತ್ತೂರ ನಾಡಿನ ವೈಭವ ವನ್ನು ದಹಿಸುವ ದಾವಾಗ್ನಿಯಾಗಿ ಹಬ್ಬತೊಡಗಿತು. ಇದೂ ಅಲ್ಲದೆ ದತ್ತಕ ವಿಧಾನವು ವಿಳಂಬ ವಾದುದಕ್ಕೆ ಅನೇಕ ಕಾರಣಗಳನ್ನೂ ಆರೋಪಿಸುವದುಂಟು. ಅವುಗಳಲ್ಲಿ ಅತ್ತೆಯಾದ ಚೆನ್ನಮ್ಮಳಿಗೂ ಸೊಸೆಯಾದ ಈರವ್ವಳಿಗೂ ದತ್ತಕದ ಬಗೆಗೆ ಉದ್ಭವಿಸುವ ಭಿನ್ನಾಭಿಪ್ರಾಯವೂ ಒಂದಾಗಿರುವ ಸಾಧ್ಯತೆ ಇದೆ. ಹೊರಗಿನ ಶತ್ರುಗಳು ಹಣಿಕಿಹಾಕುತ್ತಿರುವಾಗ ರಾಜಮನೆತನದಲ್ಲಿ ತೋರಿದ ಈ ಒಡಕು ಸಂಸ್ಥಾನದ ಕೆಡುಕಿಗೆ ಮೂಲವಾಯಿತೇನೋ ನಿಜ. ಈ ಸಮಯವನ್ನು ಸಾಧಿಸಿ ಥ್ಯಾಕರೇ ಸಾಹೇಬನು ತನ್ನ ಸಂಚುಪ್ರವೇಶ ಮಾಡಿದನು. ಕಿತ್ತೂರಿನ ದತ್ತಕ ಪ್ರಕರಣದ ಬಗೆಗೆ ಅತ್ತೆ ಸೊಸೆಯರಲ್ಲಿ ಭಿನ್ನಾಭಿಪ್ರಾಯವಿದೆಯೆಂದು ಮೇಲೆ ತಿಳಿಸಿದ್ದಲ್ಲದೆ, ಸಂಸ್ಥಾನವನ್ನು ಕೂಡಲೇ ಕೈವಶ ಮಾಡಿಕೊಳ್ಳಬೇಕೆಂದು ಸಲಹೆ ನೀಡಿದನು.

ಈ ಸೂಚನೆಯ ವಿಚಾರಣೆಯನ್ನು ಮಾಡಿ ಸರಕಾರವು ತನ್ನ ನಿರ್ಣಯವನ್ನು ಮೇಲಾಧಿಕಾರಿ (ಕಲೆಕ್ಟರ್)ಗೆ ತಿಳಿಸಿತು. ಕಿತ್ತೂರಿನವರು ಮಾಡಿಕೊಂಡ ದತ್ತಕವು ಕ್ರಮಬದ್ಧವೂ ಅಲ್ಲ; ಸಮಂಜಸವೂ ಅಲ್ಲ. ದತ್ತಕಕ್ಕೆ ಮಂಜೂರಿಯು ಸಿಗುವುದಿಲ್ಲ ಎಂಬ ಸಂಗತಿಯನ್ನು ಚೆನ್ನಮ್ಮಾಜಿಗೆ ತಿಳಿಸಲು ಥ್ಯಾಕರೆ ಸಾಹೇಬನು ಆಜ್ಞಾಪಿಸಿದರು. ಅಲ್ಲದೆ ಕಲೆಕ್ಟರನು ಸಂಸ್ಥಾನದ ಅಧಿಕಾರ ಸೂತ್ರಗಳನ್ನು ವಹಿಸಿಕೊಳ್ಳಬೇಕೆಂದೂ, ದತ್ತಕ ಪ್ರಕರಣವನ್ನು ಪುನಃ ಚೌಕಶಿ ಮಾಡತಕ್ಕದ್ದೆಂದೂ ಆಜ್ಞಾಪಿಸಲಾಯಿತು. ಸದರಿ ದತ್ತಕಪುತ್ರನು, ಟಿಪ್ಪುಸುಲ್ತಾನನು ಕಿತ್ತೂರನ್ನು ಕೈವಶಮಾಡಿಕೊಳ್ಳುವದಕ್ಕಿಂತ ಮೊದಲು ಅಲ್ಲಿ ಆಳುತ್ತಿದ್ದವರ ವಂಶಕ್ಕೆ ಸಂಬಂಧಿಸಿದವನೆಂದು ಕಂಡುಬಂದರೆ ಅವನನ್ನು ಗಾದಿಯ ಮೇಲೆ ಕೂಡ್ರಿಸಲು ಅಡ್ಡಿ ಇಲ್ಲವೆಂಬ ಅಭಿಪ್ರಾಯವನ್ನೂ ತಿಳಿಸಲಾಯಿತು. ದತ್ತಕ ಪುತ್ರನು ಒಂದು ವೇಳೆ ಸಮೀಪದ ವಾರಸದಾರನಲ್ಲವೆಂದು ಕಂಡುಬಂದರೆ, ಇಲ್ಲವೆ ಹೆಣ್ಣು ಸಂತತಿಯ ವತಿಯಿಂದಲೂ ಸಂಬಂಧಿಕನಲ್ಲವೆಂದು ಗೊತ್ತಾದರೆ, ಕಿತ್ತೂರಿನ ದತ್ತಕವನ್ನು ಕೂಡಲೇ ರದ್ದುಪಡಿಸುವುದಾಗಿಯೂ ತಿಳಿಸಿದರು. ಸರಕಾರದ ಈ ಅಭಿಪ್ರಾಯದ ರಹಸ್ಯವನ್ನರಿತ ಥ್ಯಾಕರೆ ಸಾಹೇಬನು ತನ್ನ ಇಚ್ಛೆಯನ್ನು ಈಡೇರಿಸಿಕೊಳ್ಳುವ ಹೊಂಚು ಹಾಕಿದನು. ರೋಗಿಯ ಇಚ್ಛೆಯಂತೆಯೇ ವೈದ್ಯನ ಪಥ್ಯವೂ ದೊರೆತಂತಾಯಿತು! "ಶಿವಲಿಂಗಪ್ರಭು ೧೨ನೇ ಸಪ್ಟೆಂಬರನಲ್ಲಿ ಮರಣ ಹೊಂದದೆ, ೧೧ನೆಯ ಸಪ್ಟೆಂಬರನಲ್ಲಿ ಮರಣ ಹೊಂದಿರಬೇಕು. ದೇಸಾಯಿಯು ದತ್ತಕ ತೆಗೆದುಕೊಂಡಿಲ್ಲವೆಂಬುದು ನಿಜ. ಪ್ರಭುವಿನ ಮರಣಾನಂತರ ಕುನ್ನೂರ ಮಲ್ಲಪ್ಪ ಮೊದಲಾದವರು ಸೇರಿ ದೇಸಾಯರ ಹೆಣದ ಕೈಯಲ್ಲಿ ಲೆಕ್ಕಣಕೆಯನ್ನು ಕೊಟ್ಟು ಪತ್ರದ ಮೇಲೆ ಸಹಿ ಮಾಡಿಸಿರುವರು.[೩೫] ಈ ವಿವರಗಳನ್ನೆಲ್ಲ ಕುನ್ನೂರ ಮಲ್ಲಪ್ಪನೇ ತನ್ನ ಮುಂದೆ ಒಪ್ಪಿಕೊಂಡಿದ್ದಾನೆಂದು ತಿಳಿಸಿ, ತನ್ನ ಅಭಿಪ್ರಾಯಕ್ಕೆ ಸಾಕ್ಷಿಯನ್ನೂ ಒದಗಿಸಿದನು. ಅಲ್ಲದೆ ಕಲೆಕ್ಟರ ಥ್ಯಾಕರೆಸಾಹೇಬನು ತನ್ನ ವರದಿಯಲ್ಲಿ ಮತ್ತೂ ಬರೆದದ್ದೆನೆಂದರೆ, "ಎಲ್ಲವೂ ಶಾಂತವಿದೆ, ರಾಜ್ಯದಲ್ಲಿ ಅವ್ಯವಸ್ಥೆಯಾದೀತೆಂದು ನನಗನಿಸುವದಿಲ್ಲ. ಅಲ್ಲದೆ ಸಂಸ್ಥಾನವನ್ನು ಯಾವ ಹೆಚ್ಚಿನ ಮಿಲಿಟರಿ ಸಹಾಯವಿಲ್ಲದೆ ನಾನೊಬ್ಬನೇ ದಕ್ಷತೆಯಿಂದ ಕಾಯ್ದುಕೊಳ್ಳಬಲ್ಲೆನೆಂಬ ಆತ್ಮವಿಶ್ವಾಸ ನನಗಿದೆ....[೩೬] ದೇಸಾಯರ ವಂಶಜರಲ್ಲಿ ಸಮೀಪದ ವಾರಸದಾರನು ಯಾವನೂ ಇಲ್ಲ. ಅಷ್ಟೇ ಅಲ್ಲ ಹೆಣ್ಣು ಸಂತತಿಯ ಕಡೆಯಿಂದಲೂ ಅಂಥವನು ಸಿಕ್ಕುವದಿಲ್ಲ. ಸಂಸ್ಥಾನವನ್ನು ಹೇಗಾದರೂ ಮಾಡಿ ಕಬಳಿಸಬೇಕೆಂಬ ಪೂರ್ವ ನಿಯೋಜಿತ ಅಭಿಪ್ರಾಯದಿಂದಲೇ ವಿಚಾರಣೆಯನ್ನು ನಡೆಸಿದಂತಿದೆ. ಕಲೆಕ್ಟರನ ಈ ವರದಿಯ ವಿಚಾರಣೆಯು ನಡೆಯುತ್ತಿರುವಾಗಲೇ ಕಿತ್ತೂರಿನಲ್ಲಿ ಬಂಡಾಯವೆದ್ದ ಸುದ್ದಿಯು ಸಿಡಿಮದ್ದಿನಂತೆ ಸರಕಾರಕ್ಕೆ ತಿಳಿಯಿತು. ಅದರಲ್ಲಿ ರಾಜಕೀಯ ಕಾರಭಾರಿ ಥ್ಯಾಕರೆಯೂ ಮತ್ತೆ ಕೆಲವು ಬ್ರಿಟೀಷ್ ಅಧಿಕಾರಿಗಳೂ ಸತ್ತಿರುವರೆಂದು ಗೊತ್ತಾಯಿತು.

ಇತ್ತ ಕಿತ್ತೂರಿನಲ್ಲಿ ಪರಿಸ್ಥಿತಿಯು ಉದ್ವಿಗ್ನವಾಗಿತ್ತು. ಸಂಸ್ಥಾನದ ಅಭಿಮಾನಿಗಳಾದ ಕನ್ನಡಿಗರ ಹೃದಯಗಳು ಕುದಿಯುವ ಕುಲಿಮೆಗಳಂತಾಗಿದ್ದವು. ಚನ್ನಮ್ಮಾಜಿಯ ಸ್ವಾಭಿಮಾನದ ಸರ್ಪವು ಹೆಡೆಯೆತ್ತಿತ್ತು. ಮಕ್ಕಳಿಲ್ಲದೆ ಮರಣಹೊಂದಿದ ಘಟನೆಯೇ ಘೋರತರವಾಗಿದ್ದಾಗ ಸಂಸ್ಥಾನದ

ರಾಜ ಮಂದಿರದ ನಂದಾದೀಪವು ನಂದಿ ಹೋಗುವ ಹೊತ್ತು ಬಂದುದಕ್ಕೆ ರಾಜ ಮಾತೆಯ ಹೃದಯಕ್ಕೆ ಸಿಡಿಲೆರಗಿದಂತಾಗಿತ್ತು. ಕಿತ್ತೂರಿನ ಬಾವುಟ ಇನ್ನು ಕೆಳಗಿಳಿಯಬೇಕಾಯಿತಲ್ಲ ಎಂದು ಕಳವಳವಾಯಿತು. ಬ್ರಿಟಿಷ್‌ರು ಹೇಳಿದ್ದನ್ನು ಒಪ್ಪಿಕೊಂಡು ವರ್ಷಾಶನ ಪಡೆದು ನಿರಾಶೆಯಲ್ಲಿ ದಿನಗಳೆಯಬೇಕೆ? ಇಲ್ಲವೆ, ವೈರಿಗಳನ್ನು ಕಾಳಗದಲ್ಲಿ ಎದುರಿಸಿ ಸಂಸ್ಥಾನದ ಸ್ವಾತಂತ್ರ್ಯವನ್ನು ರಕ್ಷಿಸಿ ಕಿತ್ತೂರಿನ ವೀರಶ್ರೀಯನ್ನು ಮೆರೆಯಬೇಕೆ? ಎಂದು ಸಾವು-ಬದುಕಿನ ಸಮಸ್ಯೆಗಳನ್ನು ಎದುರಿಸ ಬೇಕಾಗಿ ಬಂತು. ಸಂತಾನವಿಲ್ಲದಿದ್ದರೆ ಸಂಸ್ಥಾನದ ಸ್ವಾತಂತ್ರ್ಯವು ಮಣ್ಣುಪಾಲಾಗಬೇಕೆ? ಇದೆಂಥ ಅನ್ಯಾಯ! ದತ್ತಕವನ್ನೊಪ್ಪದಿರುವ ಹಕ್ಕು ಈ ಕಂಪನಿ ಸರಕಾರಕ್ಕಿದೆಯೆ? ಕನ್ನಡಿಗರು ಈ ದಾಸ್ಯವನ್ನೆಂದೂ ಸಹಿಸಲಿಕ್ಕಿಲ್ಲ. ಈ ಅನ್ಯಾಯವನ್ನು ಪ್ರತಿಭಟಿಸಲೇ ಬೇಕು. ಕನ್ನಡ ನೆಲದ ಋಣ ತೀರುವಂತೆ, ಕನ್ನಡ ಕುಲದ ಛಲ ಮೆರೆಯುವಂತೆ ವೈರಿಗಳನ್ನು ಕಣದಲ್ಲಿ ಎದುರಿಸಿ ಕನ್ನಡದ ಗಡಿಗಳಿಂದ ತಳ್ಳಿಹಾಕಬೇಕು. ಅದೇ ನಮ್ಮ ಹೆಗ್ಗುರಿ-ಇತ್ಯಾದಿ ಕ್ರಾಂತಿಕಾರಕ ವಿಚಾರಗಳು ಚನ್ನಮ್ಮಾಜಿಯ ಚಿತ್ತವನ್ನು ಕದಡಿತ್ತು. ರಣದುಂದುಭಿಯನ್ನು ಮೊಳಗಿಸುವುದೇ ಸರಿ ಎಂದು ಚೆನ್ನಮ್ಮ ತೀರ್ಮಾನಿಸಿದಳು.

ಅಕ್ಟೋಬರ್ ೨೨ರಂದು, ಥ್ಯಾಕರೆ ಸಾಹೇಬನು ಕಿತ್ತೂರಿಗೆ ಸಮೀಪದಲ್ಲಿಯೇ ಡೊಂಬರ ಕೊಪ್ಪದ ಮಾವಿನ ತೋಪಿನಲ್ಲಿ ಶಿಬಿರವನ್ನು ಬಿಟ್ಟು ವಿಚಾರಣೆಯ ನೆವದಲ್ಲಿ ತಳವೂರಿದ್ದನು. ಅವನೊಂದಿಗೆ ಸುಮಾರು ೫೦೦ ಸೈನಿಕರೂ, ಕ್ಯಾಪ್ಟನ್ ಬ್ಲಾಕ್‌ನೆಂಬ ಸೇನಾಧಿಕಾರಿಯೂ ಬೆಂಗಾವಲಿಗಿದ್ದರು. ತನ್ನ ಬಳಿಯಲ್ಲಿ ಹೆಚ್ಚು ದಳವಿಲ್ಲದ್ದರಿಂದ ಸಮಸ್ಯೆಗಳನ್ನು ಸಂಧಾನದಿಂದ ಬಿಡಿಸಿಕೊಳ್ಳಬೇಕೆಂದು ಅವನು ಯೋಚಿಸಿದನು. ಅಂತೆಯೇ ಚನ್ನಮ್ಮನ ಬಳಿಗೆ ತನ್ನ ಪ್ರತಿನಿಧಿ ಗಳನ್ನು ಕಳುಹಿಸಿದನು. ಅಷ್ಟರಲ್ಲಿ ಸಂಸ್ಥಾನದ ಖಜಾನೆಯನ್ನು ಕಾಯಲು ತಮ್ಮ ಸೈನಿಕರನ್ನು ನೇಮಿಸಲಾಗಿದೆಯೆಂದೂ, ಸದರೀ ರಕ್ಷಕರು ಚೆನ್ನಮ್ಮಾಜಿಯ ಅನುಮತಿಯಿಲ್ಲದೆ ಖಜಾನೆಯನ್ನು ತೆರೆಯಗೊಡುವದಿಲ್ಲವೆಂದೂ ಕಲೆಕ್ಟರನಿಗೆ ತಿಳಿದುಬಂದಿತು. ಕಂಪನಿ ಸರಕಾರದ ಕ್ರೂರ ದಬ್ಬಾಳಿಕೆ ಯನ್ನು ಕೊನೆಗಾಣಿಸಬೇಕೆಂದು ನಿರ್ಧರಿಸಿ ಚೆನ್ನಮ್ಮಾಜಿಯೇ ಸಂಸ್ಥಾನದ ಸೂತ್ರಗಳನ್ನು ಗ್ರಹಿಸಿ ಕಿತ್ತೂರಿನ ಸ್ವಾತಂತ್ರ್ಯವನ್ನು ಸಾರಿದ್ದಳು. ಅಂತೆಯೇ ಕೋಟೆಯ ಬಾಗಿಲುಗಳನ್ನು ಮುಚ್ಚಿಸಿ, ಆಯಕಟ್ಟಿನ ಸ್ಥಳಗಳಲ್ಲಿ ಭದ್ರವಾದ ಕಾವಲನ್ನು ಇಡಲು ಆಜ್ಞಾಪಿಸಿದಳು. ಇದನ್ನೆಲ್ಲ ತಿಳಿದುಕೊಂಡ ನಂತರ ಕಲೆಕ್ಟರನಿಗೆ ಕಿತ್ತೂರಿನ ನೈಜ ಪರಿಸ್ಥಿತಿಯ ಅರಿವಾಗತೊಡಗಿತು. ಕೆರಳಿದ ಕಿತ್ತೂರು ತನ್ನ ಎಣಿಕೆ ಯಂತೆ ನಿರಾತಂಕವಾಗಿ ಮಣಿಯುವದಿಲ್ಲೆಂದು ಅವನಿಗೆ ಹೊಳೆಯಿತು.

ಕಲೆಕ್ಟರನ ಅಭಿಪ್ರಾಯದಂತೆ ಚೆನ್ನಮ್ಮಾಜಿಯು ಸಂಧಾನವನ್ನು ನಿರಾಕರಿಸಿದಳು. ಅಲ್ಲದೆ ಚೆನ್ನಮ್ಮಳ ಭೆಟ್ಟಿಗೆ ಹೋಗಬೇಕೆಂದರೆ ಥ್ಯಾಕರೇನ ಸಂಗಡ ಬರಲು ಯಾವ ಸ್ಥಳೀಯ ಮುಖಂಡರೂ ಒಪ್ಪಿಕೊಳ್ಳಲಿಲ್ಲ. ಅಷ್ಟರಲ್ಲಿ ಸುತ್ತಲಿನ ಹಳ್ಳಿಗಳಿಂದ ಸಂಸ್ಥಾನದ ಸೈನಿಕರೂ, ಸೇಔಸನದಿಗಳು, ತಳವಾರರೂ, ನಾಯಕರೂ, ಗುಪ್ತಮಾರ್ಗಗಳಿಂದ ಕೋಟೆಯಲ್ಲಿ ಒಂದಾಗುತ್ತಿದ್ದರೆಂಬ ಸುದ್ದಿಯು ಕುಹಕಿಗಳ ಮುಖಾಂತರ ಕಲೆಕ್ಟರನಿಗೆ ತಿಳಿದುಬಂತು. ಅದನ್ನು ಕೇಳಿ ಕಲೆಕ್ಟರನ ತಲೆ ತಿರುಗಿತು.

ಸಪ್ಟೆಂಬರ ೨೩ರಂದು ಅವನು ತನ್ನ ಕ್ಯಾಪ್ಟನ್ ಬ್ಲಾಕ್‌ನನ್ನೂ, ಉಳಿದ ಗೊಲಂದಾಜರನ್ನೂ ಕರೆದು ಕೋಟೆಯ ಹೆಬ್ಬಾಗಿಲಿಗೆ ಎದುರಾಗಿ ದೊಡ್ಡ ತೋಪುಗಳನ್ನು ಸಜ್ಜುಗೊಳಿಸಲು ಆಜ್ಞಾಪಿಸಿದನು. ಆರ್ಟಿಲರಿ ಆಫೀಸರನು ರಕ್ಷಣಾಪಡೆಯ ಸೈನಿಕರನ್ನು ಅದಲು ಬದಲು ಮಾಡಿಸಲೆಂದು ಕೋಟೆಯ ಎದುರಿಗೆ ಹೋದಾಗ ಕೋಟೆಯ ಬಾಗಿಲು ಮುಚ್ಚಲ್ಪಟ್ಟಿತ್ತು. ಅಷ್ಟರಲ್ಲಿ ಕೋಟೆಯು ಕಿತ್ತೂರಿನ ಸೈನಿಕರಿಂದ ಕಿಕ್ಕಿರಿದು ತುಂಬಿತ್ತು. ಅವನಿಗೆ ಒಳಗೆ ಪ್ರವೇಶ ದೊರೆಯಲಿಲ್ಲ. ಥ್ಯಾಕರೆ ಸಾಹೇಬ ಹಲವಾರು ಸಲ ಹೇಳಿ ಕಳುಹಿಸಿದರೂ, ಚನ್ನಮ್ಮಾಜಿಯ ಸೈನಿಕರು ಸೊಪ್ಪು ಹಾಕಲಿಲ್ಲ. ಆಗ ಕುಪಿತನಾದ ಕಲೆಕ್ಟರನು, ಹೆಚ್ಚಿಗೆ ತೋಪುಗಳನ್ನು ಸಜ್ಜುಗೊಳಿಸಿ ಕೊನೆಯ ಎಚ್ಚರಿಕೆಯನ್ನು ಕೊಟ್ಟನು. "ಇನ್ನು ೨೦ ನಿಮಿಷಗಳಲ್ಲಿ ಕೋಟೆಯ ಬಾಗಿಲನ್ನು ತೆಗೆಯದಿದ್ದರೆ ಅದನ್ನು ಕೂಡಲೇ ತೋಪಿನಿಂದ ಹಾರಿಸಲಾಗುವದು"[೩೭] ಎಂದು ಬೆದರಿಕೆ ಹಾಕಿದನು. ಆದರೆ ಇವನ ಬೆದರಿಕೆಯನ್ನು ಯಾರು ಲೆಕ್ಕಿಸಬೇಕು? ಸ್ವಾತಂತ್ರ್ಯ ರಕ್ಷಣೆಗಾಗಿ ಕಿತ್ತೂರಿನ ಅಭಿಮಾನಿಗಳಾದ ಕನ್ನಡ ಯೋಧರು ಅತ್ಯಂತ ಆವೇಶದಿಂದ ಯುದ್ಧೋತ್ಸಾಹದಿಂದ ತಮ್ಮ ಪ್ರಾಣಗಳನ್ನೇ ಪಣಕ್ಕೆ ಹಚ್ಚಿ ನಿಂತ ಆ ನಿಖರವಾದ ಸಮಯದಲ್ಲಿ, ಅವರು ಯಾವ ಬೆದರಿಕೆಗೂ ಬಾಗುವಂತಿರಲಿಲ್ಲ. ಬದಲಾಗಿ ಆತ್ಮಬಲಿದಾನಕ್ಕೂ ಹಿಂಜರಿಯದೇ ನೆಲದ ಋಣವನ್ನು ತೀರಿಸಲು ಕೆರಳಿದ ಕೇಸರಿಗಳಂತೆ ಯುದ್ಧ ಮಾಡಲು ಸನ್ನದ್ಧರಾದರು. ಇಂಥ ಪರಿಸ್ಥಿತಿಯಲ್ಲಿ ೨೦ ನಿಮಿಷಗಳೂ ಉರುಳಿದವು. ಅವರೇನೂ ಸೊಪ್ಪುಹಾಕಲಿಲ್ಲ. ಥ್ಯಾಕರೆಯು ಮೈತುಂಬ ಕಣ್ಣಾಗಿ ನಿರೀಕ್ಷಿಸುತ್ತಿದ್ದನು. ಕ್ಯಾಪ್ಟನ್ ಬ್ಲಾಕ್, ಕ್ಯಾಪ್ಟನ್ ಸಿವೆಲ್ ಮತ್ತು ಲೆಫ್ಟಿನೆಂಟ ಡೀಟನ್ ಹಾಗೂ ಉಳಿದ ಸೈನಿಕರುಗಳಿಗೆ ಥ್ಯಾಕರೆ ಸಾಹೇಬರೂ ಸೂಚಿಸುತ್ತಿರುವಂತೆ ತೋಪುಗಳಿಗೆ ಕೊಳ್ಳಿ ಇಡುವ ಸಿದ್ಧತೆಯಲ್ಲಿದ್ದರು. ಎಲ್ಲವೂ ಗಂಭೀರವಾಗಿತ್ತು. ಅಷ್ಟರಲ್ಲಿ ಕಿತ್ತೂರಿನ ಸೈನ್ಯ ಕೋಟೆಯ ಬಾಗಿಲುಗಳನ್ನು ತೆರೆದು, ಅತ್ಯಂತ ಆಶ್ಚರ್ಯಕರ ರೀತಿಯಲ್ಲಿ ಒಮ್ಮೆಲೆ ವೈರಿಗಳ ಮೇಲೆ ಧುಮ್ಮಿಕ್ಕಿ ಬ್ರಿಟಿಷರ ಮೇಲೆ ಮಿಂಚಿನ ದಾಳಿಯನ್ನು ಮಾಡಿತು. ತೋಪುಗಳನ್ನು ವಶಪಡಿಸಿಕೊಂಡು ಎಲ್ಲ ಆಫೀಸರರನ್ನು ಕೊಲೆಗೈದರು. ಥ್ಯಾಕರೆ ಸಾಹೇಬನು ಕುದುರೆಯನ್ನು ಹತ್ತಿ ವೇಗವಾಗಿ ಓಡಿಸುತ್ತ ತನ್ನ ಸೈನ್ಯದಲ್ಲಿ ಉಂಟಾದ ವಿಷಮಸ್ಥಿತಿಯನ್ನು ಹಿಡಿತದಲ್ಲಿಡಲೆಂದು ಯತ್ನಿಸಲು ಅಮಟೂರ ಬಾಳಪ್ಪನೆಂಬವನ ಗುಂಡಿಗೆ ಆಹುತಿಯಾದನು.[೩೮] ಹೀಗಾಗಿ ಓಡಿಹೋಗುತ್ತಿದ್ದ ಆಂಗ್ಲ ಸೈನಿಕರನ್ನು ಬೆನ್ನಟ್ಟಿ ಕೆಲವರನ್ನು ಕೊಂದು ಹಾಕಿದರು. ಅಲ್ಲಲ್ಲಿ ಅಡಗಿಕೊಂಡು ಕುಳಿತ ಕೆಲವರನ್ನು ಯುದ್ಧಕೈದಿಗಳನ್ನಾಗಿ ಬಂಧಿಸಲಾಯಿತು. ಅವರಲ್ಲಿ ಸ್ಟಿವೆನ್‌ಸನ್, ಎಲಿಯಟ್ ಎಂಬ ರಾಜಕೀಯ ಕಾರಭಾರಿ ಸಹಾಯಕರು ಮುಖ್ಯರಾಗಿದ್ದರು. ಈ ದಾಳಿಯಲ್ಲಿ ಕಿತ್ತೂರು ನಾಡಿನ ಪ್ರಭಾವಿ ಮುಂದಾಳಾದ ಗುರುಸಿದ್ಧಪ್ಪನು ಚೆನ್ನಮ್ಮ ರಾಣಿಯ ಅನುಮತಿಯಂತೆ ಅಭಿಮಾನದಿಂದ ಕಾರ್ಯಸಾಧಿಸಿದನು. ಕೈಸೆರೆ ಸಿಕ್ಕ ೧೯ ಜನ ಯುರೋಪಿಯನ್ ಕೈದಿಗಳನ್ನೂ, ಅವರ ಮಕ್ಕಳನ್ನೂ ಚೆನ್ನಮ್ಮಳು ಅತ್ಯಂತ ಸಹಾನು ಭೂತಿಯಿಂದ ನಡೆಸಿಕೊಂಡಳೆಂಬುದು ಗಮನಿಸತಕ್ಕ ಸಂಗತಿಯಾಗಿದೆ. ಸೆರೆಸಿಕ್ಕ ಮಕ್ಕಳನ್ನು ಚೆನ್ನಮ್ಮಳು ಮಾತೆಯಂತೆ ಸಾಕಿ ಸಲಹಿದಳು. ಆದರೆ ಮುಂದೆ ಚೆನ್ನಮ್ಮಳು ಸೆರೆಸಿಕ್ಕಾಗ ಆಂಗ್ಲರು ಅವಳನ್ನು ಅತ್ಯಂತ

ಮರ್ಯಾದೆಯಿಂದ ನಡೆಯಿಸಿಕೊಳ್ಳುವದಕ್ಕೆ ಆಂಗ್ಲಾಧಿಕಾರಗಳ ಮಾತೇ ಕಾರಣವಾಯಿತೆಂದು ಹೇಳಬಹುದು. ಒಟ್ಟಾರೆ ಕಿತ್ತೂರಿನ ಇತಿಹಾಸದಲ್ಲಿ ಚೆನ್ನಮ್ಮಳ ಪಾತ್ರ ಮರೆಯದಂತಹದು. ಚೆನ್ನಮ್ಮನೊಡನೆ ನಡೆಸಿದ ಸಂಧಾನ, ಬ್ರಿಟೀಷರ ದಾಳಿ, ಬ್ರಿಟೀಷ್ ರಾಜಕೀಯ ಕಾರಭಾರಿಗಳ ಪಾತ್ರ ಈ ಅಧ್ಯಾಯದಲ್ಲಿದೆ.

ಅಡಿಟಿಪ್ಪಣಿ

೧. ತಲ್ಲೂರು ರಾಯನಗೌಡರು, **"ಕಿತ್ತೂರು ಬಂಡಾಯ"**, ಪುಟ ೬.

೨. ಮುಪ್ಪಯ್ಯನವರಮಠ, ವಿ.ಎಸ್. **"ಕಿತ್ತೂರು ದುಂಧುಬಿ"**, ಪುಟ ೬, ೧೯೯೬.

೩. ಮಾರಿಹಾಳ ವ್ಹಿ.ಜಿ., **"ಕನ್ನಡ ನೆಲದ ಸೌಭಾಗ್ಯ ಕಿತ್ತೂರು ರಾಣಿ ಚೆನ್ನಮ್ಮಾಜಿ"**, ೧೯೮೮.

೪. ಶೈಲಾ ಬಿ. ಪೂಜಾರ, **"ಕಿತ್ತೂರು ಚೆನ್ನಮ್ಮನ ಕಾಲದ ಇತಿಹಾಸ ಮತ್ತು ಸಂಸ್ಕೃತಿ"**, ಪುಟ ೬, ೨೦೦೧, ಅಪ್ರಕಟಿತ ಲೇಖನ.

೫. ಸುಂದರ ಅ., **"ಕಿತ್ತೂರು ಇತಿಹಾಸ"**, ೨೦೦೬.

೬. ಮನೋಜ ಪಾಟೀಲ, **"ಬೆಳಗಾವಿ ಜಿಲ್ಲಾ ಮಾರ್ಗದರ್ಶಿ"**, ಪುಟ ೩೧, ೧೯೮೭.

೭. ಅದೇ ೩೨.

೮. ಅದೇ ೩೩.

೯. ಅದೇ ೩೪.

೧೦.ಅದೇ ೩೫.

೧೧.ಅದೇ ೩೮.

೧೨.ಮಾರೀಹಾಳ ವ್ಹಿ.ಜಿ., **ಅದೇ"**.

೧೩.ಪಾವಟೆ ಚೆನ್ನಕ್ಕ **"ಕಿತ್ತೂರು ಕಥನ"**, ಪುಟ ೮೮, ೨೦೦೨.

೧೪.ಒಡೆಯರ ಸದಾಶಿವ., **"ರಾಣಿಚೆನ್ನಮ್ಮ"**, ಪುಟ ೦೨, ೧೯೭೭.

೧೫.ಅದೇ ಪುಟ ೨.

೧೬.ವೃಷಭೇಂದ್ರಾಚಾರ್ ಅರ್ಕಸಾಲಿ, **"ವೀರರಾಣಿ ಕಿತ್ತೂರು ಚೆನ್ನಮ್ಮ"**, ಪು ೨೩, ೨೦೦೯.

೧೭.ಅದೇ ಪುಟ ೨೪.

೧೮.ಅದೇ ಪುಟ ೨೫.

೧೯.ಅದೇ ಪುಟ ೨೬.

೨೦.ಪಾಟೀಲ ವ್ಹಿ.ಜಿ., **"ಕಿತ್ತೂರು ಮಲ್ಲಸರ್ಜ"**, ಪುಟ ೧೯, ೧೯೫೩.

೨೧.ಅದೇ, ಪುಟ ೧೯.

೨೨.ಅದೇ, ಪುಟ ೧೯.

೨೩.ಅರ್ಕಸಾಲಿ ವೃಷಭೇಂದ್ರಾಚಾರ್, **"ವೀರರಾಣಿ ಕಿತ್ತೂರು ಚೆನ್ನಮ್ಮ"**, ಪುಟ ೩೮.

೨೪.ಪಾಟೀಲ ವ್ಹಿ.ಜಿ., **"ಕಿತ್ತೂರು ಚೆನ್ನಮ್ಮ"**, ಪುಟ ೭.

೨೫.ಅದೇ, ಪುಟ ೭.

೨೬.ಇಂಚಲ್ ಎಸ್.ಡಿ., **"ಕಿತ್ತೂರಿನ ಸ್ವಾತಂತ್ರ್ಯ ಸಂಗ್ರಾಮ"**, ಪುಟ ೭, ೧೯೫೭.

೨೭.ಈಶ್ವರ ಎಂ. ಸಣಕಲ್, **"ಶ್ರೀ ಮಡಿವಾಳ ಮಹಾತ್ಮೆ"**, ಪುಟ ೫೬.

೨೮.ಅದೇ ಪುಟ ೫೬.

೨೯.ಅದೇ ಪುಟ ೫೯.

೩೦.ಬಾಂಬೆ ಗೆಝೀಟಿಯರ್, ಪುಟ ೨೩೭.

೩೧.ಇಂಚಲ್ ಎಸ್.ಡಿ., **ಅದೇ,** ಪುಟ ೭, ೧೯೫೭.

೩೨.ಅದೇ, ಪುಟ ೮.

೩೩.ಅದೇ, ಪುಟ ೮.

೩೪.ಹಾಲಪ್ಪ ಗ.ಸ., **"ಭಾರತ ಸ್ವಾತಂತ್ರ್ಯದ ಬೆಳ್ಳಚುಕ್ಕಿ"**, ೧೯೪೮.

೩೫.ಕಿತ್ತೂರು ಕೈಫಿಯತ್.

೩೬.ಇಂಚಲ್ ಎಸ್.ಡಿ., **ಅದೇ,** ಪುಟ ೧೧, ೧೯೫೭.

೩೭.ಅದೇ, ಪುಟ ೧೩, ೧೯೫೭.

೩೮.ಅದೇ, ಪುಟ ೧೪, ೧೯೫೭.

ಅಧ್ಯಾಯ ೩

ಕಿತ್ತೂರು ಸಂಸ್ಥಾನ ಮತ್ತು ರಾಜಮನೆತನಗಳ ಸಂಬಂಧ

೩.೧. ಕಿತ್ತೂರ ಸಂಸ್ಥಾನ ಮತ್ತು ಪೇಶ್ವೆಯರು

೩.೨. ಕಿತ್ತೂರು ಮತ್ತು ವಿಜಾಪುರದ ಸಂಬಂಧ

೩.೩. ಕಿತ್ತೂರು ಸಂಸ್ಥಾನ-ಹೈದರಾಲಿ ಮತ್ತು ಟಿಪ್ಪು ಸುಲ್ತಾನ

೩.೪. ಕಿತ್ತೂರು ಮತ್ತು ಸುರಪುರ ಸಂಸ್ಥಾನಗಳ ನಡುವಿನ ಸಂಬಂಧ

೩.೧. ಕಿತ್ತೂರ ಸಂಸ್ಥಾನ ಮತ್ತು ಪೇಶ್ವೆಯರು

೧೭ ಮತ್ತು ೧೮ನೇ ಶತಮಾನಗಳ ಅವಧಿಯಲ್ಲಿ ಕಿತ್ತೂರಿನ ದೇಸಾಯಿಯವರು ಬೆಳಗಾಂವ ಹಾಗೂ ಧಾರವಾಡ ಜಿಲ್ಲೆಯ ಕೆಲವು ಭಾಗಗಳನ್ನು ಆಳಿದರು. ಅಲ್ಲಪ್ಪಗೌಡ ಸರದೇಸಾಯಿ (೧೬೫೦-೧೬೯೧) ಕಿತ್ತೂರು ಸಂಸ್ಥಾನದ ಐದನೇ ಅರಸ. ಈತನೇ ನಿಜವಾದ ಸಂಸ್ಥಾಪಕ. ಇವರ ಪೂರ್ವಜರು ವಿಜಾಪುರದ ಸುಲ್ತಾನರ ವಶದಲ್ಲಿದ್ದ ಸರ್‌ದೇಶಮುಖಿಗಳಾಗಿದ್ದರು. ಮುದಿ ಮಲ್ಲಪ್ಪ ಸರ್‌ದೇಸಾಯಿಯ ಆಡಳಿತಾವಧಿಯಲ್ಲಿ ಔರಂಗಜೇಬನು ವಿಜಾಪುರವನ್ನು ಗೆದ್ದುಕೊಂಡನು. ೧೬೮೬-೮೭ರಲ್ಲಿ ಒಂದು ವರ್ಷದ ಅವಧಿಗೆ ಮಾತ್ರ ಸವಣೂರಿನ ನವಾಬನು ಕಿತ್ತೂರಿನ ಆಡಳಿತ ನಡೆಸಿದನು.[೧]

ಕಿತ್ತೂರು ಆಯಕಟ್ಟಿನ ಸ್ಥಳ ಹಾಗೂ ಫಲವತ್ತಾದ ಪ್ರದೇಶ. ಹೀಗಾಗಿ ಈ ನಾಡಿನ ಅಧಿಪತಿಗಳನ್ನು ಮಾಂಡಲೀಕರನ್ನಾಗಿ ಮಾಡಿಕೊಂಡು ತಮ್ಮ ಆಧೀನದಲ್ಲಿ ಇಟ್ಟುಕೊಳ್ಳಲು ಸುತ್ತ ಮುತ್ತಲಿನ ಅರಸರು ಪ್ರಯತ್ನಿಸುತ್ತಿದ್ದವರಲ್ಲಿ ಮರಾಠರು ಪ್ರಮುಖರು.

ರುದ್ರಗೌಡ ದೇಸಾಯಿಯವರ ಆಳ್ವಿಕೆಯ ಕಾಲದಲ್ಲಿ, ಕ್ರಿ.ಶ. ೧೭೪೬-೪೭ರ ಸವಣೂರು ನವಾಬ ಅಬ್ದುಲ್ಲ ಮಜಿದಖಾನ, ಪೇಶ್ವೆ ಬಾಲಾಜಿ ಬಾಜೀರಾವ ಪ್ರಮುಖರಾಗಿದ್ದಾರೆ. ಇವರಿಗೆ ಒಪ್ಪಿಸಿದ ೩೫ ಮಹಾಲುಗಳಲ್ಲಿ ಸಂಪಗಾಂವ ಕಿತ್ತೂರು ಪರಗಣೆಯು ಒಂದಾಗಿತ್ತು. ಕಿತ್ತೂರಿನ ರಾಜರು ವಿಜಾಪುರದ ರಾಜರಿಂದ ಮುಕ್ತರಾಗಿ ಪುಣೆಯ ಪೇಶ್ವೆಯರ ಅಧೀನಕ್ಕೆ ಬಂದು, ಅವರೊಂದಿಗೆ ರಾಜಕೀಯ ಸಂಬಂಧ ಬೆಳೆಸಿದರು.[೨] ರುದ್ರಗೌಡರಿಗೆ ಗಂಡು ಸಂತಾನವಿಲ್ಲದ ಕಾರಣ ಅವರು ತಮ್ಮ ಮಲ್ಲಪ್ಪನ ಮಗ ವೀರಪ್ಪಗೌಡನನ್ನು ಪಟ್ಟಕ್ಕೆ ತಂದರು. ಇವರು ೧೭೪೯ ರಿಂದ ೧೭೮೨ರವರೆಗೆ ರಾಜ್ಯವಾಳಿದರು. ಇವರ ಕಾಲದಲ್ಲಿ ಮರಾಠರಿಗೂ, ಕಿತ್ತೂರಿಗೂ ಹೆಚ್ಚಿನ ಸಂಪರ್ಕ ಬಂದಿತ್ತು. ೧೭೫೩-೫೪ರಲ್ಲಿ ವೀರಪ್ಪಗೌಡನು ಪೇಶ್ವೆಯವರಿಗೆ ೮೦,೦೦೦=೦೦ ರೂಪಾಯಿ ಕಪ್ಪಕಾಣಿಕೆ ಕೊಡಬೇಕಾಯಿತು. ೧೭೭೮ರಲ್ಲಿ ಪೇಶ್ವೆಯರ ಅಧೀನದಲ್ಲಿದ್ದ ಗೋಕಾಕನ್ನು ವಶಪಡಿಸಿಕೊಳ್ಳಲು ವೀರಪ್ಪಗೌಡ ಪ್ರಯತ್ನ ಮಾಡಿದಾಗ ಪೇಶ್ವೆಯು ಪರಶುರಾಮ ಭಾವುನನ್ನು ಕಳಿಸಿ ಅದನ್ನು ವಿಫಲಗೊಳಿಸಿದನು. ಆದರೆ ಕೆಲವೇ ಸಮಯದಲ್ಲಿ ೧೭೭೮ರಲ್ಲಿ ಹೈದರಾಲಿಯು ಪೇಶ್ವೆಯವರನ್ನು ಸೋಲಿಸಿ ಈ ಭಾಗದ ಒಡೆಯನಾದನು. ಅವನು ಬೆಳಗಾಂವ ಜಿಲ್ಲೆಯಿಂದ ಮಲಪ್ರಭ ನದಿಯ ದಕ್ಷಿಣ ಹಾಗೂ ವಿಜಾಪುರ ಜಿಲ್ಲೆಯ ಕೃಷ್ಣನದಿಯ ದಕ್ಷಿಣಕ್ಕಿರುವ ಎಲ್ಲ ಪ್ರದೇಶವನ್ನು ವಶಪಡಿಸಿಕೊಂಡು ಈ ಭಾಗದ ಅಧಿಪತಿಯಾದನು. ವೀರಪ್ಪಗೌಡ ಹೈದರಾಲಿಯ ಜೊತೆ ಸಂಧಾನ ನಡೆಸಿ, ಕಿತ್ತೂರನ್ನು ಸ್ವತಂತ್ರವಾಗಿ ಇಟ್ಟುಕೊಂಡನು. ೧೭೫೬ರಲ್ಲಿ ಕಿತ್ತೂರಿನ

ಅಧೀನದಲ್ಲಿ ಪರಸಗಡ, ಸಂಪಗಾಂವ ಮತ್ತು ಬೀಡಿ ಪರಗಣಗಳು ಸೇರಿದ್ದವು. ೧೭೭೮ರಲ್ಲಿ ವೀರಪ್ಪಗೌಡನು ತಾಸಗಾಂವದ ಪಟವರ್ಧನನ್ನು ಸೋಲಿಸಿ ಗೋಕಾಕ ಮತ್ತು ಸವದತ್ತಿಗಳನ್ನು ವಶಪಡಿಸಿಕೊಂಡು ತಮ್ಮ ರಾಜ್ಯದಲ್ಲಿ ವಿಲೀನಗೊಳಿಸಿದನು.

ಒಂದಡೆ ಪೇಶ್ವೆ ಇನ್ನೊಂದೆಡೆ ಹೈದರಲಿ ಇವರ ನಡುವೆ ಅವ್ಯಾಹತವಾಗಿ ಯುದ್ಧಗಳು ನಡದೇ ಇದ್ದವು. ೧೭೭೯ರಲ್ಲಿ ಪರಶುರಾಮಭಾವು ಗೋಕಾಕದ ಮೇಲೆ ದಾಳಿಮಾಡಿದನು. ಯುದ್ಧದಲ್ಲಿ ವೀರಪ್ಪಗೌಡ ದೇಸಾಯಿಯನ್ನು ಎಂಥ ಶೂರ ಸೇನಾನಿಯೆಂಬುದನ್ನರಿತ ಪರಶುರಾಮ ಭಾವು, ಆತನು ಒಂದಿಲ್ಲೊಂದು ದಿನ ತನಗೆ ಮುಳುವಾಗಬಹುದೆಂಬ ತಿಳಿದು ಆತನನ್ನು ಮಿರಜದಲ್ಲಿ ಬಂಧನದಲ್ಲಿರಿಸಿದನು. ವೀರಪ್ಪಗೌಡ ಅಲ್ಲಿಯೇ ೧೭೮೨ರಲ್ಲಿ ಮರಣಹೊಂದಿದನು. ಅವನ ಮೃತ ದೇಹವನ್ನು ಮಿರಜದಿಂದ ಕಿತ್ತೂರಿಗೆ ತಂದು ಕಲ್ಮಠದಲ್ಲಿ ಸಮಾಧಿ ಮಾಡಲಾಯಿತು.[೩]

ವೀರಪ್ಪಗೌಡ ದೇಸಾಯಿಯವರು ೧೭೮೨ರಲ್ಲಿ ಮರಣದ ನಂತರ ಮಲ್ಲಸರ್ಜ ದೇಸಾಯಿಯು ಕಿತ್ತೂರಿನ ಪಟ್ಟಕ್ಕೆ ಬಂದನು. ಕಿತ್ತೂರನ್ನು ಆಳಿದ ೧೨ ಜನ ಅರಸರಲ್ಲಿ ಮಲ್ಲಸರ್ಜನ ದೇಸಾಯಿ ಅತ್ಯಂತ ಪ್ರಭಾವಶಾಲಿಯಾದ ದೊರೆ ಎಂದು ಮಲ್ಲಸರ್ಜನ ದೇಸಾಯಿ ಹೆಗ್ಗಳಿಕೆಗೆ ಪಾತ್ರನಾಗಿದ್ದಾನೆ. ಇವನಿಗೆ ರುದ್ರಮ್ಮ ಮತ್ತು ಚೆನ್ನಮ್ಮ ಎಂಬ ಇಬ್ಬರು ಪತ್ನಿಯರಿದ್ದರು. ಚೆನ್ನಮ್ಮ ಇವನ ಎರಡನೆಯ ಪತ್ನಿ.

೧೭೮೫ರಲ್ಲಿ ಟಿಪ್ಪು ಸುಲ್ತಾನನು ಧಾರವಾಡದಲ್ಲಿನ ನರಗುಂದ, ರಾಮದುರ್ಗ ಹಾಗೂ ಕಿತ್ತೂರಿನ ಮೇಲೆ ದಾಳಿಮಾಡಿ ಅವುಗಳನ್ನು ವಶಪಡಿಸಿಕೊಂಡನು ಮತ್ತು ಮಲ್ಲಸರ್ಜನನ್ನು ಸೆರೆಹಿಡಿದನು. ೧೭೮೫ರ ಗಜೇಂದ್ರಗಡ ಒಪ್ಪಂದದ ಮೇರೆಗೆ ಟಿಪ್ಪು ಕಿತ್ತೂರನ್ನು ಮರಾಠರಿಗೆ ಬಿಟ್ಟು ಕೊಡಬೇಕಾಯಿತು. ಆಗ ಪೇಶ್ವೆ ಸರಕಾರ ಬಾಬುರಾವ ಭಾಸ್ಕರ ಎಂಬುವನನ್ನು ಕಿತ್ತೂರಿನ ಅಧಿಕಾರಿಯಾಗಿ ನೇಮಿಸಿತ್ತು.

ಪೇಶ್ವೆಯರು ಕ್ರಿ.ಶ. ೧೭೯೨ರಲ್ಲಿ, ಆಂಗ್ಲರೊಡನೆ ಶ್ರೀರಂಗಪಟ್ಟಣದ ಒಪ್ಪಂದಕ್ಕೆ ಸಹಿ ಹಾಕಿದ ನಂತರ ಸುಮಾರು ೨೫ ವರ್ಷಗಳ ಕಾಲ ಆಂಗ್ಲ ಹಾಗು ಪೇಶ್ವೆಯರ ಸಂಬಂಧಗಳು ಸ್ನೇಹ ಪರವಾಗಿದ್ದವು. ಪೇಶ್ವೆಯರು ಆಂಗ್ಲರ ಅಧೀನತೆಯನ್ನು ಒಪ್ಪಿಕೊಂಡರು, ಪೇಶ್ವೆಯರ ಅಧೀನ ರಾಜ್ಯ ಕಿತ್ತೂರು ಕೂಡ, ಆಂಗ್ಲರ ಅಧೀನತೆ ಹೊಂದಿ ಅವರೊಡನೆ ಗೌರವದಿಂದ ವರ್ತಿಸಬೇಕಾಯಿತು.[೪] ಕ್ರಿ.ಶ. ೧೮೦೨ರಲ್ಲಿ ಜನರಲ್ ವೆಲ್ಲಸ್ಲಿ, ಬಾಜಿರಾವ್ ಪೇಶ್ವೆಯನ್ನು ತಿರುಗಿ ಪಟ್ಟಕ್ಕೆ ಕೂಡಿಸಿದಾಗ ಶ್ರೀರಂಗಪಟ್ಟಣದಿಂದ ಪುಣೆಗೆ ಹೊರಟಿದ್ದ. ಆಗ ಆಂಗ್ಲರಿಗೆ ಅನೇಕ ಮಾಂಡಲೀಕರು ಸೈನ್ಯ ಹಾಗೂ ಹಣದ ಸಹಾಯ ಮಾಡಬೇಕಾಯಿತು. ಕಿತ್ತೂರ ದೇಸಾಯಿಯು ಕೂಡ ೧೦೦ ಕುದುರೆ ಹಾಗೂ ಮಾವುತರು, ೧೦೦ ಸೈನಿಕರನ್ನು ಆಂಗ್ಲರ ಪರವಾಗಿ ಹೋರಾಡಲು ಕೊಟ್ಟು ಸಹಕರಿಸಿದನು. ಸಂಗೊಳ್ಳಿಯಲ್ಲಿ ಆಂಗ್ಲರಿಗೆ ತಮ್ಮ ಸೈನ್ಯವಿಡಲು ಒಂದು ಕೋಟೆಯನ್ನು ಕೊಟ್ಟನು. ಇದರಿಂದ ಅವರಿಗೆ ಒಂದು ಆಯಕಟ್ಟಿನ ಸ್ಥಳ, ದವಾಖಾನೆ ಹಾಗೂ ಸಣ್ಣನಾವೆಗಳನ್ನು ಇಟ್ಟುಕೊಳ್ಳಲು ಸ್ಥಳಾವಕಾಶವಾಯಿತು. ಆಗ ಮಲ್ಲಸರ್ಜನ ರಾಜ್ಯದ ಉತ್ಪನ್ನ ಸುಮಾರು

೫ ಲಕ್ಷ ರೂಪಾಯಿಷ್ಟು ಇದ್ದಿತು. ಅವನು ೧೦೦೦ ಕುದುರೆ, ೪೦೦೦ ಕಾಲಾಳುಗಳ ಸೈನ್ಯವನ್ನು ಇಟ್ಟುಕೊಂಡಿದ್ದನು. ಪೇಶ್ವೆಯವರಿಗೆ ವರ್ಷಕ್ಕೆ ೭೦,೦೦೦ ರೂಪಾಯಿ ನಝರಾಣಾ ಕೊಡುತ್ತಿದ್ದನು. ಕಿತ್ತೂರಿನ ಆಂತರಿಕ ವ್ಯವಹಾರದಲ್ಲಿ, ಹಾಗೂ ಆಡಳಿತ ವಿಷಯಗಳಲ್ಲಿ ಪೂರ್ಣ ಸ್ವಾತಂತ್ರ್ಯವಿದ್ದಿತು.[೫] ೧೮೦೪ರಲ್ಲಿ ಪೇಶ್ವೆಯರು ಕಿತ್ತೂರಿನ ಪ್ರಾಬಲ್ಯವನ್ನು ಗಮನಿಸಿ ಭಯಗ್ರಸ್ಥರಾಗಿ ವೆಲ್ಲಸ್ಲಿಗೆ ಪತ್ರವನ್ನು ಬರೆದು ಆ ರಾಜನನ್ನು ಸಿಂಹಾಸನದಿಂದ ತಳ್ಳಿ ಅವನ ರಾಜ್ಯವನ್ನು ಕಸಿದುಕೊಳ್ಳಲು ಸಲಹೆ ನೀಡಿದರು. ಆದರೆ ವೆಲ್ಲಸ್ಲಿ ಆ ಸಲಹೆಯನ್ನು ಒಪ್ಪಲಿಲ್ಲ. ಕ್ರಿ.ಶ. ೧೮೦೯ರಲ್ಲಿ ಪೇಶ್ವೆಯು ಬಳ್ಳಾರಿಯಿಂದ ಬಂದ ಬಳಿಕ ಮಲ್ಲಸರ್ಜನನ್ನು ಪುಣೆಗೆ ಕರೆಯಿಸಿಕೊಂಡು ಪೇಶ್ವೆಯರಿಗೆ ೧,೭೫,೦೦೦ ರೂಪಾಯಿ ವರ್ಷಾಸನ ಕೊಡಲು ಒಪ್ಪಂದ ಮಾಡಿಕೊಂಡನು. ಈ ಒಪ್ಪಂದದ ಪ್ರಕಾರ ಮಲ್ಲಸರ್ಜನ ದೇಸಾಯಿ ತನ್ನ ದೇಶಗತಿಯನ್ನು ಇಟ್ಟುಕೊಳ್ಳಬಹುದಲ್ಲದೆ, ಸೈನ್ಯವನ್ನು ಇಟ್ಟುಕೊಳ್ಳುವದಕ್ಕಾಗಿ ಹಣದ ಸಹಾಯ ಪಡೆಯಬಹುದಾಗಿತ್ತು. ಮಲ್ಲಸರ್ಜನನಿಗೆ ಪೇಶ್ವೆಯರಿಂದ 'ಪ್ರತಾಪರಾವ್' ಬಿರುದನ್ನು ಕೊಡಲಾಯಿತು. ಈ ಬಿರುದಿನ ನೆನಪಿಗಾಗಿ ನಂದಗಡದ ಹತ್ತಿರದ ಕೋಟೆಗೆ ಪ್ರತಾಪಗಡ ಎಂದು ಕರೆಲಾಯಿತು. ಕಿತ್ತೂರ ಅರಸರು ಪೇಶ್ವೆಯವರಿಗೆ ತೋರಿದ ರಾಜನಿಷ್ಠೆ ಹಾಗೂ ಸಹಾಯಗಳ ಬಗ್ಗೆ ಪೇಶ್ವೆಯರಿಗೆ ಪ್ರೀತಿಯಾಗಲಿ, ವಿಶ್ವಾಸವಾಗಲಿ ಇರಲಿಲ್ಲ. ಮಲ್ಲಸರ್ಜನಂಥ ನಿಷ್ಠಾವಂತ ದೊರೆಯನ್ನು ಮೋಸದಿಂದ ಹಿಡಿದೊಯ್ದು ಪುಣೆಯಲ್ಲಿ ಮೂರು ವರ್ಷಗಳ ಕಾಲ ಬಂಧನದಲ್ಲಿಟ್ಟರು. ಆತ ಪುಣೆಯಲ್ಲಿ ರೋಗಕ್ಕೆ ತುತ್ತಾಗಿ ಪ್ರಕೃತಿ ಅತಿಯಾಗಿ ಕ್ಷೀಣಿಸಿತು. ಅಲ್ಲಿಂದ ಮರಳಿದ ಸ್ವಲ್ಪ ಕಾಲದಲ್ಲಿಯೇ ಕ್ರಿ.ಶ. ೧೮೧೬ರಲ್ಲಿ ಮರಣ ಹೊಂದಿದನು.[೬]

೧೮೧೮ರವರೆಗೆ ಕಿತ್ತೂರು ಮರಾಠರ ವಶದಲ್ಲಿ ಉಳಿಯಿತು. ಪೇಶ್ವೆ ಸರಕಾರ ಕಿತ್ತೂರಿನ ದೇಸಾಯಿಯನ್ನು ೧೧ ಗ್ರಾಮಗಳ ಜಾಗೀರದಾರನನ್ನಾಗಿ ನೇಮಿಸಿತು. ಆ ಗ್ರಾಮಗಳೆಂದರೆ ಹುಣಸಿಕಟ್ಟಿ, ಹೊಸುರು, ಇಟಗಿ, ತಡಸಹೊಂಗಲ, ತಿಗಡಿ, ಸುತಗಟ್ಟಿ, ದೇವಲಾಜಿ, ದೇವಗಾಂವ, ಗಂದಿಗವಾಡ, ದೇವರಶೀಗಿಹಳ್ಳಿ. ಕಿತ್ತೂರು ಸಂಸ್ಥಾನವು ಮರಾಠರ ದಾಳಿಗಳಿಗೆ ಮೇಲಿಂದ ಮೇಲೆ ಒಳಗಾಗಿದ್ದರಿಂದ ಅವರೊಂದಿಗೆ ಸಂಬಂಧವನ್ನು ಬೆಳೆಸಿಕೊಳ್ಳುವುದು ಅನಿವಾರ್ಯವಾಯಿತು.

ಶಿವಾಜಿಯು ಕರ್ನಾಟಕದ ಮೂಲಕ ಕೇವಲ ಎರಡು ಬಾರಿ ಸೈನ್ಯದೊಂದಿಗೆ ಪ್ರಯಾಣಿಸಿದ್ದನು. ಪೇಶ್ವೆಗಳಲ್ಲಿ ಬಾಲಾಜಿ ವಿಶ್ವನಾಥನಿಗೆ ಕರ್ನಾಟಕದ ಸಮಸ್ಯೆಗಳಿಗೆ ಗಮನಕೊಡುವಷ್ಟು ವೇಳೆಯಿರಲಿಲ್ಲ. ಕಿತ್ತೂರು ಲೆಕ್ಕಕ್ಕೆ ಇರದ ಚಿಕ್ಕ ಸಂಸ್ಥಾನವಾದುದರಿಂದ ಚಿತ್ರದುರ್ಗದವರೆಗೂ ಆಕ್ರಮಿಸಿದ ಒಂದನೇ ಬಾಜಿರಾವ್ ಪೇಶ್ವೆಗಿರಿಯಲ್ಲಿ ಕಿತ್ತೂರು-ಮರಾಠಾ ಸಂಬಂಧಗಳು ಮಹತ್ವ ಪಡೆದವು.

ಸವಣೂರಿನ ನವಾಬನು ಈ ಭಾಗದಲ್ಲಿಯ ಬಾದಾಮಿ, ಪಾಚಾಪೂರ, ಕಿತ್ತೂರ, ಗೋಕಾಕ, ಯಾದವಾಡ ಹಾಗೂ ಇತರ ಊರುಗಳು ಸೇರಿದಂತೆ ಒಟ್ಟು ೩೬ ಸ್ಥಳಗಳನ್ನು ಮರಾಠರಿಗೆ ಬಿಟ್ಟುಕೊಡಲು ಒಪ್ಪಿದನು. ಆದರೆ, ಹುಬ್ಬಳ್ಳಿ ಮತ್ತು ಬೆಳಗಾವಿ ಕೋಟೆ ಮತ್ತು ಕೆಲವು ಇತರ ಸ್ಥಳಗಳನ್ನು ಇಟ್ಟುಕೊಳ್ಳಲು ಅನುಮತಿ ನೀಡಿದನು. ೧೭೫೬ರ ಒಪ್ಪಂದದಂತೆ ಹುಬ್ಬಳ್ಳಿ ಹಾಗೂ

ಇತರ ೬ ಜಿಲ್ಲೆಗಳನ್ನು ಪೇಶ್ವೆಯವರು ಪಡೆದುಕೊಂಡರು. ಈ ರೀತಿಯಾಗಿ ಅಪ್ರತ್ಯಕ್ಷವಾಗಿ ಸವಣೂರಿನ ನವಾಬರ ಮೂಲಕ ಕಿತ್ತೂರಿನ ಆಳರಸರೊಂದಿಗೆ ಸಂಬಂಧ ಹೊಂದಿದ್ದರು.[೭]

೧೭೫೪-೫೫ರಲ್ಲಿ ನಾನಾಸಾಹೇಬ ಪೇಶ್ವೆ ವೀರಪ್ಪಗೌಡ ಸರ್‌ದೇಸಾಯಿಗೆ 'ಕೌಲ್' ಎಂಬ ಪದವಿಯನ್ನು ನೀಡಿದನು. ಈ ಕೌಲ್ ನಾಮ(ಪದವಿ)ದಂತೆ ಹುಬ್ಬಳ್ಳಿಯ ವಶ ಇವನ ಬಳಿಯಿತ್ತು. ಈ ತಾಲ್ಲೂಕುಗಳಿಂದ ಹಾಗೂ ಕಿತ್ತೂರ ಪರಗಾಣ ಸೇರಿದಂತೆ ಕೊಡುವ ಕಪ್ಪಕಾಣಿಕೆ ೮೦,೦೦೦ ರೂಪಾಯಿಗೆ ನಿಗದಿಯಾಯಿತು. ಲಿಂಗೋ ಅಪ್ಪಾಜಿಯ ಮೂಲಕ ಈ ಕಪ್ಪ ಕಾಣಿಕೆ ಯನ್ನು ಮರಾಠ ಸರ್ಕಾರಕ್ಕೆ ನೀಡಲಾಯಿತು.[೮] ೧೭೭೮ರಲ್ಲಿ ಮರಾಠರಲ್ಲಿ ವಶದಲ್ಲಿದ್ದ ಗೋಕಾಕನ್ನು ಸ್ವಾಧೀನ ಪಡಿಸಿಕೊಂಡನು. ಇವನ ವಿರುದ್ಧ ಪೇಶ್ವೆಯವರು ಪರಶುರಾಮ ಬಾವುವನ್ನು ಕಳಿಸಿದರು.[೯]

೧೭೮೨ರಲ್ಲಿ ಹೈದಾರಾಲಿಯ ಸಲಹೆಯನ್ನು ಕೇಳದೆ ಮರಾಠರು ಇಂಗ್ಲಿಷರೊಂದಿಗೆ 'ಸಾಲ್ ಬಾಯಿ' ಒಪ್ಪಂದವನ್ನು ನಿರ್ಧರಿಸಿದ್ದರಿಂದ, ನಾನಾಫಡ್ನೀಸನು ಬ್ರಿಟಿಷರ ವಿರುದ್ಧ ಮೈತ್ರಿಕೂಟ ಸಂಘಟನೆಗೆ ಬಾಗಿದಾರನಾಗಿದ್ದನು. ಇದರಿಂದ ಮನನೊಂದು ಕರ್ನಾಟಕದಲ್ಲಿಯ ಮರಾಠಾ ಪ್ರದೇಶ ಗಳನ್ನು ಸ್ವಾಧೀನಪಡಿಸಿಕೊಳ್ಳಲು ಮೈಸೂರಿನ ಸರ್ವಾಧಿಕಾರಿಯಾಗಿ ವರ್ತಿಸಿದನು.[೧೦] ಮರಾಠರ ಬೆಂಬಲ ದೊರೆತಿದ್ದರೆ ಕಿತ್ತೂರಿನ ಜನ ಟಿಪ್ಪುವನ್ನು ತಡೆಯಬಹುದಾಗಿತ್ತು. ಆದರೆ ಮಲ್ಲಸರ್ಜನನು ಹಿಂಡು-ಹಿಂಡಾಗಿ ಎರಗಿ ಬಂದ ಟಿಪ್ಪುವಿನ ಸೈನ್ಯವನ್ನು ಎದುರಿಸುವಲ್ಲಿ ದುರ್ಬಲನಾಗಿದ್ದನು. ಮರಾಠರ ಸಹಾಯದ ಮೇಲೆ ಅವಲಂಬಿತನಾಗಿದ್ದರಿಂದ ಟಿಪ್ಪುವಿಗೆ ಈತನು ಶರಣಾಗತನಾಗಬೇಕಾಯಿತು. ಇದಕ್ಕೆ ನಾನಾಫಡ್ನೀಸನು ತೋರಿಸಿದ ನಿರಾಸಕ್ತಿಯೇ ಕಾರಣವಾಯಿತು.[೧೧]

ಪರಶುರಾಮ ಬಾವು ಸಕಾಲದಲ್ಲಿ ಎಚ್ಚರಿಕೆ ನೀಡಿದ್ದನು, ನಾನಾಫಡ್ನೀಸನು ಕಿತ್ತೂರಿಗೆ ಒದಗಿದ ಆಪತ್ತನ್ನ ತಪ್ಪಿಸಲು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ೧೭೮೫ರಲ್ಲಿ ಕಿತ್ತೂರು ಪತನವಾಗಿ ಅಂದರೆ, ಮಲ್ಲಸರ್ಜನನು ಟಿಪ್ಪುವಿನಿಂದ ಬಂಧಿತನಾಗಿದ್ದನು. ೧೭೮೭ರಲ್ಲಿ ಗಜೇಂದ್ರಗಡ ಒಪ್ಪಂದದ ಮೂಲಕ ಮುಕ್ತಾಯವಾದ ಅವಧಿಯ ಮಧ್ಯೆ ಕಿತ್ತೂರು ಟಿಪ್ಪುವಿನ ಆಡಳಿತದಲ್ಲಿತ್ತು. ಆತನ ಹಿಡಿತದಲ್ಲಾದ ಬದಲಾವಣೆಯ ಮೇಲೆ ನಾನಾಫಡ್ನೀಸ ಕಾರ್ಯೋನ್ಮುಖನಾದನು. ತುಕೋಜಿ ಹೋಳ್‌ಕರ, ಹರಿಪಂಥ ಪಡಕೆ, ಭೇಹರೆ ನಾಯಕತ್ವದಲ್ಲಿ ಮರಾಠ ಸೈನ್ಯವನ್ನು ಕಿತ್ತೂರಿಗೆ ಕಳುಹಿಸಿ ಕೊಟ್ಟನು. ಸ್ವತಃ ತಾನೇ ಮರಾಠ ಪ್ರತಿಷ್ಠೆಯನ್ನು ಮರಳಿ ಪಡೆಯಲು ಬಾದಾಮಿಗೆ ಹೊರಟು ನಿಂತನು. ೨೧ ಮೇ ೧೭೮೬ರಲ್ಲಿ ಬಾದಾಮಿ ಹಾಗೂ ೮ ಜೂನ್ ೧೭೮೬ರಲ್ಲಿ ಗಜೇಂದ್ರಗಡ ಪತನವಾದವು.

೧೭೮೭ ಮಾರ್ಚದಲ್ಲಿ ಗಜೇಂದ್ರಗಡ ಒಪ್ಪಂದದ ನಿರ್ಣಯದಂತೆ ಟಿಪ್ಪು ಕಾಣಿಕೆಯ ಬಾಕಿಯಾಗಿ ಬಾದಾಮಿ, ನರಗುಂದ ಹಾಗೂ ಕಿತ್ತೂರುಗಳನ್ನು ಮರಾಠರಿಗೆ ಕೊಡುವ ನಿರ್ಣಯ ವಾಯಿತು. ಅದೋನಿಯನ್ನು ನಿಜಾಮ ಆಲಿಗೂ ಸವಣೂರನ್ನು ನವಾಬರಿಗೆ ಕೊಡುವುದಾಯಿತು.[೧೨]

ಗಜೇಂದ್ರಗಡದಲ್ಲಾದ ಈ ಶಾಂತಿ ಒಪ್ಪಂದದಿಂದ ಟಿಪ್ಪು ಹಾಗೂ ಮರಾಠರ ಮಧ್ಯದ ಸಂಬಂಧ ಘಾಸಿಗೊಂಡಿತು. ಒಬ್ಬರ ಮೇಲೊಬ್ಬರು ಮೇಲುಗೈ ಸಾಧಿಸುವ ಪ್ರಯತ್ನದಲ್ಲಿದ್ದರು.

ಟಿಪ್ಪು ಕಿತ್ತೂರನ್ನು ಮರಾಠರಿಗೆ ಒಪ್ಪಿಸಿದ ಮೇಲೆ ಕಿತ್ತೂರಿನ ಆಡಳಿತ ನೋಡಿಕೊಳ್ಳಲು ಪೇಶ್ವೆಯವರು ಬಾಬುರಾವ್ ಭಾಸ್ಕರನನ್ನು ನಿಯೋಜಿಸಿದರು.[೧೩] ಟಿಪ್ಪುವಿನ ಬಂಧನದಲ್ಲಿದ್ದ ಗುರಪ್ಪ, ತಿಪ್ಪಣ್ಣ ಶೆಟ್ಟಿ ಮತ್ತು ಛಟ್ನೀಸ್ ಕಿತ್ತೂರು ದೇಸಾಯಿಯವರ ಅಧೀನದಲ್ಲಿದ್ದ ಅಧಿಕಾರಿಗಳು ಕಪ್ಪ ಕಾಣಿಕೆ ಕೊಡುವ ಒಪ್ಪಂದದ ಮೇರೆಗೆ ಬಿಡುಗಡೆ ಹೊಂದಿದ್ದರು. ಇವರು ಕುದುರೆ ಹಾಗೂ ಕಾಲ್ನಡಿಗೆ ಮೂಲಕ ಧಾರವಾಡಕ್ಕೆ ಬಂದರು. ಇವರು ಕಿತ್ತೂರು ತಾಲ್ಲೂಕಿನ ಮರಾಠರ ಮೇಲೆ ಬಂಡಾಯವೇಳಲು ಉದ್ದೇಶದಲ್ಲಿದ್ದರು.

ಕಿತ್ತೂರನ್ನು ಮರಳಿ ಪಡೆಯಲು ಬಹುಶಃ ಟಿಪ್ಪುವಿನಿಂದ ಕಳಿಸಿದ ಸುಬ್ಬರಾವ್ ಮೊಹಿತಿ ಜುಲೈ ೧೭೮೭ರಲ್ಲಿ ಧಾರವಾಡದಲ್ಲಿ ಸೈನ್ಯ ಸಜ್ಜುಮಾಡಿ ದೊಡವಾಡ ಮತ್ತು ತೇಗೂರನ್ನು ತನ್ನ ವಶಕ್ಕೆ ತೆಗೆದುಕೊಂಡನು. ಕಿತ್ತೂರು ಪ್ರದೇಶವನ್ನು ಕೊಳ್ಳೆ ಹೊಡೆಯಲು ಪ್ರಾರಂಭಿಸಿದನು. ಇದು ಇವನ ಮತ್ತು ಮರಾಠರ ಮಧ್ಯೆ ಅನಿಯಮಿತ ಕದನಗಳಿಗೆ ಎಡೆಮಾಡಿಕೊಟ್ಟಿತು. ಗೆಲವು ತಮ್ಮದೇ ಎಂಬ ವಿಶ್ವಾಸದಲ್ಲಿದ್ದ ಮರಾಠರಿಗೆ ಹಣ ಮತ್ತು ಹೆಚ್ಚಿನ ಸೈನ್ಯದ ಕೊರತೆ ಇತ್ತು. ಬಾಬುರಾವ್‌ನು ನಾನಾಫಡ್ನೀಸರಿಗೆ ಹಣ ಮತ್ತು ಹೆಚ್ಚಿನ ಸೈನ್ಯವನ್ನು ಕಳಿಸಿದರೆ ಮರಾಠರು ತಮ್ಮ ವೈರಿಗಳನ್ನು (ಟಿಪ್ಪು) ಸದೆಬಡಿದು, ಕಿತ್ತೂರು ಪ್ರಾಂತ್ಯವನ್ನು ರಕ್ಷಿಸಬಲ್ಲರೆಂದು ಪತ್ರ ಬರೆದರು.[೧೪]

೨೫ ಜುಲೈ ೧೭೮೭ರಂದು ಬಾಬುರಾವ್ ಭಾಸ್ಕರ ನಾನಾಪಡ್ನೀಸರಿಗೆ ಕಿತ್ತೂರಿನಿಂದ ಪತ್ರ ಬರೆದನು. ಇದು ಗಜೇಂದ್ರಗಡ ಒಪ್ಪಂದದ ನಂತರ ಕಿತ್ತೂರಿನ ಸ್ಥಾನದ ಸ್ಪಷ್ಟಚಿತ್ರಣವನ್ನು ಕೊಡುತ್ತದೆ. ಇದರ ಜೊತೆಗೆ ಮರಾಠ ಸೈನ್ಯದ ಹಾಗೂ ಅಲ್ಲಿ ನೆಲೆಸಿದ ಅಧಿಕಾರಿಗಳ ವಿಷಯವು ಕೂಡ ಇದರಿಂದ ತಿಳಿದುಬರುತ್ತದೆ. ಈ ಪತ್ರದಲ್ಲಿ ಗಜೇಂದ್ರಗಡ ಒಪ್ಪಂದದ ಪ್ರಕಾರ ಕಿತ್ತೂರು ದೇಸಾಯಿಗೆ ಮರಳಿ ನೀಡಬೇಕೆಂದು ಟಿಪ್ಪು ಬರೆದ ಉಲ್ಲೇಖವಿದೆ.[೧೫] ಹಾಗೂ ದೇಸಾಯಿಯು ತನ್ನ ಸಂಸ್ಥಾನವನ್ನು ಮರಳಿ ಪಡೆಯಲು ಮಾಡಿಕೊಳ್ಳಬೇಕಾದ ಎಲ್ಲ ವ್ಯವಸ್ಥೆಯ ಬಗ್ಗೆಯೂ ನಮೂದಿಸಲಾಗಿದೆ. ಟಿಪ್ಪುವಿಗೆ ೫,೦೦,೦೦೦ ರೂಪಾಯಿ 'ಅಂತಸ್ಥ' ಎಂದು ಕೊಡುವ ಬಗ್ಗೆ ನಮೂದಿಸಲಾಗಿದೆ. ಈ ಮೂಲಕ ದೇಸಾಯಿಯವರನ್ನು ಬಿಡುಗಡೆ ಮಾಡಿದ ಹಾಗೂ ಸುಬ್ಬರಾವ್ ಮೊಹಿತೆ ಮತ್ತು ಕಾರಭಾರಿಯನ್ನ ಜೊತೆಗೆ ಕಳುಹಿಸಿಲಾದ ಬಗ್ಗೆ ವರದಿಯಿದೆ. ಟಿಪ್ಪುವಿನ ಉದ್ದೇಶ ಕಿತ್ತೂರನ್ನು ತಾನೇ ಇಟ್ಟುಕೊಳ್ಳಬೇಕು, ಹಾಗೂ ದೇಸಾಯಿಯನ್ನು ಬಂಧನದಲ್ಲಿ ಇಟ್ಟುದರಿಂದ ಒಪ್ಪಂದವನ್ನು ದೇಸಾಯಿಯ ಹೆಸರಿನಲ್ಲಿ ಮಾಡುವುದು ಹಿಂದಿನ ಉದ್ದೇಶವಾಗಿತ್ತು.

ಸುಬ್ಬರಾವ್ ಮೋಹಿತೆ ತನ್ನ ವೆಚ್ಚಕ್ಕಾಗಿ ಧಾರವಾಡದಲ್ಲಿ ೨೫,೦೦೦ ಹೊನ್ನುಗಳನ್ನು ಪಡೆದನು. ತೇಗೂರನ್ನು ವಶಪಡಿಸಿಕೊಂಡು ಅಲ್ಲಿ ಕೆಲ ಸೈನ್ಯವನ್ನಿರಿಸಿ ಸಿಂಗನಳ್ಳಿಯಲ್ಲಿ ಠಾಣೆ ಹೂಡಿ, ಆಗಾಗ್ಗೆ ಕಿತ್ತೂರಿನಿಂದ ದನ-ಕರುಗಳನ್ನು ಹೊತ್ತುಕೊಂಡು ಹೋಗಲಾರಂಭಿಸಿದನು. ಮೊಹಿತೆಯ

ಈ ಕಿರುಕುಳವನ್ನು ತಪ್ಪಿಸಿಕೊಳ್ಳಲು, ಮರಾಠರು ತೇಗೂರು ಮತ್ತು ಸಿಂಗನಹಳ್ಳಿ ಸರಹದ್ದಿನಲ್ಲಿ ತಮ್ಮ ಸೈನ್ಯವನ್ನು ಇರಿಸಿದರು.

ಮರಾಠರ ಹಿಡಿತದಲಿದ್ದ ಕಿತ್ತೂರು ಸಂಸ್ಥಾನ ಎರಡು ವರ್ಷಗಳವರೆಗೆ ವೈರಿ ಸೈನ್ಯಗಳಿಂದ ತೊಂದರೆಯನ್ನು ಅನುಭವಿಸಿತು. ಸಂಸ್ಥಾನದ ಅಧಿಕಾರಿಗಳಿಗೆ ಹಳ್ಳಿಗಳಿಂದ ವಸೂಲು ಮಾಡಬೇಕಾಗಿದ್ದ ಕಂದಾಯವು ಬರಲಿಲ್ಲ. ಆದರೆ, ಸಂಸ್ಥಾನದಲ್ಲಿ ದಂಗೆಯಿದ್ದುದರಿಂದ ಕಂದಾಯ ವಸೂಲಿ ಮಾಡಲಾಗಲಿಲ್ಲ. ಗರಡಿಗಳ ವೆಚ್ಚ, ಸಂಸ್ಥಾನದ ಕುದುರೆ ಪಡೆ ಮತ್ತು ಇತರ ಸೈನ್ಯದ ವೆಚ್ಚಕ್ಕಾಗಿ ಪ್ರತಿ ತಿಂಗಳಿಗೆ ಸುಮಾರು ೩೫,೦೦೦ ರೂಪಾಯಿ ಬೇಕಾಗಿತ್ತು. ಫಿರಂಗಿ ಗಳು, ಗರಡಿಗಳು, ರೋಹಿಲ್ಲಾಗಳು ಮತ್ತು ಬಲವಂತ ಸುಬ್ಬರಾವ್ ತಮ್ಮ ಸಂಬಳವನ್ನು ಪಡೆಯಲು ಸಿದ್ಧರಿರಲಿಲ್ಲ. ಸಂಬಳವನ್ನು ವೇಳೆಗೆ ಸರಿಯಾಗಿ ಕೊಡದಿದ್ದರೆ ಅವರು ಅಧಿಕಾರಿಗಳ ಮನನೋಯಿಸಿದಂತಾಗುತ್ತಿತ್ತು. ಹಳ್ಳಿಗಳಲ್ಲಿ ಬರಗಾಲ ಆರಂಭವಾದುದರಿಂದ ಕಂದಾಯ ವಸೂಲಿ ಮಾಡಲಾಗಲಿಲ್ಲ, ಈ ಕಾರಣಕ್ಕಾಗಿ ಸರ್ಕಾರದ ಖಜಾನೆಯಿಂದ ಹಣ ಪಡೆಯುವಂತಿರಲಿಲ್ಲ. ಮರಾಠ ಅಧಿಕಾರಿಗಳು ಹಾಗೂ ಸೈನ್ಯ, ಕಿತ್ತೂರಿನಲ್ಲಿ ನಿಜವಾಗಿಯೂ ಬಲಾಢ್ಯರಾಗಿದ್ದರು. ಪುಣೆ ಸರಕಾರಕ್ಕೆ ಸ್ವಾಮಿನಿಷ್ಠೆಯುಳ್ಳವರಾಗಿದ್ದರೂ. ಆದರೆ ಹಣದ ಬಲದ ಅಭಾವದಿಂದ ಅನಾನುಕೂಲತೆಗಳನ್ನು ಎದುರಿಸುತ್ತಿದ್ದರು. ಬಾಬುರಾವ್ ಭಾಸ್ಕರ ತನ್ನ ಪುಣೆಯ ಒಡೆಯರಿಗೆ ಈ ರೀತಿ ಭರವಸೆ ಕೊಟ್ಟರು. "ನಾವೇನು ಹೇಡಿಗಳಲ್ಲ, ನಾವು ಒಡೆಯನಿಗಾಗಿ ಪ್ರಾಣ ಕೊಡಲು ಹಿಂಜರಿಯುವುದಿಲ್ಲ, ಆದರೆ ನಮ್ಮ ಖರ್ಚಿಗಾಗಿ ಹಣ ಪಡೆಯದಿದ್ದರೆ ನಾವು ನಿಸ್ಸಹಾಯಕರಾಗುತ್ತೇವೆ" ಎಂದಿದ್ದರು. ತಾವು ಟಿಪ್ಪುವಿಗೆ ಬೇಗ ಪತ್ರ ಬರೆದು ವಿಷಯ ಬಗೆಹರಿಸಿಕೊಳ್ಳಲು ನಾನಾಫಡ್ನೀಸನಿಗೆ ಪತ್ರದ ಮೂಲಕ ಸಲಹೆಯನ್ನು ನೀಡಿದನು. ಪುನಃ-ಪುನಃ ವಿನಂತಿಸಿಕೊಳ್ಳುವುದೇನೆಂದರೆ ಈ ಪ್ರಾಂತ್ಯದಲ್ಲಿ ಸಂಗ್ರಹಿಸಿದ ಕಂದಾಯದ ಹಣವಾಗಲಿ ಅಥವಾ ತಮ್ಮ ಸರಕಾರದಿಂದ ದೊರೆಯುವ ಸಾಕಷ್ಟು ಹಣದ ಸೌಲಭ್ಯವಾಗಲಿ ಸರಿಯಾಗಿ ಪಡೆಯಲಾಗಲಿಲ್ಲ. ಇದೇ ಪರಿಸ್ಥಿತಿ ಮುಂದುವರೆದರೆ, ಕಿತ್ತೂರು ಪ್ರಾಂತ್ಯವನ್ನು ಕಳೆದುಕೊಳ್ಳುವದಾಗಿ ಬಾಬುರಾವ್ ಭಾಸ್ಕರನು ನಾನಾಫಡ್ನೀಸನಿಗೆ ಎಚ್ಚರಿಕೆಯನ್ನು ನೀಡಿದನು."[೧೭]

ಸುಬ್ಬರಾವ್ ಮೊಹಿತೆ ಸಾಮಾನ್ಯವಾಗಿ ಗೇರಿಲ್ಲಾ ಮಾದರಿಯ ತಂತ್ರಗಳನ್ನ ಅವಲಂಬಿಸಿದ್ದನು. ಇಲ್ಲಿ ಮರಾಠರ ದೌರ್ಬಲ್ಯದಿಂದ ಬಲ ಒಡದಿತ್ತು. ಸಿಂಗನಹಳ್ಳಿಯ ಠಾಣೆ ಹೂಡಿದ್ದ ಸುಬ್ಬರಾವ್ ಮೊಹಿತೆ ಸುತ್ತಲಿನ ಜನರಿಗೆ ತೊಂದರೆ ನೀಡುತ್ತಿದ್ದನು. ಆಗಸ್ಟ್ ೧೭೮೭ರ ಪ್ರಾರಂಭದಲ್ಲಿ ತೇಗೂರಿಗೆ ಮರಾಠ ಸೈನ್ಯವು ಗಸ್ತುತಿರುಗಲು ಹೋಯಿತು. ಆದರೆ ಮೊಹಿತೆಯವರೊಂದಿಗೆ ಕಾದಾಡಿದ ಮತ್ತು ಮರಾಠರು ಒಬ್ಬ ಸೈನಿಕನನ್ನು ಹಾಗೂ ಒಂದು ಕುದುರೆಯನ್ನು ಕಳೆದುಕೊಂಡರಲ್ಲದೆ, ನಾಲ್ಕು ಜನರು ಗಾಯಗೊಂಡರು. ತೇಗೂರನ್ನ ಮರಳಿ ಪಡೆಯಲು ಮರಾಠರು ಪುಣೆಯಿಂದ ಆಜ್ಞೆಗಾಗಿ ಕಾಯುತ್ತಿದ್ದರು.[೧೮]

ಕಿತ್ತೂರಿನ ಅಧಿಕಾರ ವಹಿಸಿಕೊಂಡ ಬಾಬುರಾವ್ ಭಾಸ್ಕರನಿಗೆ ೧೧ ಆಗಸ್ಟ್ ೧೭೮೭ ರಂದು ನಾನಾಫಡ್ನೀಸನು ೨೫,೦೦೦ ರೂಪಾಯಿ ಕೊಟ್ಟು ಕಳುಹಿಸಿದನು. ಆಗ ಈ ಭಾಗದಲ್ಲಿ ಪ್ರಬಲವಾದ ಬರಗಾಲ ಹಬ್ಬಿತ್ತು. ಜೋಳ ಬಹಳ ದುಬಾರಿಯಾಗಿ ರೂಪಾಯಿಗೆ ೮-೯ಸೇರಿನಂತೆ ಮಾರಾಟವಾಗುತಿತ್ತು. ಆಹಾರವಿಲ್ಲದೆ ಜನ ಸಾಯುತ್ತಿದ್ದರು, ಇದಕ್ಕೂ ಮಿಗಿಲಾಗಿ ಅಲ್ಲಲ್ಲಿ ಅನೇಕ ದಂಗೆಗಳಾದವು. ಜನರಿಗೆ ಸುಬ್ಬರಾವ್ ಮೊಹಿತೆ ಬಗ್ಗೆ ಅಂಜಿಕೆಯಿತ್ತು, ವೈರಿಗಳು ಕುಸಗಲ್ಲ, ಸೌದತ್ತಿ ಮತ್ತು ದೊಡವಾಡವನ್ನು ಸ್ವಾಧೀನ ಪಡಿಸಿಕೊಂಡಿದ್ದರು. ಮರಾಠರು ವೈರಿಗಳನ್ನು ತಡೆಯಲು ಹಗಲು-ರಾತ್ರಿ ಪ್ರಯತ್ನಪಟ್ಟರು.[೧೮]

೧೭೮೭ ಆಗಸ್ಟ ತಿಂಗಳ ಮಧ್ಯದ ಹೊತ್ತಿಗೆ ಟಿಪ್ಪುವಿನ ಸೈನ್ಯ ಧಾರವಾಡವನ್ನು ದಾಟಿ ಸುಮಾರು ೨ ಮೈಲಿ ದೂರದಲ್ಲಿ ವಾಸ್ತವ್ಯ ಮಾಡಿತು. ಸೈನಿಕರು, ಸರದಾರ ಖಲಿ, ಸೈಯದ್ ಹಮಿ, ಬುದ್ರು ಜಮಾಲಖಾನ ಮತ್ತು ಸೈಯದ್ ಗಫಾರ್ ಇವರ ಅಧೀನಕ್ಕೊಳಪಟ್ಟಿತ್ತು. ಇದಲ್ಲದೇ, ಹಾವನೂರಕರ್ ಹಾಗೂ ಇತರರು ಆಹಾರ ಸಾಮಗ್ರಿಗಳನ್ನು ಪೂರೈಸುವಲ್ಲಿ ಸಹಾಯವನ್ನು ಒದಗಿಸುತ್ತಿದ್ದರು. ವೈರಿಗಳ ಉದ್ದೇಶ ತೇಗೂರವರೆಗೆ ಆಗಸ್ಟ ೧೬, ೧೭೮೭ಕ್ಕೆ ತಲುಪುವುದು ಮತ್ತು ಮರು ದಿವಸ ಕಿತ್ತೂರನ್ನು ವಶಪಡಿಸಿಕೊಳ್ಳುವುದು ಎಂಬುದಾಗಿತ್ತು. ಹುಬ್ಬಳ್ಳಿಗೆ ವೈರಿಗಳ ಸೈನ್ಯ ತಲುಪಿದಂತೆ, ಮರಾಠರು ತಮ್ಮ ೨೦ ಗುಪ್ತಚರರನ್ನು ಮಾಹಿತಿ ಸಂಗ್ರಹಣೆಗೆ ಕಳುಹಿಸಿದರು. ಅವರು ಆಗಸ್ಟ್ ೧೫, ೧೭೮೭ರ ಮಧ್ಯರಾತ್ರಿ ವೇಳೆಗೆ ಕಿತ್ತೂರಿಗೆ ತಿರುಗಿ ಬಂದರು. ಸುಮಾರು ೬,೦೦೦ ಕಾಲ್ದಳ ಸೈನ್ಯಿಕರನ್ನು ಸನ್ನದ್ಧ ಮಾಡಿದರು. ಟಿಪ್ಪುವಿಗೆ ತಕ್ಷಣ ಪತ್ರ ಬರೆಯಲು ಹಾಗೂ ಹೆಚ್ಚಿನ ಸೈನ್ಯವನ್ನು ಕಳುಹಿಸಲು ಪುಣೆಯ ಅಧಿಕಾರಿಯಾದ ನಾನಾಪಢ್ನಿಸನನ್ನು ವಿನಂತಿಸಿಕೊಂಡರು.[೧೯]

ಹುಬ್ಬಳ್ಳಿಯಿಂದ ಧಾರವಾಡಕ್ಕೆ ಆಗಸ್ಟ್ ೧೭೮೭ರಲ್ಲಿ ೧೦೦೦೦-೧೨೦೦೦ ಕಾಲ್ದಳ, ೨೦೦೦ -೩೦೦೦ ಅಶ್ವದಳ, ಹಾಗೂ ೧೬-೧೯ ಬಂದೂಕು ಒಳಗೊಂಡ ಟಿಪ್ಪುವಿನ ಸೈನ್ಯವು ಬಂದಿತು. ಅಲ್ಲಿಂದ ಮುಂದುವರೆದು ಧಾರವಾಡದಿಂದ ೮ ಮೈಲಿ ದೂರದಲ್ಲಿರುವ ನರೇಂದ್ರಕ್ಕೆ ಬಂದು ನೆಲೆಸಿದರು. ಕಿತ್ತೂರನ್ನು ಟಿಪ್ಪುವು ವಶಪಡಿಸಿಕೊಳ್ಳಲು ಸುಬ್ಬರಾವ್ ಮೊಹಿತೆಯ ಮೂಲಕ ವ್ಯರ್ಥ ಪ್ರಯತ್ನ ಮಾಡಿದ್ದನು. ಬೆಂಗಳೂರಿನಲ್ಲಿದ್ದ ಟಿಪ್ಪುವಿಗೆ ಅವನ ಪತ್ರ ಬರೆದು ಧಾರವಾಡ ಪ್ರಾಂತ್ಯ ಕಿತ್ತೂರಕರ್ ದೇಸಾಯಿಯವರಿಂದ ಬೆದರಿಕೆ ಹಾಕಲ್ಪಟ್ಟಿತು. ಹಾಗೂ ಟಿಪ್ಪು ತನ್ನ ಸೈನ್ಯ ಕಳಿಸಿಕೊಡದಿದ್ದರೆ ಸಂಪೂರ್ಣ ಪ್ರದೇಶವು ವೈರಿಗಳಿಂದ ಧ್ವಂಸಮಾಡಲ್ಪಡುತ್ತೆಂದು ತಿಳಿಸಿದ್ದನು. ಮೊಹಿತೆಯಿಂದ ಎರಡು-ಮೂರು ಪತ್ರಗಳನ್ನು ಪಡೆದ ಪರಿಣಾಮವಾಗಿ ತುಂಗಭದ್ರಾ ದಂಡೆಯಲ್ಲಿ ಠಾಣೆ ಹೂಡಿದ್ದ ತನ್ನ ಸೈನ್ಯಕ್ಕೆ ಕಿತ್ತೂರನ್ನು ವಶಪಡಿಸಿಕೊಳ್ಳಲು ಹಾಗೂ ಕಿತ್ತೂರು ಕೋಟೆಯ ಮೇಲೆ ಆಕ್ರಮಣ ಮಾಡಿ ಅಲ್ಲಿಯ ಭಂಡಾರವನ್ನು ಧಾರವಾಡಕ್ಕೆ ಕೊಂಡೊಯ್ಯಲು ಟಿಪ್ಪುವು ಆಜ್ಞಾಪಿಸಿದನು. ಅದರಂತೆ ಶೀಘ್ರವಾಗಿ ಅಲ್ಲಿಯ ಸೈನಿಕರ ದಂಡು ಕಿತ್ತೂರ ಕಡೆಗೆ ಪ್ರಯಾಣ ಮಾಡಿತು.

ಇದಕ್ಕೆ ಉತ್ತರವಾಗಿ ಮರಾಠರು ಯುದ್ಧಕ್ಕಾಗಿ ಸನ್ನದ್ಧರಾದರು. ಸುಮಾರು ೧೦,೦೦೦ ಕಾಲ್ದಳ, ೧,೦೦೦ ಅಶ್ವದಳ, ೨ ಬಂದೂಕುಗಳನ್ನು ನಿರ್ವಹಿಸಲು ಸಮರ್ಥರಾದರು. ಇದರಲ್ಲಿ ಕಿತ್ತೂರಿನ ರಾಮಪ್ಪ ಹಾಗೂ ರುದ್ರಪ್ಪರ ಕೊಡುಗೆ ಮಹತ್ವದ್ದಾಗಿದೆ. ಇವರ ೪,೫೦೦ ಸೈನಿಕರು, ೨೦೦೦-೩೦೦೦ ಕುದುರೆಗಳು, ೨ ಬಂದೂಕುಗಳನ್ನು ಹೊಂದಿದ್ದವು.

ಮರಾಠರನ್ನು ಮೊದಲು ಎದುರಿಸಿದ ಪಹಾರೆಯನ್ನು ಮೊಹಿತೆಯವರು ಅಧಿಪತ್ಯ ವಹಿಸಿ ಕೊಂಡಿದ್ದನು. ಆದರೆ ಹೋರಾಟದಲ್ಲಿ ಮೊಹಿತೆಯು ತೇಗೂರವರೆಗೆ ಹಿಮ್ಮಟ್ಟಲ್ಪಟ್ಟನು. ಅವನ ೩೦ ಜನರು ಕೊಲ್ಲಲ್ಪಟ್ಟರು, ಮರಾಠರ ಪಕ್ಷದಲ್ಲಿ ೫ ಜನ ಸತ್ತು, ಒಂದು ಕುದುರೆಯು ಸಾವನ್ನಪ್ಪಿತು. ದಾರಿಯಲ್ಲಿರುವ ಮೇಟ್ಯಾಳ ಎಂಬ ಸಣ್ಣ ಹಳ್ಳಿಯನ್ನ ಟಿಪ್ಪುವಿನ ಸೈನ್ಯವು ಸುಲಿಗೆ ಮಾಡಿತು. ಆದರೆ ಮರಾಠ ಸೈನ್ಯ ಶೀಗಿಹಳ್ಳಿಯಲ್ಲಿ ಟಿಪ್ಪುವಿನ ಸೈನ್ಯದೊಂದಿಗೆ ಕಾದಾಡಿ, ೯ ಜನರನ್ನು ಕೊಂದು, ಎರಡು ಕುದುರೆಗಳನ್ನು ಸಾಯಿಸಿದರು. ಆಗ ೩೫ ಜನರು, ೭ ಕುದುರೆ ಗಳು ಗಾಯಗೊಂಡವು. ಮರಾಠರ ಯಶಸ್ಸಿನಿಂದ ಭಯಬೀತರಾದ ನರೇಂದ್ರದಲ್ಲಿದ್ದ ಟಿಪ್ಪುವಿನ ಸೈನ್ಯ ದಕ್ಷಿಣದ ಕಡೆಗೆ (ಧಾರವಾಡ) ಸರಿಯಿತು. ಮೊಹಿತೆಯ ಪಡೆಗಳು ತೇಗೂರು ಮತ್ತು ಸಿಂಗನಹಳ್ಳಿಯ ಮಧ್ಯದಲ್ಲಿ ವಾಸ್ತವ್ಯ ಹೂಡಿದರು.

ಮರಾಠರು ಕಷ್ಟಪರಿಸ್ಥಿತಿಯನ್ನು ಎದುರಿಸಬೇಕಾಯಿತು, ವಸ್ತುಗಳ ಬೆಲೆಯೇರಿದ್ದವು, ಮಾರಾಟಕ್ಕೆ ತಂದ ಆಹಾರ ಧಾನ್ಯಗಳ ಮೇಲೆ ಆಯಾತ ಸುಂಕ ಬಲವಂತವಾಗಿ ಕಟ್ಟಬೇಕು, ಈಗ ರೂಪಾಯಿಗೆ ೧೦ ಸೇರಿನಂತೆ ಆಹಾರ ಧಾನ್ಯಗಳು ಮಾರಲ್ಪಡುತ್ತಿದ್ದವು. ೨-೪ ಸರಾಫಿ ಅಂಗಡಿ ಗಳು ಹಾಗೂ ೧೦-೧೨ ಕಿರಾಣಿ ಅಂಗಡಿಗಳು ಸ್ಥಾಪಿಸಲ್ಪಟ್ಟಿತ್ತು. ಸ್ಥಳೀಯ ಜನರಿಗೆ ತೊಂದರೆ ಯಾಗಿದ್ದ ಮೊಹಿತೆಯನ್ನು ವಾಪಸ್ಸು ಕರೆಯಿಸಿಕೊಳ್ಳಲು ನಾನಾಫಡ್ನಿಸನು ಟಿಪ್ಪುವಿಗೆ ಮನವಿ ಮಾಡಲು ಸಲಹೆ ನೀಡಲಾಯಿತು.

೧೭೯೨-೯೩ರಲ್ಲಿ ಕಿತ್ತೂರಿನ ಮಾಮ್ಲತುದಾರನಾದ ಅಬಾಜಿ ಬಾಬುರಾವ್‌ನು ಅಧಿಕಾರ ದಲ್ಲಿದ್ದನು. ಇವನಿಗೆ ರೇಶನ್ ನೀಡಲು ಇಂತಿಷ್ಟೆಂದು ನಿರ್ಧರಿಸಲಾಗಿತ್ತು ಮತ್ತು ೨೫,೦೦೦ ರೂಪಾಯಿ ಮೊತ್ತದ ಹೆಚ್ಚಿನ ರೇಶನ್ ಅವರಿಂದ ಪಡೆದುಕೊಳ್ಳಬೇಕೆಂದು ಗೊತ್ತು ಪಡಿಸಲಾಗಿತ್ತು. ಒಂದು ತಾಳೆಬಂದಿಯ ಪ್ರಕಾರ ಕಿತ್ತೂರು ಸಂಸ್ಥಾನವು ಮರಾಠರ ಆಡಳಿತದಲ್ಲಿ ಇದ್ದದ್ದು ಹೀಗಿದೆ. ೧೭೯೩ರಲ್ಲಿ ಅದೊಂದು ಸ್ವತಂತ್ರ ಸಂಸ್ಥಾನವಾಗಿರಲಿಲ್ಲ, ಪೇಶ್ವೆಯರ ಸಲುವಾಗಿ ಅಬಾಜಿ ಬಾಬುರಾವ್ ಕಿತ್ತೂರು ಸಂಸ್ಥಾನದ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಅವರ ವೇಳೆಯಲ್ಲಿ ಕಿತ್ತೂರಿನ ೨೮೫ ಹಳ್ಳಿಗಳನ್ನು, ೧೪ ಕರಿಯಾತ್‌ಗಳನ್ನು ಹಾಗೂ ೧ ಕಸಬಾಗಳನ್ನಾಗಿ ವಿಂಗಡಿಸ ಲಾಗಿತ್ತು. ಹುಬ್ಬಳ್ಳಿ 'ಕಸಬಾ' ಆಗಿದ್ದು, ಇದರಲ್ಲಿ ಯಾವ ಹಳ್ಳಿಗಳನ್ನು ಸೇರಿಸಲಾಗಿರಲಿಲ್ಲ. ೨೮೫ ಹಳ್ಳಿಗಳ ಪೈಕಿ ೧೧ ಹಳ್ಳಿಗಳಿಗೆ ಇನಾಮು, ೨೨ ಹಳ್ಳಿಗಳಿಗೆ ಸರಂಜಾಮು, ೨ ಹಳ್ಳಿಗಳಿಗೆ ಕಮಾವಿಸ್, ೧೧ ಹಳ್ಳಿಗಳಿಗೆ ದುಮಾಲೆ ಮಂಜೂರು ಮಾಡಲಾಗಿತ್ತು. ಭೀಮಾಜಿ ಬಾಬುರಾವ್‌ರವರ ಬಳಿ ೪೪ ಹಳ್ಳಿಗಳು ಭಿಷ್ಟಪ್ಪ ದೇಸಾಯಿಯ ವಶದಲ್ಲಿದ್ದವು. ಕೇವಲ

೧೧ ದುಮಾಲೆ ಹಳ್ಳಿಗಳು ಮಲ್ಲಸರ್ಜನ ದೇಸಾಯಿ ಬಳಿಯಿದ್ದುದು ಮಹತ್ವದ ವಿಷಯವಾಗಿದೆ. ಇವುಗಳಲ್ಲಿ ಕಾದರವಳ್ಳಿ ಕರಿಯಾತನಿಂದ ೨, ಪುಟ್ಟಗಾಂವ ಕರಿಯಾತ್‌ನಿಂದ ೪, ಒಂದೊಂದು ಬೆಳವಡಿ, ಸಂಪಗಾಂವ, ನೇಸರ್ಗಿ, ಕಕ್ಕೋರಿ ಹಾಗೂ ಅಮರಘಟ್ಟೆಯಿಂದ ಕರಿಯಾತಿನಿಂದ ಸೇರಿದ್ದವು. ೧೭೬೩ರಲ್ಲಿ ಮರಾಠರ ಆಡಳಿತದಲ್ಲಿದ್ದ ಕಿತ್ತೂರು ಸಂಸ್ಥಾನದ ವಾರ್ಷಿಕ ಒಟ್ಟು ಆದಾಯವು ೪,೧೦,೭೮೬,೮೦ ಆಗಿತ್ತು.

ಶ್ರಾವಣಮಾಸದ ೫ರಂದು ದೇಸಾಯಿಯು ವಕ್ಕುಂದದಲ್ಲಿದ್ದನು, ೧೨ ಮೈಲಿ ದೂರದಲ್ಲಿರುವ ಕಿತ್ತೂರಿನಿಂದ ಹಾಗೂ ೨ ಮೈಲಿ ವಕ್ಕುಂದದಿಂದ ದೂರದಲ್ಲಿರುವ ಭೆಹರಿಯು ಗಸ್ತಿಗಾಗಿ ಸೈನ್ಯದೊಂದಿಗೆ ಹೋದನು. ಅವರು ಅಲ್ಲಿ ಮುಟ್ಟುವದರೊಳಗೆ ಮಧ್ಯಾಹ್ನವಾಗಿತ್ತು. ಇದರ ಮೊದಲೇ ಹೋದ ಮರಾಠ ಸೈನ್ಯವನ್ನ ೧೦೦ ಕುದುರೆ, ೧೦೦೦ ಕಾಲ್ದಳದ ಸೈನ್ಯವನ್ನು ದೇಸಾಯಿಯು ಹಿಂದಕ್ಕೋಡಿಸಿದನು. ಇದನ್ನರಿತ ಗೋಖಲೆ ಮತ್ತಿತ್ತರ ಸೈನ್ಯಕ್ಕೆ ಸ್ವಲ್ಪ ಹಾನಿಯುಂಟಾಗಿ, ಮಲ್ಲಸರ್ಜನ ದೇಸಾಯಿಯ ಸೈನ್ಯವನ್ನು ಎದುರಿಸಿತು. ಮರಾಠರ ಪಕ್ಷದಲ್ಲಿ ೪ ಜನ ಜನರಲ್ ಇದ್ದರು. ಇವರಲ್ಲಿ ಇಬ್ಬರೆಂದರೆ ಗೋಖಲೆ ಮತ್ತು ರಾಸ್ತೆಯಾಗಿದ್ದರು.[೨೦]

ಹಲಸಿಯ ಮೇಲೆ ಆಕ್ರಮಣ ಮಾಡಲು ಸುಮಾರು ೩೦೦೦ ಗರಡಿಗಳು ಹಾಗೂ ಇತರ ಸೈನ್ಯದ ಜೊತೆಗೆ ಜಿಲಾಕಾದ (ಉರ್ದು ತಿಂಗಳು) ೧೫ರ ಬೆಳಗಿನ ಜಾವ ಬೆಹರೆಯವರು ಹೊರಟರು. ಮರಾಠ ಸೈನ್ಯವನ್ನು ಹರಡುತ್ತ ಪಶ್ಚಿಮ ತುಕುಡಿಯನ್ನು ರಾಸ್ತೆಗೆ, ಪೂರ್ವ ತುಕುಡಿಯನ್ನು ಬರಮತಿಕರ ಮತ್ತು ಲಕ್ಷ್ಮಣಸಿಂಗನಿಗೆ ವಹಿಸಲಾಯಿತು. ಹನುಮಂತಗಡದಿಂದ ಬಲವರ್ಧಿತವಾದ ಸೈನ್ಯದೊಳಗೆ ಪ್ರವೇಶ ಮಾಡಬಾರದೆಂದು ಸಲಹೆ ಕೊಟ್ಟನು. ಇತರ ಗರಡಿಗಳು ಮತ್ತು ಅಶ್ವಧಳದವರು ದಕ್ಷಿಣದಿಂದ ಆಕ್ರಮಿಸುವುದಾಗಿತ್ತು. ನೇತೃತ್ವ ವಹಿಸಿಕೊಂಡ ದೋಂಡುಪಂಥ ಗೋಖಲೆ ರಾತ್ರಿಯ ಹೊತ್ತಿಗೆ ಆಕ್ರಮಣ ಮಾಡಿದನು. ಬೆಹರಿಯು ಹೊರಗಡೆಗೆ ಅಶ್ವಧಳದೊಂದಿಗೆ ದಾರಿ ಕಾಯುತ್ತಿದ್ದನು. ರಾಸ್ತೆಯ ಕಡೆಯಿಂದ ಬಲವರ್ಧಿತ ಸೈನ್ಯವು ಹನುಮಂತಗಡದಿಂದ ಹಳ್ಳಿಯ ಕಡೆಗೆ ಬರುವುದನ್ನು ಗಮನಿಸಿ, ರಾಸ್ತೆಗೆ ಎರಡು ಬಾರಿ ಸಲಹೆ ನೀಡಿ ಹನುಮಂತಗಡದಿಂದ ಬರುವ ಸೈನ್ಯವನ್ನು ತಡೆಯಲು ಹೇಳಿ ಮುಂದುವರೆಯಲು ಸೂಚನೆ ಕೊಡಲಾಯಿತು. ಆದರೆ ಯಾವುದೇ ಪ್ರಯೋಜನವಾಗಲಿಲ್ಲ. ತನ್ನ ಕುದುರೆಯನ್ನು ಕಳೆದುಕೊಳ್ಳುತ್ತೇನೆಂದು ರಾಸ್ತೆಯು ನಿರಾಕರಿಸಿದನು. ಪರಿಣಾಮವಾಗಿ ಹಲಸಿಯ ವೈರಿಯ ಬಲ ೧,೫೦೦ಕ್ಕೆ ಏರಿತು. ಮರಾಠರು ಮೂರು ಬಾರಿ ಆಕ್ರಮಣ ಮಾಡಿದರೂ ಯಾವುದೇ ಪರಿಣಾಮ ಬೀರಲಿಲ್ಲ.

ಮೊದಲ ಆಕ್ರಮಣದಲ್ಲಿ ಹಲಸಿ ಹಳ್ಳಿಯ ಅಗಸಿ ಬಾಗಿಲಲ್ಲಿ ವೈರಿಗಳೊಂದಿಗೆ ಹೋರಾಟ ಮಾಡಿ ಗರಡಿಯವರು ಹಾನಿ ಅನುಭವಿಸಬೇಕಾಯಿತು. ನಂತರ ವೈರಿಗಳಿಂದ ಹೆಬ್ಬಾಗಿಲು ಪೂರ್ಣವಾಗಿ ಮುಚ್ಚಲ್ಪಟ್ಟಿತು. ಗೋಖಲೆಯು ಹಲಸಿ ಪೇಟೆಯ ಮೂಲಕ ಮುನ್ನುಗ್ಗುತ್ತಾ, ಹೆಬ್ಬಾಗಿಲಿಗೆ ಗುಂಡು ಹಾರಿಸಿದನು. ಕದನ ಪ್ರಾರಂಭವಾಯಿತು. ಇದಲ್ಲದೆ ೨೫ ಗರಡಿಗಳು ಮತ್ತು ಬಾರ್‌ಗೀರರು ಕೊಲ್ಲಲ್ಪಟ್ಟು. ಸುಮಾರು ೧೦೦-೧೨೫ ಮರಾಠ ಪಡೆಯ ಸೈನಿಕರು

ಗಾಯಗೊಂಡರು. ಮಧ್ಯಾಹ್ನ ೩ ಗಂಟೆಯವರೆಗೆ ಅಲ್ಲಿದ್ದುಕೊಂಡು ನಿಜನಕೊಡಲ್ ಕ್ಯಾಂಪಿಗೆ ಸೈನಿಕರು ವಾಪಸ್ಸು ಬಂದರು.[೨೧]

ಜಿಲಾಕಾದ (ಉರ್ದು ತಿಂಗಳು) ೧೦ನೇ ದಿನ ಹಲಸಿಯ ಸಮೀಪ ನಿಜನಕೊಡಲ್‌ಗೆ ಬಂದ ದೋಂಡೋಪಂಥ ಗೋಖಲೆಯವರ ಅಶ್ವಧಳವು ಅಲ್ಲಿಂದ ಹನುಮಂತಗಡಕ್ಕೆ ಹೋಯಿತು. ಅಲ್ಲಿ ಯಾರು ಇಲ್ಲದಿರುವುದನ್ನು ಕಂಡು ಹಲಸಿಗೆ ಧಾವಿಸಿದರು. ಹೆಬ್ಬಾಗಿಲನ್ನು ತೆಗೆದು ಅದಕ್ಕೆ ಬೆಂಕಿ ಇಟ್ಟರು. ಎದುರಿಗಿರುವ ಗುಡ್ಡದ ಹಿಂದೆ ದೇಸಾಯಿ ಮತ್ತು ಅವರ ಜನರು ಓಡಿಹೋಗಿರುವುದನ್ನ ತಿಳಿದು, ಮರಾಠರು ಅವರಿರುವ ಜಾಗಕ್ಕೆ ಬೆನ್ನಟ್ಟಿ ಹೋದರು.[೨೨]

೧೭೯೪ರಲ್ಲಿ ೨ನೇ ಮಾಧವರಾವ್ ಪತ್ರ ಬರೆದು ದೌಲತ್‌ರಾವ್ ಘೋರ್ಪಡೆಗೆ ಕಿತ್ತೂರು ತಾಲ್ಲೂಕಿನ ಜನರಿಗೆ ತೊಂದರೆ ಕೊಡಬಾರದೆಂದು ಎಚ್ಚರಿಕೆ ಕೊಟ್ಟನು. ನನಗುಂಡಿಕೊಪ್ಪ ಮತ್ತು ಬಿಜಗರಣಿ ಹಳ್ಳಿಗಳು ದೌಲತ್‌ರಾವ್ ಘೋರ್ಪಡೆಯ ಅಧೀನ ಗ್ರಾಮಗಳಾಗಿದ್ದವು. ಈ ಹಳ್ಳಿಗಳು ಕಿತ್ತೂರು ತಾಲ್ಲೂಕನ್ನ ವಶಪಡಿಸಿಕೊಂಡ ಟಿಪ್ಪುವಿನ ಆಧೀನದಲ್ಲಿದ್ದ ಹಳ್ಳಿಗಳಾಗಿದ್ದವು. ಮರಾಠ ಸರಕಾರದ ಆಡಳಿತದಲ್ಲಿ ಕಿತ್ತೂರು ತಾಲ್ಲೂಕು ಬಂದ ಮೇಲೆ ನನಗುಂಡಿ ಕೊಪ್ಪ ಮತ್ತು ಬಿಜಗರಣಿ ಗ್ರಾಮಗಳನ್ನ ಮುಟ್ಟುಗೋಲು ಹಾಕಿಕೊಂಡರು. ಆದರೆ ದೌಲತ್ ರಾವ್ ಹಿಂದುರಾವ್ ಘೋರ್ಪಡೆ ೧೭೯೨-೯೩ನೇ ವರ್ಷದ ಕಂದಾಯವನ್ನು ಕೊಡಲಿಲ್ಲ, ಹನುಮಂತಗಡದ ಸ್ಥಾನ ದೌಲತ್‌ರಾವ್ ಘೋರ್ಪಡೆಯ ಆಧೀನದಲ್ಲಿತ್ತು. ಅದರ ದಳಪತಿ ನಂದಗಡಕ್ಕೆ ಬಂದು ಅಲ್ಲಿಯ ಸ್ವತ್ತುಗಳನ್ನು ಹಾಗೂ ದನ-ಕರುಗಳನ್ನು ಅಪಹರಿಸಿದನು. ಈ ವರದಿಯನ್ನೆಲ್ಲ ಪಡೆದ ಮೇಲೆ ದೌಲತ್‌ರಾವ್ ಘೋರ್ಪಡೆಗೆ ಎರಡನೇ ಮಾಧವರಾವ್ ಪತ್ರ ಬರೆದು ಈ ಹಿಂದಿನ ಎರಡು ಹಳ್ಳಿಗಳ ವರ್ಷದ ಕಂದಾಯದ ಪಾವತಿ ಮಾಡುವಂತೆ ತಿಳಿಸಿದನು. ಈ ಕಂದಾಯವನ್ನು ತಪ್ಪದೇ ಕಿತ್ತೂರಿನ ಮಹಾದಜಿ ಖಂಡೇರಾವ್ ಮಾಮಲೆದಾರರಿಗೆ ಸಂದಾಯ ಮಾಡಬೇಕೆಂದು ತಿಳಿಸಿದರು. ಪೇಶ್ವೆ ಕಳಿಸಿದ ಇಬ್ಬರು ಅಧಿಕಾರಿಗಳ ಮೂಲಕ ನಂದಗಡ ರಹವಾಸಿಗಳಿಗೆ ಈ ಹಿಂದೆ ಹನುಮಂತಗಡ ಕೊಳ್ಳೆ ಹೊಡೆದ ವಸ್ತುಗಳನ್ನು, ದನ-ಕರುಗಳನ್ನು ತಿರುಗಿ ಕೊಡಲು ಸೂಚಿಸಲಾಯಿತು. ಇನ್ನು ಮುಂದೆ ಸದರಿ ತಾಲ್ಲೂಕಿನ ಜನರಿಗೆ ತೊಂದರೆ ಮಾಡಿ ಕೊಡದಂತೆ ಹೇಳಲಾಯಿತು.[೨೩]

ನಿಧಾನವಾಗಿ ದೇಸಾಯಿಯು ತನ್ನ ಸ್ವಾಮಿನಿಷ್ಠೆಯನ್ನು ಬದಲಾಯಿಸಿದನು. ೧೮೦೨ರಲ್ಲಿ ದೇಸಾಯಿಯು ಪ್ರತಿವರ್ಷ ಪೇಶ್ವೆಗಳಿಗೆ ೬೦,೦೦೦-೭೦,೦೦೦ ರೂಪಾಯಿ ಕೊಡಲೇ ಬೇಕಾಯಿತು. ಅದೇ ವರ್ಷ ಜನರಲ್ ವೆಲ್ಲಸ್ಲಿ ಶ್ರೀರಂಗಪಟ್ಟಣದಿಂದ ಪುಣೆಗೆ ಬಾಜಿರಾವ್ ಪೇಶ್ವೆಯನ್ನ ಪುನಃ ಪಟ್ಟದ ಮೇಲೆ ಕೂಡಿಸಲು ಹೋಗುವಾಗ ಕಿತ್ತೂರಿನ ದೇಸಾಯಿ ಹಾಗೂ ಇನ್ನುಳಿದವರನ್ನ ಸೇರಿದಂತೆ ೧೦೦ ಕುದುರೆ ಹಾಗೂ ೧೦೦ ಕಾಲ್ದಳಗಳ ಸೈನಿಕರನ್ನು ಆಂಗ್ಲರ ಪರವಾಗಿ ಕಾದಾಡಲು ಕಾಣಿಕೆ ನೀಡಿದನು. ಸಂಗೊಳ್ಳಿಯ ಸಣ್ಣ ಕೋಟೆಯನ್ನು ಮುಕ್ತಮಾಡಿ, ಸಂಪರ್ಕಕ್ಕಾಗಿ ನೀಡಲಾಯಿತು.

ಈ ಸ್ವಾಮಿನಿಷ್ಠೆ ಪ್ರತಿಫಲವಾಗಿ ಮಲ್ಲಸರ್ಜನ ದೇಸಾಯಿಯು ತನ್ನ ಸ್ವತ್ತನ್ನು ಉಪಭೋಗಿಸಲು ಅವಕಾಶ ಮಾಡಿಕೊಟ್ಟರು.[೨೪]

ಮೋಡಿ ಲಿಪಿಯಲ್ಲಿರುವ ದಾಖಲೆಯ ಅನ್ವಯ ೨೨ ಜುಲೈ ೧೮೧೪ರಲ್ಲಿ ಮಾಮಲೆ, ಹುಬ್ಬಳ್ಳಿ ಮತ್ತು ಇತರೆ ಮಹಲುಗಳು (ಕಿತ್ತೂರು ದೇಶಗತಿಗಳು) ಸೇರಿದಂತೆ ಕಿತ್ತೂರು ತಾಲ್ಲೂಕಿನ ಆಡಳಿತವನ್ನು ಪೇಶ್ವೆ ಸರಕಾರವು ಮಲ್ಲಪ್ಪ ವೀರಪ್ಪಗೌಡ ಪ್ರತಾಪ್‌ರಾವ್ ಬಹದ್ದೂರ್ ಸರ್ ದೇಸಾಯಿ ಕಿತ್ತೂರು ಇವರಿಗೆ ಒಪ್ಪಿಲಾಗಿತ್ತು. 'ಅಂತಸ್ಥ' ಹಣದಲ್ಲಿ ಮೊದಲೇ ನಿರ್ಣಯಿಸಿದಂತೆ ಹಳೆ ಸಿಕ್ಕಾ (ಶೀಲು) ನಮೂನೆಯ ರೂ. ೪೨,೦೦೦, ಜುಲೈ ೮, ೧೮೧೪ರಂದು ಶುಕ್ರವಾರ ಸರಕಾರಿ ಖಜಾನೆಯಲ್ಲಿ ಸ್ವೀಕರಿಸಲ್ಪಟ್ಟಿತ್ತು. ದೇಸಾಯಿ ೧೮೦೭ ರಿಂದ ೧೮೦೮ರಲ್ಲಿ ರೂ. ೨೫,೦೦೦ ಹಾಗೂ ೧೮೦೮-೧೮೦೯ರಲ್ಲಿ ೧೭,೦೦೦ ರೂಪಾಯಿಗಳು ಮಲ್ಲಸರ್ಜನ ದೇಸಾಯಿಯು ಕೊಡಬೇಕೆಂದು ತಿಳಿಸಿಲಾಯಿತು. ಮಲ್ಲಸರ್ಜನ ದೇಸಾಯಿಗೆ ೧೮೦೭-೧೮೦೮ರ ಮೊದಲೇ ಕಿತ್ತೂರು ಸಂಸ್ಥಾನವು ಕೊಡಲ್ಪಟ್ಟಿತ್ತು.[೨೫]

೧೮೧೭-೧೮ರ ಆಂಗ್ಲ-ಮರಾಠರ ಯುದ್ಧದಲ್ಲಿ ದೇಸಾಯಿ ಸಕ್ರಿಯವಾಗಿ ಆಂಗ್ಲರಿಗೆ ಸಹಾಯ ಮಾಡಿದನು. ಬೆಳಗಾವಿಯ ವಶಪಡಿಸಿಕೊಳ್ಳುವ ಸಮಯದಲ್ಲಿ ವಸ್ತುಗಳನ್ನು ಒದಗಿಸುವ ಮೂಲಕ ಗಣನೀಯ ಸಹಾಯ ಮಾಡಿದನು. ೧೮೧೮ರಲ್ಲಿ ಈಸ್ಟ್ ಇಂಡಿಯಾ ಕಂಪನಿಯಿಂದ ಸನ್ನದ್ದನ್ನು ಪಡೆದುಕೊಳ್ಳಲಾಯಿತು ಇದರಿಂದ ಕಂಪನಿ ಸಾಮಂತ ಸಂಸ್ಥಾನವಾಯಿತು. ಅದು ೧೮೨೪ರವರೆಗೆ ಆಳ್ವಿಕೆಯನ್ನು ನಡೆಸಿ ನಂತರ ಈ ಸಂಸ್ಥಾನವು ನಶಿಸಿತು.

ಭಾರತದ ಇತಿಹಾಸದಲ್ಲಿ ಕಿತ್ತೂರಿಗೆ ತನ್ನದೇ ಆದ ಸ್ಥಾನವಿದೆ. ಆಂಗ್ಲ ಸಾಮ್ರಾಜ್ಯದ ವಿರುದ್ಧವಾಗಿ, ಸ್ವಾತಂತ್ರ್ಯ ಪತಾಕೆಯನ್ನು ಮೊತ್ತ ಮೊದಲಿಗೆ ಹಾರಿಸಿದ ಶ್ರೇಯಸ್ಸು ಈ ಪುಟ್ಟ ಕಿತ್ತೂರು ಸಂಸ್ಥಾನಕ್ಕೆ ಸಲ್ಲುತ್ತದೆ. ಕ್ರಿ.ಶ. ೧೫೮೫ರಲ್ಲಿ ಹಿರೇಮಲ್ಲಶೆಟ್ಟಿ ಮತ್ತು ಚಿಕ್ಕಮಲ್ಲ ಶೆಟ್ಟಿಯರಿಂದ ಪ್ರಾರಂಭವಾದ ಈ ಸಂಸ್ಥಾನ ಕ್ರಿ.ಶ. ೧೮೨೪ರವರೆಗೆ ೨೩೯ ವರ್ಷಗಳ ಕಾಲ ೧೨ ಜನ ದೇಸಾಯಿಯರು ಆಗಿಹೋದರು. ಐದನೆಯ ಗಾದಿಯ ಮಾಲೀಕರಾಗಿದ್ದ ಅಲ್ಲಪ್ಪ ಗೌಡರ (೧೬೬೦ ರಿಂದ ೧೬೯೧) ಅವಧಿಯಲ್ಲಿ ಕಿತ್ತೂರು ರಾಜಧಾನಿಯಾಗಿ ಪರಿವರ್ತನೆಯಾಯಿತು. ಅಲ್ಲಿಂದ ಇವರನ್ನು ಕಿತ್ತೂರು ಸಂಸ್ಥಾನದವರೆಂದು ಕರೆಯತೊಡಗಿದರು.

ಮಲೆನಾಡಿನ ಆಯಕಟ್ಟಿನ ಪ್ರದೇಶದಲ್ಲಿರುವ ಈ ಸಂಸ್ಥಾನ ಒಕ್ಕಲುತನದಲ್ಲಿ ಸಮೃದ್ಧ ಪ್ರದೇಶ. ಅರಬ್ಬೀ ಸಮುದ್ರದ ದಂಡೆಯಿಂದ ಈ ಪ್ರದೇಶವು ಕೇವಲ ನೂರಾರು ಮೈಲು ಅಂತರದಲ್ಲಿದೆ. ಮನ್ಸೂನ ಪ್ರದೇಶದ ಕಕ್ಷೆಯಲ್ಲಿ ಬರುವುದರಿಂದ ಇದು ಧಾನ್ಯದ ಕಣಜ. ಸಮುದ್ರ ಮಾರ್ಗವಾಗಿ ನಡೆದ ಪರದೇಶದ ವ್ಯಾಪಾರಕ್ಕೆ ಮುಖ್ಯ ಮಾರ್ಗವೂ, ಅಲ್ಲದೇ ದಕ್ಷಿಣ ಉತ್ತರ ಭಾರತಗಳ ಮಧ್ಯದ ಪ್ರಬಲ ಸ್ಥಾನ. ಅಂದಿನ ಸೈನ್ಯದ ದಾರಿ ಈ ನಾಡಿನಲ್ಲಿ ಹಾಯ್ದು ಹೋಗಿದೆ. ಕಿತ್ತೂರ ಸಂಸ್ಥಾನ ಗಡಿಸೀಮೆಯ ದೃಷ್ಟಿಯಿಂದಲೂ ಮಹತ್ವದ್ದಾಗಿತ್ತು. ಉತ್ತರಕ್ಕೆ ಪ್ರಬಲರಾದ ಮರಾಠರು, ಪಶ್ಚಿಮಕ್ಕೆ ಪೋರ್ಚುಗೀಸರು, ಪೂರ್ವಕ್ಕೆ ಮೊಗಲಾಯಿ,

ದಕ್ಷಿಣಕ್ಕೆ ಹೈದರ ಟಿಪ್ಪುಸುಲ್ತಾನ ಮುಂತಾದವರಲ್ಲದೆ, ಇನ್ನೂ ಚಿಕ್ಕ-ಪುಟ್ಟ ಸಂಸ್ಥಾನಗಳು ಈ ನಾಡಿನ ಮೇರೆಗಳಾಗಿದ್ದವು.[೨೬]

ಕಿತ್ತೂರು ಸಂಸ್ಥಾನ ಸಮಕಾಲೀನ ರಾಜಮನೆತನಗಳೊಂದಿಗೆ ಹೊಂದಿರುವ ಸಂಬಂಧಗಳನ್ನು ನಾವು ಎರಡು ರೀತಿಯಲ್ಲಿ ವಿಭಾಗಿಸಿಕೊಂಡು ಅಧ್ಯಯನ ಮಾಡಬಹುದು. ಮೊದಲನೆಯದಾಗಿ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವದರ ಮೂಲಕ ಶಾಂತಿಯುತವಾದ ಸಂಬಂಧವನ್ನು ಹೊಂದಿರುವಂತಹದ್ದು. ಎರಡನೆಯದಾಗಿ ಯುದ್ಧಕಾಲದ ಸಂಬಂಧಗಳು ಅಥವಾ ಸಂಘರ್ಷಣೆಯ ಸಂಬಂಧವೆನ್ನಬಹುದು.

ಈ ಎರಡು ರೀತಿಯಾದ ಸಂಬಂಧಗಳು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿರುವ ಮಾರ್ಗಗಳಾಗಿವೆ. ಉದಾ: ಕಲ್ಯಾಣದ ಚಾಳುಕ್ಯ ಆರನೆಯ ವಿಕ್ರಮಾದಿತ್ಯನು ವೈವಾಹಿಕ ಸಂಬಂಧಗಳ ಮೂಲಕ ಸುಮಾರು ೨೪ ಜನ ರಾಣಿಯರನ್ನು ಮದುವೆಯಾಗಿದ್ದನೆಂದು ತಿಳಿಯುತ್ತದೆ. ಹೀಗಾಗಿ ಅವನು ೫೦ ವರ್ಷಗಳ ಕಾಲ (ಕ್ರಿ.ಶ. ೧೦೭೬-೧೧೨೬ರವರೆಗೆ) ಅಧಿಕಾರದಲ್ಲಿದ್ದನು. ಅವನು ಯುದ್ಧನೀತಿಯೊಂದಿಗೆ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಂಡಿರುವುದು ಮುಖ್ಯವಾಗಿದೆ.

ಕಿತ್ತೂರಿನ ಇತಿಹಾಸವನ್ನು ಅಧ್ಯಯನ ಮಾಡುವಾಗ ಎರಡೂ ರೀತಿಯ ಸಂಬಂಧಗಳಿರುವುದು ತಿಳಿದುಬರುತ್ತದೆ. ಕಿತ್ತೂರು ಸಂಸ್ಥಾನದವರು ಕಾಕತಿ ಮತ್ತು ತಲ್ಲೂರು ದೇಸಗತಿ ಮನೆತನಗಳೊಂದಿಗೆ ವೈವಾಹಿಕ ಸಂಬಂಧವನ್ನು ಏರ್ಪಡಿಸಿಕೊಂಡಿದ್ದರು.

ಮಲ್ಲಸರ್ಜನ (೧೭೮೨-೧೮೧೬) ಕಿತ್ತೂರನ್ನು ಆಳಿದ ೧೨ ಜನ ದೇಸಾಯಿಯರಲ್ಲಿ ಅತ್ಯಂತ ಪ್ರಮುಖನಾದವನು. ಇವನ ಮೊದಲನೆಯ ಪಟ್ಟದ ರಾಣಿ ರುದ್ರಮ್ಮ ತಲ್ಲೂರ ದೇಸಾಯಿ ಮನೆತನದ ಹೆಣ್ಣು ಮಗಳು.[೨೭] ಟಿಪ್ಪುಸುಲ್ತಾನನ್ನು ದೇಶನೂರನ್ನು ಮುತ್ತಿಗೆ ಹಾಕಿದಾಗ ಹೋರಾಟದಲ್ಲಿ ಅವಳು ಭಾಗವಹಿಸಿದ್ದಳೆಂಬ ಪ್ರತೀತಿಯಿದೆ. ತಲ್ಲೂರಿನಲ್ಲಿಯೇ ಶಿಕ್ಷಣವನ್ನು ಪಡೆದಿದ್ದ ರುದ್ರಮ್ಮ ಮಲ್ಲಸರ್ಜನನಿಗೆ ಆಡಳಿತಾತ್ಮಕ ಪತ್ರ ವ್ಯವಹಾರದಲ್ಲಿ ಸಹಾಯ ಮಡುತ್ತಿದ್ದಳು. ಟಿಪ್ಪುಸುಲ್ತಾನನಿಗೆ ಬರೆದ ಬಹುಸಂಖ್ಯೆಯ ಪತ್ರಗಳನ್ನು ರುದ್ರಮ್ಮಳೇ ಬರೆದಿರುವ ಸಾಧ್ಯತೆಯಿದೆ. ಇವಳು ಸಂಗೊಳ್ಳಿಯಲ್ಲಿ ಅರಮನೆ ಕಟ್ಟಿಸಿ ಅಲ್ಲೇ ವಾಸಮಾಡಿದಳು. ಮಲಪ್ರಭೆಯ ದಂಡೆಯಲ್ಲಿದ್ದ ಆ ಅರಮನೆಯಲ್ಲಿ ಧಾರ್ಮಿಕ ವಿಧಿ-ವಿಧಾನಗಳ ಪೂಜೆ ಮಾಡುತ್ತಿದ್ದಳು. ಈಗಲೂ ತಲ್ಲೂರಿನಲ್ಲಿ ರುದ್ರಮ್ಮಳ ವಂಶಸ್ಥರಿದ್ದು, ಅದೇ ವಾಡೆಯಲ್ಲಿ ವಾಸವಾಗಿದ್ದಾರೆ.

ಮಲ್ಲಸರ್ಜನ ಎರಡನೆಯ ರಾಣಿ ಚೆನ್ನಮ್ಮ ಕಾಗತಿಯ ಧೂಳಪ್ಪ ದೇಸಾಯಿಯ ಮತ್ತು ಪದ್ಮಾವತಿಯರ ಏಕೈಕ ಪುತ್ರಿ, ಜನಿಸಿದ್ದು ೧೭೭೮ರಲ್ಲಿ, ಕಾಗತಿ ಬೆಳಗಾಂವಿಯಿಂದ ೧೦ ಕಿ.ಮೀ ದೂರದಲ್ಲಿ ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡ ಈ ನಾಡನ್ನು ಕಾಗತಿಯ ಬಾಡ ಎಂದು ಕರೆಯುತ್ತಿದ್ದರು. ಚೆನ್ನಮ್ಮ ಹುಟ್ಟಿದ ವಾಡೆ ಮೊನ್ನೆ-ಮೊನ್ನೆಯವರೆಗೂ ಕಾಗತಿ

ಯಲ್ಲಿತ್ತು. ಇತ್ತೀಚಿಗೆ ಅದರ ಕಿಟಕಿ ಬಾಗಿಲುಗಳನ್ನು ಕಿತ್ತು ಹಾಕಿ ಅದನ್ನು ಹಾಳುಗೆಡವಲಾಗಿದೆ.[೨೮] ಧೂಳಪ್ಪಗೌಡ ದೇಸಾಯಿ ಒಬ್ಬ ಸಮರ್ಥ ಆಡಳಿತಗಾರನಾಗಿದ್ದನು. ಅಂತೆಯೇ ಮಲ್ಲಸರ್ಜನ ದೊರೆಯು ರಾಜತಾಂತ್ರಿಕ ಸಹಾಯ ಕೇಳಲು ಕಾಕತಿಗೆ ಹೋಗಿದ್ದನು. ಅಲ್ಲಿ ಚೆನ್ನಮ್ಮಳನ್ನು ನೋಡಿ ಆಕರ್ಷಿತನಾಗಿ ತನ್ನ ಮನದ ಇಚ್ಛೆಯನ್ನು ಧೂಳಪ್ಪಗೌಡನೊಂದಿಗೆ ಹೇಳಿದಾಗ ಅವರು ಒಪ್ಪಿ ಚೆನ್ನಮ್ಮಳನ್ನು ಮಲ್ಲಸರ್ಜನಿಗೆ ಧಾರೆಯರೆದು ಕೊಟ್ಟರು.

"ಕಿತ್ತೂರ ಚೆನ್ನಮ್ಮ ಸುತ್ತೂರು ಒಡತ್ಯಾಗಿ
ಕತ್ತಿ ಕವಚಗಳ ಉಡುಪಟ್ಟೊ ಅಬ್ಬರದಿ
ಒತ್ತಲಗುದುರಿಯ ಬಿಡಿದಾಳ ||"

ಈ ಪದ್ಯ ಅವಳ ಶೌರ್ಯವನ್ನು ಬಿಂಬಿಸುತ್ತದೆ. ಈಜುವುದು, ಗಂಡು ವೇಷಧರಿಸಿ ಭೇಟಿಯಾಡುವುದು ಅವಳಿಗೆ ಎಲ್ಲಿಲ್ಲದ ಸಂತೋಷ. ಅವಳು ಕನ್ನಡವಲ್ಲದೆ, ಉರ್ದು, ಮರಾಠಿ ಭಾಷೆಗಳನ್ನು ಅರಿತಿದ್ದಳು.[೨೯] ಮುಂದೆ ಅಧಿಕಾರಕ್ಕೆ ಬಂದ ಶಿವಲಿಂಗರುದ್ರಸರ್ಜನಿಗೆ ಆಡಳಿತದಲ್ಲಿ ಸಲಹೆ ಸೂಚನೆ ನೀಡುವ ಹೊಣೆ ಚೆನ್ನಮ್ಮಳದಾಗಿತ್ತು. ಕಾಗತಿಯ ಚೆನ್ನಮ್ಮ ಮನೆತನದವರು ಈಗಲೂ ಕಾಗತಿಯಲ್ಲಿಯೇ ಇದ್ದಾರೆ. ಆದರೆ ಅವರ ವಾಡೆ ಮಾತ್ರ ಸಂಪೂರ್ಣ ಹಾಳಾಗಿದೆ. ಹೀಗೆ ತಲ್ಲೂರ ಮತ್ತು ಕಾಗತಿಯ ದೇಸಾಯಿ ಮನೆತನದೊಂದಿಗೆ ವೈವಾಹಿಕ ಸಂಬಂಧವಿದೆ.

೩.೨. ಕಿತ್ತೂರು ಮತ್ತು ವಿಜಾಪುರದ ಸಂಬಂಧ

ಕಿತ್ತೂರ ಸಂಸ್ಥಾನದ ಇತಿಹಾಸವು ಕ್ರಿ.ಶ. ೧೫೮೫ರಿಂದ ಪ್ರಾರಂಭವಾಗುತ್ತದೆ. ಈ ಸಂಸ್ಥಾನದ ಮೂಲಪುರುಷರು ಸಾಗರದ ಇಬ್ಬರು ಸಹೋದರರು, ಹಿರೇಮಲ್ಲಶೆಟ್ಟಿ ಮತ್ತು ಚಿಕ್ಕಮಲ್ಲಶೆಟ್ಟಿ ವೀರಶೈವ ಧರ್ಮದವರಾಗಿದ್ದರು. ಸಾಗರವು ಮೊದಲು ಮೈಸೂರು ಸಂಸ್ಥಾನಕ್ಕೆ ಸೇರಿತ್ತು. ಇವರು ಬೆಳಗಾಂವಿಯಲ್ಲಿರುವ ವಿಜಾಪುರದ ಸಾಮಂತ ಅಸದ್‌ಖಾನನಿಗೆ ಕಲ್ಲುಗಳನ್ನು ಪೂರೈಸುತ್ತಿದ್ದರು. ಈ ಕಾರಣದಿಂದ ಇವರಿಗೆ ಜನರು 'ಶೆಟ್ಟರು' ಎಂದು ಗೌರವ ಸೂಚಕವಾಗಿ ಕರೆಯುತ್ತಿದ್ದರು.[೩೦] ಇದನ್ನೆ ಸಮಕಾಲೀನ ಕವಿ 'ಮಾಗುಂಡಿ ಬಸವ' ತನ್ನ ಪದದಲ್ಲಿ ಹೀಗೆ ದಾಖಲಿಸಿದ್ದಾನೆ.

ಬಣಜಿಗ ಮಲ್ಲಣ್ಣ ಜನದಾಗ ಕಣಿಯಾದ
ಕುಣಿಸಿ ಲಕ್ಕುಸಮಿನಾಡಾಗ
ಕುನಿಸಿ ಲಕ್ಕುಸಮಿ ನಾಡಾಗ ಕಿತ್ತೂರ
ಕಣಜಾತು ಮುತ್ತು ಮಾಣಿಕದ

ನಂತರ ಇವರು ವಿಜಾಪುರದ ಸುಲ್ತಾನರಲ್ಲಿ ಸುಲ್ತಾನರಲ್ಲಿ ಸೈನಿಕರಾಗಿ ಸೇರಿಕೊಂಡರು. ಸುಲ್ತಾನರ ಯುದ್ಧಗಳಲ್ಲಿ ಈ ಸಹೋದರರು ವೀರತ್ವ ತೋರಿಸಿದ್ದರಿಂದ ಸುಲ್ತಾನರು ಹುಬ್ಬಳ್ಳಿ ಪ್ರದೇಶವನ್ನು ಅವರಿಗೆ ಜಹಗೀರಾಗಿ ಕೊಟ್ಟರು. ಅಲ್ಲದೆ 'ಶಮಶೇರ ಜಂಗ ಬಹಾದ್ದೂರ' ಎಂಬ ಬಿರುದನ್ನು ಈ ಸಹೋದರರು ಪಡೆದುಕೊಂಡರು.[೩೧] ಹಿರೇಮಲ್ಲಶೆಟ್ಟಿ ಮತ್ತು ಚಿಕ್ಕಮಲ್ಲಶೆಟ್ಟಿ ನರಸೋಟ ದಾವಡೆಯಿಂದ ಈ ಪ್ರದೇಶದ ಒಡೆತನವನ್ನು ಹಸ್ತಾಂತರಸಿಕೊಂಡು ಮುಗಟಖಾನ ಹುಬ್ಬಳ್ಳಿಯನ್ನು

ರಾಜಧಾನಿಯಾಗಿ ಮಾಡಿಕೊಂಡು ರಾಜ್ಯ ಸ್ಥಾಪನೆ ಮಾಡಿದರು.[೩೨] ವಿಜಾಪುರ ಸುಲ್ತಾನರ ಪತನದ ನಂತರ ಇವರು ಸವಣೂರ ನವಾಬರ ಸಾಮಂತನಾಗಿ ಆಡಳಿತ ನಡೆಸಲು ಪ್ರಾರಂಭಿಸಿದರು.[೩೩] ಈ ಕಾರಣದಿಂದ ಅನಿವಾರ್ಯವಾಗಿ ಇವರು ಪೇಶ್ವೆಯರಿಗೆ ಸೇವೆ ಸಲ್ಲಿಸತೊಡಗಿದರು. ಈ ಸಹೋದರು ಸಂಪಗಾಂವನ್ನು ಕೇಂದ್ರವಾಗಿಟ್ಟುಕೊಂಡು ವಾಸಿಸುತ್ತಿದ್ದರು. ಮುಂದೆ ಐದನೆಯವರಾದ ಅಲ್ಲಪ್ಪಗೌಡ ದೇಸಾಯಿಯರ ಕಾಲದಲ್ಲಿ ಸಂಪಗಾಂವದಿಂದ ಕೇಂದ್ರವನ್ನು ಕಿತ್ತೂರಿಗೆ ಸ್ಥಳಾಂತರಿಸಿದರು.

ಅಲ್ಲಪ್ಪಗೌಡನ ಆಡಳಿತ ಅವಧಿಯಲ್ಲಿ ಕಿತ್ತೂರು ಸಂಸ್ಥಾನ ವಿಸ್ತಾರತೆ ಪಡೆಯಿತು. ಸಂಪಗಾಂವ, ಬೀಡಿ, ಪರಗಾಣಗಳು ಕಿತ್ತೂರು ಸಂಸ್ಥಾನಕ್ಕೆ ಸೇರಿಕೊಂಡವು. ಇವನು ಅತ್ಯಂತ ಪರಾಕ್ರಮಶಾಲಿ ಅರಸನಾಗಿರುವುದರ ಜೊತೆಗೆ ಹೋರಾಟ ಪ್ರಿಯನಾಗಿದ್ದನು. ಈ ಸಂಸ್ಥಾನದ ಸ್ಥಾಪನೆಗೆ ಕಾರಣಿಭೂತರಾಗಿದ್ದ ವಿಜಾಪುರದ ಆದಿಲ್‌ಶಾಹಿಗಳ ಜೊತೆಗೆ ಅಲ್ಲಪ್ಪಗೌಡನು ತನ್ನ ದೇಶಗತಿಯ ಅಸ್ತಿತ್ವವನ್ನು ಕಾಪಾಡಿಕೊಳ್ಳುವುದಕ್ಕಾಗಿ ಅವರೊಡನೆಯೇ ಯುದ್ಧ ಮಾಡಬೇಕಾದ ಪ್ರಸಂಗ ಎದುರಾದುದು ರಾಜಕೀಯದಲ್ಲಿ ಯಾವುದೂ ಸ್ಥಿರವಲ್ಲವೆಂಬುದಕ್ಕೆ ಸಾಕ್ಷಿಯಾಗಿದೆ. ಅಲ್ಲಪ್ಪಗೌಡ ಅವರೊಡನೆ ಸ್ವಂತಃ ಹೋರಾಟ ನಡೆಸಿ ಜಯಸಂಪಾದಿಸಿದ್ದಾನೆ.[೩೪] ಕ್ರಿ.ಶ. ೧೭೭೬ ರಲ್ಲಿ ಇವನನ್ನೊಳಗೊಂಡು, ಇವನ ಪತ್ನಿ ಗಿರಿಬಾಯಿ ಮತ್ತು ಮಾವ ಕೊಟ್ರಪ್ಪ ಭೀಮರಾವ ಹುದ್ದಾರ ಮತ್ತು ಅತ್ತೆ ಕುಲಬಾಯಿ ಮೊದಲಾದವರನ್ನು ಸೆರೆಹಿಡಿದ ವಿಜಾಪುರದ ಆದಿಲ್‌ಶಾಹಿಗಳು ಒಂದು ವರ್ಷ ಸೆರೆಯಲ್ಲಿಟ್ಟಿದ್ದರು. ಅನಂತರ ಯುಕ್ತಿಯಿಂದ ಬಾದಶಹನಿಂದ ಕ್ಷಮೆ ಪಡೆದು ಬಿಡುಗಡೆಗೊಂಡು ಮತ್ತೆ ಆಡಳಿತ ಮುಂದುವರಿಸಿ ಕ್ರಿ.ಶ. ೧೬೯೧ರವರೆಗೆ ರಾಜ್ಯಭಾರ ಮಾಡಿದನು.[೩೫]

ಮುದಿಮಲ್ಲಪ್ಪ ದೇಸಾಯಿ ಕ್ರಿ.ಶ. ೧೭೬೧ರಲ್ಲಿ ಅಧಿಕಾರಕ್ಕೆ ಬಂದನು. ಅಲ್ಲಪ್ಪಗೌಡ ದೇಸಾಯಿ ವಿಜಾಪುರದ ಆದಿಲ್‌ಶಾಹಿಗಳೊಡನೆ ವಿರೋಧ ಕಟ್ಟಿಕೊಂಡು ಹೋರಾಟ ನಡೆಸಿದ್ದನು. ಆದರೆ ಅವನ ನಂತರ ಬಂದ ಮುದಿಮಲ್ಲಪ್ಪ ದೇಸಾಯಿ, ಅವರೊಡನೆ ಸ್ನೇಹಹಸ್ತ ಚಾಚಿ ಅವರ ಪರವಾಗಿ ಯುದ್ಧಗಳಲ್ಲಿ ಭಾಗವಹಿಸಿ ಅವರಿಗೆ ಜಯ ಸಂಪಾದಿಸಿಕೊಟ್ಟಿದ್ದನು. ಆದರೆ ಮೊಗಲದೊರೆ ಔರಂಗಜೇಬನು ವಿಜಾಪುರದ ಆದಿಲ್‌ಶಾಹಿಗಳನ್ನು ಸೋಲಿಸಿ, ಅದನ್ನು ತನ್ನ ಸಾಮ್ರಾಜ್ಯದ ಭಾಗವನ್ನಾಗಿಸಿಕೊಂಡನು. ಈ ಸಂದರ್ಭದಲ್ಲಿ ಅಬ್ದುಲ್ ರವುಫ್‌ಖಾನನೆಂಬ ಸರದಾರ ವಿಜಾಪುರದ ವಿರುದ್ಧ ನಡೆದ ಯುದ್ಧದಲ್ಲಿ ಪ್ರಮುಖ ಪಾತ್ರವಹಿಸಿ ಔರಂಗಜೇಬನಿಗೆ ಗೆಲವು ದೊರಕಿಸಿಕೊಡುವಲ್ಲಿ ಬಹುವಾಗಿ ಶ್ರಮಿಸಿದ್ದ. ಇದರಿಂದ ಸುಪ್ರೀತಗೊಂಡ ಔರಂಗಜೇಬನು ಅವನಿಗೆ ಶಮಶೇರಜಂಗ 'ಬಹದ್ದೂರ ಮತ್ತು ದಿಲಾದರ್‌ಖಾನ್ ಬಹದ್ದೂರ, ದಿಲಾದರ ಜಂಗ' ಎಂಬ ಬಿರುದುಗಳನ್ನು ನೀಡಿ ಅವನನ್ನು ವಿಜಾಪುರ ಭಾಗದ 'ಮನ್ಸಬ್ದಾರ' ನನ್ನಾಗಿ ನೇಮಿಸಲಾಯಿತು. ಈ ಅಬ್ದುಲ್ ರವುಫಖಾನನೆ ಸವಣೂರು ನವಾಬ ಮನೆತನದ ಮೂಲಪುರುಷನಾಗಿದ್ದಾನೆ. ಈ ರಾಜಕೀಯ ಬದಲಾವಣೆಯಿಂದ ವಿಜಾಪುರದ ಆದಿಲ್‌ಶಾಹಿಗಳ ಅಧೀನದಲ್ಲಿದ್ದ ಕಿತ್ತೂರು ಸಂಸ್ಥಾನ ಸವಣೂರ ನವಾಬರ ಅಧೀನಕ್ಕೊಳಪಟ್ಟಿತು. ಕ್ರಿ.ಶ. ೧೬೯೬-೯೭ರ ಅವಧಿಯಲ್ಲಿ ಕಿತ್ತೂರಿನ

ಆರನೆಯ ದೇಸಾಯಿಯಾಗಿದ್ದ ಮುದಿಮಲ್ಲಪ್ಪನು ರವುಫಖಾನನೊಂದಿಗೆ ಒಪ್ಪಂದವನ್ನು ಮಾಡಿಕೊಂಡು ಮೊಗಲರ ಅಧಿಪತ್ಯವನ್ನು ಒಪ್ಪಿಕೊಂಡು ರಾಜ್ಯಭಾರ ಮಾಡಿದನು.[೩೬]

೩.೩. ಕಿತ್ತೂರು ಸಂಸ್ಥಾನ-ಹೈದರಾಲಿ ಮತ್ತು ಟಿಪ್ಪು ಸುಲ್ತಾನ

೧೭೬೧ರಲ್ಲಿ ಮೈಸೂರಿನಲ್ಲಿ ಹೈದರಾಲಿ ಅಧಿಕಾರವನ್ನು ಗಳಿಸಿಕೊಂಡನು. ಮುಂದೆ ೧೭೬೩ರ ಒಳಗೆ ಸುತ್ತಮುತ್ತಲಿನ ಪ್ರದೇಶಗಳನ್ನು ಜಯಿಸಿ ಪ್ರಭಲನಾದನು. ಕ್ರಿ.ಶ. ೧೭೭೪ರಲ್ಲಿ ಅವನು ಬೆಳಗಾಂವ ಜಿಲ್ಲೆಯ ಮಲಪ್ರಭಾ ನದಿಯ ದಕ್ಷಿಣ ಹಾಗೂ ವಿಜಾಪುರ ಜಿಲ್ಲೆ ಕೃಷ್ಣ ನದಿಯ ದಕ್ಷಿಣಕ್ಕಿರುವ ಎಲ್ಲಾ ಪ್ರದೇಶವನ್ನು ಪೇಶ್ವೆಯವರಿಂದ ವಶಪಡಿಸಿಕೊಂಡನು. ಆಗ ಕಿತ್ತೂರಿನ ಅಧಿಪತಿಯಾಗಿದ್ದ ವೀರಪ್ಪಗೌಡರು ಹೈದರಾಲಿಯ ಜೊತೆ ಸಂಧಾನ ನಡೆಸಿ, ಈ ಹಿಂದಿನಂತೆ ನಝುರಾಣಿ ಕೊಟ್ಟ ಕಿತ್ತೂರು ದೇಶಗತಿಯನ್ನು ಸ್ವತಂತ್ರವಾಗಿ ಇಟ್ಟುಕೊಂಡರು.[೩೭]

ಹೈದರಾಲಿ ಮರಣದ ನಂತರದಲ್ಲಿ ಕ್ರಿ.ಶ. ೧೭೮೨ರಲ್ಲಿ ಟಿಪ್ಪು ಅಧಿಕಾರವನ್ನು ಸ್ವೀಕರಿಸಿದನು. ಅದೇ ಸುಮಾರಿಗೆ ಕಿತ್ತೂರಿನಲ್ಲಿ ಮಲ್ಲಸರ್ಜನನು ಅಧಿಕಾರಕ್ಕೆ ಬಂದನು. ಟಿಪ್ಪುವಿನ ಸರದಾರ ಬದ್ರುಲ್ ಜಮಾನ್‌ಖಾನ್‌ನು ಕಿತ್ತೂರು ಸಂಸ್ಥಾನದ ಉತ್ತರ ಭಾಗದಲ್ಲಿದ್ದ ದೇಸನೂರ ಕೋಟೆಯನ್ನು ವಶಪಡಿಸಿಕೊಳ್ಳಲು ಯತ್ನಿಸಿದನು. ಆದರೆ ಮಲ್ಲಸರ್ಜನ ಹಾಗೂ ಅವನ ಸೈನಿಕರು, ಆತನನ್ನು ಎದುರಿಸಿ ಜಯಿಸಿದರು. ಆದರೆ ಸ್ವಲ್ಪ ಕಾಲದ ನಂತರ ಟಿಪ್ಪು ಸುಲ್ತಾನ ಬದ್ರುಲ್ ಜಮಾನ್ ಖಾನನೊಡನೆ ಮತ್ತೊಮ್ಮೆ ದೇಸನೂರಿನ ಮೇಲೆ ದಾಳಿ ಮಾಡಿ ಮಲ್ಲಸರ್ಜನನ್ನು ಯುದ್ಧದಲ್ಲಿ ಸೋಲಿಸಿ ಅವನನ್ನು ಸೆರೆಹಿಡಿದು, ಪೆರಿಯಾ ಪಟ್ಟಣದ ಹತ್ತಿರದ ಕಪಾಳ ದುರ್ಗದ ಕೋಟೆಯಲ್ಲಿ ಮೂರು ವರ್ಷಗಳ ಕಾಲ ಸೆರೆಯಲ್ಲಿಟ್ಟನು. ಮಲ್ಲಸರ್ಜನಿಗೆ ಆಗ ತುಂಬಿದ ಯೌವನ, ಚಾಣಾಕ್ಷತನದಿಂದಾಗಿ ಭದ್ರವಾದ ಕೋಟೆಯಲ್ಲಿ ಸೆರೆ ಹಿಡಿದಿಟ್ಟಿದ್ದರೂ, ಜಾಣ್ಮೆಯಿಂದ ಕೋಟೆಯಿಂದ ತಪ್ಪಿಸಿಕೊಂಡು, ಅನೇಕ ಊರುಗಳನ್ನು ದಾಟಿಕೊಂಡು ಬಬಲೇಶ್ವರಕ್ಕೆ ಬಂದು ತಲುಪಿದನು. ಬಬಲೇಶ್ವರದಲ್ಲಿ ರಾಣಿ ರುದ್ರಮ್ಮನ ಸಂಬಂಧಿಕರಲ್ಲಿ ವಾಸ್ತವ್ಯ ಮಾಡಿ ತನ್ನ ಆಯಾಸವನ್ನು ಪರಿಹರಿಸಿಕೊಂಡನು. ಆಗ ಮಲ್ಲಸರ್ಜನನು ಬಬಲೇಶ್ವರದಲ್ಲಿ ಇರುವುದನ್ನು ತಿಳಿದ ಕಿತ್ತೂರಿನ ಪ್ರಜೆಗಳು ಆನಂದದಿಂದ ಸಕಲ ಮರ್ಯಾದೆಯೊಂದಿಗೆ ಮಲ್ಲಸರ್ಜನನ್ನು ಕಿತ್ತೂರಿಗೆ ಕರೆ ತಂದರು. ಈ ರೀತಿ ಮೂರು ವರ್ಷಗಳ ನಂತರ ಕಿತ್ತೂರು ರಾಜ್ಯಭಾರವನ್ನು ಮಲ್ಲಸರ್ಜನನು ಮತ್ತೆ ವಹಿಸಿಕೊಂಡನು.[೩೮]

೧೭೮೬ ಜೂನ್ ತಿಂಗಳಲ್ಲಿ ಹರಿಪಂಥ ಪಢಕೆ ಗಜೇಂದ್ರಗಡದ ಮೇಲೆ ಆಕ್ರಮಣ ಮಾಡಿ ವಶಪಡಿಸಿಕೊಂಡನು. ಟಿಪ್ಪುವು ಕೊಡಗಿನಲ್ಲಿದ್ದಾಗ ತುಕೋಜಿ ಹೋಳ್ಕರನ ಅಧೀನ ಸೇನೆಯು ಮುತ್ತಿಗೆ ಹಾಕಿದಾಗ ಕಿತ್ತೂರು, ಧಾರವಾಡ ಮತ್ತು ಲಕ್ಷ್ಮೇಶ್ವರ ಪ್ರದೇಶಗಳು ಮರಾಠರ ಪಾಲಾದವು. ಹೀಗೆ ಕಿತ್ತೂರು ಟಿಪ್ಪುವಿನಿಂದ ಪೇಶ್ವೆಯರ ಆಳ್ವಿಕೆಗೆ ಒಳಪಟ್ಟಿತು.[೩೯] ೧೭೯೨ರಲ್ಲಿ ಪೇಶ್ವೆಯರು ಆಂಗ್ಲರೊಂದಿಗೆ ಶ್ರೀರಂಗಪಟ್ಟಣದ ಒಪ್ಪಂದಕ್ಕೆ ಸಹಿ ಹಾಕಿದ ನಂತರ ಸುಮಾರು ೨೫ ವರ್ಷಗಳ ಕಾಲ ಆಂಗ್ಲ ಹಾಗೂ ಪೇಶ್ವೆಯರ ಸಂಬಂಧಗಳು ಸ್ನೇಹಪರವಾಗಿದ್ದವು. ಪೇಶ್ವೆಯರು ಆಂಗ್ಲರ ಅಧೀನತೆಯನ್ನು ಒಪ್ಪಿಕೊಂಡು, ಅವರ ಆಜ್ಞಾಧಾರಕ ಕೈಗೊಂಬೆಗಳಂತೆ ವರ್ತಿಸಲು ಒಪ್ಪಿಕೊಂಡು,

ಪೇಶ್ವೆಯರ ಅಧೀನ ರಾಜ್ಯ ಕಿತ್ತೂರು ಕೂಡ ಆಂಗ್ಲರ ಅಧೀನತೆ ಹೊಂದಿ ಅವರೊಡನೆ ಗೌರವದಿಂದ ವರ್ತಿಸಬೇಕಾಯಿತು. ಹೀಗೆ ಕಿತ್ತೂರು ಮರಾಠ ಮತ್ತು ಟಿಪ್ಪುವಿನ ಮಧ್ಯದ ಹೋರಾಟ ದಾಳದ ಕಣವಾಯಿತು.

ಸವಣೂರು ನವಾಬರು ಮೂಲತಃ ಅಪಘಾನಿಗಳು. ಕಾಬೂಲಿನ ಪಾರ್ಶ್ವದಲ್ಲಿರುವ ಕೋಲಸ್ತಾನದ ಮಿಯಾಸ್ ಗುಡ್ಡಗಾಡು ಪ್ರದೇಶಕ್ಕೆ ಸೇರಿದ ಪಠಾಣರು, ಶಸ್ತ್ರವಿದ್ಯೆಯಲ್ಲಿ ಪ್ರಖ್ಯಾತ ರಾಗಿದ್ದ ತಮ್ಮ ದೇಶಕ್ಕೆ ಅತ್ಯಂತ ನಿಷ್ಠರಾಗಿದ್ದರು. ಈ ಮನೆತನದ ಮೂಲಪುರುಷರು ಹಿಂದೂಸ್ಥಾನಕ್ಕೆ ಬರುವ ಪೂರ್ವದಲ್ಲಿ ಕಾಬೂಲದಲ್ಲಿರುವಾಗ ಮಲೀಕ ಮುಖ್ಯಸ್ಥ ಎಂಬ ಬಿರುದನ್ನು ಧರಿಸುತ್ತಿದ್ದರು. ಈ ಮನೆತನದ ಮೂಲ ಪರುಷನು ಮಲೀಕ ಅಬ್ದುಲ್ ಕರೀಮಖಾನ್ ಮೀಯಾನಾ ಬಹದ್ದೂರನು ದೆಹಲಿಯಲ್ಲಿದ್ದನು. ಈ ಮನೆತನದ ಹದಿನೆಂಟನೆಯ ತಲೆಮಾರಿನವನಾದ ಮಲೀಕ ದೋದಾಖಾನ ಬಹದ್ದೂರನು ಅನುವಂಶಿಕವಾಗಿ ತಮ್ಮ ಮನೆತನದವರು ಹಚ್ಚಿಕೊಳ್ಳುತ್ತಿದ್ದ ಮಲೀಕ ಬಿರುದನ್ನು ತ್ಯಜಿಸಿ ನವಾಬ ಎಂಬ ಬಿರುದನ್ನು ಧರಿಸಿದನು. ಇವನ ಮಗನಾದ ನವಾಬ ಅಬ್ದುಲ್ ಅಧಿಕಾರಕ್ಕೆ ಬಂದನು. ಅವನ ನಂತರ ಅವನ ಮಗ ಬಹಲೋಲಖಾನ್ ದಿಲ್ಲಿಯಲ್ಲಿ ತಂದೆಯ ಸ್ಥಾನವನ್ನು ವಹಿಸಿಕೊಂಡನು. ಇವನ ಹೆಸರನ್ನು ಸರಿಯಾಗಿ ಉಚ್ಚಾರ ಮಾಡಲಾಗದ ಸಂತನೊಬ್ಬನು 'ರಗಟೆ' ಎಂದು ಕರೆದನು. ಅಂದಿನಿಂದ ಇವನನ್ನು 'ರಗಟೆ ಬಹಲೋಲಖಾನ' ಎಂದೇ ಕರೆಯಲು ಪ್ರಾರಂಭಿಸಿದರು.

ರಗಟೆಯ ಬಹಲೂಲಖಾನನಿಗೂ ಹಾಗು ಅಕ್ಬರನ ನಂತರ ಸಿಂಹಾಸನದ ಮೇಲೆ ವಿರಾಜ ಮಾನವಾಗಿದ್ದ ಜಹಾಂಗೀರನಿಗೂ ಭಿನ್ನಭಿಪ್ರಾಯ ಉಂಟಾಗಲು ಅವನು ೧೬೨೬ರಲ್ಲಿ ಮೊಘಲ್ ಸುಭೇದಾರನಾಗಿದ್ದ ಖಾನ್ ಜಹಾನ್ ಲೋದಿಯ ಬಳಿ ಸೇವೆಗೆ ಸೇರಿಕೊಂಡನು. ಅಲ್ಲಿಂದ ಜಹಾಂಗೀರನು ಮೋದಿಯನ್ನು ಕೊಲ್ಲಿಸಿದನು. ಅವನು ದಕ್ಷಿಣಭಾರತಕ್ಕೆ ಬಂದು ಹೈದ್ರಾಬಾದಿನ ಮುರ್ತಜಾ ನಿಜಮಶಾಹದ ಸೈನ್ಯವನ್ನು ಸೇರಿದನು. ದುರ್ದೈವದಿಂದ ನಿಮನು ಅವನ ಸಚಿವ ಫತೇಖಾನದಿಂದ ಕೊಲೆಗೀಡಾದಾಗ ಬಹಲೂಲಖಾನನು ನಿರಾಶ್ರಿತನಾಗಿ ವಿಜಾಪುರಕ್ಕೆ ಬಂದನು. ಸುಲ್ತಾನ ಮಹಮ್ಮದ ಆದಿಲ್‌ಶಹಾನಲ್ಲಿ ಸಚಿವನಾಗಿ ಅಧಿಕಾರವನ್ನು ವಹಿಸಿಕೊಂಡನು. ಸುಲ್ತಾನನು ಇವನ ಶೌರ್ಯ ಹಾಗೂ ಬುದ್ಧವಂತಿಕೆಗೆ ಮೆಚ್ಚಿ, ಇವನಿಗೆ ಸಣ್ಣ ಜಹಗೀರನ್ನು ದಯಪಾಲಿಸಿ ದನು. ಅದಕ್ಕೆ ಬಹಲೋಲಪುರವೆಂದು ನಾಮಕರಣ ಮಾಡಿ ಅಲ್ಲಿ ವಾಸಿಸತೊಡಗಿದನು. ಅವನ ಮರಣದ ನಂತರ ಅವನ ಮಗ ಅಬ್ದುಲ್ ರಹೀಮಖಾನನು ವಿಜಾಪುರದ ದರ್ಬಾರದಲ್ಲಿ ತಂದೆಯ ಸ್ಥಾನ ಹಾಗೂ ಗೌರವವನ್ನು ಪಡೆದನು.

ಅಬ್ದುಲ್ ರಹೀಮಕಾನನು ವಿಜಾಪುರದ ಎರಡನೆಯ ಅಲಿ ಆದಿಲ್‌ಶಹಾನ ಸೇವೆಯನ್ನು ಅತ್ಯಂತ ನಿಷ್ಠೆಯಿಂದ ಮಾಡಿದನು. ಇದನ್ನು ಮೆಚ್ಚಿ ಅವನಿಗೆ ಕೊಪ್ಪಳದ ಜಹಗೀರನ್ನು ದಯಪಾಲಿಸ ಲಾಯಿತು. ಇವನು ೧೬೭೨ರಲ್ಲಿ ಮರಣಹೊಂದಲು ಅವನ ಮಗ ಅಬ್ದುಲ್ ಕರೀಮಖಾನ ನವಾಬನು ವಿಜಾಪುರದ ದರ್ಬಾರದಲ್ಲಿ ಶ್ರೇಷ್ಠ ಸರದಾರನೆಂಬ ಕೀರ್ತಿಗೆ ಪಾತ್ರನಾದನು. ೧೬೭೫ರ

ಹೊತ್ತಿಗೆ ವಜೀರನಾದನು ಮುಂದೆ ಎರಡೇ ವರ್ಷದಲ್ಲಿ ೧೬೭೭ರಲ್ಲಿ ಮಿರಜ್ ಪ್ರಾಂತದ ಜಹಗೀರನ್ನು ಕೊಡಲಾಯಿತು.

ಅಬ್ದುಲ್ ಕರೀಮಖಾನನಿಗೆ ಅದವಾನಿ ನವಾಬನಾಗಿದ್ದ ಮಸುದಖಾನನು ತನ್ನ ಮಗಳನ್ನು ಕೊಟ್ಟ ವಿವಾಹವನ್ನು ಮಾಡಿದನು. ತನ್ನ ವಶದಲ್ಲಿದ್ದ ಬಾಗಲಕೋಟೆಯನ್ನು ಕೂಡ ಕೊಟ್ಟನು. ಇದರಿಂದ ಅಬ್ದುಲ್ ಕರೀಮಖಾನ್ ನವಾಬನು ವಿಜಾಪುರದ ದರ್ಬಾರದಲ್ಲಿ ಪ್ರತಿಷ್ಠಿತ ಸರದಾರ ನಾದನು. ಅಲ್ಲದೇ ಇವನಿಗೆ ಸ್ವಾದಿ, ಕೊಂಕಣಗಳನ್ನೊಳಗೊಂಡ ಇಪ್ಪತ್ತೆರಡು ಮಹಲಗಳ ಕರ್ನಾಟಕ ರಚಿಸಿ ಅದರ ಸುಭೇದಾರನಾಗಿ ನಿಯಮಿಸಿದನು. ಅದರ ರಾಜಧಾನಿ ಬಂಕಾಪುರವಾಗಿತ್ತು. ಎರಡನೆಯ ಆದಿಲ್‌ಶಹಾನ ಮರಣ ಹೊಂದಿದ ಮೇಲೆ ಸಿಕಂದರ ಆದಿಲ್‌ಶಾಹ ಕೇವಲ ಏಳು ವರ್ಷದ ಚಿಕ್ಕಬಾಲಕನಾಗಿದ್ದರಿಂದ ಸರದಾರರಲ್ಲಿ ಅಧಿಕಾರಕ್ಕಾಗಿ ಕಿತ್ತಾಟ ಪ್ರಾರಂಭವಾಯಿತು. ಅಬ್ದುಲ್ ಕರೀಮ ಖಾನನು ೧೬೭೮ರಲ್ಲಿ ಮರಣಹೊಂದಿದನು. ಆಗ ಸವಣೂರು ರಾಜ್ಯ ಅಸ್ತಿತ್ವಕ್ಕೆ ಬಂದಿರಲಿಲ್ಲ. ಇವನು ಕೇವಲ ಕರ್ನಾಟಕದ ಸುಭೇದಾರನಾಗಿ ನಿಯಮಿಸಲ್ಪಟ್ಟಿದ್ದನು. ಅಬ್ದುಲ್ ಕರೀಮಖಾನ ನವಾಬನಿಗೆ ಅಬ್ದುಲ್ ನಬೀಖಾನ ಮಹಮ್ಮದ ಇಕ್ಬಾಲನಖಾನ, ಅಬ್ದುಲ್ ಅಜೀರಖಾನ ಮತ್ತು ಅಬ್ದುಲ್ ರಮಾಪಖಾನ ಎಂಬ ನಾಲ್ವರು ಮಕ್ಕಳಿದ್ದರು. ಮೊದಲನೆಯ ಮಗ ನಬೀಖಾನ ವಿಜಾಪುರ ದಿಂದ ಹೊರಗೆ ಹೋಗಿ, ಕಡಪಾ ಗೆದ್ದು, ಕಡಪಾ ನವಾಬನಾಗಿ ಉಳಿದನು. ಇನ್ನೂಳಿದ ಮೂವರು ವಿಜಾಪುರದ ಸೈನ್ಯದಲ್ಲಿ ಉಳಿದರು ಅವರಲ್ಲಿ ಕೊನೆಯವನಾದ ಅಬ್ದುಲ್ ರವೊಫಖಾನ ನವಾಬನು, ತಂದೆಯ ನಂತರ ಸುಲ್ತಾನ ಸಿಕಂದರನ ವಿಶ್ವಾಸಕ್ಕೆ ಪಾತ್ರನಾಗಿ ಅವನ ಆಪ್ತಸಲಹೆಗಾರನಾದನು.

ಅದೇ ಸಂದರ್ಭದಲ್ಲಿ ಔರಂಗಜೇಬನು ದಕ್ಷಿಣಭಾರತದ ಮೇಲೆ ದಾಳಿಯನ್ನು ಮಾಡಿ ೧೬೮೫ರ ಮೇ ತಿಂಗಳಲ್ಲಿ ವಿಜಾಪುರಕ್ಕೆ ಬಂದು ೧೬೮೬ರಲ್ಲಿ ವಿಜಾಪುರವನ್ನು ಗೆದ್ದನು. ಆಗ ಸಿಕಂದರನು ಅಬ್ದುಲ್ ರವೂಫಖನೊಡನೆ ಪೂರ್ವಾಭಾವಿಯಾಗಿ ವಿಚಾರ ವಿನಮಯ ಮಾಡಿ ಔರಂಗಜೇಬನೊಡನೆ ಒಪ್ಪಂದಕ್ಕೆ ಬಂದನು. ಇದರಂತೆ ಸಿಕಂದರನಿಗೆ ಒಂದು ಲಕ್ಷ ರೂಪಾಯಿ ವರ್ಷಾಸನವನ್ನು ಮಂಜೂರು ಮಾಡಿದನು. ಔರಂಗಜೇಬನಿಗೆ ಕೋಟೆಯ ಬೀಗದಕೈ ಮತ್ತು ರಾಜ ಮುದ್ರೆಯನ್ನು ಕೊಡಲು ಅಬ್ದುಲ್ ರವೊಫಖಾನನ್ನು ಕಳುಹಿಸಿದನು. ಇವನನ್ನು ನೋಡಿ ಆಕರ್ಷಿತ ನಾಗಿ ಅವನನ್ನು ಮೊಘಲರ ಸೇವೆಗೆ ಆಹ್ವಾನಿಸಿದನು. ರವೋಫಖಾನ ಅವನ ಆಹ್ವಾನವನ್ನು ಒಪ್ಪಿಕೊಳ್ಳಲು ಅವನಿಗೆ ಕರ್ನಾಟಕ ಸುಭೇದಾರಿಕೆಯನ್ನು ದಯಾಪಾಲಿಸಿದನು. ಮತ್ತು ದಿಲೇರಜಂಗ ದಿಲೇರ ಬಹದ್ದೂರ ಬಿರುದು, ಹತ್ತು ಸಾವಿರ ಕಾಲ್ದಳ ಹಾಗೂ ಏಳು ಸಾವಿರ ಅಶ್ವದಳ ಮನಸ್‌ಬ್ದದಾರಿಕೆಯನ್ನು ಕೊಟ್ಟು ವಿಜಾಪುರದಿಂದ ಬಂಕಾಪುರಕ್ಕೆ ಕಳುಹಿಸಿದನು. ಔರಂಗಜೇಬನು ಮೂರು ಸರಕಾರ ಮತ್ತು ಇಪ್ಪತ್ತೆರಡು ಮಹಲುಗಳನ್ನು ಒಳಗೊಂಡ ಕರ್ನಾಟಕ ಸುಭಾ (ಪ್ರಾಂತ್ಯ) ರಚಿಸಿ ಸನ್ನದನ್ನು ಕೊಟ್ಟನು.

ಕರ್ನಾಟಕದ ಸುಬೇದಾರಿಕೆಯಲ್ಲದೆ, ಹನ್ನೆರಡು ದೇಸಗತಿಗಳನ್ನು ಹತೋಟಿಯಲ್ಲಿಟ್ಟು ಕೊಂಡು ಅವರಿಂದ ಖಂಡಗಿ ಎತ್ತಿ ಔರಂಗಜೇಬನಿಗೆ ಮೆಚ್ಚಿಸುವ ಅಧಿಕಾರವನ್ನು ರವೂಫಖಾನ ನವಾಬನು ಪಡೆದನು. ಈ ಹನ್ನೆರಡು ದೇಸಗತಿಗಳೆಂದರೆ ಕಿತ್ತೂರು, ಹಾವನೂರು, ಶಿರಹಟ್ಟಿ, ನವಲಗುಂದ, ಹುನಗುಂದ, ಜಾಲಿಹಾಳ, ಕೌಜಲಗಿ, ಹಳೇ ಹುಬ್ಬಳ್ಳಿ, ಮುಳಗುಂದ, ಡಂಬಳ, ಕೊಣ್ಣೂರು ಮತ್ತು ಗದಗ[೪೦] ಹೀಗೆ ಅಬ್ದುಲ್ ರವೊಫಖಾನ (ಕ್ರಿ.ಶ. ೧೬೮೬-೧೭೨೯) ದಿಲೇರಜಂಗ ದಿಲೇರ ಬಹದ್ದೂರನು, ಕರ್ನಾಟಕ ಸುಭೇದಾರನೆಂದು ಮೊದಲು ನೇಮಕಗೊಂಡು ೧೬೮೬-೮೭ರಲ್ಲಿ ಸವಣೂರು ರಾಜ್ಯದ ಪ್ರಥಮ ಸುಭೇದಾರಿಕೆಯನ್ನು ವಹಿಸಿಕೊಂಡ ಅಬ್ದುಲ್ ರವೂಫಖಾನನೇ, ರಾಜ್ಯದ ಸಂಸ್ಥಾಪಕನಾದನು. ಬಂಕಾಪುರವನ್ನು ರಾಜಧಾನಿಯನ್ನಾಗಿಸಿ ಕೊಂಡನು. ಅಬ್ದುಲ್ ರವೂಫಖಾನನು ಸವಣೂರನ್ನು ಕಟ್ಟಿಸಿ ರಾಜಧಾನಿಯನ್ನು ಹೊಸ ಊರಿಗೆ ವರ್ಗಾಯಿಸಿದಾಗ ಕರ್ನಾಟಕ ಸುಭಾ ಸುವರ್ಣ ರಾಜ್ಯವಾಯಿತು.

೧೫೮೫ರಲ್ಲಿ ಸ್ಥಾಪನೆಯಾದ ಕಿತ್ತೂರು ಸಂಸ್ಥಾನವು ೧೬೮೬-೮೭ರಲ್ಲಿ ಸ್ಥಾಪಿತವಾದ ಸವಣೂರನ್ನು ನವಾಬರ ವಶಕ್ಕೆ ಔರಂಗಜೇಬನು ನೀಡಿರುವುದು ಸ್ಪಷ್ಟವಾಗುತ್ತದೆ. ೧೬೮೬ರಲ್ಲಿ ಔರಂಗಜೇಬನು ವಿಜಾಪುರವನ್ನು ಗೆದ್ದ ಸಂದರ್ಭದಲ್ಲಿ ಈ ಪ್ರದೇಶಗಳೆಲ್ಲ ಅವನ ವಶಕ್ಕೆ ಹೋಗಿರುವ ಸಾಧ್ಯತೆ ಇದೆ. ಈ ಸಂದರ್ಭದಲ್ಲಿ ಕಿತ್ತೂರು ಮುದಿಮಲ್ಲಪ್ಪ ದೇಸಾಯಿ ಅವರ ಆಡಳಿತದಲ್ಲಿ ಇತ್ತು. ಮುಂದೆ ಮೊಘಲರ ಪ್ರತಿನಿಧಿಯಾಗಿದ್ದ ಅಬ್ದುಲ್ ರವೂಫಖಾನನ್ನು ತನ್ನ ರಾಜ್ಯದ ಇತರ ಪ್ರದೇಶಗಳಲ್ಲಿ ಗಲಬೆಗಳಾದಾಗ ಹತ್ತಿಕ್ಕುವ ಜವಾಬ್ದಾರಿಯನ್ನು ಸಹ ವಹಿಸಿಕೊಂಡಿದ್ದನು. ಅಲ್ಲದೇ ಉತ್ತರ ಕರ್ನಾಟಕದ ಜಮೀನದಾರನಾಗಿದ್ದ ದೇಸಾಯಿ, ದೇಶಪಾಂಡೆ, ನಾಡಗೌಡರನ್ನು ರವೂಫಖಾನನು, ಸದೆ ಬಡಿದು ತನ್ನ ಸಾಮಂತರನ್ನಾಗಿ ಮಾಡಿಕೊಂಡಿದ್ದನು. ಕಿತ್ತೂರಿನ ಮುದಿಮಲ್ಲಪ್ಪ ದೇಸಾಯಿ ಮತ್ತು ಚಿಕ್ಕಮಲ್ಲಪ್ಪ ದೇಸಾಯಿ, ನವಲಗುಂದದ ಲಿಂಗನ ಗೌಡ ದೇಸಾಯಿ, ರವೂಫಖಾನನಿಗೆ ಪ್ರತಿವರುಷವೂ ಕಪ್ಪ ಕಾಣಿಕೆಗಳನ್ನು ಸಲ್ಲಿಸುತ್ತಿದ್ದರು. ಇವನು ೧೭೨೯ರಲ್ಲಿ ಮರಣ ಹೊಂದಿದನು. ಅವನಿಗೆ ೧೨ ಜನ ಗಂಡು ಮಕ್ಕಳಿದ್ದರು. ಇವರಲ್ಲಿ ಅಧಿಕಾರಕ್ಕಾಗಿ ಹಲವಾರು ಕಲಹಗಳು ನಡೆದವು ಅನಂತರ ಅಬ್ದುಲ್ ಮಜೀದಖಾನ (೧೭೨೫-೧೭೫೪) ಅಧಿಕಾರವನ್ನು ವಹಿಸಿಕೊಂಡನು.

ಅಬ್ದುಲ್ ಮಜೀರಖಾನ ಕಾಲದಲ್ಲಿ, ಮರಾಠರು ಸೈನ್ಯದೊಂದಿಗೆ ಸವಣೂರಿನ ಮೇಲೆ ದಾಳಿಮಾಡಲು ಕಳುಹಿಸಿದರು. ಅವರು ಮೊದಲು ಕಮಡೊಳ್ಳಿ ಕೋಟೆಗೆ ಮುತ್ತಿಗೆಯನ್ನು ಹಾಕಿದರು. ಆಗ ಅಬ್ದುಲ್ ಮಜೀದಖಾನನು ೧೭೩೭ರಲ್ಲಿ ಮರಾಠರೊಂದಿಗೆ ಒಪ್ಪಂದವನ್ನು ಮಾಡಿಕೊಂಡನು. ಆ ಪ್ರಕಾರ ಕಸಬಾ ಸಂಪಗಾಂವ ಕಿತ್ತೂರು ಸಹಿತವಾಗಿ ೩೩ ವಿಭಾಗಗಳು ಪೇಶ್ವಯರ ಆಡಳಿತಕ್ಕೆ ಹೋದವು.

೧೭೫೪ರಲ್ಲಿ ಅಬ್ದುಲ್ ಹಕೀಮಖಾನನು ಸವಣೂರು ರಾಜ್ಯದ ನವಾಬನಾದನು. ಇವನ ಕಾಲದಲ್ಲಿ ಸವಣೂರು ೨೫ ಹಳ್ಳಿಗಳನ್ನು ಒಳಗೊಂಡಿತ್ತು. ಅದನ್ನು ಹೆಚ್ಚಿಸುವ ಪ್ರಯತ್ನವನ್ನು

ಮಾಡಿದನು. ಇವನ ಕಾಲದಲ್ಲಿ ಒಂದೆಡೆ ಮರಾಠರು, ಇನ್ನೊಂದೆಡೆ ಮೊಗಲರ ಪ್ರತಿನಿಧಿ ಹೈದಾರಾಬಾದ ನಿಜಾಮನು, ಮತ್ತೊಂದೆಡೆ ಹೈದರ-ಟಿಪ್ಪು ಸೇರಿ ಸವಣೂರನ್ನು ಪಗಡೆಕಾಯಿಯಂತೆ ತಿರುಗಿಸಿ, ಹಣ್ಣು ಹಣ್ಣು ಮಾಡಿದರು. ಈ ಸಂದರ್ಭದಲ್ಲಿ ಹಕೀಮಖಾನನು ಅಧಿಕಾರಕ್ಕೆ ಬಂದನು.

ಹಕೀಮಖಾನನು ಅಧಿಕಾರಕ್ಕೆ ಬಂದ ಎರಡು ವರ್ಷಗಳಲ್ಲಿಯೇ ಹೈದರಾಬಾದ ನಿಜಾಮ ಮತ್ತು ಬಾಲಾಜೀ ಬಾಜೀರಾವ್ ಕೂಡಿ ಅಪಾರ ಸೈನ್ಯದೊಂದಿಗೆ ಸವಣೂರಿನ ಮೇಲೆ ದಂಡೆತ್ತಿ ಬಂದರು. ಮೂರು ತಿಂಗಳ ಕಾಲ ಯುದ್ಧ ನಡೆಯಿತು. ಹಕೀಮಖಾನನು ಕೊನೆಗೆ ಪೇಶ್ವೆಗಳು ಮತ್ತು ಫ್ರೆಂಚ ಸೇನಾಧಿಪತಿ ಬುಸ್ಸೀಯೊಡನೆ ೧೭೫೬ರಲ್ಲಿ ಒಪ್ಪಂದ ಮಾಡಿಕೊಂಡರು. ಸವಣೂರಿನ ಇತಿಹಾಸದಲ್ಲಿಯೇ ಇದು ಮಹತ್ವಪೂರ್ಣವಾದದ್ದಾಗಿದೆ, ಈ ಒಪ್ಪಂದದ ಪ್ರಕಾರ ಸವಣೂರಿನ ನವಾಬರು ಪೇಶ್ವೆಯವರಿಗೆ ೮,೨೩,೯೩೫.೦೦ ರೂಪಾಯಿ ಉತ್ಪನ್ನದ ಪ್ರದೇಶಗಳಾದ, ಕುಂದಗೋಳ, ರಾಯರಹುಬ್ಬಳ್ಳಿ, ಮಿಶ್ರಿಕೋಟೆ, ಮಜೀದಪುರ, ತಡಸ, ಅಡವಿಸೋಮಾಪುರ, ತೊರಗಲ್ಲು, ಅಜಮ ನಗರ, ಬಾಗಲಕೋಟ, ಬೀಳಗಿ, ಉಪ್ಪಿನಬೆಟಗೇರಿ ಮುಂತಾದವುಗಳನ್ನು ಸವಣೂರಿನ ನವಾಬನಿಗೆ ನೀಡಲಾಯಿತು. ೧೮೦೦೦ ರೂಪಾಯಿಗಳ ವಾರ್ಷಿಕ ಉತ್ಪನ್ನವಿದ್ದ ಕಿತ್ತೂರು ಸಹ ಇವರ ಅಧೀನಕ್ಕೆ ಬಂದಿತು. ಹೀಗೆ ಕಿತ್ತೂರು ೧೭೫೬ರಲ್ಲಿ ಮತ್ತೆ ಸವಣೂರಿನ ನವಾಬರ ವಶಕ್ಕೆ ಬಂದಿತು. ಆಗ ಕಿತ್ತೂರಿನಲ್ಲಿ ವೀರಪ್ಪಗೌಡರು ರಾಜ್ಯಭಾರಮಾಡುತ್ತಿದ್ದರು.

೧೭೬೧ರಲ್ಲಿ ಮೂರನೆಯ ಪಾಣಿಪತ್ ಯುದ್ಧದ ತರುವಾಯ ಮರಾಠರ ಪ್ರಾಬಲ್ಯ ಕುಗ್ಗಿ ಸೋತು ದುರ್ಬಲರಾದರು. ೧೭೬೩ರಲ್ಲಿ ಹೈದರ ಆಲಿಯು ಮೈಸೂರು ಅರಸರನ್ನು ಸರಿಸಿ ತಾನೇ ರಾಜನಾದನು. ೧೭೭೮ರಲ್ಲಿ ಅವನು ಬೆಳಗಾಂವ ಜಿಲ್ಲೆಯಿಂದ ಮಲಪ್ರಭಾ ನದಿಯ ದಕ್ಷಿಣ ಹಾಗೂ ವಿಜಾಪುರ ಜಿಲ್ಲೆಯಲ್ಲಿರುವ ಕೃಷ್ಣಾ ನದಿಯ ದಕ್ಷಿಣಕ್ಕಿರುವ ಎಲ್ಲಾ ಪ್ರದೇಶವನ್ನು ಪೇಶ್ವೆಯವರಿಂದ ವಶಪಡಿಸಿಕೊಂಡು ಈ ಭಾಗದ ಅಧಿಪತಿಯಾದನು. ವೀರಪ್ಪಗೌಡರು ಹೈದರಾಲಿಯ ಜೊತೆ ಸಂಧಾನ ನಡೆಸಿ, ಹಿಂದಿನಂತೆ ನಝರಾಣ ಕೊಟ್ಟು ಕಿತ್ತೂರು ದೇಸಗತ್ತಿಯನ್ನು ಸ್ವತಂತ್ರ ವಾಗಿ ಇಟ್ಟುಕೊಂಡನು.[೪೧]

ವೀರಪ್ಪ ದೇಸಾಯಿಯರು ಮಹಾಪರಾಕ್ರಮಿಯಾಗಿದ್ದರು. ಇವರು ಗೋಕಾಕ, ಪರಸಗಡ ತಾಲೂಕುಗಳನ್ನು ಆಕ್ರಮಿಸಿಕೊಂಡರು. ಪೇಶ್ವೆಯವರಿಗೆ ಇದು ತಿಳಿದ ತಕ್ಷಣ ಪರಶುರಾಮ ಭಾವುಪಟವರ್ಧನನ್ನು ದೇಸಾಯಿಯರ ಮೇಲೆ ೧೭೭೯ರಲ್ಲಿ ದಂಡೆತ್ತಿ ಹೋದರು. ಆದರೆ ದುರ್ದೈವ ವಶಾತ್ ಈ ಯುದ್ಧದಲ್ಲಿ ವೀರಪ್ಪ ದೇಸಾಯರಿಗೆ ಸೋಲುಂಟಾಯಿತು. ಅವರನ್ನು ಮಿರಜದಲ್ಲಿ ಸೆರೆಹಿಡಿಯಲಾಯಿತು. ಅವರು ಅಲ್ಲಿಯೇ ಮರಣ ಹೊಂದಿದರೂ ಅವರ ಮೃತದೇಹವನ್ನು ಕಿತ್ತೂರಿಗೆ ತಂದು ಸಮಾಧಿಮಾಡಲಾಯಿತು. ಅವರ ಸಮಾಧಿಯನ್ನು ಇಂದಿಗೂ ಕಲ್ಮಠದಲ್ಲಿ ಕಾಣಬಹುದು.[೪೨] ೧೭೮೭ರಲ್ಲಿ ದೇಸಾಯಿಯವರ ಸರ್ವಸ್ವವನ್ನೂ ಟಿಪ್ಪು ಕಿತ್ತುಕೊಂಡು ಅಲ್ಪ ಜೀವನಾಂಶ ಕೊಡಮಾಡಿ, ಅದರ ಜಹಗೀರನ ಆಡಳಿತಾಧಿಕಾರವನ್ನು ಬುದ್ರುತ್-ಜಮಾಲ ಖಾನನಿಗೆ ವಹಿಸಿಕೊಟ್ಟನು.

೧೭೯೨ರಲ್ಲಿ ಶ್ರೀರಂಗಪಟ್ಟಣದ ಒಪ್ಪಂದದ ಪ್ರಕಾರ ತುಂಗಭದ್ರಾ ನದಿಯ ಉತ್ತರಕ್ಕಿದ್ದ ಪ್ರದೇಶವನ್ನೆಲ್ಲಾ ಪೇಶ್ವೆಯರಿಗೆ ಬಿಟ್ಟು ಕೊಡಲಾಯಿತು. ಕಿತ್ತೂರು ಪೇಶ್ವೆಯರ ಅಧೀನದಲ್ಲಿದ್ದರೂ ಸಹ ದಕ್ಷಿಣಭಾಗದಲ್ಲಿ ಪ್ರಬಲರಾದ ಹಲವು ಮರಾಠಾ ದರೋಡೆಕೋರರಿದ್ದರು. ಅವರು ಪೇಶ್ವೆಯರನ್ನು ಕಡೆಗಣಿಸಿ ಅನೇಕ ಸಣ್ಣ ರಾಜ್ಯಗಳನ್ನು ಸುಲಿಯುತ್ತಿದ್ದರು. ದಕ್ಷಿಣ ಭಾಗದಲ್ಲಿ ಪ್ರಬಲರಾದ ಇಂಥ ದರೋಡೆಕೋರರಲ್ಲಿ ಧೊಂಡುವಾಘ ಪ್ರಮುಖನು ಕಿತ್ತೂರಿನ ಸಂಪತ್ತನ್ನು ದೋಚಲು ಹವಣಿಸುತ್ತಿದ್ದನು. ಆದಕಾರಣ ಮಲ್ಲಸರ್ಜನ ಆಂಗ್ಲರ ಸಹಾಯ ಪಡೆದನು. ಆತನು ಜನರಲ್ ವೆಲ್ಲಸ್ಲಿಯೊಂದಿಗೆ ಒಪ್ಪಂದ ಮಾಡಿಕೊಂಡು ಅವನ ಸಹಾಯದಿಂದ ಧೊಂಡುವಾಘನನ್ನು ಓಡಿಸಿದನು. ೧೮೦೨ರಲ್ಲಿ ಪುಣೆಯಲ್ಲಿ ಬಾಜಿರಾಯನನ್ನು ಪಟ್ಟಕ್ಕೆ ಕೂಡಿಸಲು ವೆಲ್ಲಸ್ಲಿಯು ಶ್ರೀರಂಗ ಪಟ್ಟಣದಿಂದ ಹೊರಟಿದ್ದ, ಆಂಗ್ಲರಿಗೆ ಸಹಾಯ ಮಾಡಲು ಮಲ್ಲಸರ್ಜನ ಮತ್ತು ಉಳಿದ ದೇಸಾಯರು ಹಣ ಮತ್ತು ಸೈನ್ಯದ ನೆರವು ನೀಡಿದರು. ಮಲ್ಲಸರ್ಜನನು ನೀಡಿದ ನೆರವು ಮತ್ತು ತೋರಿಸಿದ ಸಹಾನುಭೂತಿಗೆ ಪ್ರತಿಫಲವಾಗಿ, ಮಲ್ಲಸರ್ಜನನಿಗೆ ತನ್ನ ದೇಸಗತ್ತಿಯನ್ನು ಇಟ್ಟುಕೊಳ್ಳಲು ಆಂಗ್ಲರು ಅನುಮತಿಯನ್ನು ನೀಡಿದರು.

೧೭೮೧ರಲ್ಲಿ ಟಿಪ್ಪುವನ್ನು ಎದುರಿಸಲು ಮಲ್ಲಸರ್ಜನನು ಪೇಶ್ವೆಯರಿಗೆ ಸಹಾಯ ಮಾಡಿದನು. ಪ್ರತಿಫಲವಾಗಿ ೧೮೦೯ರಲ್ಲಿ ಮಲ್ಲಸರ್ಜನ ಪೇಶ್ವೆಯವರೊಂದಿಗೆ ಒಪ್ಪಂದ ಮಾಡಿಕೊಳ್ಳಲು ಸಾಧ್ಯವಾಯಿತು. ಈ ಒಪ್ಪಂದದನ್ವಯ ಕಿತ್ತೂರ ಅರಸರು ೧,೭೫,೦೦೦ ರೂಪಾಯಿಯ ವರ್ಷಾಸನ ಕೊಡಬೇಕು. ಕಿತ್ತೂರ ರಾಜರು ಆಂತರಿಕ ಆಡಳಿತದ ಪೂರ್ಣ ಅಧಿಕಾರ ಹೊಂದಿರಬೇಕು ತಮ್ಮ ಸೈನ್ಯವನ್ನು ಇಟ್ಟುಕೊಳ್ಳುವ ಅಧಿಕಾರವನ್ನು ಅವರು ಪಡೆದಿರಬೇಕು. ಈ ಒಪ್ಪಂದದ ಮೇಲೆ ಕಿತ್ತೂರಿನ ಪೂರ್ಣ ಆಡಳಿತಾಧಿಕಾರ ಮಲ್ಲಸರ್ಜನನಿಗೆ ದೊರೆಯಿತು. ಕಪಾಳದುರ್ಗದ ಕೋಟೆಯಿಂದ ತಪ್ಪಿಸಿಕೊಂಡು ಬರುವಾಗ ಅವನು ತೋರಿಸಿದ ಜಾಣ್ಮೆ, ಧೈರ್ಯ, ಸಾಹಸಗಳ ಗುರತಿಗಾಗಿ ಮತ್ತು ಟಿಪ್ಪು ಸುಲ್ತಾನನೊಡನೆ ಯುದ್ಧ ಮಾಡುವಾಗ ತೋರಿಸಿದ ಶೌರ್ಯಕ್ಕಾಗಿ ಮಲ್ಲಸರ್ಜನಿಗೆ ಪ್ರತಾಪರಾವ್ ಎಂಬ ಬಿರುದನ್ನು ಕೊಡಲಾಯಿತು. ಈ ಬಿರುದಿನ ಸ್ಮಾರಕವಾಗಿ ಮಲ್ಲಸರ್ಜನಂದಗಡದಲ್ಲಿ ಕೋಟೆಯೊಂದನ್ನು ಕಟ್ಟಿಸಿ, ಅದಕ್ಕೆ ಪ್ರತಾಪಗಡವೆಂದು ಹೆಸರಿಟ್ಟನು.

ಕ್ರಿ.ಶ. ೧೮೧೮ರಲ್ಲಿ ಪೇಶ್ವೆಗೂ ಇಂಗ್ಲೀಷರಿಗೂ ಯುದ್ಧ ನಡೆಯಲು ದೇಸಾಯಿಯು ಆಂಗ್ಲರ ಪರವಾಗಿ ಸೇರಿಕೊಂಡನು. ಯುದ್ಧವು ಮುಗಿದು ಕರ್ನಾಟಕವು ಸಂಪೂರ್ಣವಾಗಿ ಆಂಗ್ಲರ ಕೈಸೇರಿದೊಡನೆ ಜನರಲ್ ಮನ್ರೊ ಸಾಹೇಬನು ಕಿತ್ತೂರ ದೇಸಾಯಿಯೊಡನೆ ಒಪ್ಪಂದ ಮಾಡಿಕೊಂಡನು.

೧. ದೇಸಾಯಿ ಇದುವರೆಗೆ ತನಗೆ ವಿಜಾಪುರ, ಪೇಶ್ವೆಯವರಿಂದ ದೊರೆತ ಎಲ್ಲ ಭೂಮಿಯನ್ನು ತನ್ನ ಸ್ವಾಧೀನದಲ್ಲಿಯೇ ಇಟ್ಟುಕೊಳ್ಳಲು ನಮ್ಮ ಒಪ್ಪಿಗೆ ಮಾಡಿಸಿದರು. ಮೊದಲಿನಂತೆ ನಾವು ನಿಮ್ಮ ಮರ್ಯಾದೆಗಳನ್ನೆಲ್ಲ ಕಾಪಾಡುವೆವು. ನೀವು ಪೇಶ್ವೆಯವರೊಡನೆ ನಡೆದ ಯುದ್ಧದಲ್ಲಿ ನಮ್ಮ ಪಕ್ಷ ಹಿಡಿದದ್ದಕ್ಕಾಗಿ ಪೇಶ್ವೆಗೆ ಕೊಡಬೇಕಾದ ಎರಡು ವರುಷಗಳ ಕಪ್ಪದ ಹಣದಲ್ಲಿ ಒಂದು ವರುಷದ ಹಣವನ್ನು ನಿಮಗೆ ಬಿಟ್ಟು ಕೊಡುತ್ತೇವೆ, ಉಳಿದ ಹಣವನ್ನು ಮುಂದಿನ

ಸಾಲಿನಲ್ಲಿ ನಮಗೆ ಸಲ್ಲಿಸಬೇಕು. ನೀವು ಜಮೇದಾರ ಸಂಸ್ಥಾಪಕನೆಂದು ನಾವು ಒಪ್ಪುತ್ತೇವೆ. ಪೇಶ್ವೆಯವರಂತೆ ನಾವಾದರೂ ನಿಮಗೆ ಪ್ರತಿವರುಷ ೪೫೫೦.೦೦ ರೂಪಾಯಿ ಬೆಲೆಯ ವಸ್ತ್ರಗಳನ್ನು ಕಾಣಿಕೆಯಾಗಿ ಅರ್ಪಿಸುವೆವು ಎಂದು ತಿಳಿಸಲಾಯಿತು.

೨. ನಿಮ್ಮ ಸನದಿನಲ್ಲಿ ಬರೆದ ಮೇರೆಗೆ ೪೨೩ ರಾವುತರನ್ನು ೧೦೦೦ ಕಾಲ್ದಳಗಳನ್ನು ಇಟ್ಟುಕೊಂಡು, ನೀವು ಇದುವರೆಗೆ ಪೇಶ್ವೆಯವರಿಗೆ ಹೇಗೆ ಸೇವೆ ಮಾಡುತ್ತ ಬಂದಿರೊ? ಇನ್ನು ಮುಂದೆ ಆ ನಿರ್ಬಂಧನೆಯನ್ನು ತೆಗೆದು ಹಾಕಿದ್ದೇವೆ. ಮತ್ತು ಸೈನ್ಯದ ವೆಚ್ಚಕ್ಕಾಗಿ ನಿಮಗೆ ಉಂಬಳಿಯಾಗಿ ಕೊಟ್ಟ ಖಾನಾಪುರ ತಾಲ್ಲೂಕನ್ನು, ನಗದು ರೂಪದಲ್ಲಿ ೨೫,೦೦೦ ರೂಪಾಯಿಗಳನ್ನು ಇನ್ನೂ ಮುಂದೆ ನಿಮಗೆ ನೀಡಲಾಗುವುದಿಲ್ಲ ಕರಾರುಗಳಿಗೆ ಶಿವಲಿಂಗ ರುದ್ರಸರ್ಜನದೇಸಾಯಿ ಒಪ್ಪಿದನು.

೧೬೮೬ರಲ್ಲಿ ಕಿತ್ತೂರು ಮೊದಲ ಬಾರಿಗೆ ಔರಂಗಜೇಬನ ಮೂಲಕ ಸವಣೂರಿನ ನವಾಬನ ವಶಕ್ಕೆ ಹೋಯಿತು. ಕಿತ್ತೂರ ಮುದಿಮಲ್ಲಪ್ಪ ದೇಸಾಯಿಯವರ ಅಧೀನಕ್ಕೆ ಒಳಪಟ್ಟಿತ್ತು. ಅನಂತರ ೧೭೩೭ರಲ್ಲಿ ಸವಣೂರಿನ ನವಾಬ ಅಬ್ದುಲ್ ಮಜೀದಖಾನ ಬಹದ್ದೂರ ದಿಲೇರಜಂಗ ಮತ್ತು ಪುಣೆಯ ಶ್ರೀಮಂತ ಬಾಲಾಜಿ ಬಾಜೀರಾವ ಪುತ್ರ ಪ್ರಧಾನರ ನಡುವೆ ನಡೆದ ಒಪ್ಪಂದದ ನಂತರ ಕಿತ್ತೂರು ಪೇಶ್ವೆಯವರ ಅಧೀನಕ್ಕೆ ಹೋಯಿತು. ಮುಂದೆ ೧೭೫೬ರಲ್ಲಿ ರಾಜಾ ಶಾಹೂ ಮಹಾರಾಜರಿಗೆ ಕೊಟ್ಟು ಉಳಿದ ಪ್ರದೇಶಗಳಲ್ಲಿ ಕಿತ್ತೂರು ಸವಣೂರಿನ ನವಾಬರಲ್ಲಿ ಉಳಿಯಿತು. ೧೭೭೮ರಲ್ಲಿ ಹೈದರಾಲಿ ಬೆಳಗಾವಿ ಪ್ರದೇಶವನ್ನು ಗೆದ್ದನು. ೧೭೭೯ರಲ್ಲಿ ಮರಾಠರು ಕಿತ್ತೂರನ್ನು ವಶಕ್ಕೆ ತೆಗೆದುಕೊಂಡರು. ಟಿಪ್ಪು ಸುಲ್ತಾನ ೧೭೮೭ರಲ್ಲಿ ದೇಸಾಯಿಯ ಸರ್ವಸ್ವವನ್ನು ವಶಪಡಿಸಿಕೊಂಡು ಅಲ್ಪ ಜೀವನಾಂಶ ಕೊಡಮಾಡಿ ಅದರ ಜಹಗೀರಿನ ಆಡಳಿತಾಧಿಕಾರವನ್ನು ಬುದ್ರುತ್-ಜಮಾಲಖಾನನಿಗೆ ವಹಿಸಿಕೊಟ್ಟನು. ೧೭೯೨ರಲ್ಲಿ ಶ್ರೀರಂಗಪಟ್ಟಣ ಒಪ್ಪಂದದ ಪ್ರಕಾರ, ತುಂಗಭದ್ರಾ ನದಿಯ ಉತ್ತರಕ್ಕಿದ್ದ ಪ್ರದೇಶವೆಲ್ಲಾ ಪೇಶ್ವೆಯರಿಗೆ ಬಿಟ್ಟುಕೊಡಲಾಯಿತು. ಆಗ ಧೊಂಡುವಾಘನು ಕಿತ್ತೂರಿನ ಸಂಪತ್ತನ್ನು ದೋಚಲು ಹವಣಿಸಿದನು. ಆಗ ಮಲ್ಲಸರ್ಜನ ಆಂಗ್ಲರ ಸಹಾಯ ಪಡೆದನು. ೧೮೦೯ರಲ್ಲಿ ಮಲ್ಲಸರ್ಜನನು ಮರಾಠರೊಂದಿಗೆ ಒಪ್ಪಂದವನ್ನು ಮಾಡಿಕೊಂಡನು. ೧೮೧೮ರಲ್ಲಿ ಪೇಶ್ವೆಗೂ ಆಂಗ್ಲರಿಗೂ ಯುದ್ಧ ನಡೆಯಲು ದೇಸಾಯಿಯು ಆಂಗ್ಲರ ಪಕ್ಷವನ್ನು ಸೇರಿದನು. ನಿರಂತರವಾಗಿ ಕಿತ್ತೂರಿನ ದೇಸಾಯಿಯವರು ದಕ್ಷಿಣಭಾರತದ ರಾಜಕೀಯ ಶಕ್ತಿಯ ಒತ್ತಡಗಳ ನಡುವೆಯೂ ತಮ್ಮ ಅಸ್ತಿತ್ವವನ್ನು ಉಳಿಸಿ ಬೆಳಸಿಕೊಂಡು ಬಂದಿರುವುದು ಸ್ತುತ್ಯಾರ್ಹ.

೩.೪. ಕಿತ್ತೂರು ಮತ್ತು ಸುರಪುರ ಸಂಸ್ಥಾನಗಳ ನಡುವಿನ ಸಂಬಂಧ

ಆಂಗ್ಲರು ರಾಣಿ ಚೆನ್ನಮ್ಮನನ್ನು ಕ್ರಿ.ಶ. ೧೮೨೪ರಲ್ಲಿ ಬಂಧಿಸಿದರು. ಆಗ ಕಿತ್ತೂರು ಪತನ ಹೊಂದಿತಾದರೂ, ಮತ್ತೊಂದು ಬಾರಿ ಕಿತ್ತೂರನ್ನು ಆಂಗ್ಲರಿಂದ ಮುಕ್ತಗೊಳಿಸಬೇಕು. ಅವರನ್ನು ಈ ನಾಡಿನಿಂದ ಓಡಿಸಬೇಕೆಂಬ ಯೋಚನೆ ಹಾಗೂ ಪ್ರಯತ್ನ ಸಂಗೊಳ್ಳಿ ರಾಯಣ್ಣನಲ್ಲಿ ಹುಟ್ಟಿತು. ಆಗ ಸಂಪಗಾಂವ ಮತ್ತು ಬೀಡಿಯಲ್ಲಿದ್ದ ಕಚೇರಿಗೆ ಬೆಂಕಿಯಿಡುವುದರ ಮೂಲಕ

ತನ್ನ ಬಂಡಾಯಕ್ಕೆ ನಾಂದಿ ಹಾಡಿದನು. ಆಂಗ್ಲರ ವಶದಲ್ಲಿದ್ದ ಆಸ್ತಿಯನ್ನೆಲ್ಲಾ ಲೂಟಿ ಮಾಡಬೇಕೆಂದು ಪಣತೊಟ್ಟನು. ಆಗ ಈತನ ಹತ್ತಿರ ಸೈನಿಕರಿದ್ದುದು ಕೇವಲ ೧೦೦ ಜನ ಮಾತ್ರ. ಹೀಗಾಗಿ ಸೈನಿಕರ ಅವಶ್ಯಕತೆಯುಂಟಾಯಿತು. ಕೆಲವು ಹಿತೈಷಿಗಳು ಸಂಗೊಳ್ಳಿರಾಯಣ್ಣನಿಗೆ ಆಂಗ್ಲರ ವಿರುದ್ಧ ಸೆಣಸಾಡಲು ಧೈರ್ಯ, ಸುರಪುರ ಸಂಸ್ಥಾನಕ್ಕೆ ಮಾತ್ರ ಇದೆ. ಅಲ್ಲಿ ತರಬೇತಿ ಪಡೆದ ವಿಶಿಷ್ಟ ಸೈನಿಕರಿದ್ದಾರೆ. ಅವರು ರಾಯಣ್ಣನಿಗೆ ಸಹಾಯ ಮಾಡಬಹುದು ಎಂದು ತಿಳಿಸಿದರು. ಆಗ ಸಂಗೊಳ್ಳಿ ರಾಯಣ್ಣ ಸುರಪುರ ಸಂಸ್ಥಾನಿಕರ ಸಹಾಯವನ್ನು ಪಡೆಯಲು ಯೋಚಿಸಿದನು.

ಕೃಷ್ಣಾ ಹಾಗೂ ಭೀಮಾನದಿಯ ಮಧ್ಯದಲ್ಲಿರುವ ಸುರಪುರ ಸಂಸ್ಥಾನ ಗುಲಬರ್ಗಾ ಜಿಲ್ಲೆ ಯಿಂದ ದಕ್ಷಿಣಕ್ಕೆ ೧೦೬ ಕಿ.ಮೀ. ಅಂತರದಲ್ಲಿದೆ. ಕ್ರಿ.ಶ. ೧೬೩೬ರಿಂದ ೧೮೫೮ರವರೆಗೆ ೧೨ ಜನ ನಾಯಕ ಅರಸರು ಆಳ್ವಿಕೆ ಮಾಡಿದ್ದಾರೆ. ಅವರಲ್ಲಿ ಮುಮ್ಮಡಿ ವೆಂಕಟಪ್ಪನಾಯಕನ ಪುತ್ರ ರಾಜಾಕೃಷ್ಣಪ್ಪನಾಯಕ (ಕ್ರಿ.ಶ. ೧೮೨೭-೧೮೪೨)ನು ಸ್ವಾತಂತ್ರ್ಯ ಪ್ರೇಮಿಯಾಗಿದ್ದನು. ಈತನಿಗೆ ಕಿತ್ತೂರ ಸಂಪೂರ್ಣವಾಗಿ ಆಂಗ್ಲರ ವಶಕ್ಕೊಳಪಟ್ಟ ಸಂಗತಿ ತಿಳಿದು ಬಹಳ ದುಃಖಿತನಾದನು. ಆ ವಿವರಣೆಯನ್ನು ಜನಪದ ನುಡಿಯಲ್ಲಿ ಹೀಗೆ ಹೇಳಲಾಗಿದೆ.

"ಕೆಂಪಾನ ಮಾರಿಯ ಕಂಪನಿ ಸರಕಾರ
ಚೆನ್ನವ್ವನ ಬಂಧಿಸಿದ ಸುದ್ದಿ ತಿಳಿದ । ಕೃಷ್ಣಪ್ಪನಾಯಕ
ಮಮ್ಮಲ ಮರಗಿ ಕುಂತಾನ"

ಸುರಪುರವು ಕಿತ್ತೂರಿನಿಂದ ಬಹುದೂರ ಇರುವುದರಿಂದ, ಸಾರ ಕುದುರೆಯ ಮೇಲೆ ಸವಾರಿ ಮಾಡಬೇಕೆಂಬ ವಿಚಾರವನ್ನು ಬಿಚ್ಚುಗತ್ತಿ ಚನ್ನಬಸಪ್ಪ ಹೇಳಿದರು. ಅದರಂತೆ ಸಂಗೊಳ್ಳಿ ರಾಯಣ್ಣ ಕಿತ್ತೂರಿನಲ್ಲಿ ತನ್ನ ಸೈನಿಕರಿಗೆ ಬಾಳಗುಂದಿ ಇಲ್ಲವೆ ಹಮಸಿಬಡಗನಾಥ ದೇವಾಲಯ ದಲ್ಲಿ ತಂಗಲು ಹೇಳಿ, ತಾನು ಸುರಪುರಕ್ಕೆ ಹೋಗಿ ಸೈನ್ಯವನ್ನು ತರುವ ವಿಚಾರವನ್ನು ತಿಳಿಸಿದನು. ಮಾರನೆಯ ದಿನ ಕುದುರೆಯನ್ನು ಹತ್ತಿ, ಹಗಲು-ರಾತ್ರಿ ಪ್ರಯಾಣಿಸಿ ಸುರಪುರವನ್ನು ತಲುಪಿದನು. ಸುರಪುರದ ಅರಸನಿಗೆ ಸಂಗೊಳ್ಳಿರಾಯಣ್ಣ ನಮಸ್ಕಾರವನ್ನು ಮಾಡಿ ತನ್ನ ಪರಿಚಯವನ್ನು ಹೇಳುತ್ತಾನೆ. ಆಂಗ್ಲರನ್ನು ಹೊಡೆದೋಡಿಸುವ ಸಂಗತಿಯನ್ನು ಸುರಪುರದ ಅರಸನಿಗೆ ವಿವರಿಸುತ್ತಾನೆ. ಇದನ್ನು ಲಾವಣಿಕಾರನೋರ್ವನು:

"ವೃತ್ತರ ಮಾಡಿ ರಾಯಿನಾಯಿಕಾ ಹೆತ್ತ ತಾಯಿ ಪಾದಕ್ಕೆ ಬಿದ್ದು,
ಮತ್ತ ಕತ್ತಿ ಹಿಡಕೊಂಡೊಂಟ ಧೀರಾ
ಮಗಲಾಯಿತಾ ಸೀಮಿಗಿ ಹೋಗಿ
ಸುರಪುರದರಸರ ಯಿದಿರಿಗೆ ನಿಂತು

ಕರವ ಮುಗಿದು ಮಾಡಿದನಾ ನಮಸ್ಕಾರ" ಎಂದು ಹೇಳುತ್ತಾನೆ.[೪೩]

ಸುರಪುರದ ಅರಸರು ಕೇಳಿದ ತಕ್ಷಣವೇ ಸೈನಿಕರಿಗೆ ಸಹಾಯವನ್ನು ನೀಡುವವರಲ್ಲ. ಸೈನ್ಯ ಸಹಾಯ ಕೇಳುವವರ ಶೌರ್ಯ, ಸಾಹಸ ಹಾಗೂ ಆ ಮನೆತನದ ಹಿನ್ನೆಲೆಯನ್ನು ಅರಿಯುವುದರ

ಜೊತೆಗೆ ತಾವು ನೀಡುವ ಸೈನ್ಯವನ್ನು ಸರಿಯಾಗಿ ಸದುಪಯೋಗಪಡಿಸಿಕೊಳ್ಳಲು ಶಕ್ತರೆ? ಎಂಬುದನ್ನು ಪರಿಶೀಲಿಸಿಯೇ ಸೈನ್ಯ ಸಹಾಯವನ್ನು ನೀಡುತ್ತಿದ್ದರು.

ಕ್ರಿ.ಶ. ೧೭೪೭ರ ಪಾಂಡಿಚೇರಿ ಕಾಳಗದಲ್ಲಿ ಹೈದರಾಬಾದ್ ನಿಜಾಮನು ಫ್ರೆಂಚರನ್ನು ಸೋಲಿಸಲು ಸುರುಪುರದ ಅರಸರ ಸಹಾಯವನ್ನು ಕೇಳಿದಾಗ ಸುರುಪುರದ ಅರಸರು ಎರಡು ಷರತ್ತುಗಳನ್ನು ಮುಂದಿಡುತ್ತಾರೆ. ಒಂದನೇ ಷರತ್ತು-ಸುರಪುರ ಬಿಟ್ಟಾಗಿನಿಂದ ಮರಳಿ ಬರುವ ವರೆಗೆ ಸುರಪುರ ಸೈನ್ಯದ ಸಂಪೂರ್ಣ ಖರ್ಚನ್ನು ನೋಡಿಕೊಳ್ಳಬೇಕು. ಎರಡನೆಯ ಷರತ್ತು-ಸುರಪುರದವರು ಯುದ್ಧಮಾಡುವಾಗ ಇವರೊಂದಿಗೆ ಸೇರಬಾರದು. ಈ ಷರತ್ತುಗಳಿಗೆ ಹೈದರಾಬಾದ್ ನಿಜಾಮನು ಒಪ್ಪುತ್ತಾನೆ. ಕೊನೆಗೆ ಯುದ್ಧದಲ್ಲಿ ಸುರಪುರ ಅರಸರಿಗೆ ಜಯ ಲಭಿಸುತ್ತದೆ.

ಹೀಗೆ ನಿಪುಣ, ಶೂರ ವ್ಯಕ್ತಿತ್ವದ ಹಾಗೂ ಯುದ್ಧ ಕೌಶಲ್ಯದ ಸೈನಿಕರ ಹಿನ್ನೆಲೆಯನ್ನು ಅರಿತ ಸಂಗೊಳ್ಳಿ ರಾಯಣ್ಣ ಸುರಪುರಕ್ಕೆ ಬರಲು ಕಾರಣವಾಯಿತು. ಆಗ ಸುರಪುರದ ಅರಸರು ತಕ್ಷಣವೇ ಸೈನಿಕ ಸಹಾಯವನ್ನು ನೀಡಲಿಲ್ಲ, ಆದರೆ ಸಂಗೊಳ್ಳಿ ರಾಯಣ್ಣನ ಶೌರ್ಯವನ್ನು ಈ ಮೊದಲೇ ಕೇಳಿ ತಿಳಿದಿದ್ದ ಸುರಪುರದ ರಾಜಾಕೃಷ್ಣಪ್ಪ ನಾಯಕನಿಗೆ ಈತನನ್ನು ಕಂಡು ಆನಂದ ವಾಯಿತು. ಆಗ ಸಂಗೊಳ್ಳಿರಾಯಣ್ಣ ತನಗೆ ಬೇಕಾದ ಸೈನ್ಯವನ್ನು ಕೇಳುವುದು ಹೀಗೆ:

“ಯೆನಗ ವಲಿದಾರ ನೀನು
ಮುನ್ನೂರು ಬ್ಯಾಡಿಕಿ ಕೊಡು
ಇನ್ನು ಆರಿಸಿ ವೈತೇನೋ ಪೂರಾ”[೪೪]

ಎಂದಾಗ ಸುರಪುರದ ಅರಸ ಮನಪೂರ್ವಕವಾಗಿ ಸಂಗೊಳ್ಳಿರಾಯಣ್ಣನಿಗೆ ಸುರಪುರದ ಸೈನಿಕರನ್ನು ಕೊಡುತ್ತಾನೆ. ಆಗ ಸಂಗೊಳ್ಳಿರಾಯಣ್ಣನು.

“ದಂಡನ್ನೆಲ್ಲಾ ತೊಕೊಂಡು ಬಂದು
ಭಂಡಾಯಿ ಮಾಡತಾನೆಂದು
ಅವರಿಗ್ಹೇಳಿದಾನೊ ಚಾತುರಾ
ರುಮಮಾಡಿರಾಯಿನಾಯಿಕಾ
ದವಡಮಾಡಿ ತಂದ ದಂಡನ
ಗಿಡದಾಗ ವೋದಿಟ್ಟಯೆಲ್ಲಾ ಬಾರಾ”[೪೫]

ಸಂಗೊಳ್ಳಿರಾಯಣ್ಣ ಈ ಸೈನಿಕರಿಗೆ ಕೆಲವು ಸಲಹೆ-ಸೂಚನೆಗಳನ್ನು ನೀಡುತ್ತಾನೆ.

“ತಂದ ದಂಡಿಗ್ಹೇಳತಾನೊ ಹೊಂದಿಕಿಂದ ಮಾತಗೋಳು
ಮುಂದನಿಂತ ಮಾಡಿ ವಳೆಸಿಸ್ತಾ
ಯೆಚ್ಚರದಿಂದ ಇರರಿ ನೀವು
ಸುತ್ತು ಕಡಗಿ ಹುಸಿಯಾರಾಗಿ ಯತ್ತರ
ಹೋದಿರಿ ನೀವು ಮತ್ತು
ಹಸ್ತರ ಮನುಷ್ಯರನ ತಿನ್ನುಹಂತಾ”[೪೬]

ಎನ್ನುತ್ತಾ ತನ್ನಲ್ಲಿರುವ ಯುದ್ಧ ಸಾಮಗ್ರಿಗಳನ್ನೆಲ್ಲಾ ನೀಡುತ್ತಾನೆ. ಆಗ ಸೈನಿಕರೆಲ್ಲಾ ಯುದ್ಧದ ತೊಡುಗೆಗಳನ್ನು ತೊಟ್ಟು, ಕಠಾರಿ, ಬಿಲ್ಲು, ಈಟಿ, ಬಾಣ, ಕತ್ತಿ, ಕೈಚೂರಿಗಳು, ಇರವು, ಕಂಜೀರ, ಬಾಕು, ಪಿಸ್ತೂಲ ಹಿಡಿದು ಸಿಟ್ಟಿನ ಬಂಟರಾದರು. ಒಬ್ಬರನ್ನೂ ಉಳಿಸದಂತೆ ರಣಸೂರೆ ಯನ್ನು ಯಾವಾಗ ಮಾಡೇವು ಎಂಬ ಆತುರದಿಂದ ಪ್ರಜ್ಞೆಯಿಲ್ಲದವರಂತೆ ಅಬ್ಬರದಿಂದ ಹೊರಟರು.[೪೭]

ಸುರಪುರದ ಸೈನ್ಯ ಭಯಂಕರವಾಗಿದೆ ಎಂಬ ಸುದ್ದಿ ಕಿತ್ತೂರಿನ ತುಂಬೆಲ್ಲಾ ಪಸರಿಸಿತು. ಇದರ ಕುರಿತಾದ ಲಾವಣಿಯೊಂದು

"ಸಂಗೊಳ್ಳಿ ರಾಯಣ್ಣ ಸಾವಿರಾಳಿನ ಭಂಟ
ಸಾರಗುದರಿಯ ಏರ್ಯಾನೋ| ರಾಯಣ್ಣ
ಸುರಪುರದ ದಂಡ ತಂದಾನೋ"[೪೮]

ನಂತರ ಶಮಸರಗಡಕ್ಕೆ ಮುತ್ತಿಗೆ ಹಾಕಿ ದಾಂದಲೆಯೆಬ್ಬಿಸುತ್ತಾರೆ. ಹೆದರಿದ ಅಲ್ಲಿಯ ಸುಬೇದಾರ

"ಸುತ್ತೇಳ ಸಮದುರು
ಮತ್ತ ನಮ್ಮ ನಾಡವಳಗ
ಹಿಂತಾವರು ಯಾರ್‍ಯಾರು ಬಂದಿದ್ದಿಲ್ಲ"[೪೯]

ಎಂದು ಧಾರವಾಡದ ಕಲೆಕ್ಟರನಿಗೆ ವರದಿ ಸಲ್ಲಿಸುತ್ತಾನೆ. ಧಾರವಾಡದಲ್ಲಿದ್ದ ಬ್ರಿಟಿಷ್ ಸೈನಿಕರು ಸಂಗೊಳ್ಳಿರಾಯಣ್ಣನನ್ನು ಬಂಧಿಸಲು ಬರುತ್ತಾರೆ. ಹಳ್ಳಕೊಳ್ಳ ಸುತ್ತುತ್ತಾರೆ. ಕೊನೆಗೆ ಈ ಸೈನಿಕರು ಫಳಾರ ಮಾಡುತ್ತಿದ್ದ ರಾಯಣ್ಣನ ಸೈನಿಕರು ಗಿಡಕ್ಕೆ ಜ್ಯಾಂವಿಗೆ ಕಟ್ಟಿ ದೂರಹೋಗಿ ನಿಲ್ಲುತ್ತಾರೆ. ಆಗ ರಾಯಣ್ಣ ಇಲ್ಲಿಯೇ ಇರುವನೆಂದು ಸುತ್ತುವರೆದು ಬ್ರಿಟಿಷ್ ಸೈನಿಕರು ಮದ್ದುಗುಂಡು ಹಾರಿಸು ತ್ತಾರೆ. ಮದ್ದುಗುಂಡು ಖಾಲಿಯಾದ ನಂತರ ಸಂಗೊಳ್ಳಿರಾಯಣ್ಣನ ಸೈನ್ಯ, ಬ್ರಿಟಿಷ್ ಸೈನ್ಯವನ್ನು:

"ಮುರಮುರದ ವೊಗ ವೊಗದ
ಹಿರಿ ಹಿರಿದ ಕಡದಾರ ಕತ್ತೀಲಿ"[೫೦]

ಸುತ್ತುಗಟ್ಟಿ ಎಲ್ಲರನ್ನೂ ಕಡಿಯುತ್ತಾರೆ. ಕೊನೆಗೆ ಕಿತ್ತೂರು, ಸಂಪಗಾಂವಿ ಕಚೇರಿಗಳನ್ನೆಲ್ಲಾ ಸುಡುತ್ತಾರೆ. ರಾಯಣ್ಣನನ್ನು ಹಿಡಿದುಕೊಟ್ಟವರಿಗೆ ಇನಾಮು ಕೊಡುವುದಾಗಿ ಸಾರುತ್ತಾರೆ. ಬ್ರಿಟಿಷರ ಹಣದ ಆಸೆಗಾಗಿ ಕಿವಿಗೊಟ್ಟ ಯಂಕನಗೌಡ, ಲಿಂಗನಗೌಡ, ಬಾಳನಾಯಕ, ಮೋಸದಿಂದ ರಾಯಣ್ಣ ನನ್ನು ಹಿಡಿದುಕೊಡುತ್ತಾರೆ. ಬಂಧಿಸಿದ ಆಂಗ್ಲರು ರಾಯಣ್ಣನನ್ನು ಜನವರಿ ೨೬, ೧೮೩೧ರಂದು ಗಲ್ಲಿಗೇರಿಸುತ್ತಾರೆ.

ಹೀಗೆ ಸುರಪುರದ ಸಂಸ್ಥಾನದ ಸೈನಿಕರ ಸಹಾಯದೊಂದಿಗೆ ತನ್ನ ಸಂಸ್ಥಾನವನ್ನು ಪೂರ್ವ ಸ್ಥಿತಿಗೆ ತರಲು ಹೊರಟಿದ್ದ ಸಂಗೊಳ್ಳಿರಾಯಣ್ಣನ ಧೈರ್ಯ, ಸಾಹಸ ಸ್ತುತ್ಯಾರ್ಹವಾಗಿದೆ.

ಅಡಿಟಿಪ್ಪಣಿ

೧. ತಲ್ಲೂರು ರಾಯನಗೌಡ್ರ, **"ಕಿತ್ತೂರು ಬಂಡಾಯ"**, ೧೯೪೭, ಪುಟ.

೨. ಒಡೆಯರ್ ಎಸ್.ಎಸ್., **ರಾಣಿ ಚೆನ್ನಮ್ಮ**, ೧೯೭೭, ಪುಟ.೪.

೩. ಅದೇ ಪುಟ-೫.

೪. ಶೀಗಿಹಳ್ಳಿ ಬಾಳಣ್ಣ **"ಬೆಳಗಾವಿ ಜಿಲ್ಲೆಯ ವೀರಶೈವ ದೇಸಗತಿಗಳು"**, ೧೯೮೯, ಪುಟ-೮.

೫. ಅದೇ ಪುಟ-೯.

೬. ಕಣವಿ, ಸಿ.ಎಸ್. (ಸಂ), **"ಕಿತ್ತೂರು ನಾಡಿನ ಇತಿಹಾಸ ಹಾಗೂ ಸಂಸ್ಕೃತಿ"**, ೨೦೦೪, ಪುಟ-೮೮.

೭. ಬಾಂಬೆ ಗೆಝೆಟಿಯರ್, ಸಂ.೧, ವಿಭಾಗ-೨, ಪುಟ ೬೫೬-೬೫೭.

೮. ಚಿಟ್ನಿಸ್, ಕೆ.ಎನ್. **"ಸತಾರ ಮತ್ತು ಪೇಶ್ವೆಗಳ ದಿನಚರಿಯಿಂದ ಆಯ್ದ ಲೇಖನ"**, ಸಂ.೩, ೧೯೭೧, ಪುಟ. ೧೪೮.

೯. ಬಾಂಬೆ ಗೆಝೆಟಿಯರ್, ಸಂ.೨೧, ಪು. ೫೭೯.

೧೦.ಖರೆ, ವಿ.ವಿ., **"ಐತಿಹಾಸಿಕ ಲೇಖನಗಳ ಸಂಗ್ರಹ"**, ಸಂ.೮, ನಂ. ೨೮೯೫, ಪುಟ. ೩೯೭೭-೩೯೮೧ ಮತ್ತು ೩೯೬೦-೬೧.

೧೧.ಚಿಟ್ನಿಸ್, ಕೆ.ಎನ್. **"ಕಿತ್ತೂರು ಮರಾಠ ಸಂಬಂಧ"**, ೧೯೭೧, ಪು. ೩೯.

೧೨.ಸರ್‌ದೇಸಾಯಿ, ಜಿ.ಎಸ್. **"ನ್ಯೂ ಹಿಸ್ಟರಿ ಆಫ್ ಮರಾಠರು"**, ಸಂ.೩, ಪುಟ. ೧೭೮-೧೮೧.

೧೩.ರೂಮಾಲ್ ನಂ. ೭೪, ಫೈಲ್ ನಂ. ೮, ಪೇಪರ ನಂ. ೧ ಮತ್ತು ೩, ಪುಣೆ.

೧೪.ಅದೇ, ಪೇಪರ ನಂ. ೭.

೧೫.ಚಿಟ್ನಿಸ್ ಕೆ.ಎನ್., **"ಮರಾಠ ಕಿತ್ತೂರ ಸಂಬಂಧಗಳು"**, ಪುಟ. ೪೧.

೧೬.ರೂಮಾಲ್ ನಂ. ೭೪, ಫೈಲ್ ನಂ. ೮, ಪೇಪರ ನಂ. ೯, ಪುಣೆ.

೧೭.ಅದೇ, ಪೇಪರ ನಂ. ೮.

೧೮.ಅದೇ, ಪೇಪರ ನಂ. ೧೦.

೧೯.ಅದೇ, ಪೇಪರ ನಂ. ೧೧.

೨೦.ಅದೇ, ಪೇಪರ ನಂ. ೧೬.

೨೧.ಅದೇ, ಫೈಲ್ ನಂ. ೧೦, ಪೇಪರ ನಂ.೨.

೨೨.ಅದೇ, ಫೈಲ್ ನಂ. ೨, ಪೇಪರ ನಂ. ೨

೨೩.ಪೂನಾ ಆರ್ಖೈವ್ಸ್, ಕರ್ನಾಟಕ ಜಮಾವು ಆರ್-೩೨೫, ಐ.ಸಿ. ೪೧೯೨.

೨೪.ಬಾಂಬೆ ಗೆಝೆಟಿಯರ್, ಸಂ. ೨೧, ಪುಟ. ೫೮೦.

೨೫.ಪೂನಾ ಆರ್ಖೈವ್ಸ್, ಕರ್ನಾಟಕ ಜಮಾವು, ಆರ್. ೩೨೪, ಐ.ಸಿ. ೧೫೩೪.

೨೬.ಮಾರೀಹಾಳ ವ್ಹಿ.ಜಿ., **"ಕಿತ್ತೂರಿನ ಇತಿಹಾಸ"**, ೧೯೭೭, ಪುಟ. ೩-೪.

೨೭.ತಲ್ಲೂರ ರಾಯನಗೌಡರು, **ಅದೇ**, ೧೯೪೭, ಪು.೬೬.

೨೮.ಶೀಗಿಹಳ್ಳಿ ಬಾಳಣ್ಣ, **"ಬೆಳಗಾವಿ ಜಿಲ್ಲೆಯ ವೀರಶೈವ ದೇಶಗತಿಗಳು"** ಪು.೨೩.

೨೯.ಕೊಂಗವಾಡ ಜಿ.ವ್ಹಿ., **"ಕಿತ್ತೂರ ಇತಿಹಾಸ"**, ಪುಟ.೩೭, ೧೯೯೮.

೩೦.ಕಣವಿ, ಸಿ.ಎಸ್. (ಸಂ.), **"ಕಿತ್ತೂರ ನಾಡಿನ ಇತಿಹಾಸ ಮತ್ತು ಸಂಸ್ಕೃತಿ"**, ಪುಟ ೯೬, ೨೦೦೪.

೩೧.ಒಡೆಯರ ಸದಾಶಿವ, **"ಕಿತ್ತೂರ ಚೆನ್ನಮ್ಮ"** ಪುಟ.೨, ೧೯೭೭.

೩೨.ಮೂಗಿ ಭಾವೆಪ್ಪ, **"ಫಾರಸಿ ಕಾಗದ ಪತ್ರಗಳು"** ಪುಟ-೧, ೧೯೪೮.

೩೩.ಒಡೆಯರ ಸದಾಶಿವ **"ರಾಣಿ ಚೆನ್ನಮ್ಮ"** ಪುಟ.೪.

೩೪.ಮಠದ ಸಿ.ವ್ಹಿ., **"ಕಿತ್ತೂರ ನಾಡಿನ ವೀರರು"**, ಪುಟ. ೧೧೨.

೩೫.ಕೆ.ಆರ್. ಇಕ್ಬಾಲ್ ಅಹಮದ್, **"ಕಿತ್ತೂರು ನಾಡಿನ ಇತಿಹಾಸ ಮತ್ತು ಸಂಸ್ಕೃತಿ ಒಂದು ಅಧ್ಯಯನ"**, (ಅಪ್ರಕಟಿತ), ಪುಟ. ೫೯.

೩೬.ತಲ್ಲೂರು ರಾಯನಗೌಡರು **ಅದೇ**, ೧೯೪೭, ಪುಟ. ೩೬.

೩೭.ಒಡೆಯರ ಸದಾಶಿವ, **"ರಾಣಿ ಚೆನ್ನಮ್ಮ"**, ೧೯೭೭, ಪು.೫.

೩೮.ಪೋತ್ನಿಸ್ ಸುಲೋಚನಾ, **"ಕಿತ್ತೂರು ರಾಣಿ ಚೆನ್ನಮ್ಮ"**, ೨೦೧೦, ಪುಟ ೨೨-೨೩.

೩೯.ಷೇಕಅಲಿ ಬಿ., **"ಕರ್ನಾಟಕ ಚರಿತ್ರೆ"**, ಸಂ.೫ ಪುಟ-೨೬.

೪೦. Chitnis K.N. **"The Nawabs of Savanur"**, p. 24.

೪೧.ಸದಾಶಿವ ಒಡೆಯರ **"ರಾಣಿ ಚೆನ್ನಮ್ಮ"**, ೧೯೭೭, ಪುಟ-೫.

೪೨.ಮಠದ ಸಿ.ವ್ಹಿ., **"ಸ್ವತಂತ್ರ ಸೌದಾಮಿನಿ"** ಪುಟ.೨೫.

೪೩.೧೮೫೭ರ ಲಾವಣಿಗಳು, ಲೋಕ ಶಿಕ್ಷಣ ಟ್ರಸ್ಟ್, ೧೯೫೭, ಪುಟ-೮-೯.

೪೪.ಲಕ್ಷ್ಮಣ್ ತೆಲಗಾವಿ, **'ಹರತಿಸಿರಿ'**, ೧೯೮೭, ಪುಟ-೩೭.

೪೫.ಅದೇ, ಪುಟ ೩೬.

೪೬.ಅದೇ, ಪುಟ-೩೬.

೪೭.ಅದೇ, ಪುಟ. ೩೬.

೪೮.ನಿಂಗಣ್ಣ ಸಣ್ಣಕ್ಕಿ **"ಕ್ರಾಂತಿವೀರ ಸಂಗೊಳ್ಳಿರಾಯಣ್ಣನ ಚರಿತ್ರೆ"**, ೨೦೦೨, ಪುಟ-೩೪.

೪೯.ಕೃಷ್ಣಮೂರ್ತಿ ಹನೂರು, **"ಜನಪದ ಮತ್ತು ಬುಡಕಟ್ಟು ಗೀತೆಗಳು"**, ೧೯೯೮, ಪು-೨೨೩.

೫೦.ಅದೇ, ೧೯೯೮, ಪು-೨೨೩.

ಅಧ್ಯಾಯ ೪

ಕಿತ್ತೂರಿ ಸಂಸ್ಥಾನದ ಆಡಳಿತ ವಿಭಾಗ-ವಿಸ್ತಾರ

೪.೫.೪. ಕಾರಲಗೆ ಕರ್ಯಾತ

೪.೫.೫. ಗೋಲಿಹಳ್ಳಿ ಕರ್ಯಾತ

೪.೫.೬. ನಂದಗಡ ಕರ್ಯಾತ

೪.೫.೭. ನೇಸರಗಿ ಕರ್ಯಾತ

೪.೫.೮. ಪುಟಗಾಂವ ಕರ್ಯಾತ

೪.೫.೯. ಬಾಗೇವಾಡಿ ಕರ್ಯಾತ

೪.೫.೧೦. ಬೆಳವಡಿ ಕರ್ಯಾತ

೪.೫.೧೧. ಮುನೋಳಿ ಕರ್ಯಾತ

೪.೫.೧೨. ಲಕೋಳಿ ಕರ್ಯಾತ

೪.೫.೧೩. ಸಂಪಗಾಂವ ಕರ್ಯಾತ

೪.೫.೧೪. ಹಲಸಿ ಕರ್ಯಾತ

೪.೧. ಕರ್ಯಾತುಗಳು-ಹಿನ್ನೆಲೆ

ಮೊಗಲರ ಆಡಳಿತ ಕೊನೆಗೊಂಡು ಮರಾಠಾ ಪೇಶ್ವೆಗಳು ಈ ಪ್ರದೇಶಕ್ಕೆ ಒಡೆಯರಾದ ಮೇಲೆ, ಕಿತ್ತೂರು ಅವರ ಆಡಳಿತದ ಒಡೆತನವನ್ನು ಒಪ್ಪಿಕೊಂಡರು. ಕ್ರಿ.ಶ.೧೭೬೪ರಲ್ಲಿ ಪೇಶ್ವೆಯವರು ಪರಶುರಾಮ ಪಟವರ್ಧನನಿಗೆ ಈ ಭಾಗ ಬಳುವಳಿ ನೀಡಿದ ಮೇಲೆ ಕಿತ್ತೂರಿನ ಕಪ್ಪ-ಕಾಣಿಕೆಗಳು ಸಲ್ಲತೊಡಗಿದವು. ಕ್ರಿ.ಶ. ೧೭೭೪ ರಲ್ಲಿ ಕಿತ್ತೂರು ಪ್ರದೇಶ ಹೈದರಾಲಿಗೆ ಸೇರಿತು. ಕೆಲವೇ ದಿನಗಳಲ್ಲಿ ಪುನಃ ಪರಶುರಾಮ ಭಾವು ಮತ್ತೆ ಈ ಪ್ರದೇಶವನ್ನು ವಶಪಡಿಸಿಕೊಂಡನು. ಕ್ರಿ.ಶ. ೧೭೮೫ರಲ್ಲಿ ಟಿಪ್ಪುವು ಪರಶುರಾಮ ಭಾವುನಿಂದ ಕಿತ್ತೂರನ್ನು ವಶಪಡಿಸಿಕೊಂಡನು. ಮುಂದೆ ನಿಜಾಮರು ಮತ್ತು ಮರಾಠರು ಒಗ್ಗೂಡಿ ಕಿತ್ತೂರನ್ನು ಟಿಪ್ಪುವಿನಿಂದ ಕಿತ್ತುಕೊಂಡರು. ಕ್ರಿ.ಶ. ೧೭೯೨ರ ಶ್ರೀರಂಗಪಟ್ಟಣದ ಒಪ್ಪಂದದ ಪ್ರಕಾರ ಕಿತ್ತೂರು ಮರಾಠರಿಗೆ ಸೇರಿತು. ಹೀಗೆ ಪೇಶ್ವೆಯವರು ಬಹುಕಾಲ ಕಿತ್ತೂರಿನ ಮೇಲೆ ಹಿಡಿತ ಸಾಧಿಸಿದರು. ಸಂಪಗಾಂವ ಭಾಗದ ಕಿತ್ತೂರು ನಾಡು ಹಲಸಿ-೧೨೦೦೦ದಲ್ಲಿ ನೆಲೆಗೊಂಡಿತ್ತು. ಇದನ್ನು "ಹುಬ್ಬಳ್ಳಿ ಪರಗಣೆ" ಎನ್ನುತ್ತಿದ್ದರು.

ಕಿತ್ತೂರು ಸಂಸ್ಥಾನವು ಒಂದು "ನಾಡು" ಆಗಿತ್ತು. ಈ ನಾಡು ಒಂದು ಚಿಕ್ಕ ರಾಜ್ಯ. ಗ್ರಾಮಗಳ ಮತ್ತು ನಗರಗಳಿಂದ ಕೂಡಿದ ರಾಜ್ಯ. ರಾಜ್ಯ ರಕ್ಷಣೆಯು ರಾಜನ ಪ್ರಮುಖ ಹೊಣೆಯಾಗಿದ್ದರೆ, ಪ್ರಜಾ ಪರಿಪಾಲನೆ ಅವನ ಕರ್ತವ್ಯವಾಗಿದೆ.

೧೫ ಮತ್ತು ೧೬ನೇ ಶತಮಾನದಲ್ಲಿ ಪರ್ಷಿಯನ್‌ರ ಪ್ರಭಾವವು ಉತ್ತರ ಕರ್ನಾಟಕದ ಆದಿಲ್ ಷಾಹಿ ಮನೆತನದ ಮೇಲೆ ಆಯಿತು. ಭಾಷಿಕವಾಗಿ ಉಪಯೋಗಿಸುತ್ತಿದ್ದುದು ಪರ್ಶಿಯನ್ ಬಾಷೆಯೇ ಆಗಿತ್ತು. ಉದಾಹರಣೆಗೆ ಕರ್ಯಾತ, ಮೌಜೆ, ಸುಭಾ, ಪರಗಣಾ, ಜಹಗೀರದಾರ, ವತನದಾರ, ಇನಾಮದಾರ, ದಳವಾಯಿ, ತಹಶೀಲ್ದಾರ ಪರ್ಶಿಯನ್ ಶಬ್ದಗಳನ್ನು ಉಪಯೋಗಿಸಲಾಗಿತ್ತು.

ಕ್ರಿ.ಶ. ೧೭೯೩ನೇ ಇಸ್ವಿಯಲ್ಲಿ, ೨೮೫ ಹಳ್ಳಿಗಳಿಂದ ವ್ಯಾಪ್ತಿಯಾದ ಕಿತ್ತೂರ ನಾಡ ಪ್ರದೇಶ ಪೇಶ್ವೆ ಆಡಳಿತಕ್ಕೊಳಪಟ್ಟಿತು. ಈ ಹಳ್ಳಿಗಳು ದೊಡ್ಡ ದೊಡ್ಡ (ಬೃಹತ್) ಆಡಳಿತಾತ್ಮಕ ಭಾಗಗಳೆಂಬ-ಕರ್ಯಾತ ಪ್ರದೇಶವನ್ನೊಳಗೊಂಡಿದ್ದವು. ಈ ಪ್ರಕಾರ ೧೪ ಕರ್ಯಾತ ಹಾಗೂ ಒಂದು **ಕಸಬಾ** ಪ್ರದೇಶಗಳೆಂದು ಗುರುತಿಸಲಾಗಿತ್ತು. ಕಿತ್ತೂರ ನಾಡ ಪ್ರದೇಶವು **ತಾಲೂಕಾ** ಎಂದು ಕರೆಯಲ್ಪಡುತಿತ್ತು. ಇದು **ಕರ್ಯಾತ**ಕ್ಕಿಂತ ಹೆಚ್ಚಿನ ಆಡಳಿತಾತ್ಮಕ ಭಾಗವೆಂದು ಪರಿಗಣಿಸಲ್ಪಟ್ಟಿತ್ತು. **ಸುಬಾ** ಎಂಬ ಭಾಗ ತಾಲೂಕಾಕ್ಕಿಂತ ಹೆಚ್ಚಿನ ಆಡಳಿತಾತ್ಮಕ ಭಾಗವೆಂದು ಕರೆಯಲ್ಪಡುತ್ತಿತ್ತು.

ಈ ಎಲ್ಲಾ ಕರ್ಯಾತಗಳು ವ್ಯಾಪ್ತಿಯಲ್ಲಿ ಒಂದಕ್ಕೊಂದು ವಿಭಿನ್ನವಾಗಿದ್ದವು. ಉದಾ **ಕಾದರವಳ್ಳಿ** ಕರ್ಯಾತ ಏಳು ಹಳ್ಳಿಗಳನ್ನು ಹೊಂದಿದರೆ, **ಬೆಳವಡಿ** ಕರ್ಯಾತವು ೫೪ ಹಳ್ಳಿಗಳನ್ನು ಹೊಂದಿತ್ತು.[೧]

ಕ್ರಿ.ಶ. ೧೧೫೪ರಲ್ಲಿಯ ಸಿದ್ಧಾಪೂರ ಶಿಲಾಶಾಸನವು ಉಲ್ಲೇಖಿಸುಂತೆ ಕಿತ್ತೂರು-೩೦ ಮೂವತ್ತು ಹಳ್ಳಿಗಳನ್ನೊಳಗೊಂಡ ಒಂದು ಘಟಕವಾಗಿತ್ತು. ಇದೇ ಶಾಸನದಲ್ಲಿ ಇದು ಪಲಸಗೆ ಪರ್ನಿರ್ಚ್ಛಾಸಿರದ ಕಿತ್ತೂರ ಮೂವತ್ತು ನಾಡೊಳಗಿನ ಬಡ ಹೊಸವೊಳಲವೆಂದು ಉಲ್ಲೇಖಿತವಾಗಿದೆ. ಹಲಸಿಯಲ್ಲಿನ ೧೨೦೦೦ ಮೂವತ್ತು ಹಳ್ಳಿಗಳ ಕಿತ್ತೂರ ಪಟ್ಟಣ ಒಂದು ಆಡಳಿತದ ಕೇಂದ್ರ ವಾಗಿತ್ತು. ಇದರಲ್ಲಿ ಹೊಸವೊಳಲವೆಂಬ ಗ್ರಾಮ ಸೇರಿತ್ತು (ಹಲಸಿ-೧೨೦೦೦), ಉಪವಿಭಾಗ (ಕಿತ್ತೂರು-೩೦) ಹಾಗೂ ಒಂದು ಹಳ್ಳಿ (ಹೊಸವೊಳಲ) ಹೊಸವೊಳಲವು ಬೈಲಹೊಂಗಲ ತಾಲೂಕಿನ ಆಗ್ನೇಯ ಹಾಗೂ ಧಾರವಾಡ ಸರಹದ್ದಿನ ಮಧ್ಯವಿರುವ ಒಂದು ಗ್ರಾಮ ಎಂದು ಶಾಸನ ದಾಖಲಿಸಿದೆ. ಆದರೆ ಕಿತ್ತೂರ-೩೦ರ ಇತರ ಗ್ರಾಮಗಳ ಬಗ್ಗೆ ಯಾವ ಉಲ್ಲೇಖವೂ ಇಲ್ಲ. ಕೆಲ ದಾಖಲೆಗಳಲ್ಲಿ ಕಿತ್ತೂರ ದೇಗಾವೆ ಕಂಪಣದ ಒಂದು ಭಾಗವೆಂದು ಮತ್ತು ಕೆಲವು ವೇಳೆ ಇದು ಕಿತ್ತೂರ-೩೦ ಎಂದು ಉಲ್ಲಿಖಿತವಾಗಿದೆ. ಉದಾ: ದೇಗಾಂವಿ ಕಂಪಣದಲ್ಲಿ ಬರುವ ಹಳ್ಳಿಗಳೆಂದರೆ ಮಿಂದಾವಳ್ಳಿ (ಬೈಲೂರ) ಕುಲವಳ್ಳಿ, ಬಸರಕೋಡ, ದೇಗುಲಹಳ್ಳಿ, ಸಿಗೇರಿ (ಸಿರಗಾಪೂರ) ಮತ್ತು ಕೆರವಾಡ.[೨]

ಆಡಳಿತದ ಅನುಕೂಲಕ್ಕೆಂದು ಸಾಮ್ರಾಜ್ಯವನ್ನು ಘಟಕಗಳನ್ನಾಗಿ ಭಾಗ ಮಾಡುವ ಪದ್ಧತಿ ಮೊದಲಿನಿಂದಲೂ ಇತ್ತು. ಗೋವೆಯ ಕದಂಬರ ಶಿಲಾಶಾಸನಗಳಲ್ಲಿದ್ದಂತೆ ಹಲಸಗಿ ಪ್ರಾಂತವು ನಾಡು ಎಂದು ಮತ್ತು ಸಂಖ್ಯಾತ್ಮಕವಾಗಿ ೧೨೦೦೦ ಉಲ್ಲೇಖಿತವಾಗಿದೆ. ಉನ್ನತ ವಿಭಾಗವಾಗಿ ಹಳ್ಳಿಗಳನ್ನು ವಿಂಗಡಿಸುವ ಹಲವು ಪದ್ಧತಿಗಳಿದ್ದರೂ, ದಶಮಾಂಶ ಪದ್ಧತಿಯು ಪ್ರಧಾನವಾಗಿತ್ತು. ಅದರಲ್ಲಿರುವ ಹಳ್ಳಿಗಳ ಸಂಖ್ಯೆಗಳಿಗನುಗುಣವಾಗಿ ವಿಭಾಗವು ಸಾಮಾನ್ಯವಾಗಿ ಸಂಖ್ಯಾ ಪ್ರತ್ಯಯ ಪಡೆಯುತ್ತಿತ್ತು ಒಮ್ಮೊಮ್ಮೆ ಅದರಲ್ಲಿರುವ ಕಂದಾಯ ಘಟಕಗಳ ಸಂಖ್ಯೆಗಳಿಗನುಗುಣವಾಗಿ ಮತ್ತು ಅದರ ಕೇಂದ್ರಸ್ಥಾನಕ್ಕನುಗುಣವಾಗಿ ಈ ರೀತಿ ಯಾಗುತ್ತಿತ್ತು. ಆ ವಿಭಾಗದಲ್ಲಿಯ ಚಟುವಟಿಕೆ ಗಳ ಕೇಂದ್ರಸ್ಥಾನವೆಂದು ಕಾರ್ಯನಿರ್ವಹಿಸುವ ಸ್ಥಳಗಳ ಹೆಸರುಗಳನ್ನು ಅವು ಪಡೆದಿದ್ದವು. ಸಂಖ್ಯಾ ಪ್ರತ್ಯಯಗಳ ಬಗೆಗೆ ಹೇಳುವುದಾದರೆ, ಸಣ್ಣ ಸಂಖ್ಯೆಗಳಾದ ಹತ್ತು, ನೂರು ಸ್ಥಳಗಳಿಗೆ ಜೋಡಿಸಲಾದ ಇವು ಬಹುಶಃ ಪಟ್ಟಣಗಳು, ಶಹರಗಳು ಹಾಗೂ ಹಳ್ಳಿಗಳನ್ನು ಗುರುತಿಸುತ್ತಿದ್ದವು.

ಕದಂಬ ಜಯಕೇಶಿ-III ಕ್ರಿ.ಶ. ೧೧೮೮ ವೇಳೆಯ ಶಿಲಾಶಾಸನದಲ್ಲಿ ದಾಖಲಿಸಿದಂತೆ ಮುಖ್ಯ ಮಂತ್ರಿ ಈಶ್ವರಯ್ಯಾ ದಂಡನಾಯಕನ ಸಮಕ್ಷಮದಲ್ಲಿ ಇಬ್ಬರು ಪುರೋಹಿತರು ತಂಟೆಯನ್ನು ಬಗೆಹರಿಸಲು ಬಂದಿದ್ದರು. ಈ ಪುರೋಹಿತರಲ್ಲೊಬ್ಬರು ಕಿತ್ತೂರಿನಲ್ಲಿಯ ಅತ್ತಿಭಾವಿಯ ಕಲ್ಲೇಶ್ವರ ದೇವಾಲಯದ ಆಚಾರ್ಯರಾದ ಶಿವಶಕ್ತಿ ಹಾಗೂ ಇನ್ನೊಬ್ಬರು ಆ ಸ್ಥಳದ ಮೂಲದೇವರ ಆಚಾರ್ಯರಾದ ಕಲ್ಯಾಣಶಕ್ತಿ, ಶಿವಶಕ್ತಿ ಸಮರ್ಥಿಸಿದ್ದೇನೆಂದರೆ ಈ ಸ್ಥಳದ ಒಂದು ನಿವೇಶನ ಕಿತ್ತೂರಿನಲ್ಲಿಯ ಅಲಕೋಲನಕೇಯಿಯ ಕಲ್ಲೇಶ್ವರನಿಗೆ ಸಂಬಂಧಿಸಿದ್ದೆಂದು ಮತ್ತು ಕಲ್ಯಾಣಶಕ್ತಿಯು

ಆ ನಿವೇಶನ ಮೂಲ ದೇವರಿಗೆ ಸಂಬಂಧಿಸಿದ್ದೆಂದು ಪ್ರತಿಪಾದಿಸಿದನು. ಮುಖ್ಯಮಂತ್ರಿಯು ಈ ಪ್ರಕರಣವನ್ನು ಬ್ರಾಹ್ಮಣರಿಗೆ ಖಾಯಂ ಆಗಿ ಬಳುವಳಿಯಾಗಿ ಕೊಟ್ಟ ದೇಗಾವಿ ಹಳ್ಳಿಯ ಮಹಾಜನರ ಸಭೆಗೆ ನಿರ್ದೇಶಿಸಿದನು. ಶಿವಶಕ್ತಿಯು ಕಾಯ್ದಕುಳದ ಬರೆಯನ್ನು ತನ್ನ ಕೈ ಮೇಲೆ ತೆಗೆದುಕೊಂಡು ತನ್ನ ಪರವಾಗಿ ಶಪಥ ಮಾಡಿದನು. ಮಾರನೇಯ ದಿನ ದೇಗಾಂವಿಯ ಮಹಾಜನರು ಸಭೆ ಸೇರಿ ಶಿವಶಕ್ತಿಯ ಕೈಯನ್ನು ಪರೀಕ್ಷೆ ಮಾಡಿ ಅವನು ಪ್ರಕರಣದಲ್ಲಿ ಜಯಶಾಲಿಯಾದನೆಂದು ನಿರ್ಧರಿಸಿದರು. ಈ ಯಶಸ್ಸಿನ ಪತ್ರ (ಜಯಪತ್ರ) ಅವನಿಗೆ ಕೊಡಲ್ಪಟ್ಟಿತು. ಆ ಭಾಗದ ವಿಶಿಷ್ಠ ರೀತಿಯ ಸತ್ವ ಪರೀಕ್ಷಾ ಮೂಲಕ ನ್ಯಾಯ ಪರೀಕ್ಷೆಯ ಬಗ್ಗೆ ಉಲ್ಲೇಖಿಸುವುದರಿಂದ ಈ ಶಿಲಾಶಾಸನವು ಬಹಳ ಮಹತ್ವದ್ದಾಗಿದೆ. ದೇಗಾವೆಯ ಮಹಾಜನಗಳ ಸಭೆಗೆ ಈ ನ್ಯಾಯ (ಪ್ರಕರಣ)ವನ್ನು ಸ್ವತಃ ಮುಖ್ಯಮಂತ್ರಿಯೇ ಒಪ್ಪಿಸಿದ್ದರಿಂದ ಕ್ರಿ.ಶ. ೧೧೮೮ರ ಕೊನೆಗೆ ಕಿತ್ತೂರ ದೇಗಾಂವಿಗೆ ಸೇರಿಸಲ್ಪಟ್ಟಿರುವ ಸಾಧ್ಯತೆಯಿದೆ. ಶಾಸನದಲ್ಲಿ ಶಾಂತನಾಯಕನೆಂಬವನು ಅತ್ತಿಭಾವಿಯಲ್ಲಿ ಕಲ್ಮೇಶ್ವರ ದೇವಾಲಯವನ್ನು ಕಟ್ಟಿಸಿ ಅದಕ್ಕೆ ನೀರಾವರಿ ಭೂಮಿ ಮತ್ತು ದೀಪಕ್ಕಾಗಿ ಭೂಮಿ, ಸುವಾಸನೆ ದ್ರವ್ಯ, ದೇವರಿಗೆ ಕಾಣಿಕೆ ಮತ್ತು ಜೀರ್ಣೋದ್ಧಾರದ ಖರ್ಚಿಗೆ ಬಳುವಳಿ ಹಣವನ್ನು ದಾನವಾಗಿ ನೀಡಿದನು. ತೋಟಮಾಲಿಗಳಿಂದ ಹಣದ ರೂಪದಲ್ಲಿ ಕಾಣಿಕೆ, ಮತ್ತು ಭೂಸಾಗುವಳಿ ದಾರರಿಂದ ಹಣದ ರೂಪದಲ್ಲಿ ಕಾಣಿಕೆ ಕೊಟ್ಟಿರುವ ಬಗ್ಗೆ ಈ ಶಿಲಾಶಾಸನದಲ್ಲಿ ಉಲ್ಲೇಖವಿದೆ. ಪ್ರತಿ ಪ್ರಾಣಿ ಹೊರೆಗೆ ವಿಸಾ ಕಾಣಿಕೆ ಮತ್ತು ಪ್ರತಿ ಮನುಷ್ಯ ಹೊರೆಗೆ ಅರ್ಧ ವಿಸಾ ಕಾಣಿಕೆಯ ಬಗ್ಗೆ ಇದು ಸೂಚಿಸುತ್ತದೆ. ಈ ಕಾಣಿಕೆಯನ್ನು ಎಲೆ ವ್ಯಾಪಾರಿ ಸಂಘದವರು ನೀಡಬೇಕಿತ್ತು.[೩]

ಮೊಗಲರ, ನವಾಬರ, ಮರಾಠಾ ಪೇಶ್ವೆಗಳ ಆಡಳಿತಕ್ಕೊಳಗಾದ ಕಿತ್ತೂರು ಸಂಸ್ಥಾನ ಅವರ ಆಡಳಿತ ಕ್ರಮವನ್ನೇ ಅನುಸರಿಸಿದರು. ಕಸಬಾ ಹಾಗೂ ಕರ್ಯಾತು ಎಂಬ ಪದಗಳು ಈ ಅವಧಿಯಲ್ಲಿ ಬಳಕೆಯಲ್ಲಿದ್ದವು. ಆಗಿನ ತಾಲೂಕು ಕಿತ್ತೂರು, ಒಂದು ಕಸಬಾ (ಕಸಬಾ ಮುಗುಟಖಾನ ಹುಬ್ಬಳ್ಳಿ) ಮತ್ತು ೧೪ ಕರ್ಯಾತುಗಳನ್ನು ಹೊಂದಿತ್ತು. ಮಲ್ಲಸರ್ಜನ ಕಾಲಕ್ಕೆ ಒಟ್ಟು ೧೫ ಕರ್ಯಾತುಗಳಿದ್ದುವು. ಒಂದು ಕಾರ್ಯಾತು ಎಂದರೆ, ೧೦ ರಿಂದ ೧೨ ಗ್ರಾಮಗಳ ಒಂದು ಸಮೂಹ.

ಕರ್ಯಾತ-ಬೆಳವಡಿ, ಸಂಪಗಾಂವ, ಹಲಸಿ, ಕಾರಲಗೆ, ಕೇಖೋಲಿ, ನೇಸರಗಿ, ಗೋಲಿಹಳ್ಳಿ, ಮನೋಳ್ಳಿ, ನಂದಗಡ, ಕಾದರವಳ್ಳಿ, ಪುಟಗಾಂವ, ಕಲೋರಿ, ಅಂಬಡಗಟ್ಟಿ ಬಾಗೇವಾಡಿಗಳಾಗಿದ್ದವು. ಪ್ರಸ್ತುತ ಇವು ಬೈಲಹೊಂಗಲ, ಸವದತ್ತಿ, ಗೋಕಾಕ, ಬೆಳಗಾವಿ, ವಿಜಾಪೂರ, ಹಳಿಯಾಳ, ಸುಫಾ ಮತ್ತು ಧಾರವಾಡ ತಾಲೂಕುಗಳಲ್ಲಿ ಸೇರಿವೆ. ಈ ಕರ್ಯಾತುಗಳಲ್ಲಿ ೨೮೨೪ ಮೌಜೆ (ಗ್ರಾಮ)ಗಳು ಇದ್ದವು. ಈ ಗ್ರಾಮಗಳು ಮತ್ತು ಕಸಬಾ ಕೂಡಿಸಿ "೨೮೫ ಕಂದಾಯ ವಸೂಲು ಮಹಲುಗಳನ್ನಾಗಿ ವಿಂಗಡಿಸಲಾಗಿತ್ತು."[೪] ಇಲ್ಲಿಯ ಕಸಬಾ, ಮೌಜೆ ಎಂಬ ಪದಗಳು ಮೊಗಲರ ಹಾಗೂ ಪೇಶ್ವೆಗಳಲ್ಲಿ ಕಂಡುಬಂದರೆ, "ಮಹಲು," ಪೇಟಾ ಎಂಬ ಪದ ನವಾಬರ ಕಾಲಕ್ಕೆ ಬಳಕೆಯಲ್ಲಿತ್ತು.

ಕರ್ಯಾತ ಎಂಬುದು ಪರ್ಷಿಯನ್ ಶಬ್ದವಾಗಿದ್ದು ಈ ಶಬ್ದದಲ್ಲಿ ಎರಡು ಪದಗಳಿವೆ. **'ಕರ್ಯಾ'** ಎಂದರೆ 'ಗ್ರಾಮ', **'ಯಾತ'** ಎಂದರೆ 'ಬಹಳಷ್ಟು' ಅಥವಾ 'ಒಟ್ಟು' ಎಂದರ್ಥ. ಬಹಳಷ್ಟು ಗ್ರಾಮಗಳು ಒಂದಾಗಿ ಸೇರಿ ಒಂದು ವಿಭಾಗದ ಅಡಿಯಲ್ಲಿ ಆಡಳಿತಕ್ಕೆ ತರುವುದೇ. ಕಿತ್ತೂರು ಸಂಸ್ಥಾನದಲ್ಲಿ ಒಟ್ಟು ೧೪ ಕರ್ಯಾತುಗಳಿವೆ.[೫]

ಚತುರ್ದಶ ಕರ್ಯಾತದೊಳಿಹ ವಳಿತದ
ಶತಕತ್ರಯ ಷಷ್ಠಿಯ ಮಿತಿಯಾಗಿಹ
ಯುತ ಗ್ರಾಮಗಳಿಗೆ ಶ್ರಾವಣ ಮಾಸ ಮಹಾಪೂಜೆಗೆ ನೀವು
ಸಿತಿಕಂಧರ ಪ್ರೀತ್ಯರ್ಥ ಪ್ರಯತ್ನದಿ
ಶತಪತ್ರಾದಿ ಕುಸುಮರಾಜಿಯ ಮಾ
ರುತವೇಗದಿ ಮಾಲೂರಲಕ್ಷವನು ತರುವದು ತಡೆದಲೆ

ಹೀಗೆ ಕಿತ್ತೂರು ಸಂಸ್ಥಾನದ ೧೪ ಕರ್ಯಾತುಗಳು ಇಂದಿನ ಬೈಲಹೊಂಗಲ ಮತ್ತು ಖಾನಾಪುರ ತಾಲೂಕಿನಲ್ಲಿರುವುದು ಗ್ರಂಥಗಳಿಂದ ಸ್ಪಷ್ಟವಾಗಿರುತ್ತದೆ.[೬]

ಪದಿನಾಲ್ಕು ನಗರದ ಕರ್ಯಾತಿಯು
ಪದಿನಾಲ್ಕು ಲೋಕದಂದೆ ವೊಲು
ಸದಮಳ ನೃಪ ಸಂಪದತಿಶಯಕೆ ತವ
ನಿಧಿ ಯಾಗಿಪ್ಪುದು ಸಿರಿವಿಗಿಲು ॥

೧೪ ಕರ್ಯಾತುಗಳನ್ನು ೧೪ ಲೋಕಗಳೆಂಬಂತೆ ಆಳಿದ ಸಚಿವ ವೀರ ಸಂಗಪ್ಪನು ಶಿವನಿಗೆ ನಂದಿಯಂತೆ ಶ್ರಾವಣ ಮಾಸದಲ್ಲಿ ಶಿವಪೂಜೆ ನೇರವೇರಿಸುತ್ತಿದ್ದನು.

ಸಂಪದ್ಭರಿತವಾದ ಕಿತ್ತೂರು ನಾಡು ಆಡಳಿತದ ಅನುಕೂಲಕ್ಕಾಗಿ ೧೪ ಕರ್ಯಾತುಗಳಲ್ಲಿ ಹಂಚಲ್ಪಟ್ಟಿದ್ದು, ಆಂತರಿಕವಾಗಿ ಸ್ವತಂತ್ರ ಆಡಳಿತ ಹೊಂದಿತ್ತು. ಹಿಂದೆ ನಾಡನ್ನು ದೇಶ, ಪ್ರಾಂತ, ವಿಷಯ, ಭುಕ್ತಿ, ಮಂಡಲ, ಅಗ್ರಹಾರ, ಕಸಬಾ, ಕರ್ಯಾತ್, ಮುಂತಾಗಿ ವಿಭಾಗಿಸಲ್ಪಟ್ಟಿತ್ತು. ರಾಜರು ತಮಗೆ ವಿಧೇಯರಾದ ಸಮರ್ಥ ವ್ಯಕ್ತಿಗಳನ್ನು ಅಧಿಕಾರಿಗಳನ್ನಾಗಿ ನೇಮಿಸುತ್ತಿದ್ದರು. ಮಧ್ಯಕಾಲೀನ ಕರ್ನಾಟಕ ಮತ್ತು ದಖನ್ನಿನ ಶಿಲಾಶಾಸನಗಳಲ್ಲಿ ಇವುಗಳಿಗೆ "ಮಂಡಲ, ವಿಷಯ, ದೇಶ, ನಾಡು, ಕಂಪಣ ಎಂದು ಕರೆಯಲಾಗಿದೆ."[೭]

ಪೇಶ್ವೆಯವರಿಗೆ ಕಿತ್ತೂರು ಸಂಸ್ಥಾನಿಕರು ಹಲವಾರು ಗ್ರಾಮಗಳನ್ನು ಇನಾಮು ನೀಡಿದ್ದರು. ಗ್ರಾಮ ಎಂದರೆ, ಹಳ್ಳಿ. ಪ್ರಾದೇಶಿಕ ವಿಭಾಗದಲ್ಲಿ ಅತ್ಯಂತ ಕೆಳಗಿನದು. ಇದು ಜನವಸತಿಯ ಕೇಂದ್ರ. ಈ ಹಳ್ಳಿಗಳನ್ನು ಕೇರಿ, ಓಣಿಗಳೆಂದು ವಿಭಾಗಿಸಿದ್ದರು. ಉದಾ: ಹೊಲಗೇರಿ, ಬೆಲ್ಲದ ಓಣಿ, ಗದ್ದಿಓಣಿ, ಬಳಿಗಾರ ಓಣಿ, ರೈತರ ಓಣಿ ಮುಂತಾದವು. ಇವುಗಳ ಆಡಳಿತವನ್ನು ಇನಾಮದಾರರು ಮತ್ತು ದೇಸಾಯಿಗಳು ನೋಡುತ್ತಿದ್ದರು.

ಕಿತ್ತೂರು ಸಂಸ್ಥಾನಿಕರು ಪೇಶ್ವೆಯವರಿಗೆ ನೀಡಿದ ಇನಾಮು ಗ್ರಾಮಗಳಲ್ಲಿ (ದೇಸಾಯಿ ಅಥವಾ ಅಧಿಕಾರಿಗಳಿಗೆ ಕೊಡ ಮಾಡಿದ ಗ್ರಾಮಗಳು) (೨೨) ಸರಂಜಾಮಿ ಗ್ರಾಮಗಳು

(ಸೈನಿಕರಿಗಾಗಿ ಮೀಸಲಿಟ್ಟ ಗ್ರಾಮಗಳು), ಕಮಾವೀಸ ಗ್ರಾಮಗಳು, ದುಮಾಲೆ ಗ್ರಾಮಗಳು (ಕೇಂದ್ರ ಸರ್ಕಾರ ಮತ್ತು ಸ್ಥಳೀಯ ಸರ್ಕಾರಗಳಿಗೆ ಕಂದಾಯ ಕೊಡುವ ಗ್ರಾಮಗಳು) ಇದ್ದವು. ಸರಂಜಾಮು ಹಾಗೂ ಕಮಾವೀಸ ಗ್ರಾಮಗಳೆಂದರೆ, ಕಂದಾಯ ವಸೂಲಿ ಗ್ರಾಮಗಳು. ದುಮಾಲಿ ಗ್ರಾಮಗಳೆಂದರೆ, ಖಾಯಂ ಅಥವಾ ಕೆಲವು ವರ್ಷಗಳವರೆಗೆ ಉತ್ಪನ್ನ ಅನುಭವಿಸಲು ನೀಡಿದ ಗ್ರಾಮಗಳಾಗಿವೆ. ಪ್ರತಿಯೊಂದು ಗ್ರಾಮವೂ ತನ್ನಷ್ಟಕ್ಕೆ ಒಂದು ಸ್ವತಂತ್ರ ಘಟಕವಾಗಿತ್ತು.[೮] ಗ್ರಾಮದ ಕಾರ್ಯಭಾರವು ಗ್ರಾಮಪಂಚಾಯತಿ ಮುಖಾಂತರ ಸಾಗುತ್ತಿತ್ತು. ತಳವಾರನಿಂದ ಮೊದಲ್ಗೊಂಡು ಗೌಡನವರೆಗಿನ ಎಲ್ಲಾ ಹಳ್ಳಿಯ ನೌಕರರು ವತನದಾರರಾಗಿದ್ದರು. ವಂಶ ಪಾರಂಪರೆಯಾಗಿ ಬಂದ ರೂಢಿಯಿಂದ ಅವರಿಗೆ ತಮ್ಮದೇ ಆದ ಕೆಲಸದ ಹೊಣೆಗಾರಿಕೆಯು ಇರುತ್ತಿತ್ತು. ಇವರು ತಮ್ಮ ಕೆಲಸದ ಬಗ್ಗೆ ಅಭಿಮಾನ ಹೊಂದಿ ಶ್ರದ್ಧೆಯಿಂದ ಕಾರ್ಯ ನಿರ್ವಹಿಸುತ್ತಿದ್ದರು. ಇದರಿಂದ ಕಾಲ ಕಾಲಕ್ಕೆ ರಾಜ್ಯದ ಆಡಳಿತವು ಸಾಗಿಬಂದು ಸುವ್ಯವಸ್ಥಿತವಾಗಿ ನಡೆಯುತ್ತಿತ್ತು. ಇದೇ ರೀತಿಯಲ್ಲಿ ಮೇಲಾಧಿಕಾರಿಗಳಾದ ಸುಬೇದಾರರು, ಸರದಾರರು, ಮಂತ್ರಿಗಳಿಗೂ ಭೂಮಿಯನ್ನು ನೀಡಲಾಗುತ್ತಿತ್ತು. ಇವರಿಗೆ ವತನದಾರರೆಂದು ಕರೆದಿರುವ ಸಾಧ್ಯತೆ ಇದೆ. ಇವರ ಅಧಿಕಾರದ ದರ್ಪವು ಜನರ ಮೇಲೆ ಪ್ರಭಾವ ಬೀರಿ, ಆಡಳಿತದಲ್ಲಿ ಬೀಗಿಯಾದ ಭದ್ರತೆ ಇರುತ್ತಿತ್ತು.[೯]

ರಾಜರಗಿದ್ದ ಸ್ಥಾನ-ಮಾನ, ಗೌರವ, ಸಂಸ್ಥಾನಿಕರಿಗೂ ಇತ್ತು. ಅಧಿರಾಜರಂತೆ ಇವರೂ ಮಂತ್ರಿಮಂಡಲ, ಸೇನೆ, ಅಧಿಕಾರ ವರ್ಗವನ್ನು ಹೊಂದಿದ್ದರು. ಅದರಲ್ಲಿ ರಾಜಗುರು, ಮುಖ್ಯಮಂತ್ರಿ, (ಪ್ರಧಾನ) ಕೋಶಾಧ್ಯಕ್ಷ, ಸೇನಾಪತಿ ಹಾಗೂ ಮುಖ್ಯ ಸರದಾರರು ಇರುತ್ತಿದ್ದರು. ಯುವರಾಜ ಕುಮಾರರು ಆಡಳಿತದಲ್ಲಿ ಅನುಭವ, ತರಬೇತಿ ಹೊಂದಲೆಂಬ ಉದ್ದೇಶದಿಂದ ಅವರನ್ನು ವಿವಿಧ ಕರ್ಯಾತುಗಳಲ್ಲಿ ಅಧಿಕಾರಿಗಳನ್ನಾಗಿ ಮಾಡುತ್ತಿದ್ದರು. ಇವರ ಅಧೀನದಲ್ಲಿ ಪ್ರಭು ಗಾವುಂಡರುಗಳು, ಗಾವುಂಡರು, ಕರಣಿಕರು, ಜೋಯಿಶರು, ಸುಂಕದ ಅಧಿಕಾರಿಗಳು (ಜಕಾತಿ) ಮತ್ತು ರಾಯಭಾರಿಗಳು ಇದ್ದರು.

ಕಿತ್ತೂರು ಸಂಸ್ಥಾನಿಕರು ಪ್ರಭಾವಿ ಜನಾಂಗವಾಗಿದ್ದು, ವಂಶ ಪಾರಂಪರ್ಯವಾಗಿ ಆಳುತ್ತ ಅಧಿರಾಜರಿಗೆ ಕಪ್ಪ-ಕಾಣಿಕೆಗಳನ್ನು ನೀಡುತ್ತ ಆಳ್ವಿಕೆ ನಡೆಸಿದ್ದಾರೆ. ಹಳ್ಳಿಗಳಲ್ಲಿ ಸೇನುಭೋಗ (ಶಾನುಭೋಗ)ರು ಭೂ-ಕಂದಾಯ ವಸೂಲಿ ಮಾಡುತ್ತಿದ್ದರು. ಮಂತ್ರಿಗಳು ಆಡಳಿತದಲ್ಲಿ ಸಹಾಯಕ ರಾಗಿದ್ದಂತೆ, ಸೇನಾಪತಿ-ದಂಡನಾಯಕರು ರಾಜ್ಯದ ರಕ್ಷಣೆಯಲ್ಲಿ ಅರಸನಿಗೆ ಒತ್ತಾಸೆಯಾಗಿದ್ದರು. ನಿಯೋಗಿಗಳು ರಾಜನಿಗೆ ರಾಜಕೀಯ ಮಾಹಿತಿ ನೀಡುತ್ತಿದ್ದರಲ್ಲದೇ, ಹಲವು ವೇಳೆ ರಾಯಭಾರಿ ಗಳಾಗಿಯೂ ವರ್ತಿಸುತ್ತಿದ್ದರು. ಕರಣಿಕರು ಸ್ಥಳೀಯ ತೆರಿಗೆ ಮುಂತಾದವುಗಳ ಲೆಕ್ಕ-ಪತ್ರಗಳನ್ನು ಬರೆದಿಟ್ಟು ಸರಕಾರಕ್ಕೆ ಮಾಹಿತಿ ನೀಡುತ್ತಿದ್ದರು. ಜ್ಯೋತಿಷಿ, ವೈದ್ಯ, ಭರತಜ್ಞ, (ನಾಟ್ಯಶಾಸ್ತ್ರ ನಿಪುಣ), ಪಾಠಕ, ಗಾಯಕ, ಪರಿಹಾಸಕ, ಕವೀಶ್ವರ, ತಳವಾರ (ಹಳಬ), ಮುಂತಾದವರ ಸೇವೆ ಅಗತ್ಯವಿದ್ದು, ಇವರೆಲ್ಲರೂ ಸಂಸ್ಥಾನಿಕರ ಆಸ್ಥಾನವನ್ನು ಅಲಂಕರಿಸಿದ್ದರು.

೪.೨. ಕರ್ಯಾತುಗಳ ವಿಂಗಡನೆ

೧.	ಅಂಬಡಗಟ್ಟಿ	೮.	ಇಟಗಿ
೨.	ಬೆಳವಡಿ	೯.	ಕಕ್ಕೇರಿ
೩.	ಬಾಗೇವಾಡಿ	೧೦.	ನಂದಘಡ
೪.	ಕಾದರೊಳ್ಳಿ	೧೧.	ಗೋಲಿಹಳ್ಳಿ
೫.	ನೇಸರಗಿ	೧೨.	ಮುನೋಳ್ಳಿ
೬.	ಸಂಪಗಾವಿ	೧೩.	ಹಲಸಗಿ
೭.	ಮಟಗಾಂವ	೧೪.	ಬೀಡಿ
		೧೫.	ಮುಗಟಖಾನ ಹುಬ್ಬಳ್ಳಿ

ಕಿತ್ತೂರು ಸಂಸ್ಥಾನದಲ್ಲಿ ಕರ್ಯಾತುಗಳು ೧೫ ಕರ್ಯಾತುಗಳನ್ನಾಗಿ ವಿಂಗಡಿಸಲ್ಪಟ್ಟಿತ್ತು. ಇದರ ಆಡಳಿತವನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಬರಲು ಅಧಿಕಾರಿಗಳನ್ನು ನೇಮಿಸಿಲಾಗಿತ್ತು.[೧೦] ಈ ಕೆಳಗಿನ ಗ್ರಾಮಗಳ ಹೆಸರು ಒಂದೇ ತರನಾಗಿದ್ದು, ಅವುಗಳನ್ನು ಗುರುತಿಸಲು ಕರ್ಯಾತನ್ನು ಬಳಸುವ ಪದ್ಧತಿಯನ್ನು ಕಾಣುತ್ತೇವೆ.

೧. ಕರ್ಯಾತ ಅಂಬಡಗಟ್ಟಿ-	ಮಲ್ಲಾಪುರ,	ಕರ್ಯಾತ ನೇಸರಗಿ - ಮಲ್ಲಾಪುರ
೨. ಕರ್ಯಾತ ಅಂಬಡಗಟ್ಟಿ-	ಗಿರಿಯಾಲಕರ್ಯಾತ	ಬಾಗೇವಾಡಿ - ಗಿರಿಯಾಲ
೩. ಕರ್ಯಾತ ಸಂಪಗಾವಿ -	ಶೀಗಿಹಳ್ಳಿ	ಕರ್ಯಾತ ಬಾಗೇವಾಡಿ- ಶೀಗಿಹಳಿ
೪. ಕರ್ಯಾತ ಸಂಪಗಾವಿ -	ಪಟ್ಟಿಹಾಳ	ಕರ್ಯಾತ ಬೆಳವಡಿ - ಪಟ್ಟಿಹಾಳ
೫. ಕರ್ಯಾತ ಬೆಳವಡಿ -	ಹೂಲಿಕಟ್ಟಿ	ಕರ್ಯಾತ ಬಾಗೇವಾಡಿ- ಹೂಲಿಕಟ್ಟಿ
೬. ಕರ್ಯಾತ ನಂದಗಡ -	ಜುಂಜವಾಡ	ಕರ್ಯಾತ ಕಕ್ಕೇರಿ ಮಂಜರ ಪೈ

ಪ್ರತಿಯೊಂದು ಕರ್ಯಾತ ಪ್ರಾಂತ್ಯದಲ್ಲೂ ವಿವಿಧ ಹಂತದ ಅಧಿಕಾರಿಗಳು ಆಡಳಿತ ನಡೆಸುತ್ತಿದ್ದು ಅಂತಹ ಅಧಿಕಾರಿಗಳೆಂದರೆ ಮುಲ್ಕಿ ಪಾಟೀಲ ಕರ್ಯಾತಿನ ಕಂದಾಯ ಅಧಿಕಾರಿಗಳಾಗಿದ್ದರು. ಪೋಲಿಸ ಪಾಟೀಲ ಕಾನೂನು ವ್ಯವಸ್ಥೆ ನೋಡಿಕೊಳ್ಳುವ ಅಧಿಕಾರಿ. ಪ್ರತಿಯೊಂದು ಗ್ರಾಮಗಳ ಲೆಕ್ಕ ಬರೆಯುವ ಕೆಲಸವನ್ನು ನಿರ್ವಹಿಸುತ್ತಿದ್ದನು. ಸನದಿ ಎಂಬುವರು ಗ್ರಾಮಾಧಿಕಾರಿಗೆ ಸಹಾಯಕನಾಗಿ ಕಂದಾಯ ಸಂಗ್ರಹಣೆಗೆ ಸಹಕರಿಸುವ ಹಳಬನೆಂದು ಕರೆಯಲಾಗಿತ್ತು. ದಳವಾಯಿ -ಸೈನ್ಯದ ಅಧಿಪತಿಯನ್ನು ಹೊಂದಿದ ವ್ಯಕ್ತಿಗೆ ದಳವಾಯಿ ಎಂದು ಕರೆಯುತ್ತಿದ್ದರು.

ಮುಸ್ಲಿಮ್ ಆಳಿಕೆಯ ತರುವಾಯ, ಮರಾಠಾ ಆಳ್ವಿಕೆಯು ಮೂರು ಪ್ರಕಾರದ ಹಳ್ಳಿಗಳನ್ನು ಗುಂಪುಗಳ ಮೂಲಕ ಗುರುತಿಸಲಾಯಿತು. ಅಂದರೆ ದಾರೊಬಸ್ತ ಹಳ್ಳಿಗಳು, (ಪೂರ್ಣ ಪ್ರಮಾಣದ ಕಂದಾಯದ ಹಳ್ಳಿಗಳು) ದುಮಾಳೆಗಾಂವ ಹಳ್ಳಿಗಳು (ಎರಡು ರೀತಿಯ ಕಂದಾಯ ಕೊಡುವ

ಹಳ್ಳಿಗಳು) ಮತ್ತು ಖಾಲ್ಸಾ ಹಳ್ಳಿಗಳು (ಸರ್ಕಾರದ ಅಧೀನದಲ್ಲಿರುವ ಹಳ್ಳಿಗಳು) ಎಂದು ಪ್ರತ್ಯೇಕಿಸಿದರು. ಅಂದರೆ ಕೆಲವೊಂದು ಹಳ್ಳಿಗಳಿಗೆ ಮಾನ್ಯ ಅಥವಾ ಸರ್ವಮಾನ್ಯ ಮುಖಾಂತರ ಕೆಲವೊಂದು ತೆರಿಗೆ ಕಟ್ಟಿಸುವದು (ಜಮಾಬಂದಿ) ಇನ್ನುಳಿದ ಇನಾಮು ಹೊಂದಿದ ಹಳ್ಳಿಗಳು ಸಂಪೂರ್ಣ ತೆರಿಗೆಗಳನ್ನು ಸರಕಾರಕ್ಕೆ ಸಲ್ಲಿಸಬೇಕಾಗಿತ್ತು.

೨೮೫ ಹಳ್ಳಿಗಳ ಪೈಕಿ ೬೧ ಇನಾಮು ಹಳ್ಳಿಗಳು ಮತ್ತು ೧೯೪ ಖಾಲ್ಸಾ ಹಳ್ಳಿಗಳೆಂದು ಬೇರ್ಪಡಿಸಲಾಯಿತು. ಅನುದಾನ ಮೂಲಕ ೬೧ ಹಳ್ಳಿಗಳ ಬಟವಡೆ ಈ ಕೆಳಗಿನಂತಿದೆ.[೧೧] ಸದರಿ ೬೧ ಹಳ್ಳಿಗಳಲ್ಲಿ ೧೧ ಇನಾಮು ಹಳ್ಳಿಗಳು ೨೨ ಸರಂಜಾಮಿ ಹಳ್ಳಿಗಳು, ೨ ಕಮಾವಿ ಹಳ್ಳಿಗಳು, ೧೧ ದುಮಾಳೆಗಾಂವ ಹಳ್ಳಿಗಳು, ಮತ್ತು ಕೆಲವೊಂದು ಆಧಾರಗಳ ಮೆಲೆ ೪೫ ಅನುದಾನಿತ ಹಳ್ಳಿಗಳೆಂದು ಗುರುತಿಸಲಾಯಿತು. ೧೧ ಇನಾಮು ಹಳ್ಳಿಗಳ ಪೈಕಿ ಒಂದನ್ನು ಚಿಂತಾಮಣಿ ಪಾಂಡುರಂಗ ಮಿರಜಕರ ಮತ್ತು ಇನ್ನೊಂದನ್ನು ಹನಮಂತಗೌಡ ಕಿಲ್ಲಾದ ದೈಲತರಾವ ಘೋರ್ಪಡೆಯವರ ಒಡತನಕ್ಕೆ ಒಪ್ಪಿಸಲಾಯಿತು. ಆದ್ದರಿಂದ ಇವುಗಳನ್ನು ಖಾಲ್ಸಾ ಒಡತನಕ್ಕೆ ಬಿಟ್ಟು ಕೊಟ್ಟು ತಮ್ಮ ಆ ದಿನದಿಂದ ಹೊರತುಪಡಿಸಲಾಯಿತು. ಇವೆರಡೂ ದರೋಬಸ್ತ ಇನಾಮು ಹಳ್ಳಿಗಳೆಂದು ಉಳಿದುಕೊಂಡವು. ಮೊದಲನೆಯ ಗುಂಪಿನಲ್ಲಿ ಉಳಿದ ೯ ಹಳ್ಳಿಗಳನ್ನು "ನಜರ-ಜಮಾ" ಒಡೆತನದಲ್ಲಿ ಒಪ್ಪಿಸಲಾಯಿತು. ಇದೇ ಗುಂಪಿನಲ್ಲಿ ಮೂರು ಹಳ್ಳಿಗಳನ್ನು (ಮುನ್ನೊಳ್ಳಿ ಕರ್ಯಾತದಲ್ಲಿಯ ಕೊಡಚಿವಾಡ, ಅಮರಗೇಟ ಕರ್ಯಾತದಲ್ಲಿಯ ಬೇಲೂರ ಮತ್ತು ಕರ್ಯಾತ ಪುಟಗಾಂವದಲ್ಲಿಯ ಜಿಳನೂರ) ಶ್ರೀಪತರಾವ ಸರದೇಶಪಾಂಡೆಯವರ ಒಡೆತನದಲ್ಲಿ ಒಪ್ಪಿಸಲಾಯಿತು. ಮತ್ತು ಇನ್ನೂಳಿದ ನಾಲ್ಕು ಹಳ್ಳಿಗಳನ್ನು ಪ್ರತಿಯೊಬ್ಬರಿಗೆ ಒಂದರಂತೆ ಹಂಚಲಾಯಿತು - ನಾರೋ ಮನೋಜಿ ದೇಶಪಾಂಡೆ (ಬೆಳವಡಿ ಕರ್ಯಾತದಲ್ಲಿಯ ಕಲಭಾವಿ)ರುದ್ರಪ್ಪ ದೇಸಾಯಿ (ಕಾದರವಳ್ಳಿ ಕರ್ಯಾತದಲ್ಲಿಯ ಹೊನ್ನಿದಿಬ್ಬ) ರುದ್ರೊವಿರೂಪಾಕ್ಷ ಕುಲಕರ್ಣಿ (ನೇಸರಗಿ ಕರ್ಯಾತದಲ್ಲಿಯ ಉಜೇನಹಟ್ಟಿ) ಮತ್ತು ಗುರಪ್ಪ ದೇಸಾಯಿ (ನೇಸರಗಿ ಕರ್ಯಾತದಲ್ಲಿಯ ಮತ್ತಿಕೊಪ್ಪ) ಮುಂದಿನ ಗುಂಪಿನಲ್ಲಿಯ ಎಲ್ಲಾ ೨೨ ಹಳ್ಳಿಗಳನ್ನು ಬಾಗೇವಾಡಿ ಕರ್ಯಾತದಿಂದ, ರಘುನಾಥರಾವ ನೀಲಕಂಠ ಕುರುಂದವಾಡಕರ ಸರಂಜಾಯಿಯಾಗಿ ಉಂಬಳಿಯಾಗಿ ಕೊಡಲಾಯಿತು. ಸಿದ್ದೇಶ್ವರಾವ ಮಹಿಪತ ಬಿನಿವಾಲೆ ಎಂಬವರಿಗೆ ಎರಡು ಹಳ್ಳಿ ಕಮಾವಸಿ ಹಳ್ಳಿಗಳಾಗಿ ನೇಸರಗಿ ಕರ್ಯಾತದಿಂದ ಕೊಡಲ್ಪಟ್ಟವು.

ಈ ಕೆಳಗಿನ ೧೧ ಹಳ್ಳಿಗಳನ್ನು ದುಮಾಳೆಗಾಂವ ಹಳ್ಳಿಗಳೆಂದು ಮಲ್ಲಪ್ಪಾ ವೀರಪ್ಪಗೌಡ ಸರದೇಸಾಯಿಯವರಿಗೆ ಒಪ್ಪಿಸಲಾಯಿತು.

೧. ಹುಣಶೀಕಟ್ಟಿ - ಕಾದರವಳ್ಳಿ ಕರ್ಯಾತದಿಂದ

೨. ಹೋಸೂರ - ಕಾದರವಳ್ಳಿ ಕರ್ಯಾತದಿಂದ

೩. ಉತಗಾ - ಪುಟಗಾಂವ ಕರ್ಯಾತದಿಂದ

೪. ಗಂದಿಗವಾಡ - ಪುತಗಾಂವ ಕರ್ಯಾತದಿಂದ

೫. ಬಡಸ - ಪುತಗಾಂವ ಕರ್ಯಾತದಿಂದ

೬. ಹೊಂಗಲ _ ಬೆಳವಡಿ ಕರ್ಯಾತದಿಂದ

೭. ತಿಗಡಿ - ಸಂಪಗಾಂವ ಕರ್ಯಾತದಿಂದ

೮. ಸುತಗಟ್ಟಿ - ನೇಸರಗಿ ಕರ್ಯಾತದಿಂದ

೯. ದೇವಲತ್ತಿ - ಕಖೋಳಿ ಕರ್ಯಾತದಿಂದ

೧೦. ದೇಗಾಂವಿ - ಅಂಬಡಗಟ್ಟಿ ಕರ್ಯಾತದಿಂದ

೧೧. ದೇವರ-ಶೀಗಿಹಳ್ಳಿ - ಘುತಗಾಂವ ಕರ್ಯಾತದಿಂದ

೧೧ ಹಳ್ಳಿಗಳ ದೇಸಾಯಿಗಳಿಂದ ಕೇವಲ ೩೫,೦೦೦ ರೂ ತೆಗೆದುಕೊಂಡು ಉಳಿದ ಕಂದಾಯ ಹಣವನ್ನು ಪೇಶ್ವೆ ಸರಕಾರದ ಬೊಕ್ಕಸಕ್ಕೆ ಪಾವತಿಸಲಾಗುತ್ತಿತ್ತು. ಇದನ್ನೆ ದುಮಾಳೆಗಾಂವ ಹಳ್ಳಿಗಳೆಂದು ಕರೆಯುತ್ತಾರೆ.[೧೨]

ಭೀಮಾಜಿ ಬಾಬುರಾವ ಕಬ್ಜಕ್ಕೆ ಒಂದು ಹಳ್ಳಿಯನ್ನು (ಪುತಗಾಂವ ಕರ್ಯಾತದಿಂದ-ಹಂದೂರ) ಬಿಟ್ಟು ಕೊಡಲಾಗಿತ್ತು. ಈ ವ್ಯವಸ್ಥೆಗೆ ಯಾವ ಕಾರಣವು ಸ್ಪಷ್ಟವಿಲ್ಲ. ೯೧ ಪೈಕಿ ಕೊನೆಯ ೪೪ ಹಳ್ಳಿಗಳು ಭಿಷ್ಟಪ್ಪ ದೇಸಾಯಿ "ಕಳೊರೆಕರ ಇವರ ವಶದಲ್ಲಿ ಉಳಿಯಲ್ಪಟ್ಟವು ಯಾಕೆಂದರೆ ಕಿತ್ತೂರ ತಾಲೂಕ ಪೇಶ್ವ ಆಳಿಕೆಯಲ್ಲಿ ಅಧೀನವಾಗಿದ್ದರೂ, ಸದರಿ ಹಳ್ಳಿಗಳು ಸ್ಥಾಪಿಸಲ್ಪಟ್ಟ ಈ ಕರ್ಯಾತ ಪ್ರದೇಶವು ಸ್ವಾಬಾವಿಕವಾಗಿ ಪೇಶ್ವ ಹಿಡಿತದಿಂದ ದೂರವಾಗಿತ್ತು. ಕ್ರಿ.ಶ. ೧೭೯೧ರಲ್ಲಿ ಪೇಶ್ವೆ ಸರಕಾರವು ಗೊತ್ತುಗುರಿಯಿಲ್ಲದೆ ಈ ಕರ್ಯಾತ ಪ್ರದೇಶದ ಮೆಲೆ ಹಕ್ಕು ಸ್ಥಾಪನೆ ಪ್ರಯತ್ನ ಮಾಡಿತು. ಆದರೆ ಕ್ರಿ.ಶ. ೧೭೯೨ರ ವರ್ಷದ ನಂತರ ಪೇಶ್ವ ಆಳ್ವಿಕೆಯು ಸದರಿ ಹಳ್ಳಿಯ ಮೇಲಿದ್ದ ಹಿಡಿತವನ್ನು ನಿರ್ದಿಷ್ಟವಾಗಿ ಕಳೆದುಕೊಂಡಿತು. ಈ ಜಹಗೀರದಾರರು ಪೇಶ್ವ ಸರಕಾರವು ನಿಗದಿಪಡಿಸಿದ ದರಗಳಲ್ಲಿ (ಜಮಾಬಂದಿ) ತಮ್ಮ ತಮ್ಮ ಹಳ್ಳಿಗಳಿಂದ ಕಂದಾಯವನ್ನು ವಸೂಲ ಮಾಡುವ ಪದ್ಧತಿಯನ್ನು ಒಂದು ವಿಶಿಷ್ಟ ಕರ್ತವ್ಯವೆಂದು ನಂಬಿದ್ದರು.

ಪೇಶ್ವೆ ಸರಕಾರಕ್ಕೆ ಸದರಿ ೯೧ ಹಳ್ಳಿಗಳಿಂದ ಯಾವುದೇ ಪ್ರಕಾರದ ಕಂದಾಯವಾಗಲಿ ಸಲ್ಲಿಸಲ್ಪಡುತ್ತಿಲ್ಲ. ಹೀಗಾಗಿ ಸದರಿ ಹಳ್ಳಿಗಳಿಂದ ಕೆಲವು ಭಾಗ ಕಂದಾಯವು ಹೊರಗಿನಿಂದ ಬರುತ್ತಿತ್ತು. ಆದರೆ ಸರಕಾರಿ ಅಧೀನದಲ್ಲಿದ್ದ ೧೯೪ ಉಳಿದ ಹಳ್ಳಿಗಳೆಂದರೆ ಖಾಲ್ಸಾ ಜಮೀನಗಳು, ಹೀಗಾಗಿ ಸರಕಾರವು ಸದರಿ ಹಳ್ಳಿಗಳಿಂದ ಎಲ್ಲಾ ತೆರಿಗೆಗಳನ್ನು ಧಾನ್ಯ ವಸೂಲಿ ಪದ್ಧತಿಯನ್ನು ಜಾರಿಗೊಳಿಸಿತ್ತು. ಆದರೆ ಸದರಿ ಹಳ್ಳಿಗಳಿಂದ ವಿವಿಧ ಪ್ರಕಾರಗಳ ತೆರಿಗೆಗಳನ್ನು ವಸೂಲಿ ಮಾಡುತ್ತಿತ್ತು. ಸ್ವಾಭಾವಿಕವಾಗಿ ಕೆಲವು ಕರ್ಯಾತಗಳು ಕ್ಷೇತ್ರ ಆಕಾರಗಳಲ್ಲಿ ಸಣ್ಣ ಗಾತ್ರದ ಪ್ರದೇಶಗಳಾದವು. ಯಾಕೆಂದರೆ ಇನಾಮ, ಸರಂಜಾಮ, ದುಮಾಳೆಗಾಂವ, ಮತ್ತು

ಕಾಮಾವಸಿ ಎಂಬ ಹಳ್ಳಿಗಳನ್ನು ಕರ್ಯಾತಗಳಿಂದ ಹೊರಪಡಿಸಲಾಯಿತು. ಆದ್ದರಿಂದ ಖಾಲಸಾ ಅಧೀನದಲ್ಲಿದ್ದ ಕರ್ಯಾತಗಳು ಈ ಕೆಳಗೆ ನಮೂದಿಸಿದಂತೆ ಹಳ್ಳಿಗಳನ್ನು ಹೊಂದಿದವು.

೧.	ಖಾಸಬಾ ಹುಬ್ಬಳ್ಳಿ	:	೦	- ೦	= ೧	ಬದಲಾವಣೆಯಿಲ್ಲಾ
೨.	ಕರ್ಯಾತ ಬೆಳವಡಿ	:	೫೪	- ೫	= ೪೯	ಹಳ್ಳಿಗಳು
೩.	ಕರ್ಯಾತ ಸಂಪಗಾವ	:	೨೭	- ೨	= ೨೫	ಹಳ್ಳಿಗಳು
೪.	ಕರ್ಯಾತ ಇಟಗಿ	:	೧೧			ಬದಲಾವಣೆಯಿಲ್ಲಾ
೫.	ಕರ್ಯಾತ ಹಲಸಗಿ	:	೯			ಬದಲಾವಣೆಯಿಲ್ಲಾ
೬.	ಕರ್ಯಾತ ಕಖೋಲಿ	:	೧೭	- ೧	= ೧೬	ಹಳ್ಳಿಗಳು
೭.	ಕರ್ಯಾತ ನೇಸರಿ	:	೧೮	- ೫	= ೧೩	ಹಳ್ಳಿಗಳು
೮.	ಕರ್ಯಾತ ಗೋಲಿಹಳ್ಳಿ	:	೧೧			ಬದಲಾವಣೆಯಿಲ್ಲಾ
೯.	ಕರ್ಯಾತ ಅಂಬಡಗಟ್ಟಿ	:	೧೬	- ೨	= ೧೪	ಹಳ್ಳಿಗಳು
೧೦.	ಕರ್ಯಾತ ಮನೋಳಿ	:	೧೦	- ೧	= ೯	ಹಳ್ಳಿಗಳು
೧೧.	ಕರ್ಯಾತ ನಂದಗಡ	:	೧೪	- ೧	= ೧೩	ಹಳ್ಳಿಗಳು
೧೨.	ಕರ್ಯಾತ ಕಾದರವಳ್ಳಿ	:	೧೭	- ೩	= ೧೪	ಹಳ್ಳಿಗಳು
೧೩.	ಕರ್ಯಾತ ಪುಟಗಾಂವ	:	೨೪	- ೬	= ೧೮	ಹಳ್ಳಿಗಳು
೧೪.	ಕರ್ಯಾತ ಬೀಡಿ	:	೪೪	- ೬	= ೧೮	ಹಳ್ಳಿಗಳು
೧೫.	ಕರ್ಯಾತ ಬಾಗೇವಾಡಿ	:	೨೨	- ೨೧	= ೦೧	ಹಳ್ಳಿಗಳು

೧೯೧ ಖಾಲ್ಸಾ ಹಳ್ಳಿಗಳು (ಒಟ್ಟು)

ಜಕಾತಿ ಎಂಬ ಅಧಿಕಾರಿಯು ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ವಸ್ತು ಸಾಗಾಣಿಕೆಯ ಮೇಲಿನ ತೆರಿಗೆಯನ್ನು ವಸೂಲಿ ಮಾಡುವ ಅಧಿಕಾರಿಯಾಗಿದ್ದನು. ಹೀಗೆ ಈ ಮೇಲಿನ ಅಧಿಕಾರಿಗಳು ಕಿತ್ತೂರು ಸಂಸ್ಥಾನದ ಪ್ರತಿಯೊಂದು ಕರ್ಯಾತುಗಳಲ್ಲಿ ಇದ್ದರು. ಕಿತ್ತೂರು ಸಂಸ್ಥಾನಿಕರ ಕಾಲದಲ್ಲಿ ಮೊದಲು ಜಕಾತಿಗಳು ಕೆಲವೇ ಗ್ರಾಮಗಳ ಒಡೆಯರಾಗಿದ್ದರೂ ಮಧ್ಯದಲ್ಲಿ ಎರಡು ಮೂರು ತಾಲೂಕಗಳಷ್ಟು ಭೂ-ಪ್ರದೇಶ ಆಕ್ರಮಿಸಿದ್ದರೆಂದು ತಿಳಿಸುತ್ತದೆ.[೧೩]

ಕಿತ್ತೂರು ಸಂಸ್ಥಾನದ ವ್ಯಾಪ್ತಿಯಲ್ಲಿ ಸುಮಾರು ೨೮೬ ಗ್ರಾಮಗಳು ಹಾಗೂ ೭೨ ತೀರಾ ಚಿಕ್ಕ ಹಳ್ಳಿಗಳು ಇದ್ದವು.[೧೪] ಈ ಉಲ್ಲೇಖವನ್ನು ಬ್ರಿಟೀಷ ಸರ್ಕಾರವೇ ಪ್ರಕಟಿಸಿರುವುದರಿಂದ ಇದು ಸಂಸ್ಥಾನವೆಂಬುದು ನಿರ್ವಿವಾದದ ಸಂಗತಿ. ಅಲ್ಲದೇ ಕಿತ್ತೂರು ಸಂಸ್ಥಾನದಲ್ಲಿ ೧೪ ಕರ್ಯಾತುಗಳು ಇದ್ದವು ಎನ್ನುವುದಕ್ಕೆ ಸಮಕಾಲಿನ ದೊರೆ ಮಲ್ಲಸರ್ಜ ಕೃತಿ ತಿಳಿಸುತ್ತದೆ. ಪ್ರತಿ

ಯೊಂದು ಕರ್ಯಾತುಗಳು ೧೦ ರಿಂದ ೨೦ ಗ್ರಾಮಗಳನ್ನು ಹೊಂದಿದ ಒಂದು ಆಡಳಿತ ಕೇಂದ್ರವಾಗಿದ್ದು, ಇದರ ಮೂಲಕ ಆಡಳಿತ ನೆಡಸಲಾಗುತ್ತಿತ್ತು.

೪.೨.೧. ಕಿತ್ತೂರು ಸಂಸ್ಥಾನದ ಆಡಳಿತಾಧಿಕಾರಿಗಳು

ಕಿತ್ತೂರು ಸಂಸ್ಥಾನದ ಆಡಳಿತದ ಬಗ್ಗೆ ಸ್ಪಷ್ಟ ಚಿತ್ರಣ ಕೊಡುವುದು ಕಷ್ಟ ಸಾಧ್ಯ. ಈ ಸಂಸ್ಥಾನ ಆರಂಭಕ್ಕೆ ವಿಜಾಪುರದ ಆದಿಲ್‌ಶಾಹಿಗಳಿಗೆ, ಅನಂತರ ಪುಣೆಯ ಪೇಶ್ವೆಗಳಿಗೆ, ಕೊನೆಯ ಗಳಿಗೆಯಲ್ಲಿ ಬ್ರಿಟಿಷರಿಂದ ಮಾನ್ಯತೆ ಪಡೆದು ಅಧೀನರಾಗಿ ಆಳುತ್ತಿತ್ತು. ಕೊನೆಯ ಕ್ಷಣಗಳಲ್ಲಿ ಬ್ರಿಟಿಷರೊಂದಿಗೆ ಸಂಘರ್ಷದ ಸಂಬಂಧ ಹೊಂದಿ ಮಿಂಚಿ ಮರೆಯಾಯಿತು. ಈ ಅರಸರು ಆದಿಲ್‌ಶಾಹಿಗಳೊಂದಿಗೆ ಪೇಶ್ವೆಗಳೊಂದಿಗೆ, ಬ್ರಿಟಿಷರೊಂದಿಗೆ ನಡೆಸಿದ ಪತ್ರ ವ್ಯವಹಾರಗಳು, ದಾಖಲೆಗಳು ಒಂದೆಡೆ ಪ್ರಕಟಗೊಂಡಾಗ ಮಾತ್ರ ಇವರ ಆಡಳಿತದ ವ್ಯವಸ್ಥೆ ಹೇಗಿತ್ತೆಂಬುದನ್ನು ಸ್ಪಷ್ಟವಾಗಿ ಕಟ್ಟಿಕೊಡಲು ಸಾಧ್ಯ.

ಕಿತ್ತೂರಿಗೆ ಚೆನ್ನಮ್ಮಳ ಕಿತ್ತೂರು ಎಂದೇ ಸಂಭೋಧಿಸುತ್ತಾರೆ. ಕಿತ್ತೂರು ಸಂಸ್ಥಾನದ ದೊರೆಗಳಿಗೆ ಪ್ರಾರಂಭದಿಂದಲೂ ಅನೇಕ ಆಡಳಿತಗಾರರು, ಅಧಿಕಾರಿಗಳು, ಸೈನ್ಯಾಧಿಕಾರಿಗಳು ಹಾಗೂ ಇತರ ಆಡಳಿತ ವರ್ಗದವರು ತಮ್ಮ ಅಮೂಲ್ಯ ಸೇವೆಯನ್ನು ಅತ್ಯಂತ ನಿಷ್ಠೆಯಿಂದ ಸಲ್ಲಿಸಿರುವುದರಿಂದಲೇ ಕಿತ್ತೂರು ಸಂಸ್ಥಾನವು ತನ್ನ ಕೀರ್ತಿಯನ್ನ ರಾಷ್ಟ್ರವ್ಯಾಪಿ ಪಡೆದುಕೊಂಡಿತು. ಕಿತ್ತೂರು ನಾಡಿನ ಇತಿಹಾಸದ ದಾಖಲೆಗಳು ಹೆಚ್ಚಾಗಿ ಮೋಡಿ ದಾಖಲೆಗಳಲ್ಲಿ ದೊರಕುತ್ತವೆ. ಇವು ಪುಣೆಯ ಪತ್ರಾಗಾರ ಇಲಾಖೆ ಹಾಗೂ ಪುಣೆಯ ಡೆಕ್ಕನ್ ಮಹಾವಿದ್ಯಾಲಯದ ಪತ್ರಾಗಾರದಲ್ಲಿ ಹೆಚ್ಚಾಗಿ ದೊರಕುತ್ತವೆ. ಕರ್ನಾಟಕದ ದಪ್ತರಗಳಲ್ಲಿ ಸುಮಾರು ೨೪೬೧ ಕಡತಗಳಿದ್ದು, ಅವುಗಳಲ್ಲಿ ರೂಮಾಲ್ ನಂ. ೩೨೩ ರಿಂದ ೩೨೫ರವರೆಗೆ ಹಾಗೂ ರೂಮಾಲ್ ನಂ. ೧೨೮೫, ಹಾಗೂ ರೂಮಾಲ್ ನಂ. ೧೩೨೦ ಮತ್ತು ರೂಮಾಲ್ ೧೮೧೧ರಲ್ಲಿ ದೊರಕಿದೆ. ಕೆಲವು ದಾಖಲೆಗಳು ಡೆಕ್ಕನ್ ಮಹಾವಿದ್ಯಾಲಯದಲ್ಲಿ ಕಡತ ಸಂಖ್ಯೆ ೧೭ರಲ್ಲಿ ದೊರೆತಿದೆ. ಅಲ್ಲದೇ ಕೊಲ್ಲಾಪುರ ಸರ್ಕಾರಿ ಪತ್ರಾಗಾರದಲ್ಲಿ ಕೆಲವು ದಾಖಲೆಗಳು ದೊರಕುತ್ತಿದ್ದು, ಕಿತ್ತೂರು ಮತ್ತು ಮರಾಠರ ಸಂಬಂಧದ ಬಗ್ಗೆ ವಿವರಣೆ ನೀಡುತ್ತದೆ. ಪಟವರ್ಧನ ಅವರ ಮೀರಜ್ ದಪ್ತರನಲ್ಲಿ ಕೆಲವು ಸಂಪುಟಗಳು ಕಿತ್ತೂರಿನ ರಾಜಕೀಯ ಮತ್ತು ಆಡಳಿತದ ವಿಷಯದ ಮೇಲೆ ಬೆಳಕನ್ನು ಚೆಲ್ಲುತ್ತವೆ. ಪುಣೆಯ ಭಾರತ ಇತಿಹಾಸ ಸಂಶೋಧನ ಮಂಡಳಿಯಲ್ಲಿ ಮೋಡಿ ಯಿಂದ ತರ್ಜುಮೆಯಾದ ಕೆಲವು ಪತ್ರಗಳನ್ನು ಮರಾಠಿ ಗ್ರಂಥಗಳಲ್ಲಿ ಕಾಣಬಹುದು. ಬೆಂಗಳೂರಿನ ಕರ್ನಾಟಕ ರಾಜ್ಯ ಪತ್ರಾಗಾರದಲ್ಲಿ ಕೆಲವು ಮೋಡಿ ಹಸ್ತಪ್ರತಿಗಳು ರಾಣಿ ಚೆನ್ನಮ್ಮ ಹಾಗೂ ಬ್ರಿಟಿಷ್ ಅಧಿಕಾರಿಗಳ ನಡುವಿನ ಪತ್ರ ವ್ಯವಹಾರಗಳ ದಾಖಲೆಗಳನ್ನು ನೋಡಬಹುದು. ಅದರಂತೆ ಮಿಥಿಕ್ ಸೋಸಾಯಿಟಿ ಬೆಂಗಳೂರು ಇಲ್ಲಿ ಕೆ.ಎನ್. ಚಟ್ನೀಸ್‌ರವರು ಮರಾಠಿ ಮೋಡಿ ದಾಖಲೆಗಳನ್ನು ಮರಾಠಿ ಭಾಷೆಗೆ ಹಾಗೂ ಮರಾಠಿಯಿಂದ ಇಂಗ್ಲೀಷ್ ಭಾಷೆಗೆ ತರ್ಜುಮೆ ಮಾಡಿದ್ದಾರೆ.

ಕಿತ್ತೂರು ಸಂಸ್ಥಾನ ವಿಜಾಪುರದ ಆದಿಲ್‌ಶಾಹಿಗಳ ಸುಲ್ತಾನಿಕೆಗೆ ಒಳಪಟ್ಟಿದ್ದಾಗ ಅವರ 'ಹುಕುಂ'ಗೆ ಅನುಸಾರವಾಗಿ ನಡೆದುಕೊಳ್ಳುತ್ತಿದ್ದರು. ಅವರಿಗೆ ವರ್ಷಂಪ್ರತಿ ಸಲ್ಲಿಸಬೇಕಾದ ಹಣವನ್ನು ಸಲ್ಲಿಸಿ ತಮ್ಮ ಸಂಸ್ಥಾನವನ್ನು ಈ ಅರಸರು ಸ್ವತಂತ್ರವಾಗಿಯೇ ಆಳುತ್ತಿದ್ದರು. ಇದೇ ರೀತಿಯಾಗಿ ಪುಣೆಯ ಪೇಶ್ವೆಯವರಿಗೆ ವರ್ಷಕ್ಕೆ ಇಂತಿಷ್ಟು ಹಣಕೊಟ್ಟು ತಮ್ಮ ಸಂಸ್ಥಾನವನ್ನು ಸ್ವತಂತ್ರ ವಾಗಿ ಆಳುತ್ತಿದ್ದರು. ಆಗ ಆಡಳಿತದಲ್ಲಿ ನೆರವಾಗುತ್ತಿದ್ದ ಅಧಿಕಾರಿಗಳ ವಿವರಗಳು ಲಭಿಸಿಲ್ಲ. ಈ ಸಂಸ್ಥಾನಕ್ಕೆ ಸಂಬಂಧಿಸಿದ ದಾಖಲೆಗಳು ಪ್ರಕಟಗೊಂಡಾಗ ಮಾತ್ರ ಇವರ ಆಡಳಿತ ಪದ್ಧತಿ, ಅಧಿಕಾರಿ ವರ್ಗದ ವಿವರಗಳು ಸ್ಪಷ್ಟವಾಗುತ್ತವೆ.

ಎಂ. ವೈ. ಸಾವಂತ[೧೫] ಅವರು ಕ್ರಿ.ಶ. ೧೭೯೩ರ ಒಂದು ತಾಳೇಬಂಧದ (ಆಯ-ವ್ಯಯಗಳ ಪಟ್ಟಿ) ವಿವರಣೆಗಳನ್ನು ಪ್ರಕಟಿಸಿದ್ದು ಅದರ ಪ್ರಕಾರ ಪೇಶ್ವೆಯವರ ಕಾಲದಲ್ಲಿ 'ತಾಲೂಕಾ ಕಿತ್ತೂರ' ಅಬಾಜಿ ಬಾಬುರಾವನ ಆಡಳಿತಕ್ಕೆ ಒಳಪಟ್ಟಿತ್ತು. ಆಗ ಕಿತ್ತೂರು ವರ್ಷಕ್ಕೆ ಸುಮಾರು ನಾಲ್ಕು ಲಕ್ಷ ರೂಪಾಯಿಗಳ ಕಂದಾಯವುಳ್ಳದ್ದಾಗಿತ್ತು. ಇದರಲ್ಲಿ ಮಲ್ಲಸರ್ಜನು ೭೦ ಸಾವಿರ ರೂಪಾಯಿಗಳನ್ನು ಮರಾಠ ಪೇಶ್ವೆಗೆ ವಾರ್ಷಿಕ ಕಾಣಿಕೆಯಾಗಿ ಸಲ್ಲಿಸುತ್ತಿದ್ದನು. ಇಷ್ಟು ಕೊಟ್ಟರೆ ಆಂತರಿಕವಾಗಿ ಸ್ವತಂತ್ರ ಆಡಳಿತವನ್ನು ಇವರು ನಡೆಸುತ್ತಿದ್ದರು.

೪.೨.೨. ಪ್ರಭು ವರ್ಗದವರು

ಕಿತ್ತೂರು ಸಂಸ್ಥಾನದ 'ರಾಜ'ನನ್ನು 'ಸರದೇಸಾಯಿ' 'ದೇಸಾಯಿ' ಎಂದು ಕರೆಯಲಾಗುತ್ತಿದ್ದು ಆಡಳಿತಕ್ಕೆ ಸಂಬಂಧಿಸಿದಂತೆ ಇವರ ನಿರ್ಣಯವೇ ಅಂತಿಮವಾಗಿರುತ್ತಿತ್ತು. ಮುಗಟಖಾನ ಹುಬ್ಬಳ್ಳಿ ಇವರ ಮೊದಲ ರಾಜಧಾನಿ. ಆನಂತರ ಅದು ಸಂಪಗಾವಿಗೆ ಸ್ಥಳಾಂತರಗೊಂಡಿತು. ಮುಂದೆ 'ಕಿತ್ತೂರು' ಈ ಸಂಸ್ಥಾನದ ರಾಜಧಾನಿಯಾಗಿ ಮೆರೆದು ಈ ಅರಸರಿಗೂ ರಾಜಧಾನಿಗೂ ಕೀರ್ತಿಯನ್ನು ತಂದಿತ್ತಿತ್ತು. ಈ ಕಿತ್ತೂರು ಪ್ರದೇಶವನ್ನು ಬಿಜಾಪುರ ಸುಲ್ತಾನನು ಉಂಬಳಿಯಾಗಿ ನೀಡಿದನೆಂದು ಒಂದು ಲಾವಣಿ ಈ ರೀತಿ ಇದೆ.

"ಕಾಡಾನೆ ಕಾಡಯ್ಯ ಬ್ಯಾಡರ ಬೀರಯ್ಯ
ನಾಡಾಗಿ ಮಾಡಿ ಮಲ್ಲಣ್ಣ
ನಾಡಾಗಿ ಮಾಡಿ ಮಲ್ಲಣ್ಣ ಕಿತ್ತೂರ
ಗೂಡಿಗೆ ಗುಡಿಯ ಸೇರಿಸಿದೊ"

ಈ ರಾಜವಂಶದಲ್ಲಿ ೧೨ ಜನ ರಾಜರು ಆಳಿದ್ದು ಅವರು ಇಂತಿದ್ದಾರೆ.

೧) ಹಿರೇಮಲ್ಲಶೆಟ್ಟಿ (೧೫೮೫-೧೫೯೧)

೨) ಹಿರೇನಾಗನಗೌಡಾ ಸರದೇಸಾಯಿ ಪಟ್ಟಣಶೆಟ್ಟಿ (೧೫೯೧-೧೬೩೪)

೩) ಚಿಕ್ಕನಾಗನಗೌಡಾ (೧೬೩೪-೧೬೫೬)

೪) ಚನ್ನಪ್ಪ ಬಿಚ್ಚಗತ್ತಿ (೧೬೫೬-೧೬೬೦)

೫) ಅಲ್ಲಪ್ಪಗೌಡ ಸರದೇಸಾಯಿ (೧೬೬೦-೧೬೯೬)

೭) ಚಿಕ್ಕಮಲ್ಲಪ್ಪ ಸರದೇಸಾಯಿ (೧೬೯೬-೧೭೧೭)

೮) ಶಿವನಗೌಡಾ ಸರದೇಸಾಯಿ (೧೭೧೭-೧೭೩೪)

೯) ಮಾಳ್ವರುದ್ರಗೌಡಾ (೧೭೩೪-೧೭೪೯)

೧೦) ವೀರಪ್ಪಗೌಡ ಸರದೇಸಾಯಿ (೧೭೪೯-೧೭೮೨)

೧೧) ಮಲ್ಲಸರ್ಜ (೧೭೮೨-೧೮೧೯)

೧೨) ಶಿವಲಿಂಗರುದ್ರಸರ್ಜ (೧೮೧೬-೧೮೨೪)[೧೬]

ಹದಿನಾಲ್ಕು ಕರ್ಯಾತುಗಳ ಒಡೆಯರಾಗಿದ್ದ ಇವರು ಕರ್ಯಾತುಗಳನ್ನು ಕಸಬಾಗಳನ್ನು ನೋಡಿಕೊಳ್ಳಲು ಕೆಲವರನ್ನು ನೇಮಿಸಿದ್ದು, ಅವರು ಈ ರಾಜರ ಕೆಳಗಿನ ಪ್ರಭುವರ್ಗದವರಾಗಿದ್ದಾರೆ.

ತಾಳೇಬಂಧದ ಪ್ರಕಾರ ಕೆಲವು ಗ್ರಾಮಗಳನ್ನು ಕೆಲವರಿಗೆ 'ಇನಾಮು' ಕೊಡಲಾಗಿತ್ತು. ಇನಾಮು ಪಡೆದವರು ಪ್ರಭು ವರ್ಗದವರು ಮತ್ತು ಅಧಿಕಾರಿಗಳಾಗಿದ್ದಾರೆ. ಇನಾಮು ಪಡೆದ ಪ್ರಭು ವರ್ಗದವರು ಕಿತ್ತೂರಿನ ದೇಸಾಯಿಗಳಿಗೆ ನಿಷ್ಠರಾಗಿ ತಮ್ಮ ವಶದಲ್ಲಿರುವ ಗ್ರಾಮಗಳನ್ನು ಆಳುತ್ತಿದ್ದರು. ಇವರು ಪ್ರತಿವರ್ಷ ಕಂದಾಯವನ್ನು ಸಂಗ್ರಹಿಸಿ ಕೊಡುವುದರ ಜೊತೆಗೆ ಯುದ್ಧದ ಸಂದರ್ಭದಲ್ಲಿ ತಮ್ಮ ಸೈನಿಕರೊಂದಿಗೆ ದೇಸಾಯಿಗಳಿಗೆ ನೆರವಾಗಬೇಕು. ಇಂಥ ಇನಾಮು ಪಡೆದ ಪ್ರಭುವರ್ಗದವರ ವಿವರ ಕ್ರಿ.ಶ. ೧೭೯೩ರ ತಾಳೇಬಂಧದಲ್ಲಿ ಬರುತ್ತವೆ. ಆ ವಿವರ ಇಂತಿದೆ :

ರಾಜನ ಕರ್ತವ್ಯಗಳು : ಧರ್ಮಾನುಸರಣೆ, ಪ್ರಜೆಗಳು ಮತ್ತು ಅವರ ಧರ್ಮ ರಕ್ಷಣೆ, ಸಮಾಜ ವ್ಯವಸ್ಥೆಯನ್ನು ಸರಿಯಾಗಿಡುವುದು, ನ್ಯಾಯದ ಆಡಳಿತ, ಶಿಷ್ಟರ ರಕ್ಷಣೆ ದುಷ್ಟರ ದಂಡನೆ, ಜನರ ಆರ್ಥಿಕ ಯೋಗಕ್ಷೇಮ ನೋಡಿಕೊಳ್ಳುವುದು, ಸಾರ್ವಜನಿಕ ಕೆಲಸ ಕಾರ್ಯಗಳು ಇತ್ಯಾದಿ. ಕಿತ್ತೂರು ಸಂಸ್ಥಾನದ ದೊರೆ ಮಲ್ಲಸರ್ಜ ಶಾಲಿವಾಹನ ಶಕೆ ೧೭೨೫ರ ರುಧಿರೋದ್ಗಾರಿ ಸಂವತ್ಸರದ ಮಾರ್ಗಶಿರ ಬಹುಳ ಚತುರ್ದಶಿಯ ಸೋಮವಾರದಂದು ಕಿತ್ತೂರು ಅರಮನೆಯಲ್ಲಿ ಭೀಮ ಕವಿಯ ಬಸವಪುರಾಣದ ಪ್ರವಚನ ನಡೆಸಿದರು.[೧೭]

ರಾಜನ ಪಟ್ಟಾಧಿಕಾರ : ರಾಜನು ಅನುವಂಶಿಕವಾಗಿ ಪಟ್ಟವೇರುತ್ತಿದ್ದನು. ಸಿಂಹಾಸನ ತಂದೆಯಿಂದ ಹಿರಿಯ ಮಗನಿಗೆ ಬರುತ್ತಿತ್ತು. ಹಿರಿಯ ಮಗನ ದಕ್ಷತೆ, ಯೋಗ್ಯತೆಗಳನ್ನು ಪ್ರಧಾನವಾಗಿ ಪರಿಗಣಿಸಿ, ನಂತರ ಕಿರಿಯ ಮಗನನನ್ನು ಉತ್ತರಾಧಿಕಾರಿಯನ್ನಾಗಿ ಮಾಡುತ್ತಿದ್ದರು. "ರಾಜನು ಜೀವಿಸಿರುವಾಗಲೇ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಬೇಕೆಂದು ಸ್ಮೃತಿಗಳು ಹೇಳುತ್ತವೆ.[೧೮]

ದತ್ತು ಸ್ವೀಕಾರ ಪದ್ಧತಿ : ಸಂಸ್ಥಾನಿಕರಲ್ಲಿ ದತ್ತು ಸ್ವೀಕಾರ ಪದ್ಧತಿಯಿತ್ತು. "ಕಿತ್ತೂರು ಸಂಸ್ಥಾನದ ರಾಣಿ ಚೆನ್ನಮ್ಮ ಮಾಸ್ತಮರಡಿ ಬಾಳಪ್ಪ ಗೌಡರ ಮಗ ಶಿವಲಿಂಗಪ್ಪನನ್ನು ದತ್ತು ತೆಗೆದು ಕೊಂಡಿದ್ದಳು".[೧೯]

ಪಟ್ಟಾಭಿಷೇಕ ಮತ್ತು ರಾಜನ ಆಸ್ಥಾನ : ರಾಜನಾಗಿ ಆಳ್ವಿಕೆ ಪ್ರಾರಂಭಿಸುವ ಮುಂಚೆ ಪಟ್ಟಾಭಿಷೇಕ ನಡೆಯುತ್ತದೆ. ಈ ಸಮಾರಂಭಕ್ಕೆ ಪಟ್ಟಬಂಧ, ಪಟ್ಟಬಂಧೋತ್ಸವ, ವೀರಪಟ್ಟಬಂಧ ಶಂಖಾಭಿಷೇಕ ಮಹೋತ್ಸವ, ರಾಜ್ಯಾಭಿಷೇಕವೆಂದು ಕರೆಯಲಾಗುತ್ತದೆ. ಪಟ್ಟಾಭಿಷೇಕದ ಸಮಯ ದಲ್ಲಿ ಅರಸನ ಮುಖ್ಯ ರಾಣಿ (ಮಹಾರಾಣಿ) ಇರುತ್ತಿದ್ದು, ಅವಳಿಗೂ ಪಟ್ಟಾಭಿಷೇಕ ನಡೆಯುತ್ತಿತ್ತು.

ಯುವರಾಜ : ರಾಜನು ತನ್ನ ಜೀವಿತದ ಅವಧಿಯಲ್ಲಿ ತನ್ನ ಉತ್ತರಾಧಿಕಾರಿಯನ್ನಾಗಿ ರಾಜಕುಮಾರ ನನ್ನು ಆರಿಸುತ್ತಿದ್ದನು. ಅವನೇ ಯುವರಾಜ. ಈ ಆಯ್ಕೆಯಲ್ಲಿ ಅನುವಂಶಿಕತೆ ಕಂಡುಬರುತ್ತದೆ.

ಸಂಸ್ಥಾನಿಕ ರಾಣಿಯರು : ಸಂಸ್ಥಾನಗಳಲ್ಲಿ ರಾಣಿಯರು ರಾಜರೊಂದಿಗೆ ವಿವಿಧ ಕಾರ್ಯಗಳಲ್ಲಿ ಭಾಗವಹಿಸುವುದರೊಂದಿಗೆ, ಆಡಳಿತ ಕ್ಷೇತ್ರದಲ್ಲಿಯೂ ಮಿಂಚಿದ್ದಾರೆ. ಕಿತ್ತೂರು ಸಂಸ್ಥಾನದ ಮೊದಲನೆ ಆಡಳಿತಗಾರ್ತಿ ಮಲ್ಲವ್ವ ರುದ್ರಗೌಡ ದೇಸಾಯಿ ೧೫ ವರ್ಷ ಆಳ್ವಿಕೆ ನಡೆಸಿದ್ದಾಳೆ. ರಾಣಿ ಚೆನ್ನಮ್ಮ ಶಿವಲಿಂಗ ರುದ್ರಸರ್ಜನನಿಗೆ ಆಡಳಿತದಲ್ಲಿ ಸಲಹೆ-ಸೂಚನೆ, ಮಾರ್ಗದರ್ಶನ ನೀಡುವ ಹೊಣೆ ಹೊತ್ತಿದ್ದಳು. ಶಿವಲಿಂಗ ರುದ್ರಸರ್ಜನ ಅಕಾಲಿಕ ಮರಣಾ ನಂತರ, ನೇರ ಆಡಳಿತ ನಡೆಸುವ ಎದೆಗಾರಿಕೆ ತೋರಿದಳು.

ಮಂತ್ರಿ ಮಂಡಲ : ರಾಜ್ಯಾಡಳಿತ ವ್ಯವಸ್ಥೆಯಲ್ಲಿ ರಾಜನಿಗೆ ಸಾಂಪ್ರದಾಯಕವಾದ ರೀತಿಯಲ್ಲಿ ನೆರವು ನೀಡುತ್ತಿದ್ದ ಮಂಡಳಿ (ಮಂತ್ರಾಲೋಚನ ಸಭೆ) ಮುಖ್ಯ ಆಧಾರ ಸ್ತಂಭವಾಗಿತ್ತು. ಅದರ ರಚನೆ, ಲಕ್ಷಣಗಳು, ಕರ್ತವ್ಯಗಳು ಪ್ರಚಲಿತ ರಾಜಕಾರಣ ಸನ್ನಿವೇಶಗಳನ್ನವಲಂಬಿಸಿ ಕಾಲದಿಂದ ಕಾಲಕ್ಕೆ ಬೇರೆಯಾಗಿರುತ್ತಿದ್ದವು. ಆಡಳಿತದ ಅನುಕೂಲಕ್ಕಾಗಿ ಕಿತ್ತೂರು ಸಂಸ್ಥಾನಿಕರೂ ಮಂತ್ರಿಮಂಡಲ ಹೊಂದಿದ್ದರು.

ಸೈನ್ಯಾಡಳಿತ : ರಾಜ್ಯಾಡಳಿತದ ಅತೀ ಮುಖ್ಯ ಆಧಾರ ಸ್ತಂಭಗಳಲ್ಲಿ ಸೈನ್ಯಾಡಳಿತ ಒಂದು ರಾಜ್ಯಾಡಳಿತ ವ್ಯವಸ್ಥೆಯಲ್ಲಿ ರಾಜನ ನಂತರದ ಸ್ಥಾನ ದಂಡನಾಯಕನದು (ದಳವಾಯಿ). ವಾಸ್ತವ ವಾಗಿ ಅವನು ಇಡೀ ಸೈನ್ಯ ನಿಯಂತ್ರಿಸುತ್ತಿದ್ದುದು ಮಾತ್ರವಲ್ಲ. ರಾಜನ ಬಲಗೈಯಾಗಿ ಸಾಮಾನ್ಯ ಆಡಳಿತದ ಮೇಲೂ ಗಣನೀಯ ಪ್ರಭಾವವನ್ನು ಬೀರುತ್ತಿದ್ದನು "ಧೈರ್ಯಶಾಲಿಗಳೂ ದೇಶಭಕ್ತರೂ ಆದ ಯೋಧರುಗಳಿದ್ದ ಪದಾತಿದಳ, ಆಯುಧಗಳಿಂದ ಸಜ್ಜುಗೊಂಡ ಆನೆಪಡೆ (ಗಜದಳ), ಅಶ್ವದಳ, ಒಂಟೆಗಳು ಸೈನ್ಯದ ಮುಖ್ಯ ಅಂಗಗಳಾಗಿದ್ದವು. ವೈವಿಧ್ಯಪೂರ್ಣವಾದ ಇಂಥ ಸೇನೆಗಳಿಗೆ ಸೋತನಾಯಕರು ಇತರ ಸ್ಥಳೀಯ ಘಟಕಗಳ ಮುಖ್ಯರು ಒದಗಿಸುತ್ತಿದ್ದ ಸೇನಾ ತುಕಡಿಗಳು ಸೇರಿಕೊಳ್ಳುತ್ತಿದ್ದವು. "ಬೇಹುಗಾರರು ಮತ್ತು ಸುದ್ದಿ ರವಾನಿಸುವವರು ವಿಶೇಷವಾಗಿ ಯುದ್ಧ ಸಮಯದಲ್ಲಿ ಬಹು ಉಪಯುಕ್ತವೂ ಪ್ರಶಂಸನೀಯ ಸೇವೆ ಸಲ್ಲಿಸಿಸುತ್ತಿದ್ದರು.

ಪೋಲೀಸ್ ಪಾಟೀಲ : ಗ್ರಾಮ ರಕ್ಷಣೆಯ ಹಿನ್ನೆಲೆಯಲ್ಲಿ ತಳವಾರರ ಮೇಲೆ ಪೋಲೀಸ್ ಪಾಟೀಲರು ಕೆಲಸ ನಿರ್ವಹಿಸುತ್ತಿದ್ದರು. ತಳವಾರ ಆಡಳಿತದ ತೀರಾ ಕೆಳಅಧಿಕಾರಿ ಗ್ರಾಮರಕ್ಷಣೆ ಇವರ ಮುಖ್ಯ ಕೆಲಸ. ಹೀಗಾಗಿ ಅವರು ಗ್ರಾಮದಲ್ಲಿ ಸದಾಕಾಲ ಕೈಯಲ್ಲಿ ಖಡ್ಗವನ್ನು ಹಿಡಿದು

ಕೊಂಡು ಸಂಚರಿಸುತ್ತಿದ್ದರು. ಊರಲ್ಲಿ ಕಳ್ಳತನ, ಕೊಲೆ, ಸುಲಿಗೆ, ಹಾಗೂ ದರೋಡೆಗಳಾಗದಂತೆ ನೋಡಿಕೊಳ್ಳುತ್ತಿದ್ದರು. ಗ್ರಾಮದಲ್ಲಿ ಏನಾದರೂ ಅನ್ಯಾಯ ನಡೆದರೆ ಅದಕ್ಕೆ ತಳವಾರನು ಹೊಣೆಯಾಗಿ ಆ ನಷ್ಟವನ್ನು ಅವನೇ ತುಂಬಿಕೊಡಬೇಕಾಗಿತ್ತು. ಅಪರಾಧ ಮಾಡಿದವರನ್ನು ಹಿಡಿದು ರಾಜನಿಗೆ ಒಪ್ಪಿಸುವುದು ಅವನ ಮುಖ್ಯ ಕೆಲಸ. ರಾತ್ರಿ ವೇಳೆಯಲ್ಲಿ ತಳವಾರನನ್ನು ಕಂಡರೆ ಅಪರಾಧಿಗಳು ಹೆದರಿ ಕುಸಿದು ಬೀಳುತ್ತಿದ್ದರು. ಇಂಥ ತಳವಾರರ ಉಲ್ಲೇಖ ಕಿತ್ತೂರು ಸಂಸ್ಥಾನದಲ್ಲೂ ಕಂಡು ಬರುತ್ತದೆ. ಕಿತ್ತೂರು ಸಂಸ್ಥಾನದಲ್ಲಿ ತಳವಾರನನ್ನು "ವಾಲಿಕಾರ", "ಹಳಬ" ಎಂದೂ ಕರೆಯಲಾಗಿದೆ. ರಾಯಣ್ಣನು ಸಂಗೊಳ್ಳಿಯವನಾಗಿದ್ದು, ಅವನನ್ನು ತಳವಾರನೆಂದು ಗುರುತಿಸಿದರೆ, ರಾಯಣ್ಣನ ಹೆಂಡತಿ ಮಲ್ಲವ್ವ ನೇಗಿನಹಾಳದ ಹಳಬ ಲಕ್ಕಪ್ಪನ ತಂಗಿ ಆಗಿದ್ದಾಳೆ, ಕೊನೆಗೆ ಈ "ಲಕ್ಕಪ್ಪನೇ ರಾಯಣ್ಣನನ್ನು ಬ್ರಿಟಿಷರಿಗೆ ಹಿಡಿದುಕೊಡುತ್ತಾನೆ"[೨೦] ಹೀಗೆ ಮೇಲಿನ ಹಂತದಿಂದ ಕೆಳಹಂತದವರೆಗೂ ಸಂಸ್ಥಾನಿಕರ ಆಡಳಿತವು ಕೂಡ ಅಂದಿನ ಕಾಲದಲ್ಲಿ ಅವರ ಅಧಿರಾಜರ ಪದ್ಧತಿಯನ್ನು ಹೋಲುತ್ತಿತ್ತು.

ಗಾವುಂಡರು : ಗ್ರಾಮದ ಅಧಿಕಾರ ನೋಡಿಕೊಳ್ಳುವವರು ಗಾವುಂಡರು, ಗ್ರಾಮುಂಡ>ಗಾಮುಂಡ> ಗೌಂಡ>ಗೌಡ ಎಂದಾಗಿದೆ. ಜೊತೆಗೆ ಅದರ ರಕ್ಷಣೆ ಹಾಗೂ ಅಲ್ಲಿಯ ಸುಂಕ ನಿಗ್ರಹಿಸಲು ಕೆಲಸ ನಿರ್ವಹಿಸುತ್ತಿದ್ದರು. ಊರಾಡಳಿತದಲ್ಲಿ ಗೌಡನು ಪ್ರಮುಖನಾಗಿದ್ದರೂ ಊರಿನ ಯಾವುದೇ ತೀರ್ಮಾನ ಬಗೆಹರಿಸಲು ಅವನು ಗ್ರಾಮದ ಇತರೆ ಸದಸ್ಯರೊಂದಿಗೆ ಚರ್ಚಿಸಿ ಒಮ್ಮತಕ್ಕೆ ಬರಬೇಕಾಗುತ್ತಿತ್ತು. ಇದನ್ನೇ "ಗ್ರಾಮ ಸಭೆ, ಜನತಾ ಸಭೆ ಎಂದು ಕರೆದಿದ್ದಾರೆ".[೨೧] ಗ್ರಾಮಾಡಳಿತ ದಲ್ಲಿ ಗಾವುಂಡನ ಜೊತೆಗೆ ಹಲವು ಅಧಿಕಾರಿಗಳಿರುತ್ತಿದ್ದು, ಆಡಳಿತದಲ್ಲಿ ಅವನಿಗೆ ಸಹಕಾರ ನೀಡುತ್ತಿದ್ದರು. ಗ್ರಾಮ ಸಭೆಗೆ ಗಾವುಂಡ ಮುಖ್ಯಸ್ಥನಾದರೆ, ಸೇನುಭೋವ ಅಥವಾ ಕುಲಕರ್ಣಿ ಲೆಕ್ಕ-ಪತ್ರ ವ್ಯವಹಾರವನ್ನು, ತಳವಾರ ಗ್ರಾಮ ರಕ್ಷಣೆಯ ಭಾರವನ್ನು ಹೊರುತ್ತಿದ್ದರು. ವಾಸ್ತವಾಗಿ ಸೇನುಭೋವ ಮತ್ತು ಕುಲಕರ್ಣಿ ಸ್ಥಾನ-ಮಾನಗಳು ಗಾವುಂಡನಿಗಿಂತ ಕೆಳಗಿನದಾಗಿತ್ತು. ಪ್ರತಿಯೊಂದು ಗ್ರಾಮಕ್ಕೂ ಒಬ್ಬೊಬ್ಬ ಸೇನಭೋವನಿರುತ್ತಿದ್ದನು. ಕುಲಕರಣಿಯು ಅಗ್ರಹಾರದ ಬ್ರಾಹ್ಮಣ ಸಮೂಹದ ಲೆಕ್ಕ ನೋಡಿಕೊಳ್ಳುತ್ತಿದ್ದನು.

೪.೩. ತಾಳೆಬಂಧದ ಪ್ರಕಾರ ಅಧಿಕಾರಿಗಳು (ಕ್ರಿ.ಶ. ೧೭೯೩)

೧೧ ಗ್ರಾಮಗಳನ್ನು ಚಿಂತಾಮಣರಾವ ಪಾಂಡುರಂಗ ಮಿರಜಕರ, ದೌಲತರಾವ ಘೋರ್ಪಡೆ ಕಿಲ್ಲೆ ಹನುಮಂತಗಡ, ಶ್ರೀಪತರಾವ ಸರದೇಶಪಾಂಡೆ, ಭೂಪತರಾವ ದೇಸಾಯಿ, ನಾರೋದೇಶಪಾಂಡೆ, ರುದ್ರಪ್ಪ ದೇಸಾಯಿ, ರುದ್ರೋ ವಿರುಪಾಕ್ಷ ಕುಲಕರ್ಣಿ ಮತ್ತು ಗುರುಪ್ಪ ದೇಸಾಯಿಯವರಿಗೆ ಇನಾಮು ನೀಡಲಾಗಿತ್ತು. ೨೨ ಸರಂಜಾಮಿ ಗ್ರಾಮಗಳನ್ನು ರಘುನಾಥರಾವ ನೀಲಕಂಠ ಕುರುಂದವಾಡಕರ ೨ ಕಮಾವಿಸ ಗ್ರಾಮಗಳು (ಕಂದಾಯ ವಸೂಲಿ ಗ್ರಾಮಗಳು) ಸಿದ್ಧೇಶ್ವರರಾವ ಮಹಿಪತ ಚಿನಿವಾಲೆ ೧೧ ದುಮಾಲೆ (ಖಾಯಂ ಅಥವಾ ಕೆಲವು ವರ್ಷಗಳವರೆಗೆ ಅನುಭವಿಸಲು ನೀಡಿದ ಗ್ರಾಮ), ಮಲ್ಲಪ್ಪ ವೀರಪ್ಪಗೌಡ ಸರದೇಸಾಯಿ, ೧ ಭೀಮಾಜಿ ಬಾಬುರಾವ ೪೪ ಗ್ರಾಮಗಳನ್ನು ಬಿಷ್ಟಪ್ಪ

ದೇಸಾಯಿ (ತೇಗೂರ ಇನಾಮದಾರ) ಕಲೋತಿಕರ ಇನ್ನುಳಿದ ೧೯೪ ಗ್ರಾಮಗಳು ಮರಾಠರ ವಶದಲ್ಲಿದ್ದವು. ಈ ಗ್ರಾಮಗಳಿಂದ ೪೧,೦೭೮೬-೦-೯ ಕಂದಾಯ ಸಂಗ್ರಹವಗುತ್ತಿದ್ದು, ೭ ನಿರ್ದಿಷ್ಟ ಮಾನಗಳಲ್ಲಿ ವಸೂಲ ಮಾಡಲಾಗುತ್ತಿತ್ತು. ಜಮಾಬಂದಿ (ಗ್ರಾಮಗಳ ವಾರ್ಷಿಕ ಕಂದಾಯ ನಿರ್ಧರಿಸುವುದು) ಪಾವಲಪಟ್ಟಿ (ಮೂಲಕಂದಾಯಕ್ಕೆ ೨ ಆಣೆ ಮೇಲು ತೆರಿಗೆ) ಐನಾತ (ಮೂಲ ತೆರಿಗೆ) ಜಾಜತಿ ಪಟ್ಟಿ (ಹೆಚ್ಚಿನ ತೆರಿಗೆ) ಸಾಧಣೂಕ (ವ್ಯವಸ್ಥಾಪನೆಯ ಸಲುವಾಗಿ ವಸೂಲ ಮಾಡಿದ್ದು) ಖರ್ಚುಪಟ್ಟಿ (ಇತರೆ ಖರ್ಚಿನ ಸಲುವಾಗಿ). ಈ ಮೊತ್ತ ವಲ್ಲದೆ ರೂ. ೪೫,೧೬೧ -೧೦-೦ ಅಧಿಕ ತೆರಿಗೆ ಸಂಗ್ರಹಿಸಲಾಗುತ್ತಿತ್ತು. ರೂ. ೮೬೧೨-೮ಗಳನ್ನು ಇನಾಮದಾರರ ಕಡೆಯಿಂದ ನಝುರ (ವಾರ್ಷಿಕ ಕಾಣಿಕೆ), ವತನದಾರ, ಜೂಥಿದಾರ ಮತ್ತು ಕಮಾವಿಸದಾರರಿಂದ ಬಂದ ಹಣವನ್ನು 'ರಕ್ತಮಾನ್ಯ'ಕ್ಕೆ ವಿನಿಯೋಗಿಸುತ್ತಿದ್ದರು. ಯುದ್ಧದಲ್ಲಿ ಮಡಿದ ವೀರನ ಕುಟುಂಬದವರಿಗೆ ಪರಿಹಾರ ನೀಡಲು ಈ ಹಣವನ್ನು ವಿನಿಯೋಗಿಸ ಲಾಗುತ್ತಿತ್ತು. ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತ ಅಮೋಘ ಸೇವೆಸಲ್ಲಿಸಿದ ಅಧಿಕಾರಿಗಳಿಗೆ ಸರದಾರರಿಗೆ 'ಇನಾಮು' ನೀಡಲಾಗುತ್ತಿತ್ತು. ದೇಸಾಯಿ, ಸರದೇಸಾಯಿ, ಸರದೇಶಪಾಂಡೆ, ಗೌಡ ಇವರುಗಳು ಕರ್ಯಾತುಗಳ ಒಡೆಯರಾಗಿದ್ದು ಕಂದಾಯ ಸಂಗ್ರಹಿಸಿ ಕಿತ್ತೂರಿನ ದೇಸಾಯಿಯವರಿಗೆ ಸಲ್ಲಿಸುತ್ತಿದ್ದರು. ಯುದ್ಧ ಪ್ರಸಂಗದಲ್ಲಿ ತಮ್ಮ ಸೈನಿಕರೊಂದಿಗೆ ಇವರು ಭಾಗವಹಿಸುತ್ತಿದ್ದರು.

೪.೩.೧. ಗ್ರಾಮದ ಪ್ರಭುವರ್ಗದವರು ಮತ್ತು ಅಧಿಕಾರಿಗಳು

ಪ್ರಾಚೀನ ಕಾಲದಿಂದಲೂ ಕಿತ್ತೂರಿನ ಅರಸರ ಕಾಲದಲ್ಲೂ ಗ್ರಾಮದ ಒಡೆಯ ಗೌಡನೇ ಆಗಿದ್ದು ಇವನನ್ನು 'ಪಾಟೀಲನೆಂದೂ' ಕರೆಯಲಾಗುತ್ತಿತ್ತು. ತಮ್ಮ ಗ್ರಾಮದ ಆಡಳಿತದ ಹೊಣೆ ಈ ಗೌಡ ಅಥವಾ ಪಾಟೀಲರದೇ ಆಗಿತ್ತು. ಇವರ ಕೈಕೆಳಗಿನ ಅಧಿಕಾರಿ ಕುಲಕರ್ಣಿ ಗುಮಾಸ್ತ ನಾಗಿದ್ದು ಲೆಕ್ಕ ಪತ್ರ ಇಡುವ ಅಧಿಕಾರಿಯಾಗಿದ್ದಾನೆ. ಗ್ರಾಮದಿಂದ ಕಂದಾಯ ವಸೂಲಿ ಮಾಡುವುದು ಅದನ್ನು ಮೇಲಿನವರಿಗೆ ಮುಟ್ಟಿಸುವುದು ಇವರ ಹೊಣೆಯಾಗಿತ್ತು. ಸಂಸ್ಥಾನಕ್ಕೆ ಗಂಡಾಂತರ ಬಂದಾಗ ಸೈನಿಕರ ಜಮಾವಣೆ ಮಾಡಿಕೊಂಡು ಅವರ ನೆರವಿಗೆ ಹೋಗುವುದೂ ಪ್ರಮುಖ ಕರ್ತವ್ಯಗಳಲ್ಲಿ ಒಂದಾಗಿತ್ತು. 'ಪೀರಜಾದೆ' ಈಗಿನ ನಾಲ್ಕನೆಯ ದರ್ಜೆಯ ನೌಕರನನ್ನು ಹೋಲುತ್ತಿದ್ದು ಗೌಡ/ಪಾಟೀಲನು ಹೇಳುವ ಕೆಲಸ ಕಾರ್ಯಗಳನ್ನು ನೆರವೇರಿಸುವುದು ಇವನ ಕರ್ತವ್ಯವಾಗಿತ್ತು. 'ಮುಲ್ಲಾ, ಪೂಜಾರಿ, ಮಠದೈಯ್ಯಾ' ಇವರು ಧರ್ಮ ಕಾರ್ಯಕ್ಕೆ ಸಂಬಂಧಿಸಿದ ಅಧಿಕಾರಿಗಳಾಗಿ ದ್ದಾರೆ.

೪.೩.೨. ಸಂಸ್ಥಾನದ ಅಧಿಕಾರಿ ವರ್ಗದವರು

ಇವರು ರಾಜಧಾನಿ ಕಿತ್ತೂರಿನ ಕೆಲಸವನ್ನು ನಿರ್ವಹಿಸುತ್ತಿದ್ದರು. ಇಡೀ ಸಂಸ್ಥಾನದ ಆಡಳಿತ ಸುಗಮವಾಗಿ ಸಾಗುವಂತೆ ನೋಡಿಕೊಳ್ಳುವುದಕ್ಕೆ ಕಿತ್ತೂರಿನ ದೇಸಾಯಿಗಳು ಕೆಲವು ಅಧಿಕಾರಿಗಳನ್ನು ನೇಮಿಸಿಕೊಂಡಿದ್ದಾರೆ. ನಿಷ್ಠೆಯಿಂದ ಇವರು ದೇಸಾಯಿಗಳಿಗೆ ಸೇವೆ ಸಲ್ಲಿಸುತ್ತಿದ್ದರು. ಅವರಲ್ಲಿ 'ಕಾರಭಾರಿ'ಗಳು ಪ್ರಥಮ ವರ್ಗದ ಅಧಿಕಾರಿಗಳಾಗಿದ್ದಾರೆ.

೪.೩.೩. ಕಾರಭಾರಿಗಳು

ಕಾರಭಾರಿಗಳು ಕಿತ್ತೂರು ಸಂಸ್ಥಾನದ ಆಧಾರ ಸ್ತಂಭಗಳು. ಇಡೀ ಸಂಸ್ಥಾನದ ಉಸ್ತುವಾರಿ ಇವರ ಮೇಲಿತ್ತು. ಇವರು ದೇಸಾಯಿಗಳ ನಂಬಿಗಸ್ಥ ಅಧಿಕಾರಿಗಳಾಗಿದ್ದರು. ಸಂಸ್ಥಾನ ಮತ್ತು ದೇಸಾಯಿಗಳ ಆಗು-ಹೋಗುಗಳ ಮತ್ತು ಖಾಸಗಿ ವಿಷಯಗಳನ್ನು ನೋಡಿಕೊಳ್ಳುತ್ತ ಅವರಿಗೆ ಸಲಹೆ ಸೂಚನೆ ಕೊಡುತ್ತ, ಮಾರ್ಗದರ್ಶನ ಮಾಡುತ್ತ ದೇಸಾಯಿಗಳನ್ನು ಮುನ್ನಡೆಸಿದ್ದಾರೆ. ಇವರು ಹಿಂದೆ ಚಕ್ರವರ್ತಿಗಳ ಆಸ್ಥಾನದಲ್ಲಿದ್ದ 'ಮಹಾಸಾಮಂತಾಧಿಪತಿ, ಮಹಾಪ್ರಚಂಡ ದಂಡನಾಯಕರ'ನ್ನು ಮಹಾಮಂಡಳೇಶ್ವರನ ಆಸ್ಥಾನದಲ್ಲಿದ್ದ 'ದಂಡನಾಯಕ'ರನ್ನು ಹೋಲುತ್ತಾರೆ. ಈ ಕಾರಭಾರಿಗಳನ್ನು 'ಸಚಿವ'ರೆಂದೂ ಮಂತ್ರಿಗಳೆಂದೂ ಕರೆಯಲಾಗಿದೆ. ಸ್ವತಃ ಮಲ್ಲಸರ್ಜ ದೊರೆಯೇ ರಚಿಸಿರುವ 'ಮಲ್ಲೇಂದ್ರ ಮಾನಸೋಲ್ಲಾಸ'ದಲ್ಲಿ ಕಾರಭಾರಿ ವೀರಸಂಗಪ್ಪನನ್ನು ಸಚಿವನೆಂದು ಕರೆಯಲಾಗಿದ್ದು ಅದು ಹೀಗೆ ಬರುತ್ತದೆ.

"ಸವಿನಯೋಕ್ತಿಯಿಂದ ವಿರಳ ಸದ್ಭ
ಕ್ತಿ ವಶನಾಗಿ ನೃಪನಿಂದಿರಲು
ತವಕದಲು ಪಚರಿಸುವರವರ್ಗಳೆ ಸ
ಚಿವರು ವೀರಸಂಗಪ್ಪಗಳು"[೨೨]

ವೀರಸಂಗಪ್ಪ ಮಲ್ಲಸರ್ಜನಲ್ಲಿ ಕಾರಭಾರಿಯಾಗಿದ್ದುದು ತಿಳಿದು ಬರುತ್ತದೆ. ಮಡಿವಾಳಶಾಸ್ತ್ರಿಗಳನ್ನು 'ಮಂತ್ರಿ' ಯೆಂದು 'ಮಲ್ಲೇಂದ್ರ ಪೂಜಾ ವಿಲಾಸ ತಾರಾವಳಿ'ಯಲ್ಲಿ ದಾಖಲಿಸಿದೆ.[೨೩]

ವಿರೂಪಾಕ್ಷ ಪಂತ ಮಹಿಪತ ಎನ್ನುವ ಬ್ರಾಹ್ಮಣನು ಕಾರಭಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದನು. ಈ ಮಹಿಪತನ ವಂಶವು ಈಗಲೂ ತಿಗಡಿ ಎಂಬ ಊರಿನಲ್ಲಿ ಇದ್ದು, ಅವರನ್ನು ಕಾರಭಾರಿಗಳೆಂದೇ ಕರೆಯಲಾಗುತ್ತದೆ.

ಮಲ್ಲಪ್ಪ ಕುನ್ನೂರು ಎಂಬುವನು ಕಾರಭಾರಿಯಾಗಿದ್ದನೆಂದು ಮೋಡಿ ದಾಖಲೆಗಳಿಂದ ತಿಳಿದು ಬರುತ್ತದೆ. ಈ ಕಾರಭಾರಿಗಳ ಹೆಸರು ಉಲ್ಲೇಖಗೊಂಡಂತೆ ಅವರ ಕರ್ತವ್ಯಗಳು ಮೊದಲಾದ ವಿವರಗಳು ಪೂರ್ಣವಾಗಿ ಲಭ್ಯವಾಗಿಲ್ಲ, ಆದರೆ ಇವರು ಮಂತ್ರಿಗಳಂತೆ ಕಾರ್ಯ ನಿರ್ವಹಿಸುತ್ತಿದ್ದರು.[೨೪]

ಅಲ್ಲದೆ ಗುರುನಾಥ ಪಂತರೂ (ಅನುಭಾವಿಗಳು) ಮಲ್ಲಸರ್ಜನಿಗೆ ಕಾರಭಾರಿಗಳಾಗಿದ್ದರು. ಮಡಿವಾಳಪ್ಪನೆಂಬುವನು ಮಲ್ಲಸರ್ಜನಿಗೆ ಕಾರಭಾರಿಯಾಗಿರಬೇಕೆನಿಸುತ್ತದೆ. ಈತನು ಮಲ್ಲಸರ್ಜನೊಂದಿಗೆ ಸದಾ ಇದ್ದು, ಟಿಪ್ಪು ಸುಲ್ತಾನ ಮಲ್ಲಸರ್ಜನನ್ನು ಶ್ರೀರಂಗಪಟ್ಟಣಕ್ಕೆ ಕರೆದೊಯ್ಯುವಾಗ ಅವನ ಜೊತೆಗೆ ಮಡಿವಾಳಪ್ಪನೂ ಹೋಗುತ್ತಾನೆ. ಮಲ್ಲೇಂದ್ರ ವಿಲಾಸದಲ್ಲಿ[೨೫] "ರಸಿಕ ರಾಜೇಂದ್ರನೆಲ್ಲರನಗಲಿ ಮಡಿವಾಳಪ್ಪಾಖ್ಯನೊರ್ವನೆ ಸಂಗತಿ" ಎಂದು ಹೇಳಲಾಗಿದೆ. ತಪ್ಪಿಸಿಕೊಂಡು ಬರುವಾಗ ಮಲ್ಲಸರ್ಜನ ದೊರೆಯ ಸಹಾಯಕನಾಗಿ ಕರೆದುಕೊಂಡು ಬಂದದ್ದನ್ನು ಕಿತ್ತೂರ ಅರಸರ ಕೋಲು ಪದದಲ್ಲಿ

"ದೊರೆಗಳ ಕಾಲಮೇಲ ಕಲ್ಲಹೊರಳಿ
ಪಾದಕಿ ಬಂದಿತೋ ನೆತ್ತರ
ಮಡಿವಾಳಪ್ಪ ರಟ್ಟ್ಯಾಗ ಕೈ ಹಾಕಿ ಎತ್ತಿ"[೨೬] ಎಂದು ಹೇಳಲಾಗಿದೆ.

ಮಲ್ಲಸರ್ಜನನ್ನು ಪೇಶ್ವೆಗಳು ಪೂನಾಕ್ಕೆ ಕರೆದೊಯ್ಯುವಾಗ ತನ್ನ ಕಾರಭಾರಿಯೂ ಮತ್ತು ಗುರು ಪುತ್ರನೂ ಆದ ವೀರಪ್ಪನಿಗೆ ಆಗಾಗ ಪತ್ರ ಬರೆದು ಅರಮನೆಯ ಸುದ್ದಿಯನ್ನು ಕಳುಹಿಸು ಎಂದು ಹೇಳುತ್ತ ಬೇರೆ ಸೈನ್ಯ ಸಂಸ್ಥಾನವನ್ನು ಮುತ್ತಿದರೆ ಅವರಿಗೆ ಗುದ್ದು ಹಾಕು ಎಂದು ಆದೇಶಿಸುತ್ತಾನೆ. ಇದರಿಂದ ವೀರಪ್ಪನೂ ಒಬ್ಬ 'ಕಾರಭಾರಿ'ಯಾಗಿದ್ದುದು ಗೊತ್ತಾಗುತ್ತದೆ. 'ಮಲ್ಲಸರ್ಜ ಕಾವ್ಯ'ದಲ್ಲಿ ಬಂದಿದೆ.

ಗುರುಪುತ್ರ ವೀರಪ್ಪಗ್ಹೇಳಿದ ಬುದ್ಧಿ
ಬರೆಬರೆದು ಕಳಿಸಯ್ಯ ಅರಮನಿ ಸುದ್ದಿ
ಕರೆದು ಹೇಳಿದ ಕಾರಭಾರಿಗೆ ಬುದ್ಧಿ ॥

ಮಲ್ಲಸರ್ಜನ ತಂದೆ ಈರಪ್ಪ ದೇಸಾಯಿಗೆ ವಿರೂಪಾಕ್ಷಪಂತ ಮಹಿಪತ ಎನ್ನುವ ಬ್ರಾಹ್ಮಣನು ಕಾರಭಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದನು. ಈ ಮಹಿಪತನ ಮನೆತನದವರು ಈಗಲೂ ತಿಗಡಿ ಯಲ್ಲಿದ್ದು ಅವರನ್ನು ಕಾರಭಾರಿಗಳೆಂದೇ ಕರೆಯಲಾಗುತ್ತದೆ. ಈರಪ್ಪ ದೇಸಾಯಿ (೧೭೪೯-೮೨) ತಾಸಗಾಂವದ ಪಟವರ್ಧನನ ವಶದಲ್ಲಿದ್ದ ಪರಸಗಡ, ಶಹಾಪೂರ, ಗೋಕಾಕ ತಾಲೂಕು ಗಳನ್ನು ಗೆದ್ದುಕೊಂಡಿದ್ದನು. ಮುಂದೆ ಪರಶುರಾಮ ಭಾವು ಪಟವರ್ಧನನು ವೀರಪ್ಪ ದೇಸಾಯಿ ಯನ್ನು ಗೋಕಾಕ ಕಾಳಗದಲ್ಲಿ ಸೋಲಿಸಿ ಸೆರೆಹಿಡಿಯುತ್ತಾನೆ. ಅವನನ್ನು ಮೀರಜ್‌ಗೆ ಕರೆದು ಕೊಂಡು ಹೋಗಿ ವಿಷಹಾಕಿ ಕೊಲ್ಲಲಾಗುತ್ತದೆ. ಈ ವಿಷಯ ವೀರಪ್ಪ ದೇಸಾಯಿ ಕೋಲುಪದ ದಲ್ಲಿ ಹೀಗೆ ಬರುತ್ತದೆ.

"ಮಿರಜೀಯ ಅಗಸೀಗೆ ಬೇಸ್ಯಾಗಿ ಇಳಿವ್ಯಾರ
ಇಸಮದ್ದು ಕುಡಿಸಿ ಕೊಂದಾರೊ"

ಇದರಲ್ಲಿ ಕರಿಬಸವ, ಬೂಸಿ ಬಸವ, ಚನ್ನಬಸವ ಎನ್ನುವ ಮೂವರು ವ್ಯಕ್ತಿಗಳು ವೀರಪ್ಪ ದೇಸಾಯಿಯನ್ನು ಕೊಲ್ಲುವಲ್ಲಿ ಪಿತೂರಿ ನಡೆಸಿರುವುದನ್ನು ಜನಪದ ಕವಿ ಹೀಗೆ ವರ್ಣಿಸಿದ್ದಾನೆ.

"ಉದ್ದನ್ನ ಕರಿಬಸ್ಯಾ ಗಿಡ್ಡನ ಬೂಸಿಬಸ್ಯಾ
ಉದ್ದಿನ ಕಾಳಷ್ಟು ಚನಬಸ್ಯಾ
ಉದ್ದೀನ ಕಾಳಷ್ಟು ಚನಬಸ್ಯಾ । ಮೂರು ಕೂಡಿ
ಸುದ್ಧ ಮಾಡಿದರೊ ನಮ್ಮ ದೊರೆಯ"

ವೀರಪ್ಪ ದೇಸಾಯಿಯ ಕಾರಭಾರಿ ವಿರೂಪಾಕ್ಷ ಪಂತ ಮಹಿಪತ ಬ್ರಾಹ್ಮಣನಾಗಿದ್ದು ಇವನು ದೇಸಾಯಿಯ ಶವವನ್ನು ಕಿತ್ತೂರಿಗೆ ತಂದು ಕಲ್ಮಠದಲ್ಲಿ ಸಮಾಧಿ ಮಾಡುತ್ತಾನೆ. ಅಲ್ಲದೆ

ಮಲ್ಲಪ್ಪ ಕುನ್ನೂರ ಎನ್ನುವವನೂ ಕಾರಭಾರಿಯಾಗಿದ್ದನು. ಈ ಕಾರಭಾರಿಗಳ ಸಂಖ್ಯೆ, ಇವರ ಕರ್ತವ್ಯ ಮೊದಲಾದ ವಿವರಗಳು ಲಭ್ಯವಿಲ್ಲ. ಒಟ್ಟಾರೆ ಇವರು ಮಂತ್ರಿಗಳಂತೆ ಕಾರ್ಯನಿರ್ವಹಿಸುತ್ತಿದ್ದರೆಂದು ಹೇಳಬಹುದು.

ಸೇನಾಪತಿಗಳು : ಪ್ರಾಚೀನ ಕಾಲದಲ್ಲಿ ಸೇನಾಪತಿಯ ಸ್ಥಾನ ಬಹುಮುಖ್ಯವಾಗಿತ್ತು. ಒಂದು ದೇಶದ ಅಳಿವು-ಉಳಿವು, ರಕ್ಷಣೆ ಇವರ ಕೈಯಲ್ಲಿರುತ್ತದೆ. ಈ ಮಾತು ಕಿತ್ತೂರು ಸಂಸ್ಥಾನಕ್ಕೆ ಹೊರತಾಗಿಲ್ಲ. ಕಿತ್ತೂರು ಸಂಸ್ಥಾನ ಇಷ್ಟೊಂದು ಖ್ಯಾತಿಗಳಿಸಿರುವುದಕ್ಕೆ ಸೇನಾಪತಿಗಳೇ ಕಾರಣ. ಅವರ ಸ್ವಾಭಿಮಾನ, ವೀರಬದುಕು ಇಂದಿಗೂ ಮಾದರಿಯಾಗಿ ನಿಲ್ಲುತ್ತದೆ. ಸಂಸ್ಥಾನ ಹಾಳಾದರೂ ಬ್ರಿಟಿಷರ ವಿರುದ್ಧ ಸೇಡು ತೀರಿಸಿಕೊಳ್ಳಲು ಅನೇಕ ವೀರರು ಹೋರಾಡಿದ್ದಾರೆ. ಸೂರ್ಯ ಮುಳುಗದ ಸಾಮ್ರಾಜ್ಯವೆಂಬ ಖ್ಯಾತಿ ಪಡೆದ ಬ್ರಿಟಿಷರ ವಿರುದ್ಧ ಯುದ್ಧ ಮಾಡಿ ಜಯಿಸುವುದು ಕೊನೆಗೆ ಸೋಲನ್ನು ಅನುಭವಿಸುವುದು ವೀರಮರಣ ಹೊಂದುವುದು ಸಾಮಾನ್ಯವಲ್ಲ, ಅದಕ್ಕೆ ಕೆಚ್ಚೆದೆ ಇರಬೇಕು. ಅಂಥ ವೀರರು ಕಿತ್ತೂರು ಸಂಸ್ಥಾನದ ಸಣ್ಣ ಸೈನ್ಯದಲ್ಲಿದ್ದರು. ಅದಕ್ಕಾಗಿಯೇ ಕಿತ್ತೂರು ಜಗತ್ಪ್ರಸಿದ್ಧವಾಯಿತು.

ಸರ್ದಾರ ಗುರುಸಿದ್ದಪ್ಪ : ಕಿತ್ತೂರು ಸಂಸ್ಥಾನದ ಸೈನ್ಯದ ಕೆಲವು ಅಧಿಕಾರಿಗಳ ಉಲ್ಲೇಖ ಸಾಹಿತ್ಯದಲ್ಲಿ ಬರುತ್ತದೆ. ಮಲ್ಲಸರ್ಜನ ಕಾಲದಿಂದಲೂ ಸೇನಾಪತಿಯಾಗಿ ಕಾರ್ಯನಿರ್ವಹಿಸಿ ಕೊನೆಗೆ ಬ್ರಿಟಿಷರೊಂದಿಗೆ ಹೋರಾಡಿದ ಸರ್ದಾರ ಗುರುಸಿದ್ದಪ್ಪ ಅಸಾಮಾನ್ಯ ವೀರ. 'ಸರ್ದಾರ' ಎಂಬುದು ಈತನ ಶ್ರೇಷ್ಠ ಸ್ಥಾನಮಾನವನ್ನು ಸೂಚಿಸುತ್ತದೆ. ಸ್ವಾಮಿಭಕ್ತಿ, ದೇಶಭಕ್ತಿ ಮತ್ತು ಶೌರ್ಯಗುಣಕ್ಕೆ ಈತನು ಹೆಸರಾಗಿದ್ದಾನೆ. ಮಲ್ಲಸರ್ಜನ ಕಾಲದಿಂದಲೇ ಈತನು ಸೇನಾಪತಿಯಾಗಿದ್ದು ರಾಣಿ ಚನ್ನಮ್ಮನ ಕಾಲದವರೆಗೂ ಮುಂದುವರೆದು ಬ್ರಿಟಿಷರೊಂದಿಗೆ ಯುದ್ಧಮಾಡಿದ ಸೇನಾನಿಯಾಗಿದ್ದಾನೆ.

ಮಲ್ಲಸರ್ಜ ದೊರೆಯ ನಂಬಿಗಸ್ಥ ಬಂಟನಾಗಿರುವ ಸರ್ದಾರ ಗುರುಸಿದ್ದಪ್ಪ ಅಂಬಡಗಟ್ಟಿ ಗ್ರಾಮದವನು. ಮಲ್ಲಸರ್ಜನನ್ನು ಪೇಶ್ವೆ ಬಿಡುಗಡೆ ಮಾಡಿದ ಮೇಲೆ ಗುರುಸಿದ್ದಪ್ಪನಿಗೆ ಅರಸ ಅರಮನೆಯ ಸತಿ, ಸುತ, ಸೊಸೆಯರನ್ನು ಕರೆದುಕೊಂಡು ಬರಲು ತಿಳಿಸುತ್ತಾನೆ. ಈ ವಿಷಯ ಮಲ್ಲಸರ್ಜನ ಕಾವ್ಯದಲ್ಲಿ ಅರಸ ಸಕ್ಕರಿ ನೀರಿನ ಆಧಾರದಿಂದ ಎಡೂರಿಗೆ ಬಂದು ವೀರಭದ್ರನ ದರ್ಶನ ಪಡೆದು ಅಯ್ಯನವರಿಗೆ ಲೆಕ್ಕವಿಲ್ಲದಷ್ಟು ದಾನ ಮಾಡುತ್ತಾನೆ ಎಂದಿದೆ.

> ಅರಸು ಮಲ್ಲೇಂದ್ರನು ಹರುಷವ ಕಂಡು
> ತರಿಸಿದ ಕಿತ್ತೂರ ಅರಮನಿ ದಂಡು
> ವರಸುತ ಸತಿಯರು ಸೋಸ್ತೇರ ಹಿಂಡು
> ಗುರುಸಿದ್ಧಪ್ಪ ನೀ ಬಾರೋ ಕರೆದುಕೊಂಡು ॥
>
> ಗುರುಸಿದ್ದಪ್ಪನ ಪತ್ರವ ನೋಡಿ
> ದೊರೆ ಬಾಪೂಸಾಹೇಬ ಒತ್ತರ ಮಾಡಿ

ಹರುಷದಿ ಅಣ್ಣ ತಮ್ಮರು ಒಡಗೂಡಿ
ಹರ ದುರದಂಡಿಯ ಪಾದ ಕೊಂಡಾಡಿ ॥[೨೬]

ಇದು ಸರ್ದಾರ ಗುರುಸಿದ್ದಪ್ಪನು ಕಿತ್ತೂರ ಅರಸರೊಂದಿಗೆ ಹೊಂದಿದ ಸ್ಥಾನಮಾನವನ್ನು ಸೂಚಿಸುತ್ತದೆ. ಈತನು ಮಲ್ಲಸರ್ಜ ಮಾಡಿದ ಯುದ್ಧಗಳಲ್ಲಿ ಹುಮ್ಮಸ್ಸಿನಿಂದ ಭಾಗವಹಿಸಿದ್ದಾನೆ. ೧೮೨೪ ಅಕ್ಟೋಬರ ೨೨ರಂದು ಥ್ಯಾಕರೆಯು, ಕ್ಯಾಪ್ಟನ್ ಬ್ಲಾಕ್‌ನಿಗೆ ಕೋಟೆಯೊಳಗಿನ ಎರಡು ತೋಪುಗಳನ್ನು ತಂದು ಕೋಟೆಯ ಬಾಗಿಲಲ್ಲಿಡಲು ಅಪ್ಪಣೆ ಮಾಡುತ್ತಾನೆ. ಅವನು ಕೋಟೆಗೆ ಹೋದಾಗ ಹೆಬ್ಬಾಗಿಲು ಮುಚ್ಚಿತ್ತು. ಇಪ್ಪತ್ತು ನಿಮಿಷಗಳಲ್ಲಿ ಹೆಬ್ಬಾಗಿಲು ತೆರೆಯದಿದ್ದಲ್ಲಿ ಬಾಗಿಲನ್ನು ಒಡೆದು ತೆಗೆಯಲಾಗುವುದೆಂದು ಸಾರುತ್ತಾನೆ. ಆಗ ಗುರುಸಿದ್ಧಪ್ಪನ ಆಜ್ಞೆಯ ಮೇರೆಗೆ ಕಿತ್ತೂರಿನ ಶೂರ ಸೈನಿಕರು ಬಾಗಿಲು ತೆಗೆದು ಹೊರಬಿದ್ದು ಬ್ರಿಟಿಷರೊಂದಿಗೆ ಹೋರಾಡಿ ಹಂಗು ತೊರೆದು ಕಾದಾಡಿ ಜಯಗಳಿಸುತ್ತಾರೆ. ಈ ಜಯದ ರೂವಾರಿಯೇ ಸರ್ದಾರ ಗುರುಸಿದ್ದಪ್ಪ. ಮುಂದೆ ನಿರ್ಣಾಯಕವಾದ ಕದನದಲ್ಲಿ ಅಪಾರವಾದ ಮತ್ತು ಶಿಸ್ತು ಬದ್ಧವಾದ ಸೈನ್ಯದ ಎದುರು ಕಿತ್ತೂರಿನ ಸೈನ್ಯ ಸೋಲನ್ನಪ್ಪುತ್ತದೆ. ಕಿತ್ತೂರಿನ ರಾಣಿಯರನ್ನು ಸುರಕ್ಷಿತ ಜಾಗಕ್ಕೆ ಕಳುಹಿಸುವ ಏರ್ಪಾಡು ಮಾಡುತ್ತಿರುವಾಗಲೇ ಬ್ರಿಟಿಷರು ಎಲ್ಲರನ್ನೂ ಸೆರೆ ಹಿಡಿಯುತ್ತಾರೆ. ಸರ್ದಾರ ಗುರುಸಿದ್ಧಪ್ಪನನ್ನು ಬೆಳಗಾವಿ ಜೈಲಿಗೆ ಹಾಕಲಾಗುತ್ತದೆ.

ಗುರುಸಿದ್ಧಪ್ಪನ ಶೌರ್ಯ, ಸಂಘಟನಾ ಶಕ್ತಿಗೆ ಬ್ರಿಟಿಷರೂ ಹೆದರಿದ್ದರು. ೧೮೨೬ ಏಪ್ರಿಲ್ ತಿಂಗಳಲ್ಲಿ ಧಾರವಾಡದ ಕಲೆಕ್ಟರ್ ಗುರುಸಿದ್ದಪ್ಪನ ಬಂಧನವನ್ನು ಮುಂದುವರೆಸಬೇಕೆಂದೂ ಆತನು ಅಸಾಮಾನ್ಯ ಸಂಘಟಕನಾಗಿರುವುದರಿಂದ ಬಿಡುಗಡೆ ಮಾಡಬಾರದೆಂದು ಬರೆದ ದಾಖಲೆ ಇದೆ.[೨೮]

ರಾಮಸ್ವಾಮಿ : ರಾಮಸ್ವಾಮಿ ಎಂಬುವನು ಕಿತ್ತೂರು ಸೈನ್ಯದ ಅಧಿಕಾರಿಗಳಲ್ಲಿ ಒಬ್ಬನಾಗಿದ್ದಾನೆ. ಶಿವಲಿಂಗರುದ್ರ ಸರ್ಜನ ಮರಣದ ನಂತರ ಬಳ್ಳೋಡಿಯಲ್ಲಿ ತುರುರು ದಂಗೆಯೇಳುತ್ತಾರೆ. ಅವರನ್ನು ಸದೆ ಬಡಿಯಲು ರಾಣಿ ಚೆನ್ನಮ್ಮ ಸೇನಾಧಿಕಾರಿಯಾದ ರಾಮಯ್ಯನನ್ನು ಕಳುಹಿಸುತ್ತಾಳೆ. ಈ ರಾಮಯ್ಯನನ್ನು ತುರುರರು ಸೆರೆಹಿಡಿಯುತ್ತಾರೆ. ಆಗ ಚೆನ್ನಮ್ಮ ಸ್ವತಃ ಸೈನ್ಯ ತೆಗೆದುಕೊಂಡು ಹೋಗಿ ಅವರನ್ನು ಸದೆ ಬಡಿದು ರಾಮಸ್ವಾಮಿಯನ್ನು ಬಿಡಿಸಿಕೊಂಡು ಬರುತ್ತಾಳೆ. ಇದಕ್ಕೆ ಕರಿಯಾತಿ ಕಾಳಗ[೨೯] ಎಂದು ಕರೆಯಲಾಗುತ್ತದೆ. ರಾಮಸ್ವಾಮಿ ಬಡಾಲದ ಅಂಕಲಗಿ ಮಠದವನು. ಈ ಮನೆತನದವರು ಈಗಲೂ ಇದ್ದು ಅವರಿಗೆ 'ಹವಾಲ್ದಾರ' ಎಂದು ಕರೆಯುತ್ತಾರೆ. ಕಿತ್ತೂರಿನ ಸೈನ್ಯದೊಳಗೆ ರಾಮಸ್ವಾಮಿ 'ಹವಾಲ್ದಾರ'ನಾಗಿ ಸೇವೆಸಲ್ಲಿಸುತ್ತಿದ್ದುದು ಗೊತ್ತಾಗುತ್ತದೆ.

ಯುದ್ಧದ ಸಂದರ್ಭದಲ್ಲಿ ಸಂಸ್ಥಾನದ ೧೪ ಕರ್ಯಾತುಗಳಿಂದ, ಪ್ರತಿ ಗ್ರಾಮದಿಂದ ಭಟರು ಬರುತ್ತಿದ್ದರು. ಯುದ್ಧದ ಸಂದರ್ಭದಲ್ಲಿ ಚೆನ್ನಮ್ಮ ಯಾರನ್ನೋ (?) ಕರೆಸಿಕೊಂಡಳು ಎಂಬುದು ತಿಳಿದು ಬರುತ್ತದೆ. 'ಚೆನ್ನಮ್ಮರಾಣಿ' ಕೋಲಿನ ಪದದಲ್ಲಿ ಅಂಕಲಗಿ ಅಡಿವೆಪ್ಪ, ಮಡಿವಾಳ ಮಹಾದೇವಪ್ಪ, ಕಲ್ಲುಮಠದ ಮಡಿವಾಳ ಸ್ವಾಮಿ ಇವರನ್ನು ಕರೆಸಿಕೊಳ್ಳುತ್ತಾಳೆ. 'ತಳವಾರ ಫಕೀರಾ ನೀ ಬಾರೋ ನನ್ನ ಮಗನ । ಅಂಬಡಗಟ್ಟಿ ಗುರುಸಿದ್ಧಪ್ಪನ ಕರಸಯ್ಯಾ'

ಎಂದು ಗುರುಸಿದ್ದಪ್ಪನನ್ನು ಕರೆಸಿಕೊಂಡು ದಂಡು ಬೇಗನೆ ತಯಾರ ಮಾಡಬೇಕೆಂದು ಆತನಿಗೆ ಆದೇಶಿಸುತ್ತಾಳೆ. ಎಲ್ಲ ಊರುಗಳಿಗೆ ಪತ್ರ ಬರೆದು ದಂಡು ಸಮೇತ ಬರಲು ತಿಳಿಸುತ್ತಾಳೆ. ಹೆಗ್ಗೇರಿಗೌಡ, ಒಕ್ಕುಂದಕ್ಕೆ ಹೂಲಿ ಚನಬಸಗೌಡ, ಶಿಲೆದಾರ ಚೆನ್ನಪ್ಪ, ದಳವಾಯಿ ದೇಮಪ್ಪ, ಕೋರಿಕೊಪ್ಪದೆಲ್ಲಪ್ಪ, ಗೌಡರ ಸಂಕಪ್ಪ ಮೂಗಬಸವ ಹುದ್ದಾರ, ನಾಯಕರ ಶಿವನಗೌಡ, ನಾವಲಗಟ್ಟಿ ಭಾವಿಹಾಳ, ಮೋಖಾಶಿ ಗಜಪತಿ, ಮರಿಕಟ್ಟಿ ತೊಲಗಿ ಗೌಡರು, ಹೆಗ್ಗೇರಿ ಮಾಳಕ್ಕ ಹೆಗ್ಗೇರಿಗೌಡ, ಮುಮ್ಮಿಗಟ್ಟಿ, ವಣ್ಣೂರು ಬಂಟರು, ಗರಗದ ಗೌಡರು, ಹೆಗ್ಗೇರಿ ಮಾಳಕ್ಕ ಹೆಗ್ಗೇರಿ ಗೌಡ, ಮುಮ್ಮಿಗಟ್ಟಿ ಗೌಡರ ಬಸಪ್ಪ ಇವರಿಗೆಲ್ಲ ಪತ್ರ ಬರೆದು ದಂಡು ಸಮೇತ ಬರಲು ತಿಳಿಸುತ್ತಾಳೆ. ಗೌಡರ ಬಸಪ್ಪ (ಮುಮ್ಮಿಗಟ್ಟಿ) ಒಬ್ಬನೇ ೫೦೦೦ ದಂಡನ್ನು ಸಿದ್ಧಮಾಡಿ ಕೊಂಡು ಹೋಗುತ್ತಾನೆ. ಇವರೆಲ್ಲರೂ ಕಿತ್ತೂರಿನ ಕಾಳಗದಲ್ಲಿ ಭಾಗವಹಿಸಿದ್ದಾರೆ.

ಸಂಗೊಳ್ಳಿ ರಾಯಣ್ಣನೂ ಕಿತ್ತೂರಿನ ಸೈನ್ಯದಲ್ಲಿ ಸೈನಿಕನಾಗಿದ್ದನು. ಇವನ ಅಜ್ಜ ರಾಗಪ್ಪ ಕಿತ್ತೂರಿನ ಸೈನ್ಯದ ಅಧಿಕಾರಿಯಾಗಿದ್ದನು. ಚಿಣಗಿ ಕೋವಾಡ ಯುದ್ಧದಲ್ಲಿ ರಾಗಪ್ಪ ತನ್ನ ಶೌರ್ಯ ಪ್ರದರ್ಶಿಸಿದ್ದರಿಂದ ಆತನಿಗೆ ವೀರಪ್ಪ ದೇಸಾಯಿ "ಸಾವಿರ ಒಂಟಿ ಸರದಾರ" ಎಂಬ ಬಿರುದಿತ್ತು ಗೌರವಿಸಿದ್ದ. ಈ ರಾಗಪ್ಪನ ಮೊಮ್ಮಗನೇ (ಭರಮಪ್ಪ, ಕೆಂಚವ್ವರ ಪುತ್ರ) ರಾಯಣ್ಣನಾಗಿದ್ದಾನೆ. ಕಿತ್ತೂರ ಯುದ್ಧದಲ್ಲಿ ಹೋರಾಡಿದ ಈತನನ್ನು ಬ್ರಿಟಿಷರು ಸೆರೆಹಿಡಿದು ನಂತರ ಬಿಡುಗಡೆ ಮಾಡುತ್ತಾರೆ. ಕುಲಕರ್ಣಿ ಬಾಳಪ್ಪನ ದುರ್ವ್ಯವಹಾರಕ್ಕೆ ಬೇಸತ್ತು ಕಿತ್ತೂರು ಸಂಸ್ಥಾನದ ಮರಸ್ಥಾಪನೆಗೆ ಯುವಕರ ಪಡೆಕಟ್ಟಿ 'ಗೆರಿಲ್ಲಾ' ರೀತಿಯಲ್ಲಿ ಬ್ರಿಟಿಷರೊಂದಿಗೆ ಹೋರಾಡುತ್ತಾನೆ. ತನ್ನ ಪತ್ನಿಯ ಸಹೋದರ ನೇಗಿನಹಾಳದ ಹಳಬ ಲಕ್ಕಪ್ಪನಿಂದಲೇ ಮೋಸ ಕ್ಕೊಳಗಾಗಿ ಸೆರೆಯಾಗುತ್ತಾನೆ. ಕೊನೆಗೆ ನಂದಗಡದಲ್ಲಿ ಈತನನ್ನು ನೇಣಿಗೆ ಹಾಕಲಾಗುತ್ತದೆ. ರಾಯಣ್ಣನೊಂದಿಗೆ ಗಜವೀರ, ಬಿಚಗತ್ತಿ ಚನಬಸಪ್ಪ ಇವರೆಲ್ಲ ಹೋರಾಡಿದ್ದಾರೆ. ಅಮಟೂರು ಬಾಳಪ್ಪ ಚೆನ್ನಮ್ಮರಾಣಿಯ ಅಂಗರಕ್ಷಕ. ಈತನ ಗುಂಡೇಟಿನಿಂದಲೇ ಥ್ಯಾಕರೆ ನೆಲಕ್ಕುರುಳಿದುದು ತಿಳಿದು ಬರುತ್ತದೆ.

ಜಕಾತಿ ಬಸಲಿಂಗಪ್ಪ : ಚೆನ್ನಮ್ಮನ ಕಾಲದಲ್ಲಿ ಜಕಾತಿ ಬಸಲಿಂಗಪ್ಪನು ಒಬ್ಬ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದನು. ಅರಮನೆಯಲ್ಲಿ ಕರಣಿಕನಾಗಿ ಕೆಲಸ ಮಾಡುತ್ತಿದ್ದ ನರಸಿಂಗರಾಯನಿಗೆ ಬ್ರಿಟಿಷರು ಪತ್ರ ಬರೆದು ತಳದ ಸುದ್ದಿ ಕೊಟ್ಟರೆ ೧೦ ಲಕ್ಷರೂಪಾಯಿ ೫ ಹಳ್ಳಿಗಳ ಉಂಬಳಿ ಕೊಡುವುದಾಗಿ ತಿಳಿಸುತ್ತಾರೆ. ಈ ಪತ್ರ ಓದಿದ ನರಸಿಂಗರಾಯ

"ಕಾಗದ ಓದಿ ನರಸಿಂಗರಾಯಾ
ಮಾಡಬೇಕೆಂದ ಮಸಲತ್ತ
ಮಸಲತ್ತ ಮಾಡೇರು ಮಂದಿಗೆಂದು
ಮಂದಿ ಕಾರಕೂನರೆಲ್ಲರು ಕೂಡಿ"

ಎಂದು ಮಸಲತ್ತು ಮಾಡಿ ಕಿತ್ತೂರಿನ ರಹಸ್ಯಗಳನ್ನು ಬ್ರಿಟಿಷರಿಗೆ ತಿಳಿಸಿ ಕಿತ್ತೂರಿನ ನಾಶಕ್ಕೆ ಕಾರಣವಾಗುತ್ತಾರೆ.[೩೦] ಅರಮನೆಯಲ್ಲಿ ಅನೇಕ ದಾಸಿಯರೂ ಕೆಲಸವನ್ನು ನಿರ್ವಹಿಸುತ್ತಿದ್ದರು.

ರಾಜಗುರುಗಳು : ಕಲ್ಲು ಮಠದ ಸ್ವಾಮಿಗಳವರು ಅಲ್ಲಪ್ಪಗೌಡ ಸರದೇಸಾಯಿಯವರಿಂದ ಎಲ್ಲರಿಗೂ ರಾಜಗುರುಗಳಾಗಿದ್ದರು. ರಾಜಗುರುಗಳಾದವರು ಧಾರ್ಮಿಕ ನೈತಿಕ ಮಾರ್ಗದರ್ಶನದ ಜೊತೆಗೆ ಸಂಸ್ಥಾನಕ್ಕೆ ಹಿತವಾಗುವ ಎಲ್ಲ ರೀತಿಯ ಮಾರ್ಗದರ್ಶನವನ್ನು ಮಾಡುತ್ತಿದ್ದರು. ಗುರುಗಳು ಪ್ರಜೆಗಳು ಮತ್ತು ಅರಸರ ನಡುವಿನ ಕೊಂಡಿಯಾಗಿದ್ದರು. ಇವರ ಹಿತೋಪದೇಶವನ್ನು ಎಲ್ಲ ದೇಸಾಯಿಗಳು ಪಡೆದುಕೊಂಡು ಮುನ್ನಡೆದಿದ್ದಾರೆ. ೧. ಒಟ್ಟಾರೆ ಕಿತ್ತೂರು ಸಂಸ್ಥಾನದಲ್ಲಿ ಕರ್ಯಾತುಗಳು ಹದಿನಾಲ್ಕು ಕರ್ಯಾತುಗಳಲ್ಲಿ ಬರುವ ಗ್ರಾಮಗಳ ಹೆಸರೂ ಒಂದೇ ತೆರನಾಗಿದ್ದಾಗಿ ಗ್ರಾಮಗಳನ್ನು ಗುರುತಿಸಲು ಕರ್ಯಾತಗಳ ಹೆಸರುಗಳನ್ನೇ ಹೇಳಿ ಗ್ರಾಮಗಳನ್ನು ಗುರುತಿಸಲಾಗುತ್ತಿತ್ತು. ಉದಾ : ಕರ್ಯಾತ ಅಂಬಡಗಟ್ಟಿ-ಮಲ್ಲಾಪುರ, ಕರ್ಯಾತ ಅಂಬಡಗಟ್ಟಿ-ಗಿರಿಯಾಲ ಮಲ್ಲಾಪುರ ಗಿರಿಯಾಲ ಗ್ರಾಮಗಳಾದರೆ ಇವೆರಡೂ ಕರ್ಯಾತ ಅಂಬಡಗಟ್ಟಿಯಲ್ಲಿ ಒಳಗೊಳ್ಳುತ್ತಿದ್ದವು. ೨. ಮರಾಠ ಆಳ್ವಿಕೆಯ ತೆರಿಗೆಗಳನ್ನು ಮಾನ್ಯಮಾಡುವಾಗ ೩ ಪ್ರಕಾರದ ಗ್ರಾಮಗಳನ್ನು ಗುರುತಿಸಬಹುದು. ೧. ಪೂರ್ಣಪ್ರಮಾಣದಲ್ಲಿ ಕಂದಾಯ ಕೊಡುತ್ತಿದ್ದ ಗ್ರಾಮಗಳನ್ನು ದಾರೂಬಸ್ತಿ ಗ್ರಾಮಗಳೆಂದು ೨. ಸರ್ಕಾರದ ಆಧೀನದಲ್ಲಿ ಗ್ರಾಮಗಳನ್ನು ಖಾಲ್ಸಾ ಹಳ್ಳಿಗಳೆಂದು ಆಡಳಿತದ ಅನುಕೂಲದ ದೃಷ್ಟಿಯಿಂದ ವಿಂಗಡಿಸಲಾಗಿತ್ತು.

೩. ಮೇಲಿನ ಗ್ರಾಮಗಳನ್ನು ಹೊರತುಪಡಿಸಿ ಉಳಿದ ಗ್ರಾಮಗಳನ್ನು ಇನಾಮು ಹೊಂದಿದ ಗ್ರಾಮಗಳು ಸಂಪೂರ್ಣ ತೆರಿಗೆ ವ್ಯಾಪ್ತಿಗೆಂದೂ ಇನ್ನು ಕೆಲವೊಂದು ಸರಂಜಾಮಿ ಗ್ರಾಮಗಳ (ಉಂಬಳಿಯಾಕಿ ಕೊಡುವುದು), ಕುಮಾನಿ ಗ್ರಾಮಗಳು, ದುಮಾಳೆ ಗ್ರಾಮಗಳ ಆಧಾರದ ಮೇಲೆ ಗ್ರಾಮಗಳೆಂದು ಕೆಲವೊಂದು ಅನುದಾನಿಕ ಗ್ರಾಮಗಳೆಂದು ಬೇರ್ಪಡಿಸಿ ಕೆಲವರ ಒಡೆತನಕ್ಕೆ ಬಿಟ್ಟುಕೊಡಲಾಗುತ್ತಿತ್ತು.

೪. ಕೆಲವು ಗ್ರಾಮಗಳನ್ನು ಆಡಳಿತ ಗ್ರಾಮಗಳನ್ನಾಗಿ ಮಾಡಿಕೊಂಡು ಆಡಳಿತ ನಡೆಸಲಾಗುತ್ತಿತ್ತು. ಪ್ರಭುವರ್ಗ, ಮಂತ್ರಿ ಮಂಡಲ, ಗ್ರಾಮರಕ್ಷಣೆಯ ಪೊಲೀಸ್ ಪಾಟೀಲ್, ಗಾವುಂಡರು, ಗ್ರಾಮದ ಪ್ರಭುವರ್ಗ ಮತ್ತು ಅಧಿಕಾರಿಗಳು, ಸಂಸ್ಥಾನದ ಅಧಿಕಾರಿ ವರ್ಗ, ಕಾರಭಾರಿಗಳು ಸೈನ್ಯವನ್ನು ಸೇನಾಪತಿಗಳ ಮೂಲಕ ಆಡಳಿತ ನಡೆಸಲಾಗುತ್ತಿತ್ತೆಂಬುದು ಈ ಅಧ್ಯಯನದಿಂದ ತಿಳಿದು ಬರುವ ಅಂಶವಾಗಿದೆ.

೪.೪. ಸ್ಥಳನಾಮ-ಗ್ರಾಮನಾಮಗಳ ಅಧ್ಯಯನ

ಕನ್ನಡನಾಡಿನ ಪ್ರತಿಯೊಂದು ಊರಿನ ಹೆಸರುಗಳು ಒಂದೊಂದು ಪ್ರಾಂತ್ಯದ ಹೆಸರನ್ನೊ, ವ್ಯಕ್ತಿಯ ಹೆಸರನ್ನೊ, ನೈಸರ್ಗಿಕ ಅಭಿವ್ಯಕ್ತವನ್ನೊ ಸೂಚಿಸುತ್ತದೆ. ಸ್ಥಳನಾಮಗಳಿಗೆ ಅವುಗಳದೇ ಆದ ಅರ್ಥವಿರುತ್ತದೆ. ಪ್ರಾಚೀನ ಸ್ಥಳನಾಮಗಳಲ್ಲಿ ಹೆಚ್ಚಿನವುಗಳು ಒಂದು ಪ್ರದೇಶದ ನದಿ, ಕಲ್ಲು, ಬೆಟ್ಟ, ಗಿಡ, ದೇವಾಲಯ ಮುಂತಾದವುಗಳ ಚರಿತ್ರೆಯನ್ನು ಸಾರುವ ಸ್ಥಳನಾಮಗಳಾಗಿವೆ. ಇವು ಚರಿತ್ರೆಗೆ ಅತಿ ಸಮೀಪದ ಮಾಹಿತಿಯನ್ನು ಒದಗಿಸುವ ಅಂಶಗಳು. ನಮ್ಮ ಪೂರ್ವಿಕರು ತಮ್ಮ ವಿದ್ಯಾಸಂಪನ್ನತೆ, ಸೌಂದರ್ಯಪ್ರಜ್ಞೆ, ಧಾರ್ಮಿಕ ದೃಷ್ಟಿಕೋನ, ಮೂಢನಂಬಿಕೆಗಳು ಅಥವಾ

ಅಂದಿನ ಕಸುಬುಗಳನ್ನ ಆಧರಿಸಿ, ನೈಸರ್ಗಿಕ ಸಂಪತ್ತನ್ನ ಆಧರಿಸಿ, ಅಲ್ಲಿಯ ಭಾಷಾ ಚರಿತ್ರೆಯ ಗುಣಧರ್ಮವನ್ನು ಗಮನದಲ್ಲಿಟ್ಟುಕೊಂಡು ನಿರ್ಧರಿಸುತ್ತಿದ್ದರು. ಸ್ಥಳನಾಮಗಳ ಅಧ್ಯಯನ ಭಾಷಾಶಾಸ್ತ್ರಕ್ಕೆ ಚರಿತ್ರೆಗೆ ಅತ್ಯುಪಯುಕ್ತವಾದ ಮಾಹಿತಿಯನ್ನು ಒದಗಿಸುವುದಲ್ಲದೇ ಸಾಂಸ್ಕೃತಿಕ ಅಧ್ಯಯನಕ್ಕೂ ಆಕರವಾಗಿ ಪರಿಣಮಿಸುತ್ತಿದೆ.

ಸ್ಥಳನಾಮಗಳ ಅಧ್ಯಯನ ಮಹತ್ವವನ್ನು ಮೊದಲು ಗುರುತಿಸಿದವರು ಗಾತ್ ಫ್ರೀಡ ವಿಲ್ಹೆಲ್ಮ ಲೀಬ್ನಿಜ್.[೩೧] ಇವರನ್ನು ಸ್ಥಳನಾಮ ಅಧ್ಯಯನಕ್ಕೆ ಮೂಲ ಪುರುಷನೆಂದು ಕರೆಯಲಾಗುತ್ತದೆ. ಭಾರತದಲ್ಲಿ ಸ್ಥಳನಾಮಗಳ ಕುರಿತು ಉತ್ತಮ ಲೇಖನಗಳು ಕೆಲವು ದಶಕಗಳಿಂದ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಿದ್ದರೂ ಇದರ ಸಂಪೂರ್ಣ ಅಧ್ಯಯನದ ಸ್ವರೂಪ ನೀಡಿದವರು ಖ್ಯಾತ ಪುರಾತತ್ವ ಶಾಸ್ತ್ರಜ್ಞ ಎಚ್.ಡಿ. ಸಂಕಾಲಿಯರವರು, ಇವರು ಸ್ಥಳನಾಮಗಳು ಹಾಗೂ ಆಯಾ ಕಾಲದ ಭಾಷೆ ಮತ್ತು ಸ್ಥಿತಿಗತಿಗಳನ್ನು ನಿರ್ಣಯಿಸುವಲ್ಲಿ ಪ್ರಮುಖ ಪಾತ್ರವಹಿಸಿದವರೆಂದು ಹೇಳಬಹುದು.[೩೨]

ಕರ್ನಾಟಕದಲ್ಲೂ ಸ್ಥಳನಾಮಗಳ ಬಗ್ಗೆ ಅಧ್ಯಯನಗಳ ಕುರಿತು ವಿದ್ವಾಂಸರುಗಳು ಅಧ್ಯಯನ ಮಾಡಿರುವುದು ಕಂಡುಬಂದಿದೆ. ೧೯ನೇ ಶತಮಾನದಲ್ಲಿ ಕರ್ನಲ್ ಮೆಕೆಂಝಿಯ ಕೈಫಿಯತ್ತುಗಳಲ್ಲಿ ಸ್ಥಳನಾಮದ ಬಗ್ಗೆ ಹೆಚ್ಚು ಒತ್ತು ನೀಡಿಲ್ಲ. ಕೆಮ್ತೂರ ರಘುಪತಿ ಭಟ್ಟರ "ತುಳುನಾಡಿನ ಸ್ಥಳನಾಮಗಳು" ೧೯೭೯ರಲ್ಲಿ ಸ್ಥಳನಾಮಗಳ ಕುರಿತ ಕೃತಿ, ಇದೊಂದು ವೈಜ್ಞಾನಿಕ ಕೃತಿ. ದೇ ಜವರೇಗೌಡರು ಸ್ಥಳನಾಮಗಳ ಕುರಿತು ಒಂದೆರಡು ಲೇಖನಗಳನ್ನು ಪ್ರಕಟಿಸಿ ಬುನಾದಿಯನ್ನು ಹಾಕಿದರು. "ಕರ್ನಾಟಕದ ಸ್ಥಳನಾಮಗಳು" ಎಂ. ಚಿದಾನಂದಮೂರ್ತಿಯವರು ಪ್ರಕಟಿಸಿದ್ದು ಕನ್ನಡನಾಡಿನ ಇತಿಹಾಸದಲ್ಲಿ ಇದೊಂದು ಮಹತ್ವದ ಕೃತಿ ಎನ್ನಬಹುದು. ಶಂಬಾ ಜೋಷಿಯವರ "ಎಡೆಗಳು ಹೇಳುವ ಕಂನಾಡ ಕಥೆ" ಹಾಗು ಶ್ರೀ ವಿ. ಗೋಪಾಲಕೃಷ್ಣರವರ "ಸ್ಥಳನಾಮಗಳ ಅಧ್ಯಯನ" ೧೯೮೭ರಲ್ಲಿ ಲೇಖನ ಸಂಗ್ರಹವನ್ನು ಪ್ರಕಟಿಸಿದರು. ಎಂ.ಎಂ. ಕಲಬುರ್ಗಿಯವರು "ಕನ್ನಡ ನಾಮವಿಜ್ಞಾನ" ಗ್ರಂಥವನ್ನು ೧೯೯೫ರಲ್ಲಿ ಬೆಳಕಿಗೆ ತಂದಿದ್ದಾರೆ. ವಿಶ್ವನಾಥವರು "ಸ್ಥಳನಾಮ ಮತ್ತು ಗ್ರಾಮನಾಮಗಳ ಸಾಂಸ್ಕೃತಿಕ ಪರಿವೇಶ" ಕೃತಿಯನ್ನು ಪ್ರಕಟಿಸಿದ್ದಾರೆ. ಕೆ.ವಿ.ರಮೇಶರವರ "ಸ್ಥಳನಾಮ ಶಾಸ್ತ್ರ" ಹಾಗೂ ಕೆ.ವಿ. ನಾರಾಯಣರವರ "ಸ್ಥಳನಾಮ ವ್ಯಾಸಂಗ" ಕೃತಿಯನ್ನು ಪ್ರಕಟಿಸಿದ್ದಾರೆ. The place names of Mysore ಕೃತಿಯನ್ನು ಸಿ. ಹಯವದನರಾವರವರು ಹಾಗೂ Place names in Kannada ಕೃತಿಯನ್ನು ಆರ್.ಸಿ. ಹಿರೇಮಠರವರು ಪ್ರಕಟಿಸಿದ್ದಾರೆ "ಹೆಸರನಲ್ಲೇನಿದೆ" ಗ್ರಂಥವನ್ನು ಆರ್.ಕೆ. ಮಣಿಪಾಲರವರು ರಚಿಸಿದ್ದಾರೆ. "ಕೆಲವು ದೇಶನಾಮಗಳು" ಕೃತಿಯನ್ನು ಸೇಡಿಯಾಪು ಕೃಷ್ಣಭಟ್ಟರು, "ಸಕಲೇಶಪುರ ಪರಿಸರದ ಸ್ಥಳನಾಮಗಳು" ಕೃತಿಯನ್ನು ವಿಶ್ವನಾಥರವರು ಪ್ರಕಟಿಸಿದ್ದಾರೆ. "ಬೀದರ ಜಿಲ್ಲೆಯ ಸ್ಥಳನಾಮಗಳು" ಕೃತಿಯನ್ನು ಭಂಡೆ ವೈಜನಾಥರವರು ಹಾಗೂ "ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು", ವೀರಭದ್ರ ಶರ್ಮಾರವರು "ಕೋಲಾರ ಜಿಲ್ಲೆಯ ಸ್ಥಳನಾಮಗಳು" ವಿ. ಗೋಪಾಲಕೃಷ್ಣ, "ಚಿಕ್ಕನಾಯಕನಹಳ್ಳಿಯ ಸ್ಥಳನಾಮಗಳು"

ತೀ.ನಂ. ಶಂಕರನಾರಾಯಣರವರು ಪ್ರಕಟಿಸಿದ್ದಾರೆ. "ಬೆಳಗಾವಿ ಜಿಲ್ಲೆಯ ಸ್ಥಳನಾಮಗಳು" ಮಹಾಪ್ರಬಂಧವನ್ನು ಪರಶುರಾಮ ಭೀ, ಕೊರವಿ ರಚಿಸಿದ್ದಾರೆ. ಎಸ್.ಜಿ. ಲಕ್ಕಪ್ಪಗೌಡರ "ಸ್ಥಳನಾಮ" ಬರೆದ ಒಂದು ಲೇಖನವನ್ನು ಚಿದಾನಂದಮೂರ್ತಿಯವರ ಸಮಗ್ರ ಸಂಪುಟ-೭ರಲ್ಲಿ "ಕರ್ನಾಟಕ ಸ್ಥಳನಾಮಗಳು" ಮಹತ್ವದ ಲೇಖನ ಪ್ರಕಟವಾಗಿದೆ. ಸಿ.ಎಂ. ವಿಶ್ವನಾಥಯ್ಯರವರು "ಕಡೂರ ತಾಲ್ಲೂಕಿನ ಸ್ಥಳನಾಮಗಳು" ಗ್ರಂಥ ಉತ್ತಮವಾಗಿದೆ.

ಈ ಮೇಲಿನ ಎಲ್ಲ ವಿದ್ವಾಂಸರುಗಳು ಕನ್ನಡ ನಾಡಿನ ಇತಿಹಾಸದಲ್ಲಿ ಸ್ಥಳನಾಮಗಳ ಅಧ್ಯಯನ ಕುರಿತು ಅಮೂಲ್ಯ ಕೊಡುಗೆಯನ್ನು ನೀಡಿರುತ್ತಾರೆ. ಕರ್ನಾಟಕ ಸರಕಾರವೂ ಕೂಡ ಈಗ ಅಸ್ಥಿತ್ವದಲ್ಲಿರುವ ಗ್ರಾಮಗಳ ಹೆಸರುಗಳನ್ನು ಪಟ್ಟಿಮಾಡಿ A List of village in the Mysore State ೧೯೬೮ ಹಾಗೂ "ಕರ್ನಾಟಕದ ಗ್ರಾಮ ಸೂಚಿ" (೧೯೮೫) ಪ್ರಕಟಿಸಿವೆ ಅದರಂತೆ ಗ್ರಾಮನಾಮಗಳಿಗಿರುವ ಪ್ರಾಚೀನ ನಾಮಗಳ ಸೂಚಿಯನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿಯ ಕನ್ನಡ ಭಾಷಾ ವಿಭಾಗ ಸಿದ್ದಪಡಿಸಿದೆ. ಈ ಎಲ್ಲ ಕೃತಿಗಳು ಸ್ಥಳನಾಮದ ಅಧ್ಯಯನಕ್ಕೆ ಮಾರ್ಗದರ್ಶಿಯಾಗಿ ಸ್ಥಳನಾಮದ ಸ್ವರೂಪ ರಚನೆ ಕುರಿತು ಅಭ್ಯಸಿಸಲು ಸಹಾಯಕವಾಗಿದೆ.

ನಮ್ಮ ನಾಡಿನ ಸಂಸ್ಕೃತಿಯನ್ನು ಅರಿಯುವಲ್ಲಿ ಸಹಾಯಕವಾಗುವ ಹಲವಾರು ಅಂಶಗಳಲ್ಲಿ ಸ್ಥಳನಾಮವೂ ಕೂಡ ಒಂದು. ಇಂತಹ ಸ್ಥಳನಾಮಗಳ ಅಧ್ಯಯನ ಮಾಡುವುದಕ್ಕೆ ಕನ್ನಡ ನಾಡಿನಲ್ಲಿ ವಿಫುಲವಾದ ಆಕರ ಸಾಮಾಗ್ರಿಗಳಿವೆ. ಲಿಖಿತ ದಾಖಲೆಯಲ್ಲಿದ್ದ ಸ್ಥಳನಾಮಗಳನ್ನು ಪ್ರಾಚೀನ ಕಾಲದ ಆಕರಗಳು, ಹಾಗೂ ಆರ್ವಾಚೀನ ಕಾಲದ ಆಕರಗಳೆಂದು ವಿಭಾಗಿಸಬಹುದು.

ಗ್ರಾಮ ನಾಮಗಳ ಹೆಸರು ಬಳಕೆಯಲ್ಲಿದ್ದು ಲಿಖಿತ ದಾಖಲೆಯಿಲ್ಲದ ಕಾರಣ ಅನಧಿಕೃತ ಸ್ಥಳನಾಮಗಳಿಗೆ ಕ್ಷೇತ್ರಕಾರ್ಯಗಳಿಂದ ಮಾತ್ರ ತಿಳಿಯಬಹುದು. ಆದ್ದರಿಂದ ಆಕರ ಸಾಮಗ್ರಿಗಳು ಸ್ಥಳನಾಮದ ಅಧ್ಯಯನಕ್ಕೆ ಸಹಾಯಕವಾಗುತ್ತದೆ. ಸ್ಥಳನಾಮದ ಕುರಿತು ಜೆ.ಎಫ್. ಫ್ಲೀಟ್, ಹೆಚ್.ಡಿ. ಸಂಕಾಲಿಯ, ಅಪ್ಪಯ್ಯ ದೀಕ್ಷಿತ್, ಎಸ್.ಕೆ.ಚಟರ್ಜಿ, ಆರ್.ಸಿ. ಹೀರೆಮಠ, ಕೆಮ್ತೂರ ರಘುಪತಿಭಟ್, ದೇಜಗೌ, ವಿ.ಗೋಪಾಲಕೃಷ್ಣ, ಎಂ.ಎಂ.ಕಲಬುರ್ಗಿ, ಎಂ.ಚಿದಾನಂದಮೂರ್ತಿ, ಬೆ.ಗೋ.ರಮೇಶ, ವಿಶ್ವನಾಥ ಮುಂತಾದವರು ಕರ್ನಾಟಕದ ಸ್ಥಳನಾಮದ ಅಧ್ಯಯನ ಕುರಿತು ಗಮನಾರ್ಹ ಸೇವೆ ಸಲ್ಲಿಸಿದ್ದಾರೆ.

ಸ್ಥಳನಾಮದ ಅಧ್ಯಯನದ ಉದ್ದೇಶ ಕೇವಲ ಸ್ಥಳ ಗುರುತಿಸುವಿಕೆಯಲ್ಲ, ಸ್ಥಳ ಗುರುತಿಸಲು ಅನುಕೂಲವಾಗುವ ಸಾಂದರ್ಭಿಕ ಮಹತ್ವ ಅರಿಯುವುದು ಇವು ಕೇವಲ ವ್ಯವಹಾರಿಕ ಗುಣದಿಂದಲೋ, ಸಾಮಾಜಿಕ ದೃಷ್ಟಿಕೋನದಿಂದಲೋ, ಬಳಸಿದ ಸ್ಥಳನಾಮದ ಔಚಿತ್ಯತೆಯನ್ನು ಅಧ್ಯಯನ ಮಾಡುವುದು ಇದರ ಉದ್ದೇಶ. ಇದಕ್ಕೆ ಸನ್ನಿಧಿಗುಣವೆಂದರೆ ಭೌಗೋಳಿಕ ಮತ್ತು ಸಾಂಸ್ಕೃತಿಕ ವಿವರಗಳನ್ನು ಪಡೆದು ಆ ಸ್ಥಳನಾಮದ ಬಗ್ಗೆ ಹತ್ತಾರು ಅಂಶಗಳನ್ನ ಬಿಂಬಿಸುವ ಅಂಶ ಇದರದ್ದಾಗಿದೆ.

ಸ್ಥಳನಾಮಗಳಲ್ಲಿ ಗುರುತಿಸಬಹುದಾದ ಎರಡು ಮಹತ್ವದ ಅಂಶಗಳು ನಿರ್ದಿಷ್ಟ ಸ್ಥಳದ ಭೂ-ವಿವರವನ್ನು ಬಣ್ಣಿಸುವ ಸ್ವರೂಪ, ಅದರ ಹೆಸರು ಜನತೆಯ ಜೀವನದ ಬಗ್ಗೆ ನಿಖರವಾದ ದಾಖಲೆಗಳನ್ನು ಒದಗಿಸುವುದು. ಅದು ಕಲ್ಪನಾಮಯವಾಗಿದ್ದರೂ ನಮ್ಮ ಪೂರ್ವಿಕರು ಮಾಯಾ ಸಿದ್ಧಾಂತವನ್ನ ಪೂರ್ಣವಾಗಿ ನಂಬದೇ ಜೀವನದ ಹೋರಾಟವನ್ನು ಯಥಾವತ್ತಾಗಿ ಎದುರಿಸುವ ಅರ್ಥಪೂರ್ಣ ಜೀವನಕ್ಕಾಗಿ ದೂರದೃಷ್ಟಿ ಹೊಂದಿದವರಾಗಿದ್ದರು ಎಂಬುದು ಸ್ಥಳನಾಮಗಳಿಂದ ತಿಳಿದುಬರುತ್ತದೆ. ಈ ಸ್ಥಳನಾಮಗಳ "ಭೌಗೋಳಿಕ ಪರಿಭಾಷೆಗಳ ಕೀಲಿಕೈ" ಗ್ರಂಥ ಬರೆದ ಉರ್ಕಹಾರ್ಡ ಮತ್ತು ಏಂಜಲ್ಸ್ ಇವರ ಗ್ರಂಥಗಳೇ ಇದಕ್ಕೆ ಸಾಕ್ಷಿಯಾಗಿದೆ.

ಉತ್ತರ ಕರ್ನಾಟಕದ ಇತಿಹಾಸದಲ್ಲಿ, ಕಿತ್ತೂರು ಸಂಸ್ಥಾನ ಬ್ರೀಟಿಷರ ವಿರುದ್ದ ಸ್ವಾತಂತ್ರ್ಯ ಕ್ಕೊಸ್ಕರ ಕೈಗೊಂಡ ಹೋರಾಟದಲ್ಲಿ ಪಾಲ್ಗೊಂಡ ಭಾರತದ ಮೊಟ್ಟ ಮೊದಲ ಸಂಸ್ಥಾನವೆನ್ನ ಬಹುದು. ಈ ಸಂಸ್ಥಾನವು ಈಗಿನ ಧಾರವಾಡ ಜಿಲ್ಲೆಯ ಕೆಲವು ಭಾಗ. ಬೆಳಗಾವಿ ಜಿಲ್ಲೆಯ ಕೆಲವು ಭಾಗ ಹಾಗೂ ಉತ್ತರಕನ್ನಡ ಜಿಲ್ಲೆಯ ಕೆಲವು ಭಾಗವನ್ನೊಳಗೊಂಡಿದೆ. ಈ ಪ್ರದೇಶ ದಲ್ಲಿ ಬರುವ ಹಲವು ಸ್ಥಳನಾಮಗಳು ವಿಶೇಷವಾಗಿದೆ. ಈ ಸ್ಥಳನಾಮಗಳು ಒಂದು ಜನಾಂಗದ ಸಂಸ್ಕೃತಿಯ ಮೂಲ ಬೇರಿನಂತೆ ಕೆಲಸಮಾಡುತ್ತದೆ. ಈ ಪ್ರಾಂತ್ಯದಲ್ಲಿ ದೊರೆಯುವ ಸ್ಥಳನಾಮ ಗಳು ನಿಸರ್ಗವಾಚಿ, ಜಲವಾಚಿ, ವ್ಯಕ್ತಿವಾಚಿ, ವಸತಿವಾಚಿ, ನಿರ್ಮಾಣವಾಚಿ ಸ್ಥಳನಾಮವೆಂದು ವರ್ಗೀಕರಿಸುಬಹುದು.

೪.೪.೧. ಸ್ಥಳನಾಮಗಳ ವರ್ಗೀಕರಣ

ಸಾಮಾನ್ಯವಾಗಿ ಒಂದೊಂದು ಊರಿಗೂ ಒಂದೊಂದು ಹೆಸರು ಇರುತ್ತದೆ, ಎಷ್ಟೋ ಹೆಸರು ಪುನರಾವರ್ತನೆಯಾಗುವುದು ಉಂಟೂ, ಹೆಸರುಗಳ ಉಗಮ, ವಿಕಾಸಗಳ ಹಿನ್ನೆಲೆಯಲ್ಲಿ ಮಾನವನ ಮನೋಧರ್ಮದ ಏಕಸೂತ್ರತೆ ಹರಿಯುವುದರಿಂದ ಕೆಲವು ತತ್ವಗಳ ಪರಧಿಯೊಳಗೆ ಅವನ್ನು ಸೀಮಿತಗೊಳಿಸುವುದು ಸುಲಭವಲ್ಲ ವರ್ಗೀಕರಣದ ವಿಷಯದಲ್ಲಿ ತಜ್ಞರ ಬುದ್ಧಿ ಪ್ರತಿಭೆ ಗಳಿಗೆ ಸವಾಲಾಗಿರುವ ಸಂಗತಿಗಳೆಂದರೆ ಹೆಸರುಗಳ ಆದಿ ಘಟಕಗಳು ಅಥವಾ ವಿಶೇಷಾಂಶಗಳು.[೩೩] ವಿಶ್ವನಾಥರವರು ಸ್ಥಳನಾಮಗಳನ್ನು ನೈಸರ್ಗಿಕ ಹಾಗು ಸಾಂಸ್ಕೃತಿಕ ಅಂಶಗಳ ಆಧಾರದ ಮೇಲೆ ವರ್ಗೀಕರಿಸಲು ಪ್ರಯತ್ನಿಸಿದ್ದಾರೆ.

೪.೪.೨. ನೈಸರ್ಗಿಕ ಅಂಶಗಳು

ಭೂವಾಚಿಯ ಗ್ರಾಮನಾಮಗಳು
ಜಲವಾಚಿಯ ಗ್ರಾಮನಾಮಗಳು
ಸಸ್ಯವಾಚಿಯ ಗ್ರಾಮನಾಮಗಳು
ಶಿಲಾವಾಚಿಯ ಗ್ರಾಮನಾಮಗಳು
ಪರಿಮಾಣವಾಚಿಯ ಗ್ರಾಮನಾಮಗಳು
ಪ್ರಾಣಿವಾಚಿಯ ಗ್ರಾಮನಾಮಗಳು

೪.೪.೩. ಸಾಂಸ್ಕೃತಿಕ ಅಂಶಗಳು

ವೃತ್ತಿವಾಚಿ ಗ್ರಾಮನಾಮಗಳು

ವ್ಯಕ್ತಿವಾಚಿ ಗ್ರಾಮನಾಮಗಳು

ದೈವವಾಚಿ ಗ್ರಾಮನಾಮಗಳು

ವಾಸ್ತವ್ಯವಾಚಿ ಗ್ರಾಮನಾಮಗಳು

ವ್ಯವಹಾರವಾಚಿ ಗ್ರಾಮನಾಮಗಳು

ಪ್ರಾಚೀನ ಆಡಳಿತ ವ್ಯಕ್ತಿ ವಾಚಿ ಗ್ರಾಮನಾಮಗಳು

ದಿಕ್ಸೂಚಿವಾಚಿ ಗ್ರಾಮನಾಮಗಳು

ತೆರಿಗೆ ಹೆಸರಿನ ಗ್ರಾಮ ವಾಚಿ ಗ್ರಾಮನಾಮಗಳು[೩೪]

ಎಂ.ಎಂ. ಕಲಬುರ್ಗಿಯವರು ತಮ್ಮ "ಕನ್ನಡ ನಾಮ ವಿಜ್ಞಾನ" ಅಧ್ಯಯನದಲ್ಲಿ ಗ್ರಾಮನಾಮಗಳ ಅಧ್ಯಯನವನ್ನು ಮೂರು ರೀತಿಯಲ್ಲಿ ವರ್ಗೀಕರಿಸಿದ್ದಾರೆ.

ನಿಸರ್ಗ ವಾಚಿ

ವಸತಿ ವಾಚಿ

ನಿರ್ಮಾಣ ವಾಚಿ[೩೫]

ಕಿತ್ತೂರನ್ನು ಒಳಗೊಂಡಂತೆ ಬೆಳಗಾವಿ ಜಿಲ್ಲೆಯಲ್ಲಿ ಸುಮಾರು ೧೨೪೦ ಸ್ಥಳನಾಮಗಳು ದೊರೆತಿದೆ. ಈ ಹಿಂದಿನ ವಿದ್ವಾಂಸರುಗಳು ಮಾಡಿದ ವರ್ಗೀಕರಣವನ್ನು ಗಮನದಲ್ಲಿಟ್ಟುಕೊಂಡು ಪ್ರಸುತ್ತ ಕಿತ್ತೂರು ಸಂಸ್ಥಾನದ ಪ್ರತಿಗ್ರಾಮಗಳ ಹೆಸರಿನ ಹಿನ್ನಲೆಯನ್ನು ಕಲೆಹಾಕಿ, ನಿಸರ್ಗ, ಪ್ರಾಣಿ ನಿರ್ಮಾಣ, ವ್ಯಕ್ತಿ ವಾಚಿಯನ್ನಾಗಿ ವರ್ಗೀಕರಿಸಿ, ಸ್ಥಳನಾಮಗಳನ್ನು ಅಭ್ಯಾಸಿಸುವಾಗ, ಭೌಗೋಳಿಕ, ಸಾಂಸ್ಕೃತಿಕ, ನೈಸರ್ಗಿಕ ನೆಲೆಗಟ್ಟನ್ನು ತಳಹದಿಯಾಗಿಟ್ಟಿಕೊಂಡು ಇಲ್ಲಿ ಅಧ್ಯಯನ ಮಾಡಲಾಗಿದೆ.[೩೬]

೪.೪.೪. ನಿಸರ್ಗವಾಚಿ ಸ್ಥಳನಾಮಗಳು

ಅಲೆಮಾರಿಯಾದ ಮಾನವನು ಒಂದೆಡೆ ನೆಲೆಸಲಾರಂಬಿಸಿದ್ದು ನಾಗರಿಕತೆಯ ವಿಕಾಸಕ್ಕೆ ನಾಂದಿಯಾಯಿತು, ಕೌಟುಂಬಿಕ ಜೀವನವು ಆತನನ್ನು ಒಂದೆಡೆ ಆಕರ್ಷಿಸಿದದರಿಂದ ವ್ಯಕ್ತಿ ಜೀವನದಲ್ಲಿ ಕುಟುಂಬಕ್ಕೆ ಹೆಚ್ಚು ಪ್ರಾಧಾನ್ಯತೆ ದೊರೆಯಿತು ಇದರಿಂದ ಸಮಾಜ ಜೀವನದಲ್ಲಿ ಗ್ರಾಮವು ಒಂದು ಮೂಲ ಘಟಕವಾಗಲು ಸಾಧ್ಯವಾಯಿತು. ಹೀಗಾಗಿ ಗ್ರಾಮಗಳ ಹುಟ್ಟು ಸಾಮಾಜಿಕ ವಿಕಾಸದ ಪ್ರಮುಖ ಘಟಕವಾಗಿ ಪರಿಣಿಮಿಸಿತು. ಗ್ರಾಮ ಅಥವಾ ಹಳ್ಳಿಯಲ್ಲಿ ವಾಸಿಸುವ ನೆಲೆಯನ್ನು ಆಂಗ್ಲ ಭಾಷೆಯಲ್ಲಿVillage ಎಂದು ಕರೆದರು. ಇದೊಂದು ಸಂಯುಕ್ತ ಪದ Villa + age ಎಂಬ ರೂಪದಿಂದ ಬಂದಿರುವುದು ಇದು ಲ್ಯಾಟಿನ್ ಭಾಷೆಯ Villa ಎಂಬ ಪದದಿಂದ ಉಗಮವಾಗಿದ್ದು ಫ್ರೆಂಚ ಭಾಷೆಯ Village ಶಬ್ದಕ್ಕೆ ಸಂವಾದಿಯಾದದ್ದು ಈ ದೃಷ್ಟಿಯಿಂದ ಒಂದು ಕಾಲಘಟ್ಟದಲ್ಲಿ ರಚನೆಯಾದ ಗ್ರಾಮ ಅಥವ ಹಳ್ಳಿ ಎಂದು ಕರೆಯಲಾಗಿದೆ.

ಗ್ರಾಮ ಎಂಬ ಪದವು ಸಂಸ್ಕೃತದ ಶಬ್ಧವಾದ 'ಗಾಂವ"ದಿಂದ ಬಂದಿರುವುದು. ಇದರ ಇನ್ನೊಂದು ಹೆಸರೆ ಊರು, ಜನವಸತಿಯ ಸ್ಥಳ ಊರಿನ ಮುಂದಿನ ಹಂತವೇ 'ಗ್ರಾಮ'. ಮಾನವನು ಕ್ರಮೇಣ ಸೂಕ್ತ ಸ್ಥಳವನ್ನು ಆಯ್ದುಕೊಂಡು ವಸತಿ ಕಲ್ಪಿಸಿಕೊಂಡನು ಇದು ನಿಸರ್ಗದ ಸಹಜವಾದ ಬೆಟ್ಟ, ಗುಡ್ಡ, ಕೆರೆ-ಕೊಳ್ಳ, ಬಯಲು, ದಂಡಗಳಲ್ಲಿ ಗುಡಿಸಲುಗಳ ನಿರ್ಮಿಸಿಕೊಂಡು ವಾಸಿಸತೊಡಗಿದನು. ಇದೇ ಊರಾಯಿತು.

ಇದರಿಂದ ಸ್ಥಳನಾಮಗಳನ್ನು ಯಾಂತ್ರಿಕ ರೀತಿಯಲ್ಲಿ ಪರಿಗಣಿಸದೇ, ಸಾಂಸ್ಕೃತಿಕ ಹಿನ್ನೆಲೆ ಯಲ್ಲಿ ಜನಪದರು, ಈ ಪ್ರದೇಶದ ಮೇಲೆ ಇಟ್ಟುಕೊಂಡ ಪ್ರೀತಿ, ಅಭಿಮಾನದ ಪೂರಕವಾಗಿ ಸ್ಥಳನಾಮವಾಗಿ ಮಾರ್ಪಟ್ಟಿತು. ನಿಡಗುಂದಿ, ಹುಲಕುಂದ, ಹೊನ್ನಿದಿಬ್ಬ, ಒಕ್ಕುಂದ ಮಾಸ್ತ ಮರಡಿ, ಮ್ಯಾಕಲಮರಡಿ, ಬೈಲಹೊಂಗಲ, ಶಿರಗುಪ್ಪಿ, ಲಕ್ಕೆಬೈಲು, ಇತ್ಯಾದಿ ಸ್ಥಳನಾಮಗಳನ್ನು ಗಮನಿಸಿದಾಗ ವಾರ್ಗಿಕಗಳನ್ನು ನಾಲ್ಕುರೀತಿಯಲ್ಲಿ ವರ್ಗಿಕರಿಸಿ ಅಧ್ಯಯನ ಮಾಡಬಹುದು.

ಈ ಭಾಗ ಗುಡ್ಡಗಾಡಿನ ಪ್ರದೇಶವಾಗಿದ್ದು, ಗುಡ್ಡಗಳ ಪಕ್ಕದಲ್ಲಿ ಜನವಸತಿಗ್ರಾಮಗಳು ಅಂದರೆ ನೀರಿನ ಆಸರೆಯ ಅಥವಾ ತಂಪಾದ ಪ್ರದೇಶವನ್ನು ಗುರುತಿಸಿ ಜನ ವಾಸ ಮಾಡ ಲಾರಂಭಿಸಿದರು, ಕೋಡ ಎಂಬ ಉತ್ತರ ಪದದಲ್ಲಿರುವ ಸ್ಥಳನಾಮಗಳು ಉದಾಹರಣೆ ಇವೆ, ಮುರಗೋಡ, ಮುಗಳಖೋಡ, ಉಗರಖೋಡ ಇತ್ಯಾದಿ ಮೂರು ಗುಡ್ಡಗಳ ನಡುವೆ ನಿರ್ಮಿಸ ಲಾದ ಒಂದು ಹಳ್ಳಿಯನ್ನು ತಿಗಡೊಳ್ಳಿ (ತ್ರಿಗಡ+ಹಳ್ಳಿ) ಎಂದು ಕರೆಯಲಾಗಿದೆ.

ಕಿತ್ತೂರ ಸುತ್ತಮುತ್ತಲೂ ಪ್ರಾಕೃತಿಕ ಲಕ್ಷಣಗಳಲ್ಲಿ ಮಲೆನಾಡಿನ ಪ್ರದೇಶ, ಎರೆನಾಡು, ಮತ್ತು ಬಯಲುನಾಡು ಪ್ರದೇಶವನ್ನು ಹೊಂದಿದ ಭೂ ಲಕ್ಷಣ ಹೊಂದಿದ್ದು, ಇಲ್ಲಿ ಖನಿಜ ಸಂಪತ್ತಿನೊಂದಿಗೆ ವಿವಿಧ ರೀತಿಯ ಮಣ್ಣು, ಹವಾಮಾನವನ್ನು ಹೊಂದಿದೆ. ವಿವಿಧ ಜಾತಿಯ ಪ್ರಾಣಿ-ಪಕ್ಷಿಗಳು, ನದಿ-ಕೊಳ್ಳ, ಗಿಡ-ಗಂಟಿ, ಗುಡ್ಡ-ಬೆಟ್ಟ, ತಗ್ಗು-ದಿಣ್ಣೆಗಳಿಂದ ನಿಸರ್ಗ ಸಂಪತ್ತನ್ನು ಹೊಂದಿದೆ. ಇಂಥಹ ಸ್ಥಳಗಳಲ್ಲಿ ಮಾನವನ ಬದುಕು ಪ್ರಕೃತಿಯು ವಿಪರೀತ ದೊಂದಿಗೆ ಹೋರಾಡುವುದಲ್ಲದೇ ದುಷ್ಟಪ್ರಾಣಿಗಳೊಂದಿಗೆ ಹೋರಾಡುವುದು ಆತನ ಬದುಕಾಗಿತ್ತು. ಹುಲಕುಂದ, ಹುಲಿಕಟ್ಟಿ, ಕರಡಿಗುಡ್ಡ, ಹಂದಿಗುಂದ ಮುಂತಾದ ಸ್ಥಳನಾಮಗಳು ಇದನ್ನು ಸೂಚಿಸುತ್ತದೆ.

ಕಿತ್ತೂರು ಸಂಸ್ಥಾನದ ಜನರು ಇಂಥ ನಿಸರ್ಗದ ಮಧ್ಯೆಯೇ ತಮ್ಮ ವಾಸಸ್ಥಾನವನ್ನು ನಿರ್ಮಿಸಿಕೊಂಡಿರುವುದು ಗಮನಿಸಬೇಕಾದ ಅಂಶ. ಅಂಥ ಪ್ರಕೃತಿ ಸ್ಥಳವನ್ನು ತಮ್ಮದಾಗಿಸಿಕೊಂಡು ಅದಕ್ಕೊಂದು ಹೆಸರು ಕೊಟ್ಟು ತಮ್ಮ ಉಪಜೀವನ ಸಾಗಿಸುತ್ತಾ ಬಂದಿರುವರು. ಈ ಕಾರಣ ದಿಂದಲೇ ಕಿತ್ತೂರನ್ನು ಒಳಗೊಂಡಂತೆ ಬೆಳಗಾವಿ ಜಿಲ್ಲೆಯಲ್ಲಿನ ಸ್ಥಳನಾಮಗಳಲ್ಲಿ ಬಹಳಷ್ಟು ನಿಸರ್ಗ ಮೂಲದ ಸ್ಥಳನಾಮಗಳಾಗಿದ್ದು, ಅವುಗಳ ಅಧ್ಯಯನದಿಂದ ನಿಸರ್ಗದ ಮಡಿಲಲ್ಲಿ ಜನಪದ ಸಂಸ್ಕೃತಿ ಹೇಗೆ ಬೆಳೆದು ಬಂದಿತು ಎಂಬುದನ್ನು ಸೂಕ್ಷ್ಮವಾಗಿ ಗ್ರಹಿಸಬಹುದಾಗಿದೆ.

ದಿಬ್ಬಗಳು, ಮರಡಿಗಳು, ಗುಡ್ಡ ಎಂಬ ಅರ್ಥವನ್ನು ಕೊಡುವ ಪ್ರದೇಶಗಳು ಈ ಪ್ರಾಂತದಲ್ಲಿ ಬಹಳಷ್ಟಿದೆ. ದಿಬ್ಬಗಳು ಇಳಿಜಾರಿನಿಂದ ಕೂಡಿದ ಎತ್ತರ ಪ್ರದೇಶವಾಗಿದೆ, ಇಂತಹ ಉತ್ತರ ಪದಗಳನ್ನು ಹೊಂದಿದ ಕೆಲವು ಸ್ಥಳನಾಮಗಳು ಸಸ್ಯವಾಚಿಯಾಗಿರುತ್ತದೆ.

೪.೪.೫. ವಸತಿ ವಾಚಿ-ವಾರ್ಗಿಕ ಸ್ಥಳನಾಮಗಳು

ಮಾನವನಲ್ಲಿ ನಾಗರಿಕತೆ ಬೆಳೆದಂತೆ ವ್ಯವಸ್ಥಿತ ಆಧುನಿಕ ಸೌಲಭ್ಯಗಳು ಬೆಳೆದು ವಸತಿ ಸಮುಚ್ಛಯಗಳನ್ನು ನಿರ್ಮಾಣ ಮಾಡಿಕೊಳ್ಳಲಾರಂಭಿಸಿದನು. ಹಳ್ಳಿಗಳ ಗಾತ್ರಗಳು ಬೆಳೆದು ಜನರ ಬೇಡಿಕೆಗಳು ಈಡೇರಿಸಿಕೊಳ್ಳಲು ಸಂತೆ, ಅಲ್ಲಿ ಬಂದಾಗ ಪಟ್ಟಣ ಅಥವಾ ಪುರವಾಗಿ ಮಾರ್ಪಾಡಾಯಿತು. ಇಂತಹ ಊರುಗಳನ್ನು ನಿರ್ಮಾಣ ವಾಚಿ ಎಂದು ಹೆಸರಿಸಲಾಯಿತು. ಇದರಿಂದ ಪಟ್ಟಣ, ಪುರ, ಗಡ, ಕೋಟೆಗಳನ್ನು ಕಟ್ಟಿ ಮೆರೆದ ಮಾನವ ವಿಕಾಸವನ್ನು, ಈ ಸಂಸ್ಕೃತಿಯ ಬೆಳವಣಿಗೆಯ ಸ್ವರೂಪವನ್ನು, ಸ್ಥಳನಾಮದ ಅಧ್ಯಯನದಿಂದ ತಿಳಿಯಬಹುದು.

ನಾಗರಿಕತೆ ಬೆಳೆದಂತೆಲ್ಲ ಜನರು ತಮ್ಮ ಉದ್ದೇಶಕ್ಕಾಗಿ ವ್ಯವಸ್ಥಿತವಾಗಿ ನಿರ್ಮಿಸಿಕೊಂಡ ಊರುಗಳ ಸ್ಥಳನಾಮಗಳನ್ನು ಪುರ, ಕೆರೆ, ಕಟ್ಟೆ, ಕೊಳ, ಕೋಟೆ, ಮುಂತಾದ ವಿವಿದೊದ್ದೇಶ ಗಳಿಗಾಗಿ ಬಳಸಿಕೊಳ್ಳ ತೊಡಗಿದನು. ಹೀಗೆ ಉದ್ದೇಶ ಪೂರ್ವಕವಾಗಿ ಹಾಗೂ ವ್ಯವಸ್ಥಿತವಾಗಿ ನಿರ್ಮಿಸಿಕೊಂಡಿರುವ ಊರುಗಳನ್ನು ವಸತಿವಾಚಕಗಳನ್ನಾಗಿ ವಿಂಗಡಿಸಲಾಗಿದೆ. ಈ ವಾರ್ಗಿಕದಲ್ಲಿ ಸ್ಥಳನಾಮಗಳನ್ನು ನಿರ್ದಿಷ್ಟವಾಗಿ ದೈವವಾಚಿ, ಸಸ್ಯವಾಚಿ, ವ್ಯಕ್ತಿವಾಚಿ ಹಾಗೂ ಜನಾಂಗವಾಚಿ ಗಳನ್ನಾಗಿ ವಿಂಗಡಿಸಬಹುದು.

ಸಸ್ಯವಾಚಿ ನಿರ್ದಿಷ್ಟಗಳು

ಕಿತ್ತೂರು ಸಂಸ್ಥಾನದಲ್ಲಿ ಹೇರಳವಾದ ಸಸ್ಯಸಂಪತ್ತು ಇದ್ದು, ಸಸ್ಯವಾಚಿಯ ಸ್ಥಳನಾಮ ಗಳನ್ನು ಅರಿಯಬಹುದಾಗಿದೆ. ಶೀಗಿ ಮರಗಳು ಸಮೃದ್ಧವಾಗಿ ಬೆಳೆಯುವ ಪರಿಸರದಲ್ಲಿರುವುದರಿಂದ ಶೀಗಿಹಳ್ಳಿ, ತುರುಕರ ಶೀಗಿಹಳ್ಳಿ, ದೇವರ ಶೀಗಿಹಳ್ಳಿ ಇತ್ಯಾದಿಗಳನ್ನು ಕಾಣಬಹುದಾಗಿದೆ.

ತುರುಕರ + ಶೀಗಿ+ಹಳ್ಳಿ

ದೇವರ+ಶೀಗಿ+ಹಳ್ಳಿ

ಶೀಗಿಹಳ್ಳಿ ಎಂಬ ಪದದಲ್ಲಿ 'ಶೀಗಿ' ಎಂಬ ನಿರ್ದಿಷ್ಟ ಪದವನ್ನು ಕಾಣುತ್ತೇವೆ. ಹಳ್ಳಿ ಎಂಬುದು ವಾರ್ಗಿಕವಾಗಿದೆ, 'ಶೀಗಿ' ಇದು ಸಸ್ಯವಾಚಿ ಪದವಾಗಿದ್ದು ಶೀಗಿಹಳ್ಳಿ ಎಂಬುದು ಸಸ್ಯವಾಚಿ ಸ್ಥಳನಾಮವಾಗುತ್ತದೆ. ಈ ಸ್ಥಳನಾಮಕ್ಕೆ ತುರುಕರ, ದೇವರ ಮೂಲ ನಿರ್ದಿಷ್ಟವನ್ನು ವಿಸ್ತೃತಗೊಳಿಸಿದೆ ತುರುಕ ಈ ಶಬ್ಧಕ್ಕೆ ಮುಸ್ಲಿಂ ಜನಾಂಗದವರು ಎಂಬ ಅರ್ಥವಾದರೆ, ಇನ್ನೊಂದು ಅರ್ಥವೆಂದರೆ ತುರು ಎಂದರೆ ಹಸುಕರುಗಳು ಅಥವಾ ದನಕರುಗಳ ಸಾಕುವವರು ಎಂದರ್ಥ. ಈ ಊರಿನಲ್ಲಿ ಮುಸ್ಲಿಂ ಜನಾಂಗದವರು ಹೆಚ್ಚಾಗಿ ವಾಸಿಸುತ್ತಿರುವದರಿಂದ ಈ ಗ್ರಾಮಕ್ಕೆ

ತುರುಕರ ಶೀಗಿಹಳ್ಳಿ ಎಂಬ ಹೆಸರು ಬಂದಿರಬಹುದು. ಈ ಸ್ಥಳನಾಮವು ಸಸ್ಯಮೂಲವಾಗಿದ್ದು, ವಿಸ್ತೃತದಲ್ಲಿ ಜನಾಂಗ ವಾಚಿಯಾಗಿಯೂ ಆಗಿರಬಹುದು.

ದೇವರ ಶೀಗಿಹಳ್ಳಿ ದೇವರ ಎಂಬುದಕ್ಕೆ ನೀರು ಉಕ್ಕುವ ಸ್ಥಳ, ನೀರಿನ ಝುರಿ ಎಂಬ ಅರ್ಥಗಳಿವೆ. ಈ ಗ್ರಾಮದಲ್ಲಿ ಅನೇಕ ದೇವಾಲಯಗಳಿವೆ. ಆದ್ದರಿಂದ ದೇವರ ಶೀಗಿಹಳ್ಳಿ ಎಂಬ ಹೆಸರು ಬಂದಿರಬಹುದು ಈ ಸ್ಥಳದಲ್ಲಿ ಶೀಗಿ ಮರಗಳ ಜೊತೆಗೆ ಮಲಪ್ರಭಾ ನದಿಯ ತೀರದಲ್ಲಿರುವ ನೀರಿನ ಝುರಿಗಳು ಹೆಚ್ಚಿನ ಪ್ರಮಾಣ ಇರುವುದರಿಂದ 'ದೇವರ' ಎಂಬ ನಿಸರ್ಗವಾಚಿ ವಿಸ್ತೃತವಾಗಿ ಸೇರಿರುವ ಸಾಧ್ಯತೆ ಇದೆ. ಈ ಸ್ಥಳನಾಮವು ದೈವವಾಚಿ ಅಥವಾ ನಿಸರ್ಗವಾಚಿ ಯಾಗಿರಬಹುದೆಂಬ ಅಭಿಪ್ರಾಯವಿದೆ.

ಮಾನವನು ತನ್ನ ಆಸರೆಗಾಗಿ ಅಲ್ಲಿರುವ ಕಲ್ಲು-ಮಣ್ಣು, ಹುಲ್ಲು, ಬಿದಿರು, ಕಟ್ಟಿಗೆ ಗಳನ್ನು ಬಳಸಿ, ಗುಡಿಸಲುಗಳನ್ನು ನಿರ್ಮಿಸಿಕೊಂಡನು. ಒಂದೇ ಸಮುದಾಯದ ನಾಲ್ಕಾರು ಮನೆಗಳು ಸೇರಿದಾಗ ಅದಕ್ಕೆ ಹಟ್ಟಿ ಎಂದು ಕರೆಯಲಾರಂಬಿಸಿದರು. ಮೊದಲು ಗೊಲ್ಲರು ವಾಸ್ತವ್ಯ ಮಾಡುತ್ತಿದ್ದುದು ಹಟ್ಟಿಯಲ್ಲಿಯೇ ಹಟ್ಟಿ ವಾರ್ಗಿಕವಾಗಿರುವ ಸ್ಥಳನಾಮಗಳು ಕೆಲವಿದೆ ಹಣಬರಹಟ್ಟಿ, ಕುಂಬಾರಹಟ್ಟಿ, ಕೆಂಚನಹಟ್ಟಿ, ಉಪ್ಪಾರಹಟ್ಟಿ ಇತ್ಯಾದಿ, ಹಣಬರ ಎಂಬ ಜನಾಂಗದವರು ನೆಲೆಸಿರುವುದರಿಂದ ಈ ಊರಿಗೆ ಬಂದಿರುವ ಸಾಧ್ಯತೆ ಇದೆ.

ಹಾಳ ಈ ಶಬ್ಧದ ಅರ್ಥ ಶೂನ್ಯವಾದುದು, ಹಾಳುಬಿದ್ದ ಜಾಗ ಅಥವಾ ಪಾಳುಬಿದ್ದ ಸ್ಥಳವೆಂದರ್ಥ.[೩೭] ಹಾಳ ಪರಿವರ್ತನೆಯ ಕುರಿತು ಎಂ.ಎಂ. ಕಲಬುರ್ಗಿರವರು ಈ ರೀತಿ ಅಭಿಪ್ರಾಯ ನೀಡುತ್ತಾರೆ.

ಹಾಳ-ಹಾಳ ಪ್ರದೇಶ

ಹಾಳ-ವಾಳ-ಪ್ರದೇಶ

ಪೊಳಲ್-ವೊಳಲ್-ವಾಳ-ಬಳ

ಹಾಳ-(ಬಾಳ)-ಹಾಳ-ಳ-ಊರು-ಪ್ರದೇಶ.

ಹಳ್ಳಿ-ಹಳ್ಳ-ಊರು ಪ್ರದೇಶ

ಈ ರೀತಿ ಬದಲಾವಣೆಯಾಗಿರಬಹುದು.[೩೮]

ಭೌಗೋಳಿಕ ಪರಸರದಲ್ಲಿ ತಮ್ಮ ಜೀವನಕ್ಕೆ ಹಾಗೂ ಕೃಷಿಗೆ ಅನುಕೂಲವಾಗಿರುವ ಪ್ರದೇಶ ವನ್ನು ಬಿಟ್ಟು, ಪಾಳುಬಿದ್ದ ಭೂಪ್ರದೇಶವನ್ನು ಜನವಸತಿಗೆ ಆಯ್ಕೆ ಮಾಡಿಕೊಂಡಿರಬಹುದು ಆದ್ದರಿಂದ ಈ ಸ್ಥಳನಾಮಗಳು ಬಂದಿರುವ ಸಾಧ್ಯತೆ ಇದೆ. ಬೂದಿಹಾಳ, ಮಾರಿಹಾಳ, ಹೊನ್ನಿಹಾಳ, ಪಟ್ಟಿಹಾಳ, ಸಿದ್ನಾಳ, ಯರನಾಳ, ಗಜಮಿನಹಾಳ, ಮುಗಳಿಹಾಳ, ತೆಗ್ಗಿಹಾಳ ಇತ್ಯಾದಿ ಸ್ಥಳನಾಮ ಗಳನ್ನು ಗುರುತಿಸಬಹುದಾಗಿದೆ.

೪.೪.೬. ಕೊಪ್ಪ ವಾರ್ಗಿಕವಾಗಿರುವ ಸ್ಥಳನಾಮಗಳು

ಕೊಪ್ಪ ಶಬ್ಧಕ್ಕೆ ಊರು, ಕೇರಿ ಅಥವಾ ಗುಡಿಸಲಿನ ಸಮೂಹ ಇತ್ಯಾದಿ ಅರ್ಥಗಳಿವೆ. ಕಿತ್ತೂರ ಮತ್ತು ಸುತ್ತಮುತ್ತಲಿನ ಪ್ರಾಂತ್ಯವು ಮಲೆನಾಡಿನ ಊರುಗಳಂತೆ ಕೆಲವು ಮನೆಗಳನ್ನು ಕಾಣಬಹುದು. ಆದರೆ ಬಯಲು ಸೀಮೆಗಳಲ್ಲಿ ಐವತ್ತರಿಂದ ಒಂದುವರೆ ಸಾವಿರದವರೆಗೂ ಜನರು ವಾಸ್ತವ್ಯ ಮಾಡುವ ಮನೆಗಳನ್ನು ಕಾಣಬಹುದು. ಇಂತಹುದರಲ್ಲಿ ಕೆಲವು ಊರುಗಳನ್ನು ಕೊಪ್ಪ, ಕೊಪ್ಪಿ, ಚಪ್ಪರವೆಂದು ಸಹ ಕರೆಯುತ್ತಾರೆ.[೩೯] ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಇದನ್ನೆ ಹಟ್ಟಿ ಎಂದು ಕರೆಯುವುದುಂಟು 'ತಾಂಡ' ಅಥವಾ ಹಟ್ಟಿಗಳಲ್ಲಿ ಬಡತನ ಅಥವಾ ಆರ್ಥಿಕ ವಾಗಿ ಹಿಂದುಳಿದ ಜನರು ವಾಸಿಸುತ್ತಾರೆ. ಇವುಗಳಿಗೆ 'ಕೊಪ್ಪಲು' ಎಂದು ಕರೆಯುವುದುಂಟು.[೪೦] ಈ ಭಾಗದ ಕೆಲವು ಸ್ಥಳನಾಮಗಳೆಂದರೆ ಡೊಂಬರಕೊಪ್ಪ ಕೆಂಚಲಾರಕೊಪ್ಪ, ಗನಿಕೊಪ್ಪ, ಸಾಣಿಕೊಪ್ಪ, ಮತ್ತಿಕೊಪ್ಪ, ಗಾಡಿಕೊಪ್ಪ ಇತ್ಯಾದಿ.

ಗಾಂವ, ಗಾವಿ ಎಂಬ ವರ್ಗಿಕವಾಗಿರುವ ಸ್ಥಳನಾಮಗಳು

ಗ್ರಾಮ (ಸಂ/ ಗಾವ(ದ್ಭ) ಹಳ್ಳಿ, ಜನನಿವಾಸ[೪೧]

ಕರ್ನಾಟಕ ರಾಜ್ಯದ ಗಡಿ ಭಾಗದಲ್ಲಿರುವ ಬೆಳಗಾವಿ ಜಿಲ್ಲೆಯು ಮರಾಠಿ ಭಾಷೆಯ ಪ್ರಭಾವದಿಂದ ಗಾವ, ಗಾಂವ ಎಂಬ ಶಬ್ಧಗಳು ವಾರ್ಗಿಕವಾಗಿ ಬಳಕೆಯಾಗುತ್ತಿದೆ. ಈ ಭಾಗದಲ್ಲಿ ಗಾಂವ ಎಂಬ ಅನೇಕ ಸ್ಥಳನಾಮಗಳಿವೆ. ಉದಾ. ಸಂಪಗಾಂವ, ದೇಗಾಂವ, ಇತ್ಯಾದಿ.

ವಾಡಿ (ಕನಾ) ಊರು, ಹಳ್ಳಿ, ಗ್ರಾಮ[೪೨]

ಕರ್ನಾಟಕ ಹಾಗೂ ಮಹಾರಾಷ್ಟ್ರಗಳಲ್ಲಿ ವಾಡ, ವಾಡಿ, ವಡಿ ಎಂಬ ಬಗೆಯ ಅಂತ್ಯದ ಶಬ್ಧವನ್ನು ಹೊಂದಿದ ಹಲವಾರು ಊರುಗಳನ್ನು ಕಾಣುತ್ತೇವೆ 'ವಾಡಿ' ಸಂಸ್ಕೃತ ಜನ್ಯವಾದದ್ದು ವಟ, ಉದ್ದು, ವೃಷ, ಅಥವಾ ವೃತ್ತಾಕಾರದ ಬೇಲಿಯ ಅಸ್ತಿತ್ವದಿಂದ ವಾಡಿ ಎಂಬ ಹೆಸರು ಬಂದಿರಬಹುದೆಂದು ತಜ್ಞರ ಅಭಿಪ್ರಾಯ. ವಾಡ, ವಾಡಿ, ವರ್ಗಿಕವನ್ನುಳ್ಳ ಸ್ಥಳನಾಮಗಳೆಂದರೆ ಬಾಗೇವಾಡಿ, ಬೆಳವಡಿ, ಚುಂಚವಾಡಿ, ಕಡತನ, ದೊಡ್ಡವಾಡ, ಗಂದಿಗವಾಡ, ಜುಂಜವಾಡ ಮುಂತಾದ ಹೆಸರುಗಳ ಸ್ಥಳನಾಮಗಳನ್ನು ಕಾಣಬಹುದು.

೪.೪.೭. ನಿರ್ಮಾಣ ವಾಚಿ ಸ್ಥಳನಾಮಗಳು

ಒಂದು ನಾಡಿನ ಸಂಸ್ಕೃತಿ ನಿರ್ಮಾಣದಲ್ಲಿ ಕೆರೆ, ಹೊಂಡ, ಕಟ್ಟೆ, ಗಡ ಮುಂತಾದವು ಗಳು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಇಂತಹ ಕೆರೆ, ಕೋಟೆ, ಹೊಂಡ, ಕಟ್ಟೆಗಳ ನಿರ್ಮಾಣದ ಮೂಲಕ ತಮ್ಮ ಜೀವನದ ಸೌಲಭ್ಯಗಳನ್ನು ಹೆಚ್ಚಿಸಿಕೊಂಡು ಜೀವಿಸಲು ಮಾನವನು ಪ್ರಯತ್ನಿಸುತ್ತಾನೆ. ಇಂತಹ ಸಂದರ್ಭದಲ್ಲಿ ನಿಸರ್ಗ ಸಹಜವಾದ ಊರು, ಹಳ್ಳ, ಪುರಗಳನ್ನು

ಕಟ್ಟಿಕೊಂಡು ವಾಸ ಮಾಡಲಾರಂಭಿಸಿದನು ಈ ಹಿನ್ನಲೆಯಲ್ಲಿ ನಿರ್ಮಾಣವಾಚಿ ಸ್ಥಳನಾಮಗಳೆಂದು ಕರೆಯುತ್ತಾರೆ.

ಮಾನವನ ಜೀವನದಲ್ಲಿ ನೀರಿಗೆ ಅತ್ಯಂತ ಪ್ರಮುಖ ಸ್ಥಾನವನ್ನು ನೀಡಿದ್ದರು. ನೀರಿನ ಮೂಲವನ್ನು ಹುಡುಕಿಯೇ ಸಹಜವಾದ ಬದುಕನ್ನು ಆರಂಭಿಸಲು ಆದಿ ಮಾನವನು ಆರಂಭಿಸಿದನು ತರುವಾಯ ಕೃಷಿ, ಪಶುಸಂಗೋಪನೆ ಮಾಡುತ್ತ ಗ್ರಾಮಗಳ ನಿರ್ಮಾಣಕ್ಕೆ ಕಾರಣನಾದನು. ಇದರಿಂದ ನಿರ್ಮಾಣವಾಚಿಕ ಸ್ಥಳನಾಮಗಳು ಹುಟ್ಟಿಕೊಂಡವು.

ಕೆರೆ-ಕೇರಿ-ಗೇರಿ ಎನ್ನುವ ಸ್ಥಳನಾಮಗಳು

ಕೆರೆ ಎಂದರೆ ಕೃಷಿಗಾಗಿಯೇ ನಿರ್ಮಿಸಿಕೊಂಡು ಬದುಕ ಸಾಗಿಸುವ ನೆಲೆ ಎಂದು ದ್ರಾವಿಡ ಭಾಷೆಯಲ್ಲಿ ಬಳಕೆಯಲ್ಲಿದೆ. ಉತ್ತರ ಕರ್ನಾಟಕದಲ್ಲಿ ಇಂತಹ ಪದಗಳು ಅಧಿಕವಾಗಿ ಪ್ರಯೋಗಮಾಡಿ, ಕೆರೆ-ಗೆರೆ, ಕೇರಿ-ಗೇರಿ ಎಂಬ ವಿವಿಧ ರೂಪಗಳಲ್ಲಿ ಬಳಸಲಾಗಿದೆ.

ಹೀಗೆ ಸಾಮಾನ್ಯವಾಗಿ ನಿರ್ಮಾಣ ವಾಚಿ ಸ್ಥಳಗಳನ್ನು ಅಧ್ಯಯನ ಮಾಡಿದಾಗ, ಕೆರೆ - ಕಟ್ಟೆ, ಪುರ, ಗಡ, ಬಾವಿ, ಮುಂತಾದ ನಿರ್ಮಾಣವಾಚಿ ಶಬ್ಧವನ್ನು ಬಳಸಿರುವ ಸ್ಥಳನಾಮವನ್ನು ಕಾಣುತ್ತೇವೆ. ಇಂತಹ ಸ್ಥಳನಾಮಗಳು ನಿರ್ದಿಷ್ಟವಾಗಿ ವ್ಯಕ್ತಿಯ ಮೂಲ ಅಥವಾ ವಿಶೇಷಣ ರೂಪವಾಗಿದ್ದು, ಇವುಗಳನ್ನು ಉದ್ದೇಶ ಪೂರ್ವಕವಾಗಿಯೇ ನಿರ್ಮಿಸಿರುವುದರಿಂದ, ಇವು ಸಾಮಾಜಿಕ ಅಭಿವೃದ್ಧಿಗೆ ಪೂರಕವಾದಂತೆ ಈ ಸ್ಥಳನಾಮಗಳು ಸೂಚಿಸುತ್ತದೆ.

ಗ್ರಾಮಗಳ ರಚನೆ ಅಥವಾ ವಸತಿಗಳ ನಿರ್ಮಾಣವು ಪ್ರಕೃತಿಯನ್ನು ಅವಲಂಭಿಸಿಯೇ ಜನ್ಮತಾಳಿದೆ. ಮಾನವನು ಉದರ ಪೋಷಣೆಗಾಗಿ ಕೃಷಿಯನ್ನು ಅವಲಂಬಿಸಿದ್ದನು. ಆದ್ದರಿಂದ ಕೃಷಿಗೆ ಉತ್ತಮ ಭೂಮಿ, ಹವಾಗುಣ, ನೀರಿನ ಆಸರೆ ಇರುವ ಸ್ಥಳವನ್ನು ಗುರುತಿಸಿ, ಆಯ್ಕೆ ಮಾಡಿಕೊಳ್ಳುತ್ತಿದನು. ಇದಕ್ಕೂ ಮೊದಲು ಮಾನವನೂ ಕೂಡ ಪ್ರಾಣಿಯೋಪಾದಿಯಲ್ಲಿ ಜೀವಿಸುತ್ತಿದ್ದನು. ಅಲೆಮಾರಿಯಾಗಿ ಆಹಾರಕ್ಕಾಗಿ ಹುಡುಕಾಟ ಮಾಡುತ್ತಾ ಅಲೆಯುತ್ತಿದ್ದನು. ಮುಂದೆ ಸಾವಿರಾರು ವರ್ಷಗಳು ಕಳೆದ ಬಳಿಕೆ ಕೃಷಿ ಮತ್ತು ಪಶುಪಾಲನೆಯನ್ನು ಕಲಿತುಕೊಂಡು ಸಂಘ ಜೀವಿಯಾಗಿ ಬದುಕನ್ನು ಆರಂಭಿಸಿದನು. ಕೃಷಿಯೇ ರಾಷ್ಟ್ರದ ಬೆನ್ನಲಬು, ಬಹಳಷ್ಟು ಗ್ರಾಮದ ಸ್ಥಳನಾಮಗಳು ಕೃಷಿ ಮೂಲದಿಂದ ಬಂದಿರುವ ಸಾಧ್ಯತೆಗಳಿವೆ. ಕೆಯ್ ಇದು ದ್ರಾವಿಡ ಪದ, ಇದರ ಸವೆದ ರೂಪಗಳೇ ಗಾ-ಗೆ-ಗಿ ಗಳಾಗಿವೆ ಜನಸಾಮಾನ್ಯರು ಊರ ಹೆಸರುಗಳನ್ನು ಉಧ್ಗರಿಸಿದಾಗ ಕೊನೆಗೆ ಬರುವ "ಯಾ"ವನ್ನು ಲೋಪ ಮಾಡುತ್ತಾರೆ ಅಲ್ಲಿ 'ಕಿ' ಮಾರ್ಪಾಡಾಗುತ್ತದೆ.[೪೩]

ಕೆಯ್ ಅಥವಾ ಚೆಯ್ ಅವುಗಳ ಸವೆದ ರೂಪಗಳಿಂದ ಕೊನೆಗೊಳ್ಳುತ್ತದೆ ಅಂಕಲಗಿ, ಕೊಟಬಾಗಿ, ಇಟಗಿ, ಕಣಬರಗಿ, ನೇಸರಗಿ, ಹಲಸಿ, ನಿಚ್ಚಣಕಿ, ಇತ್ಯಾದಿ ಸ್ಥಳಗಳನ್ನು ಹೆಸರಿಸ

ಬಹುದು. ಕೆಯ್-ವಾರ್ಗಿಕವಾಗಿರುವ ಸ್ಥಳನಾಮಗಳನ್ನು ಪರಿಶೀಲಿಸಿದಾಗ ಅವು ಸಸ್ಯ/ಜನಾಂಗ/ವ್ಯಕ್ತಿ/ದಿಕ್ಕು ಅಥವಾ ಭೂಮಿಯ ಸ್ವರೂಪವನ್ನು ನಿರ್ದೇಶಿಸುವ ನಾಮಗಳಂತೆ ಕಂಡುಬರುತ್ತದೆ.

ಹಲಸಿ - ಈ ಊರಿಗೆ ಪಲಸಿಗೆ ಎಂಬ ಹೆಸರು

ಪಲಸು + ಕೆಯ್

ಪಲಸು + ಗೆಯ್

ಪಲಸುಗೆ

ಪಲಸಿಗೆ - ಹಲಸಿಗೆ ಎಂದಾಗಬಹುದು.

ಹಲಸಿನ ಮರಗಳಿಂದ ಆ ಪ್ರದೇಶಕ್ಕೆ ಹಲಸಿಗೆ ಎಂಬ ಹೆಸರು ಬಂದಿರಬಹುದು ವ್ಯಕ್ತಿಗಳಂತೆ ಸಸ್ಯಗಳಿಂದಲೂ ಆ ಪ್ರದೇಶಕ್ಕೆ ಹೆಸರು ಬರಬಹುದಾಗಿದೆ. ಸಂಸ್ಕೃತ ಶಬ್ಧವಾದ ಪಲಶದಿಂದ-ಪಲಸು ಬಂದಂತೆ ಕಾಣುತ್ತದೆ.[೪೪]

ಹೀಗೆ ಸ್ಥಳನಾಮದ ಅಧ್ಯಯನದಲ್ಲಿ ಸ್ಥಳನಾಮದ ವಾರ್ಗಿಕಗಳನಿಟ್ಟುಕೊಂಡು ವರ್ಗಿಕರಣ ಮಾಡಲಾಗಿದೆ. ಇದರಲ್ಲಿ ನಿಸರ್ಗವಾಚಿ, ವಸತಿವಾಚಿ, ನಿರ್ಮಾಣವಾಚಿ, ಕೃಷಿವಾಚಿ ಎಂಬುದಾಗಿ ವರ್ಗಿಕರಿಸಲಾಗಿದೆ. ಕಿತ್ತೂರ ಸಂಸ್ಥಾನದಲ್ಲಿ ಬರುವ ೨೮೫ ಹಳ್ಳಿಗಳನ್ನು ಅಧ್ಯಯನ ಮಾಡಲಿಕ್ಕೆ ಸಾಧ್ಯವಾಗದೇ ಕೆಲವು ಹಳ್ಳಿಗಳನ್ನು ಮಾತ್ರ ಈ ಸ್ಥಳನಾಮದ ಅಡಿಯಲ್ಲಿ ಅಭ್ಯಸಿಸಲಾಗಿದೆ. ಇದರಲ್ಲಿ ಉರ್ದು, ಮರಾಠಿ ಭಾಷೆಯ ಪ್ರಭಾವವಿರುವುದನ್ನು ಕಾಣಬಹುದು ಇಲ್ಲಿಯ ಸಸ್ಯಸಂಪತ್ತು ಕೆರೆ, ಬಾವಿ, ಹೊಳೆ, ಕಸಬು ಕಟ್ಟಿ ಮುಂತಾದ ಶಬ್ಧಗಳನ್ನು ಬಳಸಿದನ್ನು ಕಾಣುತ್ತೇವೆ.

ಕಿತ್ತೂರು ಸಂಸ್ಥಾನದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಾದ ಹುಣಸಿಕಟ್ಟಿ, ಮರಕಟ್ಟಿ, ಬೆಳ್ಳಿಕಟ್ಟಿ, ಕರಿಕಟ್ಟಿ, ತೋಪಿನಕಟ್ಟಿ, ಅಂಬಡಗಟ್ಟಿ, ತವರಗಟ್ಟಿ, ಯರಗಟ್ಟಿ, ಬಸರಿಕಟ್ಟಿ, ಮಮ್ಮಿಗಟ್ಟಿ ಮುಂತಾದ ಊರುಗಳು ದ್ರಾವಿಡ ವಾಚಕ ಶಬ್ದಗಳಾಗಿದ್ದು, "ಕಟ್ಟಿ" ಯಿಂದ ಕೂಡಿದ ನಿಸರ್ಗ ವಾಚಕ ಶಬ್ದಗಳಾಗಿವೆ.

ಅದರಂತೆ ಎತ್ತರದ ಪ್ರದೇಶವನ್ನು ಸೂಚಿಸುವ ಗ್ರಾಮಗಳಾದ ಕುಂದ, ಕೋಡ ಎಂಬ ಶಬ್ದದ ಬಳಕೆಯಿಂದ ಕೂಡಿದ ಬಸರಕೋಡ, ತಡಕೋಡ, ಉಗರಕೋಡ, ಕುರಗುಂದ, ಮುಂತಾದ ಗ್ರಾಮಗಳು ಕೂಡ ನಿಸರ್ಗವಾಚಿ ಶಬ್ದಗಳಾಗಿವೆ. "ಹಳ್ಳಿ" ಎಂಬ ವಾರ್ಗಿಕರಣದಿಂದ ಕೂಡಿದ ಸ್ಥಳನಾಮವು ಕಾದರವಳ್ಳಿ, ಕುಗೊಡಳ್ಳಿ, ಶೀಗಿಹಳ್ಳಿ, ದೇಗಲವಳ್ಳಿ, ನಂದಿಹಳ್ಳಿ, ಗೋಲಿಹಳ್ಳಿ ಅಂಗರೋಳ್ಳಿ ಮುಂತಾದ ಗ್ರಾಮದ ಸ್ಥಳನಾಮವು ಹಳ್ಳಿಯಿಂದ ಕೊನೆಗೊಳ್ಳುವ ಸ್ಥಳಗಳು ಊರಿಗಿಂತಲೂ ಚಿಕ್ಕದಾಗಿದ್ದೂ ಹತ್ತಾರು ಮನೆಗಳನ್ನು ಹೊಂದಿದ ಸ್ಥಳನಾಮಗಳಾಗಿವೆ.

"ಊರು" ಇದು ಅಚ್ಚ ದ್ರಾವಿಡ ಭಾಷೆಯ ಪದವಾಗಿದ್ದು, ಇಂತಹ ಊರುಗಳನ್ನು ಬಳಸಿ ಕೊನೆಗೊಳ್ಳುವ ಸ್ಥಳಗಳು ಗಾತ್ರದಲ್ಲಿ ಚಿಕ್ಕದಾಗಿರುತ್ತದೆ. ಇದರಲ್ಲಿ ಅಂತಹದೇನು ವಿಶೇಷತೆಯನ್ನೇನು

ಹೊಂದಿರದೇ ನಿರ್ದಿಷ್ಟ ಹಾಗೂ ವಾರ್ಗಿಕ ಘಟಕಗಳಾಗಿರುತ್ತವೆ. ಬೈಲೂರು, ಹಂದೂರು, ಗುಡದೂರು, ತೇಗೂರು, ಕಲ್ಲೂರು, ಗರ್ಜೂರು, ಜಮಲೂರು, ನಾಗನೂರು, ದೇಶನೂರು, ವಣ್ಣೂರು, ಹೊಸೂರು, ಕಿತ್ತೂರು ಮುಂತಾದವುಗಳು. ಜನಾಂಗ ವಾಚಿಯ ಶಬ್ದಗಳನ್ನು ಬಳಸಿ ನಿರ್ದಿಷ್ಟ ಜನರನ್ನು ಗುರುತಿಸುವ ಸ್ಥಳನಾಮಗಳು ಬುಡರಕಟ್ಟಿ, ನೇಸರಗಿ, ತೋಲಗಿ, ನಾವಲಗಟ್ಟಿ, ಹಣಬರಹಟ್ಟಿ, ಗೋದಗೇರಿ ಮುಂತಾದವುಗಳು

ದೇವಾಲಯ ಅಥವಾ ಗುಡಿಗಳ ಸುತ್ತಲೂ ಬೆಳೆದು ಬಂದ ಊರುಗಳನ್ನು ನಿರ್ಮಾಣ ವಾಚಿ ಸ್ಥಳನಾಮಗಳೆನ್ನುತ್ತಾರೆ. ದೇವಗಾಂವ, ದೇಗಲವಳ್ಳಿ, ದೇವಲಾಪುರ, ತೇಗೂರು, ಬಸವಪುರ, ಹೊಸುರು, ಖಾನಾಪುರ, ದೇವನಕೊಪ, ಜೈನಕೊಪ್ಪ, ದೇವಲತ್ತಿ, ಶಿವನೂರು ಮುಂತಾದವುಗಳು.

"ವಾಡ-ವಾಡಿ" ವಾಡ ಎಂದರೇ ಜನ ವಸತಿ ಸ್ಥಳ, ವಾಡಿ ಎಂದರೇ ಬಿಡಾರ. ಈ ಶಬ್ದಗಳನ್ನ ಬಳಸಿ ಹಲವು ಊರುಗಳನ್ನು ಕಾಣುತ್ತೇವೆ. ಗಂದಿಗವಾಡ, ಬೈಲವಾಡ, ಜುಂಜವಾಡ, ಬಸ್ತವಾಡ, ಪಾರಿಶ್ವಾಡ, ಜುನವಾಡ, ಖೈರವಾಡ, ಕಡತನಬಾಗೇವಾಡಿ, ಚಿಕ್ಕಬೆಳವಡಿ ಮುಂತಾದವುಗಳು

ಕುಂದ-ಕೋಟೆ ಕುಂದವೆಂದರೆ ಬೆಟ್ಟ, ಗುಡ್ಡ, ದಿನ್ನೆ, ಮುಂತಾದ ಎತ್ತರವಾದ ಪ್ರದೇಶಗಳ ಹತ್ತಿರವಿರುವ ಊರುಗಳು. ತಮ್ಮ ಊರಿನ ಹೆಸರುಗಳ ಉತ್ತರಾರ್ಧದಲ್ಲಿ ಕುಂದ, ಗುಂದ ಎಂಬ ವಾರ್ಗಿಕಗಳನ್ನು ಹೊಂದಿರುತ್ತದೆ. ಈ ತಾಲೂಕಿನ ಬೆಟ್ಟ, ಗುಡ್ಡಗಳು, ಕಡಿಮೆ ಇದ್ದಲ್ಲಿ ಕೋಟೆಗಳು ಕಡಿಮೆ, ಇಲ್ಲಿ ಬಯಲು ಪ್ರದೇಶಗಳು ಹೆಚ್ಚು ಇರುವುದರಿಂದ ಕುಂದ ಎಂಬ ವಾರ್ಗಿಕ ಊರುಗಳನ್ನು ಕಾಣಬಹುದು. ಉದಾಃ ಕುರುಗುಂದ, ಒಕ್ಕುಂದ.

ಕೆಲವು ವೃತ್ತಿಗಳಿಗೆ ಸಂಬಂಧಿಸಿದ ಸ್ಥಳನಾಮಗಳನ್ನು ಕಾಣುತ್ತೇವೆ. ಅಂಥವುಗಳು ಅಧುನಿಕ ವಾರ್ಗಿಕವಾದರೆ ಊರು ಎಂಬ ಪದಗಳನ್ನು ಬಳಸಿದಂತಹ ಗ್ರಾಮಗಳು ತಳವಾರ ಕೊಪ್ಪ, ಅಂಬಿಗಪುರ, ಡೊಂಬರಕೊಪ್ಪ, ಕೆಂಚರಾಮನಹಾಳ, ಎಂಬ ಸ್ಥಳ ಸೂಚಕ ಗ್ರಾಮಗಳಾಗಿವೆ.

'ಕೆರೆ' ಸಮೀಪದಲ್ಲಿರುವ ಊರುಗಳನ್ನು ಸಾಮಾನ್ಯವಾಗಿ ಕಡೆಯಲ್ಲಿ ಕೆರೆ, ಗೆರೆ, ಗೆರ, ಕೊತ್ತಳ ಎಂಬ ಶಬ್ದವನ್ನು ಬಳಸಿ ಸ್ಥಳನಾಮ ಕೊಡುವುದುಂಟು, ಇವುಗಳಿಗೆ ಜಲವಾಚಿ ಸ್ಥಳನಾಮ ಗಳೆನ್ನುವರು. ಹೂಲಿಕೊತ್ತಳ, ಸಿದ್ದ ಸಮುದ್ರ, ಕಕ್ಕೇರಿ, ಹಿಂಡಸಗೇರಿ, ಕುಪ್ಪಟಗೇರಿ. ಈ ಭಾಗದ ಕೆಲವು ಸ್ಥಳನಾಮಗಳು "ಕೊಪ್ಪ" ಎಂಬ ಉತ್ತರಾರ್ಧದ ಶಬ್ದವನ್ನು ಕೊನೆಗೆ ಸೇರಿಸಿ ಗ್ರಾಮಗಳನ್ನಾಗಿ ಬಳಸುವ ಅಂಶಗಳು ಕಂಡುಬಂದಿವೆ. ಅವು ಮಾರ್ಗ್ಯನಕೊಪ್ಪ ತಳವಾರ ಕೊಪ್ಪ ಅಲಗಣಕೊಪ್ಪ, ದಾಸ್ತಿ ಕೊಪ್ಪ, ಕೆಂಚಲಾರಕೊಪ್ಪ, ಕರುವಿನಕೊಪ್ಪ, ಮತ್ತಿಕೊಪ್ಪ, ಜಾಲಿಕೊಪ, ಮಲಕೇನಕೊಪ್ಪ, ಸಾಣಿಕೊಪ್ಪ, ಗಾಡಿಕೊಪ್ಪ, ಗೋವಿನಕೊಪ್ಪ, ಬೇವಿನಕೊಪ್ಪ, ಜಕಿನಾಯಕನಕೊಪ್ಪ ನನಗುಂಡಿಕೊಪ್ಪ, ಚಿಕ್ಕಲಾರಕೊಪ್ಪ, ಕ್ಯಾರಿಕೊಪ್ಪ, ಗಣಿಕೊಪ್ಪ, ಅಂಬಲಿಕೊಪ್ಪ, ಕಡೆಕೊಪ್ಪ, ಮಂಗ್ಯನ ಕೊಪ್ಪ, ಮಾರ್ಗ್ಯನಕೊಪ್ಪ ಇತ್ಯಾದಿಗಳು.

ಆನಂದ ಕವಿ 'ಕಿತ್ತೂರ ಕೋಟೆಯ ನೋಟ' ಎಂಬ ಕಾವ್ಯದಲ್ಲಿ ಕಿತ್ತೂರು ಸಂಸ್ಥಾನದ ಊರುಗಳ ಉಲ್ಲೇಖ ಮಾಡುತ್ತಾರೆ.

ತ್ಯಾಗದೋಳ್ ಭೋಗದೋಳ್, ಮಿಗಿಲಾದ ಕಿತ್ತೂರು
ದೇಗಾವಿ, ಬೈಲೂರ, ಹೆಸರಾದ ತೋಲಗಿಯು
ತೇಗೂರು ತಿಗಡೊಳ್ಳಿ,ಬಸವಪುರ,ಮಲ್ಲಾಪುರ ಹಿರಿನಂದಿಹಳ್ಳಿಗಳಿಗೆ
ಕುರುವಿಂದದಂತಿರುವಕುರುಗುಂದ ತುರುಮುರಿಯು
ಪರತರ ಸುಗಂಧಮಂ ಬೀರುತಿಹೆ ವ್ರೀಹಿಗಳು
ಸರಸಾಗಿ ಬೆಳೆಯುತಿಹ ಕಲಬಾವಿ ಕಡತಾಳ ಮೊದಲಾದ ಗ್ರಾಮಗಳಿಗೆ
ಮಾಂಗಲ್ಯ ಕರಮಾದ ಸತ್ಯೇಂದ್ರ ತಾನಾಗಿ
ಸಂಗೀತ ಸಾಹಿತ್ಯ ಶಾಸ್ತ್ರದೊಳ್ ಪಿರಿದೆನಿಸಿ
ಬಂಗಾರದಂತಿರುವ ಮಲ್ಲಸರ್ಜ ಭೂಪನಿಂ ಸಿಂಗಾರ ಮಾಗಿರುವುದು||[೪೫]

ಮರಾಠಿ ಶಬ್ದಗಳ ಪ್ರಭಾವದಿಂದ ಹಲವು ಗ್ರಾಮಗಳಿವೆ. ಅವುಗಳು ಅಂತಹ ಶಬ್ದಗಳು ನಿಸರ್ಗವಾಚಕದ್ದಾಗಿದೆ. ದೇವಗಾಂವ, ಸಂಪಗಾಂವ ಸವಟಗಿ, ರೇವಡಿಹಾಳ, ಹೊಗರ್ತಿ, ಗಜಬಿನ ಹಾಳ, ಮ್ಯಾಕಲ್ ಮರಡಿ, ಚಣಕಿಬೈಲ್, ಚನ್ನೆವಾಡಿ, ಮಾಣಕಪುರ, ಕರಂಬಾಳ, ಒನಕಿಬೈಲ್, ದೊಡ್ಡಿಬೈಲ್, ಚಾಪಗಾಂವ, ಮೇರಡೆ, ಎಡವಾಗಿ, ಬಲವಾಗಿ, ಭಂಡಾರಗಾಳಿ ಮುಂತಾದವುಗಳು. ಒಂದೊಂದು ಸ್ಥಳನಾಮವನ್ನು ಒಂದೊಂದೊ ರೀತಿಯಲ್ಲಿ ಅಧ್ಯಯನ ಮಾಡಿದಾಗ, ಪ್ರತಿಯೊಂದು ಗ್ರಾಮದ ನೆಲೆ ಮತ್ತು ಹಿನ್ನೆಲೆ ತಿಳಿಯಲು ಸಾಧ್ಯವಾಗುತ್ತದೆ. ಈ ಸ್ಥಳನಾಮಗಳ ಮಹಾರಾಶಿ ಯನ್ನು ಒಂದು ಸಣ್ಣ ಮುಚ್ಚಳದಲ್ಲಿ ಅಳೆದು ರಾಶಿ ಮಾಡಿದಂತಾಗುತ್ತದೆ. ಒಂದೊದು ಊರಿಗೂ ತನ್ನದೇ ಆದ ಇತಿಹಾಸವಿದ್ದು ಅಗೆದಷ್ಟೂ ಮಾಹಿತಿ ಲಭ್ಯವಾಗುತ್ತದೆ.

ಪ್ರಾಕೃತಿಕ ಕಾರಣಗಳು : ಸ್ಥಳದ ಸುತ್ತಮುತ್ತಲಿನ ಪರಿಸರಗಳ ವಿಶೇಷತೆಯನ್ನ ಗಮನಿಸಿ, ಬೇರೊಂದು ಸ್ಥಳಕ್ಕಿಂತ ಬಿನ್ನವಾದ ಅಂಶಗಳನ್ನ ಗುರುತಿಸಿ ಅಂತಹ ಸ್ಥಳಗಳಿಗೆ ಹೆಸರು ಕೊಟ್ಟಿರುವುದನ್ನು ಕಾಣುತ್ತೇವೆ. ತಗ್ಗಿನಲ್ಲಿರುವ ಹಳ್ಳಿಗಳನ್ನು ತಗ್ಗಿನಹಳ್ಳಿ ಏಂತಲೂ, ಬೇವಿನ ಮರ ಹೆಚ್ಚಾಗಿರುವ ಊರನ್ನ ಬೇವಿನಕೊಪ್ಪ ಎಂತಲೂ, ಕಲ್ಲು ಹೆಚ್ಚಿರುವುದರಿಂದ ಕಲ್ಲೂರು, ತಾವರೆ ಹೂ ಹೆಚ್ಚಾಗಿರುವುದರಿಂದ ತಾವರೆಗಟ್ಟಿ, ಹೆಚ್ಚು ಗಾಳಿಯನ್ನ ಹೊಂದಿದ ಸ್ಥಳವಾದುದರಿಂದ, ಭಂಡಾರಗಾಳಿ ಎಂಬಂತೆ ಒಂದೊಂದು ಪ್ರದೇಶವು ಒಂದೊಂದು ವಿಶೇಷತೆಯನ್ನ ಹೊಂದಿರುವುದರಿಂದ ಆ ಹೆಸರು ಬರಲು ಕಾರಣವಿರಬೇಕು.

ವ್ಯಕ್ತಿಗತ ಕಾರಣಗಳು : ವ್ಯಕ್ತಿಯ ವಿಶಿಷ್ಟತೆ, ಗುಣಗಳು, ಹಾಗೂ ವೃತ್ತಿಗಳು, ಸ್ಥಳನಾಮಗಳಿಗೆ ಕಾರಣವಾಗಿರಬಹುದು, ಏಕೆಂದರೆ ಚಿಕ್ಕ ಮಲ್ಲೂರು, ಹಿರೆ ಮಲ್ಲೂರು, ಕೆಂಚರಾಮನಹಾಳ, ಮೂಗಬಸವ, ಜಕಿನಾಯಕನಕೊಪ್ಪ, ನಿಂಗನಮಟ್ಟಿ, ಸೋಮನಹಟ್ಟಿ, ಡೊಂಬರಕೊಪ್ಪ, ತಿಮ್ಮಾಪುರ,

ಚೆನ್ನಾಪುರ, ವೀರಾಪುರ ಮುಂತಾದವುಗಳು. ಉದಾ: ಕಿತ್ತೂರಿನ ಸಮೀಪವಿರುವ ಬಚ್ಚನಕೇರಿಗೆ, ಬಾಚ ಎಂಬ ಬೇಡನೊಬ್ಬನು ಆ ಊರಿನಲ್ಲಿ ತನ್ನದೇ ಆದ ಗುಂಪನ್ನು ಕಟ್ಟಿಕೊಂಡಿದ್ದನು. ಬೇಟೆಯಾಡುವುದು ಅವರ ಉದ್ಯೋಗವಾಗಿತ್ತು, ಬಾಚನ ಮರಣದ ನಂತರ ಆ ಊರಿಗೆ ಬಾಚನಕೇರಿ ಎಂದು ಕರೆಯಲಾಯಿತು. ಮುಂದೆ ಆ ಊರಿಗೆ ಬಚ್ಚನಕೇರಿ ಎಂದು ರೂಢಿಯಲ್ಲಿ ಕರೆಯಲಾರಂಬಿಸಿದರು.

ಈ ಜಿಲ್ಲೆಯಲ್ಲಿರುವ ಲಭ್ಯವಾಗಿರುವ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಹಲವಾರು ಊರು ಅಥವಾ ಹಳ್ಳಿಗಳನ್ನು ಇಂದು ಭೂಪಟದಲ್ಲಿ ಗುರುತಿಸಲು ಸಾಧ್ಯವಿಲ್ಲ. ಏಕೆಂದರೆ ಕೆಲವು ಗ್ರಾಮಗಳು ಕಾಲನ ದವಡೆಯಲ್ಲಿ ನಾಶವಾಗಿರುತ್ತದೆ. ಇನ್ನು ಕೆಲವು ಹೆಸರುಗಳು ಜನರ ಬಾಯಿಂದ ಬಾಯಿಗೆ ಹರಿದು ಬರುವಲ್ಲಿ ವ್ಯತ್ಯಾಸಗೊಂಡಿವೆ. ಈ ಬದಲಾವಣೆಗೆ ಕಾರಣ ಹುಡುಕಲು ಸ್ಥಳನಾಮಗಳ ಭಾಷಿಕ ಅಧ್ಯಯನ ಸಹಕಾರಿಯಾಗುತ್ತದೆ. ಸ್ಥಳನಾಮಗಳು ಪ್ರಾದೇಶಿಕ ಅಧ್ಯಯನದಲ್ಲಿ ಮಹತ್ವದ ಪಾತ್ರವಹಿಸುವುದರಿಂದ ಬಹುಶಾಸ್ತ್ರೀಯ ಹಿನ್ನೆಲೆಯಲ್ಲಿ ಅದೊಂದು ಸ್ವತಂತ್ರ ಅಧ್ಯಯನವಾಗಿ ಬೆಳೆದು ನಿಲ್ಲಬಲ್ಲದು.

೪.೫. ಕರ್ಯಾತುಗಳಲ್ಲಿನ ಗ್ರಾಮಗಳು

೪.೫.೧. ಅಂಬಡಗಟ್ಟಿ ಕರ್ಯಾತ

ಅವರಾಧಿ : ಈ ಗ್ರಾಮವು ಅಂಬಡಗಟ್ಟಿ ಕರ್ಯಾತನಲ್ಲಿ ಬರುವ ಗ್ರಾಮವಾಗಿದ್ದು, ಕಿತ್ತೂರಿನಿಂದ ಉತ್ತರಕ್ಕೆ ೪ ಕಿ.ಮೀ ಅಂತರದಲ್ಲಿದೆ. ಇಲ್ಲಿ ಸುಮಾರು ನಾಲ್ಕು ಶಾಸನಗಳು ದೊರೆತಿದ್ದು, ಕಲ್ಯಾಣ ಚಾಲುಕ್ಯರ ಕಾಲದ ಶಾಸನವಾಗಿದೆ. ಈ ಶಾಸನವು ಈಗ ಕಿತ್ತೂರಿನ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಇಡಲಾಗಿದೆ. ಕ್ರಿ.ಶ. ೧೧೨೫ರಲ್ಲಿ ಕಲ್ಯಾಣ ಚಾಲುಕ್ಯರ ದೊರೆ ತ್ರಿಭುವನ ಮಲ್ಲದೇವನು ಹೊರಡಿಸಿದ ಶಾಸನವಾಗಿದ್ದು, ಈ ಶಾಸನದ ಸಾರಾಂಶ ಹೀಗಿದೆ :

ತ್ರಿಭುವನಮಲ್ಲದೇವನ ಪತ್ನಿ ಪಟ್ಟಮಹಾದೇವಿ (ಮೈಲಳಮಹಾದೇವಿ) ಅವರಾಧಿಯಲ್ಲಿ ಆಳುತಿದ್ದಾಗ ಅಲ್ಲಿಯ ಚಟ್ಟೇಶ್ವರ ದೇವಾಲಯಕ್ಕೆ ರಾಜನ ಮಹಾಸಾಮಂತನಾಗಿದ್ದ ಗೋವಾ ಕದಂಬ ಮನೆತನದ ಜಯಕೇಶಿ ದೇವರಸನ ಸಮಕ್ಷಮದಲ್ಲಿ ಅಲ್ಲಿಯ ಗಾವುಂಡರು ಅವರಾಧಿಯ ಸಮಸ್ತ ಪ್ರಜೆಗಳು ಮೂರು ಎತ್ತಿನ ಬಂಡಿಯಲ್ಲಿ ತುಂಬುವಷ್ಟು ಭತ್ತವನ್ನು ಬೆಳೆಯುವ ಜಮೀನನ್ನು ದತ್ತಿ ಬಿಡಲಾಗಿತ್ತು. ಆ ದೇವಾಲಯಕ್ಕೆ ಪರ್ಗಡೆ ಗಂಗಾಧರಭಟ್ಟ, ತೊಂಬಿಗರು, ಗಾತ್ರಿಗರು, ಉಗುರುಮುನ್ನೂರರ್ವರು ಮತ್ತು ಹರಿಹರ ಭೋಜಂಗರು ಸಭೆ ಸೇರಿ ಮೈಲಾಳ ಮಹಾದೇವಿಯ ಕಾಲದಲ್ಲಿ ದಂಡನಾಯಕನಾಗಿದ್ದ ಸಿಂದರಸನ ಸಮಕ್ಷಮದಲ್ಲಿ ಅನೇಕ ದತ್ತಿಗಳನ್ನ ಬಿಟ್ಟರೆಂದು ಶಾಸನವು ದಾಖಲಿಸುತ್ತದೆ.

ಅವರಾಧಿ ಗ್ರಾಮದಲ್ಲಿ ದೊರೆತ ಇನ್ನೊಂದು ಶೈವ ಶಾಸನ ಇದೇ ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದೆ. ಶಾಸನದಲ್ಲಿ ಎರಡನೇ ಜಗದೇಕಮಲ್ಲನ ಕಾಲದಲ್ಲಿ ಈ ಶಾಸನವನ್ನ

ಹೊರಡಿಸಲಾಗಿದೆ. ಶಾಸನದ ಸಾರಾಂಶವೆಂದರೆ ಎರಡನೇ ಜಗದೇಕಮಲ್ಲನ ಪತ್ನಿ ಪಟ್ಟಮಹಾದೇವಿ (ಮಾಚಲಮಹಾದೇವಿ) ಅವರಾಧಿಯಲ್ಲಿ ಆಳುತ್ತಿದ್ದಾಗ ಕರಿ-ತೂರಾಯಿ-ಸಾಹನಿ, ಅಂತಪುರಾಧ್ಯಕ್ಷ, ಮನೆವರ್ಗಡೆ, ಮಹಾಪ್ರಧಾನ ದಂಡನಾಯಕ ಎಂದು ಕರೆಯಲಾಗಿರುವ ಸೂರಿಗೆಯ ಕಾವಣ್ಣಯ್ಯನ ಸಮಕ್ಷಮದಲ್ಲಿ ಪೆರ್ಗಡೆ ದೇವಪ್ಪಯ್ಯ ನಾಯಕ ಮತ್ತು ಮಹಾಪ್ರಭು ದೇವಣ್ಣಯ್ಯ ಸಾವಂತ ಎಂಬುವರು ಗಂಗಾರಾಶಿ ಪಂಡಿತರ ಪಾದಪೂಜೆ ಮಾಡಿ ದಾನದತ್ತಿಗಳನ್ನ ನೀಡಿದರೆಂದು ಶಾಸನವು ಉಲ್ಲೇಖಿಸುತ್ತದೆ. ಈ ಶಾಸನವು ಕೂಡ ಕಿತ್ತೂರಿನ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿದೆ.

ಅವರಾಧಿಯಲ್ಲಿ ಮತ್ತೊಂದು ಶಾಸನವು ಕೂಡಾ ಕಿತ್ತೂರಿನ ಪ್ರಾಚ್ಯವಸ್ತು ಸಂಗ್ರಹಾಲಯ ದಲ್ಲಿದೆ. ಇದು ಕ್ರಿ.ಶ. ೧೨ನೇ ಶತಮಾನದ ಶಾಸನವಾಗಿದ್ದು, ಇದರ ಸಾರಾಂಶವೆನೆಂದರೆ ಮಾದಲೂರಿನ ಗಾವುಂಡ ಮಲ್ಲರಸರ ಕಾಳಿಮಯ್ಯನ ಮಗ ಕಾಂಡಿಯಮ್ಮ ಎಂಬುವನು ಶಿವಲಿಂಗವನ್ನು ಪ್ರತಿಷ್ಠಾಪಿಸಲು ಕಾರಣನಾದನೆಂದು ತಿಳಿಸುತ್ತದೆ.

ಅವರಾಧಿಯಲ್ಲಿ ದೊರೆತ ಮತ್ತೊಂದು ಶಾಸನವು ಕೂಡಾ ಕಿತ್ತೂರಿನ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿದೆ. ಈ ಶಾಸನವು ಹೊರಡಿಸಿದ ಕಾಲ, ದೊರೆ ಇವುಗಳ ಬಗ್ಗೆ ಸ್ಪಷ್ಟವಾಗಿಲ್ಲ. ಸಾಲಗರ ಕಾಮರಾಜಶೆಟ್ಟಿಯೆಂಬುವನು ಮಹಿಷಾಸುರಮರ್ಧಿನಿ ದೇವತೆಯ ಮೂರ್ತಿಯನ್ನು ಪ್ರತಿಷ್ಠಾಪಿಸಿ ದನೆಂದು, ಅದಕ್ಕೆ ಭಗವತಿಯೆಂಬ ಎಂಬ ಉಲ್ಲೇಖ ಶಾಸನದಲ್ಲಿದೆ.

ಅಂಬಡಗಟ್ಟಿ : ಅಂಬಡಗಟ್ಟಿ ಗ್ರಾಮವು ಕಿತ್ತೂರು ಸಂಸ್ಥಾನದಲ್ಲಿ ಪ್ರಮುಖ ಊರಾಗಿತ್ತು. ಅಂಬಡಗಟ್ಟಿಯು ೨೫ ಗ್ರಾಮಗಳನ್ನು ಹೊಂದಿದ ಪ್ರಮುಖ ಕರಿಯಾತು ಕೂಡಾ ಆಗಿತ್ತು. ಅಂಬಾಡಿ+ಕಟ್ಟಿ=ಅಂಬಡಗಟ್ಟಿ ಎಂದರೆ ಅಂಬಾಡಿ ಎಲೆಗಳಿಗೆ ಈ ಪ್ರದೇಶವು ಪ್ರಸಿದ್ಧಿಯನ್ನು ಪಡೆದುಕೊಂಡಿರುವುದರಿಂದ ಈ ಊರಿಗೆ 'ಅಂಬಾಡಗಟ್ಟಿ' ಎಂಬ ಹೆಸರು ಬಂದಿತು. ಕಿತ್ತೂರು ಸಂಸ್ಥಾನದ ಕಾಲದಲ್ಲಿ ಪ್ರಮುಖ ಮಾರುಕಟ್ಟೆಯಾಗಿದ್ದು, ಅಕ್ಕಿ ಮತ್ತು ಬೆಲ್ಲಗಳಿಗೆ ಇಲ್ಲಿಯ ಮಾರುಕಟ್ಟೆಗೆ ಬೇಡಿಕೆ ಇತ್ತು. ಸರ್‌ದಾರ್ ಗುರುಶಿದ್ದಪ್ಪ ಮತ್ತು ಸರ್‌ದಾರ್ ಮಲ್ಲಪ್ಪಶೆಟ್ಟಿ ಇಬ್ಬರೂ ಕೂಡಾ ಅಂಬಡಗಟ್ಟಿಯವರೇ ಆಗಿದ್ದು, ಕಿತ್ತೂರು ಸಂಸ್ಥಾನದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು.[೪೬] ಅಂಬಡಗಟ್ಟಿಯಲ್ಲಿ ನಾಲ್ಕು ಹುಡೇದಗಳು ಹಾಗೂ ಒಂದು ಸೈನಿಕ ಠಾಣೆಯು ಇದ್ದಿತ್ತು. ಬೆಳಗಾವಿಯಿಂದ ಬರುವ ವೈರಿಗಳನ್ನು ಗಮನಿಸಿ ಕಿತ್ತೂರಿಗೆ ಸುದ್ದಿಯನ್ನು ತಿಳಿಸುತ್ತಿದ್ದರು. ಅಂಬಡಗಟ್ಟಿಯ ಜನರಿಗೆ ನೀರಿನ ಸೌಲಭ್ಯವನ್ನು ನೀಡಲು ಮಲ್ಲಸರ್ಜನನ ಕಾಲದಲ್ಲಿ ಒಂದು ಬಾವಿಯನ್ನು ತೋಡಿಸಲಾಗಿತ್ತು, ಇದನ್ನು ದೇಸಾಯಿಯರ ಬಾವಿ ಎಂದು ಕರೆಯುತ್ತಿದ್ದರು. ಇಡೀ ಊರಿಗೆ ಈ ಬಾವಿಯಿಂದ ನೀರು ಸರಬರಾಜು ಆಗುತ್ತಿತ್ತು.[೪೭] ಕಿತ್ತೂರು ಸಂಸ್ಥಾನದ ಕಾಲದಲ್ಲಿ ಅಪರಾಧಿಗಳಿಗೆ ಅಥವಾ ತಪ್ಪಿತಸ್ಥರಿಗೆ ದಂಡನೆ ಕೊಡಲು ಈ ಊರಿನಲ್ಲಿ ಶೂಲಮರಡಿ ಎಂಬ ಪ್ರದೇಶವಿದೆ. ಇಲ್ಲಿ ಗಲ್ಲುಶಿಕ್ಷೆಗಳನ್ನು ಕೊಡುತ್ತಿದ್ದರು.[೪೮]

ಈ ಭಾಗವು ಕಾಡು ಪ್ರದೇಶವಾಗಿದ್ದು, ಅರಣ್ಯ ಸಂಪತ್ತು ಹೇರಳವಾಗಿ ದೊರೆಯುತ್ತಿತ್ತು. ಕಿತ್ತೂರಿನಿಂದ ಇಟಗಿಗೆ ಸುರಂಗ ಮಾರ್ಗವಿದ್ದು, ಇದು ಅಂಬಡಗಟ್ಟಿಯ ಮೂಲಕವೇ ಹಾದು ಹೋಗಿದೆ ಎಂಬುದು ಸ್ಥಳೀಯರ ಅಭಿಪ್ರಾಯ.

ಕಿತ್ತೂರು : ಬೆಳಗಾಂ ಜಿಲ್ಲೆಯ ಒಂದು ಗ್ರಾಮ, ಒಂದೆಡೆಯಿಂದ ಕಿತ್ತಿ ಮತ್ತೊಂದೆಡೆಗೆ ನೆಲೆಗೊಂಡ ಊರು "ಕಿತ್ತೂರು" ಎಂಬ ನಿಷ್ಪತ್ತಿಯಿದೆ. "ಕೀರ್ತಿಪುರ"ವೇ ಆಡುಮಾತಿನಲ್ಲಿ ಕಿತ್ತೂರು ಎಂದಾಯಿತು ಎಂಬ ನಿಷ್ಪತ್ತಿಯನ್ನು ಸ್ಥಳೀಯರು ಹೇಳುತ್ತಾರೆ. ಕಿರಿದು>ಕಿತ್+ಊರು=ಕಿತ್ತೂರು. ಯಾವುದೇ ಊರಿನ ವಿಷಯವಾಗಿ ಮೂರು ಬಗೆಯ ನಿಷ್ಪತ್ತಿಗಳು ರೂಢಿಯಲ್ಲಿರುವುದನ್ನು ಕಾಣುತ್ತೇವೆ.[೪೯] (ಕಿರಿದು+ಎಸಳ್-ಕಿತ್ಎಸಳ್(ಸಣ್ಣಎಸಳ) (ಕಿತ್ತಯ್ಯ-ಕಿರಿದು+ಅಯ್ಯ-ಕಿತ್+ಅಯ್ಯ =ಕಿತ್ತಯ್ಯಾ ಉಲ್ಲೇಖ-ವಡ್ಡರಾಧನೆ) ಕಿರಿದು+ಊರು - ಕಿತ್ತೂರು, ಕಿರಿದು ಎಂಬ ಶಬ್ಧಕ್ಕೆ ಕಿತ್ ಆದೇಶವಾಗುತ್ತದೆ. ಕೇಶಿರಾಜನು ಹೇಳಿದ್ದಾನೆ.[೫೦] ಪೂರ್ವದಲ್ಲಿ ಕಿತ್ತೂರಿಗೆ ಗೀಜಗನಹಳ್ಳಿ ಎಂಬ ಹೆಸರಿತ್ತು ಎಂದು ಧಾರವಾಡ ಗೆಜೆಟಿಯರ್ ತಿಳಿಸಿದರೂ ಅದಕ್ಕೆ ನಿರ್ದಿಷ್ಟವಾದ ಆಧಾರಗಳಿಲ್ಲ.[೫೧] ಹೀಗಾಗಿ ಕಿತ್+ಊರು-ಕಿತ್ತೂರು ಎಂಬ ನಿಷ್ಪತ್ತಿಯೆ ಸರಿ ಎಂಬುದು ಬಹುಜನರ ಅಭಿಪ್ರಾಯ ವಾಗಿದೆ

ಕೊಟಬಾಗಿ : ಕೊಟ್ಟಂ ಬಾಗಿ ಎಂಬ ಹೆಸರು ಮೊದಲು ೧೨ನೇ ಶತಮಾನದಲ್ಲಿನ ಶಾಸನದಲ್ಲಿ ದೊರೆಯುತ್ತದೆ.[೫೨]

ಕೃಷ್ಣಾಂಬಾ - ಕುಟ್ಟಾಂಬಾ

ಕೊಟ್ಟಂಬಾ ಆಗಿರಬಹುದು

ಕೊಟ್ಟಂಬಾ + ಕೆಯ್

ಕೊಟ್ಟಂಬಾ + ಗೆಯ್ - ಕೊಟಂಬಾಗಿ

ಇದು ಆಡುಭಾಷೆಯಲ್ಲಿ ಕೊಟಬಾಗಿ ಎಂಬಂತಾಗಿ, ಇದು ಸ್ತ್ರೀ ವ್ಯಕ್ತಿವಾಚಿ ಸ್ಥಳನಾಮವಾಗಿರಬೇಕು.

ಡೊಂಬರಕೊಪ್ಪ : ಕಿತ್ತೂರಿಗೆ ತಾಗಿ ಕೊಂಡಿರುವ ಈ ಡೊಂಬರಕೊಪ್ಪದಲ್ಲಿ ಡೊಂಬರು ಎಂಬ ಜನಾಂಗವು ಹೆಚ್ಚಾಗಿ ವಾಸವಾಗಿರುವುದರಿಂದ ಈ ಸ್ಥಳಕ್ಕೆ ಡೊಂಬರಕೊಪ್ಪ ಎಂಬ ಹೆಸರು ಬಂದಂತೆ ಅನಿಸುತ್ತದೆ.

ಇನ್ನೊಂದು ಅಭಿಪ್ರಾಯದ ಪ್ರಕಾರ ಈ ಊರು ಎತ್ತರವಾದ ಸ್ಥಳದಲ್ಲಿದ್ದು, ಗುಡ್ಡರ ಬಂಡೆ ಕಲ್ಲುಗಳಿಂದ ನೀರು ಬರುವ ಪ್ರಪಾತ ಅಥವಾ ಕೊಳ್ಳ ಇದನ್ನು ಕೊಂಕಣಿ ಅಥವಾ ಮರಾಠಿ ಭಾಷೆಯಲ್ಲಿ ಇಂತಹ ಪ್ರದೇಶವನ್ನು 'ಡೊಂಬರ' ಎನ್ನುತ್ತಾರೆ. ಈ ಕಾರಣದಿಂದಲೂ ಈ ಊರಿಗೆ 'ಡೊಂಬರಕೊಪ್ಪ'ವೆಂದು, ಸ್ಥಳನಾಮ ಬರುವ ಸಾಧ್ಯತೆಯನ್ನು ನಾವು ಕಾಣಬಹುದು.

ತೇಗೂರು : ಇದು ಕಿತ್ತೂರಿನಿಂದ ಸುಮಾರು ೬ ಕಿ.ಮೀ ದೂರದಲ್ಲಿ ದಕ್ಷಿಣಕ್ಕಿದೆ. ಈ ಗ್ರಾಮವು ರಾಷ್ಟ್ರೀಯ ಹೆದ್ದಾರಿ-೪ರ ಮೇಲಿದೆ. ಈ ಊರಿನಲ್ಲಿ ಹೆಚ್ಚಾಗಿ ತೇಗಿನ ಮರಗಳು ಬೆಳೆ

ಯುವುದರಿಂದ ತೇಗೂರ ಎಂಬ ಹೆಸರು ಬಂದಿದೆ. ಈ ಮರಗಳಿಂದ ನಾನಾ ರೀತಿಯ ವಸ್ತುಗಳನ್ನು ತಯಾರಿಸಿ, ವ್ಯಾಪಾರ ಮಾಡುವ ಜನರು ಇರುವುದರಿಂದ ಇಲ್ಲಿಯ ಊರಿಗೆ 'ತೇಗೂರು' ಎಂಬ ಹೆಸರು ಬಂದಿರಬೇಕು.

ತಿಗಡೊಳ್ಳಿ : ತಿಗಡ ಎಂದರೇ ಮೂರು ಗುಡ್ಡಗಳಿಂದ ಈ ಊರು ಆವೃತವಾಗಿದೆ. ತಿಗಡ + ಹಳ್ಳಿ ಎಂಬಂತೆ ಕನ್ನಡ ಪದ ಕೋಶದಲ್ಲಿ ತಿಗಡವೆಂದರೆ ಗುಡ್ಡಗಳಿಂದ ಕೂಡಿದೆ ಎಂದರ್ಥ. ಈ ಊರು ಗುಡ್ಡದ ಪ್ರದೇಶದಲ್ಲಿರುವುದರಿಂದ ಈ ಊರಿಗೆ ಸಂಪರ್ಕಹೊಂದಲು ತಿರುವು ಮುರುವುಗಳಿಂದ ಕೂಡಿದ ರಸ್ತೆಗಳಿರುವುದರಿಂದ ಈ ಊರಿಗೆ ತಿಗಡೊಳ್ಳಿ ಎಂದು ಹೆಸರಾಯಿತು. ಒಂದು ತ್ರಿಪದಿಯಲ್ಲಿ

"ಹುಬ್ಬಳ್ಳಿ ಹೆಬ್ಬಳ್ಳಿ ಹಬ್ಬಿದ ಅವರೇಬಳ್ಳಿ
ತೆಗ್ಗಿನಾಗಿರುವ ತಿಗಡೋಳ್ಳಿ
ದ್ಯಾಮವ್ವನ ಹುಬ್ಬಿನಾಗಿರುವ ಶ್ರೀಗಂಧ"

ಈ ಊರಿನಲ್ಲಿ ಒಂದು ಸರದಾರ ಎಂಬ ಮುಸ್ಲಿಂ ಕುಟುಂಬವಿದೆ. ಈ ಕುಟುಂಬವು ಕಿತ್ತೂರು ಸಂಸ್ಥಾನದ ಸಂಧರ್ಬದಲ್ಲಿ ಸರದಾರರಾಗಿದ್ದರೆಂದು ತಿಳಿದು ಬರುತ್ತದೆ.

ಒಂದು ಐತಿಹ್ಯದ ಪ್ರಕಾರ ಸಂಗೊಳ್ಳಿ ರಾಯಣ್ಣ ಮತ್ತು ಅವನ ಗುಂಪು ಬೀಡಿ ಕಛೇರಿಯನ್ನು ಸುಡುವ ಮೊದಲು ಈ ಊರಿಗೆ ಬಂದಿದ್ದರು. ಆಗ ಕ್ಯಾತನವರ ಕುಟುಂಬದವರು ಗಾಣವನ್ನಾಡುತ್ತಿದ್ದಾಗ ಇವರ ಗುಂಪು ಗಾಣಕ್ಕೆ ಆಗಮಿಸಿ ಕಬ್ಬಿನಹಾಲನ್ನು ಕುಡಿದು, ಬೆಲ್ಲವನ್ನು ತಿಂದು ಬೀಡಿಗೆ ಪ್ರಯಾಣ ಬೆಳೆಸಿದರೆಂದು ಇಲ್ಲಿಯ ಸ್ಥಳೀಯ ಅಭಿಪ್ರಾಯವಾಗಿದೆ.[೫೩]

ದೇಗಾಂವ : ಇದು ಕೂಡ ಅಂಬಡಗಟ್ಟಿ ಕರ್ಯಾತನಲ್ಲಿ ಬರುವ ಗ್ರಾಮವಾಗಿದ್ದು, ಕಿತ್ತೂರಿನಿಂದ ಸುಮಾರು ೫ ಕಿ.ಮೀ ದೂರದಲ್ಲಿ ಪಶ್ಚಿಮಕ್ಕಿರುವ ಗ್ರಾಮವಾಗಿದೆ. ಕದಂಬರ ಕಾಲದಲ್ಲಿ ಅಗ್ರಹಾರವೆಂದು ಪ್ರಸಿದ್ಧಿಯನ್ನು ಪಡೆದುಕೊಂಡ ಈ ಗ್ರಾಮವು ಅನೇಕ ದೇವಾಲಯಗಳನ್ನು ಹಾಗೂ ಶಾಸನಗಳನ್ನು ಹೊಂದಿದ ಗ್ರಾಮವಾಗಿದೆ.[೫೪] ವೇದಗಳು, ವೇದಾಂಗಗಳು, ನ್ಯಾಯ, ಮೀಮಾಂಸೆ, ಸಾಂಖ್ಯಾಯೋಗ, ಸ್ಮೃತಿ, ವೇದಾಂತ, ಇತಿಹಾಸ ಮತ್ತು ಪುರಾಣಗಳನ್ನು ಅರ್ಥೈಸುವ ವಿದ್ವಾಂಸರನ್ನು ಒಟ್ಟುಗೂಡಿಸುವ ಸಲುವಾಗಿ ದೇಗಾಂವದಲ್ಲಿ ಒಂದು ಅಗ್ರಹಾರವನ್ನು ನಿರ್ಮಿಸುವುದಾಗಿ ಪತಿಯಲ್ಲಿ ಭಿನ್ನವಿಸಿಕೊಂಡು ಅವಳ ಆಶೆಯಂತೆ ದೇಗಾಂವದಲ್ಲಿ ಅಗ್ರಹಾರವನ್ನು ನಿರ್ಮಿಸಲಾಯಿತೆಂದಿದೆ.

ಇದೇ ದೇವಾಲಯದ ಮತ್ತೊಂದು ಶಾಸನವು ಮೇಲಿನ ಅಂಶಗಳನ್ನೇ ತಿಳಿಸುವ ಶಾಸನವನ್ನು ಶಿವಚಿತ್ತಪೆರ್ಮಾಡಿಯು ಹೊರಡಿಸಿದ್ದಾನೆ. ಇದೇ ದೇವಾಲಯದಲ್ಲಿ ಕೆತ್ತಲಾದ ಮತ್ತೊಂದು ಕನ್ನಡ ಶಾಸನವು ಶಿವಚಿತ್ತಪೆರ್ಮಾಡಿಯ ಕಾಲದಲ್ಲಿ ದೇಗಾಂವ ಅಗ್ರಹಾರಕ್ಕೆ ಸಂಬಂಧಿಸಿದ ಸೀಮಾ ವ್ಯಾಪ್ತಿಯನ್ನು ನಿರ್ಧರಿಸಿದಂತಹ ಉಲ್ಲೇಖವನ್ನು ತಿಳಿಸುತ್ತದೆ.

ಇದೇ ದೇವಾಲಯದ ಮತ್ತೊಂದು ಶಾಸನವು ಕನ್ನಡ ಭಾಷೆಯಲ್ಲಿದ್ದು, ಶೈವ ಧರ್ಮಕ್ಕೆ ಸೇರಿದ ಶಾಸನವಾಗಿದೆ. ಇದರ ಸಾರಾಂಶವೆಂದರೆ ಹುಲ್ಲೋಜನ ಮಗ ತಿಪ್ಪೋಜನು ಭಂಕೇಶ್ವರ ದೇವಾಲಯವನ್ನು ಕಟ್ಟಿದ ಸೂತ್ರಧಾರನೆಂದು, ದೇವಾಲಯಗಳನ್ನು ಕಟ್ಟುವುದರಲ್ಲಿ ಮತ್ತು ಶಿಲಾ ಮೂರ್ತಿಗಳನ್ನು ಕೆತ್ತುವುದರಲ್ಲಿ, ಕಲಾನೈಪುಣ್ಯತೆಯನ್ನು ಹೊಂದಿದವನೆಂದು ತಿಪ್ಪೋಜನ ಮಗ ಪ್ರತಾಪನು ಸೂತ್ರಧಾರಿ ಭಾಗೋಜನು ಶ್ರೀ ಕಮಲನಾರಾಯಣ ಮತ್ತು ಮಹಾಲಕ್ಷ್ಮೀ ದೇವಾಲಯ ವನ್ನು ಕಟ್ಟಿದನೆಂದು ಈ ಶಾಸನವು ಉಲ್ಲೇಖಿಸುತ್ತದೆ. ಆದರೆ, ಈ ಶಾಸನದಲ್ಲಿ ಶಕವರ್ಷ ವನ್ನು ನಮೂದಿಸಿಲ್ಲ.

ಇದೇ ದೇವಾಲಯದಲ್ಲಿ ಮತ್ತೊಂದು ಶಾಸನವಿದ್ದು, ಕನ್ನಡ ಭಾಷೆಯಲ್ಲಿದ್ದು, ನಾಗಾಯ್ಯ ಎಂಬ ವ್ಯಕ್ತಿಯ ಹೆಸರು ಈ ಶಾಸನದಲ್ಲಿ ಕಂಡುಬರುತ್ತದೆ. ದೇಗಾಂವಿನ ಬಸವಣ್ಣ ದೇವಾಲಯದ ಸಮೀಪ ಮತ್ತೊಂದು ವೀರಗಲ್ಲು ದೊರೆತಿದ್ದು, ಕ್ರಿ.ಶ. ೧೧೫೯ರ ಕಾಲದ ಶಾಸನವಾಗಿದೆ. ಈ ಶಾಸನವು ಶಿಥಿಲವಾಗಿದ್ದು, ಇದರ ಸಾರಾಂಶವೆಂದರೆ ಗೋವುಗಳ ಸಂರಕ್ಷಣಾ ಕದನದಲ್ಲಿ ಮರಣ ಹೊಂದಿದ ವ್ಯಕ್ತಿ ಎಂದು ಉಲ್ಲೇಖವಾಗಿದೆ. ಆದರೆ ವ್ಯಕ್ತಿಯ ಹೆಸರು ಇಲ್ಲಿ ತಿಳಿಯದು. ಒಬ್ಬನ ಸ್ಮರಾರ್ಥವಾಗಿ ಮೊನ್ನೆಯ ನಾಗಣ್ಣ ಎಂಬುವನು ಸ್ಮಾರಕ ಶಿಲೆಯನ್ನು ಹಾಕಿಸಿದನೆಂದು ಈ ಶಾಸನವು ದಾಖಲಿಸಿದೆ.

ದೇಗುಲವಳ್ಳಿ : ಇದು ಅಂಬಡಗಟ್ಟಿ ಕರ್ಯಾತನಲ್ಲಿ ಬರುವ ಗ್ರಾಮವಾಗಿದ್ದು, ಕಿತ್ತೂರಿನಿಂದ ಸುಮಾರು ೫ಕಿ.ಮೀ ದೂರದಲ್ಲಿ ಪಶ್ಚಿಮಕ್ಕಿದೆ. ಇಲ್ಲಿರುವ ರಾಮಲಿಂಗೇಶ್ವರ ದೇವಾಲಯದ ಮುಂಭಾಗದಲ್ಲಿರುವ ಒಂದು ಶಾಸನವು ಶಿಥಿಲವಾಗಿದ್ದು, ಈ ಶಾಸನದಲ್ಲಿ ಗಾಂಧಿನಾಯಕ, ನಾಗಲಾಪುರ, ದೇಗುಲವಳ್ಳಿ ಎಂಬ ಹೆಸರುಗಳನ್ನು ಸೂಚಿಸಿದ್ದು, ಈ ಶಾಸನದಲ್ಲಿ ಕೆರೂರಿನ ಮಲ್ಲೋಜ ಲಿಪಿಕಾರನ ಉಲ್ಲೇಖವಿದೆ.

ನಿಚ್ಚಣಕಿ : ನಿಚ್ಚ + ಅಣ್ಣ - ನಿಚ್ಚಣ್ಣ

ನಿಚ್ಚಣ್ಣನ + ಕೆಯ್

ನಿಚ್ಚಣ್ಣ + ಕೆಯ್ ನಿಚ್ಚಣಕಿ ಎಂಬ ಹೆಸರು ಬಂದಿರಬಹುದು.

ಈ ಪ್ರದೇಶವು ಕೃಷಿಗೆ ಯೋಗ್ಯ ಭೂಮಿಯನ್ನು ಹೊಂದಿದ ಪ್ರದೇಶ. ನಿಚ್ಚಣ್ಣ ಎಂಬ ವ್ಯಕ್ತಿಯು ಜೋಳ, ತೊಗರಿ, ಸಜ್ಜೆ, ನವಣೆ ಇತ್ಯಾದಿ ದ್ವಿದಳ ಧಾನ್ಯಗಳನ್ನು ಹೆಚ್ಚಾಗಿ ಬೆಳೆದು ಉತ್ತಮ ರೈತನೆಂಬ ಪ್ರಸಿದ್ಧಿ ಹೊಂದಿದ್ದನು. ಹೀಗಾಗಿ ಈ ಪ್ರದೇಶಕ್ಕೆ ಆ ವ್ಯಕ್ತಿಯ ಹೆಸರೇ ಬಂದಿರಬೇಕು. ನಿತ್ಯ ಎಂಬ ಸಂಸ್ಕೃತ ಶಬ್ಧವು ಕನ್ನಡದಲ್ಲಿ ತದ್ಭವಗೊಂಡು ನಿಚ್ಚ ಎಂದಾಗುತ್ತದೆ.[೫೫]

ಈ ರೀತಿ ಕೃಷಿ ಸ್ಥಳನಾಮದಲ್ಲಿ ಕೆಯ್ ಶಬ್ಧವಿರುವುದನ್ನು ಗುರುತಿಸಲಾಗಿದ್ದು ಇದರ ಪೂರ್ವಪದದಲ್ಲಿ ನಿರ್ದಿಷ್ಟವಾಗಿ ಬಂದಿರುವ ಜನಾಂಗವಾಚಿ ಅಥವಾ ವ್ಯಕ್ತಿ ವಾಚಿ, ಮುಂತಾದ

ಪದಗಳನ್ನು ಕಾಣಬಹುದು. ಇದರಿಂದ ಕೃಷಿಯ ಅಭಿವೃದ್ಧಿಗಳು ಈ ಪ್ರದೇಶದಲ್ಲಿ ಬೆಳೆದಂತೆ ಸ್ಥಳನಾಮದ ಮೇಲೂ ಪ್ರಭಾವ ಬೀರಿದೆ ಎನ್ನಬಹುದಾಗಿದೆ.

ಬಸಾಪುರ : ಈ ಗ್ರಾಮವು ಅಂಬಡಗಟ್ಟಿ ಕರ್ಯಾತಿನಲ್ಲಿ ಬರುವ ಗ್ರಾಮವಾಗಿದೆ. ಈ ಊರಿನಲ್ಲಿ ನೀರಿನ ಒರತೆಗಳಿಂದ ಈ ಭೂಮಿಯು ಜವಳು ಪ್ರದೇಶವಾಗಿದ್ದು ಈ ಸ್ಥಳಕ್ಕೆ ಬಸಾಪೂರ ಎಂಬ ಹೆಸರು ಬಂದಿದೆ. ಎಂಬುದು ಕೆಲವರ ಅಭಿಪ್ರಾಯ ಇನ್ನೂ ಕೆಲವರ ಅಭಿಪ್ರಾಯದ ಪ್ರಕಾರ ಬಸವ ಎಂಬ ವ್ಯಕ್ತಿಯಿಂದ ಬಸವ + ಪುರ > ಬಸಾಪುರ ಎಂದಾಗಿದೆ.[೫೬]

ಮಲ್ಲಾಪುರ (ಕೆ.ಎ.) : ಈ ಗ್ರಾಮವು ಕರ್ಯಾತ ಅಂಬಡಗಟ್ಟಿಯಲ್ಲಿ ಬರುವ ಗ್ರಾಮ. ಕಿತ್ತೂರು ಸಂಸ್ಥಾನ ಕಾಲದಲ್ಲಿ ಮಲ್ಲರು ಅಂದರೆ ಜಟ್ಟಿಗಳು ಕುಸ್ತಿ ಪಂದ್ಯಗಳನ್ನು ತರಬೇತಿ ಮಾಡುವ ಸ್ಥಳವಾಗಿತ್ತು ಆದ್ದರಿಂದ ಈ ಊರಿಗೆ ಮಲ್ಲಾಪುರ ಎಂಬ ಹೆಸರು ಬಂದಿದೆ.[೫೭] ಈಗಲೂ ಕೂಡ ಮಲ್ಲಾಪುರದಲ್ಲಿ ಗರಡಿ ಮನೆಗಳು ಇವೆ.

ಶಿವನೂರು : ಶಿವನ+ಊರು. ನಿರ್ದಿಷ್ಟವಾದ 'ಶಿವ' ಎಂಬ ದೈವವಾಚಿ ಮೂಲವನ್ನು ಸೂಚಿಸುತ್ತದೆ. ಈ ಗ್ರಾಮದಲ್ಲಿ ಒಂದು ಶಿವಲಿಂಗ ಇರುವುದರಿಂದ ಈ ಊರಿಗೆ ಆ ಹೆಸರು ಬಂದಿರಬಹುದು. ಇನ್ನೊಂದು ಅಭಿಪ್ರಾಯದ ಪ್ರಕಾರ ಶಿವಣ್ಣ ಎಂಬ ವ್ಯಕ್ತಿಯೂ ತನ್ನ ವ್ಯಕ್ತಿತ್ವದಿಂದ ಪ್ರಭಾವ ಬೀರಿ ಪ್ರಸಿದ್ಧ ಪಡೆದುಕೊಂಡಿರುವುದರಿಂದ ಈ ಗ್ರಾಮಕ್ಕೆ 'ಶಿವನೂರು' ಎಂಬ ಹೆಸರು ಬಂದಿರಬೇಕು.[೫೮]

೪.೫.೨. ಕಕ್ಕೇರಿ ಕರ್ಯಾತ

ಅಳ್ನಾವರ : ಅಳ್ನಾವರ ಕಕ್ಕೇರಿ ಕರ್ಯಾತನಲ್ಲಿ ಬರುವ ಗ್ರಾಮವಾಗಿದೆ. ಈ ಗ್ರಾಮವು ಜೈನಮುನಿಗಳ ತಪಸ್ಸಿನ ಕೇಂದ್ರವಾಗಿತ್ತು. ಮೊದಲು ಈ ಗ್ರಾಮವನ್ನು 'ಅನಿಲಪುರ' ಎಂದು ಕರೆಯುತ್ತಿದ್ದರು. ಕಾಲಕ್ರಮೇಣ ಈ ಗ್ರಾಮಕ್ಕೆ 'ಅಳ್ನಾವರ' ಎಂದು ಕರೆಯಲಾರಂಭಿಸಿದರು. ಈ ಪಟ್ಟಣವು ಮಲೆನಾಡಿನ ಸೆರಗಿನಲ್ಲಿದ್ದು, ಕನ್ನಡ, ಮರಾಠಿ, ಹಿಂದಿ ಮಾತನಾಡುವ ಬಹುಸಂಸ್ಕೃತಿಯ ವಿಭಿನ್ನ ಊರಾಗಿದೆ.

ಕಕ್ಕೇರಿ : ಖಾನಾಪೂರದಿಂದ ೩೦ ಕಿ.ಮೀ. ದೂರದಲ್ಲಿದೆ. ಖಾನಾಪೂರ ಹಳ್ಳಿಯಾಳ ರಸ್ತೆಯ ಮೇಲೆ ಅಳ್ನಾವರ (ಧಾರವಾಡ ಜಿಲ್ಲೆ) ರೇಲ್ವೆ ನಿಲ್ದಾಣದಿಂದ ೧೦ ಕಿ.ಮೀ. ದೂರದಲ್ಲಿದೆ. ಕಕ್ಕೇರಿ ವೀರಶೈವ ಶರಣ ಡೋಹರ ಕಕ್ಕಯ್ಯನಿಂದ ಖ್ಯಾತವಾಗಿದೆ. ಚೆನ್ನಬಸವೇಶ್ವರರೊಂದಿಗೆ ಕಲ್ಯಾಣದಿಂದ ಉಳವಿಗೆ ಕಕ್ಕಯ್ಯ ಹೊರಟಾಗ ಈ ಸ್ಥಳದಲ್ಲಿ ಕಲಚೂರಿ ಸೈನ್ಯಕ್ಕೂ ಅವನಿಗೂ ನಡೆದ ಹೋರಾಟದಲ್ಲಿ ಕಕ್ಕಯ್ಯ ಕೊಲ್ಲಲ್ಪಟ್ಟನೆಂದು ಹೇಳಲಾಗುತ್ತಿದೆ. ಹೊಲದಲ್ಲಿ ಇವನ ಗದ್ದುಗೆ ಸ್ಥಾಪಿಸಲಾಗಿದೆ. ಗರ್ಭಗುಡಿಯಲ್ಲಿ ಲಿಂಗಪೂಜೆ ಮಾಡುವ ಕಕ್ಕಯ್ಯನ ಕಲ್ಲಿನ ಮೂರ್ತಿ ಇದ್ದು, ಎರಡೂ ಬದಿಗಳಲ್ಲಿ ಚೌರಿ ಬೀಸುವವರಿದ್ದಾರೆ. ಗದ್ದುಗೆಯ ಹೊರಗೆ ವೀರಗಲ್ಲು ಒಂದಿದೆ.

ಇದರ ಕೆಳಭಾಗದಲ್ಲಿ ಯುದ್ಧದ ಸನ್ನಿವೇಶ ಹಾಗೂ ಕೋಟೆಯನ್ನು ಕೆತ್ತಲಾಗಿದೆ. ಎರಡನೇ ಭಾಗದಲ್ಲಿ ಚೌರಿ ಬೀಸುವವರೊಂದಿಗೆ ರಾಜಕುಮಾರನೊಬ್ಬನ ಶಿಲ್ಪವಿದೆ. ಮೇಲ್ಭಾಗದಲ್ಲಿ ಕೈಲಾಸದ ದೃಶ್ಯವಿದ್ದು ಮಹಾಸತಿಯ ಕೈಯನ್ನು ತೋರಿಸಲಾಗಿದೆ. ಇಲ್ಲಿ ದೊರೆತ ಇನ್ನೊಂದು ವೀರಗಲ್ಲಿನಲ್ಲಿ ಗಣಪತಿಯ ಮೂರ್ತಿಯಿದೆ. ಪ್ರತಿ ಶಿವರಾತ್ರಿ ವೇಳೆಯಲ್ಲಿ ಮೂರು ದಿನಗಳ ಕಾಲ ಇಲ್ಲಿ ಜಾತ್ರೆ ಆಗುತ್ತಿದೆ. ಗದ್ದುಗೆಯ ಬಳಿ ಇತ್ತೀಚೆಗೆ ಕಟ್ಟಲಾಗಿರುವ ಪ್ರಾಜ್ಞೋದಯ ಆಶ್ರಮ ಇದೆ. ಕಕ್ಕೇರಿಯಲ್ಲಿ ಇರುವ ಉಳಿದ ಗುಡಿಗಳೆಂದರೆ ವೀರಭದ್ರ, ಬಸವಣ್ಣ, ಮಾರವ್ವ, ಮೂಕಮ್ಮ, ದುರ್ಗವ್ವ ಹಾಗೂ ಇಲ್ಲೊಂದು ಅಡವಿ ಸಿದ್ಧೇಶ್ವರ ಮಠವೂ ಇದೆ. ಇಲ್ಲಿರುವ ಭಿಷ್ಠಾದೇವಿ ಗುಡಿಯ ಜಾತ್ರೆ ಪ್ರತಿ ವರ್ಷ ನೆರವೇರುತ್ತಿದೆ. ಇದನ್ನು ಮೂರು ನೂರು ವರ್ಷಗಳ ಹಿಂದೆ ಕಟ್ಟಲಾಗಿದೆ ಎಂದು ಹೇಳಲಾಗಿದೆ.

ಕಸಮಳಗಿ : ಈ ಗ್ರಾಮಕ್ಕೆ ಮೊದಲು ಕೇಸರಮಣಗಿ ಎಂಬ ಹೆಸರು ಇದ್ದಿತ್ತು. ಸಿಂಹಗಳು ಈ ಪ್ರದೇಶಗಳಲ್ಲಿ ವಾಸಿಸುತ್ತಿದ್ದವು ಆದಕಾರಣ ಕನ್ನಡ ವ್ಯಾಕರಣದಲ್ಲಿ ಕೇಸರಮಣಗೆ ಎಂಬ ಶಬ್ದದಲ್ಲಿ "ಣ"ಕಾರವು "ಳ" ಕಾರವಾಗಿ ಪರಿವರ್ತನೆಯಾಗುವುದರಿಂದ ಕೇಸರಮಳಗಿ ಎಂದು ಕರೆಯಲಾಗಿತ್ತು. ಅದು ನಿಷ್ಪತ್ತಿಯಾಗಿ ಕಸಮಳಗಿ ಎಂದು ರೂಢಿಯಲ್ಲಿ ಕರೆಯಲಾರಂಬಿಸಿದರೆನ್ನಲಾಗಿದೆ.

ಕಣಕುಂಬಿ : ಕಕ್ಕೇರಿ ಕರ್ಯಾತನ ಪ್ರದೇಶವಾಗಿದ್ದು, ಮಲಪ್ರಭಾ ನದಿಯ ಉಗಮ ಸ್ಥಳವಾಗಿರುವ ಕಣಕುಂಬಿ ಖಾನಾಪೂರದಿಂದ ೩೮ ಕಿ.ಮೀ ದೂರದಲ್ಲಿದೆ.

ಗುಂಡೋಲಿ : ಈ ಗ್ರಾಮವು ಗೋಲಾಕಾರದಲ್ಲಿ ಕಾಣುವುದರಿಂದ ಈ ಊರಿಗೆ ಗುಂಡೋಲಿ ಎಂಬ ಹೆಸರು ಬಂದಿದೆ ಎಂಬುದು ಸ್ಥಳಿಯ ಜನರ ಅಭಿಪ್ರಾಯ.

ಗೊದಗೇರಿ : ಗೋಡ ಎಂಬುದು ಕೋಟೆ ಎಂದರ್ಥ. ಈ ಊರಿನ ಕೋಟೆಯ ಬಳಿ ಒಂದು ಕೆರೆ ಕೂಡ ಇದೆ. ಆದ್ದರಿಂದ ಊರಿನ ಕೆಲವು ಜನರು ಕುದುರೆಗೆ ನೀರುಕುಡಿಸುವ ಸ್ಥಳವನ್ನು ಗೋದ + ಗೇರಿ > ಗೋದಗೇರಿ ಎಂದು ಕರೆದಿದ್ದಾರೆ.[೫೯]

ಜಾಂಬೋಟಿ : ಖಾನಾಪೂರದಿಂದ ೧೭ ಕಿ.ಮೀ ದೂರದಲ್ಲಿದೆ. ನಿಸರ್ಗದ ರಮ್ಯ ಸ್ಥಾನದಲ್ಲಿರುವ ಜಾಂಬೋಟಿ ಪುರಾಣ ಕಥೆಯೊಂದರ ಪ್ರಕಾರ ರಾಮಾಯಣದ ಜಾಂಬುವಂತನ ಮಗಳು ಜಾಂಬವತಿ ಹುಟ್ಟಿದ ಊರೆಂದು ಸ್ಥಳೀಯ ಇತಿಹಾಸ.

ಜೈನಾಪುರ : ಇಲ್ಲಿ ಜೈನಧರ್ಮಿಯರು ಹೆಚ್ಚಾಗಿ ವಾಸ ಮಾಡುತ್ತಿರುವುದರಿಂದ ಈ ಊರಿಗೆ 'ಜೈನಾಪುರ' ಎಂಬ ಹೆಸರು ಬಂದಿದೆ.

ಬೀಡಿ : ಈ ಗ್ರಾಮದ ಸ್ಥಳನಾಮವನ್ನು ಎರಡು ರೀತಿಯಲ್ಲಿ ವಿಂಗಡಿಸಬಹುದು. ಬೀಡು - ಬೀಡಿ, ಬೇ+ಅಡಿ - ಬೀಡಿ. ಎಂದರೆ ಎತ್ತರದ ಪ್ರದೇಶ ಎಂದು ಆಗಿರಬಹುದು. ಅಡಿ ಎಂದರೆ ಎತ್ತರದ ಪ್ರದೇಶ ಬೇ+ಅಡಿ ಎಂದರೆ ಎತ್ತರವಲ್ಲದ ಪ್ರದೇಶ ಇದು ಎತ್ತರವಾದ

ಗುಡ್ಡಗಳು ಕಾಡುಗಳಿಂದ ಆವೃತವಾದ ಪ್ರದೇಶ. ಪ್ರಾಚೀನ ಕಾಲದಲ್ಲಿ ಸೈನಿಕರು ಈ ಸ್ಥಳದಲ್ಲಿ ಬೀಡು ಬಿಟ್ಟಿರಬಹುದು ಹೀಗಾಗಿ ಈ ಗ್ರಾಮವು ಬೀಡು - ಬೀಡಿ ಎಂದಾಗಿರಬಹುದು.

೧೮೨೯ ರಲ್ಲಿ ಸಂಗೊಳ್ಳಿ ರಾಯಣ್ಣನು ಇಲ್ಲಿಯ ತಾಲೂಕ ಕಛೇರಿಯನ್ನು ಸುಟ್ಟು ಹಾಕಿದನು. (ಈ ಊರು ಬ್ರಿಟೀಷರ ಕೇಂದ್ರವಾಗಿರುವುದರಿಂದ ನಾಶಪಡಿಸಲು) ಇದು ಇಂದಿನ ಖಾನಾಪುರ ತಾಲೂಕಿನಲ್ಲಿದೆ.

ಹಿಂಡಲಗಿ : ಇದು ಕಕ್ಕೇರಿ ಕರ್ಯಾತಿನಲ್ಲಿ ಬರುವ ಗ್ರಾಮವಾಗಿದೆ. ಈ ಪ್ರದೇಶದಲ್ಲಿ ಹಿಟ್ಟಾಗುವ ಗುಣವನ್ನು ಹೊಂದಿರುವ ಮೃದುಕಲ್ಲುಗಳು ದೊರೆಯುತ್ತವೆ. ಆದರಿಂದ ಈ ಊರಿಗೆ ಹಿಂಡಲಗಿ ಎಂಬ ಹೆಸರು ಬಂದಿದೆ. ಇಲ್ಲಿ ಕಲ್ಲುಗಳನ್ನು ಒಡೆಯುವ ವಡ್ಡರ ಸಮುದಾಯ ಇರುವುದು ಗಮನಾರ್ಹವಾಗಿದೆ.[೬೦]

೪.೫.೩. ಕಾದರವಳ್ಳಿ ಕರ್ಯಾತ

ಕಾದರವಳ್ಳಿ : ಕಾದರವಳ್ಳಿಯು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನಲ್ಲಿದೆ. ಈ ಗ್ರಾಮವು ಕಿತ್ತೂರಿನಿಂದ ಸುಮಾರು ೧೦ ಕಿ.ಮೀ. ದೂರದಲ್ಲಿದೆ. ಮಲಪ್ರಭಾ ನದಿಯ ಬಲದಂಡೆಯ ಮೇಲೆ ನೆಲೆಸಿದ ಈ ಊರು ಮಲೆನಾಡಿನ ಸೆರಗಿನ ಹವಾಮಾನವನ್ನು ಹೊಂದಿದೆ. ನಿಸರ್ಗಸಂಪತ್ತಿನಿಂದ ತುಂಬಿದ ಈ ಗ್ರಾಮವು ಕೆಲಶತಮಾನಗಳ ಹಿಂದೆ ಮಹತ್ವದ ಪಟ್ಟಣ ವಾಗಿತ್ತೆಂದು ಇಲ್ಲಿ ದೊರೆಯುವ ಕುರುಹುಗಳಿಂದ ತಿಳಿದುಬರುತ್ತದೆ.

ಹನ್ನೆರಡನೆಯ ಶತಮಾನದಲ್ಲಿ ನಡೆದ ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಬಿಜ್ಜಳನಿಗೂ ಮತ್ತು ಶಿವಶರಣರಿಗೂ ಯುದ್ದವಾಯಿತು. ಆ ಯುದ್ದವು ನಡೆದಿರುವುದು ಇದೇ ಗ್ರಾಮದಲ್ಲಿ ಆಗಿರುವುದರಿಂದ ಇದನ್ನು ಕಾದಿದಹಳ್ಳಿ ಎಂದು ಹೆಸರಾಯಿತು. ಈ ಹೆಸರು ಜನರ ಬಾಯಲ್ಲಿ ಮಾರ್ಪಾಡಾಗಿ ಕಾತರವಳ್ಳಿ ಎಂದು ಕರೆಯಲಾಯಿತು. ನಂತರ ಈ ಗ್ರಾಮವನ್ನ ಕಾದರವಳ್ಳಿ ಎಂದು ಕರೆಯಲಾಯಿತು.[೬೧]

ಕಾದರವಳ್ಳಿಯಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಮೂರು ದೇವಾಲಯಗಳಿವೆ. ಈ ಊರನ್ನು ಕಸಬ ಕಾದರವಳ್ಳಿ ಎಂದು ಬ್ರಿಟಿಷ್ ಕಾಗದ ಪತ್ರಗಳಲ್ಲಿ ಉಲ್ಲೇಖಗಳಿವೆ. ಈ ಊರಿನ ಆಡಳಿತಕ್ಕೆ ಒಟ್ಟು ೦೭ ಗ್ರಾಮಗಳಿದ್ದೂ ಕರ್ಯಾತ ಕಾದರವಳ್ಳಿ ಎಂದು ಕರೆಯುತ್ತಿದ್ದರು.

ಕಾದರವಳ್ಳಿ ಗ್ರಾಮವು ಸುಖ ಸಮೃದ್ದಿಗಳಿಂದ ಕೂಡಿದ ನಗರವಾಗಿತ್ತೆಂದು ಇಲ್ಲಿ ದೊರೆಯುವ ಕುರುಹುಗಳಿಂದ ತಿಳಿದುಬರುತ್ತದೆ. ಏಕೆಂದರೆ ಈ ಊರಿನಿಂದ ಅರ್ಧ ಮೈಲಿ ದೂರದಲ್ಲಿ ಇರುವ ಮರಡಿಯನ್ನು ಸುಂಕದಮಡ್ಡಿ ಎಂದು ಕರೆಯುವ ವಾಡಿಕೆಯಾಗಿದೆ.

ಕಾದರವಳ್ಳಿಯು ಕಿತ್ತೂರು ಸಂಸ್ಥಾನದಿಂದ ನೇರವಾದ ಸಂಪರ್ಕವನ್ನು ಹೊಂದಿತ್ತೆಂದು ಸ್ಥಳೀಯರು ಹೇಳುತ್ತಾರೆ. ಇಲ್ಲಿ ಪ್ರತಿ ವರ್ಷವೂ ಫಾಲ್ಗುಣ ಶುದ್ದ ಅಷ್ಟಮಿಯ ದಿನದಂದು

ನದಿಯ ಹತ್ತಿರವಿರುವ ದೇವಾಲಯದಲ್ಲಿ ಶಿವ ಪಾರ್ವತಿ ವಿವಾಹ ಮಾಡುವ ಪರಂಪರೆಯಿದೆ. ಈ ಉತ್ಸವಕ್ಕೆ ಕಿತ್ತೂರಿನ ದೊರೆ ಮಲ್ಲಸರ್ಜನು ಪ್ರತಿವರ್ಷ ಬರುತ್ತಿದ್ದನು. ಈ ಕಾರ್ಯಕ್ರಮದಲ್ಲಿ ಹುಣಶಿಕಟ್ಟಿಯವರು ಹೆಣ್ಣಿನ ಕಡೆಯವರಾಗಿ, ಕಾದರವಳ್ಳಿಯವರು ಗಂಡಿನಕಡೆಯವರಾಗಿ ಮಲ್ಲಸರ್ಜನ ನೇತೃತ್ವದಲ್ಲಿ ಶಿವ ಪಾರ್ವತಿಯರ ವಿವಾಹವು ಬಹು ವಿಜೃಂಬಣೆಯಿಂದ ಈ ಊರಲ್ಲಿ ಜರುಗುತ್ತಿತ್ತೆಂದು ತಿಳಿದುಬರುತ್ತದೆ. ಈ ಭಾಗಕ್ಕೆ ಮೇಲಿಂದ ಮೇಲೆ ರಾಜ ಮನೆತನ ದವರು ಬರುತ್ತಿರುವುದರಿಂದ ಕಿತ್ತೂರು ಸಂಸ್ಥಾನದವರು ಇಲ್ಲಿ ಒಂದು ನಿವಾಸವನ್ನು ಕಟ್ಟಿಸಿದ್ದಾರೆ. ಈ ಮನೆಗೆ ದೊಡ್ಡಮನಿ ಎಂಬ ಹೆಸರಿದೆ. ಇದನ್ನು ಕಲ್ಲೂರ ಚನ್ನಬಸಪ್ಪನು ಕಿತ್ತೂರು ಸಂಸ್ಥಾನದ ಕಾರಭಾರಿಯಾಗಿ ಕೆಲಸವನ್ನು ಮಾಡುತ್ತಿದ್ದನು. ಇವನಿಗೆ ಕಿತ್ತೂರು ಸಂಸ್ಥಾನವು ಈ ಮನೆಯನ್ನು ನಿರ್ಮಿಸಿಕೊಟ್ಟರೆಂದು ತಿಳಿದುಬರುತ್ತದೆ. ಇದು ಒಂದು ವಾಡೆಯಾಗಿದ್ದು ಇದರಲ್ಲಿ ವಾಸಮಾಡಿಕೊಂಡು ಊರಿನ ಗೌಡಕಿ ಮಾಡುತ್ತಿದ್ದನೆಂದು ತಿಳಿಯುತ್ತದೆ. ಈ ಮನೆಯ ಗಾತ್ರ, ಹೆಬ್ಬಾಗಿಲು, ಮೇಲ್ಛಾವಣಿಗಳನ್ನು ಗಮನಿಸಿದರೆ ಈ ಮನೆಯ ಸಂಸ್ಥಾನಕ್ಕೆ ಸಂಬಂಧಿಸಿರಬೇಕೆಂದು ಕಂಡುಬರುತ್ತದೆ. ಆನೆಗಳು ಒಳಗೆ ಬಂದು ಹೋಗಲು ಬೃಹದಾಕಾರದ ಹೆಬ್ಬಾಗಿಲು, ಅವುಗಳನ್ನು ಕಟ್ಟಲು ವಿಶಾಲವಾದ ಅಂಗಳಗಳು ಇದ್ದವೆಂದು ಕಂಡುಬರುತ್ತದೆ. ಕಾದರವಳ್ಳಿಯಲ್ಲಿ ೬ನೇ ವಿಕ್ರಮಾದಿತ್ಯನ ಕಾಲದ ಮೂರು ಶಾಸನಗಳು ಲಭ್ಯವಾಗಿದ್ದು, ಪಲಸಿಗೆ ೧೨ ಸಾವಿರ ಪ್ರಾಂತ್ಯದ ಆಡಳಿತವನ್ನು ಸಾಮಂತ ಮಹಾಮಂಡಲೇಶ್ವರ ಅರಿಕೆ ಶ್ರೀ ದೇವನು ಕಾದರವಳ್ಳಿ ೩೬ ಆಡಳಿತ ವಿಭಾಗವನ್ನು ನಿರ್ವಹಿಸುತ್ತಿದ್ದನೆಂದು ತಿಳಿದು ಬರುತ್ತದೆ.

ತುರುಮರಿ : ಈ ಗ್ರಾಮವು ಕಾದರವಳ್ಳಿ ಕರ್ಯಾತಿನ ಗ್ರಾಮವಾಗಿದೆ. ಈ ಗ್ರಾಮವು ಕಿತ್ತೂರಿನಿಂದ ಸುಮಾರು, ೧೨ ಕಿ.ಮಿ. ದೂರದಲ್ಲಿದೆ. ಈ ಗ್ರಾಮವು ಒಂದು ಸಣ್ಣ ಗುಡ್ಡದ ಕೆಳಗೆ ಇದೆ. ಈ ಗ್ರಾಮದಲ್ಲಿ ಚಾಲುಕ್ಯ ಶೈಲಿಯ ರಾಮಲಿಂಗೇಶ್ವರ ಗುಡಿ ಮತ್ತು ಹನುಮಂತನ ಗುಡಿಗಳು ಇವೆ. ಇದರ ಸುತ್ತಲೂ ಒಂದು ಶಿಥಿಲವಾದ ಕೋಟೆ ಇದೆ.

ದಾಸ್ತಿಕೊಪ್ಪ : ದಾಸ್ತಿಕೊಪ್ಪ ಎಂಬ ಗ್ರಾಮವು ಕಿತ್ತೂರಿನಿಂದ ೧೪ ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಮಲಪ್ರಭ ನದಿಯ ದಂಡೆಯ ಮೇಲಿದೆ. ೧೧ ಮತ್ತು ೧೨ನೇ ಶತಮಾನದಲ್ಲಿ ಕಾದರವಳ್ಳಿ ಗ್ರಾಮದಲ್ಲಿ ಜರುಗಿದ ಶರಣರಿಗೂ ಹಾಗೂ ಶರಣರೇತರರಿಗೆ ನೆಡೆದ ಕಾಳಗದಲ್ಲಿ ಗಂಗಾಂಬಿಕೆಯು ಮಲಪ್ರಭ ನದಿಗೆ ದುಮುಕಿ ಪ್ರಾಣಾರ್ಪಣೆ ಮಾಡಿದಾಗ ಆಕೆ ಹಿಂದೆ ಇದ್ದ ಹಲವಾರು ಸತಿಯರು ಕೂಡ ಸಹಗಮನ ಮಾಡಿದ್ದರಿಂದ ಈಊರಿಗೆ ದಾಸತಿಕೊಪ್ಪ ಎಂಬ ಹೆಸರು ಬಂದಿತ್ತೇಂದು ತಿಳಿಸುತ್ತಾರೆ. ನಂತರ ಈ ಊರನ್ನು ದಾಸ್ತಿಕೊಪ್ಪ ಎಂದು ಕರೆಯಲಾಗಿದೆ.

ಹುಣಶಿಕಟ್ಟಿ : ಈ ಗ್ರಾಮವು ಕಾದರವಳ್ಳಿ ಕರ್ಯಾತಿನಲ್ಲಿ ಬರುವ ಗ್ರಾಮವಾಗಿದೆ. ಈ ಊರಿನಲ್ಲಿ ಹುಣಸೆ ಮರಗಳು ವಿಶಾಲವಾಗಿ ಬೆಳೆದು ನಿಂತಿರುವುದರಿಂದ ಈ ಊರಿಗೆ ಹುಣಸೆಕಟ್ಟೆ ಎಂದು ಕರೆದರು ಎಂಬುದು ಸ್ಥಳೀಯರ ಅಭಿಪ್ರಾಯ.

ಹೊನ್ನೆದಿಬ್ಬ : ಹೊನ್ನೆ ಎಂದರೆ ಒಂದು ಜಾತಿಯ ಹೂ ಬಿಡುವ ಮರಗಳು ಸುರಹೊನ್ನೆ ಮರಗಳು ಇರುವುದರ ಸೂಚಕವಾಗಿದೆ. ಈ ಮರಗಳು ಸ್ಥಳದಲ್ಲಿ ದಿಣ್ಣೆಗಳಿರುವುದರಿಂದ ಹೊನ್ನೆದಿಬ್ಬವೆಂಬ ಊರು ನಿರ್ಮಾಣವಾಗಿದೆ.

ಈ ಪ್ರಾಂತ್ಯದಲ್ಲಿ ಕಲ್ಲು ಮಿಶ್ರಿತ ಮರಳುಗಾಡಿನ ದಿಬ್ಬಗಳು ಮತ್ತು ದಿನ್ನೆಗಳುಳ್ಳ ಪ್ರದೇಶವಾಗಿರುತ್ತದೆ. ಮತ್ತು ಕೆಂಪು ಮಣ್ಣಿನ ಹಾಗೂ ಹರಳು ಮಣ್ಣಿನ ಭೌಗೋಳಿಕ ಲಕ್ಷಣ ವನ್ನು ಹೊಂದಿರುವುದರಿಂದ ಇವುಗಳ ಸುತ್ತಮುತ್ತಲೂ ಊರುಗಳು ನಿರ್ಮಾಣವಾಗಿದ್ದು ಸಣ್ಣಪುಟ್ಟ ಗುಡ್ಡಗಳನ್ನು ಹೊಂದಿದೆ. ಅಂತಹ ಪ್ರದೇಶದಲ್ಲಿ ನಿರ್ಮಾಣವಾದ ಊರುಗಳು ಮರಡಿ ಎಂದು ಅಂತ್ಯವಾಗುವುದರಿಂದ ಭೌಗೋಳಿಕ ಸ್ಥಿತಿಗತಿಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ. ಉದಾ. ಯಮಕರನ ಮರಡಿ, ಮ್ಯಾಕಲ್ ಮರಡಿ, ಮಾಸ್ತಮಾರಡಿ ಬೆಣಚು ಮರಡಿ ಇತ್ಯಾದಿ.

೪.೫.೪. ಕಾರಲಗೆ ಕರ್ಯಾತ

ಕಾರಲಗೆ : ಮಲೆನಾಡಿನ ಭಾಗವಾಗಿದ್ದು, ಇಂದಿನ ಖಾನಾಪುರದ ಸಮೀಪ ಈ ಗ್ರಾಮವಿದೆ. ಇದು ಸಂಪದ್ಭರಿತವಾಗಿದ್ದು, ಕಿತ್ತೂರು ಸಂಸ್ಥಾನಕ್ಕೆ ಆದಾಯ ತರುವ ಗ್ರಾಮವಾಗಿತ್ತು.

ಚಾಪಗಾಂವ : ಒಂದು ಐತಿಹ್ಯದ ಪ್ರಕಾರ ಚಂಪಾವತಿ ಎಂಬ ಮಹಿಳೆ ಗೌರವ ಮತ್ತು ಪ್ರತಿಷ್ಠೆ ಇಂದ ಬಾಳಿ ಬದುಕಿದ್ದಳು ಅವಳಿದ್ದ ಈ ಊರಿಗೆ ಚಾಪಗಾಂವ ಎಂಬ ಹೆಸರು ಬಂದಿರಬಹುದು ಈ ಊರಿನಲ್ಲಿ ೧೧ನೇ ಶತಮಾನದ ಶಾಸನದಲ್ಲಿ ಚಂಪಾವತಿ ಎಂಬ ಹೆಸರು ಇರುವದನ್ನು ಕಾಣಬಹುದು. ಕಿತ್ತೂರು ಸಂಸ್ಥಾನದ ದೊಡ್ಡದಾದ ಬಾವಿಯಿದ್ದು, ಈ ಬಾವಿಗೆ ದೇಸಾಯಿಯರ ಬಾವಿಯೆಂದು ಕರೆಯುತ್ತಾರೆ.

ಖಾನಾಪುರ : ಮುಸ್ಲಿಂರ ಆಳ್ವಿಕೆಯ ಸಂದರ್ಭದಲ್ಲಿ ಅನೇಕ ಮುಸ್ಲಿಂ ಅಧಿಕಾರಿಗಳು ತಾವು ಆಡಳಿತ ನಡೆಸುತ್ತಿರುವ ಪ್ರದೇಶಗಳಿಗೆ ತಮ್ಮ ಹೆಸರನ್ನೆ ಇಟ್ಟಿದ್ದಾರೆ. ಉದಾಃ ಖುದಾನಪುರ, ಖಾನಪುರ ಇತ್ಯಾದಿ ಖಾನ ಎಂಬ ಹೆಸರಿನ ವ್ಯಕ್ತಿ ಒಂದು ಪೇಟೆಯನ್ನು ಕಟ್ಟಿಸಿ, ಅದಕ್ಕೆ ತನ್ನ ಹೆಸರನ್ನು ಇಟ್ಟು, ಖಾನಪೇಟೆ ಅಥವಾ ಖಾನಾಪುರ ಎಂಬ ಹೆಸರು ಬಂದಿರುವ ಸಾಧ್ಯತೆ ಇದೆ.

೪.೪.೫. ಗೋಲಿಹಳ್ಳಿ ಕರ್ಯಾತ

ಆಡಿ : ಇದು ಬೀಡಿಯ ಸಮೀಪವಿದ್ದು, ಪ್ರತ್ಯೇಕ ಗ್ರಾಮವಾಗಿದ್ದು, ಕಿತ್ತೂರು ಸಂಸ್ಥಾನದ ಕಾಲದಲ್ಲಿ ಈ ಗ್ರಾಮವು ಪ್ರಮುಖ ಗ್ರಾಮವಾಗಿತ್ತೆಂದು ಊರಿನ ಹಿರಿಯರು ತಿಳಿಸುತ್ತಾರೆ. ಈ ಗ್ರಾಮದಲ್ಲಿ ಎತ್ತರವಾದ ಗುಡ್ಡದ ಮೇಲೆ ಆಡಿ ಮಲ್ಲಯ್ಯನ ಗುಡಿ ನಿರ್ಮಾಣವಾಗಿದೆ. ಆದ್ದರಿಂದ ಆಡಿ ಮಲ್ಲಯ್ಯನ ಗುಡಿ ಎನ್ನುವದರ ಬದಲಿಗೆ ಈ ಊರನ್ನು ಆಡಿ ಎಂಬ ಹೆಸರಿನಲ್ಲಿ ಕರೆಯುತ್ತಾರೆ.

ಗುಂಜಿ : ಖಾನಾಪುರದಿಂದ ೧೩ ಕಿ.ಮೀ ದೂರದಲ್ಲಿದೆ. ಬೆಳಗಾವಿ, ಪಣಜಿ ಹೆದ್ದಾರಿಯ ಮೇಲಿರುವ ಈ ಗ್ರಾಮವು ಅನೇಕ ದೇವಾಲಯಗಳನ್ನು ಹೊಂದಿರುವುದರಿಂದ 'ಗುಡಿ' ಎನ್ನುವ ಬದಲಿಗೆ 'ಗುಂಜಿ'ಯೆಂದು ಕರೆದಿರಬೇಕು. ಇಲ್ಲಿ ಪ್ರತಿ ದಸರಾದಲ್ಲೂ ಐದು ದಿನಗಳ ಕಾಲ ಜಾತ್ರಾ ಮಹೋತ್ಸವ ನಡೆಯುತ್ತದೆ.

ಗೋಲಿಹಳ್ಳಿ : ಖಾನಾಪುರದಿಂದ ೨೨ ಕಿ.ಮೀ. ದೂರದಲ್ಲಿರುವ ಗೋಲಿಹಳ್ಳಿಯು ಕಿತ್ತೂರು ಸಂಸ್ಥಾನ ಕಾಲದಲ್ಲಿ ಆಡಳಿತ ಕೇಂದ್ರವಾಗಿತ್ತು. ಈ ಗ್ರಾಮವು ಗೋವಿಯ ಕದಂಬರ ಕಾಲದ ಎರಡನೇ ರಾಜಧಾನಿಯೆಂದು ಕರೆಯುತ್ತಿದ್ದರು. ಮೊದಲು ಈ ಊರಿಗೆ 'ಕಿರುಸಂಪಗಡಿ' ಎಂದು ಕರೆಯುತ್ತಿದ್ದರು. ಕಾಲಾನಂತರದಲ್ಲಿ ಈ ಗ್ರಾಮವನ್ನು ಗೋಲಿಹಳ್ಳಿಯೆಂದು ಕರೆಯಲಾಗಿದೆ. ಇಲ್ಲಿ ಕದಂಬರ ದೊರೆ ವಿಷ್ಣುಚಿತ್ತನ ರಾಣಿ ಹಂಪಾದೇವಿಯು ತನ್ನ ಸಾಮ್ರಾಜ್ಯವನ್ನು ಇಲ್ಲಿಯೇ ಆರಂಭಿಸಿದಳೆಂಬ ಪ್ರತೀತಿ ಇದೆ. ಇಲ್ಲಿ ಅನೇಕ ಗುಡಿಗಳಿದ್ದು, ಗೋವೆಯ ಕದಂಬ ಅರಸ ಶಿವಚಿತ್ತನ ಮಂತ್ರಿ ಚಾವಯ್ಯ ಎಂಬುವನು ಸೋಮೇಶ್ವರ ಗುಡಿಯನ್ನು ಕಟ್ಟಿಸಿದ. ಇದರ ಜೀರ್ಣೋದ್ಧಾರಕ್ಕೆ ಭೂಮಿಯನ್ನು ನೀಡಿದನೆಂದು ಊರಿನ ಜನ ತಿಳಿಸುತ್ತಾರೆ. ಗೋಲಿಹಳ್ಳಿಯಲ್ಲಿ ಶಿಥಿಲವಾದ ಒಂದು ಮಣ್ಣಿನ ಕೋಟೆಯಿದೆ.

ಜುಂಜರವಾಡ : ಜುಂಜರವಾಡ ಗ್ರಾಮವು ಗೋಲಿಹಳ್ಳಿ ಕರ್ಯಾತಿನಲ್ಲಿ ಬರುತ್ತದೆ. ಈ ಗ್ರಾಮ ದಲ್ಲಿ ಜಂಜರ ಅಥವಾ ಜುಂಜರ ಎಂಬ ಜನಾಂಗದವರು ವಾಸವಾಗಿರುವದುರಿಂದ ಜಂಜರವಾಡ ಅಥವಾ ಜುಂಜರವಾಡ ಎಂಬ ಹೆಸರು ಬಂದಿದೆ.

ದೊಂಗರಗಾಂವ : ಈ ಗ್ರಾಮವು ಗುಂಜಿಯಿಂದ ೭ ಕಿ.ಮೀ ದೂರದಲ್ಲಿರುವ ಅತೀ ಹಳೆಯ ದಾದ ಗ್ರಾಮವಾಗಿದೆ. ಇಲ್ಲಿಯ ಜನರು ಉತ್ತರ ಪ್ರದೇಶಕ್ಕೆ ಸೇರಿದವರೆಂದು ಹೇಳುತ್ತಾರೆ. ಕಾರಣ, ಇಲ್ಲಿಯ ಜನ ಕಾಲಭೈರವನನ್ನ ಪೂಜಿಸುತ್ತಾರೆ. ಇಲ್ಲಿ ಮತ್ಸ್ಯೇಂದ್ರನಾಥ ಮಠವಿದೆ.

ಮಂಗ್ಯನಕೊಪ್ಪ : ಈ ಗ್ರಾಮವು ಗೋಲಿಹಳ್ಳಿ ಕರಿಯಾತಿನಲ್ಲಿ ಬರುವ ಗ್ರಾಮ. ಮಂಗ್ಯನ ಕೊಪ್ಪವೆಂದರೆ ಕಿತ್ತೂರು ಸಂಸ್ಥಾನದ ಸರದಾರರಾದ ಮಂಗೇಶರಾಯನ ತೋಟವಾಗಿರುವದರಿಂದ ಈಗ್ರಾಮವು ಅಪಭ್ರಂಶವಾಗಿ ಮಂಗ್ಯಾನಕೊಪ್ಪವೆಂದು ಕರೆದಿದ್ದಾರೆ.

೪.೫.೬. ನಂದಗಡ ಕರ್ಯಾತ

ಕಸಬಾ ನಂದಗಡ : ಕಸಬಾ ನಂದಗಡ ಇದು ಕಿತ್ತೂರಿನಿಂದ ಸುಮಾರು ೨೫ ಕಿ.ಮೀ ದೂರದಲ್ಲಿದೆ. ನಂದಗಡದ ಕರಿಯಾತಿಗೆ ಸಂಬಂಧಿಸಿದೆ. ಇಲ್ಲಿಯ ಕಲ್ಮೇಶ್ವರ ಗುಡಿ, ಲಕ್ಷ್ಮೀ ಗುಡಿಯ ಪೂಜೆ ಪುನಸ್ಕಾರಕ್ಕಾಗಿ ಚಾಕರಿ ಹೊಲಗಳನ್ನ ಬಿಡಲಾಗಿದೆ. ಇಲ್ಲಿಯ ಜನ ಕುಸ್ತಿಯಲ್ಲಿ ಪ್ರಸಿದ್ಧಿಯಾಗಿದ್ದರೆಂದು ಈ ಊರಿನ ಜನರನ್ನು ಮಲ್ಲಸರ್ಜನನು ಪ್ರೀತಿಸುತ್ತಿದ್ದನೆಂದು ತಿಳಿದುಬರುತ್ತದೆ.[೨೨]

ದೊಡ್ಡೇಬೈಲು : ಇದು ನಂದಗಡ ಕರ್ಯಾತಿನಲ್ಲಿ ಬರುವ ಗ್ರಾಮವಾಗಿದೆ. ಈ ಊರು ಗಾತ್ರದಿಂದ ವಿಶಾಲವಾದ ಬಯಲು ಪ್ರದೇಶವನ್ನು ಹೊಂದಿರುವ ಗ್ರಾಮವಾಗಿದೆ. ಇಲ್ಲಿ ಭೌಗೋಳಿಕವಾಗಿಯೂ ದೊಡ್ಡ ಬಯಲು ಹೊಂದಿದೆ. ಆದ್ದರಿಂದ ಈ ಸ್ಥಳದಲ್ಲಿ ಕುರಿಗಳನ್ನು ದೊಡ್ಡಿಯಲ್ಲಿ ಕೂಡಿ ಹಾಕುತ್ತಿದ್ದರು ಕಾಲಾನಂತರ ಈ ಊರಿಗೆ ದೊಡ್ಡಬೈಲು ಎಂಬುದು ಬಂದಿದೆ.[೬೩]

ನಂದಗಡ : ನಂದಗಡವು ಕಿತ್ತೂರು ಸಂಸ್ಥಾನ ಕಾಲದಲ್ಲಿ ಆಡಳಿತ ಕೇಂದ್ರವಾಗಿದ್ದು, ಸುಮಾರು ೧೪ ಹಳ್ಳಿಗಳು ಈ ಊರಿನ ಆಡಳಿತಕ್ಕೆ ಒಳಪಟ್ಟಿತ್ತೆಂದು ತಿಳಿದುಬರುತ್ತದೆ. ಈ ಊರಿಗೆ ಮೊದಲು ಆನಂದಗಡ ಎಂದು ಕರೆಯುತ್ತಿದ್ದರು. ಇಲ್ಲಿ ಮಲ್ಲಸರ್ಜನನು ಪ್ರತಾಪರಾವ್ ಬಹದ್ದೂರ್ ಎಂಬ ಪದವಿಯನ್ನ ಪಡೆದಿದ್ದಕ್ಕಾಗಿ ಈ ಊರಿನಲ್ಲಿ ಪ್ರತಾಪಗಡ ಎಂಬ ಕೋಟೆಯನ್ನ ಕಟ್ಟಿಸಿದನು. ಈ ಕೋಟೆಯ ಪಕ್ಕದಲ್ಲಿ ಬಾವಿಯಿದೆ. ಈ ಕೋಟೆಯಿಂದ ಕಿತ್ತೂರು ಸಂಸ್ಥಾನಕ್ಕೆ ಮಾರ್ಗ ವಿತ್ತೆಂದು ಇಲ್ಲಿಯ ಜನರ ಅಭಿಪ್ರಾಯ. ಮಲ್ಲಸರ್ಜನನ್ನ ಪೇಶ್ವೆ ಸೈನಿಕರು ಬಂಧಿಸಲು ಬಂದಾಗ ಹಲಸಿ ಮತ್ತು ನಂದಗಡಗಳಲ್ಲಿ ಅವಿತುಕೊಳ್ಳುತ್ತಿದ್ದನೆಂದು ತಿಳಿದುಬರುತ್ತದೆ. ಈ ಊರು ಕಿತ್ತೂರಿನಿಂದ ಸುಮಾರು ೩೦ ಕಿ.ಮೀ ದೂರದಲ್ಲಿದೆ.[೬೪]

ನಿಜನಕೊಡ್ಲು : ಈ ಗ್ರಾಮವು ಬೆಳಗಾಂವ ಜಿಲ್ಲೆಯ ಖಾನಾಪುರ ತಾಲೂಕಿನ ದಕ್ಷಿಣ ಪೂರ್ವದಲ್ಲಿರುವ ಗ್ರಾಮ. ಇಂದು ಇದು ಗ್ರಾಮ ಪಂಚಾಯಿತಿಯ ಕೇಂದ್ರವಾಗಿದ್ದು, ತಾಲೂಕು ಕೇಂದ್ರದಿಂದ ೧೭ ಕಿ.ಮೀ. ಹಾಗೂ ಜಿಲ್ಲಾ ಕೇಂದ್ರದಿಂದ ೪೭ ಕಿ.ಮೀ ಮತ್ತು ಕಿತ್ತೂರಿನಿಂದ ೨೦ ಕಿ.ಮೀ ದೂರದಲ್ಲಿದೆ. ಈ ಊರಿಗೆ ಮೊದಲು ನಂಜಿನಕೊಡಲು ಎಂದು ಕರೆಯುತ್ತಿದ್ದರು. ಕಾರಣ ಈ ಗ್ರಾಮದ ಸುತ್ತಮುತ್ತಲು ಇರುವ ಭೂಮಿಯು ಬಹಳ ಪ್ರಮಾಣದ ನಂಜನ್ನು ಹೊಂದಿರುವುದರಿಂದ, ಈ ಊರಿಗೆ ನಂಜಿನಕೊಡಲು ಎಂದು ಕರೆಯುತ್ತಾರೆ. ಈ ಊರು ಅರಣ್ಯದ ಮಧ್ಯದಲ್ಲಿರುವದರಿಂದ ಹಾಗೂ ಕಿತ್ತೂರು ಸಂಸ್ಥಾನದ ಹಾಗೂ ನಂದಗಡದ ನಡುವೆ ಸಂಬಂಧವನ್ನು ಬೆಳೆಸುವಾಗ ಈ ಊರಿನ ಮೂಲಕವೇ ಹೋಗಬೇಕಾಗಿತ್ತು, ಇಲ್ಲಿ ಕೂಡಾ ಚಾಕರಿ ಭೂಮಿಯನ್ನ ನೀಡಲಾಗಿದೆ.

ಬಸರಿಕಟ್ಟಿ : ಈ ಗ್ರಾಮವು ನಂದಗಡ ಕರ್ಯಾತನಲ್ಲಿ ಬರುವ ಗ್ರಾಮವಾಗಿದೆ. ಈ ಗ್ರಾಮದಲ್ಲಿ ಬಸರಿ ಎಂಬ ಒಂದು ಜಾತಿಯ ಮರಗಳು ಹೇರಳವಾಗಿದ್ದು ಈ ಮರಗಳಿಂದಾಗಿಯೇ ಈ ಊರಿಗೆ ಬಸರಿಕಟ್ಟಿ ಎಂಬ ಹೆಸರು ಬಂದಿದೆ.[೬೫]

ಬೇಕವಾಡ : ಬೇಕವಾಡವು ನಂದಗಡ ಕರ್ಯಾತನಲ್ಲಿ ಬರುವ ಗ್ರಾಮ ಈ ಊರಿನ ಐತಿಹಾಸಿ ಹಿನ್ನಲೆ ಎಂದರೆ ಈ ಊರಿನ ಜನ ಮೂಲತಃ ಸತಾರ ಜಿಲ್ಲೆಯ ವಾಯುವ್ಯ ಪ್ರಾಂತ್ಯದಿಂದ ಬಂದವರು. ಇಲ್ಲಿಯ ಸಮೀಪವಿರುವ ಬಿದ್ದರಬಾಯಿ ಪಕ್ಕದಲ್ಲಿರುವ ಕೌರಿಗುಡ್ಡದಲ್ಲಿ ವಾಸಿಸಲು ಪ್ರಾರಂಭಿಸಿದರು. ಈ ಊರಿನ ಜನ ಶಿಕಾರಿ ಮಾಡಲು ಹೋದಾಗ ಇವರ

ಜೊತೆಗಿದ್ದ ಬೇಟೆ ನಾಯಿಗಳನ್ನ ಆ ಪ್ರದೇಶದಲ್ಲಿದ್ದ ಮಾಳ ಬೆಕ್ಕಗಳು ನಾಯಿಗಳನ್ನ ಅಂಜಿಸಿದವು. ಆದ್ದರಿಂದ ಈ ಊರಿಗೆ ಬೇಕವಾಡ ಎಂಬ ಹೆಸರು ಬರಲು ಕಾರಣವಾಯಿತು. ಈ ಊರಿನ ಹೊರಭಾಗದಲ್ಲಿ ಒಂದು ಕಚ್ಚಾರಸ್ತೆ ಇದ್ದು ಅದನ್ನು ಆನಂದಗಡ ಮತ್ತು ಕಿತ್ತೂರನ್ನ ಸಂಪರ್ಕಿಸುವ ರಸ್ತೆ ಎಂದು ಕರೆಯುತ್ತಾರೆ. ಹಿಂದೆ ಮಲ್ಲಸರ್ಜನು ಈ ಮಾರ್ಗದ ಮೂಲಕ ವಾಗಿಯೇ ಹಲಸಿ ಮತ್ತು ನಂದಗಡಕ್ಕೆ ಪ್ರಯಾಣ ಬೆಳಸುತ್ತಿದ್ದನು.[೬೬]

ಈ ಊರಿನ ಪಕ್ಕದಲ್ಲಿ ಖೈರವಾಡವೊಂದಿದೆ. ಇದು ಗುಡ್ಡದ ಮೇಲೆರುವ ಒಂದು ಸಣ್ಣ ಗ್ರಾಮ. ಮೊದಲು ಈ ಎರಡು ಗ್ರಾಮದವರು ಕೂಡಿ ಲಕ್ಷ್ಮೀ ಜಾತ್ರೆಗಳನ್ನ ಆಚರಿಸುತ್ತಿದ್ದರು. ಆದರೆ ಇವರಿಬ್ಬರಲ್ಲಿ ಉಂಟಾದ ಜಗಳದಿಂದ ಈ ಎರಡು ಗ್ರಾಮಗಳು ಬೇರೆ ಬೇರೆ ಯಾಗಿ ಬೇಕವಾಡ ಮತ್ತು ಖೈರವಾಡ ಎಂಬ ಗ್ರಾಮಗಳಾಯಿತು ಎಂಬುದು ಸ್ಥಳೀಯರ ಅಭಿಪ್ರಾಯ.

ಸಾಗರಿ : ಈ ಊರು ನಂದಗಡದ ಪೂರ್ವ ದಿಕ್ಕಿಯಿದ್ದು, ನಂದಗಡದಿಂದ ೬ ಕಿ.ಮೀ ದೂರದಲ್ಲಿದೆ. ಇಲ್ಲಿ ಪುರಾತನ ಕಲ್ಮೇಶ್ವರ ಗುಡಿಯಿದೆ. ಈ ಊರಿನಲ್ಲಿ ಮರಾಠಿ ಭಾಷೆಯನ್ನಾಡುವ ಹೆಚ್ಚು ಮಂದಿಯನ್ನ ಕಾಣುತ್ತೇವೆ. ಈ ಊರಿನಲ್ಲೂ ಕಿತ್ತೂರು ಸಂಸ್ಥಾನ ಕಾಲದ ಚಾಕರಿ ಭೂಮಿಯನ್ನ ನೀಡಿರುವುದರಿಂದ ಕಿತ್ತೂರು ಸಂಸ್ಥಾನಕ್ಕೆ ಒಳಪಟ್ಟಿತ್ತೆಂದು ತಿಳಿದುಬರುತ್ತದೆ.

೪.೪.೭. ನೇಸರಗಿ ಕರ್ಯಾತ

ಕೊಲ್ಲೂದ್ದರು : ಈ ಊರು ನೇಸರಗಿ ಕರ್ಯಾತನಲ್ಲಿ ಬರುವ ಒಂದು ಗ್ರಾಮವಾಗಿದೆ. ಇದು ನೇಸರಗಿಯಿಂದ ಸುಮಾರು ೪ ಕಿ.ಮೀ ದೂರದಲ್ಲಿದೆ. ಈ ಊರಿನಲ್ಲಿ ಒಂದು ಕೊಳವಿದ್ದು, ಸದಾ ಕಾಲವು ನೀರು ಹರಿಯುತ್ತಿರುವದರಿಂದ ಈ ಊರಿಗೆ ಕೊಳದೂರು ಎಂದು ಕರೆಯುತ್ತಿದ್ದರು. ಕಾಲಕ್ರಮೇಣ ಈ ಊರನ್ನ ಕೊಲ್ಲೂದ್ದರು ಎಂದು ಕರೆಯುತ್ತಾರೆ. ಈ ಊರಿಗೆ ಕಿತ್ತೂರು ಭಾಗ ಎಂದೇ ಕರೆಯುತ್ತಾರೆ. ಈ ಊರಿನಲ್ಲಿ ಕೂಡಾ ಚಾಕರಿ ಭೂಮಿಗಳಿದ್ದು, ಹನಮಂತ ದೇವರ ಹಾಗೂ ಬಸವಣ್ಣನ ದೇವರ ಪೂಜಾಕಾರ್ಯಗಳಿಗೆ ಚಾಕರಿ ಭೂಮಿಯನ್ನು ನೀಡಿದ್ದಾರೆ. ಈ ಊರಿನಿಂದ ದಕ್ಷಿಣ ದಿಕ್ಕಿಗೆ ಕಿತ್ತೂರು ಇದೆ, ಸುಮಾರು ೫೦ ಕಿ.ಮೀ. ದೂರದಲ್ಲಿದೆ.[೬೭]

ಗಜುಬಿನಹಾಳ : ಈ ಗ್ರಾಮವು ನೇಸರಗಿ ಕರ್ಯಾತಿನಲ್ಲಿ ಬರುತ್ತದೆ. ಒಂದು ದಂತಕತೆಯ ಪ್ರಕಾರ ಗಜಾಸುರ ಮತ್ತು ಗಜಮುನಿ ಎಂಬ ರಾಕ್ಷಸ ದಂಪತಿಗಳು ಇಲ್ಲಿ ವಾಸವಾಗಿದ್ದರಂತೆ ಆದ್ದರಿಂದ ಈ ಸ್ಥಳಕ್ಕೆ ಗಜಬಿನ ಹಾಳ ಎಂಬ ಹೆಸರು ಬಂದಿದೆ.

ನೇಸರಗಿ : ನೇಸರಗಿ ಗ್ರಾಮವು ಕಿತ್ತೂರಿನ ಆಡಳಿತ ವ್ಯಾಪ್ತಿಯಲ್ಲಿ ಬಂದಿದ್ದು, ಇಲ್ಲಿ ಎರಡು ಶಾಸನಗಳು ದೊರೆತಿವೆ. ಇದು ಸವದತ್ತಿ ರಟ್ಟರ ಕಾಲದ ಶಾಸನವಾಗಿದೆ. ಕ್ರಿ.ಶ. ೧೨೧೯ರಲ್ಲಿ ನಾಲ್ಕನೇ ಕಾರ್ತವೀರ್ಯನು ಹೊರಡಿಸಿದ ಶೈವ ಶಾಸನವಾಗಿದೆ. ಕಾರ್ತವೀರ್ಯನು ತನ್ನ ರಾಜಧಾನಿ ವೇಣುಗ್ರಾಮ(ಬೆಳಗಾಂವ)ದಿಂದ ನೇಸರಗಿಯವರೆಗೆ ಆಳ್ವಿಕೆ ನಡೆಸುತ್ತಿದ್ದಾಗ ಅಬ್ಬಯ್ಯ ನಾಯಕ ಮತ್ತು ಆತನ ಪತ್ನಿ ಮಾಗಿದೇವಿ ಎಂಬುವರ ಸವಿ ನೆನಪಿಗಾಗಿ ಹಬ್ಬೇಶ್ವರ

ಮತ್ತು ಮಾಣಿಕೇಶ್ವರ ಎಂಬ ದೇವಾಲಯವನ್ನು ಕಟ್ಟಿಸಿ ಅದರ ಅಭಿವೃದ್ಧಿಗಾಗಿ ದಾನ ದತ್ತಿಯನ್ನು ಬಿಟ್ಟನೆಂದು ಈ ಶಾಸನದಲ್ಲಿ ತಿಳಿಸಲಾಗಿದೆ.

ದೇಶನೂರು : ದೇಶನೂರು ನೇಸರಗಿ ಕರ್ಯಾತನಲ್ಲಿ ಬರುವ ಗ್ರಾಮ ಈ ಊರಿಗೆ ದೇಶನೂರು ಎಂಬ ಹೆಸರು ಬರಲು ಕಾರಣ, ದೇಸಾಯಿಯವರು ಆಡಳಿತ ಮಾಡಿದ ಊರಾದ್ದರಿಂದ ದೇಶನೂರು ಎಂಬ ಹೆಸರು ಬಂದಿದೆ.

ಕಿತ್ತೂರು ಸಂಸ್ಥಾನದ ದೊರೆ ಮಾಳ್ವರುದ್ರಸರ್ಜನು ಉತ್ತರ ಭಾರತ ಪ್ರವಾಸ ಕೈಗೊಂಡಾಗ ಒಬ್ಬ ಮುಸಲ್ಮಾನ್ ನೃತ್ಯಗಾತಿಯ ಸೌಂದರ್ಯಕ್ಕೆ ಮಾರು ಹೋದ ಈತನು ಆಕೆಯನ್ನು ವಿವಾಹ ವಾಗಿ ಕಿತ್ತೂರಿಗೆ ಆಗಮಿಸಿದಾಗ ಕಿತ್ತೂರು ಸಂಸ್ಥಾನದ ಜನರು ಮತ್ತು ರಾಜಗುರುಗಳು ಇದನ್ನು ವಿರೋಧಿಸಿದಾಗ ಮಾಳ್ವರುದ್ರಸರ್ಜ ಮತ್ತು ಆತನ ಪತ್ನಿ (ಮುಸಲ್ಮಾನ್) ಇಬ್ಬರೂ ಬಂದು, ದೇಶನೂರಿನಲ್ಲಿ ವಾಸಮಾಡಲಿಕ್ಕೆ ಪ್ರಾರಂಭಿಸಿದರು. ಈ ಊರು ಅಂದಿನ ಕಾಲದ ಕಿತ್ತೂರು ಸಂಸ್ಥಾನದ ೨ನೇ ರಾಜಧಾನಿಯಾಗಿತ್ತು. ಕಿತ್ತೂರು ಮಠಕ್ಕೆ ಸಂಬಂಧಿಸಿದ ಇಲ್ಲಿಯ ವಿರಕ್ತಮಠ ದಲ್ಲಿ ಆ ಮುಸಲ್ಮಾನ್ ಹೆಣ್ಣುಮಗಳಿಗೆ ಲಿಂಗ ದೀಕ್ಷೆ ಮಾಡಿಸಿ 'ಅಮರಾವತಿ'ಯೆಂದು (ನಿರಂಜನಿ) ನಾಮಕರಣ ಮಾಡಿದರು. ಇವರು ವಾಸಿಸುವ ಅರಮನೆಗೆ ಇದನ್ನು ಅಮರೆವ್ವನ ಗುಡಿಯೆಂದು ಕರೆಯುತ್ತಾರೆ. ಈಗ ಅದಕ್ಕೆ ನಿರಂಜನಿ ಮಹಲ್ ಎಂದು ಕರೆಯುತ್ತಾರೆ.

ಈ ಊರಿನಲ್ಲಿ ಒಟ್ಟು ಆರು ಗಢಗಳಿವೆ, ಇದರ ಮೇಲೆ ಸೈನಿಕರು ನಿಂತು ವೈರಿಗಳು ಆಕ್ರಮಣ ಮಾಡುವುದನ್ನು ಅಥವಾ ದೂರದಿಂದ ಬರುವುದನ್ನ ಪತ್ತೆ ಹಚ್ಚಿ, ಊರಿನಲ್ಲಿರುವ ಸೈನಿಕರಿಗೆ ತಿಳಿಸುತ್ತಿದ್ದರು. ಈ ಊರಿನಲ್ಲಿ ಇನ್ನು ಅನೇಕ ಕುರುಹುಗಳಿವೆ. ಈ ಊರಿನಿಂದ ಕಿತ್ತೂರಿಗೆ ಬರಲು ಸುರಂಗ ಮಾರ್ಗದ ವ್ಯವಸ್ಥೆಯಿತ್ತಂತೆ. ಹೀಗೆ ಕಿತ್ತೂರಿಗೆ ಸಂಬಂಧಿಸಿದ ಅನೇಕ ಚಾಕರಿ ಭೂಮಿಗಳನ್ನು ಇಲ್ಲಿ ನೀಡಲಾಗಿದೆ. ತಳವಾರರಿಗೆ, ಪೂಜಾರರಿಗೆ, ಗೌಡರಿಗೆ, ಕುಲಕರ್ಣಿಗಳಿಗೆ, ಕೋಲ್ಕಾರರಿಗೆ ಹೀಗೆ ಅನೇಕರಿಗೆ ಕಿತ್ತೂರು ಸಂಸ್ಥಾನದ ಕಾಲದಲ್ಲಿ ಭೂಮಿ ಯನ್ನು ನೀಡಿದ ಮಾಹಿತಿಗಳಿವೆ. ಈ ಊರು ಕಿತ್ತೂರಿನಿಂದ ಉತ್ತರ ದಿಕ್ಕಿಗಿದ್ದು, ಸುಮಾರು ೫೫ ಕಿ.ಮೀ ದೂರದಲ್ಲಿದೆ. ಈ ಊರು ಕಿತ್ತೂರು ಸಂಸ್ಥಾನದ ಗಡಿಯಾಗಿತ್ತೆಂದು ಕೆಲವರು ಅಭಿಪ್ರಾಯ ಪಡುತ್ತಾರೆ.[೬೮]

ಈ ಊರು ಸುತ್ತಮುತ್ತಲಿನ ಎತ್ತರವಾದ ಗುಡ್ಡಗಾಡಿನ ಪ್ರದೇಶದಲ್ಲಿ ದೇಶಗತಿ ದೇಸಾಯ ಮನೆತನಗಳು ಇರುತ್ತವೆ. ಕಿತ್ತೂರು ಸಂಸ್ಥಾನದಿಂದ ಈ ಪ್ರದೇಶವನ್ನು ನೋಡಿ ಕೊಳ್ಳಲು ಒಬ್ಬ ವ್ಯಕ್ತಿಯನ್ನು ನೇಮಿಸಿದ್ದರು. ಹೀಗಾಗಿ ಈ ಸ್ಥಳ ದೇಸಾಯಿ+ಊರು. ದೇಶನೂರು ಎಂಬ ಹೆಸರು ಬಂದಿರಬಹುದು ಎಂಬುದು ಸ್ಥಳಿಯ ಜನರ ಅಭಿಪ್ರಾಯ.[೬೯]

ನಾಗೇನಹಟ್ಟಿ : ಈ ಗ್ರಾಮವು ಕೂಡ ನೇಸರಗಿ ಕರ್ಯಾತಿನಲ್ಲಿ ಬರುವ ಗ್ರಾಮವಾಗಿದೆ. ಇಲ್ಲಿ ನಾಗ ಎಂಬ ವ್ಯಕ್ತಿಯು ಬಹಳ ಕಾಲ ವಾಸಿಸಿರುವದರಿಂದ, ಈ ಊರಿಗೆ ನಾಗೇನ

ಹಟ್ಟಿ ಎಂಬ ಹೆಸರು ಬಂದಿದೆ. ನಾಗಯ್ಯನ + ಹಟ್ಟಿ > ನಾಗಯ್ಯನಹಟ್ಟಿ ಆಡುಮಾತಿನಲ್ಲಿ ಈ ಗ್ರಾಮವು ನಾಗೇನಹಟ್ಟಿ ಎಂದಾಗಿದೆ.

ಮತ್ತಿಕೊಪ್ಪ : ಈ ಊರಿನಲ್ಲಿ ಮತ್ತಿ ಎಂಬ ಒಂದು ಜಾತಿಯ ಮರಗಳು ಹೇರಳವಾಗಿ ಇದ್ದವು ಆದ್ದರಿಂದ ಈ ಊರಿಗೆ ಮತ್ತಿಕೊಪ್ಪ ಎಂಬ ಹೆಸರು ಬಂದಿದೆ ಇದು ಸಸ್ಯವಾಚಿ ನಾಮವಾಗಿದೆ.[೨೦] ಸಸ್ಯವರ್ಗಕ್ಕೆ ಸೇರಿದ ಒಂದು ಜಾತಿಯ ಮತ್ತಿಯ ಮರಗಳು ಹೇರಳವಾಗಿ ಈ ಊರಿನಲ್ಲಿ ದೊರೆಯುವುದರಿಂದ ಈ ಊರಿಗೆ ಮತ್ತಿಕೊಪ್ಪ ಎಂಬ ಸ್ಥಳನಾಮ ಬಂದಿರಬಹುದು.

ಮಹರೆ : ಮಹರೆ ಗ್ರಾಮವು ನೇಸರಗಿ ಕರ್ಯಾತನಲ್ಲಿ ಬರುವ ಗ್ರಾಮವಾಗಿದೆ. ನೇಸರಗಿ ಯಿಂದ ಸುಮಾರು ೭ ಕಿ.ಮೀ ದೂರದಲ್ಲಿದೆ. ಕಿತ್ತೂರು ಸಂಸ್ಥಾನಕ್ಕೆ ಸಂಬಂಧಿಸಿದ ಕೆಲವು ಕುರುಹುಗಳು ದೊರೆತಿವೆ. ಈ ಊರಿನ ಹೊರಭಾಗದಲ್ಲಿ ಒಂದು ಹುಡೆಯಿದ್ದು, ಇದರ ಮೇಲೆ ನಿಂತು ವೈರಿಗಳು ಬರುವುದನ್ನ ಸೈನಿಕರು ನೋಡುತ್ತಿದ್ದರು. ಈ ಊರಿನಲ್ಲಿ ದ್ಯಾಮವ್ವನ ಗುಡಿ, ಹನಮಂತನ ಗುಡಿಗಳಿವೆ. ಇವುಗಳ ಉಸ್ತುವಾರಿ ನೋಡಲು ಚಾಕರಿ ಭೂಮಿಗಳನ್ನು ನೀಡಿದ್ದು, ಹಳಬರು, ಕೋಲ್ಕಾರರು, ಪೂಜಾರರು ಇದರ ಫಲಾನುಭವಿಗಳಾಗಿದ್ದಾರೆ. ಈ ಗ್ರಾಮವು ದೇಶನೂರಿನ ಪಕ್ಕದಲ್ಲೇ ಇದೆ.[೨೧]

ಮ್ಯಾಕಲ ಮರಡಿ : ಈ ಊರು ಕೊಣ್ಣೂರಿನ ಗ್ರಾಮದ ಒಂದು ಭಾಗವಾಗಿದ್ದು, ಎತ್ತರದ ಪ್ರದೇಶದಲ್ಲಿ ಜನವಸತಿ ಆರಂಭಿಸಿದ್ದರಿಂದ ಈ ಊರಿಗೆ ಮೇಲಿನ+ಮರಡಿ ಎಂಬ ಆಡು ಮಾತಿನಲ್ಲಿ ಬದಲಾವಣೆಯಾಗಿ ಮ್ಯಾಕಲ್ ಮರಡಿ ಎಂದು ಸೂಚಿಸುವ ಸ್ಥಳನಾಮವಾಗಿದೆ.

ವಣ್ಣೂರು : ವಣ್ಣೂರು ನೇಸರಗಿ ಕರ್ಯಾತನಲ್ಲಿ ಬರುವ ಗ್ರಾಮವಾಗಿದ್ದು, ಇಲ್ಲಿ ಎರಡು ಶಾಸನಗಳು ದೊರೆತಿವೆ. ಒಂದು ಕಲ್ಯಾಣ ಚಾಲುಕ್ಯರ ಕಾಲದ ೬ನೇ ವಿಕ್ರಮಾದಿತ್ಯ ತ್ರಿಭುವನ ಮಲ್ಲದೇವನು ಕ್ರಿ.ಶ. ೧೧೧೪ರಲ್ಲಿ ಹೊರಡಿಸಿದ ಶೈವ ಶಾಸನವಾಗಿದೆ. ೬ನೇ ವಿಕ್ರಮಾದಿತ್ಯನು ರಾಜಧಾನಿ ಜಯಂತಿಪುರದಲ್ಲಿ ಆಳ್ವಿಕೆ ಮಾಡುತ್ತಿದ್ದಾಗ ಅಂದಿನ ಯುವರಾಜ ಮಹಾಮಾಂಡಲೇಶ್ವರ ಜಯಸಿಂಹದೇವನು ಕೂಹುಂಡಿ ಮೂರುಸಾವಿರ ಎಂಬ ವಿಭಾಗವನ್ನು ಆಳ್ವಿಕೆ ನಡೆಸುತ್ತಿದ್ದನು. ಚೋಳದೇವ ಮತ್ತು ಎಲ್ಲನಾಡಪ್ರಭುಗಾವುಂಡರ ಮತ್ತು ನಾಡಗಾವುಂಡರ ಕೋರಿಕೆಯ ಮೇರೆಗೆ ಕುಂದರಗಿ-೭೦ ಕಂಪಣಕ್ಕೆ ಸೇರಿದ ಓಣನೂರು (ವಣ್ಣೂರು) ಅಲ್ಲಿಯ ಹರಿಹರೇಶ್ವರ ದೇವರ ಆಚಾರ್ಯ ಕಾಳಾಮುಖ, ಗುರು ಬಾಲಚಂದ್ರ ಪಚಿಡಿತ ದೇವರ ಪಾದ ಪೂಜೆ ಮಾಡಿ ಆತನ ಹೆಸರಿನಲ್ಲಿ ಜಯಸಿಂಹೇಶ್ವರ ಎಂಬ ದೇವಾಲಯವನ್ನು ಕಟ್ಟಿಸಿ, ೮ ಲಿಂಗಗಳನ್ನು ಪ್ರತಿಷ್ಠಾಪಿಸಿ ದನೆಂದು ಈ ದೇವಾಲಯದ ಅಭಿವೃದ್ಧಿ ಪೂಜೆ-ಪುನಸ್ಕಾರ, ಸನ್ಯಾಸಿಗಳ ಉದರ ಪೋಷಣೆ ಹಾಗೂ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಪ್ರಗತಿಗಾಗಿ ಜಮೀನು ಮತ್ತು ಬೆಣ್ಣೆಕುಪ್ಪೆ ಎಂಬ ಗ್ರಾಮವನ್ನು ದತ್ತಿ ಬಿಟ್ಟನೆಂದು ತಿಳಿಸುತ್ತದೆ. ಸರಸ್ವತಿಯ ಆರಾಧಕನೆಂದು ವರ್ಣಿತನಾಗಿದ್ದ, ಕನ್ನೋಜನ ಮಗ ಮೂಲವಳ್ಳಿಯ ಜೋಗೋಜನು ಈ ಶಾಸನವನ್ನು ಬರೆದನೆಂದು ತಿಳಿಸುತ್ತದೆ.

ಇದೇ ದೇವಾಲಯದ ಹೊರಭಾಗದಲ್ಲಿ ೧೫ನೇ ಶತಮಾನದ ಮತ್ತೊಂದು ಶಾಸನವಿದ್ದು, ಇದು ಕೂಡಾ ಶೈವ ಧರ್ಮಕ್ಕೆ ಸಂಬಂಧಿಸಿದೆ. ಮಹಾ ಧರ್ಮಸ್ಥಳ ಹಿರಿಯ ವಣ್ಣೂರಿನ ಮಹಾಪ್ರಭು, ಕಲ್ಲಗಾವುಂಡನು ಕರಿದೇವರ ಚೈತ್ರ ಪೂಜೆ, ಶಿವಾರ್ಚನೆ, ರಂಗಪೂಜೆ ಮತ್ತು ಜಂಗಮರಾಧನೆಗಾಗಿ ೨೦೦ ಕಮ್ಮ ಭೂಮಿಯನ್ನು ದಾನ ಮಾಡಿದನು.

ಮಾಸ್ತಮರಡಿ : ಇಲ್ಲಿ ಹಿಂದೊಮ್ಮೆ ಮಹಾಸತಿಯಿಂದಾಗಿ ಈ ಊರಿಗೆ ಈ ಹೆಸರು ಬಂದಿದೆ. ಮಹಾಸತಿ + ಮರಡಿ = ಮಾಸಮರಡಿ ಆದರೆ ಈ ಊರಿನಲ್ಲಿ ಮಾಸ್ತಿಕಲ್ಲು ಒಂದು ಇರುವುದರಿಂದ ಇದಕ್ಕೆ ಮಸ್ತಮರಡಿ ಎಂದು ಹೆಸರು ಬಂದಿರುವ ಸಾಧ್ಯತೆ ಇದೆ.

ಹಣಬರಹಟ್ಟಿ : ಈ ಗ್ರಾಮವು ನೇಸರಗಿ ಕರ್ಯಾತಿನಲ್ಲಿ ಬರುವ ಗ್ರಾಮವಾಗಿದೆ. ಈ ಗ್ರಾಮದಲ್ಲಿ ಹಣಬರ ಎಂಬ ಜನಾಂಗವು ನೆಲಸಿರುವುದರಿಂದ ಈ ಊರಿಗೆ ಹಣಬರಹಟ್ಟಿ ಎಂಬ ಹೆಸರು ಬಂದಿರುವ ಸಾಧ್ಯತೆ ಇದೆ. ಇಲ್ಲಿ ಒಂದು ಜನಾಂಗದ ವಾಸ್ತವ್ಯವನ್ನು ಸೂಚಿಸುವ ಗ್ರಾಮವಾಗಿದೆ.

ಹೊನ್ನಿಹಾಳ : ಈ ಊರಿನ ಸುತ್ತಲು ಹೊನ್ನಿಮರಗಳಿಂದ ಕೂಡಿರುವ ಊರಾಗಿರುವದರಿಂದ ಈ ಸ್ಥಳಕ್ಕೆ ಹೊನ್ನಿಹಾಳ ಹೀಗೆ ಸಸ್ಯವಾಚಿ ಶಬ್ಧಗಳು ನಿರ್ದಿಷ್ಠ ಅರ್ಥಕೊಡುವದರಿಂದ, ಹಾಗೂ ಈ ಪ್ರಾಂತ್ಯದಲ್ಲಿ ನಿಸರ್ಗ ಸಂಪತ್ತು ಹೇರಳವಾಗಿರುವುದರಿಂದ ಇಂತಹ ಸ್ಥಳನಾಮಗಳು ಬಳಕೆಯಲ್ಲಿರಬಹದು.

೪.೫.೮. ಪುಟಗಾಂವ ಕರ್ಯಾತ

ಇಟಗಿ : ಇಟ್ಟ – ಒಂದು ಜಾತಿಯ ಮರವಾಗಿದ್ದು, ಹಳದಿ ಬಣ್ಣದ ಹಣ್ಣನ್ನು ಬಿಡುತ್ತದೆ. ಈ ಜಾತಿಯ ಮರಗಳು ಹೆಚ್ಚಾಗಿ ಇರುವುದರಿಂದ ಈ ಹೆಸರು ಬಂದಿರಬಹುದು ಇಟ್ಟ+ಕೆಯ್ – ಇಟ್ಟಿಕೆ. ಇಟ್ಟಿಗೆ – ಇಟಿಗೆ – ಇಟಗಿ ಎಂದು ಆಗಿರಬಹುದು ಇದು ಸಸ್ಯವಾಚಿ ನಿರ್ದಿಷ್ಟವಾಗುತ್ತದೆ. ಇದೊಂದು ಸಂಭಾವ್ಯ ನಿಷ್ಪತ್ತಿ ಎಂದರೆ

ವಿಟ್ಟಲನ + ಕೆಯ್ – ಇಟ್ಟಲಕೆಯ್

ಇಟ್ಟ + ಕೆಯ್ – ಇಟ್ಟ + ಗೆಯ್ ಇಟಗಿಯಾಗಿರಬಹುದು. ಆಗ ಇದು ವ್ಯಕ್ತಿ ಮೂಲದಿಂದ ಸ್ಥಳವಾಚಿಯಾಗುತ್ತದೆ.

ಕ್ಯಾರಕೊಪ್ಪ : ಈ ಗ್ರಾಮವು ಪುಟಗಾಂವ ಕರ್ಯಾತನಲ್ಲಿ ಬರುವ ಒಂದು ಸಣ್ಣ ಗ್ರಾಮ. ಇದು ಕಿತ್ತೂರು ಸಂಸ್ಥಾನದ ಕಾಲದಲ್ಲಿ ಸಂಸ್ಥಾನಕ್ಕೆ ತಮ್ಮನ್ನು ತೊಡಗಿಸಿಕೊಂಡ ಗ್ರಾಮವಾಗಿತ್ತು. ಆದ್ದರಿಂದ ಆಂಗ್ಲರು ಈ ಗ್ರಾಮವನ್ನು ಹಾಳು ಮಾಡಿದರು. ಹೀಗಾಗಿ ಜನರು ವೀರಾಪುರ ಮತ್ತು ಪಕ್ಕದ ಹಳ್ಳಿಗಳಿಗೆ ಹೋಗಿ ವಾಸಿಸಲಾರಂಭಿಸಿದರು. ಅಂದಿನ ಕಾಲದಲ್ಲಿ ಬಸಪ್ಪ ತಳವಾರ ಕಿತ್ತೂರು ಸಂಸ್ಥಾನದ ತಳವಾರನಾಗಿ ಈ ಊರಿನಲ್ಲಿ ಕೆಲಸ ಮಾಡುತ್ತಿದ್ದನು.

ಇವರಿಗೆ ಇನಾಮು ಭೂಮಿಗಳನ್ನು ನೀಡಿದ್ದರು. ಅದರಂತೆ ಕುಲಕರ್ಣಿಯರಿಗೆ, ಗೌಡರಿಗೆ ಚಾಕರಿ ಭೂಮಿಗಳನ್ನು ನೀಡಿದ್ದರು.[೨೨]

ಗಜಪತಿ : ಇದು ಪಾರಿಶ್ವಾಡದಿಂದ ೩ ಕಿ.ಮೀ ದೂರದಲ್ಲಿ ಈ ಊರಿಗೆ ಗಜಪತಿ ಎಂಬ ಹೆಸರು ಬರಲು ಕಾರಣವೆನೆಂದರೆ ಕೆಳದಿಯ ದೊರೆಯು ಒಮ್ಮೆ ಈ ಊರಿನ ಮೂಲಕ ಗಜಸೈನ್ಯವನ್ನು ಕೊಂಡ್ಯೊಯುವಾಗ ವಾಸ್ತವ್ಯ ಮಾಡಿದ ಪ್ರದೇಶವಾದುದರಿಂದ ಈ ಊರಿಗೆ ಗಜಪತಿ, ಗೆಜಪತಿ ಎಂಬ ಹೆಸರು ಬಂದಿದೆ. ಚೆನ್ನಮ್ಮನ ಕಾಲದಲ್ಲಿ ಬಿಜಾಪುರದಿಂದ ಅನೇಕ ಜನ ಬಂದು ಈ ಊರಿನಲ್ಲಿ ವಾಸ್ತವ್ಯ ಮಾಡಿದರೆಂದು ಹಳ್ಳಿಯ ಜನ ಅಭಿಪ್ರಾಯ ಪಡುತ್ತಾರೆ. ಈ ಊರು ಕಿತ್ತೂರು ಸಂಸ್ಥಾನದ ಕಾಲದಲ್ಲಿ ಪ್ರಮುಖ ಸ್ಥಳವಾಗಿತ್ತೆಂದು ತಿಳಿದು ಬರುತ್ತದೆ. ಈ ಊರಿನಲ್ಲಿ ದೇಸಾಯಿಯವರ ಒಂದು ವಾಡೆಯಿದ್ದು, ಸ್ಥಳೀಯ ಅಭಿಪ್ರಾಯದಂತೆ ಇದು ಕಿತ್ತೂರು ಸಂಸ್ಥಾನಕ್ಕೆ ಸೇರಿರಬಹುದು.

ಗಾಡಿಕೊಪ್ಪ : ಈ ಗ್ರಾಮವು ಪುಟಗಾಂವ ಕರ್ಯಾತಿನಲ್ಲಿ ಬರುವ ಗ್ರಾಮ. ಇಲ್ಲಿ ಗಾಡಿ ಎಂಬ ಶಬ್ದಕ್ಕೆ ಚಕ್ಕಡಿ ಅಥವಾ ಬಂಡಿ ಎಂಬುದು ಸಾಮಾನುಗಳನ್ನಾಗಲಿ ಜನರನ್ನನಾಗಲಿ ಒಂದು ಕಡೆಯಿಂದ ಮತ್ತೊಂದು ಕಡೆ ಸಾಗಿಸಲು ಬಳಸುವ ವಾಹನ ವಾಗಿದೆ. ಈ ಊರಿನಲ್ಲಿ ವೃತ್ತಿಯಲ್ಲಿ ಬಡಿಗ ಜನಾಂಗವು ಹೆಚ್ಚಾಗಿರುವದರಿಂದ ಇವರು ಬಹುಶ ಗಾಡಿಗಳನ್ನು ತಯಾರಿಸುತ್ತಿದ್ದರು ಆದ್ದರಿಂದ ಈ ಊರಿಗೆ ಗಾಡಿಕೊಪ್ಪ ಎಂಬ ಹೆಸರು ಬಂದಿದೆ.[೨೩]

ಗೋಶಾನಟ್ಟಿ : ಬ್ರಿಟೀಷರ ದಾಖಲೆಗಳ ಪ್ರಕಾರ ಮಂಗ್ಯಾನಕೊಪ್ಪ ಎಂದು ಕರೆಯುತ್ತಿದ್ದರು. ಊರಿನ ರಸ್ತೆಯ ಪೂರ್ವ ಭಾಗದಲ್ಲಿ ಗೋಶಾನಟ್ಟಿ, ಪಶ್ಚಿಮ ಭಾಗದಲ್ಲಿ ಮಂಗ್ಯನಕೊಪ್ಪ ಎಂದು ಕರೆಯುತ್ತಿದ್ದರು. ಸಿದ್ದನಗುಡ್ಡದಿಂದ ಗೋಸಾವಿಗಳು (ಸಾಧು-ಸಂತರು)ಇಲ್ಲಿ ಒಂದುದಿನಗಳ ಕಾಲ ತಂಗುತ್ತಿದ್ದರು (ಗೋಸಾವಿ+ಹಟ್ಟಿ). ಈ ಶಬ್ದವು ಅಪಭ್ರಂಶವಾಗಿ ಗೋಶ್ಯಾನಹಟ್ಟಿ ಎಂದು ಆಗಿರಬಹುದು.[೨೪]

ತೊಲಗಿ : ಈ ಗ್ರಾಮವು ಪುಟಗಾಂವ ಕರ್ಯಾತನಲ್ಲಿ ಬರುವ ಗ್ರಾಮವಾಗಿದೆ. ಇಲ್ಲಿ ಕಿತ್ತೂರು ಸಂಸ್ಥಾನದಲ್ಲಿ ಕೆಲಸ ಮಾಡುವ ಅನೇಕ ಜನರಿದ್ದರು. ಈ ಕಾಲದಲ್ಲಿ ಆಂಗ್ಲರ ಕಂದಾಯ ಸಂಗ್ರಹಣೆಯ ಕೇಂದ್ರವು ಇದ್ದಿತ್ತು. ಯಾವಾಗ ಆಂಗ್ಲರಿಗೂ ಕಿತ್ತೂರು ಸಂಸ್ಥಾನಕ್ಕೂ ಭಿನ್ನಾಭಿ ಪ್ರಾಯ ಉಂಟಾಯಿತೊ, ಈ ಊರಿನ ಜನ ಆಂಗ್ಲರೇ ಬಿಟ್ಟು ತೊಲಗಿ ಎಂದು ವಿರೋಧಿಸಿ ಇಲ್ಲಿಯ ಕಂದಾಯ ಕೇಂದ್ರವನ್ನು ಲೂಟಿ ಮಾಡಿ ಸುಟ್ಟು ಹಾಕಿದರು. ಆದ್ದರಿಂದ ಈ ಊರಿಗೆ 'ತೊಲಗಿ' ಎಂಬ ಹೆಸರು ಬಂದಿರಬೇಕು. ಇಲ್ಲಿ ಸುಮಾರು ೧೮೦೦ ಎಕರೆಯಷ್ಟು ಇನಾಮು ಭೂಮಿಗಳು ಇವೆ. ಇಲ್ಲಿ ಕಿತ್ತೂರು ಸಂಸ್ಥಾನದ ಒಂದು ಹುಡೆ ಕೂಡಾ ಇದ್ದಿತ್ತು.[೨೫]

ಕಿತ್ತೂರು ಮತ್ತು ಗಂದಿಗವಾಡದ ನಡುವೆ ಒಂದು ಸುರಂಗ ಮಾರ್ಗವಿದ್ದು, ಈ ಗ್ರಾಮದ ಮೂಲಕವೇ ಹಾದು ಹೋಗಿತ್ತು. ಕಿತ್ತೂರು ಸಂಸ್ಥಾನವು ಅವನತಿಯ

ಅಂಚಿನಲ್ಲಿದ್ದಾಗ ಇಲ್ಲಿಯ ಗೌಡರ ಕುಟುಂಬದವರು ಚೆನ್ನಮ್ಮನ ನಂತರ ಬಂದ ಅವರ ವಂಶಸ್ಥರ ಒಬ್ಬ ಹುಡುಗನನ್ನ ತೊಲಗಿಗೆ ಕರೆತಂದು ಆತನಿಗೆ ೧೮ ಎಕರೆ ಭೂಮಿಯನ್ನು ಮತ್ತು ಒಂದು ಮನೆಯನ್ನು ಸಂಸ್ಥಾನಿಕರಿಗೆ ನೀಡಿ ಜೀವ ದಾನಮಾಡಿದರೆಂದು ತಿಳಿಸುತ್ತಾರೆ.[೭೬]

ದೇವರಶೀಗಿಹಳ್ಳಿ : ಇದು ಪುಟಗಾಂವ ಕರ್ಯಾತನಲ್ಲಿ ಬರುವ ಗ್ರಾಮವಾಗಿದ್ದು, ಈ ಗ್ರಾಮದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಶಾಸನವೊಂದು ದೊರೆತಿದ್ದು, ಇದು ವಿಕ್ರಮಾದಿತ್ಯನ ಕಾಲದ ಶಾಸನವಾಗಿದೆ. ಈ ಶಾಸನವು ಶೈವಧರ್ಮದ ಶಾಸನವಾಗಿದೆ. ಚಾಲುಕ್ಯ ವಿಕ್ರಮವರ್ಷ ೧೭ ಅಂದರೆ ೧೦೯೩ರಲ್ಲಿ ಹೊರಡಿಸಿದ ಶಾಸನವಾಗಿದೆ. ಇದು ಹಳೆಗನ್ನಡ ಭಾಷೆಯಲ್ಲಿದೆ. ಈ ಶಾಸನದ ಸಾರಾಂಶವೆನೆಂದರೆ ಮಂಡಲೇಶ ಜೋಹಿಯ-ಚಾಮುಪನನ್ನು ಚೋಳಕುಲಾಂತಕ ಎಂದು ಕರೆಯಲಾಗಿದೆ. ಪಲಸಿಗೆ ೧೨೦೦೦ ವಿಭಾಗಕ್ಕೆ ಸೇರಿದ್ದ ಮಾಗೋಡು ಅಗ್ರಹಾರದಲ್ಲಿ ೫೨ ಮಹಾಜನರಿದ್ದರೆಂದು ತಿಳಿಸುವುದರ ಜೊತೆಗೆ ಮಹೇಶ ನಿಲಯ (ದೇವಾಲಯಕ್ಕೆ) ತಲಸಾರಿ ಎಂಬ ತೆರಿಗೆಯನ್ನು ವರ್ಷಕ್ಕೆ ಒಂದು ಹೊನ್ನಿನಂತೆ ಸಲ್ಲಿಸಲಾಗುತ್ತಿತ್ತು ಎಂಬ ದಾಖಲೆಯಿದೆ.

ಬಡಸ : ಬಡಸ ಗ್ರಾಮವು ಪುಟಗಾಂವ ಕರ್ಯಾತನಲ್ಲಿರುವ ಒಂದು ಗ್ರಾಮ. ಈ ಗ್ರಾಮಕ್ಕೆ ಹಲವಾರು ಹಳ್ಳಿಗಳು ಸೇರಿ ಬಡಸ ಎಂಬ ಹೆಸರು ಬಂದಿದೆ. ಇಲ್ಲಿಯ ಜನರ ಅಭಿಪ್ರಾಯ ದಂತೆ ದರೋಡೆ ಕೋರರು ಜನರನ್ನು ಬಡಿದು ಸುಲಿಗೆ ಮಾಡಿ ಹಣ ವಸೂಲಿ ಮಾಡುತ್ತಿದ್ದರು. ಈ ಗ್ರಾಮದ ಸುತ್ತಲು ಅರಣ್ಯದಿಂದ ಆವೃತವಾಗಿದ್ದು, ಕಳ್ಳಕಾಕರ ಬಡಿತಕ್ಕೆ ಸಿಕ್ಕಿ ಈ ಊರನ್ನು ಖಾಲಸಾಬಡಸ್ ಎಂದು ಕರೆಯುತ್ತಿದ್ದರು. ಚೆನ್ನಮ್ಮನ ಕಾಲದಲ್ಲಿ ಈ ಊರಿನಲ್ಲಿ ದಳಪತಿಗಳಿದ್ದರು, ಅವರನ್ನು ದಳವಾಯಿಯೆಂದು ಕರೆಯುತ್ತಿದ್ದು, ಈ ಕುಟುಂಬಕ್ಕೆ ಸಂಬಂಧಿಸಿದ ದಳವಾಯಿಗಳು ಈಗಲೂ ವಾಸಮಾಡುತ್ತಿದ್ದಾರೆ.

ಬೆಂಡಿಗೇರಿ : ಬೆಂಡಿಗೇರಿ ಗ್ರಾಮವು ಪುಟಗಾಂವ ಕರ್ಯಾತನಲ್ಲಿದ್ದು, ಒಂದು ಚಿಕ್ಕ ಗ್ರಾಮ. ಈ ಊರಿಗೆ ಮೊದಲು ಸುತಗಟ್ಟಿ ಎಂದು ಕರೆಯುತ್ತಿದ್ದರು. ಇಲ್ಲಿ ಒಂದು ದೊಡ್ಡ ಕೆರೆಯಿದ್ದು, ಸುಮಾರು ೨೮ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಇದರಲ್ಲಿ ಹೆಚ್ಚು ಬೆಂಡೆಯನ್ನು ಬೆಳೆಯುತ್ತಿದ್ದು, ಆದ್ದರಿಂದ ಬೆಂಡಿಕೆರೆ ಎಂಬ ಹೆಸರು ಬಂದಿತ್ತೆಂದು ಊರಿನ ಹಿರಿಯರ ಅಭಿಪ್ರಾಯ. ಮಲ್ಲಸರ್ಜನ ದೇಸಾಯಿಯ ಕಾಲದಲ್ಲಿ ಈ ಊರಿನಲ್ಲಿ ಕುಲಕರ್ಣಿ ಮನೆತನವಿದ್ದು ಈ ಊರಿನ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಈ ಊರಿನಲ್ಲಿ ವೀರಗಲ್ಲುಗಳಿದ್ದು ಅವು ಜೀರ್ಣಾವಸ್ಥೆಯಲ್ಲಿವೆ.

ಬೈಲೂರು : ಕದಂಬರ ಕಾಲದ ಈ ಗ್ರಾಮವು ಮೊದಲು ಕೆರವಾಡ ಎಂಬಲ್ಲಿ ಇದ್ದಿತ್ತು. ಅದರೆ ರೋಗ, ರುಜಿನಗಳು ಉಂಟಾಗಿರುವದರಿಂದ ಇಲ್ಲಿಂದ ಒಂದು ಕಿ.ಮೀ. ದೂರ ದಲ್ಲಿರುವ ಬಯಲು ಪ್ರದೇಶದಲ್ಲಿ ಈ ಊರನ್ನು ಹೊಸದಾಗಿ ನಿರ್ಮಿಸಲಾಯಿತು. ಬಯಲು +ಊರು = ಬೈಲೂರು ಎಂದು ಕರೆದಿದ್ದಾರೆ. ಈ ಊರಿನಲ್ಲಿ ಪತ್ರೆ ಎಂಬ ಮನೆತನವಿದೆ. ಇವರು ಕಿತ್ತೂರು ಸಂಸ್ಥಾನದ ಸಮಕಾಲೀನ ಮನೆತನವಾಗಿದ್ದು, ಸಂಸ್ಥಾನದಲ್ಲಿ ಸೇವೆ ಸಲ್ಲಿಸುತ್ತಿದ್ದರು.

ಇನ್ನೊಂದು ಅಭಿಪ್ರಾಯದ ಪ್ರಕಾರ ೧೨ನೇ ಶತಮಾನದ ಕಾಲದಲ್ಲಿ ಶಿವ ಶರಣರು ಕಾದರವಳ್ಳಿಯಲ್ಲಿ ಜಗಳವುಂಟಾದ ಸಂದರ್ಭದಲ್ಲಿ, ಶರಣರು ಶರಣ ಸಾಹಿತ್ಯವನ್ನು ಬದುಕಿಸಲು ಬಯಲೂರಿನಲ್ಲಿ ಬಂದು ಸೇರಿಕೊಂಡರು.

ಕಾದರವಳ್ಳಿಯಲ್ಲಿ ಕದನ
ಬಯಲೂರಿನಲ್ಲಿ ಬಯಲಾಗಿ
ಲಿಂಗನಮಠದಲ್ಲಿ ಲಿಂಗ ಪೂಜೆ ಮಾಡಿ
ಉಳವಿಯಲ್ಲಿ ಉಳಿದರು ಎಂಬ ಜನಪದ ಸಾಹಿತ್ಯದಲ್ಲಿ ಕಾಣುತ್ತೇವೆ.

ಮಾರ್ಗನಕೊಪ್ಪ : ಶಿವಶರಣರು ಮಾರ್ಗದರ್ಶನ ಮಾಡಿದ ಕಾರಣಕ್ಕಾಗಿ ಈ ಊರಿಗೆ ಮಾರ್ಗನಕೊಪ್ಪ ಎನ್ನುತ್ತಾರೆ. ಈ ಗ್ರಾಮವು ಇಡೀ ಬೆಳಗಾವಿ ಜಿಲ್ಲೆಯಲ್ಲಿಯೇ ಅತಿಹೆಚ್ಚು ಇನಾಮು ಕೊಟ್ಟಂತಹ ದಾಖಲೆಗಳಿವೆ. ಕಿತ್ತೂರು ಸಂಸ್ಥಾನಕ್ಕೂ ಈ ಗ್ರಾಮಕ್ಕೂ ಅನನ್ಯವಾದ ಸಂಬಂಧವಿದೆ. ಏಕೆಂದರೆ ಕಿತ್ತೂರು ಚೆನ್ನಮ್ಮನ ತವರು ಮನೆಯಾದ ಕಾಕತಿಯ ದೇಸಾಯಿಯವರಿಗೆ ಈ ಊರಿನ ಗೌಡರಿಗೆ ಹತ್ತಿರದ ಸಂಬಂಧವಿದೆ. ಇವರ ಮನೆಯಲ್ಲಿ ಒಂದು ಚಿಲಕತ್ತು ಇದೆ. ಅದನ್ನು ಇಂದಿಗೂ ಪೂಜಿಸುತ್ತಾರೆ.

ಈ ಗ್ರಾಮದಲ್ಲಿ ಗ್ರಾಮದೇವತೆಯಾಗಿ ಹನುಮಂತನ ಗುಡಿಯಿದೆ. ಮಲ್ಲಸರ್ಜನನ ಕಾಲದಲ್ಲಿ ಈ ಊರಿನಲ್ಲಿರುವ ಹನುಮಂತನ ಗುಡಿಯ ಪೂಜೆ-ಪುನಸ್ಕಾರಗಳಿಗೆ ಭೂಮಿಯನ್ನು ಕೊಟ್ಟಿರುವುದಲ್ಲದೇ, ಇಲ್ಲಿ ನಿತ್ಯ ನಡೆಯುವ ಪೂಜೆ ಪುನಸ್ಕಾರಗಳಿಗೆ ಸಂಬಂಧಿಸಿದ ಅನೇಕ ವ್ಯಕ್ತಿಗಳಿಗೂ ಭೂಮಿಯನ್ನು ನೀಡಲಾಗಿದೆ. ಉದಾ : ದೀಪಕ್ಕೆ ಎಣ್ಣೆ ಹಾಕುವವರಿಗೆ ಭೂಮಿ, ಬತ್ತಿ ಮಾಡುವವರಿಗೆ ಭೂಮಿ, ಪಾವ-ಪಡಿಗೂ ಭೂಮಿ, ಮದ್ದು ಹಾರಿಸುವವರಿಗೆ ಭೂಮಿ, ಹನುಮಂತನ ದೇವರ ಪಲ್ಲಕ್ಕಿಯನ್ನು ಹೊರುವವರಿಗೆ ಭೂಮಿ, ಪಲ್ಲಕ್ಕಿ ಹೋಗುವಾಗ ಅಗಸರು ನೆಲಕ್ಕೆ ಹಾಸುವ ಮಡಿ ಬಟ್ಟೆ ಮಾಡುವ ಮಡಿವಾಳರಿಗೂ ಭೂಮಿ, ದೇವರಿಗೆ ನಿತ್ಯ ಕಾಯಿ ಒಡೆಯುವವರಿಗೂ ಭೂಮಿ, ಪೂಜಾ ಸಂದರ್ಭದಲ್ಲಿ ಓಲಗ ಊದುವ ಕೊರವರಿಗೂ ಭೂಮಿ, ಧೂಪ ಹಾಕುವವರಿಗೆ ಭೂಮಿ, ಚಾಮರ ಬೀಸುವವರಿಗೆ ಭೂಮಿ ಹೀಗೆ ಅನೇಕ ಜನರಿಗೆ ಭೂಮಿಯನ್ನು ನೀಡಿದ ಇನಾಮು ಭೂಮಿಗಳು ಇವೆ. ಜೊತೆಗೆ ಗೌಡರಿಗೆ, ಕುಲಕರ್ಣಿಗಳಿಗೆ ಭೂಮಿಯನ್ನು ನೀಡಿದ್ದಾರೆ. ಈ ಊರಿನಲ್ಲಿ ಅನೇಕ ಜನ ಕಿತ್ತೂರು ಸೈನ್ಯದಲ್ಲಿ ಕೆಲಸ ಮಾಡುವ ಜನರಿದ್ದರು. ಇಲ್ಲಿಂದ ಕಿತ್ತೂರಿನ ಹೋಗಲು ಒಳಮಾರ್ಗವಿದೆ.[೭೭]

೪.೪.೯. ಬಾಗೇವಾಡಿ ಕರ್ಯಾತು

ಅರಳಿಕಟ್ಟಿ : ಈ ಗ್ರಾಮವು ಬಾಗೇವಾಡಿಯಿಂದ ಸುಮಾರು ೩ ಕಿ.ಮೀ ದೂರದಲ್ಲಿದೆ. ಈ ಗ್ರಾಮವು ೧೬ನೇ ಶತಮಾನದಲ್ಲಿ ಇದ್ದಿತ್ತೆಂಬುದರ ಬಗ್ಗೆ ಇಲ್ಲಿನ ಕುರುಹುಗಳು ಸಾಕ್ಷಿ. ಈ ಊರಿಗೆ ಮೊದಲ ಹೆಸರು ಡೊಂಗಾರ ಎಂದು ಕರೆಯುತ್ತಿದ್ದರು. ನಿಸರ್ಗದ ಪ್ರಕೋಪಕ್ಕೆ

ತುತ್ತಾದ ಈ ಗ್ರಾಮವು ಇಲ್ಲಿಯ ಜನ ತಮ್ಮ ಪುನರ್ ವಸತಿಗಾಗಿ ದಕ್ಷಿಣ ದಿಕ್ಕಿನತ್ತ ಆಗಮಿಸುತ್ತಿದ್ದಾಗ ಇವರಿಗೆ ಅಲ್ಲಿರುವ ಅರಳಿ ಮರವೊಂದು ಆಶ್ರಯ ನೀಡಿತು. ಈ ಅರಳಿ ಮರವು ತಮ್ಮ ಜೀವ ರಕ್ಷಣೆ ಮಾಡಿದ ಬಗ್ಗೆ ಪೂಜ್ಯಭಾವನೆವುಂಟಾಗಿ ಈ ಮರದ ಸಮೀಪ ದಲ್ಲಿಯೇ ತಮ್ಮ ಜನವಸತಿಯನ್ನು ಆರಂಭಿಸಿದರು. ಜೊತೆಗೆ ತಮ್ಮ ಜೀವರಕ್ಷಕವಾದ ಈ ಮರಕ್ಕೆ ವಿಶಾಲವಾದ ಕಟ್ಟೆಯನ್ನು ನಿರ್ಮಿಸಿ ಅರಳಿಕಟ್ಟಿ ಎಂಬ ಹೆಸರು ಬಂದಿದೆ.[೨೮]

ಈ ಊರಿನಿಂದ ಕಿತ್ತೂರು ಸುಮಾರು ೩೨ ಕಿ.ಮೀ ದೂರದಲ್ಲಿದೆ. ಈ ಊರು ಬಾಗೇವಾಡಿ ಕರ್ಯಾತನ ಗ್ರಾಮವಾಗಿದ್ದು, ಇಲ್ಲಿಯು ಕೂಡಾ ಚಾಕರಿ ಹೊಲಗಳನ್ನ ಅಂದಿನ ಸಂಸ್ಥಾನದಲ್ಲಿ ಸೇವೆ ಮಾಡಿದ ಸೇವಕರಿಗೆ ನೀಡಲಾಗಿದೆ.

ಅಂಕಲಗಿ : ಈ ಊರಿನಲ್ಲಿ ಅಂಕೋಲೆ ಮರಗಳು ಹೇರಳವಾಗಿ ಬೆಳೆದಿರುವದರಿಂದ ಈ ಊರಿಗೆ ಅಂಕಲಗಿ ಎಂಬ ಹೆಸರು ಬಂದಿದೆ. ಅಂಕೋಲ+ಕೆಯ್=ಅಂಕಲ್‌ಗೆಯ್–ಅಂಕಲಗಿ ಎಂದು ಆಡುಭಾಷೆಯಲ್ಲಿ ಈ ಊರಿಗೆ ಹೆಸರು ಬಂದಿದೆ.

ಕಲಾರಕೊಪ್ಪ : ಕಲಾರ ಎಂಬುದು ಜನ ಸಮುದಾಯ. ಇಲ್ಲಿ ಹೆಚ್ಚಾಗಿ ವಾಸಿಸುವದರಿಂದ ಈ ಊರಿಗೆ ಕಲಾರಕೊಪ್ಪ ಎಂಬ ಸ್ಥಳನಾಮ ಬಂದಿರಬೇಕು.

ಕೆಂಚಲಾರಕೊಪ್ಪ : ಇದು ಭೌಗೋಳಿಕವಾಗಿ ಗುಡ್ಡಗಾಡು ಪ್ರದೇಶವಾಗಿರುವುದರಿಂದ, ಇಲ್ಲಿಯ ಭೂಮಿಯ ಮೇಲ್ಮೆ ಪ್ರದೇಶವು ಕೆಂಪು ಮಣ್ಣಿನಿಂದ ಕೂಡಿರುತ್ತದೆ. ಆದ್ದರಿಂದ ಈ ಸ್ಥಳಕ್ಕೆ ಈ ಹೆಸರು ಬಂದಿರಬಹುದು. ಇನ್ನೊಂದು ಅಭಿಪ್ರಾಯದ ಪ್ರಕಾರ ಈ ಗ್ರಾಮದಲ್ಲಿ ಕೆಂಪು ಬಣ್ಣದ ಹೂವುಗಳು ಹೇರಳವಾಗಿ ದೊರೆಯುವುದರಿಂದ ಕೆಂಪು+ಅಲರ+ಕೊಪ್ಪ ಕೆಂಚ+ಅಲರ+ಕೊಪ್ಪ= ಕೆಂಚಲಾರಕೊಪ್ಪ ಎಂದಾಗಬಹುದು.

ಕೊರವಿಕೊಪ್ಪ : ಕೊರವಿ ಎಂಬ ಜನಾಂಗದವರು ವಾಸಿಸುತ್ತಿರುವದರಿಂದ ಈ ಊರಿಗೆ ಕೊರವಿಕೊಪ್ಪ ಎಂಬ ಹೆಸರು ಬಂದಿರಬೇಕು.

ಗಿರಿಯಾಲ (ಕೆ.ಬಿ) : ಗಿರಿಯಾಲ ಕೆ.ಬಿ. ಎಂದರೆ ಗಿರಿಯಾಲ ಕರ್ಯಾತ ಬಾಗೇವಾಡಿ. ಈ ಊರಿನ ಐತಿಹಾಸಿಕ ಮಹತ್ವವೆಂದರೆ ಇಲ್ಲಿಯ ಜನರು ಗುಡ್ಡದ ಮೇಲೆ ತಮ್ಮ ವಸತಿ ಕೇಂದ್ರವನ್ನ ಸ್ಥಾಪಿಸಿಕೊಂಡಿರುವುದರಿಂದ ಗಿರಿ-ಆಲಯ=ಗಿರಿಯಾಲ ಎಂಬುದು ಈ ಊರ ಹಿರಿಯರ ಅಭಿಪ್ರಾಯ. ಇದನ್ನು ಗುಜ್ಜರರ ಊರು ಎಂದು ಕರೆಯುತ್ತಿದ್ದರು. ಅಂದರೆ ಕಿತ್ತೂರ ಸಂಸ್ಥಾನ ಕಾಲದಲ್ಲಿ ಇವರು ಮುತ್ತು-ರತ್ನಗಳ ವ್ಯಾಪಾರ ಮಾಡುವ ವಣಿಕರಾಗಿದ್ದರು. ಆದ್ದರಿಂದ ಈ ಪ್ರದೇಶವು ಶ್ರೀಮಂತವಾಗಿದ್ದು, ಕಿತ್ತೂರಿಗೆ ಸುಮಾರು ೩೫ ಕಿ.ಮೀ ದೂರದಲ್ಲಿರುವ ಗ್ರಾಮವಾಗಿದೆ.

ಚಿಕ್ಕಬಾಗೇವಾಡಿ : ಈ ಗ್ರಾಮವು ಬಾಗೇವಾಡಿನ ಕರ್ಯಾತನಿಂದ ಸುಮಾರು ೩ ಕಿ.ಮೀ ದೂರದಲ್ಲಿದೆ. ಬಹುಶಃ ಅಂದಿನ ಕಾಲದಲ್ಲಿ ಸಣ್ಣ ಊರಾದುದರಿಂದ ಇದಕ್ಕೆ ಚಿಕ್ಕಬಾಗೇವಾಡಿ

ಎಂಬ ಹೆಸರು ಬಂದಿರಬೇಕು. ಇಲ್ಲಿ ಕೂಡಾ ಚಾಕರಿ ಹೊಲವನ್ನು ಹಳಬರು, ಪೂಜಾರರು, ಗೌಡರಿಗೆ ನೀಡಲಾಗಿದೆ. ಈ ಗ್ರಾಮವು ಬೆಳಗಾಂವ ಮತ್ತು ಬೈಲಹೊಂಗಲ ಮಾರ್ಗದ ಮೇಲೆ ನಿರ್ಮಾಣವಾಗಿದೆ.

ಬಾಗೇವಾಡಿ : ಬಾಗೇವಾಡಿ ಕರಿಯಾತು ಕಿತ್ತೂರು ಸಂಸ್ಥಾನದಲ್ಲಿ ಅತ್ಯಂತ ಫಲವತ್ತತೆಯಿಂದ ಕೂಡಿದ ಆಡಳಿತ ಕೇಂದ್ರವಾಗಿತ್ತು. ಈ ಊರಿಗೆ ಮೊದಲು ಭಾಗ್ಯವಾಡಿ ಎಂದು ಕರೆಯುತ್ತಿದ್ದರು. ಇಲ್ಲಿ ಹಿರಿಯ ಬಾಗೇವಾಡಿ (ದೊಡ್ಡದು) ಚಿಕ್ಕಬಾಗೇವಾಡಿ ಎಂಬುದಿದೆ. ಇಲ್ಲಿ ದೇಸಾಯಿಯ ಮನೆತನ ಸುಮಾರು ೧೫ ಹಳ್ಳಿಗಳ ಒಡೆಯರಾಗಿದ್ದು, ಸುಮಾರು ೫೦೦ಕ್ಕೂ ಹೆಚ್ಚು ಎಕರೆ ಭೂಮಿಯನ್ನ ದೇಸಾಯಿ ಮನೆತನಕ್ಕೆ ಇನಾಮಾಗಿ ನೀಡಲಾಗಿದೆ. ಈ ದೇಸಾಯಿ ಮನೆತನವು ಮೂಲತಃ ಔರಂಗಾಬಾದಿನಿಂದ ಬಂದು ಬಾಗೇವಾಡಿಯಲ್ಲಿ ನೆಲಸಿದರು. ಇವರಿಗೆ ಕುರಗುಂದ, ಚಿಕ್ಕ ಬಾಗೇವಾಡಿ, ನೇಗಿನಹಾಳ, ಸಿದ್ದನಬಾವಿ, ಹೂಲಿಕಟ್ಟಿ, ಬಸಾಪುರ ಮುಂತಾದ ಹಳ್ಳಿಗಳಲ್ಲಿ ಇವರ ಇನಾಮು ಹೊಲಗಳಿವೆ. ಇವರಲ್ಲಿ ಅನೇಕ ಕಾಗದ ಪತ್ರಗಳಿದ್ದು, ಇವರ ಕಾರಕೂನರಾಗಿ ಬಸಾಪುರದ ಕುಲಕರ್ಣಿಗಳು ಬರೆಯುತ್ತಿದ್ದರು ಎಂಬುದು ದೇಸಾಯಿಯವರ ಅಭಿಪ್ರಾಯ. ಇಲ್ಲಿ ಹಳಬರಿಗೆ, ಗೌಡರಿಗೆ, ಕುಲಕರ್ಣಿಗಳಿಗೆ, ಪೂಜಾರರಿಗೆ, ಕೋಲಕಾರರಿಗೆ, ವಾಲಿಕಾರರಿಗೆ ಇವರಿಗೆ ಹಚ್ಚಡ ಹೊಲ ಅಥವಾ ಚಾಕರಿ ಭೂಮಿ ಎಂಬುದನ್ನು ಮಲ್ಲಸರ್ಜನನ ಕಾಲದಲ್ಲಿ ಕೊಟ್ಟಿದ್ದ ದಾಖಲೆಗಳಿವೆ. ಈ ಊರಿನಲ್ಲಿ ಗ್ರಾಮದ ಆಡಳಿತಾಧಿಕಾರಿಗಳಾಗಿ ಪೋಲಿಸ ಗೌಡರು ಎಂಬ ಅಧಿಕಾರಿಗಳಿದ್ದರು.[೭೯] ಕಿತ್ತೂರು ಸಂಸ್ಥಾನಕ್ಕೆ ಸಂಬಂಧಿಸಿದ ಅನೇಕ ಮರಾಠಿ ಮತ್ತು ಕನ್ನಡ ಮೋಡಿ ಬರಹದ ಅನೇಕ ದಪ್ತರಗಳು ಕಂಡುಬಂದಿದೆ. ಇವು ಅಂದಿನ ಕಛೇರಿಯ ಲೆಕ್ಕ-ಪತ್ರ ಮತ್ತು ಗ್ರಾಮಗಳ ಲೆಕ್ಕ-ಪತ್ರಗಳ ದಾಖಲೆ ಹೊಂದಿದೆ.[೮೦]

ಬೆಣಚಮರಡಿ : ಬೆಣಚಮರಡಿ ಈ ಗ್ರಾಮವು ಬಾಗೇವಾಡಿಯಿಂದ ಸುಮಾರು ೩ ಕಿ.ಮೀ ದೂರದಲ್ಲಿದೆ. ಇದು ಬೆಣಚು ಕಲ್ಲಿನಿಂದ ಕೂಡಿದ ಪ್ರದೇಶವಾದ್ದರಿಂದ ಹಾಗೂ ಮರಡಿ ಎಂದರೆ ಗುಡ್ಡಗಳಿಂದ ಕೂಡಿರುವುದರಿಂದ, ಈ ಊರಿಗೆ ಬೆಣಚುಮರಡಿ ಎಂದು ಕರೆಯುತ್ತಾರೆ. ಇಲ್ಲಿಯ ಹಳಬರಿಗೆ, ಕುಲಕರ್ಣಿಯವರಿಗೆ ಚಾಕರಿ ಭೂಮಿಯನ್ನ ನೀಡಲಾಗಿದ್ದು, ಇಲ್ಲಿರುವ ಕುಲಕರ್ಣಿಯವರಿಗೆ ಹನುಮಂತದೇವರ ಪೂಜೆ ನಿರಂತರವಾಗಿ ಸಾಗಲು 'ಎಣ್ಣೆಹೊಲ' ಎಂಬುದನ್ನು ಮಲ್ಲಸರ್ಜನನ ಕಾಲದಲ್ಲಿ ನೀಡಿರಬಹುದೆಂದು ಜನರು ತಿಳಿಸುತ್ತಾರೆ. ಈ ಊರಿನಿಂದ ಕಿತ್ತೂರು ಸುಮಾರು ೩೦ ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಬಾಗೇವಾಡಿ ಕರ್ಯಾತಿನಲ್ಲಿ ಬರುವ ಗ್ರಾಮವಾಗಿದೆ. ಇಲ್ಲಿ ಗುಡ್ಡಗಾಡು ಪ್ರದೇಶವಾಗಿದ್ದು ಹರಳು ಮಣ್ಣು ಹಾಗೂ ಊರಿನ ಸುತ್ತಲೂ ಬೆಣಚಿನ ಕಲ್ಲುಗಳು ಮತ್ತು ಬೆಣಚಿನ ಹರಳುಗಳು ವಿಶೇಷವಾಗಿದೆ. ಬೆಣಚುಕಲ್ಲಿನ ಎತ್ತರದ ದಿಣ್ಣೆ ಹಾಗೂ ಮರಳು ಮಿಶ್ರಿತ ಭೂಮಿ ಇದ್ದು ಇದರ ಮೇಲೆ ಗ್ರಾಮ ನಿರ್ಮಾಣವಾಗಿ ರುವುದರಿಂದ ಇದಕ್ಕೆ ಬೆನಚಿನಮರಡಿ ಎಂದು ಹೆಸರು ಬಂದಿದೆ.

೪.೫.೧೦. ಬೆಳವಡಿ ಕರ್ಯಾತು

ಅಮಟೂರು : ಅಮಟೂರು ಬೆಳವಡಿ ಕರ್ಯಾತನ ಒಂದು ಗ್ರಾಮ. ಇದು ಬೈಲಹೊಂಗಲ ದಿಂದ ಸುಮಾರು ೬ ಕಿ.ಮೀ ದೂರದಲ್ಲಿದೆ. ಕಿತ್ತೂರು ಚೆನ್ನಮ್ಮನ ಕಾಲದಲ್ಲಿ ಬಲಗೈ ಬಂಟನೆಂದೆ ಪ್ರಸಿದ್ಧನಾದ ಅಮಟೂರು ಬಾಳಪ್ಪ ಹಾಗೂ ಬಿಚ್ಚುಗತ್ತಿ ಚೆನ್ನಬಸಪ್ಪ ಈ ಊರಿನವರೇ ಆಗಿದ್ದರು. ಕಿತ್ತೂರಿನಲ್ಲಿ ಥ್ಯಾಕರೆಯನ್ನು ಕೊಂದು ಹಾಕಿದವನು ಬಾಳಪ್ಪ, ಆದ್ದರಿಂದ ಈತನಿಗೆ ಅಮಟೂರು ಬಾಳಪ್ಪ ಎಂದೇ ಪ್ರಸಿದ್ಧಿ ಪಡೆದುಕೊಂಡನು. ಅಮಟೂರು ಬಾಳಪ್ಪ ಮತ್ತು ಚೆನ್ನಬಸಪ್ಪ ನಂದಿಹಳ್ಳಿ ಬಸವಣ್ಣನ ಭಕ್ತರಾಗಿದ್ದು, ಕಿತ್ತೂರು ಸಂಸ್ಥಾನದ ಸೈನ್ಯದಲ್ಲಿ ಪ್ರಮುಖರಾಗಿದ್ದರು.

ಈ ಊರಿನಲ್ಲಿ ಪೋಲಿಸ್ ಪಾಟೀಲ, ಮುಲ್ಕಿ ಗೌಡರು ಎಂಬ ಅಧಿಕಾರಿಗಳು ಇದ್ದರು. ಇವರ ಕೈಯಲ್ಲಿ ಹಳಬರು, ಕೋಲ್ಕಾರರು, ತಳವಾರರು ಕೆಲಸ ಮಾಡುತ್ತಿದ್ದರು. ಸಂಸ್ಥಾನದ ರಕ್ಷಣೆಗೆ ಕೆಲಸಮಾಡುವ ಇವರಿಗೆ ಚಾಕರಿ ಭೂಮಿಯನ್ನು ಕೊಡುತ್ತಿದ್ದರು. ಇಂತಹ ಭೂಮಿಗಳು ಈ ಊರಿನಲ್ಲೂ ಇವೆ. ಈ ಊರು ಕಿತ್ತೂರಿನಿಂದ ಉತ್ತರಕ್ಕಿದೆ. ಸುಮಾರು ೩೦ ಕಿ.ಮೀ ದೂರದಲ್ಲಿದೆ.[೮೧]

ಅರಬಾವಿ : ಅರ+ಬಾವಿ - ಅರಬಾವಿ ಕಲ್ಲಿನಿಂದ ಬಾವಿಯಾಗಿರುವದರಿಂದ ಅರಬಾವಿ ಎಂದಾಗುತ್ತದೆ. ಈ ಊರಿನಲ್ಲಿ ಹಲವು ಬಗೆಯ ಕಲ್ಲುಗಳು ದೊರೆಯುವುದರಿಂದ ಈ ಹೆಸರು ಬಂದಿರಬಹುದು.

ಒಕ್ಕುಂದ : ಇದನ್ನು ರಾಷ್ಟ್ರಕೂಟರ ಕಾಲದ ನೃಪತುಂಗನ ಕಾಲದಲ್ಲಿ "ಪೊಕ್ಕುಂದ" ಎಂದು ಕರೆಯುತ್ತಿದ್ದರು. ಕಾಲಾನಂತರದಲ್ಲಿ ಈ ಗ್ರಾಮಕ್ಕೆ 'ಒಕ್ಕುಂದ' ಎಂಬ ಹೆಸರು ಬಂದಿತು. ಈ ಊರಿನಲ್ಲಿ ಕಿತ್ತೂರು ಸಂಸ್ಥಾನದ ಕೋಟೆಯನ್ನು ಕಾಯುವ ಕಾವಲುಗಾರರು ವಾಸಿಸುತ್ತಿದ್ದರು. ಅವರಿಗೆ ಕೋಟಗಿ ಎಂಬ ಹೆಸರಿನ ಮನೆತನಗಳಿವೆ. ಅದರಂತೆ ಕಿತ್ತೂರು ಸಂಸ್ಥಾನದ ಕೋಟೆಯ ಮೇಲೆ ದೀಪ ಹಚ್ಚುವ (ಪಣತಿ) ಕೆಲವು ಕುಟುಂಬಗಳು ಇದ್ದವಂತೆ. ಅವರಿಗೆ ಪಣತಿಯ ಮನೆಯೆಂದೆ ಕರೆಯುತ್ತಾರೆ. ಅಲ್ಲದೆ ಈ ಊರಿನಲ್ಲಿ ಕುದುರೆ ಸಾಕುವವರು ಈ ಊರಿಲ್ಲಿ ವಾಸಿಸುತ್ತಿರುವುದರಿಂದ ಅವರಿಗೆ ಕುದುರೆಯವರು ಎಂದು ಕರೆಯುತ್ತಿದ್ದರು. ಈ ಊರಿನ ಚೆನ್ನಗೌಡ ಎಂಬ ವ್ಯಕ್ತಿಯು ರಾಯಣ್ಣನ ಬಂಟನಾಗಿದ್ದು, ಸಂಗೊಳ್ಳಿರಾಯಣ್ಣನೊಂದಿಗೆ ಒಂಬತ್ತು ಜನರನ್ನು ಗಲ್ಲಿಗೇರಿಸಿದವರಲ್ಲಿ ಈತನು ಕೂಡಾ ಒಬ್ಬನಾಗಿದ್ದನು. ಈತ ಒಕ್ಕುಂದದ ನಿವಾಸಿಯೆಂದು ತಿಳಿಸುತ್ತಾರೆ.[೮೨] ಒಕ್ಕುಂದವು ಕಿತ್ತೂರಿಗೆ ನೈರುತ್ಯ ದಿಕ್ಕಿನಲ್ಲಿದ್ದು, ಇಲ್ಲಿಂದ ಸುಮಾರು ೩೨ ಕಿ.ಮೀ ಅಂತರದಲ್ಲಿದೆ.

ಕಡತನಹಾಳ : ಇದು ಬೆಳವಡಿ ಕರ್ಯಾತನಲ್ಲಿ ಬರುವ ಗ್ರಾಮವಾಗಿದ್ದು, ಇಲ್ಲಿ ಕಲ್ಯಾಣ ಚಾಲುಕ್ಯರ ಎರಡನೇ ಜಯಸಿಂಹನು ಹೊರಡಿಸಿದ ಶಾಸನವು ದೊರೆತಿದೆ. ಈ ಶಾಸನ ಬೈಸ ಮನೆತನದ ಮಹಾಮಾಂಡಲೇಶ್ವರ ಭೀಮದೇವನು ಕದರವಳ್ಳಿ-೩೦ (ಕಾದರವಳ್ಳಿ) ವಿಭಾಗವನ್ನು

ಆಳುತಿದ್ದಾಗ ಕೊಂಗೂಣಿವರ್ಮ ಮತ್ತು ಗಂಗಮಾರ್ತಾಂಡ ಎಂಬ ಬಿರುದಾಂಕಿತನಾಗಿದ್ದು, ಕಂಚರಸನು ಎರಡನೇ ಜಯಸಿಂಹನ ಸಾಮಂತನಾಗಿದ್ದನೆಂದು ತಿಳಿಸುತ್ತದೆ. ಈ ಶಾಸನದಲ್ಲಿ ಸೇನುಭೋವ ಐತವರ್ಮಯ್ಯನು ಬರೆದನು ಎಂದು ತಿಳಿಸುತ್ತದೆ.

ಕಲಭಾವಿ : ಈ ಗ್ರಾಮವು ಬೆಳವಡಿ ಕರ್ಯಾತನಲ್ಲಿ ಬರುವ ಗ್ರಾಮವಾಗಿದ್ದು, ಕಿತ್ತೂರಿನಿಂದ ಸುಮಾರು ೧೦ ಕಿ.ಮೀ ದೂರದಲ್ಲಿದೆ. ಕಿತ್ತೂರು ಮತ್ತು ಬೈಲಹೊಂಗಲ ಮಾರ್ಗದ ಮಧ್ಯ ಈ ಗ್ರಾಮವಿದೆ. ಇಲ್ಲಿ ಸುಮಾರು ೯ ಶಾಸನಗಳು ದೊರೆತಿದ್ದು, ಇವು ರಾಷ್ಟ್ರಕೂಟರ ಕಾಲದ ಶಾಸನವಾಗಿದೆ. ಕಲಭಾವಿಯ ರಾಮಲಿಂಗೇಶ್ವರ ದೇವಾಲಯದ ಮುಂಭಾಗದಲ್ಲಿರುವ ಶಾಸನವು ಕ್ರಿ.ಶ. ೧೦೨೩ರಲ್ಲಿ ಹೊರಡಿಸಿದ ಶಾಸನವಾಗಿದೆ. ಇದರಲ್ಲಿ ಕೆಲವು ಭಾಗವು ಶಿಥಿಲವಾಗಿದ್ದು, ಆದರೂ ಕುಮುದವಾಡ ಪ್ರದೇಶದಲ್ಲಿನ ಕೆಲವು ದೇವಾಲಯಗಳ ಪ್ರಗತಿಗಾಗಿ ೩೦೦ ಕಮ್ಮ ಭೂಮಿಯನ್ನು ದತ್ತಿ ಬಿಡಲಾಯಿತೆಂದು ಈ ಶಾಸನದಿಂದ ತಿಳಿದುಬರುತ್ತದೆ.

ಕಲಭಾವಿಯ ಆದಿನಾಥ ಬಸದಿಯ ಮುಂಭಾಗದಲ್ಲಿ ರಾಷ್ಟ್ರಕೂಟರ ಒಂದನೇ ಅಮೋಘ ವರ್ಷನು ಹೊರಡಿಸಿದ ಒಂದು ಜೈನ ಶಾಸನವಿದೆ. ಈ ಶಾಸನವು ಕ್ರಿ.ಶ. ೮೧೪-೮೧೫ರಲ್ಲಿ ಶಾಸನವನ್ನು ಕೆತ್ತಿಸಲಾಗಿದೆ. ಇದರ ಸಾರಾಂಶವೆಂದರೆ ಕಾದರವಳ್ಳಿ-೩೦ ವಿಭಾಗಕ್ಕೆ ಸೇರಿದ ಕುಮುದ ವಾಡದಲ್ಲಿನ ಜಿನಾಲಯಕ್ಕೆ ಒಂದನೇ ಅಮೋಘವರ್ಷನ ಕಾಲದಲ್ಲಿ ಗಂಗರ ಎರಡನೇ ಶಿವಮಾರನು ದಾನದತ್ತಿಗಳನ್ನು ನೀಡಿದನೆಂದು ಈ ಶಾಸನವು ತಿಳಿಸುತ್ತದೆ.

ಕಲಭಾವಿಯಲ್ಲಿರುವ ಮಸೀದಿಯ ಜಗಲಿಯ ಮೇಲೆ ದೊರೆತ ಒಂದು ಶಾಸನವು ಶೈವ ಧರ್ಮಕ್ಕೆ ಸೇರಿದ ಶಾಸನವಾಗಿದ್ದು, ಬಸಪ್ಪ ಎಂಬ ವ್ಯಕ್ತಿ ವಿರಕ್ತಮಠವೊಂದಕ್ಕೆ ಭೂದಾನ ಮಾಡಿದ ನೆಂದು ಈ ಶಾಸನವು ತಿಳಿಸುತ್ತದೆ. ಶಾಸನದ ಮಧ್ಯಭಾಗ ಸಂಪೂರ್ಣವಾಗಿ ಅಳಿಸಿಹೋಗಿದೆ.

ಕಲಭಾವಿಯ ಹನುಮಂತ ದೇವಾಲಯದ ಮುಂಭಾಗದಲ್ಲಿ ೬ ಶಾಸನಗಳು ದೊರೆತಿದ್ದು, ಎಲ್ಲವು ಕನ್ನಡ ಭಾಷೆಯಲ್ಲಿವೆ. ಸುಮಾರು ೧೭-೧೮ನೇ ಶತಮಾನಕ್ಕೆ ಸಂಬಂಧಿಸಿವೆ. ಈ ಶಾಸನಗಳಲ್ಲಿ ನಾಲ್ಕು ವೀರಗಲ್ಲುಗಳಿದ್ದು, ಅದರಲ್ಲಿ ಒಂದು ಚಿಕ್ಕ ನಾಯಕ ಎಂಬ ವ್ಯಕ್ತಿಯನ್ನು ಉಲ್ಲೇಖಿಸಲಾಗಿದೆ. ಮತ್ತೊಂದರಲ್ಲಿ ಮಲ್ಲಿನಾಯಕನ ಪತ್ನಿಯ ಹೆಸರನ್ನ ಉಲ್ಲೇಖಿಸಿದೆ ಆದರೆ ಸ್ಪಷ್ಟವಾಗಿಲ್ಲ. ಮತ್ತೊಂದು ಶಾಸನದಲ್ಲಿ ಮಲ್ಲಿನಾಯಕ ಎಂಬ ಹೆಸರು ಮಾತ್ರ ಕಂಡುಬರುತ್ತದೆ. ಕಡೆಯ ವೀರಗಲ್ಲಿನಲ್ಲಿ ನಿಯಾಂಕಭೀಮ ಎಂಬ ಹೆಸರು ಸೂಚಿತವಾಗಿದ್ದು, ಈ ಶಾಸನವು ಶಿಥಿಲವಾಗಿದೆ. ಇನ್ನು ಎರಡು ಶಾಸನಗಳಲ್ಲಿ ಒಂದು ಶಿಥಿಲವಾಗಿದ್ದು ವಿರಕ್ತಮಠವೊಂದಕ್ಕೆ ಭೂಮಿ ಯನ್ನು ಉಂಬಳಿಯನ್ನಾಗಿ ನೀಡಿದ ಉಲ್ಲೇಖ ಕಂಡುಬರುತ್ತದೆ. ಮತ್ತೊಂದು ಶಾಸನವು ಮಠ ವೊಂದಕ್ಕೆ ದತ್ತಿ ಬಿಟ್ಟ ದಾಖಲೆಯಾಗಿದ್ದು, ಮಲಯಾಳ ಪಂಡಿತನ ಶಿಷ್ಯ ತೇಜೋರಾಶಿ ಪಂಡಿತನು ಅಣ್ಣಿಗೇರಿಯ ನಾಗೇಶ್ವರ ದೇವರ ಆಚಾರ್ಯನಾಗಿದ್ದನೆಂದು ಈ ಶಾಸನವು ಉಲ್ಲೇಖಿಸುತ್ತದೆ.

ಕುಲಮನಹಟ್ಟಿ : ಈ ಗ್ರಾಮವು ಖೋದಾನಪುರ ದಿಂದ ೨ ಕಿಮೀ ದೂರದಲ್ಲಿದೆ. ಇಲ್ಲಿ ಕಮ್ಮಾರಿಕೆಯು ಜನರ ಮುಖ್ಯ ಕಸುಬಾಗಿತ್ತು. ಕಬ್ಬಿಣದ ವಿವಿದ ಉಪಕರಣಗಳನ್ನು

ತಯಾರಿಸುತ್ತಿದ್ದರು ಇವರು ಖೋದಾನಪುರದ ಅರಸನಿಗೆ ಸೇವೆ ಸಲ್ಲಿಸುತ್ತಿದ್ದರಿಂದ ಈ ಊರಿಗೆ ಕುಲಮನಹಟ್ಟಿ ಎಂಬ ಹೆಸರುಬಂದಿತು.

ಕೆಂಗಾನೂರು : ಈ ಊರಿಗೆ ಕೆಂಗಣ್ಣು+ಊರು=ಕೆಂಗಾನೂರು ಎಂದು ಕರೆಯುತ್ತಾರೆ. ಕಾರಣ ಈ ಊರಿನ ಪ್ರಮುಖ ದೇವರಾದ ಸಿದ್ದೇಶ್ವರನ ಕಣ್ಣು ಕೆಂಗಣ್ಣಿನಿಂದ ಕೂಡಿರುವುದರಿಂದ ಈ ಊರಿಗೆ ಮೊದಲು ಉರಿನೇತ್ರಪುರ ಎಂದು ಕರೆಯುತ್ತಿದ್ದರು. ಕಾಲಾನಂತರ ಕೆಂಪನೆಯ ಕಣ್ಣಿನ ಈಶ್ವರನ ಆರಾಧನೆ ಮಾಡುತ್ತಿರುವುದರಿಂದ ಈ ಊರಿಗೆ ಕೆಂಗಾನೂರು ಎಂಬ ಹೆಸರು ಬಂದಿತು. ಈ ಊರಿನಲ್ಲಿರುವ ಹೆಚ್ಚಿನ ಕಮ್ಮಾರ ಕುಟುಂಬದ ಜನ ಮೂಲತಃ ಬಿಜಾಪುರದ ಕಲಾದಗಿ ಊರಿನವರಾಗಿದ್ದು, ಕಿತ್ತೂರಿನ ವಾಡೆಯಲ್ಲಿ ಕಟ್ಟಿಗೆ ಕೆಲಸ ಮಾಡಲು, ಕಿತ್ತೂರಿನ ಅರಮನೆಯನ್ನು ಕಟ್ಟಲು ಬಂದಿದ್ದರು.[೮೩]

ಚೆನ್ನಮ್ಮನ ಪಥನಾನಂತರ ಕಿತ್ತೂರಿನಿಂದ ಬಂದ ಸರದಾರರು ಈ ಊರಿನಲ್ಲಿ ನೆಲಸಿದರು. ಇವರ ಜೀವನೋಪಾಯಕ್ಕಾಗಿ ಚೆನ್ನಮ್ಮನ ಕಾಲದಲ್ಲಿ ಸರದಾರರಿಗೆ ಭೂಮಿಯನ್ನು ಕೊಟ್ಟ ಉಲ್ಲೇಖಗಳಿವೆ. ಈ ಊರಿನಲ್ಲಿ ಕುದುರೆಪಟ್ಟಿ ಮತ್ತು ಪಾಘಾತಪಟ್ಟಿ ಎಂಬ ಹೆಸರಿನ ಜಮೀನು ಗಳಿವೆ. ಇದು ಕಿತ್ತೂರು ಸಂಸ್ಥಾನದ ಕಾಲದಲ್ಲಿ ಚಾಕರಿ ಭೂಮಿಯನ್ನಾಗಿ ಕೊಟ್ಟಿದ್ದಾರೆ. ಇದು ಕಿತ್ತೂರಿನಿಂದ ಉತ್ತರ ದಿಕ್ಕಿಗೆ ಸುಮಾರು ೨೦ ಕಿ.ಮೀ ದೂರದಲ್ಲಿರುವ ಗ್ರಾಮವಾಗಿದೆ.[೮೪]

ಕೆಂಚರಾಮನ ಹಾಳ : ಕೆಂಚ ಎಂದರೆ ಕೆಂಪು ಮಣ್ಣಿನ ಗುಡ್ಡ, ಅಲ್ಲದೇ ವ್ಯಕ್ತಿಯ ಹೆಸರು, ಚಲುವ, ಸುಂದರ ಎಂಬ ಅರ್ಥವೂ ಇದೆ. ರಾಮ ಮೂಲತಃ ಪೌರಾಣಿಕ ವ್ಯಕ್ತಿ, ಆದರೆ ಈ ಊರಲ್ಲಿ ಸುಂದರನಾದ ರಾಮ ಎಂಬ ನಾಮದ ವ್ಯಕ್ತಿ ಇದ್ದಿರಬಹುದು. ಹೀಗಾಗಿ ಈ ಊರಿಗೆ ಕೆಂಚರಾಮನಹಾಳ ಅಥವಾ ಕೆಂಚರಾಮನಹಳ್ಳಿ ಎಂದು ಕರೆದಿದ್ದಾರೆ. ಕೆಂಚರಾಮ ನೆಂಬ ವ್ಯಕ್ತಿಯು ಪ್ರಭಾವಶಾಲಿಯಾಗಿದ್ದು, ಈ ಊರನ್ನು ಕಟ್ಟಿ ಬೆಳೆಸಿದನೆಂದು ಆದ್ದರಿಂದ ಈ ಊರಿಗೆ ಆ ಹೆಸರು ಬರಲು ಸಾಧ್ಯವಾಯಿತು.[೮೫]

ಕೋಣನಕುಪ್ಪಿ : ಈ ಗ್ರಾಮವು ಬೆಳವಡಿ ಕರ್ಯಾತನಲ್ಲಿ ಬರುವ ಗ್ರಾಮವಾಗಿದೆ. ಕಿತ್ತೂರು ಸಂಸ್ಥಾನದ ಆಡಳಿತದ ಕಾಲದಲ್ಲಿ ಆನೆ, ಒಂಟೆ, ಕುದುರೆ ಮುಂತಾದ ಸೈನ್ಯದ ಸಾಮಗ್ರಿಗಳನ್ನ ದಾಸ್ತಾನು ಮಾಡುವ ಗ್ರಾಮವಾಗಿತ್ತು. ಸಂಸ್ಥಾನದ ಆಡಳಿತದ ಚಾಕರಿ ಮಾಡಲು ಇಲ್ಲಿ ಚಾಕರಿ ಭೂಮಿ ಎಂಬುದನ್ನ ನೀಡಲಾಗಿದೆ. ಈ ಗ್ರಾಮದ ಜನರನ್ನ ಸಂಸ್ಥಾನಕ್ಕೆ ಅಗತ್ಯ ಬಿದ್ದಾಗ ಕರೆದುಕೊಂಡು ಹೋಗಿ ಯುದ್ಧ ಅಥವಾ ಇನ್ನಿತರ ಸಂಕಷ್ಟ ಕಾಲದಲ್ಲಿ ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಈ ಕಾಲದ ಮಲ್ಲಪ್ಪ ಎಂಬುವವನು ಹಳಬನಾಗಿದ್ದ, ಈತನಿಗೆ ಚಾಕರಿ ಭೂಮಿಯನ್ನ ನೀಡಲಾಗಿತ್ತು. ಸದ್ಯ ಈ ಊರು ಮುಳಗಡೆಯಾಗಿದ್ದು, ಜಾಲಿಕೊಪ್ಪದ ಸಮೀಪ ಈ ಊರು ತಲೆ ಎತ್ತಿದೆ.[೮೬]

ಖೋದಾನಪುರ : ಇದು ಕಿತ್ತೂರನಿಂದ ಸುಮಾರು ೧೨ ಕಿ.ಮೀ. ದೂರದಲ್ಲಿದೆ. ಇದು ದೊಡ್ಡಪಟ್ಟಣವಾಗಿದ್ದು, ಇಲ್ಲಿ "ಖುದಾ" ಎಂಬ ಮುಸ್ಲಿಂ ಧರ್ಮದ ಅರಸನೊಬ್ಬನು ಆಳ್ವಿಕೆ

ನಡೆಸುತ್ತಿದ್ದು, ಇದಕ್ಕೆ ಖೋದಾನಪುರ ಎಂಬ ಹೆಸರು ಬಂದಿತು. ಈ ಊರು ಆತನ ರಾಜಧಾನಿಯಾಗಿತ್ತು. ಪ್ರಸಿದ್ಧ ವ್ಯಾಪಾರಿ ಕೇಂದ್ರವಾಗಿತ್ತು. ಆನೆ, ಕುದುರೆ, ಮುತ್ತು, ರತ್ನಗಳು ಈ ಪಟ್ಟಣದಲ್ಲಿ ಮಾರಾಟವಾಗುತ್ತಿತ್ತು. ಈ ರಾಜಧಾನಿಯ ಸುತ್ತಲೂ ಹಲವು ಹಳ್ಳಿಗಳು ಇಲ್ಲಿಯ ಅರಸನಿಗೆ ಸಹಾಯ ಮಾಡುತ್ತಿತ್ತೆಂದು ಊರಿನ ಜನರು ಅಭಿಪ್ರಾಯಪಡುತ್ತಾರೆ. ಇಲ್ಲಿಯ ಹಳೆಯ ಊರಿನ ಸ್ಥಳದಲ್ಲಿ ಈಗಲೂ ತಾಮ್ರದ ಅರಬ್ ನಾಣ್ಯಗಳು ದೊರೆಯುತ್ತಿವೆ.[೯೭]

ಗರ್ಜೂರ : ಕಿತ್ತೂರು ಸಂಸ್ಥಾನದ ಆಡಳಿತ ಕಾಲದಲ್ಲಿ ಸಂಗೊಳ್ಳಿ ಮತ್ತು ಗರ್ಜೂರು ಒಂದೇ ಊರಾಗಿತ್ತು. ಆದರೆ ಕಾಲಕ್ರಮೇಣ ಅವರವರ ಬಾಳ್ವೆಗಾಗಿ (ಗರ್ಜಪೂರ್ತಕ್ಕೆ) ತಮ್ಮ ತಮ್ಮ ಮನೆಗಳನ್ನ ಕಟ್ಟಿಕೊಂಡಿರುವುದರಿಂದ ಈ ಊರಿಗೆ ಗರ್ಜೂರು ಎಂಬ ಹೆಸರು ಬಂತು. ಇಲ್ಲಿಯು ಚಾಕರಿ ಭೂಮಿಯನ್ನ ಮಲ್ಲಸರ್ಜನನ ಕಾಲದಲ್ಲಿ ಕೊಡಮಾಡಲಾಗಿತ್ತು. ಸಂಸ್ಥಾನದ ಚಾಕರಿಗೋಸ್ಕರ ಅಥವಾ ಸೈನ್ಯದ ಕೆಲಸಕ್ಕಾಗಿ ಈ ಭೂಮಿಯನ್ನು ನೀಡಿದ್ದರು. ಇದು ಸುಮಾರು ೫೦ ಎಕರೆಗಿಂತ ಹೆಚ್ಚು ಭೂಮಿಗಳಿವೆ. ಈ ಊರು ಕಿತ್ತೂರಿನಿಂದ ಪೂರ್ವಕ್ಕೆ ಸುಮಾರು ೧೮ ಕಿ.ಮೀ ದೂರದಲ್ಲಿದೆ ಎಂಬುದು ಇಲ್ಲಿಯ ಹಿರೇಮಠ ಎಂಬುವರ ಅಭಿಪ್ರಾಯವಾಗಿದೆ.

ಖರ್ಜೂರ – ಖರಜೂರ

ಕರಜೂರ – ಗರಜೂರು – ಎಂದಾಗಬಲ್ಲದು.

ಖರ್ಜೂರ ಎಂಬುದು ಒಂದು ಜಾತಿಯ ಹಣ್ಣು. ಒಣಉತ್ಪತ್ತಿ ಅರ್ಥವನ್ನು ಸೂಚಿಸುತ್ತದೆ. ಈ ಭಾಗದದಲ್ಲಿ ಖರ್ಜೂರದ ಮರಗಳು ಸಮೃದ್ಧವಾಗಿರುವುದರಿಂದ ಈ ಸ್ಥಳಕ್ಕೆ ಗರಜೂರ ಎಂಬ ಹೆಸರು ಬಂದಿರಬಹುದು ಎಂಬುದು ಸ್ಥಳಿಯರ ಅಭಿಪ್ರಾಯ.

ಗುಡದೂರು : ಬೆಳವಡಿ ಕರಿಯಾತಿನ ಗ್ರಾಮವಾಗಿದ್ದು, ಈ ಊರು ಮೊದಲು ಮಲಪ್ರಭಾ ನದಿಯ ಸಮೀಪದಲ್ಲಿತ್ತು. ಈ ಊರು ಗುಡ್ಡದ ಸಮೀಪವಿರುವುದರಿಂದ ಗುಡದೂರು ಎಂಬ ಹೆಸರು ಬಂತು. ಈ ಊರನ್ನು ಹೊಸದಾಗಿ ನಿರ್ಮಿಸಲಾಗಿದೆ. ಇಲ್ಲಿಯೂ ಕೂಡ ಹಳಬರಿಗೆ ಚಾಕರಿ ಭೂಮಿಯನ್ನ ನೀಡಲಾಗಿದ್ದು, ಪೂಜಾರರಿಗೆ ಪೂಜೆ ಮಾಡುವ ಸಲುವಾಗಿ, ಪೂಜಾರಿ ಹೊಲ ಎಂಬುದನ್ನು ನೀಡಿದ್ದಾರೆ. ಸಂಗೊಳ್ಳಿ ರಾಯಣ್ಣನ ಸ್ನೇಹಿತನಾಗಿ ಬಾಳಪ್ಪ ಎಂಬುವನು ಗುಡದೂರಿನವನಾಗಿದ್ದು, ರಾಯಣ್ಣನೊಂದಿಗೆ ಅನೇಕ ಬಂಡಾಯದಲ್ಲಿ ಪಾಲ್ಗೊಂಡಿದ್ದರು. ಈ ಊರು ಕಿತ್ತೂರಿನಿಂದ ಸುಮಾರು ೧೫ ಕೀ.ಮೀ ದೂರದಲ್ಲಿದೆ. ಸಂಗೊಳ್ಳಿಯಿಂದ ಕೇವಲ ೧ ಕಿ.ಮೀ ಅಂತರದಲ್ಲಿದೆ.[೯೮]

ಗುಡಿಕಟ್ಟಿ : ಈ ಗ್ರಾಮವು ಕದಂಬರ ಕಾಲದಿಂದಲೂ ಅಸ್ತಿತ್ವದಲ್ಲಿರುವ ಗ್ರಾಮವಾಗಿದೆ. ಈ ಶಾಸನವು ಕ್ರಿ.ಶ. ೧೦೫೧ರಲ್ಲಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ತ್ರೈಲೋಕ್ಯಮಲ್ಲ ಒಂದನೇ ಸೋಮೇಶ್ವರನು ಹೊರಡಿಸಿದ ಶಾಸನವಾಗಿದೆ. ಕ್ರಿ.ಶ. ೧೦೦೬ರಲ್ಲಿ ಗೋವಾ ಕದಂಬರ ಮನೆತನದ ಮಹಾಮಾಂಡಲೇಶ್ವರ ಚಟ್ಟಯ್ಯದೇವನು ತನ್ನ ಸಾಮಂತ ದಾಸುಗ ಕಟ್ಟಿಸಿದ

ಕೆರೆಯೊಂದರ ದುರಸ್ತಿ ಮತ್ತಿತ್ತರ ಕಾರ್ಯಗಳಿಗೆ ಜಮೀನನ್ನು ದತ್ತಿ ಬಿಟ್ಟನೆಂದು, ಪುನಃ ಚಾಲುಕ್ಯ ಜಯಸಿಂಹ ಯುವರಾಜನಾಗಿ ಆಳುತ್ತಿದ್ದಾಗ ಕೆರೆಯ ಪ್ರಗತಿಗಾಗಿ ಶ್ರೀಕರಣ, ಅರಸಿಮಯ್ಯ ಮತ್ತು ಚಟ್ಟಗಾವುಂಡ ಎಂಬುವರು ಕದಂಬ ಜಯಕೇಶಿದೇವನ ಸಮ್ಮುಖದಲ್ಲಿ ಭೂದಾನ ಮಾಡಿದರೆಂದು ಶಾಸನ ತಿಳಿಸುತ್ತದೆ. ಈ ಶಾಸನವನ್ನು ಕೊರೆದವನು ಚಾಮುಂಡೋಜ.[೫೯]

ಗುರ್ಲಹೊಸರು : ಈ ಊರು ಅರಣ್ಯ ಪ್ರದೇಶವಾಗಿದ್ದು ಹಲವಾರು ಜಾತಿಯ ಪಕ್ಷಿಗಳು ವಾಸವಾಗಿದ್ದವು ಅದರಲ್ಲೂ ಗೀಜಗನ ಪಕ್ಷಿಗಳು ಹೇರಳವಾಗಿದ್ದವು, ಇವುಗಳನ್ನು ಬೇಟಿಯಾಡಲು ಬೇಡರು ಬಂದು ತಂಗಿದ್ದರು. ಹಾಗೆಯೆ ಮೀನಿನ ಬೇಟೆಗಾಗಿ ಅಂಬಿಗರು, ನೇಯ್ಗೆ ಮಾಡುವ ಜಾಡರು, ಹರಿಜನರು ಇತ್ಯಾದಿ ಜನಾಂಗದವರು ಬಂದು ನೆಲೆಸಿದರು. ಹೀಗಾಗಿ ಈ ಸ್ಥಳಕ್ಕೆ ಈ ಪಕ್ಷಿ ಸಂಕುಲ ವಾಸವಗಿರುವುದರಿಂದ ಈ ಊರಿಗೆ ಗುರ್ಲಹೊಸರು ಎಂದು ಬಂದಿರುವ ಸಾಧ್ಯತೆ ಇದೆ.

ಗೋವನಕೊಪ್ಪ : ಈ ಗ್ರಾಮವು ಬೆಳವಡಿ ಕರ್ಯಾತಿನಲ್ಲಿದೆ. ಪ್ರಸ್ತುತ ಗ್ರಾಮವು ಬೆಳವಡಿ ಯಿಂದ ಉತ್ತರಕ್ಕೆ ೮ ಕಿ.ಮೀನಲ್ಲಿದೆ. ಇದು ಕಿತ್ತೂರಿನಿಂದ ೨೧ ಕಿ.ಮೀ ದೂರದಲ್ಲಿದೆ. ಇದು ಕಿತ್ತೂರು ಸಂಸ್ಥಾನಕ್ಕೆ ಸೇರಿದ ಗ್ರಾಮವಾಗಿತ್ತು. ಈ ಗ್ರಾಮದಲ್ಲಿ ಒಂದು ವಾಡೆ, ಹಾಗೂ ಒಂದು ಬುರ್ಜು ಇದ್ದಿತ್ತಂತೆ. ಆದರೆ ಈಗ ಅದರ ಕುರುಹುಗಳು ಇಲ್ಲ. ಈಗ ಕೇವಲ ಒಂದು ಅಗಳ ಮಾತ್ರ ಉಳಿದಿದೆ. ಈ ಗ್ರಾಮದಲ್ಲಿ ಈ ಹಿಂದೆ ಆಕಳ ಹಿಂಡು ಬಂದು ವಾಸ ಮಾಡುತ್ತಿರುವ ಕಾರಣ ಈ ಊರಿಗೆ ಗೋ+ವನ ಕೊಪ್ಪ ಎಂಬ ಹೆಸರು ಬಂದಿತ್ತೆಂದು ಸ್ಥಳೀಯರ ಅಭಿಪ್ರಾಯ.[೬೦]

ಈ ಊರಿನಲ್ಲಿ "ದೇಸಾಯಿಗಳ ಹೊಲಗಳು" ಎಂಬ ಜಮೀನುಗಳಿವೆ. ಇವು ಕಿತ್ತೂರಿನ ದೇಸಾಯಿಗಳಿಗೆ ಸಂಬಂಧಿಸಿದ ಜಮೀನುಗಳು ಈ ಊರು ಕಿತ್ತೂರಿನೊಂದಿಗೆ ಅನ್ಯೋನ್ಯ ಸಂಬಂಧ ವನ್ನು ಹೊಂದಿತ್ತಂತೆ ಏಕೆಂದರೆ ಕಿತ್ತೂರು ಸಂಸ್ಥಾನದ ಮೇಲೆ ದಾಳಿ ನೆಡೆದಾಗ ಕಿತ್ತೂರಿನ ಖಜಾನೆಯ ಬೆಳ್ಳಿ-ಬಂಗಾರಗಳನ್ನು ಆನೆ,ಒಂಟೆಗಳ ಮೇಲೆ ಹೇರಿ ಬಿಟ್ಟಾಗ ಈ ಊರಿನ ವಾಲಿ ಯವರ ಮನೆಯ ಮುಂದೆ ಬಂದು ನಿಂತಿದ್ದವು, ನಂತರ ವಾಲಿಯವರ ಮನೆಯ ಸ್ವತ್ತಾ ಯಿತೆಂಬುದು ಸ್ಥಳೀಯರ ಅಭಿಪ್ರಾಯವಾಗಿದೆ. ಈ ಊರಿನಲ್ಲಿ ಸುಬೇದಾರ, ನಾಡಗೌಡ ಮತ್ತು ಮುತ್ತಿನ ಬಾವನ್ನವರ ಎಂಬ ಮನೆತನಗಳಿವೆ.

ಚಿಕ್ಕನಂದಿಹಳ್ಳಿ : ಕಿತ್ತೂರಿನಿಂದ ೫ ಕಿಮಿ. ದೂರದಲ್ಲಿರುವ ಗ್ರಾಮ. ಇಲ್ಲಿ ಚಿಕ್ಕನಂದಿಹಳ್ಳಿ ಮತ್ತು ಹಿರೇನಂದಿಹಳ್ಳಿ ಎಂಬ ಎರಡು ಗ್ರಾಮಗಳಿವೆ. ಈ ಎರಡು ಗ್ರಾಮದ ನಡುವೆ ಒಂದು ಎತ್ತರವಾದ ನಂದಿ ವಿಗ್ರಹ ಇರುವುದರಿಂದ ಈ ಹೆಸರು ಬಂದಿದೆ ಆದರೆ ನಂದಿ ದೈವ ಮೂಲವಿದ್ದಂತೆ ಸಸ್ಯ ಮೂಲವು ಆಗಿರಬಹುದು ಏಕೆಂದರೆ ಈ ಪ್ರದೇಶದಲ್ಲಿ ನಂದಿ ಮರಗಳು ವಿಶೇಷವಾಗಿವೆ. ಕಾರಣ ಈ ಸ್ಥಳನಾಮವು ಸಸ್ಯವಾಚಿಯೂ ಆಗಿರಬಹುದು.[೬೧]

ಜಮಲೂರು : ಈ ಗ್ರಾಮವು ಖೋದಾನಪುರ ದಿಂದ ೩ ಕಿಮೀ ದೂರದಲ್ಲಿದ್ದು, ಬೆಳವಡಿ ಕರ್ಯಾತನಲ್ಲಿರುವ ಗ್ರಾಮವಾಗಿದೆ. ಇಲ್ಲಿಯ ಒಂದು ಮನೆತನವು ಲೆಖ್ಖ-ಪತ್ರಗಳನ್ನಿಡುವುದರಲ್ಲಿ(ಜಮಾ-ಬಂದಿ) ಪ್ರಸಿದ್ಧಿ ಪಡೆದಿರುವುದರಿಂದ ಹಾಗೂ ಇವರು ಖೋದಾನಪುರದ ಅರಸನಿಗೆ ಸೇವೆ ಸಲ್ಲಿಸುತ್ತಿದ್ದರಿಂದ ಈ ಊರಿಗೆ ಜಮಲೂರು ಎಂಬ ಹೆಸರು ಬಂದಿತು.

ಜಾಲಿಕಟ್ಟಿ : ಈ ಗ್ರಾಮದ ಪರಿಸರದಲ್ಲಿ ಹೆಚ್ಚಾಗಿ ಜಾಲಿ ಮರಗಳು ಬೆಳೆದಿರಬೇಕು ಇಂತಹ ಪರಿಸರದಲ್ಲಿ ಬೆಳೆದಿರುವ ಊರನ್ನು ಜಾಲಿಕಟ್ಟಿ ಎಂದು ಕರೆಯುತ್ತಾರೆ.

ಜಾಲಿಕೊಪ್ಪ : ಈ ಗ್ರಾಮವು ಬೆಳವಡಿ ಕರ್ಯಾತನಲ್ಲಿ ಬರುವ ಗ್ರಾಮವಾಗಿದೆ. ಇದು ಮಲಪ್ರಭಾ ನದಿಯ ತೀರದಲ್ಲಿರುವ ಗ್ರಾಮವಾಗಿದ್ದು, ಹಳೆಯ ಗ್ರಾಮ ಮಲಪ್ರಭಾ ನದಿಯಲ್ಲಿ ಮುಳುಗಿ ಹೋಗಿದೆ. ಜಾಲಿಕೊಪ್ಪ ಎಂದರೆ ಇಲ್ಲಿ ಹೆಚ್ಚು ಜಾಲಿಯ ಗಿಡಗಳಿಂದ ಕೂಡಿದ ಊರಾದ್ದರಿಂದ ಇದಕ್ಕೆ ಜಾಲಿಕೊಪ್ಪ ಎಂಬ ಹೆಸರು ಬಂದಿರಬೇಕು. ಈ ಗ್ರಾಮವು ಕೂಡ ಕಿತ್ತೂರಿನ ಇತಿಹಾಸದ ಸಮಕಾಲೀನ ಗ್ರಾಮವಾಗಿದ್ದು, ಕಿತ್ತೂರಿಗೆ ಸಂಕಷ್ಟಗಳು ಒದಗಿದಾಗ ಈ ಊರಿನಿಂದ ಯೋಧರು, ಬಡಿಗೆ, ಡಾಲು, ಖಡ್ಗ ಮುಂತಾದ ಶಸ್ತ್ರಾಸ್ತ್ರಗಳನ್ನು ತೆಗೆದು ಕೊಂಡು ಕಿತ್ತೂರನ್ನ ರಕ್ಷಣೆ ಮಾಡುತ್ತಿದ್ದರು.[೬೨]

ಈ ಊರಿನಲ್ಲಿ ಚಾಕರಿ ಹೊಲ ಎಂಬುದಿದೆ. ಮಲ್ಲಸರ್ಜನನ ಕಾಲದಲ್ಲಿ ಸರ್ಕಾರಿ ಕೆಲಸ ಕ್ಕೋಸ್ಕರ ನೀಡಿದ ಭೂಮಿಯಾಗಿದೆ. ಸುಮಾರು ೪೦ ಎಕರೆ ಭೂಮಿಗಳಿದ್ದು, ಸಂಸ್ಥಾನದ ಆಡಳಿತದ ಕೆಲಸಕ್ಕಾಗಿ ನೇಮಿಸಿದ ವ್ಯಕ್ತಿಗಳಿಗೆ ಈ ಭೂಮಿಯನ್ನು ಕೊಟ್ಟಿದ್ದರು. ಇವರಲ್ಲಿ ಕೆಲವು ಸಮಕಾಲೀನ ದಾಖಲೆಗಳು ಇವೆ. ಹಿಂದೆ ಇದ್ದ ಅರವಳ್ಳಿ ಗ್ರಾಮವು ಸದ್ಯ ಇರುವುದಿಲ್ಲ.[೬೩]

ತಲ್ಲೂರ : 'ತಲ್ಲ' ಇದರ ಅರ್ಥವೆಂದರೆ ಕೆರೆ, ಕೊಳ ಎಂದರ್ಥ ಈ ಊರಿನಲ್ಲಿ ವಿಶಾಲ ವಾದ ಕೆರೆ ಇರುವುದರಿಂದ ಹಾಗೂ ಅದರ ಸುತ್ತಲೂ ಮನೆಗಳಿವೆ ಆದ್ದರಿಂದ ಈ ಊರಿಗೆ ತಲ್ಲೂರು ಎಂಬ ಹೆಸರು ಬಂದಿರುವ ಸಾಧ್ಯತೆ ಇದೆ. ಈ ಊರಿನಲ್ಲಿ ದೇಶಗತ್ತಿ ಮನೆತನ ಗಳಿವೆ. ಕಿತ್ತೂರು ಸಂಸ್ಥಾನಕ್ಕೆ ಸಂಬಂಧಿಸಿದ ದೇಶಗತ್ತಿ ಮನೆತನವಿದೆ.

ತುರುಕರ ಶೀಗಿಹಳ್ಳಿ : ತುರುಕಾರಿ ಎಂಬುದು ಜಾತಿಸೂಚಕವಲ್ಲ. ತುರುಕಾರಿ ಎಂಬ ಶಬ್ದವು ತುರುಷ್ಕಾರಿ ಎಂಬ ಸಂಸ್ಕೃತ ಶಬ್ದದ ತದ್ಭವವಾಗಿದ್ದು ಇದರ ಅರ್ಥವು "**ತುರುಷ್ಕಾನಾಂ ಅರಿ ತುರುಷ್ಕಾರಿ**" ಅಂದರೆ ಮುಸಲ್ಮಾನರಿಗೆ ವೈರಿಗಳೆಂದು ಸಿದ್ದವಾಗುವುದು. ಪಂಚಮಸಾಲಿ ವರ್ಗಕ್ಕೆ ಸೇರಿದ ಇವರು ಮುಸಲ್ಮಾನರೊಂದಿಗೆ ಘೋರ ಯುದ್ದ ಮಾಡಿ ಅವರನ್ನ ಸೋಲಿಸಿದವರಿಗೆ ಶ್ರೀ ಗುರುಗಳು **ತುರುಷ್ಕಾರಿ** ಎಂಬ ಬಿರುದನ್ನ ಕೊಟ್ಟಿರುವರು ಅದ್ದರಿಂದ ಈ ಊರಿಗೆ ತುರುಕಾರಿ ಶೀಗಿಹಳ್ಳಿ ಎಂಬ ಹೆಸರು ಬಂದಿತು.[೬೪]

ದೊಡ್ಡವಾಡ : ದೊಡ್ಡವಾಡ ಗ್ರಾಮವು ಬೆಳವಡಿ ಕರ್ಯಾತನಲ್ಲಿದ್ದು, ಇಲ್ಲಿ ಕಲ್ಯಾಣ ಚಾಲುಕ್ಯ ಹಾಗೂ ಗೋವಾ ಕದಂಬರ ಕಾಲದ ಶಾಸನಗಳು ದೊರೆತಿದೆ. ಕ್ರಿ.ಶ. ೧೧೮೧ರಲ್ಲಿ

ತ್ರಿಭುವನಮಲ್ಲದೇವ ಎಂಬ ಅರಸನು ಹೊರಡಿಸಿದ ಜೈನ ಶಾಸನವು ವೀರಭದ್ರದೇವಾಲಯದ ಮುಂಭಾಗದಲ್ಲಿದೆ. ಇದರಲ್ಲಿ ಮೇಲ್ಭಾಗದಲ್ಲಿ ಜೈನತೀರ್ಥಂಕರನ ಶಿಲ್ಪವಿದ್ದು, ಸಾಮಂತ ಅರಸನ ನೊಬ್ಬನು ದತ್ತಿ ಬಿಟ್ಟಂತಹ ಶಾಸನವಾಗಿದೆ.

ಈ ಊರಿಗೆ ದೊಡ್ಡವಾಡ ವೆಂದು ಹೆಸರು ಬರಲು ಪ್ರಾಚೀನ ಕಾಲದಿಂದಲೂ ಈ ಊರಿನಲ್ಲಿ ದೊಡ್ಡದಾದ ಕುಡಿಯುವ ನೀರಿನ ಬಾವಿಯೊಂದು ಇದ್ದಿತ್ತು. ಇದರ ಸುತ್ತಲು ದೊಡ್ಡ ವಾಡೆಯೊಂದು ನಿರ್ಮಿಸಲಾಗಿತ್ತು. ಅಲ್ಲದೆ ಈ ಊರಿನ ಪಶ್ಚಿಮಕ್ಕೆ ಒಂದು ದೊಡ್ಡ ಕೆರೆ ಇರುವುದರಿಂದ ದೊಡ್ಡವಾಡ ಎಂಬ ಹೆಸರು ಪ್ರಾಪ್ತವಾಗಿರಬಹುದು. ದೊಡ್ಡವಾಡದ ಸುತ್ತಲೂ ನಾಲ್ಕು ಹಳ್ಳಿಗಳಿಂದ ಒಂದುಗೂಡಿ ಒಂದು ದೊಡ್ಡ ಗ್ರಾಮವಾಗಿದೆ ಎಂಬ ಅಭಿಪ್ರಾಯವು ಇದೆ, ಅವು ಯಾವವೆಂದರೇ ಕೆಂಚರಾಮನಹಾಳ, ದಿಂಡಿಗಟ್ಟಿ, ಲದ್ದಿಗಟ್ಟಿ, ದಂದಕೊಪ್ಪ ಹೀಗೆ ಈ ನಾಲ್ಕು ಹಳ್ಳಿಗಳು ಒಂದೆಡೆ ಸೇರಿದಾಗ ದೊಡ್ಡವಾಡವೆಂಬ ಹೆಸರಾಗಿ ಹೆಗ್ಗಳಿಕೆಗೆ ಬಂದಿರಬಹುದು.[೯೫]

ಈ ಊರಿಗೆ ದೊಡ್ಡವಾಡ ಎಂಬ ಹೆಸರು ಬಂತು. ಇಲ್ಲಿಯ ವಾಡೆ ಸವಣೂರಿನ ನವಾಬನ ಕಾಲದ ಕೋಟೆಯಾಗಿತ್ತು, ಕಿತ್ತೂರು ಸಂಸ್ಥಾನಕ್ಕೂ ಈ ಊರಿಗೂ ಅವಿನಾಭಾವ ಸಂಬಂಧವಿದೆ ಎನ್ನುತ್ತಾರೆ. ಏಕೆಂದರೆ ಕಾಕತೀಯ ಹೆಣ್ಣುಮಗಳಾದ ಚೆನ್ನಮ್ಮನಿಗೆ ಈ ಊರಿನ ಭೂಮಿಯನ್ನ ಮದುವೆ ಸಂದರ್ಭದಲ್ಲಿ ಬಳುವಳಿಯಾಗಿ ನೀಡಿದರೆಂದು ಕಾರಣ ಉಳಿದ ನಾಡೆಲ್ಲ ಮಲೆನಾಡಿನ ಭೂಮಿಗಳಾಗಿದ್ದು, ಈ ನಾಡು ಬೆಳವಲವಾಗಿದ್ದು, ಗೋದಿಯನ್ನು ಹೆಚ್ಚಾಗಿ ಬೆಳೆಯುತ್ತಿದ್ದು, ಮುಂದೆ ಚೆನ್ನಮ್ಮನ ನಾಡಿಗೆ ಗೋದಿಗೆ ಬರ ಬರಬಾರದೆಂದು ಈ ನಾಡನ್ನ ಬಳುವಳಿಯಾಗಿ ಕೊಟ್ಟರೆಂಬ ಸ್ಥಳೀಯರ ಇತಿಹಾಸವಿದೆ. ಇಂದಿಗೂ ಕೂಡ ಇಲ್ಲಿಯ ಸುಮಾರು ನೂರಾರು ಎಕರೆಯ ಭೂಮಿಯನ್ನ ದೇಸಾಯಿಯರ ಹೊಲವೆಂದು ಕರೆಯುತ್ತಾರೆ.[೯೬]

ನನಗುಂಡಿಕೊಪ್ಪ : ಈ ಗ್ರಾಮವು ಬೆಳವಡಿಯ ಕರ್ಯಾತನ ಗ್ರಾಮವಾಗಿದ್ದು, ಕಿತ್ತೂರಿನಿಂದ ಪೂರ್ವಕ್ಕೆ ಸುಮಾರು ೨೫ ಕಿ.ಮೀ ದೂರದಲ್ಲಿದೆ. ಈ ಊರಿನ ಈರನಗೌಡ ಎಂಬ ವ್ಯಕ್ತಿಯು ಕಿತ್ತೂರು ಸಂಸ್ಥಾನದ ಬಂಡಾಯದಲ್ಲಿ ಪಾಲ್ಗೊಂಡಿದ್ದರು.[೯೭] ಇದು ಬೆಳವಡಿಯಿಂದ ದಕ್ಷಿಣಕ್ಕೆ ೭ ಕಿ.ಮೀ ದೂರದಲ್ಲಿದೆ. ಇಲ್ಲಿ ಕೂಡಾ ಚಾಕರಿ ಭೂಮಿ ಎಂಬ ಹೊಲವಿದೆ.

ಬುಡರಕಟ್ಟಿ : ಬುಡರಕಟ್ಟಿ ಗ್ರಾಮವು ಬೆಳವಡಿ ಕರ್ಯಾತನಲ್ಲಿದ್ದು ಮೂಲತಃ ಈ ಗ್ರಾಮವು ಬುದ್ಧರ+ಕಟ್ಟಿ ಎಂದು ಕರೆಯುತ್ತಿದ್ದರು. ಏಕೆಂದರೆ ಈ ಊರಿನಲ್ಲಿ ಬುದ್ದಿವಂತರಿರುವ ಸಲುವಾಗಿ ಈ ಊರಿಗೆ ಬುದ್ಧರಕಟ್ಟಿ ಎಂಬ ಹೆಸರು ಬಂತು. ಕಾಲ ಕಳೆದಂತೆ ಇದನ್ನು ಬುಡಕಟ್ಟಿ ಎಂದು ಕರೆಯಲಾಯಿತು. ಈ ಗ್ರಾಮವು ಬೆಳವಡಿಯಿಂದ ೬ ಕಿ.ಮೀ. ದೂರದಲ್ಲಿ ಅದರಂತೆ ಕಿತ್ತೂರಿನಿಂದ ಪೂರ್ವಕ್ಕೆ ೧೭ ಕಿ.ಮೀ ಅಂತರದಲ್ಲಿದೆ. ಊರಿನ ಕೆಲವು ಮನೆಗಳಲ್ಲಿ ಕಿತ್ತೂರು ಸಂಸ್ಥಾನಕ್ಕೆ ಸಂಬಂಧಿಸಿದ ಖಡ್ಗ, ಗುರಾಣಿ, ಈಟಿ, ಮುಂತಾದ ಶಸ್ತ್ರಾಸಗಳು ಇರುವುದು ಕಂಡುಬಂದಿವೆ.

ಒಂದು ಐತಿಹ್ಯದ ಪ್ರಕಾರ ಬುದ್ಧಿವಂತರಾದ ಬುಡ್ಡರು (ವೃದ್ಧರು) ಕಟ್ಟೆಯ ಮೇಲೆ ಕುಳಿತು ನ್ಯಾಯ ನಿರ್ಣಯ ಮಾಡುತ್ತಿದ್ದರಂತೆ ಅದ್ದರಿಂದ ಬುಡ್ಡರ+ಕಟ್ಟಿ ಬುಡರಕಟ್ಟಿ ಎಂಬ ಹೆಸರು ಬಂದಿರಬೇಕು. ಇನ್ನೊಂದು ಅಭಿಪ್ರಾಯದ ಪ್ರಕಾರ ಒಂದು ಜನಾಂಗ ಅಂದರೆ ಬುಡರ ಎಂಬ ಜನಾಂಗದವರು ಈ ಸ್ಥಳದಲ್ಲಿ ಹೆಚ್ಚಾಗಿ ವಾಸಿಸುತ್ತಿರುವುದರಿಂದ ಈ ಸ್ಥಳಕ್ಕೆ ಬುಡರಕಟ್ಟಿ ಎಂಬ ಹೆಸರು ಬಂದಿರಬೇಕು.[೯೮]

ಬೂದಿಹಾಳ : ಈ ಗ್ರಾಮವು ಬೆಳವಡಿ ಕರ್ಯಾತಿನಲ್ಲಿ ಬರುವ ಗ್ರಾಮವಾಗಿದೆ. ಇಲ್ಲಿ ನಿರ್ಧಿಷ್ಟವಾಗಿ ಬೂದಿ ಎಂಬ ಶಬ್ದವು ಇಲ್ಲಿಯ ಪ್ರದೇಶವನ್ನು ಏಕೆಂದರೆ ಈ ಗ್ರಾಮದಲ್ಲಿ ಒಂದು ಹಳ್ಳವು ಹರಿದಿದ್ದು ಈ ಹಳ್ಳ ಎಡ-ಬಲಗಳಲ್ಲಿ ಬೂದಿಯ ಗುಡ್ಡಗಳು ಇರುವುದರಿಂದ ಬೂದಿಹಾಳ ಎಂಬ ಹೆಸರು ಬಂದಿರುತ್ತದೆ. ಕಾರಣ ಪ್ರಾಚೀನ ಕಾಲದಲ್ಲಿ ಈ ಗ್ರಾಮಗಳಲ್ಲಿ ಲೋಹಗಳ ತಯಾರಿಕಾ ಕೆಲಸ ಮತ್ತು ಕಮ್ಮಾರಿಕೆ, ಗುಡಿಕೈಗಾರಿಕೆ ಇರುವುದರಿಂದ ಬೂದಿ ಗುಡ್ಡವು ನಿರ್ಮಾಣವಾಗಿದೆ.[೯೯]

ಬೆಳವಡಿ : ಈಗ ಒಂದು ಚಿಕ್ಕ ಊರು, ಮಲಪ್ರಭಾ ನದಿಯ ಬಲದಂಡೆಯಿಂದ ದಕ್ಷಿಣಕ್ಕೆ ಸುಮಾರು ೭-೮ ಕೀಲೋಮಿಟರ್ ದೂರದಲ್ಲಿರುವ ಈ ಗ್ರಾಮ ಒಂದು ಸಾಮಾನ್ಯ ಊರಾಗಿದ್ದರೂ, ಐತಿಹಾಸಿಕವಾಗಿ ಮಹತ್ವ ಪಡೆದ ಸ್ಥಳವಾಗಿದೆ. ಛತ್ರಪತಿ ಶಿವಾಜಿಯ ಜೊತೆಗೆ ಬೆಳವಡಿ ಮಲ್ಲಮ್ಮ ನಡೆಸಿದ ಹೋರಾಟವೇ ಈ ಊರಿನ ಪ್ರಸಿದ್ಧಿಗೆ ಕಾರಣ. ಶಿವನ ಪೂಜೆಗೆ ಶ್ರೇಷ್ಟವಾದ ಬಿಲ್ವಮರಗಳ ಸಮೂಹಗಳು ಇಲ್ಲಿರುವುದರಿಂದ ಈ ಊರಿಗೆ ಬೆಳವಡಿ ಎಂದು ಹಲವರ ಅಭಿಪ್ರಾಯ. ಬಿಲ್ವಡ, ಬೆಲ್ವಡ ಎಂದು ಕರೆದಿರುವ ಈ ಪ್ರದೇಶದಲ್ಲಿ ಸದ್ಯದಲ್ಲಿ ಒಂದೇ ಒಂದು ಬಿಲ್ವಮರಗಳೇನೂ ಕಂಡುಬರುವುದಿಲ್ಲ. ಒಂದು ಹೇಳಿಕೆಯ ಪ್ರಕಾರ ಈ ಪ್ರದೇಶವು ಸಮೃದ್ಧಿಯಾದ ಬೆಳೆಯನ್ನು ಕೊಡುವ ಬಿರುಸಿನ ನೆಲಕ್ಕೆ ಬೆಲ್ವಲ ಎಂದು ಕರೆಯುವುದಿದೆ. ಹೆಸರಾಂತ ಬೆಳೆಯ ಉತ್ಪತ್ತಿ ನಾಡಾಗಿರುವುದರಿಂದ ಇದಕ್ಕೆ ಬೆಳ್ವಡಿ ಎಂಬ ಹೆಸರು ಬಂದಿದೆ. ಶಾಸನಗಳಲ್ಲಿ ಬರುವ ಬೆಳ್ವಲ ಎಂಬ ಪದಕ್ಕೆ ಬಿಳಿಯ ಹೊಲ ಅಥವಾ ಸಮೃದ್ದಿಯಾದ ಬೆಳೆಯನ್ನು ಬೆಳೆಯುವ ಹೊಲ ಅಥವಾ ಹತ್ತಿಯನ್ನು ಬೆಳೆಯುವ ಭೂಮಿಯನ್ನು ಬೆಳವಳ ಎಂದು ಎಸ್.ಹೆಚ್. ರಿತ್ತಿ ಹಾಗೂ ಪಿ.ಬಿ. ದೇಸಾಯಿಯವರ ಅಭಿಪ್ರಾಯವು ಸಮಂಜಸವೆಂದು ತಿಳಿದುಬರುತ್ತದೆ.

ದರುಶನ ಮಾತ್ರದೊಳ್ ದೋಶಮಂ ಪರಿಹರಿಸಿ
ಪರಶಿವನ ಪಾದಾರವಿಂದದೊಳ್ ಭಕ್ತಿಯಂ
ಕರುಣಿಸುವ ಮುನಿವಂದ್ಯ ಪಾವನ ಮಲಪ್ರಭೆಯ ತೆಂಕಣದ ತೀರದೋಳಗೆ
ಅನತಿ ದೂರದಲಿ ಮುಗಟಖಾನ ಹುಬ್ಬಳ್ಳಿಯಿಂದ ೧೦ ಮೈಲಿನ ಮೇಲೆ
ಪಿರಿದಾದ ಬೈಲಿನೊಳ್ ಮಾಕಂದ ಬನದೊಳಗೆ
ಸಿರಿವೆತ್ತು ಸಡಗರದಿ ಮೆರೆಯುತಿಹ ಕಿತ್ತೂರು
ಕರುನಾಡ ಕೀರ್ತಿಯಿಂ ನಾಡೊಳಗೆ ಹುಬ್ಬಿಸುತೆ ರಾರಾಜಿಸುತ್ತರುವುದು.

ಬೆಳವಡಿಯು ಕಿತ್ತೂರಿನ ಕರಿಯಾತುಗಳಲ್ಲಿ ಪ್ರಮುಖ ಕರಿಯಾತಾಗಿದ್ದು, ಸುಮಾರು ೫೪ ಹಳ್ಳಿಗಳನ್ನು ಒಳಗೊಂಡಿದೆ.

೧೭ನೇ ಶತಮಾನದಲ್ಲಿ ಈ ಪ್ರದೇಶದಲ್ಲಿ ಈಶಪ್ರಭು ಎಂಬ ಆಡಳಿತಗಾರನಾಗಿದ್ದ, ಇವನನ್ನು ಸರ್‌ದೇಸಾಯಿ ಎಂದು ಕರೆದಿದ್ದಾರೆ. ಇವನ ಪತ್ನಿ ಮಲ್ಲಮ್ಮ ವಿಜಾಪುರ ಸುಲ್ತಾನರ ಆಡಳಿತ ಕೊನೆಗೊಂಡ ಬಳಿಕ ಸಿಪಾಯಿಗಳು ಅಲ್ಲಲ್ಲಿ ಸ್ವತಂತ್ರರಾದರು. ಹಾಗೇ ಸ್ವತಂತ್ರರಾದ ವರಲ್ಲಿ ಬೆಳವಡಿಯು ಕೂಡ ಒಂದು ಎಂದು ಸೇಜ್‌ವಾಳ್‌ಕರ್ ಅಭಿಪ್ರಾಯ ಪಡುತ್ತಾರೆ. ಶಿವಾಜಿಯ ಸೈನ್ಯವು ಕರ್ನಾಟಕದ ಅನೇಕ ಭಾಗಗಳನ್ನು ಗೆದ್ದು, ಬೆಳಗಾಂವ ಜಿಲ್ಲೆಯ ಸಂಪಗಾಂವ ಮೂಲಕ ಬೆಳವಡಿಯನ್ನು ಮುತ್ತಿಗೆ ಹಾಕಿದ ಸಂದರ್ಭದಲ್ಲಿ ಮರಾಠರ ಸೈನ್ಯವನ್ನು ಎದುರಿಸಿ ಮಲ್ಲಮ್ಮ ವಿಜಯಶಾಲಿಯಾದಳು. ಮಲ್ಲಮ್ಮನಿಂದ ಸೋತ ಮರಾಠ ಸೈನ್ಯವು ಆಕೆಗೆ ಬುದ್ಧಿಯನ್ನು ಕಲಿಸಬೇಕೆಂದು ಬೆಳವಡಿಯನ್ನು ಮತ್ತೆ ಮುತ್ತಿಗೆ ಹಾಕಿತು. ಆಗ ದಿಟ್ಟತನದಿಂದ ಹೋರಾಡಿ ಆಕೆಯ ಸಾಹಸದಿಂದ ಮರಾಠ ಸೈನ್ಯವು ಸೋಲನ್ನು ಅನುಭವಿಸಿತು.

ಕಿತ್ತೂರು ಸಂಸ್ಥಾನದ ಕಾಲದಲ್ಲಿ ಬೆಳವಡಿಯು ಪ್ರಮುಖ ಕೇಂದ್ರವಾಗಿದ್ದು, ಮಲ್ಲಸರ್ಜನನು ಬೆಳವಡಿಯನ್ನು ವಶಪಡಿಸಿಕೊಂಡು ಆಡಳಿತದ ಪ್ರಮುಖ ಕೇಂದ್ರವನ್ನಾಗಿ ಮಾರ್ಪಾಡಿಸಿದನು. ಇಲ್ಲಿ ಮೂರು ಶಾಸನಗಳಿದ್ದು, ಇಲ್ಲಿಯ ಪುರಾತನ ಇತಿಹಾಸದ ಬಗ್ಗೆ ಮಾಹಿತಿ ದೊರಕುತ್ತದೆ. ಇದು ಪ್ರೌಢಶಾಲಾ ಆವರಣದಲ್ಲಿ ಈ ಶಾಸನಗಳಿವೆ. ಕಿತ್ತೂರು ಸಂಸ್ಥಾನದ ಆಡಳಿತದ ಅನುಕೂಲತೆಗಾಗಿ ೧೪ ವಿಭಾಗಗಳಿದ್ದು, ಇದರಲ್ಲಿ ಬೆಳವಡಿಯು ಪ್ರಮುಖವಾಗಿತ್ತು. ಚೆನ್ನಮ್ಮನು ತುರುಕಾರರನ್ನು ಸದೆಬಡಿಯಲು ಬೆಳವಡಿಯ ಮೂಲಕ ಯುದ್ಧ ಹೂಡಿದರೆಂದು ತಿಳಿದುಬರುತ್ತದೆ.

ಬೈಲಹೊಂಗಲ : ಇದು ಅಂದಿನ ಸಂಪಗಾಂವ ತಾಲೂಕಿನಲ್ಲಿತ್ತು, ಬಾಂಬೆ ಪ್ರಾಂತ್ಯದ ಬೆಳಗಾವಿ ಜಿಲ್ಲೆಯಲ್ಲಿರುವ ೧೫°-೪೫° N (ಉತ್ತರ) ಅಕ್ಷಾಂಶ ೭೪°-೫೨' ಪೂರ್ವರೇಖಾಂಶವನ್ನು ಹೊಂದಿದೆ.[೧೦೦]

ಬೈಲ ಎಂಬ ಶಬ್ದದ ಅರ್ಥ ವಿಶಾಲವಾದ ಮೈದಾನ ಮತ್ತು ಬಯಲು, ಹೊಂಗೆಯ ಮರಗಳಿಂದ ಕೂಡಿದ ಪ್ರದೇಶಕ್ಕೆ ಹೊಂಗಲ ಎಂಬ ಹೆಸರು ಬಂದಿರಬೇಕು. ಐತಿಹಾಸಿಕ ವಿಷಯಕ್ಕೆ ಸಂಬಂಧಿಸಿದಂತೆ ೧೧ನೇ ಶತಮಾನಕ್ಕೆ ಸಂಬಂಧಪಿಸಿದ ಒಂದು ಶಾಸನವಿದ್ದು, ಇದು ತಾಲೂಕು ಕಚೇರಿಯ ಸಮೀಪದಲ್ಲಿದೆ. ಈ ಶಾಸನವು ಶೈವ ಧರ್ಮಕ್ಕೆ ಸಂಬಂಧಿಸಿದ ಶಾಸನವಾಗಿದ್ದು, ಕ್ರಿ.ಶ. ೧೧೭೦ರಲ್ಲಿ ಮಹಾಸಾಮಂತ ಗಂಡಮರಸನು ಮಹೇಶ್ವರ ದೇವರಿಗೆ ಭೂದಾನ ಮಾಡಿದ ಉಲ್ಲೇಖವಿದೆ.

ಬೈಲಹೊಂಗಲದಲ್ಲಿ ೧೨ನೇ ಶತಮಾನಕ್ಕೆ ಸಂಬಂಧಿಸಿದ ಕಲ್ಯಾಣ ಚಾಲುಕ್ಯರ ಕಾಲದ ತ್ರೈಲೋಕ್ಯಮಲ್ಲನ ಕಾಲದ ಶಾಸನವು ದೊರೆತಿದೆ. ಈ ಶಾಸನವು ಜೈನ ಧರ್ಮಕ್ಕೆ ಸಂಬಂಧಿಸಿದೆ. ಈ ಶಾನಸವು ಅಸ್ಪಷ್ಟವಾಗಿದ್ದು, ತೀರ್ಥಂಕರನ ಶಿಲ್ಪವಿದೆ. ಇದರಲ್ಲಿ ತ್ರೈಲೋಕ್ಯಮಲ್ಲ ಎಂಬ

ಬರಹ ಮಾತ್ರ ಸ್ಪಷ್ಟವಾಗಿ ಕಂಡುಬರುತ್ತದೆ. ಇದು ರಾಮಲಿಂಗೇಶ್ವರ ದೇವಾಲಯದ ಸಮೀಪದಲ್ಲಿದೆ.

ಇನ್ನೊಂದು ಶಾಸನವು ಜೈನಧರ್ಮಕ್ಕೆ ಸಂಬಂಧಿಸಿದ ಶಾಸನವಾಗಿದ್ದು, ಆದರೆ ಶಾಸನದ ಬರಹಗಳು ಅಳಿಸಿಹೋಗಿವೆ. ಈ ಶಾಸನದ ಮೇಲ್ಭಾಗದಲ್ಲಿ ಜೈನ ತೀರ್ಥಂಕರನ ಮೂರ್ತಿ ಕೊರೆಯಲಾಗಿದೆ. ಆದರೆ ಶಾಸನದ ಕಾಲ ಭಾಷೆ ರಾಜ್ಯಮನೆತನ ಇವು ಯಾವುದೂ ಸ್ಪಷ್ಟವಾಗಿಲ್ಲ. ಇದು ಕೂಡ ರಾಮಲಿಂಗೇಶ್ವರ ದೇವಾಲಯದ ಸಮೀಪದಲ್ಲಿಯೇ ಇದೆ.

ಇದೇ ದೇವಾಲಯದ ಸಮೀಪದಲ್ಲಿ ಕ್ರಿ.ಶ. ೧೧೬೪ರ ಕಾಲಕ್ಕೆ ಸಂಬಂಧಿಸಿದ ರಟ್ಟರ ಕಾಲದ ಒಂದು ಶಾಸನ ದೊರೆತಿದೆ. ಇದು ಮೂರನೇ ಕಾರ್ತವೀರ್ಯನ ಕಾಲದ ಶಾಸನವಾಗಿದೆ. ಈ ಶಾಸನ ಕೂಡ ಶಿಥಿಲವಾಗಿದ್ದು, ಇದರ ಸಾರಾಂಶವೇನೆಂದರೆ ರಾಜಗಾವುಂಡ ಎಂಬ ವ್ಯಕ್ತಿಯು ಜೈನಬಸದಿಯ ಆಚಾರ್ಯನಾಗಿದ್ದನು. ಬಾಹುಬಲಿ ಸಿದ್ಧಾಂತ ದೇವನಿಗೆ ಭೂಮಿಯನ್ನು ಕೊಡುಗೆಯಾಗಿ ನೀಡಿದನೆಂಬ ಉಲ್ಲೇಖ ಈ ಶಾಸನದಲ್ಲಿದೆ.

ಬೈಲಹೊಂಗಲದ ಜಂಗಮ ಎಂಬುವರ ಮನೆಯಲ್ಲಿ ಹಿಂಭಾಗದಲ್ಲಿ ದೊರೆತ ಮತ್ತೊಂದು ಶಾಸನವು ಕೂಡ ರಟ್ಟರ ಕಾಲದ ದೊರೆ ಅಂಕನ ಕಾಲದ ಶಾಸನವಾಗಿದೆ. ಇದು ಕೂಡ ಜೈನಧರ್ಮಕ್ಕೆ ಸಂಬಂಧಿಸಿದ ಶಾಸನವಾಗಿದ್ದು, ಇದರಲ್ಲಿ ಜೈನಬಸದಿಗೆ ದತ್ತಿ ನೀಡಿದ ಉಲ್ಲೇಖ ವಿರುತ್ತದೆ.

ಬೈಲಹೊಂಗಲದ ಏಣಗಿ ಮಠದವರ ತೋಟದಲ್ಲಿ ಮತ್ತೊಂದು ಶಾಸನ ದೊರೆತಿದೆ. ಇದು ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದ ಶಾಸನವಾಗಿದೆ. ಅಂದಿನ ದೊರೆ ತ್ರಿಭುವನ ಮಲ್ಲದೇವನು ಹೊರಡಿಸಿದ ಶಾಸನವಾಗಿದೆ. ಈ ಶಾಸನವು ಜೈನ ಧರ್ಮಕ್ಕೆ ಸಂಬಂಧಿಸಿದೆ. ಜಿನದೇವಸೂರಿ ಎಂಬ ಜೈನ ಗುರುವು ಜಿನಬಸಿದಿಗೆ ಭೂದಾನ ಮಾಡಿದ ಉಲ್ಲೇಖವಿದೆ. ಜೊತೆಗೆ ರಟ್ಟರ ದೊರೆ ಅಂಕನು ಕಲ್ಯಾಣ ಚಾಲುಕ್ಯರ ತ್ರಿಭುವನಮಲ್ಲನ ಕಾಲದಲ್ಲಿ ಮಹಾಸಾಮಂತ ನಾಗಿದ್ದನೆಂದು ಈ ಶಾಸನವು ತಿಳಿಸುತ್ತದೆ.

ಮಾದನಬಾವಿ : ಈ ಊರಿನ ಬಗ್ಗೆ ಕೂಡ ಹಲವು ಐತಿಹ್ಯಗಳಿವೆ. ಈ ಗ್ರಾಮದಲ್ಲಿರುವ ಒಂದು ಬಾವಿಯಲ್ಲಿ ಜೇನುತುಪ್ಪದಷ್ಟು ಮಧುರವಾದ ನೀರು ತುಂಬಿರುತ್ತಿತ್ತಂತೆ ಆದ್ದರಿಂದ ಈ ಊರಿಗೆ ಮಧು+ಬಾವಿ-ಮದನಬಾವಿ ಎಂಬ ಹೆಸರು ಬಂದಿರಬೇಕೆಂದು ಜನರ ಅಭಿಪ್ರಾಯ.

೧೩ನೇ ಶತಮಾನದ ಕಟ್ಟಿದ ಕಾಲದ ಶಾಸನದಂತೆ, ಈ ಊರಿಗೆ 'ಮಾದಬಾವಿ' ಎಂಬ ಹೆಸರಿತ್ತೆಂದು ತಿಳಿದು ಬರುತ್ತದೆ. ಅಂದರೆ ಮಾದನೆಂಬ ವ್ಯಕ್ತಿಯಿಂದ ಕಟ್ಟಿಸಿದ ಬಾವಿಯಿಂದಾಗಿ ಈ ಊರಿಗೆ ಮಾದಬಾವಿ-ಮದನಬಾವಿ ಎಂಬ ಹೆಸರು ಬಂದಿದೆ. ಮಾದನ+ಬಾವಿ-ಮಾದಬಾವಿ ಎಂದಾಗಿದೆ.[೧೧೧]

ಮೇಟ್ಯಾಲ : ಇದು ಕಿತ್ತೂರಿನಿಂದ ಸುಮಾರು ೮ ಕಿ.ಮೀ. ದೂರದಲ್ಲಿದ್ದು, ಬೆಳವಡಿ ಕರ್ಯಾತನಲ್ಲಿರುವ ಗ್ರಾಮವಾಗಿದೆ. ಇದರ ಮೊದಲ ಹೆಸರು ಜೀರನಹಳ್ಳಿ, ಒಮ್ಮೆ ರೈತನೊಬ್ಬನು ಕಣ ಮಾಡುವ ಸಂದರ್ಭದಲ್ಲಿ ಮೇಟಿಯನ್ನಾಗಿ ಆಲದ ಕುಂಟೆಯನ್ನು ನಿಲ್ಲಿಸಿ ಸುಗ್ಗಿಯನ್ನ ಪೂರೈಸಿದನು. ಆದರೆ ಕೆಲವು ದಿನಗಳ ಬಳಿಕ ಆ ಮೇಟಿಯು ಚಿಗುರಿ ದೊಡ್ಡದಾಗಿ ಬೆಳೆಯ ಲಾರಂಬಿಸಿತು. ಅಂದಿನಿಂದ ಆ ಊರಿಗೆ ಮೇಟಿ+ ಆಲ= ಮೇಟ್ಯಾಲ ಎಂಬ ಹೆಸರು ಬಂದಿತು. ರೂಢಿಯೊಳಗೆ ಈ ಊರನ್ನು ಮೇಟ್ಯಾಳ ಎಂದು ಕರೆಯುತ್ತಾರೆ. ಈ ಊರಿನಲ್ಲಿ ಕಿತ್ತೂರು ಸಂಸ್ಥಾನದ ಸಮಕಾಲೀನ ಮನೆತನವೊಂದು ವಾಸಿಸುತ್ತಿದ್ದು, ಸಂಸ್ಥಾನಕ್ಕೆ ಹೂ- ಪತ್ರೆಗಳನ್ನು ಪ್ರತಿದಿನವೂ ಒಪ್ಪಿಸುತ್ತಿದ್ದರು.[೧೦೨]

ಸಂಗೊಳ್ಳಿ : ಸಂಗೊಳ್ಳಿ ಕಿತ್ತೂರು ಸಂಸ್ಥಾನದ ಪ್ರಮುಖ ಗ್ರಾಮವಾಗಿದ್ದು, ಬೆಳವಡಿ ಕರ್ಯಾತ ನಲ್ಲಿದೆ. ಈ ಊರಿಗೆ ಮೊದಲು ಸಂಗಮಹಳ್ಳಿ ಎಂದು ಕರೆಯುತ್ತಿದ್ದರು. ಕಾರಣ ೧೨ನೇ ಶತಮಾನದಲ್ಲಿ ಶಿವಶರಣರು ಬರುವಾಗ ಸಂಗಮನಾಥನ ಗದ್ದಿಗೆಯನ್ನು ಸ್ಥಾಪಿಸಿದರು. ಕಾರಣ ಈ ಊರಿನಲ್ಲಿ ಮೊಲ ಮತ್ತು ನಾಯಿ ಜಗಳವಾಡುತ್ತಿದ್ದಾಗ ಮೊಲ ನಾಯಿಯನ್ನು ಅಂಜಿಸಿ ಓಡಿಸಿದಾಗ ಈ ಊರಿನಲ್ಲಿ ಸಂಗಮನಾಥನ ಗದ್ದಿಗೆ ಕಂಡು ಬಂದಿತು ಎಂಬುದು ಜನರ ಅಭಿಪ್ರಾಯ. ಈ ಸಂಗನಹಳ್ಳಿಯೇ ಕಾಲಕ್ರಮೇಣ ಸಂಗೊಳ್ಳಿಯಾಯಿತು. ಇಲ್ಲಿ ಸಂಕ್ರಾತಿಯ ದಿವಸ ಸಂಗಮನಾಥನ ಹುಟ್ಟಿದ ಸ್ಮರಣೆಗಾಗಿ ಜಾತ್ರೆಯನ್ನು ಮಾಡುತ್ತಿದ್ದರು. ಕ್ರಿ.ಶ. ೧೮೧೬ ರಲ್ಲಿ ಮಲ್ಲಸರ್ಜನನ ಮರಣಾನಂತರ ಆತನ ಹಿರಿಯ ಪತ್ನಿಯಾದ ರುದ್ರಮ್ಮನು ಸಂಗೊಳ್ಳಿಗೆ ಬಂದು ನೆಲಸುತ್ತಾಳೆ. ಕಾರಣ ಅಲ್ಲೇ ತೀರಿಕೊಂಡ ಬಳಿಕ ಆಕೆಯ ಸಮಾಧಿಯನ್ನು ಕಟ್ಟಲಾಗಿದೆ. ಇದು ಮಲಪ್ರಭಾ ನದಿಯ ನೀರಿನಲ್ಲಿದೆ. ಬೇಸಿಗೆಯಲ್ಲಿ ಮಾತ್ರ ಈ ಸಮಾಧಿಯನ್ನು ನೋಡ ಬಹುದು. ಈ ಊರಿನಲ್ಲಿ ವಾಲಿಕಾರನಿಗೆ, ತಳವಾರನಿಗೆ, ಕೋಲ್ಕರಾನಿಗೆ, ಗೌಡರಿಗೆ ಮತ್ತು ಕುಲಕರ್ಣಿಗಳಿಗೆ ಚಾಕರಿ ಜಮೀನನ್ನು ನೀಡಲಾಗಿದೆ. ಬ್ರಿಟಿಷರು ಈ ಚಾಕರಿ ಭೂಮಿಯ ಮೇಲೆ ಕಂದಾಯ ಹೇರಲು ಪ್ರಾರಂಭಿಸಿದಾಗ ಇದನ್ನು ವಿರೋಧಿಸಿ ರಾಯಣ್ಣನು ಮೊದಲು ಬಂಡಾಯವನ್ನ ಆರಂಭಿಸಿದನು ಕಾರಣ, ಚಾಕರಿ ಭೂಮಿಯನ್ನ ಗಂಡಾಂತರ ಸಂದರ್ಭದಲ್ಲಿ ಹೋರಾಡಿದ ವೀರರಿಗೆ ಕೊಟ್ಟ ಭೂಮಿ ಇದಕ್ಕೆ ತೆರಿಗೆಯನ್ನ ವಿಧಿಸಬಾರದು ಎಂಬುದು ಇವನ ಅಭಿಪ್ರಾಯವಾಗಿತ್ತು. ಇದನ್ನ ಉಳಿಸಿಕೊಳ್ಳಲು ಮೊದಲು ರಾಯಣ್ಣ ಮತ್ತು ಆತನ ಬಂಟರು ಬಂಡಾಯವೇಳುತ್ತಾರೆ. ನಂತರ ಕಿತ್ತೂರಿನ ಬಂಡಾಯ ಹೀಗೆ ಗೆರಿಲ್ಲಾ ಮಾದರಿಯ ಯುದ್ಧದ ಮೂಲಕ ತನ್ನ ಪ್ರತಿರೋಧವನ್ನ ವ್ಯಕ್ತಪಡಿಸಿ, ಬೀಡಿ, ಸಂಪಗಾಂವ, ಕಚೇರಿಗಳನ್ನ ಧ್ವಂಸ ಮಾಡುತ್ತಾನೆ. ಕಾಗದ ಪತ್ರಗಳ ಸುಡುವುದು, ಪತ್ರ ವ್ಯವಹಾರ ತಡೆಯುವುದು ಹೀಗೆ ರಾಯಣ್ಣನು ಕ್ರಾಂತಿಯನ್ನ ಆರಂಭಿಸಿದನು. ನಂತರ ರಕ್ತಮಾನ್ಯ ಭೂಮಿ (ಚಾಕರಿ ಭೂಮಿ) ಇವುಗಳ ಜೋಳದ ರಾಶಿ ಮಾಡುವ ಮೂಲಕ ಬ್ರಿಟಿಷರಿಗೆ ಇನಾಮನ್ನು ನೀಡದೆ ಕಾಯ್ದೆ ಭಂಗಗೊಳಿಸಿದನೆಂದು ತಿಳಿಸುತ್ತಾರೆ. ಇದು ಕಿತ್ತೂರಿನಿಂದ ೧೫ ಕಿ.ಮೀ ದೂರದಲ್ಲಿದ್ದು ಇಲ್ಲಿ

ಪ್ರತಿವರ್ಷ ಚೈತ್ರ ಮಾಸದಲ್ಲಿ ಬರುವ ದವನ ಹುಣ್ಣಿಮೆಯೆಂದು ಮೂರು ದಿವಸಗಳ ಕಾಲ ಜಾತ್ರೆಯನ್ನು ಆಚರಿಸುತ್ತಾರೆ.[೧೦೩]

ಹಿರೇನಂದಿಹಳ್ಳಿ: ಬೆಳವಡಿ ಕರ್ಯಾತನಲ್ಲಿ ಬರುವ ಇದು ಕಿತ್ತೂರಿಗೆ ಸುಮಾರು ೫ ಕಿ.ಮೀ ದೂರದಲ್ಲಿ ಈ ಗ್ರಾಮವಿದೆ. ಇಲ್ಲಿ ಎರಡು ಶಾಸನಗಳು ದೊರೆತಿದ್ದು, ಈ ಶಾಸನವು ಕಲ್ಮೇಶ್ವರ ದೇವಾಲಯದ ಮುಂಭಾಗದಲ್ಲಿದೆ. ಕ್ರಿ.ಶ. ೧೪೯೨ರಲ್ಲಿ ಹೊರಡಿಸಿದ ಶಾಸನವು ಮೂಲತಃ ವೀರಗಲ್ಲಾಗಿದೆ. ಗ್ರಾಮದ ರಕ್ಷಣೆಗಾಗಿ ಹೋರಾಟದಲ್ಲಿ ಮಡಿದವರ ಕುರುಹು ಆಗಿದ್ದು, ಇದರಲ್ಲಿ ಕರಿಯಪ್ಪ ಎಂಬ ಹೆಸರು ಕಂಡುಬರುತ್ತದೆ.

ಇದೇ ಗ್ರಾಮದ ಸಾರಾಶಕ್ತಿಯೆಂಬ ವ್ಯಕ್ತಿಯ ಹೊಲದಲ್ಲಿ ದೊರೆತ ಮತ್ತೊಂದು ಶಾಸನವು ಶಿಥಿಲವಾಗಿದ್ದು, ಇದು ಶೈವ ಧರ್ಮಕ್ಕೆ ಸೇರಿದ ಶಾಸನವಾಗಿದೆ. ಮಲ್ಲಿನಾಯಕನ ಮೊಮ್ಮಗ ಮರಿಯಲ್ಲಪಗೌಡ ವ್ಯಕ್ತಿಯು ಹಿರಿಯನಂದಿಹಳ್ಳಿಯಲ್ಲಿ ಜಮೀನನ್ನು ಮಠವೊಂದಕ್ಕೆ ಕೊಡುಗೆಯಾಗಿ ಬಿಟ್ಟಂತಹ ದಾಖಲೆಯಿದೆ.

ಸಿದ್ಧಸಮುದ್ರ : ಈ ಗ್ರಾಮವು ಬೆಳವಡಿ ಕರ್ಯಾತಿನಲ್ಲಿ ಬರುವ ಗ್ರಾಮವಾಗಿದೆ.ಈ ಗ್ರಾಮದಲ್ಲಿ ಅತ್ಯಂತ ದೊಡ್ಡದಾದ ಕೆರೆಯ ಪಕ್ಕದಲ್ಲಿ ಜನರು ತಮ್ಮ ವಸತಿಯನ್ನು ನಿರ್ಮಿಸಿಕೊಂಡರು ತಾವೆ ನಿರ್ಮಿಸಿಕೊಂಡ ದೊಡ್ಡಕೆರೆ ಯನ್ನು ಸಿದ್ಧಸಮುದ್ರ ಎಂದು ನಮ್ಮ ಪೂರ್ವಜರು ಕರೆದಿದ್ದಾರೆ.[೧೦೪]

೪.೫.೧೧. ಮುನೋಳಿ ಕರ್ಯಾತ

ಅವರೋಳಿ : ಈ ಗ್ರಾಮ ಮುನೋಳಿಯಿಂದ ಸುಮಾರು ೩ ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಕಿತ್ತೂರು ಸಂಸ್ಥಾನದ ಕಾಲದಲ್ಲಿ ಪ್ರಮುಖ ಗ್ರಾಮವಾಗಿದ್ದು, ಈ ಭಾಗವೆಲ್ಲಾ ಅರಣ್ಯದಿಂದ ಕೂಡಿರುವುದರಿಂದ ಸಂಗೊಳ್ಳಿ ರಾಯಣ್ಣನು ಆಂಗ್ಲರ ವಿರುದ್ಧ ದಂಗೆಯೆದ್ದಾಗ ಈ ಊರಿಗೆ ಆಗಾಗ್ಗೆ ಬರುತ್ತಿದ್ದನು. ಅಲ್ಲದೇ ಇಲ್ಲಿಯ ಜನರು ಅವನಿಗೆ ಊಟ ಮತ್ತು ಉಪಚಾರ ನೀಡುತ್ತಿದ್ದರು. ಇಲ್ಲಿಯ ರುದ್ರಸ್ವಾಮಿ ಮಠಕ್ಕೆ ಸಂಗೊಳ್ಳಿರಾಯಣ್ಣನು ಬಂದು ಭೇಟಿ ಕೊಡುತ್ತಿದ್ದನು. ಅಲ್ಲದೇ ಈ ಊರಿನ ಗೌಡರಿಗೆ ತಳವಾರರಿಗೆ, ಕುಲಕರ್ಣಿಯವರಿಗೆ ಮತ್ತು ಓಲೆಕಾರರಿಗೆ ಮಲಸರ್ಜನ ಕಾಲದಲ್ಲಿ ಇನಾಮು ಭೂಮಿಯನ್ನು ನೀಡಲಾಗಿತ್ತು.[೧೦೫]

ಕಗ್ಗಣಗಿ : ಈ ಗ್ರಾಮವು ಮುನೋಳಿ ಕರ್ಯಾತನಲ್ಲಿ ಬರುವ ಗ್ರಾಮವಾಗಿದ್ದು, ಇದು ಸುಮಾರು ೪-೫ ಕಿ.ಮೀ ದೂರದಲ್ಲಿ ಮುನೋಳಿ ಗ್ರಾಮವು ಇದೆ. ಇಲ್ಲಿ ಮಲ್ಲಸರ್ಜನನ ಕಾಲದ ಒಂದು ಬಾವಿಯಿದ್ದು ಇದನ್ನು ದೇಸಾಯಿಯ ಬಾವಿಯೆಂದು ಕರೆಯುತ್ತಿದ್ದರು. ಈ ಊರಿನಲ್ಲಿ ಗುಂಡಾದ ಕಲ್ಲುಗಳು ಹೇರಳವಾಗಿ ದೊರೆಯುವುದರಿಂದ ಈ ಊರಿಗೆ 'ಕಗ್ಗಣಗಿ' ಎಂಬ ಹೆಸರು ಬಂದಿರಬೇಕು.

ಕೊಡಚವಾಡ : ಇದು ಮುನೋಳಿ ಕರ್ಯಾತಿನಲ್ಲಿ ಬರುವ ಗ್ರಾಮವಾಗಿದೆ. ಕೊಡಚ+ವಾಡ > ಕೊಡಚವಾಡ ಎಂದರೆ, ಕೊಡಚ ಎಂಬ ಒಂದು ಬಗೆಯ ಸಸ್ಯಗಳು ಈ

ಪ್ರದೇಶದಲ್ಲಿ ಹೇರಳವಾಗಿ ಬೆಳೆದಿರುವುದರಿಂದ ಈ ಗ್ರಾಮಕ್ಕೆ ಕೊಡಚವಾಡ ಎಂದು ಕರೆದಿದ್ದಾರೆ.[೧೦೬]

ಚಿಕ್ಕದಿನಕೊಪ್ಪ : ಈ ಗ್ರಾಮವು ಮುನೋಳಿ ಕರ್ಯಾತನಲ್ಲಿ ಬರುವ ಗ್ರಾಮವಾಗಿದ್ದು, ಇದು ಒಂದು ಸಣ್ಣ ಗ್ರಾಮವಾಗಿದೆ. ಕಿತ್ತೂರು ಸಂಸ್ಥಾನಕ್ಕೂ ಈ ಗ್ರಾಮಕ್ಕೂ ನಿಕಟ ಸಂಬಂಧವಿದೆ. ಇಲ್ಲಿಯ ಗೌಡರಿಗೆ, ಕುಲಕರ್ಣಿಯರಿಗೆ, ಹಳಬರಿಗೆ ಇನಾಮಾಗಿ ಕೊಟ್ಟಂತಹ ಉದಾಹರಣೆಗಳಿವೆ. ಆದ್ದರಿಂದ ಈ ಊರು ಕೂಡಾ ಕಿತ್ತೂರಿನ ಜೊತೆಗೆ ಸಂಬಂಧವಿತ್ತು.[೧೦೭]

ಬಿಳಕಿ : ಈ ಗ್ರಾಮವು ಮುನೋಳಿ ಕರ್ಯಾತನಲ್ಲಿ ಬರುವ ಗ್ರಾಮವಾಗಿದ್ದು, ಇದು ಮುನೋಳಿಯಿಂದ ಸುಮಾರು ೫ ಕಿ.ಮೀ ದೂರದಲ್ಲಿದೆ. ಇಲ್ಲಿಯ ಜನರು ಕಿತ್ತೂರು ಸಂಸ್ಥಾನದ ನಿಷ್ಠಾವಂತ ಅನುಯಾಯಿಗಳಾಗಿದ್ದರಿಂದ ಆಂಗ್ಲರು ಈ ಗ್ರಾಮವನ್ನು ಹಾಳುಮಾಡಿದರು. ಆಗ ಇಲ್ಲಿಯ ಜನ ಕೆಲವರು ಅವರೋಳಿಗೆ ಹೋಗಿ ನೆಲಸಿದರು. ಆದರೆ ಕೆಲವರು ಮಾತ್ರ ಇದೇ ಗ್ರಾಮದಲ್ಲಿ ಉಳಿದು, ತಮ್ಮ ಜೀವನದ ಬೆಳಕನ್ನು ಕಂಡಿರುವ ಗ್ರಾಮವಾಗಿದ್ದರಿಂದ ಈ ಊರಿಗೆ 'ಬೆಳಕಿ' ಅಥವಾ 'ಬಿಳಕಿ' ಎಂಬ ಹೆಸರು ಬಂದಿದೆ. ಈ ಊರಿನಲ್ಲಿ ಕೆಲವು ಜನರು ಆನೆಗಳ ವ್ಯಾಪಾರವನ್ನು ಕೂಡಾ ಮಾಡುವ ಸ್ಥಳವಾಗಿತ್ತು. ಈ ಊರಿನ ಜನರಿಗೆ ಇನಾಮು ಭೂಮಿಗಳನ್ನು ನೀಡಲಾಗಿದೆ.[೧೦೮]

ಹಿರೇಮುನೋಳಿ ಮತ್ತು ಚಿಕ್ಕಮುನೋಳಿ : ಮುನೋಳಿ ಗ್ರಾಮವು ಮುನೋಳಿ ಕರ್ಯಾತನಲ್ಲಿ ಬರುವ ಗ್ರಾಮ. ಇಲ್ಲಿ ಚಿಕ್ಕಮುನೋಳಿ ಮತ್ತು ಹಿರೇಮುನೋಳಿ ಎಂಬ ಎರಡು ಗ್ರಾಮ ಗಳಿವೆ. ಮುನೋಳಿ ಎಂಬ ಹೆಸರು ಬರಲು ಈ ಊರಿನಲ್ಲಿ ಮೊದಲು ವೀರಶೈವ ಮುನಿಗಳು ವಾಸವಾಗಿದ್ದರು. ಆದ್ದರಿಂದ ಈ ಗ್ರಾಮಕ್ಕೆ ಮುನೋಳಿ ಎಂಬ ಹೆಸರು ಬಂದಿದೆ. ಕಾಲಾನಂತರ ದಲ್ಲಿ ಈ ಗ್ರಾಮದಲ್ಲಿ ಪ್ಲೇಗ್‌ನಂತಹ ಭೀಕರ ಕಾಯಿಲೆ ಬಂದಾಗ ಜನರು ವಿಭಜನೆಯಾಗಿ ಕೆಲವರು ದೊಡ್ಡ ಮುನೋಳಿಯಲ್ಲಿ (ಹಿರೇಮುನೋಳಿ) ಇನ್ನು ಕೆಲವರು ಚಿಕ್ಕಮುನೋಳಿಯಲ್ಲಿ ವಾಸಿಸಲಾರಂಭಿಸಿದರು. ಕಿತ್ತೂರು ಸಂಸ್ಥಾನಕ್ಕೂ ಮತ್ತು ಈ ಗ್ರಾಮಕ್ಕೂ ನಿಕಟ ಸಂಪರ್ಕವಿದ್ದು, ಇಲ್ಲಿಯ ಹಿರೇಮಠ ಮತ್ತು ಬದ್ರಿ ಎಂಬ ಎರಡು ಮನೆತನಗಳ ಜೊತೆಗೆ ಮಲ್ಲಸರ್ಜನ ಹಾಗೂ ಚೆನ್ನಮ್ಮನವರು ಈ ಗ್ರಾಮಕ್ಕೆ ಬಂದು ಹೋಗುತ್ತಿದ್ದರು. ಚೆನ್ನಮ್ಮನು ಸೋತಂತಹ ಸಂದರ್ಭದಲ್ಲಿ ಕಿತ್ತೂರಿನ ಸಂಪತ್ತನ್ನು ಕುದುರೆಗಳ ಮೂಲಕ ಬದ್ರಿ ಮತ್ತು ಹಿರೇಮಠ ಮನೆಗಳಿಗೆ ಕಳುಹಿಸಿದ್ದರು ಎಂಬುದು ಇಲ್ಲಿಯ ಜನರ ಅಭಿಪ್ರಾಯ. ಈ ಊರಿನಲ್ಲಿ ಕಿತ್ತೂರು ಸಂಸ್ಥಾನಕ್ಕೆ ಸಂಬಂಧಪಟ್ಟ ಒಂದು ಹುಡೆ ಎಂಬುದಿತ್ತು. ಆದರೆ ಈಗ ನಶಿಸಿ ಹೋಗಿದೆ. ಈ ಗ್ರಾಮವು ಒಂದು ಆಡಳಿತ ಕೇಂದ್ರವಾಗಿದ್ದು, ಸುಮಾರು ೧೧ ಗ್ರಾಮಗಳ ಕಂದಾಯ ಸಂಗ್ರಹಣೆ ಮಾಡುವ ಕೇಂದ್ರವಾಗಿತ್ತು. ಸಂಗೊಳ್ಳಿರಾಯಣ್ಣನು ಆಂಗ್ಲರಿಂದ ಕಣ್ಣುತಪ್ಪಿಸಿಕೊಂಡು ಗುಡ್ಡದಲ್ಲಿದ್ದಾಗ ಈ ೧೧ ಗ್ರಾಮದ ಜನರು ಪ್ರತಿನಿತ್ಯ ಆತ ಮತ್ತು ಆತನ ಸಹಚರರಿಗೆ ಊಟದ ಸೌಲಭ್ಯವನ್ನು ಒದಗಿಸುತ್ತಿದ್ದರು.[೧೦೯]

ಮುನೋಳಿ ಗ್ರಾಮವು ಅರಣ್ಯದಿಂದ ಕೂಡಿದ್ದು, ಇಲ್ಲಿ ಭತ್ತ, ರಾಗಿ ಮುಂತಾದ ಅನೇಕ ಬೆಳೆಗಳನ್ನು ಬೆಳೆದು ಕಿತ್ತೂರು ಸಂಸ್ಥಾನಕ್ಕೆ ಹೆಚ್ಚು ಆದಾಯ ತಂದು ಕೊಡುತ್ತಿದ್ದರು. ಇಲ್ಲಿಯ ಜನ ಕಿತ್ತೂರೆಂದರೆ ಒಂದು ಹೆಮ್ಮೆಯ ಸಂಕೇತ ಎಂದು ಭಾವಿಸಿದ್ದರು. ಕಾರಣ ಆಂಗ್ಲರ ವಿರುದ್ಧ ಹೋರಾಡಿದ ಈ ಊರಿನ ಜನರು ಕೂಡಾ ಭಾಗಿಯಾಗಿದ್ದರು.[೧೧೦]

ಚಿಕ್ಕಹಟ್ಟಿಹೊಳಿ ಮತ್ತು ದೊಡ್ಡಹಟ್ಟಿಹೊಳಿ : ಈ ಗ್ರಾಮಗಳೆರಡು ಮುನೋಳಿ ಕರ್ಯಾತನಲ್ಲಿ ಬರುವ ಗ್ರಾಮಗಳಾಗಿವೆ. ಕೇವಲ ೨-೩ ಕಿ.ಮೀ ಅಂತರದಲ್ಲಿವೆ. ಈ ಗ್ರಾಮವು ಮಲಪ್ರಭಾ ನದಿಯ ದಂಡೆಯ ಮೇಲಿರುವುದರಿಂದ ಹಾಗೂ ಇಲ್ಲಿ ಹಟ್ಟಿಶಿವಾಲಯವೆಂಬ ದೇವಾಲಯ ಇರುವುದರಿಂದ ಈ ಊರಿಗೆ 'ಹಟ್ಟಿಹೊಳಿ' ಎಂಬ ಬಂದಿದೆ. ಈ ಗ್ರಾಮದಲ್ಲೂ ಪ್ಲೇಗ್ ನಂತಹ ಮಾರಕ ಕಾಯಿಲೆ ಬಂದಾಗ ಗ್ರಾಮವು ವಿಭಜನೆಯಾಗಿ ಕೆಲವರು ದೊಡ್ಡಹಟ್ಟಿಹೊಳಿಯಲ್ಲಿ ಮತ್ತು ಕೆಲವರು ಚಿಕ್ಕಹಟ್ಟಿಹೊಳಿಯಲ್ಲಿ ವಾಸಿಸಲಾರಂಭಿಸಿದರು ಎಂದು ತಿಳಿಸುತ್ತಾರೆ. ಆದ್ದರಿಂದ ಈ ಗ್ರಾಮವು ಹಿರೇಹಟ್ಟಿಹೊಳಿ ಮತ್ತು ಚಿಕ್ಕಹಟ್ಟಿಹೊಳಿ ಎಂಬ ಹೆಸರು ಬಂದಿದೆ.[೧೧೧]

೪.೫.೧೨. ಲಕೋಳಿ ಕರ್ಯಾತ

ಎಡೋಗ : ಎಡೋಗ ಎಂಬ ಗ್ರಾಮವು ಲಕೋಳಿ ಕರ್ಯಾತನಲ್ಲಿ ಬರುವ ಸಣ್ಣ ಗ್ರಾಮವಾಗಿದೆ. ಇದು ಮಲಪ್ರಭಾ ನದಿಯ ಎಡಭಾಗದಲ್ಲಿ ಒಕ್ಕಲುತನವನ್ನು ಮಾಡುವ ಜನಾಂಗ ವಾಸಿಸಿರುವುದರಿಂದ ಈ ಗ್ರಾಮಕ್ಕೆ 'ಎಡೋಗ' ಎಂಬ ಹೆಸರು ಬಂದಿದೆ. ಇಲ್ಲಿ ಮರಾಠರ ಪ್ರಾಬಲ್ಯವಿದೆ.

ಕಮಸಿನಕೊಪ್ಪ : ಈ ಗ್ರಾಮವು ಒಕ್ಕಲುತನಕ್ಕೆ ಪ್ರಸಿದ್ಧಿ ಪಡೆದುಕೊಂಡಿದೆ. ಇಲ್ಲಿಯ ಭೂಮಿ ಫಲವತ್ತತೆಯಿಂದ ಕೂಡಿರುವುದರಿಂದ ಇಲ್ಲಿಯ ಜನರು ಸುಖಿಗಳಾಗಿದ್ದಾರೆ. ಭತ್ತ, ಕಬ್ಬು ಮತ್ತು ಅನೇಕ ದವಸ-ದಾನ್ಯಗಳನ್ನು ಬೆಳೆಯುತ್ತಾರೆ. ಇಲ್ಲಿ ಗಿರಿಯಮ್ಮ ಎಂಬ ದೇವಾಲಯ ವಿದೆ. ಅಲ್ಲದೇ ಮದ್ಯದಲ್ಲಿ ಬಸವೇಶ್ವರನ ದೇವಾಲಯವಿದೆ. ಗ್ರಾಮದ ಪಶ್ಚಿಮಕ್ಕೆ ಮಡಿವಾಳ ಸ್ವಾಮಿಗಳ ಗದ್ದುಗೆ ಇದೆ. ಕನ್ನಡ ಭಾಷಿಕರು ಹೆಚ್ಚಾಗಿದ್ದರೂ, ಇಲ್ಲಿ ಮರಾಠರದೇ ಪ್ರಾಬಲ್ಯವಾಗಿದೆ.

ದೇವಲತ್ತಿ : ಈ ಗ್ರಾಮವು ಲಕೋಳಿ ಕರಿಯಾತಿನಲ್ಲಿ ಬರುವ ಅತೀ ದೊಡ್ಡ ಗ್ರಾಮ. ಇದಕ್ಕೆ 'ದೌಲತ್ತು' ಎಂದು ಕರೆಯುತ್ತಿದ್ದರು. ದೌಲತ್ತು ಎಂದರೆ 'ಸಂಪತ್ತು' ಈ ಶಬ್ದವು ಅಪಭ್ರಂಶ ವಾಗಿ 'ದೇವಲತ್ತಿ' ಆಯಿತು. ಇಲ್ಲಿ ಜಗದ್ಗುರು ಸಿದ್ಧರಾಮೇಶ್ವರ ಶಿವಾಚಾರ್ಯ ಶಾಖಾ ಮಠವಿದೆ. ಈ ಗ್ರಾಮದಲ್ಲಿ ವೀರಶೈವ ಧರ್ಮದ ಜನರು ಬಹಳಷ್ಟಿರುವುದರಿಂದ ಇಲ್ಲಿ ಅನೇಕ ಧಾರ್ಮಿಕ ಕಾರ್ಯಗಳು ನಡೆಯುತ್ತಿವೆ. ಕಲ್ಮೇಶ್ವರ ಗುಡಿ ಹಾಗೂ ಹಿರೇಮಠ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಇಲ್ಲಿ ಯಾವುದೇ ಐತಿಹಾಸಿಕ ಕುರುಹುಗಳು ಕಂಡುಬರುವುದಿಲ್ಲ. ಈ ಗ್ರಾಮದ ಪೂರ್ವಕ್ಕೆ ಖಾನಾಪುರ, ಇದರ ದಕ್ಷಿಣಕ್ಕೆ ಮಲಾಪಹರಿ ನದಿ ಹರಿಯುತ್ತದೆ. ಆದ್ದರಿಂದ ಇಲ್ಲಿಯ ಜನರು ಒಕ್ಕಲುತನವನ್ನೇ ನಂಬಿಕೊಂಡು ಬದುಕಿದ್ದರು. ಕಿತ್ತೂರು ಚೆನ್ನಮ್ಮನ ಕಾಲದಲ್ಲಿ ದೇವಲತ್ತಿಯಲ್ಲಿ ಅನೇಕ ಯುವಕರು ಬಲಾಢ್ಯರಾಗಿದ್ದರೆಂದು ತಿಳಿದುಬರುತ್ತದೆ.

ಒಂದು ಲಾವಣಿಯಲ್ಲಿ ಯುದ್ಧಕ್ಕೆ ಹೊರಟ ಚೆನ್ನಮ್ಮನು ದೇವಲತ್ತಿಯ ಕಾಳಿಸಿಂಘ್ಯಾನನ್ನು ಕರೆಸಿ ಯುದ್ಧಕ್ಕೆ ಹೊರಡಿ ಎಂಬ ಆದೇಶವನ್ನು ನೀಡಿದ್ದರು.[೧೧೨]

ಬಲೋಗ : ಬಲೋಗ ಎಂಬ ಗ್ರಾಮವು ಲಕೋಳಿ ಕರ್ಯಾತನಲ್ಲಿ ಬರುವ ಮತ್ತೊಂದು ಗ್ರಾಮ. ಇದರ ಪಶ್ಚಿಮಕ್ಕೆ ಖಾನಾಪುರವಿದೆ. ಪೂರ್ವಕ್ಕೆ ಲಕ್ಕೆಬೈಲ್, ಉತ್ತರಕ್ಕೆ ಗುಡ್ಡವಿದೆ. ಈ ಮಧ್ಯದಲ್ಲಿರುವ ಬಲೋಗವು ಫಲವತ್ತತೆಯಿಂದ ಕೂಡಿದ ಗ್ರಾಮವಾಗಿದೆ. ಕೃಷಿಯೆ ಇಲ್ಲಿಯ ಮುಖ್ಯ ಉದ್ಯೋಗವಾಗಿದೆ. ಇಲ್ಲಿ ದ್ಯಾಮವ್ವ ಮತ್ತು ಹನುಮಂತ ದೇವರ ಗುಡಿಯಿದೆ.

ಲಕ್ಕೇಬೈಲ್ : ಈ ಊರಿನಲ್ಲಿ ಲಕ್ಕಿ ಗಿಡಗಳು ಬಹಳಷ್ಟು ಬೆಳೆದಿರುವದರಿಂದ ಹಾಗೂ ಬಯಲಾದ ಪ್ರದೇಶವಾದುದರಿಂದ ಈ ಊರಿಗೆ ಲಕ್ಕೆಬೈಲ್ ಎಂದು ಹೆಸರು ಬಂದಿರುವದು, ಈ ಗ್ರಾಮದ ಮುಂದಿನ ಭಾಗದಲ್ಲಿ ಒಂದು ಹಳ್ಳ ಹರಿಯುತ್ತದೆ. ಇದರ ದಡದಲ್ಲಿ ಲಕ್ಕಿಗಿಡಗಳು ಹೇರಳವಾಗಿ ಬೆಳೆಯುತ್ತವೆ. ಇದರ ಮಧ್ಯದಲ್ಲಿ ಲಕ್ಷ್ಮಿ ದೇವಾಲಯ ಇರುವದು ವಿಶೇಷವಾಗಿದೆ. ಇಲ್ಲಿಯ ಜನರ ಭಾವನೆ ಎನೆಂದರೆ ಲಕ್ಕಿ ಗಿಡದಲ್ಲಿ ಲಕ್ಷ್ಮಿಯು ಇರುವ ನಂಬಿಕೆ ಇದೆ. ಲಕ್ಷ್ಮಿ + ಬಯಲು > ಲಕ್ಕೇಬಯಲು ಎಂಬುದು ಜನಪದರ ಭಾವನೆ.[೧೧೩]

೪.೫.೧೩. ಸಂಪಗಾಂವ ಕರ್ಯಾತ

ಕೆಸರಕೊಪ್ಪ : ಈ ಭಾಗದಲ್ಲಿ ಹೆಚ್ಚು ಮಳೆಯಾಗುವುದರಿಂದ ಈ ಗ್ರಾಮವು ರಾಡಿಯಿಂದ ಅಥವಾ ಕಲುಷಿತ ಕೊಳೆಯಿಂದ ಕೂಡಿದ ಪ್ರದೇಶವಾಗಿರಬೇಕು. ಹೀಗಾಗಿ ಈ ಗ್ರಾಮಕ್ಕೆ ಕೆಸರಕೊಪ್ಪ ಎಂಬ ಹೆಸರು ಬಂದಿರಬಹುದು.

ಊರು ಎಂದರೆ ಪ್ರಾಕೃತಿಕ ಹಾಗೂ ಭೌಗೋಳಿಕ ಪ್ರದೇಶದ ಆಳ, ವಿಸ್ತಾರ, ಎತ್ತರ ಗಳನ್ನು ಗಮನಕ್ಕೆ ಬಂದು ದುಡಿದು ತಿನ್ನುವ, ಹರುಕು ಬಟ್ಟೆಯ, ಮುರುಕು ಮನೆಗಳ, ಗುಡಿಸಲು ಕೊಂಪೆ, ಸಾಲು ಒಂದೆಡೆಯಾದರೇ, ಭವ್ಯ ಬಂಗಲೆಗಳನ್ನು ನಿರ್ಮಿಸಿಕೊಂಡು ಸಾಮಾಜಿಕ ಉನ್ನತ ಶ್ರೇಣಿಯನ್ನು ಅನುಭವಿಸುವ ವರ್ಗ ಮತ್ತೊಂದೆಡೆಗೆ ಗಮನಿಸಬಹುದು ಗುಡಿ, ಮಂದಿರ, ಜೀವನೋಪಾಯಕ್ಕೆ ಬದುಕು, ಸವೆಸುವ ಅನೇಕ ಕುಲಕಸುಬಿನ ವೃತ್ತಿ ಬಾಂಧವರನ್ನು ಕಾಣಬಹುದು. ಊರು ಎಂಬ ವಾರ್ಗಿಕ ಪದವು ದ್ರಾವಿಡ ಮೂಲ ಇರ್ ಅಥವಾ ಊರ್ ಧಾತುವಿನಿಂದ ಬಂದಿದ್ದು, ನೆಲೆಸುವಿಕೆ, ಇರುವಿಕೆ ಎಂದರ್ಥ.[೧೧೪] ತೇಗೂರ, ಗರ್ಜೂರ ತಲ್ಲೂರು, ಹೊಸೂರು, ನಾಗನೂರು, ಗುಡದೂರು ಇತ್ಯಾದಿಗಳು.

ಚಿವುಟಗುಂಡಿ : ಸಂಪಗಾವ ಕರ್ಯಾತನ ಒಂದು ಗ್ರಾಮವಾಗಿದ್ದು, ಈ ಊರಿಗೆ ಮೊದಲು ಚಿನ್ನದ ಗುಡಿ ಎಂದು ಕರೆಯುತ್ತಿದ್ದರು. ಕಾಲಕ್ರಮೇಣ ಇದಕ್ಕೆ ಚಿವುಟಗುಂಡಿ ಎಂದು ಕರೆದಿರ ಬಹುದು. ಚಿವುಟಗುಂಡಿಯು ಕಿತ್ತೂರಿನಿಂದ ಸುಮಾರು ೩೫ ಕಿ.ಮೀ ದೂರದಲ್ಲಿದೆ. ಅಲ್ಲದೆ ಸಂಪಗಾವಿಯು ಸುಮಾರು ೫ ಕಿ.ಮೀ ದೂರದಲ್ಲಿದೆ. ಇಲ್ಲಿ ಸಂಸ್ಥಾನದ ಕಾಲದಲ್ಲಿ ದುಡಿದ ಜನರಿಗೆ ಸುಮಾರು ೫೦ ಎಕರೆಗೂ ಹೆಚ್ಚು ಚಾಕರಿ ಭೂಮಿಯನ್ನ ನೀಡಲಾಗಿದೆ. ಬಸವೇಶ್ವರ,

ಕಲ್ಮೇಶ್ವರ ಮತ್ತು ವೀರಭದ್ರೇಶ್ವರ ದೇವರ ಪೂಜೆಗಾಗಿ ಭೂಮಿಯನ್ನ ನೀಡಲಾಗಿದೆ. ಇಲ್ಲಿ ಹಳಬರು, ಗೌಡರು ಈ ಭೂಮಿಯನ್ನ ತಮ್ಮ ವತನಕಿ ಭೂಮಿಯನ್ನಾಗಿ ಪರಿವರ್ತಿಸಿ ಗೊಂಡಿದ್ದಾರೆ.[೧೧೫]

ಜಕಿನಾಯಕನಕೊಪ್ಪ : ಈ ಗ್ರಾಮ ಕೂಡಾ ಸಂಪಗಾಂವ ಕರ್ಯಾತಗೆ ಸಂಬಂಧಿಸಿದ ಗ್ರಾಮ ವಾಗಿದೆ. ಈ ಊರಿನಲ್ಲಿ ಜಕ್ಕಣಚಾರಿ ಎಂಬ ವ್ಯಕ್ತಿ ಊರನ್ನು ನಿರ್ಮಿಸಿದ್ದರಿಂದ ಈ ಊರಿಗೆ ಜಕಿನಾಯಕನಕೊಪ್ಪ ಎಂಬ ಹೆಸರು ಬಂದಿತಂತೆ. ಕಿತ್ತೂರು ಸಂಸ್ಥಾನಕ್ಕೆ ಸಂಬಂಧಿಸಿದ ಊರಾಗಿದ್ದು, ಮಲ್ಲಸರ್ಜನನ ಕಾಲದಲ್ಲಿ ಇಲ್ಲಿಯ ಅನೇಕ ಜನರಿಗೆ ಭೂಮಿಗಳನ್ನ ನೀಡಿದನೆಂಬ ಉಲ್ಲೇಖ ವಿದೆ. ಚಾಕರಿ ಭೂಮಿಯನ್ನ ದ್ಯಾಮವ್ವನ ಗುಡಿಯ ಪೂಜಾರರಿಗೆ, ಬಸವಣ್ಣನ ಗುಡಿಯ ಪೂಜಾರರಿಗೆ, ಗೌಡರಿಗೆ ಹಾಗೂ ದಳಪತಿಗೆ ನೀಡಿದನೆಂದು ತಿಳಿದುಬರುತ್ತದೆ.

ತಿಗಡಿ : ತಿಗಡಿ ಗ್ರಾಮವು ಸಂಪಗಾಂವು ಕರ್ಯಾತನಲ್ಲಿ ಬರುವ ಐತಿಹಾಸಿಕ ಗ್ರಾಮ. ಬೈಲಹೊಂಗಲದಿಂದ ಸುಮಾರು ೧೯ ಕಿ.ಮೀ. ದೂರದಲ್ಲಿದೆ. ತಿಗಡಿ ಎಂಬ ಹೆಸರು ಈ ಊರಿಗೆ ಬರಲು ಇಲ್ಲಿ ಪ್ರಾಚೀನ ಕಾಲದ ಮೂರು ದೇವಾಲಯಗಳಿರುವುದರಿಂದ ಈ ಊರಿಗೆ ತ್ರಿಗುಡಿ, ತಿಗುಡಿ ಎಂದು ಕರೆಯುತ್ತಾ ನಂತರ ಈ ಊರು ತಿಗಡಿ ಎಂದಾಗಿದೆ. ಈ ಗ್ರಾಮ ದಲ್ಲಿ ಕಿತ್ತೂರು ಸಂಸ್ಥಾನದ ಖಜಾಂಚಿಯಾದ ಜಕಾತಿ ಎಂಬುವರ ಕುಟುಂಬ ವಾಸವಾಗಿದೆ. ಇವರ ಮನೆಯು ಒಂದು ಸುಂದರವಾದ ವಾಡೆಯಾಗಿದ್ದು, ಇದು ನಶಿಸುವ ಹಂತದಲ್ಲಿದೆ.

ಈ ಉರಿನಲ್ಲಿ ಮೂರು ಮುಖ್ಯವಾದ ಗುಡಿಗಳಿವೆ. ಈಶ್ವರ, ಸಿದ್ಧಲಿಂಗೇಶ್ವರ ಮತ್ತು ಕಲ್ಮೇಶ್ವರ ಗುಡಿಗಳಿದ್ದದರಿಂದ ಈ ಊರಿಗೆ ತ್ರಿಗುಡಿ ಅಥವಾ ತಿಗಡಿ ಎಂಬ ಹೆಸರು ಬಂದಿ ತೆಂದು ಇಲ್ಲಿಯ ಊರ ಹಿರಿಯರ ಅಭಿಪ್ರಾಯ. ೧೨ನೇ ಶತಮಾನದ ಕಲ್ಯಾಣಮ್ಮ ಎಂಬ ಶಿವಶರಣೆಯು ಈ ಊರಿನಲ್ಲಿ ಐಕ್ಯವಾದುದರಿಂದ ಇಲ್ಲಿಯ ಹಳ್ಳದ ದಂಡೆಯ ಮೇಲೆ ಈಕೆಯ ಸಮಾಧಿಯನ್ನು ಮಾಡಿ ಗುಡಿ ಕಟ್ಟಿಸಿ, ಪೂಜೆ ಪುನಸ್ಕಾರಗಳು ಇಂದಿಗೂ ನಡೆಯುತ್ತವೆ.

ಕಿತ್ತೂರು ಸಂಸ್ಥಾನ ಕಾಲದಲ್ಲಿ ಅಧಿಕಾರಿಗಳಾಗಿ ಸೇವೆ ಮಾಡಿದಂತಹ ಜಕಾತಿಯವರಿಗೆ ನೂರಾರು ಎಕರೆ ಭೂಮಿಯನ್ನ ಇನಾಮ ಭೂಮಿಯೆಂದು ನೀಡಲಾಗಿದೆ. ಅದನ್ನ ಇಂದಿಗೂ ಚಾಕರಿ ಭೂಮಿಯೆಂದು ಕರೆಯುತ್ತಾರೆ. ಇವರು ೧೪ ಹಳ್ಳಿಗಳ ಮೇಲ್ವಿಚಾರಣೆ ಮಾಡುವ, ಕಂದಾಯ ವಸೂಲಿ ಮಾಡುವ ಜವಾಬ್ದಾರಿಯನ್ನ ಈ ಮನೆತನಕ್ಕೆ ವಹಿಸಲಾಗಿತ್ತು. ಈ ಗ್ರಾಮದ ದಕ್ಷಿಣ ದಿಕ್ಕಿಗೆ ಸುಮಾರು ೩೦ ಕಿ.ಮೀ ದೂರದಲ್ಲಿ ಕಿತ್ತೂರು ಇದೆ. ಇಲ್ಲಿಂದ ಸುಮಾರು ೧೦ ಕಿ.ಮೀ ದೂರದಲ್ಲಿ ಸಂಪಗಾಂವ ಇದೆ.[೧೧೬]

ದೇವಲಾಪುರ : ಇಲ್ಲಿ ಪ್ರಾಚೀನ ಕಾಲದ ಅನೇಕ ಗುಡಿ ಗೋಪುರಗಳು ಇರುವುದರಿಂದ ಈ ಊರಿಗೆ ದೇವಲಾಪುರ ಎಂಬ ಹೆಸರು ಬಂದಿದೆ.[೧೧೬]

ನಾಗಲಾಪುರ : ಈ ಗ್ರಾಮವು ಸಂಪಗಾಂವ ಕರ್ಯಾತನಲ್ಲಿ ಬರುವ ಗ್ರಾಮವಾಗಿದೆ. ಇಲ್ಲಿ ಅಕ್ಕ ನಾಗಲಾಂಬಿಯು ಈ ಗ್ರಾಮದ ಮೂಲಕ ಹಾದು ಉಳವಿಗೆ ಪ್ರಯಾಣ ಬೆಳೆಸಿದ್ದಾಳೆ. ಆದ್ದರಿಂದ ಈ ಶರಣೆಯ ನೆನಪಿಗೋಸ್ಕರ ಈ ಊರಿಗೆ ನಾಗಲಾಪುರ ಎಂಬ ಹೆಸರು ಬಂದಿದೆ.[೧೧೮]

ನಾಗನೂರು : ನಾಗನೂರು ಕೂಡಾ ಸಂಪಗಾಂವ ಕರ್ಯಾತನಲ್ಲಿ ಬರುವ ಗ್ರಾಮವಾಗಿದ್ದು, ಇಲ್ಲಿಯ ಗ್ರಾಮಪಂಚಾಯಿತಿ ಕಛೇರಿಯ ಬಳಿ ಈ ಶಾಸನವನ್ನು ನಿಲ್ಲಿಸಲಾಗಿದೆ. ಇದು ೧೨ನೇ ಶತಮಾನದ ಶಾಸನವಾಗಿದ್ದು, ಸಂಸ್ಕೃತ ಲಿಪಿಯನ್ನು ಹೊಂದಿದೆ. ಈ ಶಾಸನದಲ್ಲಿ ಮೂಲಸಂಘ ಕಾಣೂರ್ಗಣಕ್ಕೆ ಸೇರಿದ ಒಬ್ಬ ಜೈನ ಗುರುವಿನ ಹೆಸರಿದ್ದು, ಹೆಸರು ಅಳಿಸಿಹೋಗಿದೆ. ಈತ ಕನ್ನರದೇವನ ಮಂತ್ರಿಯಾಗಿದ್ದನೆಂದು ಮತ್ತು ಕನಕೇಂದ್ರ ಎಂಬ ವ್ಯಕ್ತಿ ಈ ಜೈನ ಮೂರ್ತಿಯ ಸ್ಥಾಪಿಸಿದನೆಂದು ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ.

ಪಟ್ಟಿಹಾಳ : ಪಟ್ಟಿ+ಪಾಳ್ಯ = ಪಟ್ಟಿಹಾಳ. ಈ ಊರಿನ ಸುತ್ತುಲು ಬೂದಿಯಿಂದ ಕೂಡಿದ ಪಟ್ಟಿ ಪಟ್ಟಿ ಆಕಾರದ ಹೊಲಗದ್ದೆಗಳು, ಸಾಲು ಪಟ್ಟಿಯಂತೆ ಇರುವ ಮನೆಗಳು ಇರುವುದ ರಿಂದ ಈ ಊರಿಗೆ ಪಟ್ಟಿಹಾಳ ಎಂಬ ಹೆಸರು ಬಂದಿದೆ.

ಬಾವಿಹಾಳ : ಬಾವಿಹಾಳ ಗ್ರಾಮವು ಸಂಪಗಾಂವ ಕರ್ಯಾತನ ಆಡಳಿತಕ್ಕೆ ಒಳಪಟ್ಟಿತ್ತು. ಇದು ಸಂಪಗಾಂವಿನಿಂದ ಸುಮಾರು ೪ ಕಿ.ಮೀ ದೂರದಲ್ಲಿದೆ. ಹಿಂದಿನ ಜನರ ಅಭಿಪ್ರಾಯದ ಪ್ರಕಾರ ಇದು ಭವ+ಹಾಳ ಎಂದು ಕರೆಯುತ್ತಿದ್ದರಂತೆ. ಆದರೆ, ಕೆಲವರ ಪ್ರಕಾರ ಈ ಊರನ್ನು ಕಟ್ಟಿದವನು ಮೂಲತಃ ಬೇರೆಯ ಊರಿನಿಂದ ಬಂದವನಾಗಿದ್ದು, ಈತ ಬಾವಿ ಕಟ್ಟಿಸಿ ಹಾಳಾಗಿ ಈ ಊರಿಗೆ ಬಂದು ವಾಸಮಾಡಲು ಪ್ರಾರಂಭಿಸಿದ್ದರಿಂದ ಬಾವಿಹಾಳ ಎನ್ನುತ್ತಾರೆ ಎಂಬುದು ಕೆಲವರ ಅಭಿಪ್ರಾಯ. ಇನ್ನೂ ಕೆಲವರ ಪ್ರಕಾರ ಇಲ್ಲಿ ಬಾವಿಯನ್ನು ಕಟ್ಟಲು ಉಪಯೋಗಿಸು ತ್ತಿದ್ದ ಕಲ್ಲುಗಳು ದೊರೆಯುತ್ತಿದ್ದು, ಆದ್ದರಿಂದ ಮೊದಲು ಬಾವಿಕಲ್ಲು ಅಥವಾ ಬಾವಿಹಾಳ ಎಂಬ ಹೆಸರಿನಲ್ಲಿ ಕರೆದಿರಬಹುದು.[೧೧೯]

ಈ ಊರಿನಲ್ಲಿ ಹಳಬರಿಗೆ ಚಾಕರಿ ಭೂಮಿಗಳನ್ನು ಮಲ್ಲಸರ್ಜನನ ಕಾಲದಲ್ಲಿ ನೀಡಲಾಯಿತಂತೆ. ಅವು ಈಗ ಮಾಲಿಕಿ ಭೂಮಿಗಳಾಗಿವೆ. ಇಲ್ಲಿಯ ಹನುಮಂತ ದೇವರ ಪೂಜೆಗಾಗಿ, ದ್ಯಾಮವ್ವನ ಪೂಜೆಗಾಗಿ ಸೈನ್ಯದ ದಳಪತಿಯಾಗಿ ಕೆಲಸ ಮಾಡಿದ ವ್ಯಕ್ತಿಗಳಿಗೆ ಚಾಕರಿ ಭೂಮಿಯನ್ನ ನೀಡಲಾಯಿತ್ತಂತೆ. ಈಗಲೂ ಈ ಊರಿನಲ್ಲಿ ದಳಪತಿಗಳ ಮನೆತನ ಗಳಿವೆ. ಇವರ ಮನೆಯಲ್ಲಿ ಹತಾರ, ಬಡಿಗೆ, ದಾಖಲೆಗಳು ಇವೆ. ಈ ಊರಿನಲ್ಲಿ ಒಂದು ವಾಡೆ ಕೂಡ ಇದ್ದಿತ್ತಂತೆ ಆದರೆ, ಇದು ನಶಿಸಿ ಹೋಗಿದೆ. ಈ ಊರಿನಲ್ಲಿ 'ಕಿತ್ತೂರ ದಾರಿ' ಎಂಬುದಿದೆ. ನೇಸರ್ಗಿಯಿಂದ ಕಿತ್ತೂರಿಗೆ ಹೋಗಲು ಈ ಹಾದಿಯನ್ನ ಬಳಸುತ್ತಿದ್ದರು. ಆನೆ, ಒಂಟೆ, ಕುದುರೆಗಳು ಈ ಮಾರ್ಗದಲ್ಲೆ ಹೋಗುತ್ತಿದ್ದವು.[೧೨೦]

ಬೈಲವಾಡ : ಬೈಲವಾಡವು ಸಂಪಗಾಂವ ಕರ್ಯಾತನ ಪ್ರಮುಖ ಗ್ರಾಮವಾಗಿದೆ. ಈ ಹಳೆಯ ಊರು ನಶಿಸಿ ಹೊಸ ಬಡಾವಣೆಯಾಗಿ ಮಾರ್ಪಟ್ಟಿದೆ. ಈ ಊರಿಗೆ ಮೊದಲು ಎತ್ತಲಗುಡ್ಡ ಎಂದು ಕರೆಯುತ್ತಿದ್ದರು. ಕಾಲಾನಂತರದಲ್ಲಿ ಹರಿಜನರ ಬೈಲಪ್ಪ ಎಂಬುವನು ಚಪ್ಪರ ಮಾಡಿ ಮೊದಲು ಮನೆ ಹಾಕಿಕೊಂಡನು. ನಂತರ ಈ ಊರು ಬೆಳೆದು ಬೈಲವಾಡವಾಯಿತು ಎಂಬುದು ಸ್ಥಳೀಯರ ಅಭಿಪ್ರಾಯ. ಇನ್ನೊಂದು ಅಭಿಪ್ರಾಯದ ಪ್ರಕಾರ ಬಸವಣ್ಣನವರು ಈ ಊರಿಗೆ ಬಂದಾಗ ಮುಳ್ಳುಗಳಿರುವ ಕಂಟಿಗಿಡಗಳಿಂದ ತುಂಬಿತಂತೆ. ಆದ್ದರಿಂದ ಅವರು ಇದು ಬಟಬೈಲ ವಾಡವಾಗಲಿ ಎಂದು ಹಾರೈಸಿದರಂತೆ. ಇಲ್ಲಿಯ ಜನಪದ ನುಡಿಯ ಪ್ರಕಾರ ಬೈಲಾರ ಎತ್ತಾಗಲಿ - ಬೈಲೂರು ಊರಾಗಲಿ ಎಂದು ಹೇಳಿದ್ದರಿಂದ ಈ ಊರಿಗೆ ಬೈಲವಾಡ ಎಂಬ ಹೆಸರು ಬಂತು.[೧೨೫]

ಮಲ್ಲಸರ್ಜನನ ಸಮಕಾಲೀನ ಇಲ್ಲಿಯ ವ್ಯಕ್ತಿಯೊಬ್ಬನು ಕಿತ್ತೂರು ಸಂಸ್ಥಾನದಲ್ಲಿ ಅಧಿಕಾರಿಯಾಗಿ ದುಡಿದನೆಂದು, ಅವನನ್ನು ರುದ್ರನಾಯಕನೆಂದು ಕರೆಯುತ್ತಾರೆ. ಅವನ ವಂಶಸ್ಥರ ರಿಗೆ ಚಾಕರಿ ಭೂಮಿಯನ್ನ ನೀಡಿದ್ದರೆಂದು ಈ ಊರಿನ ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷರಾದ ಶ್ರೀ ಬಸವರಾಜ ಬೋಳಗೌಡ್ರರ ಅಭಿಪ್ರಾಯ. ಈ ಊರು ಕಿತ್ತೂರಿಗೆ ಸುಮಾರು ೪೦ ಕಿ.ಮೀ ಅಂತರದಲ್ಲಿದೆ. ಬೈಲವಾಡದಿಂದ ದಕ್ಷಿಣಕ್ಕೆ ಕಿತ್ತೂರು ಇದೆ. ಅದರಂತೆ ಸಂಪಗಾವ ಕೂಡಾ ಈ ಊರಿನಿಂದ ಸುಮಾರು ೧೦ ಕಿ.ಮೀ. ಪಶ್ಚಿಮಕ್ಕೆ ಇದೆ ಎಂದು ತಿಳಿದುಬರುತ್ತದೆ. ಇಲ್ಲಿ ಸಿದ್ದೇಶ್ವರ ಮಠಕ್ಕೆ ೬ ಎಕರೆ, ಚಿಕ್ಕಮಠಕ್ಕೆ ೬ ಎಕರೆ, ರಾಮಲಿಂಗೇಶ್ವರ ದೇವಸ್ಥಾನಕ್ಕೆ ೬ ಎಕರೆ, ದ್ಯಾಮವ್ವನಿಗೆ ೬ ಎಕರೆ ಭೂಮಿಯನ್ನ ಜೀರ್ಣೋದ್ದಾರಕ್ಕಾಗಿ ಕೊಟ್ಟಿರುವ ಬಗ್ಗೆ ಉಲ್ಲೇಖವಿದೆ.[೧೨೨]

ಮರಡಿನಾಗಲಾಪುರ : ಈ ಗ್ರಾಮವು ಸಂಪಗಾಂವ ಕರ್ಯಾತಗೆ ಸೇರಿದೆ. ಇದು ಹೆಚ್ಚು ಗುಡ್ಡಗಳಿಂದ ಆವೃತವಾದುದರಿಂದ ಹಾಗೂ ಈ ಊರಿನಲ್ಲಿ ಶಿವಶರಣೆ ಅಕ್ಕನಾಗಮ್ಮನು ಐಕ್ಯ ಳಾದುದರಿಂದ ಇವಳ ಸಮಾಧಿಯು ಇಲ್ಲಿಯೇ ಇರುವುದರಿಂದ ಈ ಊರಿಗೆ ಮರಡಿನಾಗಲಾಪುರ ಎಂದು ಕರೆಯುತ್ತಾರೆ.

ಮುರುಕಿಬಾವಿ : ಇಲ್ಲಿಯ ಶಿವಾಲಯದಲ್ಲಿರುವ ಜೈನ ಮೂರ್ತಿ ಶಾಸನವು ದೊರೆತಿದೆ. ಇದರ ಕಾಲ ತಿಳಿಯುತ್ತಿಲ್ಲ. ಈ ಶಾಸನವು ಬಹಳ ಶಿಥಿಲವಾಗಿದ್ದು, ಹೊರಡಿಸಿದ ವ್ಯಕ್ತಿಯ ಹೆಸರು ಕೂಡಾ ಅಳಿಸಿ ಹೋಗಿದೆ. ಕೇವಲ ಒಬ್ಬ ಮೂಲ ಸಂಗ ಹಾಗೂ ಬಲತ್ಕಾರ ಗಣಕ್ಕೆ ಸೇರಿದ್ದನೆಂದು ಈ ಶಾಸನದಲ್ಲಿ ಕಂಡು ಬರುತ್ತದೆ. ಈ ಊರಿನಲ್ಲಿರುವ ಬಾವಿಯು ಮುರುಕಿ ಆಕಾರದಲ್ಲಿ ನಿರ್ಮಾಣವಾಗಿರುವುದರಿಂದ ಮುರಬಾವಿ ಮುರುಕಿಬಾವಿ ಎಂದು ಕರೆದಿರಬಹುದು.

ಕಟ್ಟೆ-ಕಲ್ಲು ಮಣ್ಣುಗಳಿಂದ ಮಾಡಿದ ಸ್ಥಳ ಸಾಮಾನ್ಯವಾಗಿ ಊರುಗಳ ಮದ್ಯದಲ್ಲಿರುವ ದೊಡ್ಡ ಮರವೊಂದರ ಕೆಳಗೆ ಕಟ್ಟೆ ಇರುವುದು ಸಹಜ ಆ ಕಟ್ಟೆಯ ಸುತ್ತ ಮುತ್ತಲೂ ಊರು ಬೆಳೆಯುತ್ತ ಹೋಗುತ್ತದೆ. ಅಂತಹ ಕಟ್ಟೆ ಇರುವ ಊರಿನ ಪೂರ್ವ ಪದದಲ್ಲಿ

ಕಟ್ಟೆಯು ಕಟ್ಟಿದ ವ್ಯಕ್ತಿಯ ಹೆಸರು ಮರಗಿಡದ ಹೆಸರೋ ಅಥವಾ ಕಟ್ಟೆ ಕಟ್ಟಿದ ಉದ್ದೇಶ ಇವುಗಳನ್ನು ತಿಳಿದುಕೊಳ್ಳಬಹುದು. ಹುಣಸಿಕಟ್ಟಿ, ಬುಡರಕಟ್ಟಿ, ಹುಲಿಕಟ್ಟಿ, ಮಾವಿನಕಟ್ಟಿ, ಮರಿಕಟ್ಟಿ, ಕರಿಕಟ್ಟಿ ಇತ್ಯಾದಿ ಸ್ಥಳನಾಮಗಳು.

ಮೋಳೆ : ಮೋಳೆ ಎಂಬುದಕ್ಕೆ ಮರಾಠಿ ಭಾಷೆಯಲ್ಲಿ ನೀರಿನ ಪ್ರದೇಶ ಎಂಬ ಅರ್ಥವಿದೆ, ಹಿಂದೆ ಈ ಊರು ತೋಟ ಪಟ್ಟಿಗಳಿಗೆ ಹೆಸರಾಗಿತ್ತು ನೀರಿನ ಪ್ರದೇಶವಾಗಿದ್ದರಿಂದ ಆ ರೀತಿಯಲ್ಲಿ ಕರೆದಿರಬೇಕು.

ಯರಗುಪ್ಪಿ : ಈ ಗ್ರಾಮವು ಸಂಪಗಾಂವ ಕರ್ಯಾತನಲ್ಲಿ ಬರುವ ಗ್ರಾಮವಾಗಿದೆ. ಆದ್ದರಿಂದ ಈ ಭೂಪ್ರದೇಶದಲ್ಲಿ ಜಿಗುಟುಜಿಗುಟಾದ ಕಪ್ಪುಮಣ್ಣು ಇರುವುದರಿಂದ ಈ ಸ್ಥಳಕ್ಕೆ ಯರಗುಪ್ಪಿಯೆಂದು ಹೆಸರು ಬಂದಿದೆ. ಕಪ್ಪು ನೆಲವು ಕೃಷಿಕರಿಗೆ ಯೋಗ್ಯವಾಗಿದೆ. ಫಲವತ್ತತೆಯಿಂದ ಕೂಡಿದೆ. ಆದ್ದರಿಂದ ಯರಯ ಮಣ್ಣಿನ ಭೂಮಿ, ಕಪ್ಪು ನೇಲ ಇಲ್ಲಿನ ಕೃಷಿಕರ ಹಾಡಿಗೆ ಏರೆಯ ಭೂಮಿ, ಹೊಲಗದ್ದೆಗಳೆಂದು ಕರೆಯುತ್ತಾರೆ.[೧೨೩] ಏರೆ + ಗುಪ್ಪಿ > ಯರಗುಪ್ಪಿ ಎಂದಾಗುತ್ತದೆ.

ಸಂಪಗಾಂವ : ಸಂಪಗಾಂವ ಇದು ೧೧ನೇ ಶತಮಾನದಲ್ಲಿ ಇದನ್ನು ಚಂಪಗಾಂವ ಎಂದಾಗಿತ್ತು. ಈ ಗ್ರಾಮದಲ್ಲಿ ಅನೇಕ ಸಂಪಿಗೆ ಹೂವಿನ ಮರಗಳಿದ್ದು, ಸಮೃದ್ಧವಾಗಿ ಹೂ ಬಿಡುತ್ತಿತ್ತು ಆದ್ದರಿಂದ ಈ ಗ್ರಾಮಕ್ಕೆ ಸಂಪಗಾಂವಿ ಎಂದು ಕರೆದಿರಬಹುದು. ಸಂಗೊಳ್ಳಿ ರಾಯಣ್ಣನು ಸಂಪಗಾಂವಿಯನ್ನು ಸುಟ್ಟು ಬ್ರಿಟೀಷರ ವಿರುದ್ಧ ತನ್ನ ದ್ವೇಷ ವ್ಯಕ್ತಪಡಿಸಿದ ಬಳಿಕ ತಾಲ್ಲೂಕು ಕಛೇರಿಯನ್ನು ಬೈಲಹೊಂಗಲಕ್ಕೆ ವರ್ಗಾವಣೆ ಮಾಡಲಾಯಿತು ೧೬೮೩ ರಲ್ಲಿ ಔರಂಗಜೇಬನ ಮಗನಾದ ಮಹಮದ್ ಮುಲಾಝುಂ ಎಂಬುವನು ಸಂಪಗಾಂವಿ ಕೋಟೆಯನ್ನು ನಾಶಪಡಿಸಿದನು. ಈ ಪ್ರದೇಶದಲ್ಲಿ ಮೊದಲು ರಟ್ಟರು, ಕಲ್ಯಾಣ ಚಾಲುಕ್ಯರು ಆಳ್ವಿಕೆಮಾಡಿದ್ದರು.[೧೨೪]

ಸಾಣಿಕೊಪ್ಪ : ಈ ಊರಿಗೆ ಸಾಣಿಕೊಪ್ಪ ಎಂಬ ಹೆಸರು ಬರಲು ಇಲ್ಲಿಯ ಮೂಲ ಜನರು ಮೂಲತಃ ಸಾನಿದಿನ್ನಿಯಿಂದ ಬಂದವರಾಗಿದ್ದು, ಈ ಊರಿನಲ್ಲಿ ವಾಸಮಾಡುತ್ತಿದ್ದರಿಂದ ಸಾಣಿಕೊಪ್ಪ ಎಂಬ ಹೆಸರು ಬಂದಿತು. ಈ ಊರಿನ ಸುತ್ತಲೂ ಮೊದಲು ವಾಡೆ ಇದ್ದು, ಇದಕ್ಕೆ ಹುಡೆ ಎನ್ನುತ್ತಿದ್ದರು. ಇಂದಿಗೂ ಕೂಡಾ ಅದಕ್ಕೆ 'ಕಿತ್ತೂರು ಸಂಸ್ಥಾನದ ಹುಡೆ' ಎಂದು ಕರೆಯುತ್ತಾರೆ. ಈ ಊರಿನಲ್ಲಿ ಕೂಡಾ ಕುಲಕರ್ಣಿಗಳಿಗೆ, ಗೌಡರಿಗೆ, ತಳವಾರರಿಗೆ, ಹಳಬರಿಗೆ, ಚಾಕರಿ ಭೂಮಿಯನ್ನ ಕೊಟ್ಟಿದ್ದರು.[೧೨೫]

ಈ ಊರು ಸಂಪಗಾಂವ ಮತ್ತು ಬೈಲಹೊಂಗಲ ಮಾರ್ಗದಲ್ಲಿ ಬರುತ್ತದೆ. ಇದು ಸಣ್ಣ ಊರಾಗಿದ್ದು, ಕಿತ್ತೂರು ಸಂಸ್ಥಾನದ ಕಾಲದಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನ ಪಡೆದಿತ್ತು.[೧೨೬]

ಈ ಪ್ರದೇಶದಲ್ಲಿ ಸಾಣಿಕಲ್ಲುಗಳು ಹೇರಳವಾಗಿ ದೊರೆಯುವುದರಿಂದ ಹಾಗೂ ಇಲ್ಲಿ ಕಂಬಾರ ಜನರು ಹೆಚ್ಚಾಗಿ ವಾಸಿಸುತ್ತಿರುವುದರಿಂದ ಈ ಊರಿಗೆ ಸಾಣಿಕೊಪ್ಪ ಎಂಬ ಹೆಸರು

ಬಂದಿರಬಹುದು. ಗ್ರಾಮೀಣ ಜೀವನ ನಡೆಸುವ ಪ್ರತಿಯೊಬ್ಬ ಕೃಷಿಕನಿಗೂ ಕೃಷಿ ಉಪಕರಣ ಗಳನ್ನು ಹರಿತ ಮಾಡುವ ಕಂಬಾರರ ಮನೆಗೆ ಹೋಗಲೇಬೇಕಾದ ಅವಶ್ಯಕತೆ ಇದೆ. ಇಂತಹ ಕೃಷಿ ಉಪರಣಗಳ ಹರಿತ ಮಾಡಲು ಅಂದರೆ ಸಾಣಿ ಹಿಡಸಬೇಕಾಗಿರುವದರಿಂದ 'ಸಾಣಿಕೊಪ್ಪ' ಎಂಬ ಹೆಸರು ಬಂದಿರಬಹುದು ಎಂದು ಇಲ್ಲಿನ ಜನರ ಅಭಿಪ್ರಾಯವಾಗಿದೆ.

ಸಿದ್ದಾಪುರ : ಈ ಗ್ರಾಮವು ಸಂಪಗಾಂವ ಕರ್ಯಾತನಲ್ಲಿ ಬರುತ್ತದೆ. ಸಿದ್ದರಾ ಎಂಬ ಜನಾಂಗವು ಈ ಊರಿನಲ್ಲಿ ವಾಸವಾಗಿರುವುದರಿಂದ ಈ ಹೆಸರು ಬರುವ ಸಾಧ್ಯತೆ ಇದೆ. ಇಲ್ಲಿ ಜನಪದರು ರಾಮಾಯಣ ಮತ್ತು ಮಹಾಭಾರತ ಕತೆಗಳ ಬಗ್ಗೆ ಹೆಸರನ್ನು ಪ್ರಾಚೀನ ಕಾಲಕ್ಕೆ ಕೋಂಡೋಯಲು ಪ್ರಯತ್ನಿಸುತ್ತಾರೆ.

ಹಣ್ಣಿಕೇರಿ : ಹಣ್ಣಿಕೇರಿ ಇದೊಂದು ಐತಿಹಾಸಿಕ ಸ್ಥಳ. ಕಲ್ಯಾಣ ಚಾಲುಕ್ಯರ ಕಾಲದ ಜೈನ ಬಸದಿಯೊಂದು ಇಲ್ಲಿದೆ. ಆದರೆ, ಕಾಲಾನಂತರದಲ್ಲಿ ಶೈವದೇವಾಲಯವಾಗಿ ಮಾರ್ಪಟ್ಟಿದೆ. ಕಾರಣ ದೇವಾಲಯದ ಗರ್ಭ ಗುಡಿಯ ಲಲಾಟಬಿಂಬದಲ್ಲಿ ಜೈನ ತೀರ್ಥಂಕರನ ಬಿಂಬವಿದೆ. ಈ ದೇವಾಲಯದ ಗೋಡೆಯ ಮೇಲೆ ಒಂದು ಸುಂದರವಾದ ಶಾಸನವಿದೆ. ಹಣ್ಣಿಕೇರಿ ಎಂದು ಈ ಊರಿಗೆ ಹೆಸರು ಬರಲು ಕಾರಣ ಈ ಊರಿನಲ್ಲಿ ನೇರಲೆ ಮತ್ತು ಕವಳೆ ಹಣ್ಣುಗಳು ವಿಪುಲವಾಗಿ ದೊರೆಯುತ್ತಿದ್ದವು ಆದ್ದರಿಂದ ಈ ಊರಿಗೆ ಹೊನ್ನಿನಕೇರಿ ಎಂದು ಕರೆದಿರಬಹುದು. ಕಾಲಾಕ್ರಮೇಣ ಈ ಊರನ್ನ ಹಣ್ಣಿಕೇರಿ ಎಂದು ಕರೆಯಲಾಯಿತು.

ಕ್ರಿ.ಶ. ೧೨೦೮ರಲ್ಲಿ ಸವದತ್ತಿ ರಟ್ಟರ ಕಾಲದ ೧ನೇ ಲಕ್ಷ್ಮೀದೇವನು ಹೊರಡಿಸಿದ ಜೈನ ಶಾಸನದಲ್ಲಿ ೩ನೇ ಕಾರ್ತವೀರ್ಯ ಮತ್ತು ರಾಣಿ ಚಾಂದಲದೇವಿಯ ಪುತ್ರನಾದ ೧ನೇ ಲಕ್ಷ್ಮೀದೇವನು ಕೂಹಚಿಡಿ-ಮಂಡಲ-೩೦೦೦ಕ್ಕೆ ಸೇರಿದ ರಾಜಧಾನಿ ವೇಣುಗ್ರಾಮವನ್ನು ಆಳ್ವಿಕೆ ಮಾಡುತ್ತಿದ್ದನು. ಆಗ ಹೊಳ್ಳಿಗಾವುಂಡನ ಮಗ ಮಹಾಪ್ರಭು ಮೂಲಿಗ ವೈರೆಯರ ಅಮ್ಮ ಗಾವುಂಡನು ಏಳುಕೋಟಿ ಮಹಾದೇವರ ಸಮಕ್ಷಮದಲ್ಲಿ ತಮ್ಮ ಗ್ರಾಮಚಿಂಚೂಣಿಯನ್ನು ಒಂದು ಪಾರ್ಶ್ವನಾಥ ಜಿನೇಂದ್ರ ಭವನವನ್ನು ಕಟ್ಟಿಸಿಕೊಟ್ಟನೆಂದು ಹಾಗೂ ೧ನೇ ಲಕ್ಷ್ಮೀದೇವನ ಆಜ್ಞೆಯ ಮೇರೆಗೆ ಯಾಪನೀಯ ಸಂಘ, ಮೈಲಪ ಅನ್ವಯ ಕಾರೆಯಗಣಕ್ಕೆ ಸೇರಿದ ಕನಕಪ್ರಭ ಪಂಡಿತ ದೇವರ ಪಾದ ಪೂಜೆ ಮಾಡಿ ಈ ಜಿನಾಲಯದ ಪ್ರಗತಿಗಾಗಿ ಭೂಮಿಯನ್ನು ದಾನಮಾಡಿ ಜೊತೆಗೆ ಶಾಲೆಗಾಗಿ ನಿವೇಶನ ಎಲೆ ತೋಟ, ಹೂವಿನ ತೋಟಗಳನ್ನು ದತ್ತಿಯಾಗಿ ಬಿಟ್ಟನೆಂದು ಶಾಸನವು ಉಲ್ಲೇಖಿಸುತ್ತದೆ.

ಇದೇ ದೇವಾಲಯದಲ್ಲಿ ಮತ್ತೊಂದು ಶಾಸನವಿದ್ದು, ಕ್ರಿ.ಶ. ೧೨೫೭ರಲ್ಲಿ ಈ ಶಾಸನ ವನ್ನು ಹೊರಡಿಸಲಾಗಿದೆ. ಇದು ಶೈವ ಶಾಸನವಾಗಿದ್ದು, ಕಲ್ಲರಸ ಎಂಬುವನ ಆಜ್ಞೆಯ ಮೇರೆಗೆ ಮಹಾಪ್ರಧಾನ ಸರ್ವಾಧಿಕಾರಿ ಚೌಡಿಶೆಟ್ಟಿಯ ಸಮಕ್ಷಮದಲ್ಲಿ ಸುಂಕಾಧಿಕಾರಿ, ಕೇತಗಾವುಂಡನು ಚಿಂಚೂಣಿಕೆ ಗ್ರಾಮದಲ್ಲಿ ಪಂಚಮಠಗಳನ್ನು ಸ್ಥಾಪಿಸಲು ತಿಪ್ಪಸುಂಕ ಎಂಬ ತೆರೆಗೆಯಿಂದ ಸಂಗ್ರವಾದ ಸಂಪತ್ತನ್ನು ನೀಡಿದೆನೆಂದು ತಿಳಿಸುತ್ತದೆ.

ಮಲ್ಲಸರ್ಜನನ ಕಾಲದಲ್ಲಿ ಈ ಊರಿಗೆ ಮಹತ್ವದ ಸ್ಥಾನವನ್ನು ನೀಡಿದ್ದನು. ಕಾರಣ ಈ ಊರಿನ ಯುವಕರು ಸಂಸ್ಥಾನದ ಅಂಗರಕ್ಷಕರು, ಕೋಟೆಕೊತ್ತಲಗಳ ರಕ್ಷಕರು ಆಗಿದ್ದು, ಮಲ್ಲಸರ್ಜನನ ಆಪ್ತರಾಗಿದ್ದರೆಂದು ತಿಳಿದುಬರುತ್ತದೆ. ಒಮ್ಮೆ ಮಲ್ಲಸರ್ಜನನು ಕಾಕತಿಯಲ್ಲಿ ನಡೆಯುವ ಕಿಚ್ಚಿನ ಹಬ್ಬಕ್ಕಾಗಿ ಈ ಮಾರ್ಗದ ಮೂಲಕ ಕಾಕತಿಗೆ ಹೋಗುತ್ತಿದ್ದಾಗ ವಿಪರೀತ ಮಳೆ ಬಂದು ಹೊಳೆಯನ್ನು ದಾಟಲು ಸಾಧ್ಯವಾಗಲಿಲ್ಲ. ಅವನ ಮನಸ್ಸಿಗೆ ಬೇಸರವಾಗಿ ತನ್ನ ಆಪ್ತರಲ್ಲಿ ಹೇಳಿಕೊಂಡಾಗ ಹಣ್ಣಿಕೇರಿಯ ಜನರು ಹತ್ತಾರು ಬಂಡಿಯಷ್ಟು ಕಟ್ಟಿಗೆಯನ್ನ ಒಟ್ಟುಗೂಡಿಸಿ ಅಂದೇ ಕಿಚ್ಚನ್ನ (ಬೆಂಕಿ) ಮಾಡಿದರು. ಈ ಕೆಂಡ ತುಳಿಯುವ ಪದ್ಧತಿ ಮಲ್ಲಸರ್ಜನನ ಕಾಲದಿಂದ ಆರಂಭವಾದ ಈ ಪದ್ಧತಿ ಇಂದಿಗೂ ವೈಭವದಿಂದ ನಡೆಸಿಕೊಂಡು ಬರುತ್ತಾರೆ. ಯುಗಾದಿಯ ಪಾಡ್ಯದಂದು ಏಳು ದಿವಸಗಳ ಕಾಲ ಸಪ್ತಾಹವನ್ನು ಆಚರಿಸಿ, ಒಂಭತ್ತನೆಯ ದಿವಸ ಕೆಂಡ ತುಳಿಯುವ ಕಾರ್ಯಕ್ರಮವಿರುತ್ತದೆ. ಈ ಭಾಗದಲ್ಲಿ ಈ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ.

ಮಲ್ಲಸರ್ಜನನು ಈ ಊರಿನ ಜನರಿಗಾಗಿ ಒಂದು ದೊಡ್ಡ ಬಾವಿಯನ್ನ ನಿರ್ಮಿಸಿದ್ದನು. ಇದು ಊರಿನ ಹೊರಭಾಗದಲ್ಲಿ ಈ ಬಾವಿ ಇದೆ. ಇಲ್ಲಿ ವೈರಿಗಳ ಬರುವಿಕೆಯನ್ನು ನೋಡಲು ಗಡಾದಮರಡಿ ಎಂಬುದಿದೆ. ಅಲ್ಲಿ ಒಂದು ಬಾವಿ ಕೂಡಾ ಇದೆ. ಈ ಊರಿನಲ್ಲಿ ಹುಡೇದ ಎಂಬುದಿತ್ತಂತೆ. ಇಲ್ಲಿ ಕಾವಲುಗಾರರು ನಿಂತು ಮಲ್ಲಸರ್ಜನನ ಸಾಮ್ರಾಜ್ಯದ ಗಡಿ ರಕ್ಷಿಸುತ್ತಿದ್ದರಂತೆ. ಕಿತ್ತೂರು ಸಂಸ್ಥಾನದ ರಕ್ಷಣೆ ಮಾಡಲು ಈ ಊರಿನ ಜನ ಪ್ರಮುಖ ಪಾತ್ರ ವಹಿಸಿದ್ದರು.[೧೨೭]

ಈ ಊರಿನ ದಕ್ಷಿಣಕ್ಕೆ ಸುಮಾರು ೩೫ ಕಿ.ಮೀ ದೂರದಲ್ಲಿ ಕಿತ್ತೂರು ಇದೆ. ಅದರಂತೆ ಸಂಪಗಾಂವ ಕೂಡಾ ೧೦ ಕಿ.ಮೀ ಅಂತರದಲ್ಲಿದೆ. ಈ ಊರಿನಲ್ಲಿ ಗೌಡರು, ಕುಲಕರ್ಣಿಗಳು, ದಳಪತಿಗಳು, ಕುರುಬರು, ಪೂಜಾರರು, ಹೀಗೆ ಅನೇಕ ಜನ ಚಾಕರಿ ಭೂಮಿಯನ್ನ ಪಡೆದು ಕೊಂಡಿದ್ದಾರೆ.[೧೨೮]

೪.೫.೧೪. ಹಲಸಿ ಕರ್ಯಾತ

ಹಿರೆ ಹಲಸಿ : ಖಾನಾಪುರ ತಾಲೂಕಿನಿಂದ ಸುಮಾರು ೧೯ ಕಿ.ಮೀ ದೂರದಲ್ಲಿರುವ ಈ ಗ್ರಾಮವು ಹಲಸಿ ಕರ್ಯಾತನ ಪ್ರಮುಖ ಪಟ್ಟಣವಾಗಿತ್ತು. ಈ ಗ್ರಾಮವು ಅನೇಕ ದೇವಾಲಯಗಳನ್ನು ಹೊಂದಿದ್ದು, ಜೈನ ಬಸದಿಗಳನ್ನು ಇಲ್ಲಿ ಸ್ಥಾಪಿಸಲಾಗಿತ್ತು. ಇಲ್ಲಿಯ ದೇವಾಲಯಗಳು ಚಾಲುಕ್ಯ ಶೈಲಿಯನ್ನು ಹೊಂದುತ್ತವೆ.

ಗುಂಡಪಿ : ಗುಂಡ ಎಂಬ ವ್ಯಕ್ತಿ ಮೂಲವನ್ನು ಇದು ಸೂಚಿಸುತ್ತದೆ. ಗುಂಡ ಅಥವಾ ಗುಂಡಯ್ಯಾ ಎಂಬುವನು ಈ ಪ್ರದೇಶದಲ್ಲ ಪ್ರಸಿದ್ಧ ನಾಗಿರುವ ಕಾರಣ ಈ ಊರಿಗೆ ಗುಂಡಪ್ಪಿ ಎಂಬ ಹೆಸರು ಬಂದಿರಬಹುದು.

ಚನ್ನೈವಾಡಿ : ಈ ಗ್ರಾಮವು ಹಲಸಿ ಕರ್ಯಾತನಲ್ಲಿ ಬರುವ ಗ್ರಾಮ ಇದು ವ್ಯಕ್ತಿ ವಾಚಕ ಗ್ರಾಮವಾಗಿದ್ದು ಚನ್ನೈಯ + ವಾಡಿ > ಚನ್ನೈಯವಾಡಿ ನಂತರ ಈ ಊರಿಗೆ ಚೈನೆವಾಡಿ ಎಂಬ ಹೆಸರು ಬಂದಿದೆ.

ಬಸ್ತವಾಡ : ಇಲ್ಲಿ ಜೈನಧರ್ಮದ ಜನರು ತಮ್ಮ ಬಸದಿಗಳನ್ನು ನಿರ್ಮಿಸಿಕೊಂಡು ಈ ಗ್ರಾಮದಲ್ಲಿ ವಾಸಿಸುತ್ತಿದ್ದರು. ಆದ್ದರಿಂದ ಬಸದಿ + ವಾಡ > ಬಸ್ತವಾಡ ಎಂದು ಕರೆಯುತ್ತಾರೆ.

ಬೂತೆವಾಡಿ : ಇದು ಹಲಸಿ ಕರ್ಯಾತನಲ್ಲಿ ಬರುವ ಗ್ರಾಮವಾಗಿದೆ. ಈ ಗ್ರಾಮಕ್ಕೆ ಬೂತಯ್ಯ ಎಂಬ ವ್ಯಕ್ತಿಯಿಂದ ಹೆಸರು ಬಂದಿದೆ. ಬೂತಯ್ಯನ +ವಾಡ > ಬೂತೆವಾಡ ಇಲ್ಲಿ ಬೂತೇಶ್ವರ ದೇವಾಲಯ ಎಂಬುದು ಪ್ರಸಿದ್ಧಿ ಪಡೆದಿದೆ.

ಹಲಗಾ : ಈ ಗ್ರಾಮವು ಹಲಸಿ ಕರ್ಯಾತನಲ್ಲಿ ಬರುವ ಗ್ರಾಮವಾಗಿದ್ದು, ಇದು ಅನೇಕ ದೇವಾಲಯಗಳಿಂದ ಕೂಡಿರುವುದರಿಂದ ಈ ಗ್ರಾಮವು ದೇವಾಲಯಗಳ ಗ್ರಾಮವೆಂದೇ ಕರೆಯುತ್ತಾರೆ. ಒಂದು ಗಿಡದ ಕೆಳಗೆ ಒಂದು ಮಹಾಸತಿಕಲ್ಲು ಹಾಗೂ ರಸ್ತೆಯ ಬದಿಗೆ ಮೂರು ವೀರಗಲ್ಲುಗಳು ಇವೆ. ಇಲ್ಲಿ ಗೋಪಾಲ ಮಹಾರಾಜರ ಮಠವು ಇದೆ.

ಹಲಸಿ ಕರಿಯಾತಿನಲ್ಲಿ ಬರುವ ಚೆನ್ನೆವಾಡೆ, ಭೂತೆವಾಡೆ, ಬಸ್ತವಾಡ, ಹತ್ತರವಾಡ, ಮಂಡೆಗಾಳಿ ಮುಂತಾದ ಗ್ರಾಮಗಳು ಮರಾಠರ ಪ್ರಭಾವದಿಂದ ಕಿತ್ತೂರಿನ ಇತಿಹಾಸದ ಬಗ್ಗೆ ಯಾವ ಅವಶೇಷಗಳು ಉಳಿದಿಲ್ಲ. ತಾವು ಮರಾಠರ ಕಾಲದಲ್ಲಿ ಈ ಗ್ರಾಮಗಳಿಗೆ ಬಂದು ವಾಸ್ತವ್ಯ ಮಾಡಿದ್ದೇವೆ ಎಂಬುದು ಊರಿನ ಜನರ ಅಭಿಪ್ರಾಯವಾಗಿದೆ.

ಹಲಸಿ : ಈ ಗ್ರಾಮವು ಖಾನಾಪುರದಿಂದ ೧೪ ಕಿ.ಮೀ ದೂರದಲ್ಲಿದೆ. ಇದು ಕಿತ್ತೂರು ಸಂಸ್ಥಾನ ಕಾಲದ ಒಂದು ಆಡಳಿತ ಕೇಂದ್ರ. ಈ ಗ್ರಾಮವು ಗೋವೆಯ ಕದಂಬರ ಕಾಲದಲ್ಲಿ ಎರಡನೇ ರಾಜಧಾನಿಯಾಗಿದ್ದು, ಬೆಳಗಾವಿ ಜಿಲ್ಲೆಯಲ್ಲಿಯೇ ಅತ್ಯಂತ ಪ್ರಾಚೀನ ಗ್ರಾಮವಾಗಿದೆ. ಈ ಗ್ರಾಮಕ್ಕೆ 'ಪಲಸಿಕಾ', 'ಪಲಸಿ' ಹಾಗೂ 'ಹಲಸಿಗೆ' ಎಂದು ಕರೆಯಲಾಗುತ್ತಿದೆ.

ಹತ್ತರವಾಡ : ಈ ಗ್ರಾಮವು ಹಲಸಿ ಕರ್ಯಾತನಲ್ಲಿ ಬರುವ ಗ್ರಾಮವಾಗಿದೆ. ಈ ಗ್ರಾಮದಲ್ಲಿ ಹತ್ತರು ಎಂಬ ಜನಾಂಗದವರು ಬಹುಕಾಲದಿಂದ ವಾಸವಾಗಿರುವದರಿಂದ ಈ ಊರಿಗೆ ಹತ್ತರವಾಡ ಎಂದು ಕರೆಯುತ್ತಾರೆ.

೪.೪.೧೫. ಸ್ವತಂತ್ರ ಕರ್ಯಾತ (?)

ಮುಗುಟಖಾನ ಹುಬ್ಬಳ್ಳಿ : ಪೂರ್ವದ ಹಳ್ಳಿ - ಪೂರ್ವಹಳ್ಳಿ - ಪೂರ್ವಳ್ಳಿ - ಹೂವಳ್ಳಿ - ಹುಬ್ಬಳ್ಳಿ ಈ ಗ್ರಾಮ ಬೈಲಹೊಂಗಲ ತಾಲ್ಲೂಕಿನಲ್ಲಿರುವ ಸ್ಥಳನಾಮ ರಾಷ್ಟ್ರೀಯ ಹೆದ್ದಾರಿ – ೪ರ ಮೇಲಿದೆ. ಮಲಪ್ರಭಾನದಿಯ ಎಡ-ಬಲದಲ್ಲಿ ಹೂವಿನ ಬನಗಳು ಹೇರಳವಾಗಿರುವುದಿರಂದ ಈ ಊರಿಗೆ ಹೂವಳ್ಳಿ - ಹುಬ್ಬಳ್ಳಿ ಎಂದು ಕರೆದಿರಬಹುದು ಈಗಲೂ ಹೂಬಳ್ಳಿಯಿಂದ ಕೂಡಿದ ಪ್ರದೇಶವಾಗಿದೆ. ಈ ಹುಬ್ಬಳ್ಳಿ ಸ್ಥಳನಾಮಕ್ಕೆ ಮುಗುಟಖಾನ ಎಂಬ ವಿಶೇಷಣ

ರೂಪದ ನಿರ್ದಿಷ್ಟ ಸೇರಿ ಮುಗುಟಖಾನ ಹುಬ್ಬಳ್ಳಿ ಎಂಬ ವಿಸ್ತೃತ ರೂಪಗೊಮಡಿದೆ, ಇದು ಬಿಜಾಪುರ ಸುಲ್ತಾನರ ಕಾಲದಲ್ಲಿ ಸರದಾರನಾದ ಮುಗುಟಖಾನ ಎಂಬ ಮುಸ್ಲಿಂ ಅಧಿಕಾರಿಯ ಆಡಳಿತಕ್ಕೆ ಒಳಪಟ್ಟಿತ್ತು. ಆತನ ಆಡಳಿತದ ಅವಧಿಯ ಕಾಲದಲ್ಲಿ ಈ ಊರಿಗೆ ಮುಗುಟಖಾನ ಎಂಬ ಪದ ಸೇರಿ ಮುಗುಟಖಾನ ಹುಬ್ಬಳ್ಳಿ ಎಂಬ ಹೆಸರು ಪಡೆದುಕೊಂಡಿತು ಈ ಊರಲ್ಲಿ ಮುಗುಟಖಾನನ ಗೋರಿಯು ಇರುವ ಕಾರಣ ಅವನ ಹೆಸರೇ ಈ ಊರಿಗೆ ಶಾಶ್ವತವಾಗಿ ಉಳಿದುಕೊಂಡಿತು. ಈ ಗ್ರಾಮದಲ್ಲಿ ನರಸಿಂಹ, ವೀರಭದ್ರ, ಕಲ್ಮೇಶ್ವರ ಇತರ ದೇವಾಲಯ ಗಳಿವೆ. ಈ ಮಲಪ್ರಭಾ ನದಿಯ ದಡದ ಪೂರ್ವದಿಕ್ಕಿಗೆ ಇದೆ. ಬ್ರಿಟೀಷರ ಆಡಳಿತದ ಕಾ ಮುಗಟಖಾನನು ಹೂಲಿ ದೇಶಗತ್ತಿಯನ್ನು ನೋಡಿಕೊಳ್ಳುತ್ತಿದ್ದನು. ಆತನ ಉಪಟಳವು ಅತೀ ಯಾಗಿರುವುದರಿಂದ ಆತನ ಉಪಟಳವನ್ನ ಹತ್ತಿಕ್ಕಲು ಬೃಹನ್ಮಠದ ಮಹಾಸ್ವಾಮಿಗಳು ರಟ್ಟವಂಶಕ್ಕೆ ಸೇರಿದ ದೇಸಾಯಿಗಳಿಗೆ ತಿಳಿಸಿದಾಗ ಸಿದ್ದೇಶ್ವರ ರಾಜನು ಮುಗಟಖಾನನೊಂದಿಗೆ ಭಯಂಕರವಾದ ಕಾಳಗವನ್ನು ಎದುರಿಸಿದನು. ಆಗ ಮುಗಟಖಾನನು ಸೋತು ಯುದ್ದದಿಂದ ಪಲಾಯನಗೈದಿದ್ದನು ಆದರೂ ಆತನನ್ನ ಬೆನ್ನತ್ತಿ ಹುಬ್ಬಳ್ಳಿಯ ಹತ್ತಿರ ಆತನನ್ನು ಹಿಡಿದು ಕೊಲ್ಲಲಾಯಿತು ಆದ್ದರಿಂದ ಈ ಊರಿಗೆ ಮುಗಟಖಾನಹುಬ್ಬಳ್ಳಿ ಎಂದು ಹೆಸರಾಯಿತು.

ಅಡಿಟಿಪ್ಪಣಿಗಳು

೧. ಚಟ್ನೀಸ್, ಕೆ.ಎನ್. ಲೇ: **'ಕಿತ್ತೂರು ನಾಡಿನ ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳ ಕೆಲವು ಅಂಶಗಳು',** ೧೯೭೧.

೨. Surebankar, Smitha, **'Halasi-12000: A Study',** 2001.

೩. –do-

೪. ಕೊಂಗವಾಡ, ಜಿ.ವಿ. ಸಂ., **'ಕಿತ್ತೂರು ಇತಿಹಾಸ',** ಪುಟ ೨೮, ೧೯೯೮.

೫. ಕಲಬುರ್ಗಿ, ಎಂ.ಎಂ. ಮತ್ತು ಪಾವಟೆ, ಚೆನ್ನಕ್ಕ **'ಮಲ್ಲೇಂದ್ರ ಪೂಜಾವಿಲಾಸ',** ಭಾಗ-೧, ಪುಟ ೬೩, ೧೯೯೯.

೬. ಅದೇ, **'ಮಲ್ಲೇಂದ್ರ ಮಾನಸೋಲ್ಲಾಸ',** ಭಾಗ-೧, ಪುಟ ೮೫, ೧೯೯೯.

೭. Inscription from Nanded District Introduction, PLH.

೮. ಚಟ್ನೀಸ್, ಕೆ.ಎನ್., **'ಕಿತ್ತೂರು ನಾಡಿನ ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳ ಕೆಲವು ಅಂಶಗಳು',** ೧೯೭೧.

೯. ಪಾಟೀಲ, ವಿ. ಜಿ., **'ಕಿತ್ತೂರು ದೊರೆ ಮಲ್ಲಸರ್ಜ',** ಪುಟ ೫, ೧೯೫೩.

೧೦. ಮೆಳವಂಕಿ, ಕೆ.ಆರ್., **'ಸಂಸ್ಥಾನಿಕರ ಐತಿಹಾಸಿಕ ಸಾಹಿತ್ಯ',** (ಅಪ್ರಕಟಿತ) ಪುಟ ೧೪೬, ೨೦೦೭.

೧೧. ಒಡೆಯರ ಸದಾಶಿವ, **'ರಾಣಿ ಚೆನ್ನಮ್ಮ',** ಪುಟ ೧೦, ೧೯೭೭.

೧೨. ಕೊಂಗವಾಡ, ಜಿ.ವಿ., 'ಕಿತ್ತೂರು ಇತಿಹಾಸ', ಪುಟ ೨೮, ೧೯೯೮.

೧೩. ಬಾಂಬೆ ಗೆಝೆಟಿಯರ್, ಸಂಪುಟ-೨೧, ಪುಟ ೪೦೧-೪೦೪.

೧೪.ಅದೇ ಪುಟ ೪೦೪.

೧೫.ಸಾವಂತ ಎಂ. ವಾಯ್., **'ಮರಾಠಿ ಮೋಡಿ ಕಡತಗಳಲ್ಲಿ ಕಿತ್ತೂರಿನ ಇತಿಹಾಸ'**, ಪು. ೨೫-೩೨, ೧೯೯೮.

೧೬.ಮಾರೀಹಾಳ ವ್ಹಿ.ಜಿ., **'ಮಹಾರಾಣಿ ಕಿತ್ತೂರ ಚೆನ್ನಮ್ಮ: ಜೀವನ ಮತ್ತು ಸಾಧನೆ'**, ಪು. ೩೪-೩೫, ೧೯೯೮.

೧೭.ಪಾಟೀಲ, ವ್ಹಿ.ಜಿ. **'ದೊರೆ ಮಲ್ಲಸರ್ಜ',** ಪುಟ ೧೧, ೧೯೫೩.

೧೮.ತಿಪ್ಪೇರುದ್ರಸ್ವಾಮಿ, ಹೆಚ್. **'ಕರ್ನಾಟಕ ಸಂಸ್ಕೃತಿ ಸಮೀಕ್ಷೆ'**, ಪುಟ ೧೭೭, ೧೯೬೦.

೧೯.ಒಡೆಯರ ಸದಾಶಿವ, **ಅದೇ,** ಪುಟ ೨೯, ೧೯೭೭.

೨೦.ಮಹಿಷವಾಡಿ ಭುಜೇಂದ್ರ, **'ಜಾನಪದ ಸಾಹಿತ್ಯ ದರ್ಶನ'**, ಭಾಗ-೨, ಪುಟ ೧೮೯.

೨೧.ದೀಕ್ಷಿತ್, ಜಿ.ಎಸ್. **'ಲೋಕಲ್ ಸೆಲ್ಫ್ ಗೌರ್ವನಮೆಂಟ್ ಇನ್ ಮೆಡಿವೆಲ್ ಕರ್ನಾಟಕ',** ಪು. ೫೮.

೨೨.ಕಲಬುರ್ಗಿ ಎಂ.ಎಂ. ಮತ್ತು ಪಾವಟೆ ಚೆನ್ನಕ್ಕ **'ಮಲ್ಲೇಂದ್ರ ಮಾನಸೋಲ್ಲಾಸ'**, ೧೯೯೯.

೨೩.ಕಲಬುರ್ಗಿ ಎಂ.ಎಂ. ಮತ್ತು ಪಾವಟೆ ಚೆನ್ನಕ್ಕ **'ಕಿತ್ತೂರು ಸಂಸ್ಥಾನ ಸಾಹಿತ್ಯ & ಮಲ್ಲೇಂದ್ರ ಪೂಜಾವಿಲಾಸ ತಾರಾವಳಿ',** ಪದ್ಯ ೫, ೧೯೯೯.

೨೪.ಕಿತ್ತೂರು ಕೈಫಿಯತ್.

೨೫.ಕಲಬುರ್ಗಿ ಎಂ.ಎಂ. ಮತ್ತು ಪಾವಟೆ ಚೆನ್ನಕ್ಕ **'ಮಲ್ಲೇಂದ್ರ ವಿಜಯ',** ಪದ್ಯ ೨೨, ೧೯೯೯.

೨೬.ಕಲಬುರ್ಗಿ ಎಂ.ಎಂ. ಮತ್ತು ಪಾವಟೆ ಚೆನ್ನಕ್ಕ **'ಕಿತ್ತೂರ ಅರಸರ ಕೋಲುಪದ,** ಪುಟ ೧೫೩, ೧೯೯೯.

೨೭.ಅದೇ ಪದ್ಯ ೧೦೪, ಪುಟ ೧೫೩, ೧೯೯೮.

೨೮.ಮಠದ, ಸಿ.ವ್ಹಿ. **'ಕಿತ್ತೂರು ನಾಡಿನ ವೀರರು'**, ಪು. ೮೮-೯೦, ೧೯೭೬.

೨೯.ರಾಯನಗೌಡರು, ತಲ್ಲೂರು, **'ಮಲ್ಲಸರ್ಜನ ಕಾವ್ಯ'** ಪುಟ ೩೯, ೧೯೫೦.

೩೦.ಅದೇ **'ಚೆನ್ನಮ್ಮ ರಾಣಿಯ ಕೊನೆಯ ಕಾಳಗ'** ಪುಟ ೪೨, ೧೯೫೦.

೩೧.ಕೊರವಿ ಪಿ.ಬಿ., **ಬೆಳಗಾವಿ ಜಿಲ್ಲೆಯ ಸ್ಥಳನಾಮಗಳು**, ಪು. ೮.

೩೨.ನಾರಾಯಣ ಕೆ.ವಿ., ಸ್ಥಳನಾಮಗಳ ಪರಿವರ್ತನೆ ಮತ್ತು ಪ್ರಭಾವ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯. ಪುಟ ೫೧.

೩೩.ಕೊರವಿ ಪಿ.ಬಿ., **ಬೆಳಗಾವಿ ಜಿಲ್ಲೆಯ ಸ್ಥಳನಾಮಗಳು**, ೨೦೧೦, ಪುಟ ೫೩.

೩೪.ವಿಶ್ವನಾಥ, ಗ್ರಾಮ ನಾಮಗಳ ಸಾಂಸ್ಕೃತಿಕ ಪರಿವೇಶ, ದೇವಿ ಪ್ರಕಾಶನ, ಮೈಸೂರು, ೨೦೦೦, ಪುಟ ೧೦೧& ೧೦೪.

೩೫.ಕಲಬುರ್ಗಿ ಎಂ.ಎಂ., **ಕನ್ನಡ ನಾಮ ವಿಜ್ಞಾನ**, ಧಾರವಾಡ, ೧೯೯೫ ಪು. ೬೮.

೩೬.ಕೊರವಿ ಪಿ.ಬಿ., **ಬೆಳಗಾವಿ ಜಿಲ್ಲೆಯ ಸ್ಥಳನಾಮಗಳು**, ಪು. ೬೨.

೩೭.ವೆಂಕಟ ಸುಬ್ಬಯ್ಯ ಜಿ., ಪ್ರಧಾನ ಸಂಪಾದಕರು, ೧೯೭೬, ಪು-೪೪೪.

೩೮.ಕಲಬುಗಿ ಎಂ.ಎಂ., ಕನ್ನಡ ನಾಮ ವಿಜ್ಞಾನ, ೧೯೯೫ ಪುಟ ೩೭೩.

೩೯.ಕೊರವಿ, ಪಿ.ಬಿ. ಅದೇ, ಪುಟ ೧೪೨.

೪೦.ವಿಶ್ವನಾಥ, ಗ್ರಾಮ ನಾಮಗಳ ಪರಿವೇಶ, ೨೦೦೦, ಪುಟ ೭.

೪೧.ಕಾರಂತ ಶಿವರಾಮ, ೧೯೯೦, ಪು ೧೬೦.

೪೨.ಬಸವರಾಧ್ಯ ಎನ್, ಪ್ರ, ಸಂ. ಪು ೫೪೯೦.

೪೩.ಲಿಂಗಯ್ಯ ಡಿ. ಶಿವಶಂಕರ ಚಕ್ಕರೆ, ಸ್ಥಳನಾಮಗಳ ಅಧ್ಯಯನ ಲೇಖನಗಳ ಸಂಗ್ರಹ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು, ೨೦೦೮ ಪುಟ ೮೪-೮೫.

೪೪.ಪಾಟೀಲ್ ಮನೋಜ್, ಬೆಳಗಾವಿ ಜಿಲ್ಲಾ ಮಾರ್ಗದರ್ಶಿ, ಪವನ ಪ್ರಕಾಶನ, ತಿಳಕ್‌ವಾಡಿ, ೧೯೮೭, ಪುಟ ೨೫೭.

೪೫.ತಲ್ಲೂರು ರಾಯನಗೌಡ ಪಾಟೀಲ, ಕಿತ್ತೂರು ಬಂಡಾಯ, ೧೯೪೭, ಪುಟ ೬೧.

೪೬.ಷಡಕ್ಷರಯ್ಯ, ಆರ್.ಎಂ., ಲೇಖನ, "ಕಿತ್ತೂರು ಸಂಸ್ಥಾನದ ಅಧಿಕಾರಿಗಳು" ಸಂಯುಕ್ತ ಕರ್ನಾಟಕ, ಸಾಪ್ತಾಹಿಕ ಸೌರಭ, ೨೫-೧೦-೨೦೦೯, ಪುಟ. ೧.

೪೭.ಸಂಗ್ರೇಶಕೊಪ್ಪ ನಾಗಪ್ಪ, ಕೆ., ನಿವೃತ್ತ ಶಿಕ್ಷಕರು, ಸಾಃ ಅಂಬಡಗಟ್ಟಿ.

೪೮.ಬೋಗೂರು ದೇಮಪ್ಪ, ನಿವೃತ್ತ ಶಿಕ್ಷಕರು, ಸಾಃ ಅಂಬಡಗಟ್ಟಿ.

೪೯.ಕಲಬುರ್ಗಿ ಎಂ.ಎಂ., ಕನ್ನಡ ನಾಮ ವಿಜ್ಞಾನ, ಧಾರವಾಡ, ೧೯೯೫ ಪು. ೬೦.

೫೦.ಕಲುಬುರ್ಗಿ ಎಂ.ಎಂ., ಕನ್ನಡ ನಾಮ ವಿಜ್ಞಾನ, ಧಾರವಾಡ, ೧೯೯೫ ಪು. ೪೩.

೫೧.ಕಣವಿ ಸಿ.ಎಸ್., ಕಿತ್ತೂರು ನಾಡಿನ ಇತಿಹಾಸ ಹಾಗೂ ಸಂಸ್ಕೃತಿ, ಕವಿವಿ, ಧಾರವಾಡ, ೧೯೭೬ ಪು. ೩.

೫೨.ಕನ್ನಡ ಸಂಶೋದನ ಸಂಸ್ಥೆ ಸಂಪುಟ ೫ ಪುಟ ೧೭-೧೮.

೫೩.ಬಸವರಾಜ ಮಲ್ಲಶೆಟ್ಟಿ, ಸಾಃ ತಿಗಡೊಳ್ಳಿ.

೫೪.ದುಗ್ಗಾಣಿ, ಸಾಃ ದೇಗಾಂವಿ.

೫೫.ಕೊರವಿ. ಪಿ.ಬಿ., ಅದೇ, ಪುಟ. ೯೭.

೫೬.ಪ್ರಕಾಶ ಬಬಲಿ, ಸಾ. ಬಸಾಪುರರವರಿಂದ ಮಾಹಿತಿ.

೫೭.ಅಜೀತ ಎಮ್. ಗಿರಿ, ಸಾ. ಮಲ್ಲಾಪುರರವರಿಂದ ಮಾಹಿತಿ.

೫೮.ತಳವಾರ ಎಂ.ಆರ್., ಸಾಃ ಶಿವನೂರುರವರಿಂದ ಮಾಹಿತಿ.

೫೯.ಕರಿಯಣ್ಣ ಬೂದಿಹಾಳ ಸಾ. ಗೋಡಗೇರಿರವರಿಂದ ಮಾಹಿತಿ.

೬೦.ನಾಗಪ್ಪ ವಡ್ಡರ ಸಾಕಿನ ಹಿಂಡಲಗಿರವರಿಂದ ಮಾಹಿತಿ.

೬೧.ಹಳಕಟ್ಟಿ ಫ.ಗು., ಸಾಃ ಕಾದರವಳ್ಳಿರವರಿಂದ ಮಾಹಿತಿ.

೬೨.ಹುಸೇನ ಇಬ್ರಾಹಿಂ ಹಲಾಯತ್, ಸಾ. ನಂದಗಡರವರಿಂದ ಮಾಹಿತಿ.

೬೩.ಸದಾಶಿವ ಪೂಜಾರ ಸಾ: ದೊಡ್ಡಬೈಲುರವರಿಂದ ಮಾಹಿತಿ.

೬೪.ವಾಲಿ ಸಿ.ಜಿ. ಮತ್ತು ಅರಗಾವಿ ಎಸ್.ಬಿ., ಸಾ: ನಂದಗಡರವರಿಂದ ಮಾಹಿತಿ.

೬೫.ಲಕ್ಷ್ಮಣ ಭಜಂತ್ರಿ ಸಾ. ಬಸರಿಕಟ್ಟಿರವರಿಂದ ಮಾಹಿತಿ.

೬೬.ದೇವಪ್ಪ ಅಣ್ಣು ಪಾಟೀಲ, ಸಾ: ಬೇಕವಾಡರವರಿಂದ ಮಾಹಿತಿ.

೬೭.ಬಸವಂತಪ್ಪ ಗಂಗಪ್ಪ ಕೌಜಲಗಿ, ಸಾ: ಕೊಲ್ಲೂರುರವರಿಂದ ಮಾಹಿತಿ.

೬೮.ಮಹಾರುದ್ರಪ್ಪ ಡಿ. ನಂದಣ್ಣನವರ, ಸಹ ಶಿಕ್ಷಕರು, ಪ್ರೌಢಶಾಲೆ, ದೇಶನೂರುರವರಿಂದ ಮಾಹಿತಿ.

೬೯.ಹಿರೇಮಠ, ಸಾ: ದೇಶನೂರುರವರಿಂದ ಮಾಹಿತಿ.

೭೦.ಅಲ್ಲನಗೌಡಾ ಎಮ್ ಪಾಟೀಲ, ಸಾ. ಮತ್ತಿಕೊಪ್ಪರವರಿಂದ ಮಾಹಿತಿ.

೭೧.ನಿಂಗಪ್ಪ ನಾಗಪ್ಪ ಕಾಶಿ, ಸಾ: ಮಹರೆರವರಿಂದ ಮಾಹಿತಿ.

೭೨.ಬಸವಣ್ಣೆಪ್ಪ ಪರಮಪ್ಪ ತಳವಾರ, ಸಾ: ಕ್ಯಾರಕೊಪ್ಪರವರಿಂದ ಮಾಹಿತಿ.

೭೩.ಪರಶುರಾಮ ನಾಯಕ, ಸಾ. ಗಾಡಿಕೊಪ್ಪರವರಿಂದ ಮಾಹಿತಿ.

೭೪.ಶ್ರೀಕಾಂತ ಕುಲಕರ್ಣಿ, ಸಾ: ಗೋಶಾನಟ್ಟಿರವರಿಂದ ಮಾಹಿತಿ.

೭೫.ನೀಲಕಂಠಪ್ಪಗೌಡ ಚ. ಪಾಟೀಲ, ಸಾ: ತೊಲಗಿರವರಿಂದ ಮಾಹಿತಿ.

೭೬.ರಾಮನಗೌಡ ಎಸ್. ಪಾಟೀಲ, ಸಾ: ತೊಲಗಿರವರಿಂದ ಮಾಹಿತಿ.

೭೭.ಅಡಿವೆಪ್ಪ ರುದ್ರಪ್ಪ ಅಂಬಲಿ, ಸಾ: ಮಾರ್ಗನಕೊಪ್ಪರವರಿಂದ ಮಾಹಿತಿ.

೭೮.ಉಪ್ಪಾರ ಎ.ಕೆ., ಸಾ: ಅರಳಿಕಟ್ಟಿರವರಿಂದ ಮಾಹಿತಿ.

೭೯.ಪಾಟೀಲ ಬಿ.ಎಲ್., ಸಾ: ಬಾಗೇವಾಡಿರವರಿಂದ ಮಾಹಿತಿ.

೮೦.ಪಾಟೀಲ ಬಿ.ಎಸ್., ಸಾ: ಬೆಳಗಾಂವಿರವರಿಂದ ಮಾಹಿತಿ.

೮೧.ಬಸಲಿಂಗಯ್ಯ ಶಿವಪೂಜಿ ಹಿರೇಮಠ, ಸಾ: ಅಮಟೂರುರವರಿಂದ ಮಾಹಿತಿ.

೮೨.ಕೋಟಗಿ ಆರ್.ಎಸ್., ನಿವೃತ್ತ ಶಿಕ್ಷಕರು, ಸಾ. ಒಕ್ಕುಂದರವರಿಂದ ಮಾಹಿತಿ.

೮೩.ಶಂಕರ ಬಸಪ್ಪ ಕಮ್ಮಾರ, ಸಾ: ಕೆಂಗಾನೂರುರವರಿಂದ ಮಾಹಿತಿ.

೮೪.ಈರಪ್ಪ ಅಪ್ಪಣ್ಣ ಅಗಸಿಬಾಗಿಲು, ಸಾ: ಕೆಂಗಾನೂರುರವರಿಂದ ಮಾಹಿತಿ.

೮೫.ವೆಂಕಟಸುಬ್ಬಯ್ಯ ಜಿ. (ಪ್ರಧಾನ ಸಂಪಾದಕರು), ೧೯೭೬ ಪುಟ ೨೧೦೬.

೮೬.ಮಾರುತಿ ರಾಮಪ್ಪ ಮುರಗೋಡ, ಸಾ; ಜಾಲಿಕೊಪ್ಪರವರಿಂದ ಮಾಹಿತಿ.

೮೭.ಭೀಮಪ್ಪ ಭಜಂತ್ರಿ, ಸಾ: ಖೋದಾನಪುರರವರಿಂದ ಮಾಹಿತಿ.

೮೮.ಸಹದೇವಪ್ಪ ಫ. ಮುಳಕೂರ್, ಸಾ: ಗುಡದೂರರವರಿಂದ ಮಾಹಿತಿ.

೮೯.ಪಾಟೀಲ ಎಸ್.ಎ., ಸಾ: ಗುಡಿಕಟ್ಟಿರವರಿಂದ ಮಾಹಿತಿ.

೯೦.ಭಾವನ್ನವರ ಎಸ್.ಕೆ., ನಿವೃತ್ತ ಅಧ್ಯಾಪಕರು, ಗೋವನಕೊಪ್ಪರವರಿಂದ ಮಾಹಿತಿ.

೯೧.ಚಂದ್ರಗೌಡ ಪಾಟೀಲ, ಸಾ: ಚಿಕ್ಕನಂದಿಹಳ್ಳಿರವರಿಂದ ಮಾಹಿತಿ.

೯೨.ನಿಂಗಪ್ಪ ಬ. ಭಂಡಾರಿ, ಸಾ: ಜಾಲಿಕೊಪ್ಪರವರಿಂದ ಮಾಹಿತಿ.

೯೩.ನಿಂಗಪ್ಪ ಫ. ಹೊಳಿ, ಸಾ: ಜಾಲಿಕೊಪ್ಪರವರಿಂದ ಮಾಹಿತಿ.

೯೪.ಸಿದ್ಧಾಂತಿ ಶಿವಬಸವ ಶಾಸ್ತ್ರಿಗಳು, "ತುರಕಾರಿ ಪಂಚಮರ ಇತಿಹಾಸ", ೧೯೨೯. ಪುಟ ೨೫.

೯೫.ಶಂಕರ ಪಾಟೀಲ, ಸಾ: ದೊಡ್ಡವಾಡರವರಿಂದ ಮಾಹಿತಿ.

೯೬.ಸುರೇಶ ಪಾಟೀಲ, ಸಾ: ದೊಡ್ಡವಾಡರವರಿಂದ ಮಾಹಿತಿ.

೯೭.ಫಕೀರಗೌಡ ಬಸನಗೌಡ ಪಾಟೀಲ, ಸಾ: ನನಗುಂಡಿಕೊಪ್ಪರವರಿಂದ ಮಾಹಿತಿ.

೯೮.ರಾಚಯ್ಯ ಎಸ್. ವಾಲಿ, ಸಾ: ಬುಡರಕಟ್ಟಿರವರಿಂದ ಮಾಹಿತಿ.

೯೯.ವೀರಪ್ಪ ಕಾಂಬಳೆ, ಸಾ. ಬೂದಿಹಾಳರವರಿಂದ ಮಾಹಿತಿ.

೧೦೦. ಇಂಪೀರಿಯಲ್ ಗೇಜಿಟಿಯರ್, ವ್ಯಾಲ್ಯೂಮ್ ೧೫, ಪುಟ ೧೬೧.

೧೦೧. ಪಾಟೀಲ ಆರ್.ಎಸ್., ಸಾ: ಮದನಬಾವಿರವರಿಂದ ಮಾಹಿತಿ.

೧೦೨. ನಂದಿಹಳ್ಳಿಎಸ್.ಬಿ., ಸಾ: ಮೇಟ್ಯಾಳರವರಿಂದ ಮಾಹಿತಿ.

೧೦೩. ಬಸವರಾಜ ಕಾಮತ್, ಸಾ: ಸಂಗೊಳ್ಳಿರವರಿಂದ ಮಾಹಿತಿ.

೧೦೪. ಭೀಮರಾವ ಭೆಡಿಕಿಹಾಳ, ಸಾ. ಸಿದ್ದಸಮುದ್ರರವರಿಂದ ಮಾಹಿತಿ.

೧೦೫. ಯಶವಂತ ಕುಡೊಳ್ಳಿ, ಸಾ: ಅವರೋಳಿರವರಿಂದ ಮಾಹಿತಿ.

೧೦೬. ಬಸವರಾಜ ಪಾಟೀಲ, ಸಾ. ಕೊಡಚವಾಡರವರಿಂದ ಮಾಹಿತಿ.

೧೦೭. ಪವನಂಜಯ್ಯ ಜಿ. ಮರಡಿ, ಸಾ. ಚಿಕ್ಕದಿನಕೊಪ್ಪರವರಿಂದ ಮಾಹಿತಿ.

೧೦೮. ಹನುಮಂತ ಆರ್. ಕುಡೊಳ್ಳಿ, ಸಾ. ಬಿಳಕಿರವರಿಂದ ಮಾಹಿತಿ.

೧೦೯. ಮಹಾಂತೇಶ ರು. ಸಂಬರಗಿ, ಸಾ. ಮುನೋಳಿರವರಿಂದ ಮಾಹಿತಿ.

೧೧೦. ಬಸವರಾಜ ಎಂ. ಯಳ್ಳೂರು, ಸಾ. ಮುನೋಳಿರವರಿಂದ ಮಾಹಿತಿ.

೧೧೧. ಅಶೋಕ ಎಸ್. ಗಡಾದ, ಸಾ. ಹಿರೇಹಟ್ಟಿಹೊಳಿರವರಿಂದ ಮಾಹಿತಿ.

೧೧೨. ಸಿದ್ದರಾಮಯ್ಯ ಸಿ. ಹಿರೇಮಠ, ಸಾ. ದೇವಲತ್ತಿರವರಿಂದ ಮಾಹಿತಿ.

೧೧೩. ಕಲ್ಲಪ್ಪ ಬೂದಿಹಾಳ ಲಕ್ಕೇಬೈಲುರವರಿಂದ ಮಾಹಿತಿ.

೧೧೪. ರಘುಪತಿ ಭಟ್ ಕೆಮ್ತೂರ, ತುಳುನಾಡಿನ ಸ್ಥಳ ನಾಮಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೮ ಪು. ೫೦.

೧೧೫. ಬಸನಗೌಡ ಪಾಟೀಲ, ಸಾ. ಚಿವುಟಗುಂಡಿರವರಿಂದ ಮಾಹಿತಿ.

೧೧೬. ಶಿವಬಸಯ್ಯ ದೊಡ್ಡಯ್ಯ ಹಿರೇಮಠ, ಸಾ. ತಿಗಡಿರವರಿಂದ ಮಾಹಿತಿ.

೧೧೭. ಇಂಚಲ್ ಡಿ.ಎಸ್., ಸಾ. ದೇವಲಾಪುರರವರಿಂದ ಮಾಹಿತಿ.

೧೧೮. ವೀರೇಶ ಹೊಸಮನಿ, ಸಾ. ನಾಗಲಾಪುರರವರಿಂದ ಮಾಹಿತಿ.

೧೧೯. ಮಹಾಬಳೇಶ್ವರ ಬೈಲಪ್ಪ ನಂದಿಹಳ್ಳಿಯವರ, ಸಾ: ಬಾವಿಹಾಳರವರಿಂದ ಮಾಹಿತಿ.

೧೨೦. ಬಾಬುಲಾಲ ಮುಗಟಸಾಬ ಕರಣಾಚಿ, ಸಾ: ಬಾವಿಹಾಳರವರಿಂದ ಮಾಹಿತಿ.

೧೨೧. ಬೋಳಗೌಡ ಬಿ.ಬಿ., ಸಾ: ಬೈಲವಾಡರವರಿಂದ ಮಾಹಿತಿ.

೧೨೨. ಗೌಡಪ್ಪ ಗದಿಗೆಪ್ಪ, ಮದನಳ್ಳಿ, ಸಾ: ಬೈಲವಾಡರವರಿಂದ ಮಾಹಿತಿ.

೧೨೩. ವಿಶ್ವನಾಥ, ಗ್ರಾಮ ನಾಮಗಳ ಪರಿವೇಶ, ೨೦೦೦ ಪುಟ ೧೯೧.

೧೨೪. ಪಾಟೀಲ್ ಮನೋಜ, ಬೆಳಗಾವಿ ಜಿಲ್ಲಾ ಮಾರ್ಗದರ್ಶಿ, ಪವನ ಪ್ರಕಾಶನ, ತಿಳಕ್‌ವಾಡಿ, ೧೯೮೭ ಪುಟ. ೧೬೭.

೧೨೫. ಸುರೇಶ ರಾಯಣ್ಣ, ಸಾ: ಸಾಣಿಕೊಪ್ಪರವರಿಂದ ಮಾಹಿತಿ.

೧೨೬. ಶಿವಪ್ಪ ಪೂಜಾರ, ಸಾ: ಸಾಣಿಕೊಪ್ಪರವರಿಂದ ಮಾಹಿತಿ.

೧೨೭. ಬಸಪ್ಪ ಸಿ. ಅಗಸಿಗಿ, ಸಾ: ಹಣ್ಣಿಕೇರಿರವರಿಂದ ಮಾಹಿತಿ.

೧೨೮. ನಾಗೇಶ ಎಸ್., ಉಳವಿ, ಅಧ್ಯಕ್ಷರು, ಗ್ರಾಮಪಂಚಾಯಿತಿ, ಹಣ್ಣಿಕೇರಿ.

ಅಧ್ಯಾಯ ೫

ಕಿತ್ತೂರ ಸಂಸ್ಥಾನಕ್ಕೆ ಸಂಬಂಧಿಸಿದ ಪತ್ರ ವ್ಯವಹಾರ

೫.೧. ಪೀಠಿಕೆ-ಪತ್ರವ್ಯವಹಾರ-ಲಿಪಿ-ಭಾಷೆ

೫.೨. ಪುಣೆ ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿದ ಮೋಡಿ ದಾಖಲೆಗಳು

೫.೩. ಪುಣೆ ರಾಜ್ಯ ಪತ್ರಗಾರ ಇಲಾಖೆಯಲ್ಲಿ ಸಂಗ್ರಹಿಸಿದ ಮೋಡಿ ದಾಖಲೆಗಳು

೫.೪. ಪುಣೆ ಭಾರತೀಯ ಇತಿಹಾಸ ಸಂಶೋಧನೆಯ ಮಂಡಳಿಯಲ್ಲಿ ಸಂಗ್ರಹಿಸಿದ ಮೋಡಿ ದಾಖಲೆಗಳು

೫.೫. ರಾಜ್ಯ ಪತ್ರಗಾರ ಇಲಾಖೆ ಕೊಲ್ಲಾಪುರದಲ್ಲಿ ಸಂಗ್ರಹಿಸಿದ ಮೋಡಿ ದಾಖಲೆಗಳು

೫.೧. ಪೀಠಿಕೆ-ಪತ್ರವ್ಯವಹಾರ-ಲಿಪಿ-ಭಾಷೆ

ಭಾರತದ ಇತಿಹಾಸದಲ್ಲಿ ಪತ್ರ ವ್ಯವಹಾರವು ಆರಂಭದಲ್ಲಿ ಕೇವಲ ರಾಜಮನೆತನಕ್ಕೆ ಮಾತ್ರ ಸೀಮಿತವಾಗಿತ್ತು. ಗುಪ್ತರ ಕಾಲದ ಸಾಹಿತ್ಯಗಳನ್ನು ಅವಲೋಕಿಸಿದಾಗ ಕಾಳಿದಾಸನ ಮೇಘದೂತ ಗ್ರಂಥದಲ್ಲಿ ತನ್ನ ಪತ್ನಿಗೆ ಸಂದೇಶವನ್ನು ಮೋಡದ ಮೂಲಕ ರವಾನಿಸಸಿದ್ದನೆಂಬುದನ್ನು ಕೇಳಿದ್ದೇವೆ. ನಂತರದ ದಿನಗಳಲ್ಲಿ ರಾಜರುಗಳ ರಾಜಕೀಯ ವಿಷಯಕ್ಕೆ ಸಂಬಂಧಿಸಿದ ಪತ್ರಗಳು ದೊರೆಯುತ್ತದೆ. ಯುದ್ಧಕ್ಕೆ ಸಂಬಂಧಪಟ್ಟವು ಅಥವಾ ವೈವಾಹಿಕ ಸಂಬಂಧಗಳಿಗೆ ಸಂಬಂಧಿಸಿದ ಪತ್ರ ವ್ಯವಹಾರಗಳು ಕೇವಲ ರಾಜಮನೆತನಕ್ಕೆ ಮಾತ್ರ ಸೀಮಿತವಾಗಿತ್ತು. ಸಾಮಾನ್ಯ ಜನರು ತಮ್ಮ ವೈವಾಹಿಕ ಸಂಬಂಧಗಳಿಗೆ ಸಂಬಂಧಿಸಿದಂತೆ ಸುದ್ದಿಯನ್ನು ತಿಳಿಸಲು ಪರಿಚಿತ ಜನರನ್ನೋ, ಅಥವಾ ಆಳುಗಳನ್ನು ಕಳುಹಿಸಿ ವ್ಯವಹರಿಸುತ್ತಿದ್ದರು. ಹೀಗಾಗಿ ನಮ್ಮ ದೇಶದಲ್ಲಿ ಪತ್ರವ್ಯವಹಾರ ಎಂಬುದು ಕೇವಲ ಸೀಮಿತ ವರ್ಗಕ್ಕೆ ಮಾತ್ರ ಮೀಸಲಾಗಿತ್ತೆನ್ನಬಹುದು. ಆದರೆ ಬ್ರಿಟಿಷರ ಆಗಮನದಿಂದ ನಮ್ಮ ದೇಶದ ಇತಿಹಾಸದ ಮೇಲೆ ಪತ್ರವ್ಯವಹಾರದ ಬಗ್ಗೆ ಜನರಲ್ಲಿ ಹೆಚ್ಚು ಆಸಕ್ತಿ ಮೂಡಿ ವ್ಯವಹರಿಸಲಾರಂಬಿಸಿತು. ಹಲವಾರು ಐತಿಹಾಸಿಕ ಕಾಗದ ಪತ್ರಗಳು, ಸನ್ನದುಗಳು, ಜಾಹೀರನಾಮೆಗಳು, ಕಿತ್ತೂರ ಕೈಫಿಯತ್ತುಗಳು, ಒಪ್ಪಂದದ ಪತ್ರಗಳು ಮತ್ತು ಕರಾರುಪತ್ರಗಳು, ಪತ್ರ ವ್ಯವಹಾರಗಳು ಅರಬ್ಬಿ, ಪಾರ್ಸಿ, ಮರಾಠಿ ಮತ್ತು ಮೋಡಿಲಿಪಿಗಳಾಗಿವೆ.

೧೫೬೫ರಲ್ಲಿ ವಿಜಯನಗರ ಸಾಮ್ರಾಜ್ಯ ಪತನಗೊಂಡ ಬಳಿಕ ಉತ್ತರ ಕರ್ನಾಟಕದಲ್ಲಿ ಮುಸ್ಲಿಂ ಸಾಮ್ರಾಜ್ಯ ಪ್ರಬಲಗೊಂಡಿರುವುದಲ್ಲದೆ, ಸಾಂಸ್ಕೃತಿಕವಾಗಿಯೂ ಜನರ ಮೇಲೆ ಪ್ರಭಾವ ಬೀರಿವೆ. ಏಕೆಂದರೆ ಉತ್ತರ ಕರ್ನಾಟಕದ ಎಲ್ಲಾ ಬಾಗದಲ್ಲಿ ಪಾರ್ಸಿ ಮತ್ತು ಮರಾಠಿ ಕಾಗದ ಪತ್ರಗಳ ವ್ಯವಹಾರ ನಡೆದಿರುವುದು ಇದಕ್ಕೆ ಸಾಕ್ಷಿಯಾಗಿದೆ. ಸಾಮಾನ್ಯವಾಗಿ ಪತ್ರಗಳ ವ್ಯವಹಾರಗಳು ಮರಾಠಿ ಮೂಡಿ ಲಿಪಿಯಲ್ಲಿ ಬರೆಯಲ್ಪಟ್ಟಿದ್ದರೂ ಇದರ ಭಾಷೆ ಮಾತ್ರ ದೇವನಾಗರಿ ಅಥವಾ ಮರಾಠಿಯಲ್ಲಿ ಇರುತ್ತದೆ. ಕೆಲವೊಮ್ಮೆ ಮೋಡಿ ಲಿಪಿಯಲ್ಲಿದ್ದರೂ ಕನ್ನಡ ಭಾಷೆಯಲ್ಲಿ ಪತ್ರ ಬರೆದಿರುವುದು ವಿಶೇಷವಾಗಿದೆ.

ಪುಣೆ ಆರ್ಖೈವ್ಸನಲ್ಲಿ ಸಾವಿರಾರು ತಾಳೆಬರಹದ ಪ್ರತಿಗಳು ಸಂಗ್ರಹವಾಗಿದ್ದು ಅವುಗಳನ್ನು ಅವಲೋಕಿಸಿದಾಗ ಆಯಾಪ್ರದೇಶದ ಆಯ-ವ್ಯಯಗಳ ಬಗ್ಗೆ ಮಾಹಿತಿ, ಜೊತೆಗೆ ಅವರು ಕೊಡಮಾಡಿದ ಪೂಜೆ-ಪುನಸ್ಕಾರ, ಗಣಾಚಾರಿಕೆ ಹೀಗೆ ಇನ್ನಿತರ ಬಾಬ್ತುಗಳಿಗೆ ಕೊಡಮಾಡಿದ ಉಲ್ಲೇಖವನ್ನು ಕಾಣುತ್ತೇವೆ.

ಕಿತ್ತೂರು ಪ್ರಾಂತ್ಯಕ್ಕೆ ಸಂಬಂಧಿಸಿದ ಪತ್ರವ್ಯವಹಾರಗಳಲ್ಲಿ ಹೆಚ್ಚಿನ ಪತ್ರಗಳು ಮರಾಠಿ ಲಿಪಿ ಗಳಲ್ಲಿದ್ದು, ಉಚ್ಚಾರ ದೇವನಾಗರಿ ಲಿಪಿಯಲ್ಲಿವೆ. ಇಂತಹ ಪತ್ರಗಳಲ್ಲಿ ಹೆಚ್ಚಿನವುಗಳಲ್ಲಿ ಅರಬ್ಬಿ ಭಾಷೆಯ/ಪಾರ್ಸಿ ಭಾಷೆಯ ಅಂಕೆಗಳನ್ನು ಬಳಸಿರುತ್ತಾರೆ ಅಲಫ್, ತಿಸ್ನಯ್ಯ, ಮಯ್ಯಾತೀನ್, ಸುಮಾ ಪದಗಳು ಅಂದಿನ ವರ್ಷಗಳನ್ನತಿಳಿಸುವ ಪದಗಳಾಗಿವೆ. ಆದ್ದರಿಂದ ಈ ಮೂಡಿಪತ್ರಗಳಲ್ಲಿ ಅರಬ್ಬಿ, ಪಾರ್ಸಿ, ಹಾಗೂ ಹಿಂದೂ ಪಂಚಾಂಗದ ಕಾಲಮಾನವನ್ನು ಬಳಸುತ್ತಿರುವುದರಿಂದ, ಅರಬ್ಬಿ ಭಾಷೆಯ ಕೋಷ್ಟಕವನ್ನು ಕೂಡಿಸಿ ಕಾಲಮಾನವನ್ನು ನಿರ್ಧರಿಸು ವುದು ಕಷ್ಟಕರ. ಕೆಲವೊಮ್ಮೆ ಹಿಂದೂ ತಿಂಗಳು ಮತ್ತು ಅರಬ್ಬಿ ತಿಂಗಳು ಎರಡನ್ನು ಬಳಸಿದ ಉದಾಹರಣೆಯನ್ನು ಕಾಣುತ್ತೇವೆ. ಚ, ೯ ರಭಿಲಾಖರ್ ಎಂಬ ಪದಗಳ ಬಳಕೆಯಿಂದ ಪತ್ರದಲ್ಲಿ ನಿಖರತೆಯ ಕೊರತೆಯುಂಟಾಗುತ್ತದೆ. ರಭಿಲಾಖರ್ ಎಂಬುದು ಅರಬ್ಬಿ ಪಂಚಾಂಗದ ಒಂದು ತಿಂಗಳಾಗಿದ್ದು ಆದರೆ ಇಂತಹ ಪತ್ರಗಳಲ್ಲಿ ನಿಖರವಾದ ಪತ್ರಗಳನ್ನು ಸೂಚಿಸಿರುವದಿಲ್ಲ. *ರುಮಾಲ್ ನಂ ೭೪, ಫೈಲ್ ನಂ.೮ ಪತ್ರದ ಸಂಖ್ಯೆ ೦೧ರಲ್ಲಿ ರಾಜಶ್ರೀ ನಾನಾ..ಸ್ವಾಮಿ ಗಳಿಗೆ ಆತನ ಸೇವಕನಾದ ಬಾಬುರಾವ್ ಭಾಸ್ಕರ್ ಕಿತ್ತೂರಿನ ಬಗ್ಗೆ ನೀಡುವಾಗ ಕೇವಲ ಪೌಷ, ಚ. ೧೩ ರಮಜಾನ ದವರೆಗೆ* ಎಂಬ ಉಲ್ಲೇಖಗಳನ್ನು ಬಳಸಿರುವುದು ಕಂಡುಬರುತ್ತದೆ.

ಸಮಕಾಲೀನ ದಸ್ತಾವೇಜುಗಳ ಆಧಾರದಿಂದ ಸ್ಥೂಲವಾಗಿ ಸಮಾಜದಲ್ಲಿ ೫ ಪ್ರಭಾವಿ ವರ್ಗಗಳನ್ನು ಕಾಣುತ್ತೇವೆ. ಅವುಗಳನ್ನು ಕ್ರೋಢೀಕರಿಸಿ ಹೇಳುವುದಾದರೆ ಆಡಳಿತ ಮಂಡಳಿಯ ಸದಸ್ಯರು, ಜ್ಞಾನವಂತರು, ಕಲಾಕಾರರು, ರೈತಾಪಿ ಜನರು ಮತ್ತು ಜಮೀನುರಹಿತ ಕೂಲಿಗಳು. ಆಡಳಿತ ವರ್ಗದವರು, ದೇಸಾಯಿಗಳು, ಸರ್‌ದೇಸಾಯಿಗಳು, ದೇಶಪಾಂಡೆಗಳು, ಜಹಗೀರುದಾರರು ಅಥವಾ ವತನದಾರರು ಕೋತವಾಲರು ಹಳ್ಳಿಯ ಮುಖ್ಯಸ್ಥರು ಹೀಗೆ ವಿಶಿಷ್ಟ ಜಾತಿಯ ಹೆಸರು, ಇವರುಗಳು ಹೆಚ್ಚಾಗಿ ಪದವಿ ಪಡೆದ ಜ್ಞಾನವಂತರು. ಎರಡನೆಯವರು ಆಶ್ರಮ ಹಾಗೂ ಸಂಸ್ಥೆಗಳ ಮುಖ್ಯಸ್ಥರು, ಶಿಕ್ಷಕರು, ವಿವಿಧ ಧಾರ್ಮಿಕ ಪೂಜಾರಿಗಳು. ಮೂರನೇ ವರ್ಗವು ಆಯಾಕಾಲದ ಆರ್ಥಿಕ ಪರಿಸ್ಥಿತಿಯ ವಾಸ್ತವಿಕ ಫಲಿತಾಂಶವಾಗಿದೆ. ಇವರುಗಳಿಗೆ ಗುಡಿ ಕೈಗಾರಿಕೆ ಗಳು, ವಿವಿಧ ಕಸುಬುಗಳು, ಕುಶಲಕರ್ಮಿಗಳು ಇವರ ಜೀವನೋಪಾಯವಾಗಿದ್ದವು.

೫.೨. ಪುಣೆ ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿದ ಮೋಡಿ ದಾಖಲೆಗಳು

ಪತ್ರದ ಸಂಖ್ಯೆ-೦೧

ಪತ್ರ ಸಿಕ್ಕ ಸ್ಥಳ : ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ದಿನಾಂಕ : ೨/೦೫/೧೭೭೬

ಶ್ರೀಮಂತ ರಾಜಶ್ರೀ ನಾನಾ (ಫಡ್ನೀಸ್) ಸ್ವಾಮಿಯವರ ಸನ್ನಿಧಿಯಲ್ಲಿ ಏಸಾಜಿ ರಾಮ ಮಾಡುವ ನಮಸ್ಕಾರಗಳು. ಈಪತ್ರವನ್ನು ಕ್ರಿ.ಶ ೧೭೭೬ರಲ್ಲಿ ಶಿರೋಳ ಎಂಬ ಗ್ರಾಮದಿಂದ

ಬರೆಯಲಾಗಿದೆ. ಈ ಪತ್ರವು ಆರಂಭದಲ್ಲಿ ಕ್ಷೇಮ ಸಮಾಚಾರವನ್ನು ಕುರಿತು ಬರೆಯಲಾಗಿದೆ. ವಿಶೇಷವೇನೆಂದರೇ, ಚಾಂದ್ರಮಾನ ೨೨ರಂದು ಈ ಪತ್ರವನ್ನು ರವಾನಿಸಲಾಗಿದೆ. ಅದರಲ್ಲಿ ಬಂದ ಒಕ್ಕಣೆಯಂತೆ, ಕಿತ್ತೂರಕರ್ ಎಂದರೆ ಮಲ್ಲಸರ್ಜನನ ಬದಲು ಶಿಲ್ಲೇದಾರ ಇವರ ಕಡೆಯಿಂದ ಎಂಬುದಾಗಿ ತಪ್ಪಾಗಿ ಲಕ್ಷ ರೂಪಾಯಿ ವಸೂಲಿ ಮಾಡಿ ಎಂದು ನಮೂದಿಸಲಾಗಿದೆ. ರಾಜಶ್ರೀ ಮಹಿಪತರಾವ್ ಇವರ ಮೂಲಕ ಅದನ್ನು ಮರಳಿಸಬೇಕು. ಕಾರಣ ಅವರಿಗೆ ನೀಡಿದ ಸಮಯದ ಗಡುವು ಮುಗಿದಿರುತ್ತದೆ. ಆ ಕಾರಣ ಅವರಿಂದ ವಾರ್ಷಿಕ ಆದಾಯವನ್ನು ಪಡೆದುಕೊಳ್ಳಬಾರದು ಎಂಬುದಾಗಿ ತಾವು ಆಜ್ಞೆ ಮಾಡಬೇಕು. ಹರಬ್ ನಾಯಿಕ್ ಜೋಷಿ ಇವರು ಶಿರೋಳಕ್ಕೆ ಬಂದು ಸ್ವಲ್ಪ ವಸ್ತುವಿನ ರೂಪದಲ್ಲಿ ಇಡಗಂಟು ನೀಡಿರುತ್ತಾರೆ. ಅವರು ನೀಡಿದ ಮೊತ್ತವನ್ನು ನಮಗೆ ಇಲ್ಲಿಯವರೆಗೂ ತಲುಪಿಸಲಿಲ್ಲ. ಹರಬ್ ನಾಯಿಕ್ ಜೋಷಿ ಅವರಿಗೆ ನೀವು ಈಗಾಗಲೇ ಆಜ್ಞೆ ಮಾಡಿದ್ದಲ್ಲಿ ಆ ಅಜ್ಞೆಯ ಅನುಸಾರ ನೆಡೆಯಬೇಕಾಗಿತ್ತು ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ಕಿತ್ತೂರಕರ್‌ರವರ ಸ್ವಾರ್ಥತನದಿಂದಾಗಿ ಮೋಸವನ್ನು ಮಾಡಿದ್ದು ಗಮನಕ್ಕೆ ಬಂದಿದೆ.ಕೇಳಿದಾಗೊಮ್ಮೆ ನೆಪವೊಡ್ಡಿ ಮುಂದುಡುತ್ತಾ ಸಂದಾಯ ಮಾಡಿಲ್ಲಾ. ಕೇಳಿದರೆ ಪ್ರತಿಯಾಗಿ ಆನೇಕ ರೀತಿಯ ಕಾರಣವನ್ನು ಹುಟ್ಟಿಸಿ ನಂಬಿಸುತ್ತಿದ್ದಾರೆ. ಅಷ್ಟರಲ್ಲಿ ತುರ್ತುಸ್ಥಿತಿಯಲ್ಲಿ ಹೈದರನ ಸೈನಿಕರು ಸೂಪ ಮತ್ತು ಹರಿಹರದಲ್ಲಿ ಬಂದು ಜಮಾಯಿಸಿದ್ದಾರೆ. ಹೀಗಾಗಿ ಆ ಎಲ್ಲಾ ಪ್ರದೇಶವು ಅವರಿಗೆ ಮುಕ್ತವಾಗಿ ಬಿಟ್ಟಿವೆ. ನಮ್ಮ ಸರ್ಕಾರದ ಸೈನಿಕರು ಗಡಿಯಲ್ಲಿ ಹೋಗಿದ್ದರೆ ಒಳ್ಳೆಯದಾಗಿರುತ್ತಿತ್ತು. ಜೊತೆಗೆ ತ್ವರಿತವಾಗಿ ಪರಿಹಾರವು ಲಭ್ಯವಾಗುತ್ತಿತ್ತು. ಈಗಿನ ಸ್ಥಿತಿಯಲ್ಲಿ ಅದು ಕೂಡ ಆಗಲಿಲ್ಲ. ತಮ್ಮ ಸೇವಕನ ಕಡೆಯಿಂದ ಪತ್ರ ಮುಖೇನ ಕಾರಕೂನನನ್ನು ಕಳುಹಿಸಿ ವ್ಯವಸ್ಥೆ ಮಾಡುವುದಕ್ಕೂ ಸಮಯವಿಲ್ಲ. ಹೀಗಿದ್ದಾಗ ಈಗ ಪ್ರಯತ್ನಿಸಿದರೆ ಎಷ್ಟು ವಸೂಲಾಗುತ್ತದೆಯೋ ಎಂಬುದನ್ನು ಬರೆದು ಕಳುಹಿಸುವುದಾಗಬೇಕು. ಅಂದಾಗ ಮಾತ್ರ ನಿಮ್ಮ ಆಜ್ಞಾನು ಸಾರವಾಗಿ ವರ್ತಿಸಲು ಆಗುತ್ತದೆ. ಸರ್ಕಾರದಿಂದ ನಮ್ಮವರು ಆದೇಶವನ್ನು ತರುತ್ತಾರೆ ಅದರೂ ಅದನ್ನು ಸರಿಯಾಗಿ ಜಾರಿಗೊಳಿಸುವುದಿಲ್ಲಾ. ಹೀಗಾಗಿ ನಮಗೆ ಹಗಲು-ರಾತ್ರಿ ಸಮಧಾನವೇ ಉಳಿದಿಲ್ಲಾ. ಈ ಕಾರಣಕ್ಕಾಗಿ ತಾವು ತುರಂತವಾಗಿ ಧಾರವಾಡದ ಕಡೆಗೆ ಬರಬೇಕು. ನಾನು ಈಗ ಕಠಿಣ ಪರಿಸ್ಥಿತಿಯಲ್ಲಿದ್ದೇನೆ. ಹರಿಹರ–ಕಾರವಾರ ಇವುಗಳನ್ನು ರಕ್ಷಿಸಲು ಪುಣ್ಯವಿರಬೇಕು, ಅನ್ಯತಮಾರ್ಗವಿಲ್ಲಾ.[೧]

ಸಾರಾಂಶ

ಕಿತ್ತೂರಕರ್ ದೇಸಾಯಿಯವರನ್ನು ಸ್ವಾರ್ಥಿ, ಹಾಗೂ ಮೋಸಗಾರನೆಂದು ನಮೂದಿಸಿ ಆರೋಪಿಸಲಾಗಿದೆ. ಶಿರೋಳ ಭಾಗದ ಅಧಿಕಾರಿ ಏಸಾಜಿ ರಾಮ ಎಂಬ ಅಧಿಕಾರಿಯು ಇದ್ದನೆಂದು ಈ ಪತ್ರದಿಂದ ತಿಳಿದು ಬರುತ್ತದೆ.

ಪತ್ರದ ಸಂಖ್ಯೆ-೦೨

ಪತ್ರ ಸಿಕ್ಕ ಸ್ಥಳ : ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ೧೮ನೇ ಶತಮಾನ

ಉಲ್ಲೇಖ : ರುಮಾಲ್ ನಂ. ೭೪

ಪುಷ್ಯಮಾಸದಲ್ಲಿ ರಾಜಶ್ರೀ ಮಹದಜೀ ನರಹರಿ ಸ್ವಾಮಿ ಗೋಸಾವಿ ಇವನು ಪತ್ರದ ಮೂಲಕ ಮಾಡುವ ವಿನಂತಿ. ನೀವು ಚ. ೧೦ ರಂದು ರಂಜಾನ್ (ಉರ್ದುಮಾಸ) ಮತ್ತು ನಂತರ ಪತ್ರಗಳನ್ನು ರವಾನಿಸಿದ್ದೀರಿ.ರಾಜಶ್ರೀ ಬೆಹೆರೆಯವರು ವೈರಿಗಳನ್ನು ದಂಡಿಸುವುದಕ್ಕಾಗಿ ಕಂಬಗಳನ್ನು ನಿಲ್ಲಿಸಿದ್ದಾರೆ. ಆ ವ್ಯವಸ್ಥೆ ಹರಿಪಂಥ ಫಳಕೆ ಇವರಿಗೆ ಅನ್ವಯಿಸುವುದಿಲ್ಲ ಎಂದು ನಿಮ್ಮ ಪತ್ರದ ಉಲ್ಲೇಖ ತಿಳಿಸುತ್ತದೆ. ಅದು ನೀವು ಬರೆದದ್ದಕ್ಕೆ ಈ ರೀತಿ ಬರೆಯಲು ಸಾಧ್ಯವಿಲ್ಲ ನಾವು ನೇಗಿನಹಾಳದಲ್ಲಿ ವಿಚಾರಣೆ ಮಾಡಿದಾಗ ಹೆಂಗಸರು ಮತ್ತು ಗಂಡಸರು ಸುಮಾರು ೨೨ ಜನರಿಗೆ ಈ ಶಿಕ್ಷೆಯನ್ನು ಕೊಡಲಾಗಿದೆ. ಬೆಳವಡಿಯಲ್ಲಿ ಇಬ್ಬರು ದುಷ್ಟ ಸೈನಿಕರ ಪತ್ನಿಯರನ್ನು ಹಿಡಿದು ತಂದು ಸೆರೆಮನೆಯಲ್ಲಿ ಬಂಧಿಸಲಾಗಿದೆ. ಅಲ್ಲಿಯ ಬಡಗಿಯ ವರಿಂದ ಕಂಬಗಳನ್ನು ತಯಾರಿಸಿ ಅವರಿಗೂ ಕೂಡ ಹಿಂದಿನವರಂತೆ ಶಿಕ್ಷೆಯನ್ನು ಕೊಡಬೇಕೆಂದು ನಿರ್ಧರಿಸಿದ್ದೇವೆ. ಇಷ್ಟರಲ್ಲಿ ದುಷ್ಟ ಸೈನಿಕರು ... ... ಅಸ್ಪಷ್ಟ ... ... ಒಬ್ಬ ಹೆಣ್ಣು ಮಗಳು ಸತ್ತಿರುವುದು ಎಂದು ಆರೋಪ ಬಂದಿದೆ. ಹೀಗಿರುವಾಗ ಬೆಹೆರೆಯವರು ಸತ್ತಿಲ್ಲವೆಂದು ಹೇಗೆ ಹೇಳುತ್ತಾರೆ.[೨]

ಸಾರಾಂಶ

ಹಿಂದೂ ಮತ್ತು ಮುಸ್ಲಿಂ ತಿಂಗಳುಗಳನ್ನು ದಾಖಲಿಸಿದ್ದಾರೆ. ಆದರೆ ವರ್ಷದ ಮಾಹಿತಿ ಇಲ್ಲ. ಮತ್ತು ರಾಜಶ್ರೀ ನರಹರಿ ಗೋಸಾವಿಯವರು ಬೆಹರೆಯವರ ಮೇಲೆ ಆರೋಪ ಮಾಡಿ ತಮ್ಮ ಮೇಲಾಧಿಕಾರಿಗಳಿಗೆ ಸಮಜಾಯಿಸಿ ವಿವರ ನೀಡಿದ ಪತ್ರವಾಗಿದೆ.

ಪತ್ರದ ಸಂಖ್ಯೆ-೦೩

ಪತ್ರ ಸಿಕ್ಕ ಸ್ಥಳ : ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ೧೮ನೇ ಶತಮಾನ

ಸೇವೆಯಲ್ಲಿರುವ ಕೆಳ ಅಧಿಕಾರಿಯ ವಿನಂತಿ ಪತ್ರ.

ಇದೀಗ ಕಿತ್ತೂರು ತಾಲೂಕಿನಿಂದ ಬಂದ ಸುದ್ದಿ ಏನೆಂದರೆ ಆ ಪ್ರದೇಶದಲ್ಲಿ ದುಷ್ಟ ಸೈನಿಕರುಗಳಿಂದ ಸಹಿಸಲು ಸಾಧ್ಯವಿಲ್ಲದಂತಹ ದಾಂಧಲೆಯನ್ನು ಪ್ರಾರಂಭಿಸಿದ್ದಾರೆ. ಅವರೆಲ್ಲ ಸಾವಿರದಿಂದ ಸಾವಿರದ ಎರಡುನೂರು ಜನ ಒಟ್ಟಾಗಿ ಬಂದು ರಾತ್ರಿ ಅಲ್ಲಿರುವ ದನಕರು ಗಳನ್ನು ಕದ್ದುಕೊಂಡು ಹೋಗಿ ಬಹಳ ನಷ್ಟ ಮಾಡುತ್ತಿದ್ದಾರೆ. ಇಲ್ಲಿ ರಾಜಶ್ರೀ ದೊಂಡೋ ಪಂಥ ಗೋಖಲೆಯವರು ಇರುವರೆನೋ ನಿಜ. ಆದರೆ ಆ ದುಷ್ಟಸೈನಿಕರ ಸಮೂಹ ರಾತ್ರಿಯ

ವೇಳೆಯಲ್ಲಿ ಬರುವ ಕಾರಣ ಈ ಜನ ಅಡವಿಯಲ್ಲಿ ಮರೆಮಾಚಿಕೊಂಡಿರುತ್ತಾರೆ. ಮಂಡೊಳ್ಳಿ ಮತ್ತು ಕುಕಡಳ್ಳಿ ಎರಡು ಗ್ರಾಮಗಳನ್ನು ಲೂಟಿ ಮಾಡಿ ಜಾನುವಾರುಗಳನ್ನು ಅಪಹರಿಸಿಕೊಂಡು ಹೋದರು. ಕಿತ್ತೂರ್‌ಕರ್ ದೇಸಾಯಿಯು ಜಾಂಬೋಟಿಕರ್ ಎಂಬುವವನ ಆಶ್ರಯದಲ್ಲಿದ್ದಾನೆ. ಜಾಂಬೂಟಿಕರ್ ರಾಜಶ್ರೀ ದೊಂಡೋಪಂಥ್ ಗೋಖಲೆ ಮತ್ತು ರಾಜಶ್ರೀ ಮಹದಜೀಪಂಥ್ ಓಕ್ ಇವರ ಜೊತೆ ಕೂಡಿ ಮಾತುಕತೆ ನಡೆಸಬೇಕೆಂದು ನಿರ್ಧರಿಸಿ ಆಗಿತ್ತು. ಆದರೆ ಅವರ ಮಧ್ಯೆ ಯಾವುದೇ ಮಾತುಕತೆ ನಡೆದಿಲ್ಲ. ಜಾಂಬೋಟಿಕರನು ಕಿತ್ತೂರು ದೇಸಾಯಿಯ ಪರವಾಗಿ ರುವುದು ಗೊತ್ತಾಗಿದೆ. ಕಿತ್ತೂರ್‌ಕರ್ ದೇಸಾಯಿಯ ಹೆಸರನ್ನು ಮುಂದೆ ಮಾಡಿ ಸ್ವತಃ ಅವನೇ ತೊಂದರೆ ಕೊಡುತ್ತಿದ್ದಾನೆ.[೩]

ಸಾರಾಂಶ

ಜಾಂಬೋಟಿಕರ್ ಎಂಬುವವನು ಕಿತ್ತೂರ್‌ಕರ್ ದೇಸಾಯಿಯಿವರಿಗೆ ಆಪ್ತನೆಂದು ಕಂಡು ಬರುತ್ತದೆ. ಜೊತೆಗೆ ಕಿತ್ತೂರು ತಾಲೂಕಿನಲ್ಲಿ ದನಕರುಗಳ ಕಳ್ಳತನ ನಡೆದದ್ದು, ಈ ಪತ್ರದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಹಾಗೂ ವಿಶೇಷವಾಗಿ ಮಂಡೊಳ್ಳಿ ಮತ್ತು ಕುಕಡೊಳ್ಳಿ ಎರಡು ಗ್ರಾಮಗಳು ಲೂಟಿಗೆ ಒಳಪಟ್ಟಿದ್ದವು. ಮಂಡೊಳ್ಳಿ ಎಂಬ ಹೆಸರು ಸಧ್ಯ ಇರುವದಿಲ್ಲ. ಬದಲಿಗೆ ಈಗ ಮಿಂಡೊಳ್ಳಿ ಎಂದು ಕರೆಯುತ್ತಿದ್ದಾರೆ.

ಪತ್ರದ ಸಂಖ್ಯೆ-೦೪

ಪತ್ರ ಸಿಕ್ಕ ಸ್ಥಳ : ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ೧೮ನೇ ಶತಮಾನ

ಈ ಪತ್ರವು ಪೂರ್ಣ ಪ್ರಮಾಣದಲ್ಲಿ ಲಭ್ಯವಿರುವುದಿಲ್ಲ. ಈ ಪತ್ರದ ಕೆಳಗಿನ ಭಾಗವು ಕಳೆದು ಹೋಗಿದೆ.

ಸೇವೆಯಲ್ಲಿ ವಿಜ್ಞಾಪನೆ

ರಾಜಶ್ರೀ ರಾಮಪ್ಪ ಕಿತ್ತೂರ್‌ಕರ್ ಇವರು ಬರೆದ ಪತ್ರವು ಕಾರಕೂನನ ಹೆಸರಿನಲ್ಲಿ ಕೈಸೇರಿದೆ. ಕಿತ್ತೂರಿನ ಮೂಲಕ ಅವರಿಂದ ಬಂದ ಪತ್ರಗಳನ್ನು ಸ್ವಾಮಿಗಳ ಅವಗಾಹನೆಗೆ ನಾನು ತಲುಪಿಸುತ್ತಿದ್ದೇನೆ. ನಾನು ಕಳುಹಿಸಿದ ಪತ್ರಗಳನ್ನು ಓದಿದಾಗ ತಮಗೆ ಎಲ್ಲವೂ ಅರ್ಥ ವಾಗಬಹುದು. ರಾಜಶ್ರೀ ಬಾವು ಪರಚುರೆ ಮತ್ತು ವೆಂಕಯ್ಯ ಇವರಲ್ಲಿ ಅತ್ಯಂತ ಗಾಢವಾದ ಸಂಬಂಧವಿದೆ. ಬಹುಷಃ ತಮಗೆ ಯಾರೂ ಈ ವಿಷಯವನ್ನು ಗಮನಕ್ಕೆ ತಂದಂತೆ ಕಾಣುವು ದಿಲ್ಲ. ಆ ಕಾರಣ ಈ ವಿಷಯದ ಮಾಹಿತಿಗಾಗಿ ನಾನು ಈ ಪತ್ರವನ್ನು ಬರೆಯುತ್ತಿದ್ದೇವೆ. ತ್ವರಿತವಾಗಿ ತಲುಪುವ ಉದ್ದೇಶದಿಂದ ನೌಕರನ ಮೂಲಕ ಕಳುಹಿಸಿಕೊಡುತ್ತಿದ್ದೇನೆ. ಅವುಗಳನ್ನು

ತಾವು ನೋಡಿ ನನ್ನ ಕಡೆಗೆ ... ... (ಅಸ್ಪಷ್ಟ) .... ವೈರಿಗಳನ್ನು ಬಂದೋಬಸ್ತ್ ಮಾಡಬೇಕಾದರೆ ಸ್ವಾಮಿಗಳು ಆಜ್ಞಾಪಿಸಬೇಕೆಂದು ವಿನಂತಿ ಮಾಡುತ್ತೇನೆ. ಮತ್ತೊಂದು ವಿಶೇಷವೇನೆಂದರೆ ಕಿತ್ತೂರ್‌ಕರ್ ದೇಸಾಯಿಯವರ ಕಡೆಗೆ ನಾಲ್ಕೈದು ಸಾವಿರ ಶೂರ ಸೈನಿಕರ ತಂಡವಿದೆ. ಅದು ಊರಿನ ಸಮೀಪವಿರುವ ಅಡವಿಯಲ್ಲಿ ಇರುತ್ತದೆ. ಇದು ಸ್ವಾಮಿಗಳ ಮಾಹಿತಿಗಾಗಿ ಇಂತಿ ಸೇವಕ.[೪]

ಸಾರಾಂಶ

ಈ ಪತ್ರವು ಗೂಡಚಾರಿಕೆಯ ವಿಷಯವನ್ನು ಒಳಗೊಂಡಿದ್ದು ಇಬ್ಬರು ಅಧಿಕಾರಿಗಳ ಮಧ್ಯದಲ್ಲಿರುವ ಗಾಢ ಸಂಬಂಧವನ್ನು ತಮ್ಮ ಮೇಲಧಿಕಾರಿಗಳಿಗೆ ಸುಳುವು ನೀಡುವ ಮಹತ್ವದ ಉಲ್ಲೇಖವಾಗಿದೆ. ಜೊತೆಗೆ ಕಿತ್ತೂರ್‌ಕರ್ ದೇಸಾಯಿಯವರ ಸೈನ್ಯ ಬಲ ಮತ್ತು ಅದು ಬೀಡು ಬಿಟ್ಟಿರುವ ಸ್ಥಳದ ಮಹತ್ವದ ವಿಷಯವನ್ನೊಳಗೊಂಡ ರಹಸ್ಯ ಪತ್ರ ಇದಾಗಿದೆ.

ಪತ್ರದ ಸಂಖ್ಯೆ-೦೫

ಪತ್ರ ಸಿಕ್ಕ ಸ್ಥಳ : ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ೧೮ನೇ ಶತಮಾನ

ಬಾಪೂಜಿ ನಾರಾಯಣ ಪರಚುರೆ ಇವರ ವಿನಂತಿ ಪತ್ರವಾಗಿದೆ. ಈ ಪತ್ರದಲ್ಲಿ ಚ. ೧೬ (ಚಾಂದ್ರಮಾನ ಕಾಲ) ದಂದು ಹಲಸಿಯ ಸಮೀಪ ಸೈನಿಕರು ವಾಸವಾಗಿದ್ದರು. ಬೆಳಗಿನ ಜಾವದಲ್ಲಿ ದೇಸಾಯಿಯವರು (ಮಲ್ಲಸರ್ಜನ) ಇರುವ ಸುದ್ಧಿಯನ್ನು ತಿಳಿದು ರಾಜಶ್ರೀ ದೊಂಡೋ ಪಂಥ್ ಗೋಖಲೆ ಇವರ ಸೈನಿಕರು ಹಲಸಿಯ ಸಮೀಪಕ್ಕೆ ಬಂದು ಬಾಗಿಲನ್ನು ತೆಗೆದರು. ಬಾಗಿಲನ್ನು ತೆಗೆದು ಗುಡ್ಡವನ್ನು ಶೋಧಿಸಿದಾಗ ಹಲಸಿ ಮತ್ತು ಹನುಮಂತಗಡದಿಂದ ಶೋಧಿಸಲು ಹೊರಟರೆಂದು ಈ ಪತ್ರದಲ್ಲಿ ಹೇಳಲಾಗಿದೆ. ಈ ಪತ್ರದಲ್ಲಿ ಕಿತ್ತೂರನ್ನು ತಾಲ್ಲೂಕ್ಕೆಂದು ಉಲ್ಲೇಖಿಸಿರುವುದೇ ಈ ಪತ್ರದ ಮಹತ್ವವಾಗಿದೆ.[೫]

ಸಾರಾಂಶ

ರಾಜಶ್ರೀ ದೊಂಡೋಪಂಥ್ ಗೋಖಲೆ ಇವರೊಬ್ಬರು ಅಧಿಕಾರಿಯೆಂಬುದು ಈ ಪತ್ರದ ದಾಖಲೆಯಿಂದ ತಿಳಿದುಬರುತ್ತದೆ. ಹಾಗೂ ನಿಜನಕೋಡು ಭಾಗ ಹಲಸಿ. ಹನುಮಂತಗಡ, ಇವು ಕಿತ್ತೂರು ತಾಲೂಕಿನ ವ್ಯಾಪ್ತಿಯಲ್ಲಿತ್ತು ಎಂಬುದು ಇದರಿಂದ ಸ್ಪಷ್ಟವಾಗಿದೆ.

ಪತ್ರದ ಸಂಖ್ಯೆ-೦೬

ಪತ್ರ ಸಿಕ್ಕ ಸ್ಥಳ : ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ೨೫-೭-೧೭೮೭ನೇ ಶತಮಾನ

ಈ ಪತ್ರದಲ್ಲಿ ಬಾಬುರಾವ್ ಭಾಸ್ಕರ್ ಶ್ರೀಮಂತ ರಾಜಶ್ರೀ ನಾನಾ (ಫಡ್ನೀಸ್?) ರವರಿಗೆ ಬರೆದ ದಾಖಲಾತಿಯಾಗಿದೆ. ಈ ಪತ್ರದಲ್ಲಿ ಸುಬ್ಬರಾವ್ ಮೋಹಿತೆ ಮತ್ತು ಕಿತ್ತೂರ್ ಕರ್ ದೇಸಾಯಿಯವರು ಧಾರವಾಡಕ್ಕೆ ಬಂದ ವಿಷಯವಿದೆ. ಮೋಹಿತೆ ಅವರು ಸೈನಿಕರನ್ನು ಕೂಡಿಸಿಕೊಂಡು ಕಿತ್ತೂರಿಗೆ ದಾಂಧಲೆ ಹಾಕಿದ ವಿಷಯವನ್ನು ಉಲ್ಲಲ್ಲೇಖಿಸಲಾಗಿದೆ. ಟಿಪ್ಪು ವಿಗೂ ಪತ್ರ ಬರೆದ ಆ ಪತ್ರದ ಪ್ರತಿಯನ್ನು ರಾಜಶ್ರೀಯವರಿಗೆ ಕಳುಹಿಸಿದ ವಿಷಯವನ್ನು ಈ ಪತ್ರವು ಉಲ್ಲೇಖಿಸುತ್ತದೆ. ಸುಬ್ರಾವ್ ಮೋಹಿತೆಯವರಿಗೆ ೨೫ ಸಾವಿರ ಹೊನ್ನುಗಳನ್ನು ಖರ್ಚಿಗಾಗಿ ಕೊಡಲಾಗಿದೆ ಎಂದು ಅವನು ತೇಗೂರನ್ನು ವಶಪಡಿಸಿಕೊಂಡು ಸಿಂಗನಹಳ್ಳಿಯಲ್ಲಿ ಎರಡು ಸಾವಿರ ಸೈನಿಕರೊಂದಿಗೆ ವಾಸ್ತವ್ಯ ಮಾಡಿದ್ದಾನೆ. ಪ್ರತಿದಿನವೂ ತೇಗೂರ್ ಮತ್ತು ಸಿಂಗನ ಹಳ್ಳಿಯಲ್ಲಿ ಸೈನ್ಯ ಸಮೇತ ನಿಲ್ಲಬೇಕಾಗುತ್ತದೆ. ಸರ್ಕಾರದ ಒಂದು ಸಾವಿರ ಸೈನಿಕರು ರಕ್ಷಣೆ ಗಾಗಿ ಇದ್ದಾರೆ. ಒಟ್ಟು ೫ ಸಾವಿರ ಸೈನಿಕರಲ್ಲಿ ದೇಶನೂರು ಮುಂತಾದ ಠಾಣೆಗಳಲ್ಲಿ ಒಂದು ಸಾವಿರ ಸೈನಿಕರು ಹಾಗೂ ಇಲ್ಲಿ ಮೂರು ಸಾವಿರದ ಐದುನೂರು ಸೈನಿಕರಿದ್ದಾರೆ ಎಂದು ವರದಿ ಯನ್ನು ಕಳಿಹಿಸಿದ ವಿಷಯ ಈ ಪತ್ರದಲ್ಲಿದೆ. ಕರ್ಯಾತಿನ ಕಲೆಕ್ಟರ್ ಕಡೆಯಿಂದ ಸ್ವಲ್ಪ ಜಮಾ ಮಾಡಿಸಿ ಮುಂದಿನ ಕರಾರು ಮಾಡಿಸುವಾಗ ಇಲ್ಲಿ ದಂಗೆ ಎದ್ದೀತೆಂದು ಇದರಿಂದ ಸಾಮಾನ್ಯ ಜನರು ಹಾಗೂ ಸಣ್ಣ ಮಕ್ಕಳು ಭಯಭೀತರಾದರೆಂದು ತಿಳಿಸಲಾಗಿದೆ. ಜಮಾ ಅದ ಹಣದ ಬಾಪ್ತು ಅಂದಾಜು ಮಾಡಿ ತಿಳಿಸಲಾಗಿದೆ. ಸೈನಿಕರ ಮತ್ತು ಕುದುರೆ ಸವಾರರಿಗೆ ಪ್ರತಿ ತಿಂಗಳು ೩೫ ಸಾವಿರ ರೂಪಾಯಿ ಖರ್ಚಾಗುತ್ತದೆ. ಜನರು ಪ್ರತಿ ತಿಂಗಳ ಆದಾಯದ ಬಗ್ಗೆ ಚಿಂತೆಯಲ್ಲಿದ್ದಾರೆ. ಪೋರ್ಚುಗೀಸರ ಸೈನಿಕರಿಗೆ ಸುಬ್ಬರಾವ್ ಮೋಹಿತೆ ಇವರಿಗೆ ಪ್ರತಿದಿನವೂ ಪಗಾರ ಕೊಡಬೇಕೆಂದು ಹಾಗೂ ಈ ಸ್ಥಳದ ರಕ್ಷಣೆಯಾಗಬೇಕೆಂತಲೂ ತಿಳಿಸಲಾಗಿದೆ. ಇಲ್ಲಿ ದಾಂಧಲೆ ನಿಲ್ಲುವವರೆಗೆ ಎರಡು ತಿಂಗಳಿಗೆ ೨೦ ಸಾವಿರ ರೂಪಾಯಿಯಂತೆ ಪ್ರತಿ ತಿಂಗಳು ಸರ್ಕಾರ ದಿಂದ ಕೊಡಬೇಕೆಂದು ಕೇಳಲಾಗಿದೆ. ಇದು ನಿಮಗೆ ನಂಬಿಕೆ ಇಲ್ಲದಿದ್ದಲ್ಲಿ ಸರ್ಕಾರದ ಕಾರಕೂನರನ್ನು ಮತ್ತು ಇಬ್ಬರು ಸೈನಿಕರನ್ನು ಕಳುಹಿಸಿಕೊಡಬೇಕೆಂದು ಹಾಗೂ ಇದರ ಸತ್ಯಾ ಸತ್ಯತೆಯನ್ನು ತಿಳಿಯ ಬೇಕೆಂದು ಕೋರಲಾಗಿದೆ. ಟಿಪ್ಪುವಿಗೆ ಕೂಡಲೇ ಪತ್ರ ಬರೆದು ಆದಷ್ಟು ಬೇಗನೇ ರಕ್ಷಣೆ ನೀಡಿಸಬೇಕೆಂದು ಕೋರಲಾಗಿದೆ ಎಂದು ಈ ಪತ್ರದ ಮುಖ್ಯವಾದ ಅಂಶವಾಗಿದೆ.[೬]

ಸಾರಾಂಶ

ಇಲ್ಲಿಯ ಸೈನಿಕರಿಗಾಗಿ ಖರ್ಚು ಮಾಡಿದ ಬಾಪ್ತು ಹಾಗೂ ಇಲ್ಲಿಯ ಜನರಿಗೆ ರಕ್ಷಣೆ ಕೊಡಿಸಬೇಕಾಗಿದೆ ಎಂಬುದೇ ಗಮನಿಸಬೇಕಾದ ಅಂಶವಾಗಿದೆ. ಈ ಪತ್ರದಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಕರ್ಯಾತ ನೋಡಿಕೊಳ್ಳಲು ಕಲೆಕ್ಟರ್ ನೇಮಿಸಲಾಗುತ್ತಿತ್ತು. ಈ ಪತ್ರದಿಂದ ತಿಳಿದುಬಂದ ಮಹತ್ವದ ವಿಷಯವಾಗಿದೆ.

ಪತ್ರದ ಸಂಖ್ಯೆ-೦೭

ಪತ್ರ ಸಿಕ್ಕ ಸ್ಥಳ : ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ೫-೭-೧೭೮೭ನೇ ಶತಮಾನ

ಉಲ್ಲೇಖ : ರುಮಾಲ್ ನಂ. ೭೪

ಈ ಪತ್ರವು ಬಾಬುರಾವ್ ಭಾಸ್ಕರ್ ಅವರು ನಾನಾ (ಫಡ್ನೀಸ್?) ರವರಿಗೆ ಬರೆದ ಪತ್ರವಾಗಿದೆ. ಈ ಪತ್ರದಲ್ಲಿ ತಮ್ಮ ಕ್ಷೇಮ ಸಮಾಚಾರವನ್ನು ಕುರಿತು ಆರಂಭದಲ್ಲಿ ತಿಳಿಸುತ್ತ ಜೊತೆಗೆ ಇಲ್ಲಿಂದ ಒಂದು ಕೃಷ್ಣಮೃಗವನ್ನು ಮತ್ತು ಒಂದು ಹೆಣ್ಣು ಕೃಷ್ಣಮೃಗವನ್ನು ಹಾಗೂ ಒಂದು ಜಿಂಕೆಯನ್ನು ಕಳುಹಿಸುತ್ತಿದ್ದ ಬಗ್ಗೆ ದಾಖಲಿಸಿದೆ. ಇದರಲ್ಲಿ ಒಂದು ಕೃಷ್ಣಮೃಗ ಬಹಳ ವೇಗವಾಗಿ ಓಡುತ್ತದೆಂದು ಈ ಪತ್ರದಲ್ಲಿ ದಾಖಲಿಸಿದೆ. ಇನ್ನೊಂದು ಕೃಷ್ಣ ಮೃಗ ಓಟದಲ್ಲಿ ಮಂದಗತಿಯಲ್ಲಿ ಓಡುತ್ತದೆ ಎಂದು ಹೇಳಲಾಗಿದೆ.[೭]

ಸಾರಾಂಶ

ಬಾಬುರಾವ್ ಭಾಸ್ಕರ್ ಅವರು ಕಿತ್ತೂರು ಭಾಗದ ಅಧಿಕಾರಿಯಾಗಿ ತನ್ನ ಹಿರಿಯ ಅಧಿಕಾರಿಯಾದ ನಾನಾ ಫಡ್ನೀಸ್‌ರಿಗೆ ಕೃಷ್ಣ ಮೃಗ ಮತ್ತು ಜಿಂಕೆಯನ್ನು ಕಳುಹಿಸಿ ಗೌರವ ಸೂಚಿಸಿರುವುದು ಈ ಪತ್ರದಿಂದ ತಿಳಿದುಬರುತ್ತದೆ.

ಪತ್ರದ ಸಂಖ್ಯೆ-೦೮

ಪತ್ರ ಸಿಕ್ಕ ಸ್ಥಳ : ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ೧೮ನೇ ಶತಮಾನ

ಉಲ್ಲೇಖ : ರುಮಾಲ್ ನಂ. ೭೪

ಸೇವೆಯಲ್ಲಿ ವಿನಂತಿ ಏನೆಂದರೆ ಮೊದಲ ವಾಕ್ಯ ಉರ್ದು ಭಾಷೆಯಲ್ಲಿ ಉಲ್ಲೇಖಿತ ವಾಗಿದೆ. ಎರಡನೇ ಸಾಲಿನಲ್ಲಿ ರಾಜಶ್ರೀ ಜೀವಾಜಿ ಪಂಥ್ ಇವರು ಸರ್ಕಾರಕ್ಕೆ ಸಾಮಗ್ರಿಗಳನ್ನು ಜಮಾ ಮಾಡಿದ ಕುರಿತು ಪತ್ರವಾಗಿದೆ. ಒಂದು ಸಾಲು ತಮ್ಮೊಂದಿಗೆ ಕರೆದು ಕೊಂಡು ಹೋದವರ ಹೆಸರು-ಅಸ್ಪಷ್ಟ-ಸಾಮಗ್ರಿಗಳನ್ನು ತೆಗೆದುಕೊಂಡು ಬರಬೇಕೆಂದರೆ ಕಿತ್ತೂರ್‌ಕರ್ (ಮಲ್ಲಸರ್ಜನ)ರವರಿಂದ ದಾಂಧಲೆಯಾಯಿತು. ಆದ್ದರಿಂದ ಮಹಲದ ಮೂಲಕ ಅಧಿಕಾರಿಗಳಿಂದ ಸಾಮಗ್ರಿಗಳು ಬರಲಿಲ್ಲ. ಸರ್ಕಾರದ ಸೈನ್ಯ ಪಡೆ ಬಂದು ಕಿತ್ತೂರ್‌ಕರ್‌ನ ಪಾರುಪತ್ಯ ನಿರ್ವಹಿಸಿ ಕಿತ್ತೂರ್ ತಾಲ್ಲೂಕನ್ನು ಮುಕ್ತಗೊಳಿಸಿದ ನಂತರದಲ್ಲಿ ಮಹಲ್‌ದಲ್ಲಿರುವ ಸ್ವಲ್ಪಮಟ್ಟಿನ

ಸಾಮಗ್ರಿ ಗಳನ್ನು ರವಾನಿಸಲಾಯಿತು. ಇನ್ನು ಉಳಿದೆಲ್ಲ ಸಾಮಗ್ರಿಗಳನ್ನು ಜೀವಾಜಿ ಪಂಥ್ ಕರವೀರ್ ಕರ್ ಜೊತೆಗೆ ಯುದ್ಧಕ್ಕೆ ಕಳಿಸಲಾಗಿದೆ. ಇನ್ನುಳಿದ ಸಾಮಗ್ರಿಗಳನ್ನು ಪಡೆಯಬೇಕೆಂದರೆ ಅಷ್ಟರಲ್ಲಿ ಹೈದರ್‌ಖಾನ್‌ನು ದಾಂಧಲೆ ಎಬ್ಬಿಸಿದನು. ಧಾರವಾಡದ ಕೋಟೆಯೊಂದನ್ನು ಬಿಟ್ಟು ಇಡೀ ತಾಲೂಕನ್ನು ವಶಪಡಿಸಿಕೊಂಡಿದ್ದಾನೆ. ಆದ ಕಾರಣ ೧೫-೧೭ ಸಾವಿರ ರೂಪಾಯಿ ಬಾಕಿ ಇರುವುದು ಉಳಿದಿರುತ್ತದೆ. ಇನ್ನುಳಿದವರ ಕಡೆಯಿಂದ ಬರುವ ಬಾಪ್ತು ಅವರಿಗೆ ತಿಳಿಸ ಲಾಗಿದೆ. ಶ್ರೋತಿ ಬಾಬಾ ಇವರ ಎಲ್ಲ ಕಡೆಯಲ್ಲೂ ತಕರಾರು ಮಾಡುತ್ತಾರೆ. ಈ ತಕರಾರಿನ ಪರಿಣಾಮವಾಗಿ ಮತ್ತೊಬ್ಬರ ಕಡೆಯಿಂದ ಬರುವ ಹಣ ಸ್ವಲ್ಪ ಉಳಿದಿದೆ. ಅವರು ವಸೂಲಿ ಮಾಡದೇ ಇರುವುದರಿಂದ ಹಾಗೂ ಆ ಸಮಯ ಬಂದಾಗ ಜೀವಾಜಿ ಪಂಥನು ಅಲ್ಲಿರಲಿಲ್ಲ. ಹೀಗಾಗಿ ಬಹಳಷ್ಟು ಬರಬೇಕಾದ ಹಣ ಬಾಕಿ ಉಳಿದಿದೆ. ಇಲ್ಲಿ ವಸೂಲಿ ಮಾಡಲು ಯಾರೂ ಇಲ್ಲ. ಆದಕಾರಣ ಇಲ್ಲಿಯ ಪರಿಸ್ಥಿತಿಯನ್ನು ಸವಿಸ್ತಾರವಾಗಿ ವಿನಂತಿ ಮಾಡು ನಿವೇದಿಸಿಕೊಂಡಿದ್ದೇನೆ.[೮]

ಸಾರಾಂಶ

ಕಿತ್ತೂರ್‌ಕರ್‌ರವರು ಮಾಡಿದ ದಾಂಧಲೆಯಿಂದ ಅಲ್ಲಿಂದ ತರಬೇಕಾದ ಸಾಮಗ್ರಿಗಳನ್ನು ತರಲಿಕ್ಕಾಗಲಿಲ್ಲ. ಜೊತೆಗೆ ಹೈದರ್‌ಖಾನನು ದಾಂಧಲೆ ಮಾಡಿರುವುದರಿಂದ ಬರಬೇಕಾದ ಹಣವೂ ಬಂದಿರುವುದಿಲ್ಲ. ಅಲ್ಲದೆ ಸಾಕಷ್ಟು ವಸೂಲಿ ಮಾಡಬೇಕಾಗಿದೆ.

ಪತ್ರದ ಸಂಖ್ಯೆ-೦೯

ಪತ್ರ ಸಿಕ್ಕ ಸ್ಥಳ : ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ೧೮ನೇ ಶತಮಾನ

ಉಲ್ಲೇಖ : ರುಮಾಲ್ ನಂ. ೭೪

ರಾಜಶ್ರೀ ಬಾಲಾಜಿ ಪಂಥ್ ಮಾಡುವ ನಾನಾ (ಫಡ್ನೀಸ್) ಸ್ವಾಮಿಗಳ ಸನ್ನಿಧಿಯಲ್ಲಿ ... ಅಸ್ಪಷ್ಟ ಗೋಸಾವಿ ಮಾಡುವ ನಮಸ್ಕಾರಗಳು. ವಿನಂತಿ ತಾವು ಪತ್ರವನ್ನು ಕಳಿಸಿದ್ದೀರಿ. ಆ ಸಮಯಕ್ಕೆ ಟಿಪ್ಪುವಿನ ಕಡೆಯ ಸೈನಿಕರು ಬಂದು ಕಿತ್ತೂರನ್ನು ವಶಕ್ಕೆ ತೆಗೆದುಕೊಂಡಿದ್ದರು. ಅಂತಹ ಪರಿಸ್ಥಿತಿಯಲ್ಲಿ ಕಿತ್ತೂರ್‌ಕರ್ ದೇಸಾಯಿವರನ್ನು (ಮಲ್ಲಸರ್ಜನ) ಬಿಡುಗಡೆ ಮಾಡಿಸಬೇಕಿತ್ತು. ಆದರೆ ಮಾಡಲಿಲ್ಲ. ಅನೇಕ ದಿನಗಳ ವರೆಗೆ ಸರ್ಕಾರದ ವಶದಲ್ಲಿರುವ ಠಾಣೆಗಳು ಟಿಪ್ಪುವಿನ ವಶವಾದವು. ಈ ಎಲ್ಲ ಘಟನೆಗಳು ಅವರಿಂದಾದ ಕರಾರಿಗೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಅವರಿಗೆ ಸಮಜಾಯಿಸಿ ತಿಳಿಸಿ ಹೇಳುವುದಕ್ಕಾಗಿ ಒಬ್ಬ ಕಾರಕೂನನ್ನು ಕಳಿಸಿಕೊಡಿ. ಆಪ್ಪೆಯವರ ಕಡೆಯಿಂದ ಒಬ್ಬ ಕಾರಕೂನ ಅಥವಾ ರಾಸ್ತೆಯವರ ಕಡೆಯಿಂದ ಒಬ್ಬ ಕಾರಕೂನನ್ನು ಕಳಿಸಿಕೊಡುವುದಾಗಬೇಕು ಅಂತ ವಿಚಾರ ಮಾಡಲಾಗಿದೆ. ಅದಕ್ಕೆ ನಿಮ್ಮ ಕಡೆಯಿಂದ

ಒಬ್ಬ ಕಾರಕೂನನ್ನು ಕಳಿಸಿಕೊಡಲು ವಿನಂತಿಸಲಾಗಿದೆ. ಅದಕ್ಕೆ ಉತ್ತರವಾಗಿ ನೀವು ಬರೆದುಕೊಂಡ ಪ್ರಕಾರ ಒಬ್ಬ ಕಾರಕೂನನನ್ನು ಮತ್ತು ಎರಡು ತೋಪುಗಳನ್ನು ತಮಗೆ ನಾವು ರವಾನಿಸುತ್ತಿದ್ದೇವೆ. ಎಂದು ಈ ಪತ್ರದಲ್ಲಿ ಉಲ್ಲೇಖವಿದೆ.[೯]

ಕಿತ್ತೂರನ್ನು ಟಿಪ್ಪುವಿನ ಸೈನಿಕರು ವಶಪಡಿಸಿಕೊಂಡು ಕಿತ್ತೂರು ದೇಸಾಯಿಯವರನ್ನು ಬಂದಿಸಿದ್ದಾರೆ. ಅವರನ್ನು ಬಿಡುಗಡೆ ಮಾಡಬೇಕಿತ್ತು. ಆದರೆ ಬಿಡುಗಡೆ ಮಾಡಿಸಲಿಲ್ಲ ಎಂದಾಗಿದೆ. ಆದರೆ ಕಿತ್ತೂರ್‌ಕರ್ ದೇಸಾಯಿಯವರನ್ನು ಯಾವಾಗ ಟಿಪ್ಪು ಬಂಧಿಸಿದ ಬಗ್ಗೆ ಖಚಿತ ದಿನಾಂಕವನ್ನು ಈ ಪತ್ರದಲ್ಲಿ ಕಂಡುಬರುವುದಿಲ್ಲ. ಈ ಪತ್ರದ ಕೆಳಗೆ ಚಂದ್ರ ೧೫ ಮೊಹರಂ ಎಂದು ಮಾತ್ರ ಉಲ್ಲೇಖವಿದೆ.

ಪತ್ರದ ಸಂಖ್ಯೆ-೧೦

ಪತ್ರ ಸಿಕ್ಕ ಸ್ಥಳ : ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ೧೮ನೇ ಶತಮಾನ

ಶ್ರೀ ಸೇವೆಯಲ್ಲಿ ವಿನಂತಿ ಎಂದು ಪ್ರಾರಂಭವಾಗುವ ವೈಶಾಖ ಶುದ್ಧ ಒಂಬತ್ತು ರವಿವಾರ ರಾಜಶ್ರೀ ತುಕ್ಕೋಜಿ ಹೋಳಕರ್ ಇವರ ಸೈನ್ಯದಿಂದ ಮತ್ತು ರಾಸ್ತೆ ಇವರ ಸೈನ್ಯದಿಂದ ನಾಲ್ಕು ನೂರು ಸೈನಿಕರು ಎರಡು ಡಾಲುಗಳು ಇವತ್ತು ಸಾಯಂಕಾಲದ ವೇಳೆಗೆ ನಮಗೆ ಬಂದು ತಲುಪಿದೆ. ಕೃಷ್ಣಾಜಿ ನಾಯಕ್‌ರವರಿಂದಲೂ ಕೂಡ ಸಾಮಗ್ರಿಗಳು ಬಂದಿರುತ್ತದೆ. ಕುಡುತಿವಾಲ್ ಗಾಂಧಿ ಇವನು ತಮ್ಮ ಪರಿಚಯ ಇರುವುದೆಂದು ಹೇಳಿದನು. ಕಿತ್ತೂರ್ ಸುಭೇದಾರನು ಹಿಂದೆಯೇ ಪಡೆಯಬಹುದಿತ್ತು. ಆದರೆ ತೋಪುಗಳನ್ನು ಸರಿಯಾದ ಜಾಗದಲ್ಲಿ ತಂದು ಹಚ್ಚಲಿಲ್ಲ. ಆದ್ದರಿಂದ ಮುಂದೂಡುತ್ತ ಹೋಯಿತು. ಶ್ರೀಮಂತರು ಸುಭೇದಾರನ ಬಗ್ಗೆ ಯಾವ ಆದೇಶವನ್ನು ಮಾಡುತ್ತಿರೋ ಆ ರೀತಿಯಲ್ಲಿ ವರ್ತಿಸುತ್ತಾರೆ. ಅಧಿಕಾರ ನಡೆಸುವ ಜವಾಬ್ದಾರಿ ಕೊಟ್ಟು ತೋಪುಗಳನ್ನು ಕೊಟ್ಟು ಶ್ರೀಮಂತರು ಪುಣೆಗೆ ಹೋದ ಬಳಿಕ ಕೋಟೆ ಮತ್ತು ಸುತ್ತಮುತ್ತಲ ಪ್ರದೇಶಗಳನ್ನು ವಶಪಡಿಸಿಕೊಳ್ಳಬಹುದು. ನಮಗೆ ಟಿಪ್ಪುಸುಲ್ತಾನನ ಭಯವಿಲ್ಲ ಎಂದು ಹೇಳಿದ್ದನ್ನು ತಮಗೆ ತಿಳಿಸುತ್ತೇನೆ.[೧೦]

ಸಾರಾಂಶ

ಎರಡು ಸೈನ್ಯದ ತುಕಡಿಗಳು ಬಂದು ತಲುಪಿದೆ. ಆದರೆ ತೋಪುಗಳು ಮಾತ್ರ ಸರಿಯಾಗಿ ಬಂದಿರಲಿಲ್ಲ. ಕಿತ್ತೂರ್ ಸುಬೇದಾರ್‌ನಿಗೆ ಮುಟ್ಟಿಸಬೇಕಾಗಿತ್ತು. ಆದರೆ ಸರಿಯಾದ ಸಮಯದಲ್ಲಿ ಮುಟ್ಟಿಸಲಿಲ್ಲವೆಂದು ಈ ಪತ್ರದಿಂದ ಕಂಡುಬರುತ್ತದೆ.

ಪತ್ರದ ಸಂಖ್ಯೆ-೧೧

ಪತ್ರ ಸಿಕ್ಕ ಸ್ಥಳ : ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ೧೮ನೇ ಶತಮಾನ

ಉಲ್ಲೇಖ : ರುಮಾಲ್ ನಂ. ೭೪

ವಿನಂತಿ ಕಿತ್ತೂರಿನ ತಾಲೂಕಿನ ಸುದ್ದಿ ತಮಗೆ ತಲುಪಿದೆ ಚ. ೧೫ ಜಿಲಕಾದ (ಉರ್ದು ಮಾಸ) ದಂದು ರಾಜಶ್ರೀ ಮಹದಜಿ ಪಂಥ್ ಬೆಹೆರೆ ಇವರ ಸೈನ್ಯದ ವಾಸ್ತವ್ಯ ಬೀಡಿ ಯಲ್ಲಿದೆ. ಅಲ್ಲಿಂದ ಎರಡು ಸಾವಿರ ಸೈನಿಕರನ್ನು ತೆಗೆದುಕೊಂಡು ಕ್ರೂರ ಸೈನಿಕರ ಜೊತೆಗೆ ಹಲಸಿಯ ಸಮೀಪವಿರುವ ಹನುಮಂತಗಡದಲ್ಲಿದ್ದಾರೆ. ಹಲಸಿಯ ಮೇಲೆ ದಾಳಿ ಮಾಡಿ ಆ ಪೇಟೆಯನ್ನು ವಶಪಡಿಸಿಕೊಂಡರು. ನಂತರದಲ್ಲಿ ಕೋಟೆಯಲ್ಲಿ ಬಹಳಷ್ಟು ಚಟುವಟಿಕೆಗಳು ನಡೆದವು. ಅ ಸಚಿದರ್ಭದಲ್ಲಿ ಯಾವುದೇ ನಿರ್ಣಯಗಳನ್ನು ಕೈಗೊಳ್ಳಲು ಆಗಲಿಲ್ಲ. ಪೇಟೆಯನ್ನು ಬಿಟ್ಟು ಸೈನ್ಯದ ಪಡೆ ಮತ್ತೆ ಹಿಂತುರಿಗಿ ಬಂದಿತು. ಆಗ ೫೦-೬೦ ಜನ ಸಾವಿಗೆ ಈಡಾದರು. ಸುಮಾರು ೭೫ ಜನರು ಗಾಯಾಳುಗಳಾದರು. ಚ. ೧೬ ರಂದು ರಾಜಶ್ರೀ ಮೋರೋ-ಬಾಪು ಭಡ್ಕೆ ಇವರು ಬೆಹೆರೆಯವರ ಸೈನ್ಯದಲ್ಲಿ ಹಾಜರಾದರು. ನಂತರದಲ್ಲಿ ಹಲಸಿಯ ಸಮೀಪ ದಲ್ಲಿರುವ ಹನುಮಂತಗಡಕ್ಕೆ ಹೋಗಲು ತೀರ್ಮಾನಿಸಿದರು. ಆಗ ಕಿತ್ತೂರ್‌ಕರ್ ದೇಸಾಯಿಯವರು ತಮ್ಮ ಕ್ರೂರ ಸೈನಿಕರೊಂದಿಗೆ ಹಲಸಿಯಿಂದ ಹನುಮಂತಗಡದ ಅಡವಿಯ ಕಡೆಗೆ ಓಡಿ ಹೋದರು. ಮುಷ್ಠಿಯಲ್ಲಿದ್ದ ಕೆಲವು ಸೈನಿಕರನ್ನು ಖಾನಾಪುರದಲ್ಲಿಟ್ಟರು. ಸೈನ್ಯವನ್ನು ತೆಗೆದು ಕೊಂಡು ದೇಸಾಯಿಯವರನ್ನು ಬೆನ್ನತ್ತಿಕೊಂಡು ಹೋಗಲು ನಿರ್ಧರಿಸಲಾಯಿತು. ಆಗ ಪೆದ್ರು ಫಿರಂಗಿ ಶಿವರುದ್ರಪ್ಪ ವಾಣಿ ಇವರು ದೇಸಾಯಿಯವರ ಕಡೆಗೆ ಇದ್ದರು. ಇವರ ಕುಟುಂಬದ ಜನರನ್ನು ಖಾನಾಪುರಲ್ಲಿ ಬಂಧಿಸಿದಾಗ ಇವರು ಅಡವಿಯಿಂದ ಓಡಿಬಂದರು ಎಂಬುದು ಖಚಿತ ಸುದ್ಧಿಯಾಗಿದೆ. ಇದನ್ನು ನಿಮ್ಮ ಮಾಹಿತಿಗೆ ತಿಳಿಸಲಾಗಿದೆ.[೧೧]

ಕಿತ್ತೂರ್‌ಕರ್ ದೇಸಾಯಿಯವರು ಹಲಸಿ ಮತ್ತು ಹನುಮಂತಗಡದಲ್ಲಿದ್ದಾರೆ ಎಂಬುದನ್ನು ತಿಳಿದು ಮಹದಜಿ ಪಂತ್ ಬೆಹರೆಯವರು ಇವರನ್ನು ಬೆನ್ನಟ್ಟಿಕೊಂಡು ಹಲಸಿ ಪೇಟೆಯ ಮೇಲೆ ದಾಳಿ ನಡೆಸಿದರು. ಅಷ್ಟರ ವೇಳೆಗಾಗಲೇ ಕಿತ್ತೂರ್‌ಕರ್ ದೇಸಾಯಿಯ ಸೈನ್ಯವು ಹಲಸಿಯನ್ನು ಬಿಟ್ಟು ಹನುಮಂತಗಡದ ಅಡವಿಯನ್ನು ಸೇರಿದ್ದವು. ಆಗ ಜನರಿಗೂ ಮತ್ತು ಸೈನಿಕರಿಗೂ ಯುದ್ಧ ನಡೆದಾಗ ೫೦-೬೦ ಜನರು ಸಾವನ್ನು ಅನುಭವಿಸಿದರು. ಸುಮಾರು ೭೫ಕ್ಕೂ ಹೆಚ್ಚು ಜನ ಗಾಯಾಳುಗಳಾದರು. ಗುಪ್ತದಳದವರ ಸಹಾಯದಿಂದ ಮಲ್ಲಸಜ್ಜನ ದೇಸಾಯಿಯ ಭಂಟರಾದ ಪೆದ್ರು ಪಿರಂಗಿ ಮತ್ತು ಶಿವರುದ್ರಪ್ಪ ವಾಣಿಯವರ ಕುಟುಂಬದ ಸದಸ್ಯರನ್ನು ಬೆಹರೆಯವರು ಬಂಧಿಸಿ ದಾಗ ಸುದ್ಧಿಯನ್ನು ತಿಳಿದ ಅಡವಿಯಲ್ಲಿದ್ದ ಇವರಿಬ್ಬರೂ ವಾಪಸು ಬಂದರೆಂದು ಈ ಪತ್ರ ದಿಂದ ತಿಳಿದುಬರುತ್ತದೆ.

ಪತ್ರದ ಸಂಖ್ಯೆ-೧೨

ಪತ್ರ ಸಿಕ್ಕ ಸ್ಥಳ : **ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ**

ಭಾಷೆ : **ಮರಾಠಿ ಲಿಪಿ : ಮೋಡಿ ಬರಹ**

ಕಾಲ : **೧೮ನೇ ಶತಮಾನ**

ಈ ಪತ್ರದಲ್ಲಿ ಮಹದಜೀ ಖಂಡೆರಾವ್ ಮಾಡುವ ನಮಸ್ಕಾರಗಳು ವಿನಂತಿ. ಚ. ೨೮ ಸಾಬಾನ (ಉರ್ದು ಮಾಸ) ಇಲ್ಲಿಯವರೆಗೆ ಎಲ್ಲವೂ ಕ್ಷೇಮ. ಕಿತ್ತೂರು ತಾಲೂಕಿನ ಒಕ್ಕುಂದ ಗ್ರಾಮದಲ್ಲಿರುವ ಸೇವಕನಾಗಿರುವ ನಾನು ತಿಳಿಸುವುದೇನೆಂದರೆ ಚ. ೨೫ ರಂದು ರಾಜಶ್ರೀ ಮಹದಜೀ ಪಂಥ್ ಬೆಹೆರೆ ಅವರು ತಮ್ಮ ಸೈನ್ಯವನ್ನು ದೇಗಾವಿಗೆ ತೆಗೆದುಕೊಂಡು ಹೋದರು. ಆಗ ಮಧ್ಯಾಹ್ನವಾಗಿತ್ತು. ಅಲ್ಲಿಂದ ಸುಮಾರು ೫೦ ಜನ ಕುದುರೆ ಸವಾರರು ಸುಮಾರು ೫೦೦ ಜನ ಸೈನಿಕರು ಮುಂದೆ ಹೋಗಿ ದೊಂಡೋಪಂಥ್ ಗೋಖಲೆ ಆನಂದ ಬಾಬರ ಮತ್ತು ಸಕೋಜಿ ಕಾಟೆ ಇವರ ನಾಯಕತ್ವದಲ್ಲಿ ಮೂರು ತಂಡಗಳನ್ನಾಗಿ ವಿಂಗಡಿಸಿ ಮಲ್ಲಸರ್ಜನ ದೇಸಾಯಿಯ ಸೈನ್ಯವನ್ನು ತಡೆ ಹಿಡಿಯಲು ಪ್ರಯತ್ನಮಾಡಿದರು. ಆಗ ಯುದ್ಧ ನಡೆಯಿತು. ಅಲ್ಲಿ ಸ್ಥಿರಿದಂತಹ ಜನರು ಕುದುರೆ ಸವಾರರನ್ನು ಕಂಡು ತಾವೂ ಕುದುರೆಯನ್ನು ಹತ್ತಿ ಯುದ್ಧ ವನ್ನು ಆರಂಭಿಸಿದರು. ಸುಮಾರು ೭೫-೧೦೦ ಜನರನ್ನು ಈ ಯುದ್ಧದಲ್ಲಿ ಕೊಲ್ಲಲಾಯಿತು. ಅನೇಕ ಜನರಿಗೆ ಗಾಯವಾಯಿತು. ನಂತರ ಮೂರೂ ಜನ ಸೈನ್ಯದ ಮುಖ್ಯಸ್ಥರೂ ಒಂದು ಕಡೆ ಸೇರಿದ್ದಾಗ ಅಲ್ಲಿಗೆ ಬೆಹೆರೆಯವರು ಆಗಮಿಸಿದರು. ಆಗ ಸ್ಥಳೀಯ ಜನರು ಪರಾಭವ ಗೊಂಡಿದ್ದರು. ಸಂಜೆಯ ವೇಳೆಗೆ ಸೈನ್ಯವು ಠಾಣೆಗೆ ಬಂದಿತು. ಆಗ ರಾಸ್ತೆಯವರ ಸೈನ್ಯದ ಒಂದು ಕುದುರೆ ಸತ್ತು ಬಾಬರನ ಒಬ್ಬ ಸೈನಿಕ ಸತ್ತಿದ್ದನು. ಐದಾರು ಕುದುರೆಗಳು ಗಾಯ ಗಳಾಗಿದ್ದವು. ಹತ್ತರಿಂದ ೧೨ ಜನರು ಪೆಟ್ಟನ್ನು ತಿಂದಿದ್ದರು. ಮರುದಿವಸ ಅಂದರೆ ಚ. ೨೬ ರಂದು ಸ್ಥಳೀಯ ಜನರು ಹೆದರಿಕೆಯಿಂದ ರಾತ್ರಿ ವೇಳೆಯಲ್ಲಿ ದೇಗಾವಿಯನ್ನು ಬಿಟ್ಟು ಓಡಿಹೋದರು. ಅವರ ಜೊತೆಯಲ್ಲಿ ಸುಮಾರು ೧೫೦೦ ಸೈನಿಕರು ನೂರು ಕುದುರೆ ಸವಾರರು ಇದ್ದರೆಂದು ತಿಳಿದುಬರುತ್ತದೆ. ಅರ್ಧ ದಾರಿಯಲ್ಲಿ ಹೋದಾಗ ಅವರ ಜೊತೆಗಿದ್ದ ಸುಮಾರು ೫೦೦ ಸೈನಿಕರಲ್ಲಿ ಕೆಲವರು ಬಿಟ್ಟು ಓಡಿ ಹೋದರು. ಹನುಮಂತ ಗಡ ಮತ್ತು ಬಿಜಗರಣಿ ಸಮೀಪವಿರುವ ಹಲಸಿಯ ಅಡವಿಯಲ್ಲಿ ಅವರು ತಂಗಿದ್ದರು. ಜೊತೆಗೆ ಸಮೀಪದ ಸಂಗೊಳ್ಳಿ, ಶೀಗಿ ಹಳ್ಳಿ, ದೇಗಾವಿ ಮತ್ತು ಗಂದಿಗವಾಡದಿಂದ ಸುಮಾರು ೨೦೦೦ ಸೈನಿಕರು ಇದ್ದಾರೆ ಒಟ್ಟಿನಲ್ಲಿ ೩-೩.೫ ಸಾವಿರ ಜನ ಕೂಡಿಸಿರಬಹುದೆಂದು ತಿಳಿದುಬರುತ್ತದೆ. ನಮ್ಮಲ್ಲಿ ಕೇವಲ ಎರಡು ಸಾವಿರದ ಐದುನೂರು ಸೈನಿಕರು ಮಾತ್ರವಿದ್ದು ಮೊದಲು ೨ ಠಾಣೆಗಳಿದ್ದವು. ಆವಾಗ ಎಲ್ಲವೂ ಸರಿ ಎನಿಸುತ್ತಿತ್ತು. ಆದರೆ ಈಗ ಕೆಲವು ಠಾಣೆಗಳು ಕಿತ್ತೂರಿನಲ್ಲಿಯೇ ಉಳಿದವು. ಮತ್ತೆ ಕೆಲವು ದೇಸಾಯಿಯವರ ಕಡೆಗೆ ಉಳಿದವು. ಹೀಗಾಗಿ ಒಟ್ಟಿನಲ್ಲಿ ಬಂದೋಬಸ್ತ್ ಆಗುವ ವರೆಗೂ ಮುಖ್ಯಠಾಣೆಯ ಮೇಲೆ ಬಹಳಷ್ಟು ಸೈನಿಕರನ್ನು ನೇಮಿಸಬೇಕಾಗಿದೆ. ಸಣ್ಣ ಪುಟ್ಟ

ಠಾಣೆಗಳನ್ನು ರಕ್ಷಣೆ ಮಾಡಲು ಕೆಲವು ಸೈನಿಕರನ್ನು ಇಡಲಾಗಿದೆ. ಇದನ್ನು ಮಾಡದಿದ್ದರೆ ಬಂದೋವಸ್ತ್ ಆಗುವುದಿಲ್ಲ. ನಮ್ಮ ಸಿಬ್ಬಂದಿಯನ್ನು ಹೆಚ್ಚು ಮಾಡಬೇಕಾಗಿದೆ. ಬೆಹೆರೆಯವರ ಕಡೆಯಿಂದಲೂ ಬಂದೋಬಸ್ತ್ ಆಗಬೇಕಾಗಿದೆ. ಠಾಣೆಗಳಲ್ಲಿ ಸಿಬ್ಬಂಧಿಗಳ ಕಡಿಮೆಯಾಗಿದೆ. ದೇಸಾಯಿ ಯವರು ಅಡವಿಯಲ್ಲಿ ಅಡಗಿಕೊಂಡಿದ್ದರೆ ಸೈನಿಕರಿಲ್ಲದೆ ಅವರನ್ನು ಸೋಲಿಸಲು ಸಾಧ್ಯವಿಲ್ಲ. ಆದ್ದರಿಂದ ಸುಮಾರು ೨ ಸಾವಿರ ಸೈನಿಕರನ್ನು ಕಳಿಸುವ ವ್ಯವಸ್ಥೆ ಮಾಡಬೇಕು. ಇಲ್ಲಿನ ಬಂದೋಬಸ್ತ್ ಬಗ್ಗೆ ಸ್ವಾಮಿಯವರಿಗೆ ಎಲ್ಲವೂ ತಿಳಿದ ವಿಷಯವಾಗಿದೆ. ಮುಂದೆ ಏನು ಆಗುತ್ತದೆ ಎನ್ನುವುದನ್ನು ಬರೆದು ಕಳಿಸುತ್ತೇನೆ. ಇದು ತಮ್ಮ ಮಾಹಿತಿಗಾಗಿ ಇಂತಿ ನಿಮ್ಮ ಸೇವಕ.[೧೨]

ಪತ್ರದ ಸಂಖ್ಯೆ-೧೩

ಪತ್ರ ಸಿಕ್ಕ ಸ್ಥಳ : ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ೧೮ನೇ ಶತಮಾನ

ಸೇವೆಯಲ್ಲಿರುವ ಬಾಪೂಜಿ ನಾರಾಯಣ ಪರಚುರೆ ಮಾಡುವ ಸಾಷ್ಟಾಂಗ ನಮಸ್ಕಾರಗಳು. ತಾರೀಖ್ ಚ. ೨೬ ಸಾಬಾನ ಕಿತ್ತೂರು ತಾಲೂಕಿನ ಒಕ್ಕುಂದ ಗ್ರಾಮದ ಸೇವಕನು ಬರೆಯುವ ವರ್ತಮಾನ ಇಲ್ಲಿ ವಿಶೇಷವೇನೆಂದರೆ ದೇಸಾಯಿಯವರು ದೇಗಾವಿಯಲ್ಲಿದ್ದಾರೆ ಎಂದು ತಿಳಿದು ರಾಜಶ್ರೀ ಮಹದಜೀ ಪಂಥ್ ಬೆಹರೆಯವರು ಸೈನ್ಯದ ಸಮೇತವಾಗಿ ದೇಗಾವಿಗೆ ಸಮೀಪಕ್ಕೆ ಹೋದರು. ಆಗ ಮಧ್ಯಾಹ್ನವಾಗಿತ್ತು. ಮುಂದೆ ಹೋಗಬಾರದೆಂದು ಮಾತುಕತೆ ನಡೆದಿತ್ತು. ಇಷ್ಟರಲ್ಲೇ ಮಲ್ಲಸರ್ಜನ ದೇಸಾಯಿಯವರ ಕಡೆಗಿನ ಮೂರು ಕುದುರೆ ಸವಾರರು ಒಂದು ಸಾವಿರ ಸೈನಿಕರು ಮತ್ತು ಲೂಟಿಕೋರರು ಮುಂದೆ ಹೋಗಿದ್ದಾರೆಂದು ಗೊತ್ತಾದ ಮೇಲೆ ರಾಜಶ್ರೀ ದೊಂಡೋ ಪಂಥ್ ಗೋಖಲೆ ತಮ್ಮ ಶೂರ ಸೈನಿಕರೊಂದಿಗೆ ಬೆನ್ನತ್ತಿದರು. ಅವರು ಮುಂದೆ ಹೋಗಿ ಕುದುರೆಗಳನ್ನು ನಿಲ್ಲಿಸಿದಾಗ ಮಲ್ಲಸರ್ಜನ ದೇಸಾಸಿಯವರ ಕುದುರೆ ಸವಾರರು ಓಡಿ ಹೋದರು. ನಂತರ ಸುಮಾರು ನೂರು ಸೈನಿಕರ ಸಾವನ್ನು ಅನುಭವಿಸಿದರು. ಅನೇಕರು ಗಾಯಾಳುಗಳಾದರು. ಇದೇ ಸಂಸರ್ಭದಲ್ಲಿ ರಾಸ್ತೆಯವರ ಕ್ಪಡೆಯ ಸೈನಿಕರು ನೂರೈವತ್ತೂ ಹೆಚ್ಚು ಜನ ಬೇರೆ ಕಡೆಯಿಂದ ಬಂದರು. ಅವರು ೧೦-೧೫ ಜನರನ್ನು ಕೊಂದು ಹಾಕಿದರು. ಈ ಘಟನೆಯು ದೇಗಾವಿಯ ಸಮೀಪ ನಡೆಯಿತು. ಸಂಕೋಜಿ ಕಾಟೆ ಇವರ ಸೈನ್ಯವು ಇಲ್ಲಿಗೆ ಬಂದಾಗ ಯುದ್ಧ ಮಾಡುವ ಸಂದರ್ಭದಲ್ಲಿ ಇವರ ಎದೆಗೆ ಕಲ್ಲು ಬಡಿದು ಮೂತ್ರ ಬಂದಾಗಿತ್ತು. ಆಗ ನಾಲ್ಕೈದು ತಾಸುಗಳ ಕಾಲ ವಿಶ್ರಾಂತಿ ಪಡೆದು ಚೇತರಿಸಿಕೊಂಡರು. ಗೋಖಲೆ ಯವರ ಕಡೆಗಿನ ಎಂಟು ಕುದುರೆಗಳು ಬೆಹರೆಯವರ ನಾಲ್ಕೈದು ಕುದುರೆಗಳು ಕ್ಷಟೆಯವರ ಒಂದೆರಡು ಕುದುರೆಗಳು ಗಾಯಾಳುಗಳಾಗಿದ್ದವು. ರಾಸ್ತೆಯವರ ಒಂದು ಕುದುರೆ ಸತ್ತು ಹೋಗಿದೆ ಎಂದು ವರ್ತಮಾನ ಬಂದಿದೆ. ಇದು ನಿಮ್ಮ ಮಾಹಿತಿಗಾಗಿ ಎಂದು ಉಲ್ಲೇಖವಿದೆ.[೧೩]

ಸಾರಾಂಶ

ಈ ಮೇಲಿನ ಎರಡು ಪತ್ರಗಳು ಮಲ್ಲಸರ್ಜನ ಮತ್ತು ಪೇಶ್ವೆ ಸೈನ್ಯದ ನಡುವೆ ನಡೆದ ಯುದ್ಧವನ್ನು ಸ್ವಲ್ಪ ಭಿನ್ನವಾಗಿ ತಿಳಿಸುತ್ತವೆ. ಒಂದು ಪತ್ರವನ್ನು ಮಹದಜೀ ಖಂಡೇರಾವ್ ತನ್ನ ಸ್ವಾಮಿಗೆ ಬರೆದರೆ ಮತ್ತೊಂದು ಪತ್ರವನ್ನು ಬಾಪೂಜಿ ನಾರಾಯಣ ಪರಚುರೆ ಬರೆದ ಪತ್ರ ವಾಗಿದೆ. ಇದರಲ್ಲಿ ವಿಶೇಷವೇನೆಂದರೆ ಸಂಕೋಜಿ ಕಾಟೆ ಇವರಿಗೆ ವೈರಿಗಳು ಎಸೆದಿರುವ ಕಲ್ಲು ಎದೆಗೆ ತಾಗಿ ಸ್ವಲ್ಪ ಪೆಟ್ಟಾಯಿತೆಂದು ಕೆಲವು ಕಾಲ ವಿಶ್ರಾಂತಿ ಪಡೆದ ಮೇಲೆ ಚೇತರಿಸಿ ಕೊಂಡರೆಂದು ತಿಳಿದುಬರುತ್ತದೆ. ಅಲ್ಲದೇ ದೊಂಡೋಪಂಥ್ ಗೋಕುಲೆಯವರ ೮ ಕುದುರೆಗಳು ರಾಜಶ್ರೀ ಮಹದಜೀ ಪಂಥ್ ಬೆಹರೆಯವರ ೪-೫ ಕುದುರೆಗಳು ಸಂಕೋಜಿ ಕೋಟೆಯವರ ಒಂದೆರಡು ಕುದುರೆಗಳು ಗಾಯಾಳುಗಳಾಗಿವೆ. ಮತ್ತು ರಾಸ್ತೆಯವರ ಒಂದು ಕುದುರೆ ಸತ್ತಿದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಪತ್ರದ ಸಂಖ್ಯೆ-೧೪

ಪತ್ರ ಸಿಕ್ಕ ಸ್ಥಳ : ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ೧೮ನೇ ಶತಮಾನ

ಈ ಪತ್ರದ ಮೊದಲ ಸಾಲಿನಲ್ಲಿ ಬಾಬುರಾವ್ ಭಾಸ್ಕರ್ ಶ್ರೀಮಂತ ರಾಜಶ್ರೀ ನಾನಾ (ಫಡ್ನೀಸ್) ಸ್ವಾಮಿಗಳ ಸೇವೆಯಲ್ಲಿ ವಿನಂತಿ ಪತ್ರವಾಗಿದೆ. ಚ. ೯ ರಂಜಾನ್ ತಿಂಗಳ ವರೆಗೆ ಕಿತ್ತೂರು ತಾಲೂಕಿನಲ್ಲಿ ಎಲ್ಲವೂ ಕ್ಷೇಮವಾಗಿದೆ. ಜೊತೆಗೆ ಅವನ ಕಾರಭಾರಿಗಳು ಬಿಡುಗಡೆ ಯಾಗಿದ್ದು ಧಾರವಾಡಕ್ಕೆ ಬಂದು ಕಿತ್ತೂರ್ ತಾಲೂಕಿನಲ್ಲಿ ದಾಂಧಲೆ ಮಾಡುವ ವಿಚಾರವಿದೆ ಈ ವಿಷಯದ ಬಗ್ಗೆ ತಮಗೆ ಸವಿಸ್ತಾರವಾದ ಮಾಹಿತಿಯನ್ನು ರಾಜಶ್ರೀ ತಾತ್ಯಾ ಅವರು ಪತ್ರದಲ್ಲಿ ಬರೆದಿದ್ದಾರೆ. ಅವರು ನಿಮಗೆ ತಿಳಿಸಿದಾಗ ಇದಕ್ಕೆ ಸಂಬಂಧಿಸಿದ ವಿಷಯ ತಿಳಿಯ ಬಹುದು. ಮುಂದೆ ನೀವು ಏನನ್ನು ಆದೇಶಿಸುತ್ತೀರೋ ನಾವು ಅದನ್ನು ಪಾಲಿಸಲು ಸಿದ್ಧರಿದ್ದೇವೆ ಎಂದು ಬಾಬುರಾವ್ ಭಾಸ್ಕರ್ ವಿನಂತಿಸಿಕೊಂಡಿದ್ದಾರೆ.[೧೪]

ಪತ್ರದ ಸಂಖ್ಯೆ-೧೫

ಪತ್ರ ಸಿಕ್ಕ ಸ್ಥಳ : ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ೧೬-೮-೧೭೮೭

ಶ್ರೀಮಂತ ರಾಜಶ್ರೀ ನಾನಾ (ಫಡ್ನೀಸ್) ಇವರ ಸನ್ನಿಧಿಗೆ ವಿನಂತಿ ಪೂರ್ವಕವಾಗಿ ಬಾಬುರಾವ್ ಭಾಸ್ಕರ್ ಮಾಡುವ ನಮಸ್ಕಾರಗಳು. ವಿಶೇಷವೇನೆಂದರೆ ೧೬-೮-೧೭೮೭ ರ

ವರೆಗೆ ಈ ತಾಲೂಕಿನ ವರ್ತಮಾನವು ಹೀಗಿದೆ. ವಿಶೇಷವೆಂದರೆ ಟಿಪ್ಪು ಸುಲ್ತಾನನ ಸೈನಿಕರು ಧಾರವಾಡದಿಂದ ಈ ಕಡೆಗೆ ಸ್ವಲ್ಪ ಅಂತರದಲ್ಲಿ ಬಂದು ವಾಸ್ತವ್ಯ ಹೂಡಿರುತ್ತಾರೆ. ಸರದಾರ್ ಲಾಲಿ ಸಯ್ಯದ್ ಹಮೀದ್ ಬುದ್ದರಾಜ್ ಜಮಾಲ್‌ಖಾಲ್ ಸಯ್ಯದ್ ಗಫಾರ್ ಇವರು ನಾಲ್ಕು ಸರದಾರರು ಕೂಡಿ ಸುಮಾರು ೧೦ ಸಾವಿರ ಸೈನಿಕರು ೨ ಸಾವಿರ ಕುದುರೆ ಸವಾರಿ ೮ ಜಿಲೇಬಿಗಳು ೧೨ ಸೇರು ತೂಕದ ೧೪ ಫಿರಂಗಿಗಳು, ೧೦೦ ಒಂಟೆಗಳು ಕೂಡಿದ ಸೈನ್ಯವು ಜಮಾ ಆಗಿರುತ್ತದೆ. ಇವತ್ತು ಅವರು ತೇಗೂರಿಗೆ ದಾಳಿ ಮಾಡಿ ನಾಳೆ ಕಿತ್ತೂರಿನ ಕಡೆಗೆ ಬರುವುದಾಗಿ ನಿಶ್ಚಯಿಸಿದ್ದಾರೆ. ಅವರ ಸೈನಿಕರು ಹುಬ್ಬಳ್ಳಿಗೆ ಬಂದ ತಕ್ಷಣ ೨೦ ಜನ ಗುಪ್ತ ದಳದವರನ್ನು ೨೦ ತರಹದ ವೇಶವನ್ನು ಹಾಕಿಸಿ ಕಳಿಸಿದ್ದೆವು. ಅವರೆಲ್ಲ ನಿನ್ನೆ ರಾತ್ರಿ ಬಂದು ತಲುಪಿದರು. ನಾವು ಮತ್ತು ನಮ್ಮ ದುಷ್ಟ ಸೈನಿಕರು ಜೊತೆಗೆ ರಾಮಪ್ಪನ ಸೈನಿಕರು ಎಲ್ಲರೂ ಕೂಡಿದರೆ ಸುಮಾರು ೬ ಸಾವಿರ ಸೈನಿಕರಾಗುತ್ತೇವೆ. ಪುರಂದರೆ ಮತ್ತು ಬಲವಚಿತ್‌ರಾವ್ ಹಾಗೂ ರಾಮಪ್ಪನ ಆಸ್ತಾನದ ಜನರು ಇವೆಲ್ಲ ಕೂಡಿದರೆ ೭-೮೦೦ ಜನ ಸೈನಿಕರಾಗುತ್ತಾರೆ. ಆದರೆ ಇವರಲ್ಲಿ ತೋಪುಗಳಿಲ್ಲ. ಈ ಪರಿಸ್ಥಿತಿ ನಿಮಗೆ ಗೊತ್ತಾಗಿದೆ. ಶ್ರೀ ಗಜಾನನ ಯಾವ ರೀತಿ ಪ್ರೇರಣೆ ನೀಡುತ್ತಾನೆಯೋ ಅದರಂತೆ ಮಾಡುತ್ತೇವೆ. ಪತ್ರ ಮುಟ್ಟಿದ ಕೂಡಲೇ ಸೈನಿಕರನ್ನು ಕಳುಹಿಸಕೊಡಬೇಕು. ತಾವು ಟಿಪ್ಪುವಿಗೂ ಕೂಡ ಆದಷ್ಟು ಬೇಗ ಪತ್ರ ಬರೆಯಬೇಕು. ನಾವು ಹೇಳುವುದು ಸುಳ್ಳಲ್ಲ. ವರ್ತಮಾನ ಸತ್ಯವಾಗಿದೆ. ಪಟುವರ್ಧನ್ ಮುಂತಾದವರು ಸೈನ್ಯ ಕಳುಹಿಸಿಕೊಡುವವರಿದ್ದಾರೆ. ಅವರ ಸಾಮಗ್ರಿಗಳು ಬಂದರೆ ನಮಗೆ ಉಪಯೋಗವಾಗಬಹುದು. ಹೆಚ್ಚೇನೂ ವಿಷಯವಿಲ್ಲ. ನಿಮ್ಮ ಸೇವೆಯಲ್ಲಿರುವ ಸೇವಕ ಬಾಬುರಾವ್ ಭಾಸ್ಕರ್.[೧೫]

ಸಾರಾಂಶ

ಟಿಪ್ಪುವಿನ ಸೈನಿಕರು ಹುಬ್ಬಳ್ಳಿಯಿಂದ ಧಾರವಾಡವನ್ನು ದಾಟಿ ಬರುತಿದ್ದಾರೆ. ಸುಸಜ್ಜಿತ ಸೈನ್ಯದೊಂದಿಗೆ ಕಿತ್ತೂರ್ ಮತ್ತು ತೇಗೂರ್‌ನ್ನು ದಾಳಿ ಮಾಡುವ ಉದ್ದೇಶವಿದೆ. ಇದನ್ನು ತಿಳಿಯಲು ನಮ್ಮ ಗುಪ್ತ ದಳದವರು ೨೦ ತರಹದ ವೇಷವನ್ನು ಹಾಕಿಕೊಂಡು ಮಾಹಿತಿ ಯನ್ನು ಸಂಗ್ರಹಿಸಿದ್ದಾರೆ. ನಮ್ಮ ಸೈನಿಕರಲ್ಲಿ ಸಾಕಾಗುವಷ್ಟು ತೋಪುಗಳಿಲ್ಲ. ಆದ್ದರಿಂದ ದೇವರು ಯಾವ ರೀತಿ ಪ್ರೇರಣೆ ಕೊಡುತ್ತಾನೋ ಆ ರೀತಿ ಪ್ರಯತ್ನಿಸುತ್ತೇವೆ ಎಂದು ಬಾಬುರಾವ್ ಭಾಸ್ಕರ್ ತನ್ನ ಸ್ವಾಮಿಯಾದ ನಾನಾ ಫಡ್ನೀಸ್‌ರಿಗೆ ಬರೆದ ಪತ್ರವಾಗಿದೆ.

ಪತ್ರದ ಸಂಖ್ಯೆ-೧೬

ಪತ್ರ ಸಿಕ್ಕ ಸ್ಥಳ	: ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ
ಭಾಷೆ	: ಮರಾಠಿ ಲಿಪಿ : ಮೋಡಿ ಬರಹ
ಕಾಲ	: ೧೧-೮-೧೭೮೭
ಉಲ್ಲೇಖ	: ರುಮಾಲ್ ನಂ ೭೪

ಶ್ರೀಮಂತ ರಾಜಶ್ರೀ (ನಾನಾ ಫಡ್ನೀಸ್) ಸ್ವಾಮಿ ಇವರ ಸನ್ನಿಧಿಗೆ ಬಾಬುರಾವ್ ಭಾಸ್ಕರ್ ಮಾಡುವ ನಮಸ್ಕಾರಗಳು. ಇಂದಿನ ವರೆಗೆ ಕಿತ್ತೂರು ತಾಲೂಕಿನ ವರ್ತಮಾನವು ಈ ಕೆಳಗಿನಂತಿದೆ. ದಯಮಾಡಿ ನೀವು ಕಳುಹಿಸಿದಂತಹ ರೂಪಾಯಿ ೨೫ ಸಾವಿರ ಬಂದು ತಲುಪಿರುತ್ತದೆ. ಅದನ್ನು ನಾವು ಸರಿಯಾದ ಕೆಲಸಕ್ಕೆ ವಿನಿಯೋಗಿಸುತ್ತೇವೆ. ಸರ್ಕಾರಕ್ಕೆ ಕಿತ್ತೂರು ತಾಲೂಕಿನಿಂದಲೇ ಹಣವನ್ನು ಜಮಾ ಮಾಡಬೇಕು ಆದರೆ ನಾಳೆ ಇಲ್ಲಿಯ ಖರ್ಚಿಗಾಗಿ ಹಣವನ್ನು ಸ್ವಾಮಿಯವರಿಂದ ತರಿಸಿಕೊಳ್ಳುವ ಪರಿಸ್ಥಿತಿ ಒದಗಿ ಬಂದಿದೆ. ಇಲ್ಲಿಯ ಜಮಾ ಖರ್ಚುಗಳ ಬಗ್ಗೆ ತಮ್ಮ ಜಮಾ ಖರ್ಚುಗಳನ್ನು ಮಾಹಿತಿಯನ್ನು ಕಳುಹಿಸಲಾಗಿದೆ. ಇದನ್ನು ತಾವು ಗಮನಿಸಿರಬಹುದು. ನಾನು ಇಲ್ಲಿಗೆ ಬಂದು ಹಾಜರಾದ ಅಂದಿನಿಂದ ಸುಗ್ಗಿಯವರೆಗೆ, ಆದರೆ ನಿರಂತರ ಲೂಟಿ ದಾಂಧಲೆಗಳು ಸುಮಾರು ಎರಡು ವರ್ಷಗಳಿಂದ ನಡೆದುಬಂದಿದೆ. ಈ ಪ್ರದೇಶವು ತೊಂದರೆಯನ್ನು ಅನುಭವಿಸುತ್ತಿದೆ. ದುಷ್ಟ ಸೈನಿಕರುಗಳಿಗೆ ತಾವು ಯಾವ ರೀತಿ ವರ್ತಿಸಬೇಕೆಂಬುದು ಗೊತ್ತೆ ಇಲ್ಲ. ದೇಸಾಯಿಯವರ ಕಾರಬಾಗಿಗಳು ಮೋಸ ಮಾಡಿದ್ದಾರೆ. ಜೊತೆಗೆ ಅನಾವೃಷ್ಟಿಯಿಂದ ಮಳೆಯೂ ಬಂದಿಲ್ಲ. ಎಲ್ಲ ದವಸ ಧಾನ್ಯಗಳೂ ತುಟ್ಟಿಯಾಗಿವೆ. ಇಂತಹ ಸಂದರ್ಭದಲ್ಲಿ ಬಡವರು ಬದುಕುವುದು ಕಷ್ಟವಾಗಿದೆ. ಇಂತಹ ಪರಿಸ್ಥಿತಿಯನ್ನು ಹೊಂದಾಣಿಕೆ ಮಾಡಿಕೊಂಡು ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಒತ್ತಡ ತಂದು ಜನರಿಗೆ ಪ್ರೀತಿ ತೋರಿಸಿ ಅಲ್ಪಸ್ವಲ್ಪ ಹಣ ವಸೂಲಿ ಮಾಡಲಾಗಿದೆ. ಆದರೆ ಸುಬ್ಬರಾವ್ ಮೋಹಿತೆ ಇವನ ಭೀತಿ ಜನರ ಮನಸ್ಸಿನಲ್ಲಿ ತುಂಬಿಕೊಂಡಿದೆ. ಈತ ಕುಸುಗಲ್ ಮತ್ತು ಸವದತ್ತಿಯನ್ನು ವಶಪಡಿಸಿ ಕೊಂಡಿದ್ದಾನೆ. ನಮ್ಮ ಗಡಿ ಪ್ರದೇಶದಕಲ್ಲಿ ಅವನ ಸೈನಿಕರು ಬಂದಿದ್ದರು. ನಮ್ಮ ತಾಲೂಕಿನ ಗಡಿಭಾಗವಾದ ದೊಡ್ಡವಾಡವನ್ನೂ ಕೂಡ ವಶಪಡಿಸಿಕೊಂಡಿದ್ದಾರೆ. ಕಾರಣ ಸೈನಿಕರು ಹಗಲು ರಾತ್ರಿ ಪ್ರಯತ್ನ ಮಾಡಿ ರಕ್ಷಣೆ ಮಾಡಬೇಕಾಯಿತು. ಈ ಎಲ್ಲ ಪರಾಕ್ರಮ ಮತ್ತು ಯಶಸ್ಸು ಸ್ವಾಮಿಗಳ ಕೃಪೆಯಿಂದ ಆಗಿದೆ. ತಾವು ಟಿಪ್ಪುವಿನ ಕಡೆಗೆ ಪತ್ರವನ್ನು ಬರೆದರೆ ಮೋಹಿತೆ ಮುಂತಾದವರ ಮೇಲೆ ಕ್ರಮ ತೆಗೆದುಕೊಳ್ಳಬಹುದು. ಅವರ ಸೈನಿಕರನ್ನು ಹಿಂದೆ ಪಡೆದುಕೊಳ್ಳಬಹುದು. ಅಲ್ಲಿ ನೇಮಿಸಿದ ನಮ್ಮ ಸೈನಿಕರನ್ನು ಹಿಂದೆ ಪಡೆದು ಕೆಲ ಜನರನ್ನು ಇಟ್ಟುಕೊಂಡು ಉಳಿದ ವರನ್ನು ವಾಪಸು ಕಳಿಸುತ್ತೇವೆ. ಅಂದಾಗ ಮಾತ್ರ ಸ್ವಾಮಿಯವರು ಕಳಿಸಿದ ಹಣ ಸರಿಯಾಗಿ ವ್ಯವಸ್ಥೆ ಮಾಡಬಹುದು ತಾವು ನಮ್ಮ ಮೇಲೆ ಕೃಪೆ ಮಾಡಿ ನಮ್ಮ ಪ್ರಾಮಾಣಿಕತನ ಹಾಗೂ ನಿಮ್ಮ ಕೃಪೆಯಿಂದ ನಮಗೆ ಧೈರ್ಯ ಬಂದಿದೆ. ಶ್ರೀ ಗಜಾನನು ಎಲ್ಲವನ್ನೂ ಸರಿಪಡಿಸಬಹುದು. ಸಿಡಿಮದ್ದು ಪುಡಿಯನ್ನು ಮೀಜರ್‌ನಿಂದ ತರುವುದಾಗಿ ನಿರ್ಧರಿಸಿದ್ದು ಮಳೆ ಕಡಿಮೆಯಾದ ನಂತರ ಅದನ್ನು ನಾವು ತೆಗೆದು ಕೊಂಡು ಬರುತ್ತೇವೆ. ತೇಗೂರು ವಶಪಡಿಸಿಕೊಳ್ಳುವ ಬಗ್ಗೆ ಬರೆಯಲಾಗಿದೆ. ನಿಮ್ಮಿಂದ ಯಾವ ರೀತಿ ಆಜ್ಞೆ ಬರುತ್ತದೆಯೋ ಆ ರೀತಿ ನಡೆದುಕೊಳ್ಳುತ್ತೇನೆ ಎಂದು ಬಾಬುರಾವ್ ಭಾಸ್ಕರ್ ಬರೆದ ಪತ್ರವಾಗಿದೆ.[೧೬]

ಸಾರಾಂಶ

ಕಿತ್ತೂರು ಭಾಗದಲ್ಲಿ ಮಳೆ-ಬೆಳೆಗಳ ಕಡಿಮೆಯಿಂದ ಸರ್ಕಾರ ಆದಾಯ ಕಡಿಮೆಯಾಗಿ ನಾನಾ ಫಡ್ನೀಸ್‌ರಿಂದ ೨೫ ಸಾವಿರ ರೂಪಾಯಿ ಹಣವನ್ನು ಬಾಬುರಾವ್ ಭಾಸ್ಕರ್ ಅವರು ಪಡೆದುಕೊಂಡರು. ಇದು ಇಲ್ಲಿಯ ನಿತ್ಯ ಖರ್ಚಿಗಾಗಿ ಹಣದ ಅವಶ್ಯಕತೆ ಇದ್ದಿತೆಂದು ತಿಳಿಸಲಾಗಿದೆ. ಬಾಬುರಾವ್ ಭಾಸ್ಕರ್ ಬಂದಂದಿನಿಂದ ಲೂಟಿ ದಾಂಧಲೆಗಳು ನಡೆದಿದ್ದರಿಂದ ಸರಿಯಾದ ವಸೂಲಿಯಾಗಲಿಲ್ಲ ಹಾಗೂ ಸುಬ್ಬರಾವ್ ಮೋಹಿತೆ ಟಿಪ್ಪುವಿನ ಅಧಿಕಾರಿಯಾಗಿ ಈ ಭಾಗದಲ್ಲಿ ಭಯವನ್ನು ಹುಟ್ಟಿಸಿದ್ದನು. ಆದ್ದರಿಂದ ಟಿಪ್ಪುವಿಗೆ ಪತ್ರ ಬರೆದರೆ ಮಾತ್ರ ಆತ ದಾಳಿ ಮಾಡುವುದನ್ನು ನಿಲ್ಲಿಸಬಹುದೆಂದು ಉಲ್ಲೇಖಿಸಲಾಗಿದೆ.

ಪತ್ರದ ಸಂಖ್ಯೆ-೧೭

ಪತ್ರ ಸಿಕ್ಕ ಸ್ಥಳ	**: ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ**
ಭಾಷೆ	**: ಮರಾಠಿ ಲಿಪಿ : ಮೋಡಿ ಬರಹ**
ಕಾಲ	**: ದಿನಾಂಕ - ೨೫/೬/೧೭೮೭**
ಉಲ್ಲೇಖ	**: ರುಮಾಲ್ ನಂ ೭೪**

ಮೊದಲ ಸಾಲಿನಲ್ಲಿ ರಾಜಶ್ರೀ ನಾನಾ ಫಡ್ನೀಸ್ ಸ್ವಾಮಿಗಳ ಸೇವೆಯಲ್ಲಿ ಸೇವಕನಾದ ಬಾಬುರಾವ್ ಭಾಸ್ಕರ್ ಮಾಡುವ ನಮಸ್ಕಾರಗಳು. ಈ ಪತ್ರದ ವಿಶೇಷವೆಂದರೆ, ಕಿತ್ತೂರು ಪ್ರಾಂತದ ಅಧಿಕಾರಿಯಾಗಿ ಕಿತ್ತೂರಿನ ವಿಷಯವನ್ನು ಪುಣೆಯ ಅಧಿಕಾರಿಯಾದ ನಾನಾ ಫಡ್ನೀಸ್‌ರಿಗೆ ಸಲ್ಲಿಸಿರುತ್ತಿರುವ ಪತ್ರವಾಗಿದೆ. ದಿನಾಂಕ ೨೫/೬/೧೭೮೭ ರವರೆಗೆ ಕಿತ್ತೂರಿನ ಸುದ್ದಿಯನ್ನು ಕಳಿಸಿದ್ದೇನೆ

ಸಾರಾಂಶ

ಕಿತ್ತೂರಕರ್ ದೇಸಾಯಿಯವರನ್ನು ಟಿಪ್ಪು ಸುಲ್ತಾನನು ಬಂಧಿಸಿದ್ದಾನೆ. ಅವನ ಆಸ್ಥಾನಿಕರುಗಳು ಆತನನ್ನು ಬಿಡುಗಡೆ ಮಾಡಿಸಲು ಪ್ರಯತ್ನಿಸಿದ್ದಾರೆ. ಸಾಧ್ಯವಾಗದೇ ಇದ್ದಾಗ ಕಿತ್ತೂರಿನಲ್ಲಿ ಗಲಾಟೆ ಮಾಡಿ ದೊಂಬಿಯೆಬ್ಬಿಸುವ ಸಾಧ್ಯತೆ ಇದೆ. ಈ ಸಂಬಂಧವಾಗಿ ತಮಗೆ ಸವಿಸ್ತಾರವಾದ ಮಾಹಿತಿಯನ್ನು ಈಗಾಗಲೇ ತಿಳಿಸಲಾಗಿದೆ ಎಂದು ನಿವೇದಿಸಿದ ಪತ್ರವಾಗಿದೆ. ಇದರ ಮೂಲಕ ತಾವು ಯಾವ ರೀತಿ ಆದೇಶಿಸುತ್ತಿರೋ ಆ ರೀತಿಯಲ್ಲಿ ನಾವು ಕಿತ್ತೂರಿನಲ್ಲಿ ನಡೆದುಕೊಳ್ಳುತ್ತೇವೆ ಎಂಬುದು ಈ ಪತ್ರದ ಸಾರಾಂಶವಾಗಿದೆ.[೧೭]

ಪತ್ರದ ಸಂಖ್ಯೆ-೧೮

ಪತ್ರ ಸಿಕ್ಕ ಸ್ಥಳ	**: ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ**
ಭಾಷೆ	**: ಮರಾಠಿ ಲಿಪಿ : ಮೋಡಿ ಬರಹ**

ಕಾಲ : ದಿನಾಂಕ - ೮/೭/೧೭೮೭

ಉಲ್ಲೇಖ : ರುಮಾಲ್ ನಂ ೭೪

ಈ ಪತ್ರವನ್ನು ಕಿತ್ತೂರಿನ ಪ್ರಾಂತ್ಯಾಧಿಕಾರಿಯಾದ ಬಾಬುರಾವ್ ಭಾಸ್ಕರ್ ತನ್ನ ಮೇಲಾಧಿಕಾರಿಯಾದ ನಾನಾ ಫಡ್ನೀಸ್‌ರಿಗೆ ಬರೆದ ಪತ್ರವಾಗಿದೆ. ಈ ಪತ್ರದಲ್ಲಿ ವಿಶೇಷವೆನೆಂದರೆ, ದಿನಾಂಕ ೮/೭/೧೭೮೭ರವರೆಗೆ ನಡೆದ ಕಿತ್ತೂರಿನ ವರ್ತಮಾನವನ್ನ ತಿಳಿಯಪಡಿಸುತ್ತದೆ. ವಿಶೇಷವೆನೆಂದರೆ ಕಿತ್ತೂರಕರ್ ದೇಸಾಯಿಯವರ ಅಧಿಕಾರಿಗಳನ್ನ ಟಿಪ್ಪುವಿನ ಕಡೆಯಿಂದ ಬಿಡುಗಡೆ ಮಾಡಿದ್ದಾರೆ. ಇವರು ಧಾರವಾಡಕ್ಕೆ ಬಂದು ಆಶ್ರಯ ಪಡೆದುಕೊಂಡಿದ್ದಾರೆ. ಟಿಪ್ಪುವಿನ ಅಧಿಕಾರಿ ಸುಬ್ಬರಾವ್ ಮೊಹಿತೆ, ಮಲ್ಲಸರ್ಜನನನ್ನು ಹೊರತುಪಡಿಸಿ ಉಳಿದ ಅಧಿಕಾರಿಗಳನ್ನು ಬಿಡುಗಡೆ ಮಾಡಿಸಿದ್ದಾನೆ. ಅಲ್ಲದೇ ದೊಡ್ಡವಾಡ ಮತ್ತು ತೇಗೂರು ಪ್ರದೇಶವನ್ನು ವಶಪಡಿಸಿಕೊಂಡಿದ್ದಾನೆ. ನಮ್ಮ ಕಡೆಯ ಅನೇಕ ಊರುಗಳನ್ನು ವಶಪಡಿಸಿಕೊಂಡು ತೊಂದರೆ ನೀಡುತ್ತಿದ್ದಾನೆ. ಅಲ್ಲದೇ ನಾಲ್ಕು ಗ್ರಾಮದ ಜನರಿಗೆ ಪಿತೂರಿ ಮಾಡಲು ಪ್ರಚೋದನೆ ನೀಡಿದ್ದಾನೆ. ಅಲ್ಲದೇ ಇಲ್ಲಿ ದಾಂಧಲೆಯಾದ ನಂತರ ದಿನಾಂಕ ೬/೭/೧೭೮೭ರಂದು ಗ್ರಾಮಗಳನ್ನು ವಶಪಡಿಸಿಕೊಂಡು ಕಿರುಕುಳ ನೀಡಿದ್ದಾನೆ. ಆಗ ಸುಮಾರು ೨೦ ಜನರು ಸಾವನ್ನು ನೀಗಿದರು. ಸುಮಾರು ೫೦ ಜನರು ಗಾಯಾಳುಗಳಾದರು. ಬಹುಶಃ ಮುಂದೆ ಪ್ರತಿದಿನವೂ ಯುದ್ಧ ಆಗಬಹುದೆಂಬ ಭಯವಿದೆ. ಈ ವರ್ತಮಾನವನ್ನ ಅಧಿಕಾರಿಯಾದ ತಾತ್ಯ ಅವರಿಗೂ ಬರೆದು ತಿಳಿಸಲಾಗಿದೆ. ಇಂತಹ ಸಂದರ್ಭದಲ್ಲಿ ತಾವು ಹಣ ಮತ್ತು ಸೈನಿಕರನ್ನು ನೀಡಿದರೆ ಮಾತ್ರ ಸಂಸ್ಥಾನವನ್ನು ರಕ್ಷಿಸಿಕೊಂಡು ಶತ್ರುವನ್ನು ಸೋಲಿಸಬಹುದು. ಕಳೆದ ಯುದ್ಧದಲ್ಲಿ ಮೊಹಿತೆಯನ್ನು ಸೋಲಿಸಿ, ಕೆಲವು ಮೈಲುಗಳಷ್ಟು ಹಿಂದೆ ಸರಿಸಿದ್ದೇನೆ. ಆಗ ನಾಲ್ಕೈದು ಜನ ಪೆಟ್ಟಾಗಿ, ನಾಲ್ಕೈದು ಕುದುರೆಗಳು ಗಾಯಾಳುಗಳಾಗಿವೆ. ಈ ದಾಂದಲೆಯಿಂದ ನಮಗೆ ಬರಬೇಕಾದ ವಸೂಲಿ ಬರುತ್ತಿಲ್ಲ, ತಾಲೂಕಿನಲ್ಲಿ ದಾಂದಲೆ ಹಾಕುತ್ತಿದ್ದಾನೆ. ನಮಗೆ ತಿನ್ನಲು ಏನು ಸಿಗುತ್ತಿಲ್ಲ. ಇಲ್ಲಿ ಒಂದು ತಿಂಗಳಿಗೆ ಆಗುವಷ್ಟು ಸಾಮಾನುಗಳನ್ನು ತಾವು ಕಳಿಸಿದರೆ, ನಾವು ಮೊಹಿತೆಯನ್ನು ಎದುರಿಸಬಹುದು ಜೊತೆಗೆ ತಮ್ಮ ಅನುಗ್ರಹ ಮತ್ತು ಪರಾಕ್ರಮದಿಂದ ಆತನನ್ನು ಹತೋಟಿಗೆ ತರಬಹುದು ಎಂದು ವಿನಂತಿಪೂರ್ವಕವಾಗಿ ಬರೆದಂತಹ ವಿಜ್ಞಾಪನ ಪತ್ರವಾಗಿದೆ.[೧೮]

ಸಾರಾಂಶ

ಸುಬ್ಬರಾವ್ ಮೊಹಿತೆ ಟಿಪ್ಪುವಿನ ಕಡೆಯ ಅಧಿಕಾರಿಯೆಂಬುದು ಸ್ಪಷ್ಟವಾಗಿದೆ. ಹಾಗೂ ದೊಡವಾಡ ಮತ್ತು ತೇಗೂರುಗಳ ಮೇಲೆ ಆಕ್ರಮಣ ಮಾಡಿದನೆಂದು ಮತ್ತು ಪೇಶ್ವೆಗಳ ಮೇಲೆ ಜನರನ್ನು ಎತ್ತಿಕಟ್ಟಿ ಪಿತೂರಿ ಮಾಡಲು ಪ್ರೇರೆಪಿಸಿದನೆಂದು ಕಂಡುಬರುತ್ತದೆ. ಇದರಲ್ಲಿ ಬಾಬುರಾವ್ ಭಾಸ್ಕರ್ ತನಗೆ ಹಣ ಮತ್ತು ಸೈನದ ಕೊರತೆ ಇರುವುದರಿಂದ ಅವುಗಳನ್ನು ನೀಡಿದರೆ ಕಿತ್ತೂರು ಭಾಗವನ್ನು ರಕ್ಷಿಸಿಕೊಳ್ಳಬಹುದೆಂದು ಉಲ್ಲೇಖಿಸಿದ ಪತ್ರವಾಗಿದೆ.

ಪತ್ರದ ಸಂಖ್ಯೆ-೧೯

ಪತ್ರ ಸಿಕ್ಕ ಸ್ಥಳ : ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ದಿನಾಂಕ - ೫/೮/೧೭೮೭

ಉಲ್ಲೇಖ : ರುಮಾಲ್ ನಂ ೭೪

ಈ ಪತ್ರವನ್ನು ಕೂಡಾ ಕಿತ್ತೂರು ಪ್ರಾಂತ್ಯದ ಅಧಿಕಾರಿಯಾದ ಬಾಬುರಾವ್ ಭಾಸ್ಕರ್ ತನ್ನ ಸ್ವಾಮಿಯಾದ ನಾನಾ ಫಡ್ನೀಸ್‌ರಿಗೆ ಬರೆದ ಪತ್ರವಾಗಿದೆ. ವಿಜ್ಞಾಪನೆ ವಿಶೇಷ ಏನೆಂದರೆ, ದಿನಾಂಕ ೫/೮/೧೭೮೭ರವರೆಗಿನ ವರ್ತಮಾನವು ಈಗಿದೆ. ನಾವು ಕಳಿಸಿದ ಪತ್ರವು ಮುಟ್ಟಿರ ಬಹುದು, ಈ ಪತ್ರದ ಸುದ್ದಿಯೆನೆಂದರೆ ಟಿಪ್ಪುವಿನ ಅಧಿಕಾರಿ ಸುಬ್ಬರಾವ್ ಮೊಹಿತೆ ಸಿಂಗನ ಹಳ್ಳಿಗೆ ಬಂದಿದ್ದಾನೆ, ಇಲ್ಲಿಯ ಜನರಿಗೆ ತೊಂದರೆ ಕೊಟ್ಟು, ದನಕರುಗಳನ್ನು ಒಯ್ಯುತ್ತಿದ್ದಾನೆ. ಮೊನ್ನೆ ಇಲ್ಲಿಯ ಸೈನಿಕರು ತೇಗೂರಿಗೆ ಹೋದಾಗ ಮೊಹಿತೆಯ ಸೈನ್ಯ ಹಾಗೂ ನಮ್ಮ ಸೈನಿಕ ರೊಡನೆ ಯುದ್ಧವಾಯಿತು. ಆಗ ಒಬ್ಬ ಸೈನಿಕನು ಸಾವನ್ನ ಅನುಭವಿಸಿದನು. ಜೊತೆಗೆ ಒಂದು ಕುದುರೆಯು ಕೂಡಾ ಸತ್ತು ಹೋಯಿತು. ಸುಮಾರು ೪ ಸೈನಿಕರುಗಳಿಗೆ ಪೆಟ್ಟಾಯಿತು. ನಿಮಗಿಗಾಲೇ ನರಗುಂದದಿಂದ ಬಂದ ಪತ್ರವನ್ನು ಕಳಿಸಲಾಗಿದೆ. ಈ ಪತ್ರದಿಂದ ನಾವು ಕಿತ್ತೂರು ಸಮೀಪದ ಎಲ್ಲಾ ಊರುಗಳನ್ನು ಹತೋಟಿಯಲ್ಲಿಟ್ಟುಕೊಂಡು ಎಚ್ಚರಿಕೆಯಿಂದ ಇದ್ದೇವೆ ಎಂಬುದು ಗೊತ್ತಾ ಗುತ್ತದೆ. ನಮಗೆ ಸುಬ್ಬರಾವ್ ಮೊಹಿತೆಯ ಭಯವಿಲ್ಲ, ಅವನು ಹಳ್ಳಿಗಳಲ್ಲಿ ವಾಸಿಸುತ್ತಾ ನಮಗೆ ತೊಂದರೆ ಕೊಡುತ್ತಿದ್ದಾನೆ. ಆತ ನೇರವಾಗಿ ನಮ್ಮ ಜೊತೆಗೆ ಯುದ್ಧಕ್ಕೆ ಬಂದರೆ ಸ್ವಾಮಿಗಳ ಪರಾಕ್ರಮದಿಂದ ನಾವು ಸೋಲಿಸುತ್ತೇವೆ. ಅವನ ವಶದಲ್ಲಿದ್ದ ತೇಗೂರನ್ನು ಮತ್ತೆ ವಾಪಸ್ಸು ಪಡೆದುಕೊಳ್ಳುತ್ತೇವೆ. ತಾವು ಆಜ್ಞೆ ಮಾಡಬೇಕು. ತೇಗೂರು ಕಿತ್ತೂರಿನಿಂದ ಕೇವಲ ೫ ಮೈಲಿ ಅಂತರದಲ್ಲಿದೆ, ಅಲ್ಲಿ ಆತನ ಸೈನಿಕರಿದ್ದಾರೆ. ಧಾರವಾಡದ ಸಮೀಪ ಮೇಲಿಂದ ಮೇಲೆ ಕಿರುಕುಳ ವಾಗುತ್ತಿದ್ದು, ಇದಕ್ಕೆ ಕಾರಣ ಹುಬ್ಬಳ್ಳಿಯಲ್ಲಿ ಬದ್ರಿ ಮತ್ತು ಸೈಯ್ಯದ್ ಎಂಬ ಅಧಿಕಾರಿಗಳಿದ್ದಾರೆ. ಬುರಾನುದ್ದೀನ್ ಇವರಿಗೆ ಗದಗದಿಂದ ಲಂಚ ಕೊಟ್ಟು ಕೋಟೆಯ ಮೇಲೆ ಸೈನಿಕರನ್ನು ಕಳಿಸಿದ್ದಾನೆ. ಟಿಪ್ಪುವು ಈಗಾಗಲೇ ಶ್ರೀರಂಗಪಟ್ಟಣಕ್ಕೆ ಹೋಗಿದ್ದಾನೆ. ತಾವು ಅವನಿಗೆ ಆದಷ್ಟು ಪತ್ರ ಕಳಿಸಬೇಕು, ಆಗ ಮಾತ್ರ ಇಲ್ಲಿ ಬಂದೂಬಸ್ತ ಆಗುತ್ತದೆ ಮತ್ತು ನೀವು ಮೇಲೆಂದ ಮೇಲೆ ಟಿಪ್ಪು ಸುಲ್ತಾನನಿಗೆ ಪತ್ರ ಬರೆಯಬೇಕು. ನಮ್ಮ ಭಾಗದಲ್ಲಿ ಹಣಕಾಸಿನ ತೊಂದರೆ ಇದ್ದುದರ ಬಗ್ಗೆ ಎರಡು ಸಲ ಬರೆದಾಗಿದೆ. ಇದರ ವ್ಯವಸ್ಥೆಯನ್ನು ಮಾಡಬೇಕು. ತೊಂದರೆಯಾದಲ್ಲಿ ಅಥವಾ ದಾಂದಲೆ ಹೆಚ್ಚಾದಲ್ಲಿ ಹಣದ ತೊಂದರೆಯಾದಿತು ಎಂದು ವಿನಂತಿ ಪೂರ್ವಕವಾಗಿ ಬರೆದ ವಿಜ್ಞಾಪನ ಪತ್ರವಾಗಿದೆ.[೧೯]

ಸಾರಾಂಶ

ಸುಬ್ಬರಾವ್ ಮೊಹಿತೆ ಸಿಂಗನಹಳ್ಳಿಯವರೆಗೂ ಬಂದಿದ್ದಾನೆ, ಅಲ್ಲಿಯ ಜನರಿಗೆ ಕಿರುಕುಳ ಕೊಡುತ್ತಿದ್ದಾನೆ. ಹಾಗೂ ನಮಗೂ ಅವರಿಗೂ ಯುದ್ಧವಾಯಿತು, ಈ ಸಂದರ್ಭದಲ್ಲಿ ಒಬ್ಬ ಸೈನಿಕ ಮತ್ತು ಒಂದು ಕುದುರೆ ಸಾವನ್ನು ಅನುಭವಿಸಿತು ಎಂಬುದನ್ನು ಕೂಡಾ ಮೇಲಾಧಿಕಾರಿಗಳಿಗೆ ತಿಳಿಸುತ್ತಾನೆ. ಅಲ್ಲದೇ ಬುರಾನುದ್ದೀನ್ ಎಂಬುವರಿಗೆ ಗದಗದಿಂದ ಲಂಚ ಕೊಟ್ಟು ಕಿತ್ತೂರಿನ ಮೇಲೆ ಯುದ್ಧ ಮಾಡಲು ಕಳಿಸಿದ್ದಾನೆ. ಆದ್ದರಿಂದ ತಾವು ಟಿಪ್ಪು ಸುಲ್ತಾನನಿಗೆ ಮೇಲಿಂದ ಮೇಲೆ ಪತ್ರ ಬರೆದರೆ ಈ ಭಾಗದಲ್ಲಿ ತೊಂದರೆಯಾಗುವುದಿಲ್ಲವೆಂದು ಬಾಬುರಾವ್ ಭಾಸ್ಕರ್ ಬರೆದ ಪತ್ರದ ಸಾರಾಂಶವಾಗಿದೆ.

ಪತ್ರದ ಸಂಖ್ಯೆ-೨೦

ಪತ್ರ ಸಿಕ್ಕ ಸ್ಥಳ	: ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ
ಭಾಷೆ	: ಮರಾಠಿ ಲಿಪಿ : ಮೋಡಿ ಬರಹ
ಕಾಲ	: ದಿನಾಂಕ - ೨೨/೬/೧೭೮೭
ಉಲ್ಲೇಖ	: ರುಮಾಲ್ ನಂ ೭೪

ಈ ಪತ್ರವನ್ನ ಕಿತ್ತೂರಿನ ಪ್ರಾಂತ್ಯಾಧಿಕಾರಿಯಾದ ಬಾಬುರಾವ್ ಭಾಸ್ಕರ್ ತನ್ನ ಮೇಲಾಧಿಕಾರಿಯಾದ ನಾನಾ ಫಡ್ನೀಸ್‌ರವರಿಗೆ ಕಿತ್ತೂರಿನ ಸುದ್ದಿಯನ್ನ ತಿಳಿಸುವ ಪತ್ರವಾಗಿದೆ. ಇದು ದಿನಾಂಕ ೨೨/೬/೧೭೮೭ರವರೆಗಿನ ವಿಷಯವನ್ನ ಒಳಗೊಂಡಿದೆ. ಈ ಪತ್ರದ ವಿಶೇಷವೆನೆಂದರೆ ಟಿಪ್ಪು ಸುಲ್ತಾನನು ಕಿತ್ತೂರಿನ ಮುತ್ತಿಗೆ ಹಾಕಿ ಕಿತ್ತೂರಕರ್ ದೇಸಾಯಿನ್ನ ಸೆರೆಹಿಡಿದಿದ್ದಾನೆ, ಇವನ ಜೊತೆಗೆ ಗುರಪ್ಪ, ತಿಪ್ಪಣ ಶೆಟ್ಟಿ ಮತ್ತು ಚಿಟ್ನೀಸ್ ಇವರನ್ನು ಕೂಡಾ ಬಂಧಿಸಿದ್ದಾನೆ ಎಂದು ತಿಳಿದುಬರುತ್ತದೆ. ಟಿಪ್ಪುವಿಗೆ ಹಣವನ್ನ ಕೊಡುವುದಾಗಿ ಆತನ ಮನವೊಲಿಸಿ ಬಿಡುಗಡೆಗೊಳ್ಳಲು ಪ್ರಯತ್ನಿಸಿದನು ಆದರೆ ಇದಕ್ಕೆ ಸಮ್ಮತಿಸಲಿಲ್ಲ. ಟಿಪ್ಪುವು ತನ್ನ ಸೈನಿಕರೊಂದಿಗೆ ಧಾರವಾಡಕ್ಕೆ ಬಂದಿದ್ದಾನೆ. ಕುದುರೆ ಸವಾರರು ಮತ್ತು ಸೈನಿಕರನ್ನ ಕಿತ್ತೂರಿಗೆ ಕರೆತರುವ ಬಗ್ಗೆ ರಾಜಶ್ರೀ ತಾತ್ಯರವರು ಬರೆದ ಪತ್ರದಿಂದ ತಮಗೆ ಈಗಾಗಲೇ ತಿಳಿದಿರಬೇಕು.[೨೦]

ಸಾರಾಂಶ

ಟಿಪ್ಪು ಸುಲ್ತಾನನು ಮಲ್ಲಸರ್ಜನನ ದೊರೆಯ ಜೊತೆಗೆ ಗುರುಪ್ಪ, ಚಿಟ್ನೀಸ್ ಮತ್ತು ತಿಪ್ಪಣ್ಣ ಶೆಟ್ಟಿಯವರನ್ನು ಬಂಧಿಸಿರುವುದು ಈ ಪತ್ರದಿಂದ ತಿಳಿಯುತ್ತದೆ. ಅಲ್ಲದೇ ಟಿಪ್ಪುವು ಕಿತ್ತೂರಿನ ವಶಕ್ಕೆ ತೆಗೆದುಕೊಂಡು ತಾನು ಧಾರವಾಡಕ್ಕೆ ಪ್ರಯಾಣ ಬೆಳೆಸಿದನು. ಕಿತ್ತೂರಿನ ರಕ್ಷಣೆ ಮಾಡಲು ರಾಜಶ್ರೀ ತಾತ್ಯರವರು ಸೈನ್ಯವನ್ನ ಕಳಿಸುವುದರ ಬಗ್ಗೆ ತಮಗೆ ಈಗಾಗಲೇ ಪತ್ರ ಬರೆದಿರುವರೆಂದು ಬಾಬುರಾವ್ ಭಾಸ್ಕರ್ ಈ ಪತ್ರದಲ್ಲಿ ತಿಳಿಸಿದ್ದಾನೆ.

ಪತ್ರದ ಸಂಖ್ಯೆ-೨೧

ಪತ್ರ ಸಿಕ್ಕ ಸ್ಥಳ : **ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ**

ಭಾಷೆ : **ಮರಾಠಿ ಲಿಪಿ : ಮೋಡಿ ಬರಹ**

ಕಾಲ : **ದಿನಾಂಕ - ೨೫/೬/೧೭೮೭**

ಉಲ್ಲೇಖ : **ರುಮಾಲ್ ನಂ ೭೪**

ಈ ಪತ್ರವನ್ನ ಕಿತ್ತೂರು ಪ್ರಾಂತ್ಯಾಧಿಕಾರಿಯಾದ ಬಾಬುರಾವ್ ಭಾಸ್ಕರ್ ತನ್ನ ಮೇಲಾಧಿಕಾರಿಯಾದ ನಾನಾ ಫಡ್ನೀಸ್‌ರಿಗೆ ಬರೆದ ಪತ್ರವಾಗಿದೆ. ಈ ಪತ್ರದ ವಿಶೇಷವೇನೆಂದರೆ, ದಿನಾಂಕ ೨೫/೬/೧೭೮೭ರವರೆಗೆ ಕಿತ್ತೂರಿನ ಸುದ್ದಿ ಸಮಾಚಾರಗಳನ್ನ ತಿಳಿಸಿದ್ದಾನೆ. ಆದರೆ ಈ ಪತ್ರದಲ್ಲಿ ಕಿತ್ತೂರಕರ್ ದೇಸಾಯಿಯನ್ನ ಬಂಧಿಸಿದ್ದಾನೆ. ಆದರೆ, ಆತನ ಆಸ್ಥಾನಿಕರನ್ನ ಬಿಡುಗಡೆ ಮಾಡಿ, ತಾನು ಧಾರವಾಡಕ್ಕೆ ಬಂದಿದ್ದಾನೆ. ಆಸ್ಥಾನಿಕರು ಕಿತ್ತೂರಿಗೆ ಹೋಗಿ ದಾಂದಲೆ ಮಾಡಬಹುದೆಂದು ಈ ಪತ್ರದಲ್ಲಿ ತಿಳಿಸಿದ್ದಾನೆ. ಆದ್ದರಿಂದ ಈ ಪತ್ರವನ್ನ ಓದಿದ ತಾವು ಯಾವ ರೀತಿ ಆಜ್ಞೆ ಮಾಡುತ್ತಿರೋ ಆ ರೀತಿ ನಾವು ನಡೆದುಕೊಳ್ಳುತ್ತೇವೆ ಎಂದರೆ ಒಂದೊಮ್ಮೆ ಕಿತ್ತೂರಿನಲ್ಲಿ ಗಲಾಟೆಯಾದರೆ ಮುಂದೇನು ಮಾಡಬೇಕೆಂಬುದು ಬಾಬುರಾವ್ ಭಾಸ್ಕರ್‌ನು ನಾನಾ ಫಡ್ನೀಸ್‌ರಿಗೆ ಪತ್ರದ ಮೂಲಕ ನಿವೇದಿಸಿ ಕ್ರಮಕೈಗೊಳ್ಳಲು ಈ ಪತ್ರವನ್ನು ಬರೆದಿದ್ದಾನೆ.[೨೧]

ಪತ್ರದ ಸಂಖ್ಯೆ-೨೨

ಪತ್ರ ಸಿಕ್ಕ ಸ್ಥಳ : **ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ**

ಭಾಷೆ : **ಮರಾಠಿ ಲಿಪಿ : ಮೋಡಿ ಬರಹ**

ಕಾಲ : **ದಿನಾಂಕ - ೨೬/೮/೧೭೮೭**

ಉಲ್ಲೇಖ : **ರುಮಾಲ್ ನಂ ೭೪**

ಈ ಪತ್ರವನ್ನ ಕಿತ್ತೂರು ಪ್ರಾಂತ್ಯಾಧಿಕಾರಿಯಾದ ಬಾಬುರಾವ್ ಭಾಸ್ಕರ್‌ರವರು ರಾಜಶ್ರೀ ನಾನಾ ಫಡ್ನೀಸರಿಗೆ ಬರೆದ ಪತ್ರವಾಗಿದೆ. ದಿನಾಂಕವನ್ನು ಉರ್ದು ಮಾಸವಾದ ಜಿಲಕಾದ ಚ.೧೨ ರಂದು ಪತ್ರ ಬರೆಯಲಾಗಿದೆ. ಸ್ವಾಮಿಗಳ ಕೃಪೆಯಿಂದ ಎಲ್ಲವೂ ಕ್ಷೇಮ, ಇಲ್ಲಿ ಸುದ್ದಿಯೆನೆಂದರೆ ಟಿಪ್ಪು ಸುಲ್ತಾನನ ಸೈನಿಕರು ಹುಬ್ಬಳ್ಳಿಯಿಂದ ಧಾರವಾಡಕ್ಕೆ ಬಂದರು, ಅಲ್ಲಿಂದ ನರೇಂದ್ರಕ್ಕೂ ಬಂದಿದ್ದನ್ನು ಈಗಾಗಲೇ ತಿಳಿಸಲಾಗಿದೆ. ಅವನ ಸೈನಿಕರು ಬಹಳ ಸಂಖ್ಯೆಯಲ್ಲಿದ್ದಾರೆ. ಆತನ ಬಳಿ ೧೬-೧೭ ತೋಪುಗಳಿವೆ, ೨೦೦೦-೩೦೦೦ ಕುದುರೆ ಸವಾರರು, ಸುಮಾರು ೧೦-೧೨ ಸಾವಿರ ಸೈನಿಕರಿದ್ದಾರೆ. ಇದರ ನಾಯಕತ್ವವನ್ನು ಸರದಾರ ಸೈಯ್ಯದ್ ಸಾಹೇಬ ವಕೀಲ ಮತ್ತು ಸರದಾರ ಸೈಯ್ಯದ್ ಹಮೀದ್ ವಹಿಸಿಕೊಂಡಿದ್ದಾರೆ. ಇವನೊಂದಿಗೆ ಸುಬ್ಬರಾವ್ ಮೊಹಿತೆ ಬರುವಾಗ ಕರಾರುಗಳನ್ನು ಮಾಡಿ ಬಂದಿದ್ದಾನೆ. ಆಗ ಕರಾರು ಏನಿತ್ತೋ ಗೊತ್ತಿಲ್ಲ.

ಆದರೆ, ಹೇಗಾದರು ಮಾಡಿ ಕಿತ್ತೂರ ದೇಸಾಯಿಯವರ ಹೆಸರಿನಲ್ಲಿ ಸಂಸ್ಥಾನದ ಆಡಳಿತವನ್ನು ನೀಡಿ ವಶಪಡಿಸಿಕೊಳ್ಳಲು ತೀರ್ಮಾನಿಸಿದ್ದನು. ಅದು ಆಗದೇ ಇದ್ದಾಗ ಬೆಂಗಳೂರಿ ನಲ್ಲಿದ್ದ ಟಿಪ್ಪು ಸುಲ್ತಾನನಿಗೆ ಪತ್ರ ಬರೆದು ತಿಳಿಸಿ ಕರಾರು ಮಾಡಿ ವಿಫಲವಾಗಿದೆ. ಕಿತ್ತೂರಕರ ದೇಸಾಯಿ ಇವರ ಕಡೆಗೆ ಬಹಳಷ್ಟು ಶಸ್ತ್ರಾಸ್ತ್ರಗಳಿವೆ ಆದರೆ, ಕಿತ್ತೂರಕರವರು ಹೆದರಿಕೆಯಿಂದ ನನ್ನಿಂದ ಟಿಪ್ಪುವನ್ನು ಎದುರಿಸಲು ಸಾಧ್ಯವಿಲ್ಲ ಎಂದು ಭಾವಿಸಿ ಈ ಭಾಗವು ಖಾಲಿಯಾಗಿದೆ. ಆದ್ದರಿಂದ ಸೈನಿಕರು ಬಂದರೆ ಚಲೋ ಇಲ್ಲವಾದಲ್ಲಿ ಧಾರವಾಡ ಪ್ರಾಂತ್ಯವು ಖಾಲಿಯಾಗಿ ಟಿಪ್ಪುವಿನ ವಶವಾಗಬಹುದು. ಇದಕ್ಕೆ ಸಂಬಂಧಿಸಿದಂತೆ ೨-೩ ಕಾಗದ ಪತ್ರಗಳನ್ನು ಈಗಾಗಲೇ ಬರೆದಿದ್ದೇನೆ. ಟಿಪ್ಪುವಿನ ಸೈನಿಕರು ತುಂಗಭದ್ರ ದಂಡೆಯ ಮೇಲೆ ಇದ್ದರು. ಆಗ ಟಿಪ್ಪು ಹೇಗಾದರು ಮಾಡಿ ಕಿತ್ತೂರು ಕೋಟೆಯನ್ನು ನಾಶಮಾಡಿ ಅದರ ಕಲ್ಲುಗಳನ್ನು ಧಾರವಾಡಕ್ಕೆ ತರಬೇಕು ಎಂದು ತನ್ನ ಸೈನಿಕರಿಗೆ ಪ್ರೇರಪಣೆ ನೀಡಿದನು. ಆದ್ದರಿಂದ ಹಂತ-ಹಂತದಲ್ಲಿ ಸೈನಿಕರು ಬಂದು ತಲುಪಿದ್ದಾರೆ. ಅವರನ್ನು ನೋಡಿದಾಗಲೇ ನಮ್ಮ ಜನರು ಹೆದರಿ ಓಡಿಹೋಗಿದ್ದಾರೆ. ಅವರ ಸೈನ್ಯ ಬಹುಸಂಖ್ಯಾತವಾಗಿದೆ. ರಾಜಶ್ರೀ ರಾಮಪ್ಪ ಮತ್ತು ರುದ್ರಪ್ಪ ಅವರು ನಮ್ಮ ಕಡೆಗೆ ಇದ್ದಾರೆ. ಇನ್ನೂ ಕೆಲವು ಜನ ದುಷ್ಟ ಸೈನಿಕರನ್ನು ಕೂಡಿಸಿಕೊಂಡು ನಮ್ಮ ಸೈನ್ಯದ ಸಂಖ್ಯೆ ಸುಮಾರು ೪೫೦೦ ಆಗಬಹುದು. ಈಗಾಗಲೇ ೧೫೦೦ ಜನ ದುಷ್ಟ ಸೈನಿಕರನ್ನು ಕೂಡಿಸಲಾಗಿದೆ. ೩೦೦ ಕುದುರೆ ಸವಾರರು ಬಂದಿದ್ದಾರೆ, ಆದರೆ ಬರಗಾಲ ಬಿದ್ದ ಕಾರಣ ಜನ ದುಡಿದು ದಣಿದಿದ್ದಾರೆ. ಈ ಎಲ್ಲ ಜನರನ್ನು ಕೂಡಿಸಿ ನಾವು ಒಬ್ಬಂಟಿಗ ರಾಗಿದ್ದೇವೆ ಗಂಧಿಗವಾಡದ ರಾಮಪ್ಪನ ಬಳಿ ಎರಡು ತೋಪುಗಳಿವೆ ಅವುಗಳನ್ನು ತರಿಸಿದೇವು, ಅನೇಕ ಕರಯಾತುಗಳಲ್ಲಿ ನಮ್ಮ ಸೈನಿಕರಿರುವರು ಅವರೆಲ್ಲರನ್ನು ಒಂದುಗೂಡಿಸಿದೆವು ಇಷ್ಟೇಲ್ಲಾ ಮಾಡಿದರು ನಮ್ಮ ಸೈನಿಕರ ಸಂಖ್ಯೆ ೧೦೦೦೦ ಹಾಗೂ ಕುದುರೆ ಸವಾರರು ೧೦೦೦ ಮತ್ತು ೨ ತೋಪುಗಳು ನಮ್ಮಲ್ಲಿವೆ. ಹೀಗೆ ಯುದ್ಧಕ್ಕೆ ತಯಾರಾದೆವು.

ಸುಬ್ಬರಾವ್ ಮೊಹಿತೆ ಸೈಯ್ಯದ್ ಸಾಹೇಬನಿಗೆ ಹೇಳಿ ಸೈನ್ಯದ ಸಾಮಗ್ರಿಗಳನ್ನು ಪಡೆದು ಕೊಂಡು ಸೈನ್ಯದ ಸಮೇತ ನಮಗೆ ಎದುರಾದನು. ಆಗ ನಮಗೂ ಅವರಿಗೂ ಯುದ್ಧ ಆರಂಭವಾಯಿತು. ಸ್ವಾಮಿಗಳ ಪ್ರಭಾವದಿಂದ ಅವರನ್ನು ಸೋಲಿಸಿ ತೇಗೂರಿಗೆ ಅಟ್ಟಿದೆವು. ಅವರ ಕಡೆಯಿಂದ ೨೫-೩೦ ಜನ ಸತ್ತರು, ಕೆಲವರು ಗಾಯಾಳುಗಳಾದರು ಒಂದು ಕುದುರೆಯು ಸತ್ತಿತ್ತು. ಮರುದಿನ ಮೆಟ್ಯಾಲ ಎಂಬ ಸಣ್ಣ ಊರಿಗೆ ಮುತ್ತಿಗೆ ಹಾಕಿ ಲೂಟಿ ಮಾಡಿದರು. ಅಪ್ಪರ ವೇಳೆಗೆ ನಮ್ಮ ಸೈನಿಕರು ತಲುಪಿ ತಡೆಯೊಡ್ಡಿದರು. ಆದರೆ ಎರಡು ಕುದುರೆಗಳು ಮರಣ ಹೊಂದಿದವು. ಹಲವು ಕುದುರೆಗಳು ಗಾಯಾಳುಗಳಾದವು, ೯ ಜನ ಸೈನಿಕರು ಮರಣ ಹೊಂದಿದರು, ಈ ಯುದ್ಧದಲ್ಲಿ ಸುಬ್ಬರಾವ್ ಮೊಹಿತೆ ಪರಾಭವಗೊಂಡು ಓಡಿಹೋದನು. ಅಲ್ಲಿಂದ ಓಡಿ ಹೋಗುವಾಗ ಅಲ್ಲಿಯ ದನ-ಕರುಗಳನ್ನು ಕಳವುಮಾಡಿ ನರೇಂದ್ರದ ಬಳಿ ತಂಗಿದನು. ಈಗ ಜನರು ಸಮಾಧಾನವಾಗಿ ಬದುಕಲು ಪ್ರಾರಂಭಿಸಿದ್ದಾರೆ. ಇಷ್ಟೇಲ್ಲಾ ಆದ ಮೇಲೆ ಟಿಪ್ಪುವಿಗೆ ಪತ್ರ ಬರೆದರೆ ಉತ್ತರ ಏನು ಬಂತು ಗೊತ್ತಾಗಲಿಲ್ಲ. ಮೊಹಿತೆಯ

ಸೈನಿಕರು ಮಾತ್ರ ಶಿಂಗನಹಳ್ಳಿ ಮತ್ತು ತೇಗೂರಿನಲ್ಲಿ ವಾಸ್ತವ್ಯ ಮಾಡಿದ್ದಾರೆ. ಈ ಹಣದುಬ್ಬರ ಉಂಟಾಗಿದೆ ಎಲ್ಲಾ ಕಲಿಯಾತುಗಳಿಗೂ ತಾಕೀತು ಮಾಡಿ ಹಗೆಯಲ್ಲಿದ್ದ ಧಾನ್ಯಗಳನ್ನು ತೆಗೆಸಿ ಮಾರಾಟ ಮಾಡಲಿಕ್ಕೆ ಹೇಳಿದ್ದೇನೆ. ಗಡಿ ಕಂದಾಯವನ್ನು ಮನ್ನ ಮಾಡಿದ್ದೇನೆ. ನಾಲ್ಕು ಬಂಗಾರದ ಅಂಗಡಿ ೧೦-೧೨ ಕಿರಾಣಿ ಅಂಗಡಿಗಳನ್ನು ವಶಕ್ಕೆ ತೆಗೆದುಕೊಂಡಿದ್ದೇನೆ. ಈ ಎಲ್ಲಾ ಅಂಶಗಳು ಸ್ವಾಮಿಗಳ ಪ್ರಭಾವದಿಂದಲೇ ಆಗಿದೆ ನಮ್ಮಿಂದೇನೂ ಅಲ್ಲ, ಮುಂದೆ ಏನಾಗುತ್ತದೆ ಎಂದು ಮತ್ತೆ ತಿಳಿಸುತ್ತೇನೆ. ತಾವು ಟಿಪ್ಪುವಿಗೆ ಪತ್ರ ಹಾಕಿ ಮೊಹಿತೆಯ ಸೈನ್ಯವನ್ನು ವಾಪಸ್ಸು ಕರೆಯಿಸಿಕೊಳ್ಳಬೇಕು, ಇಲ್ಲವಾದಲ್ಲಿ ಈ ತಾಲೂಕಿನ ಜನಗಳಿಗೆ ಸುಖವಾಗುವುದಿಲ್ಲ. ಇಲ್ಲಿ ಹಗಲು-ರಾತ್ರಿ ತೊಂದರೆಯಿರವುದರಿಂದ ಯಾವುದೇ ಕಂದಾಯಗಳು ಜಮಾ ಆಗುವ ಸ್ಥಿತಿಯಲ್ಲಿಲ್ಲ. ಬದ್ರು ಜಮಾಲ್ ಖಾನ್ ಇವರಿಗೆ ಧನ್ಯವಾದಗಳನ್ನು ಹೇಳುತ್ತಾ ಪತ್ರ ಕಳುಹಿಸಬೇಕಾಗಿದೆ. ಸ್ವಾಮಿಯವರಿಗೆ ಈ ಭಾಗದ ಖರ್ಚಿಗಾಗಿ ೨೫,೦೦೦ರೂಪಾಯಿಗಳನ್ನು ಕಳುಹಿಸಿದ್ದೀರಿ ಅವು ಬಂದು ಮುಟ್ಟಿದೆ. ತಾವು ನಮ್ಮ ಮರ್ಯಾದೆಯನ್ನು ಉಳಿಸಿದಿರಿ, ಗುಪ್ತ ದಳದವರು ಧಾರವಾಡಕ್ಕೆ ಬಂದಿದ್ದಾರೆ ಎಲ್ಲ ಸೈನಿಕರು ಧಾರವಾಡದಿಂದ ರಾಯರ ಹುಬ್ಬಳ್ಳಿಗೆ ತಲುಪಿದ್ದಾರೆ. ಕಿತ್ತೂರಿನಿಂದ ಧಾರವಾಡಕ್ಕೆ ಸುಮಾರು ೬ ಕೋಶ ಅಲ್ಲಿಂದ ಪೂರ್ವಕ್ಕೆ ಹುಬ್ಬಳ್ಳಿಗೆ ೩ ಕೋಶದ ಅಂತರ ಏದೆ. ಅಂದರೆ ಸೈನಿಕರು ಸುಮಾರು ೯ ಕೋಶದಷ್ಟು ಮುಂದೆ ಹೋಗಿದ್ದಾರೆ. ನೀವು ಅಪ್ಪಣೆ ಮಾಡಿದಲ್ಲಿ ನಾವು ತೇಗೂರನ್ನ ವಶಪಡಿಸಿಕೊಳ್ಳುತ್ತೇವೆ. ಕಿತ್ತೂರಿನ ಸುತ್ತಮುತ್ತಲು ನಮ್ಮದೇ ಅಧಿಕಾರ ನಡೆಯುತ್ತಿದೆ ಬಾಹು ಪೇಶ್ವೆಯವರ ಕಡೆಗಿನ ದೊಡ್ಡ ವಾಡ, ನಂದಗಡ ದೌಲತ್ ರಾವ್ ಘೋರ್ಪಡೆಯ ಕಡೆಗಿನ ಕಿತ್ತೂರು ಹಾಗೂ ಶಿಂಗನಹಳ್ಳಿ ತೇಗೂರು ಬಂದೋಬಸ್ತ ಆಗಿದೆ. ಆದರೂ, ತೇಗೂರು ಸುಬ್ಬರಾವ್ ಮೊಹಿತೆ ವಶದಲ್ಲಿ ರುವುದರಿಂದ ಬಂದೋಬಸ್ತ ಮಾಡಲು ಸಾಧ್ಯವಾಗಿಲ್ಲ. ಕಿತ್ತೂರಿನಿಂದ ತೇಗೂರು ಅರ್ಧಕೋಶ ದಲ್ಲಿದೆ ಇದು ಅವನ ವಶದಲ್ಲಿರುವುದರಿಂದ ಅಲ್ಲಿಂದ ಬರುವ ಕಟ್ಟಿಗೆ, ಹುಲ್ಲುಗಳು ಕಿತ್ತೂರಿಗೆ ಬರುತ್ತಿಲ್ಲ. ಏಕೆಂದರೆ ಅರಣ್ಯ ಪ್ರದೇಶದಲ್ಲಿ ಆತನ ಸೈನಿಕರು ಹಗಲು-ರಾತ್ರಿ ಗಸ್ತು ಹಾಕಿ ಅಲ್ಲಿಯ ಜನರಿಗೆ ಹೊಡೆಯುವುದು, ಬಡಿಯುವುದು, ಕಿರುಕುಳ ನೀಡುತ್ತಿದ್ದಾರೆ ಆದ ಕಾರನ ಆ ಪ್ರದೇಶವನ್ನು ವಶಪಡಿಸಿಕೊಳ್ಳುವುದರ ಬಗ್ಗೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳಲಾಗಿತ್ತು. ಆದರೆ ಇಲ್ಲಿಯವರೆಗು ಉತ್ತರ ಬಂದಿಲ್ಲ. ವಶಪಡಿಸಿಕೊಳ್ಳಬೇಕೋ ಅಥವಾ ಬೇಡವೋ ಎಂಬುದರ ಬಗ್ಗೆ ತಾವು ಆಜ್ಞೆ ಮಾಡಬೇಕು.[೨೨]

ಇಂತಿ ತಮ್ಮ ಸೇವಕ

ಸಾರಾಂಶ

ಬಾಬುರಾವ್ ಬಾಸ್ಕರ್ ಬರೆದ ಪತ್ರದಲ್ಲಿಯೇ ಅತಿದೊಡ್ಡ ಪತ್ರ. ಇದರಲ್ಲಿ ಟಿಪ್ಪುವಿನ ಸೈನ್ಯ ಮತ್ತು ತನ್ನ ಸೈನ್ಯದ ಹೋಲಿಕೆ ಮಾಡಿ ತಿಳಿಸಿದ್ದಾನೆ. ಅಲ್ಲದೆ ಟಿಪ್ಪುವಿನ ಅಧಿಕಾರಿಯಾದ ಸುಬ್ಬರಾವ್ ಮೊಹಿತೆ ನೀಡುತ್ತಿರುವ ಕಿರುಕುಳದ ಬಗ್ಗೆಯು ಉಲ್ಲೇಖಿಸಿದ್ದಾನೆ. ಧಾರವಾಡ ಮತ್ತು ಕಿತ್ತೂರು ಇದರ ಅಂತರ ಹಾಗೂ ಕಿತ್ತೂರು ಮತ್ತು ತೇಗೂರಿನ ಅಂತರವನ್ನು ಉಲ್ಲೇಖಿಸಿದ್ದಾನೆ

ಪತ್ರದ ಸಂಖ್ಯೆ-೨೩

ಪತ್ರ ಸಿಕ್ಕ ಸ್ಥಳ : ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ದಿನಾಂಕ - ೨೫/೭/೧೭೮೭

ಉಲ್ಲೇಖ : ರುಮಾಲ್ ನಂ ೭೪

ಈ ಪತ್ರವನ್ನ ಕಿತ್ತೂರು ಪ್ರಾಂತ್ಯಾಧಿಕಾರಿಯಾದ ಬಾಬುರಾವ್ ಭಾಸ್ಕರ್‌ರವರು ರಾಜಶ್ರೀ ನಾನಾ ಫಡ್ನೀಸರಿಗೆ ಬರೆದ ಪತ್ರವಾಗಿದೆ. ವಿಶೇಷ ೫/೭/೧೭೮೭ರವರೆಗೆ ನಡೆದ ಕ್ಷೇಮ ಸಮಾಚಾರವನ್ನು ಈ ಮೂಲಕ ತಿಳಿಸುತ್ತಿದ್ದೇನೆ. ಸುಬ್ಬರಾವ್ ಮೊಹಿತೆ ಮತ್ತು ಮಲ್ಲಸರ್ಜ್ಜನ ದೇಸಾಯಿ ಇವರ ಆಸ್ಥಾನಿಕರು ಧಾರವಾಡಕ್ಕೆ ಬಂದಿದ್ದಾರೆ. ಆದರೆ ಮಲ್ಲಸರ್ಜ್ಜನ ದೇಸಾಯಿ ಇನ್ನೂ ಬಂಧನದಲ್ಲಿಯೇ ಇದ್ದಾನೆ. ಈಗಾಗಲೇ ತಮಗೆ ತಿಳಿಸಿದಂತೆ ಕಿತ್ತೂರಿನಲ್ಲಿ ದಾಂದಲೆ ನಡೆದ ಬಗ್ಗೆ ತಮಗೆ ತಿಳಿಸಲಾಗಿತ್ತು. ಅಲ್ಲದೆ ಟಿಪ್ಪುವಿನ ಮನಸ್ಸಿನಲ್ಲಿ ಏನಿದೆಂಬುದನ್ನು ತಿಳಿದು ಕೊಳ್ಳಲು ಪತ್ರವನ್ನು ಕೂಡಾ ಬರೆಯಲಾಗಿತ್ತು. ಆ ಪತ್ರಕ್ಕೆ ಬರೆದ ಉತ್ತರ ತಮ್ಮ ಕಡೆಗೆ ಕಳಿಸಲಾಗಿತ್ತು. ಆ ಪತ್ರದ ಪ್ರಕಾರ ಕಿತ್ತೂರಕರ ದೇಸಾಯಿ ಇವರನ್ನ ಬಿಡುಗಡೆಗೊಳಿಸಬೇಕು ಎಂದು ಬರೆಯಲಾಗಿತ್ತು. ಅದರ ಪ್ರಕಾರ ದೇಸಾಯಿಯವರ ಕಡೆಯಿಂದ ೫,೦೦,೦೦೦ ರೂಪಾಯಿ ಒಪ್ಪಂದ ಮಾಡಿಕೊಂಡು ಖರ್ಚಿಗೆ ಹಣ ಕೊಡಲಾಗಿತ್ತು, ಆದರೂ ಕೂಡಾ ದೇಸಾಯಿ ಇನ್ನೂ ಬಂಧನದಲ್ಲಿಯೇ ಇದ್ದಾನೆ. ದೇಸಾಯಿಯವರನ್ನ ಹೆಸರಿಗೆ ಮಾತ್ರ ಬಂಧನದಲ್ಲಿಟ್ಟುಕೊಂಡು ಹಣ ಕೀಳುವ ಉದ್ದೇಶ ಕಂಡುಬರುತ್ತದೆ. ಇಂದಿಗೆ ನಾಲ್ಕು ದಿನಗಳಾದವು, ಮೊಹಿತೆಯು ಕೂಡಾ ಸುಮಾರು ೨೫,೦೦೦ ಹೊನ್ನುಗಳನ್ನು ಖರ್ಚಿಗೆ ನೀಡಲಾಗಿದೆ. ದನಕರುಗಳನ್ನು ಒಯ್ಯುತ್ತಿದ್ದಾನೆ ಕುದುರೆ ಮರಿಗಳನ್ನು ಓಡಿಸಿಕೊಂಡು ಹೋಗಿದ್ದಾನೆ. ಆದ್ದರಿಂದ ಅಗಸಿಯ ಬಾಗಿಲಲ್ಲಿ ನಮ್ಮ ಸೈನ್ಯವನ್ನು ನಿಲ್ಲಸಬೇಕಾಗಿದೆ. ಮೊಹಿತೆಯವರ ದಾಂದಲೆಯಿಂದ ಸಾಮಾನ್ಯ ಜನರು ಭಯ ಬೀತರಾಗಿ ವಸೂಲಿ ಮಾಡುವುದೇ ಕಷ್ಟವಾಗಿದೆ. ಒಂದು ತಿಂಗಳುಗಳ ಕಾಲ ಯಾವುದೇ ವಸೂಲಿ ಆಗಲಿಲ್ಲ, ಈಗಾಗಲೇ ಜಮಾ ಆದ ಹಣದ ಬಾಬ್ತು ತಿಳಿಸಲಾಗಿದೆ. ಪ್ರತಿ ತಿಂಗಳ ಖರ್ಚು ಸುಮಾರು ೩೫,೦೦೦ ರೂಪಾಯಿಗಳು ಆಗುತ್ತವೆ. ಅದರ ವಿವರವನ್ನು ಈಗಾಗಲೇ ತಿಳಿಸಿ ದ್ದೇನೆ. ಪೋರ್ಚುಗೀಸರ ಸೈನಿಕರ ಪಗಾರವನ್ನು ದಿನವೂ ನಾವು ಕೊಡಬೇಕು, ಕೊಡಲ್ಲಿಲ್ಲವೆಂದರೆ ಅಪಮಾನವಾಗುತ್ತದೆ. ದವಸ-ಧಾನ್ಯಗಳನ್ನು ಕೋಡೊಣವೆಂದರೆ ಊರೆಲ್ಲಾ ಲೂಟಿಯಾಗಿ ಅವು ದೊರೆಯುತ್ತಿಲ್ಲ, ಆದ್ದರಿಂದ ದಾಂದಲೆ ನಿಲ್ಲುವವರೆಗೆ ಸರ್ಕಾರದ ಕಡೆಯಿಂದ ತಾವು ೨೫,೦೦೦ ರೂಪಾಯಿಯನ್ನು ಖರ್ಚಿಗಾಗಿ ಕಳುಹಿಸಬೇಕು. ನಾವು ಸ್ವಾಮಿಗಳ ಸೇವೆಗಾಗಿ ಪ್ರಾಣವನ್ನಾದರೂ ಕೊಟ್ಟಾದರೂ ರಕ್ಷಿಸಿಸುತ್ತೇವೆ. ಇನ್ನು ಮೇಲೆ ಯಾವ ರೀತಿ ಇಚ್ಛೆ ಇದೆವೋ ಆ ರೀತಿ ಆಜ್ಞೆ ಮಾಡಬೇಕು. ತಮಗೆ ಇಲ್ಲಿಯ ವಾಸ್ತವಿಕ ಪರಿಸ್ಥಿತಿ ಸತ್ಯವೋ ಸುಳ್ಳೋ ಎಂದು ನೋಡ

ಬೇಕೆಂದರೆ ಸರ್ಕಾರದ ಕಡೆಗಳಿಂದ ಇಬ್ಬರು ಸೈನಿಕರುಗಳನ್ನು ಕಳುಹಿಸಿರಿ, ಮತ್ತು ಟಿಪ್ಪುವಿನ ಕಡೆಗೆ ಪತ್ರ ಬರೆದು ಸುಬ್ಬರಾವ್ ಮೊಹಿತೆಯನ್ನು ಬಂದೋಬಸ್ತ ಮಾಡಬೇಕು. ಈ ಪತ್ರಕ್ಕೆ ಉತ್ತರ ಕಳುಹಿಸುವಂತಹ ಆಜ್ಞೆ ಮಾಡಬೇಕು. ಹಣವು ಬರದೇ ಇದ್ದಲ್ಲಿ ನಮಗೆ ಗತಿಯಿಲ್ಲ. ಮರ್ಯಾದೆ ಹೋದರೆ ಇಲ್ಲಿ ಇರಲಿಕ್ಕೆ ಸಾಧ್ಯವಾಗುವುದಿಲ್ಲ, ಶತ್ರುವಿನ ಬಲ ಹೆಚ್ಚಾಗುತ್ತದೆ. ಆದ್ದರಿಂದ ಸ್ವಾಮಿಗಳಾದ ತಾವು ಈ ಸ್ಥಳದ ರಕ್ಷಣೆ ಹೇಗೆ ಸಾಧ್ಯ ಎಂಬುದು ತಿಳಿದು ಆಜ್ಞೆ ಮಾಡಬೇಕು. ತಾವು ಈ ಪ್ರಾಂತ್ಯವನ್ನ ಸುಧಾರಣೆ ಮಾಡಬೇಕೆಂದರೆ ತಮ್ಮಿಂದ ರೊಕ್ಕ ಕೇಳುತ್ತೇವೆ ಎಂದು ತಿಳಿದುಕೊಂಡು ಕಳುಹಿಸಬೇಕು. ಇಲ್ಲವಾದಲ್ಲಿ ನಿಮ್ಮ ಮನಸ್ಸಿನಲ್ಲಿ ಹಣ ಕಳುಹಿಸಿಕೊಡ ಬಾರದೆಂಬ ಭಾವನೆ ಇದ್ದರೆ ಕಳುಹಿಸಬೇಡಿ. ನಮ್ಮ ಜೀವಕ್ಕಿಂತ ಸ್ವಾಮಿಯ ಸೇವೆಯೇ ಮುಖ್ಯ ಎಂದು ಬಾಬುರಾವ್ ಈ ಪತ್ರದಲ್ಲಿ ಉಲ್ಲೇಖಿಸಿದ್ದಾನೆ.[೨೩]

ಸಾರಾಂಶ

ಮಲ್ಲಸರ್ಜನನ್ನು ಒಂದು ಕಡೆ ಬಂಧಿಸಿಕೊಂಡು ಟಿಪ್ಪುವು ಹಣವನ್ನು ಕೀಳುತ್ತಿದ್ದಾನೆ. ಇನ್ನೊಂದು ಕಡೆಗೆ ಲೂಟಿಯ ಪ್ರಭಾವದಿಂದ ಸರ್ಕಾರಕ್ಕೆ ಬರಬೇಕಾದ ಆದಾಯಗಳು ಬರುತ್ತಿಲ್ಲ. ಆದ್ದರಿಂದ ಪುಣೆಯ ಅಧಿಕಾರಿಗಳಿಂದ ೨೫,೦೦೦ ರೂಪಾಯಿಗಳನ್ನು ಕಳುಹಿಸಿಕೊಡಿ. ಏಕೆಂದರೆ ನಾವು ಇಲ್ಲಿ ಬದುಕಬೇಕಾದರೆ ಹಣದ ಅವಶ್ಯಕತೆ ಇದೆ ಎಂಬುದನ್ನು ಬಹಳ ಕಠೋರವಾದ ಮನಸ್ಸಿನಿಂದ ವ್ಯಕ್ತಪಡಿಸುತ್ತಾನೆ.

ಪತ್ರದ ಸಂಖ್ಯೆ-೨೪

ಪತ್ರ ಸಿಕ್ಕ ಸ್ಥಳ : ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ದಿನಾಂಕ - ೧೧/೮/೧೭೮೭

ಉಲ್ಲೇಖ : ರುಮಾಲ್ ನಂ ೭೪

ಈ ಪತ್ರವನ್ನ ಕಿತ್ತೂರು ಪ್ರಾಂತ್ಯಾಧಿಕಾರಿಯಾದ ಬಾಬುರಾವ್ ಭಾಸ್ಕರ್‌ರವರು ತಮ್ಮ ಮೇಲಾಧಿಕಾರಿಯಾದ ರಾಜಶ್ರೀ ನಾನಾ ಫಡ್ನೀಸ್ ಸ್ವಾಮಿಯವರಿಗೆ ಬರೆದ ಪತ್ರವಾಗಿದೆ. ದಿನಾಂಕ ೧೧/೮/೧೭೮೭ರವರೆಗೆ ಕಿತ್ತೂರು ತಾಲೂಕಿನ ವರ್ತಮಾನ ಈ ಕೆಳಗಿನಂತಿದೆ.

ನೀವು ಕಳುಹಿಸಿದ ೨೫,೦೦೦ ರೂಪಾಯಿ ಬಂದು ಮುಟ್ಟಿದವು. ನಾವು ಅದನ್ನು ಸರಿಯಾದ ಕೆಲಸಕ್ಕೆ ವಿನಿಯೋಗಿಸುತ್ತೇವೆ. ನಿಜವಾಗಿಯೂ ನಾವು ಸರ್ಕಾರಕ್ಕೆ ತಾಲೂಕಿನಿಂದ ಹಣ ಜಮಾ ಮಾಡಬೇಕು, ಆದರೆ ಇಲ್ಲಿಯ ಪರಿಸ್ಥಿತಿಯೇ ಬೇರೆಯಾಗಿದೆ. ನಾನು ತಮ್ಮಿಂದ ಹಣ ತರಿಸಿಕೊಳ್ಳುವ ಪರಿಸ್ಥಿತಿ ಒದಗಿಬಂದಿದೆ. ಇಲ್ಲಿನ ಜಮಾ-ಖರ್ಚುಗಳ ಬಗ್ಗೆ ಈಗಾಗಲೇ

ಮಾಹಿತಿ ನೀಡಿದ್ದೇನೆ. ಅದನ್ನು ತಾವು ಗಮನಿಸಬಹುದು. ನಾನು ಹಜಾರದಂದಿನಿಂದ ಬರೀ ದಾಂದಲೆ, ಲೂಟಿ ಇವುಗಳಲ್ಲಿಯೇ ಕಳೆದೆವು. ಇದರಿಂದ ಸುಗ್ಗಿಯ ಸಂದರ್ಭದಲ್ಲಿ ತೊಂದರೆ ಯಾಯಿತು. ಹೀಗಾಗಿ ಈ ಪ್ರದೇಶವು ತೊಂದರೆಯನ್ನು ಅನುಭವಿಸುತ್ತದೆ. ದುಷ್ಟ ಸೈನಿಕರಿಗೆ ಯಾವ ರೀತಿ ವರ್ತಿಸಬೇಕೆಂಬುದು ಗೊತ್ತೇ ಇಲ್ಲ. ಇಲ್ಲಿ ಇಂದಿನವರೆಗೂ ಮಳೆಯಾಗಿಲ್ಲ, ಬಡವರು ತೀರಾ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಹೊಂದಾಣಿಕೆ ಮಾಡಿಕೊಂಡು ಜನರ ಪ್ರೀತಿಯನ್ನು ಗಳಿಸಿ, ಸ್ವಲ್ಪ ಹಣ ವಸೂಲಿ ಮಾಡಲಾಗಿದೆ. ದೇಸಾಯಿ ಯವರು ಆಸ್ಥಾನಿಕರು ಮೋಸ ಮಾಡಿದರು, ಅಲ್ಲದೆ ಸುಬ್ಬರಾವ್ ಮೊಹಿತೆಯ ಕಾಟದಿಂದ ಜನರ ಮನಸ್ಸಿನಲ್ಲಿ ಭಯ ಹುಟ್ಟಿದೆ. ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡಿದ್ದಾನೆ. ನಮ್ಮ ತಾಲೂಕಿನ ಗಡಿಭಾಗವಾದ ದೊಡ್ಡವಾಡ ಅವನ ವಶದಲ್ಲಿದೆ. ಆದ್ದರಿಂದ ನಮ್ಮ ಸೈನಿಕರು ಹಗಲು-ರಾತ್ರಿ ಬಂದೋಬಸ್ತಿಗಾಗಿ ಪರಿಶ್ರಮಿಸುತ್ತಿದ್ದಾರೆ. ಎಲ್ಲಾ ಪರಾಕ್ರಮ, ಯಶಸ್ಸು ತಮ್ಮ ಅನುಗ್ರಹ ದಿಂದ ಆಗಿದೆ. ಟಿಪ್ಪುವಿನ ಕಡೆಗೆ ಪತ್ರ ಬರೆದರೆ, ಮೊಹಿತೆ ವಾಪಸ್ಸು ಹೋಗಬಹುದು ಅಲ್ಲಿ ನೇಮಿಸಿದ ಸೈನಿಕರನ್ನು ಹಿಂದಕ್ಕೆ ಪಡೆದು ಕೆಲವರನ್ನು ಇಟ್ಟುಕೊಂಡು ಕೆಲವರನ್ನು ವಾಪಸ್ಸು ಕಳುಹಿಸಬಹುದು. ತಾವು ಕಳುಹಿಸಿದ ಹಣವನ್ನು ಸರಿಯಾಗಿ ಪೂರೈಕೆ ಮಾಡಬಹುದು, ನಿಮ್ಮ ಪ್ರಮಾಣಿಕತ, ನಿಮ್ಮ ಆಶೀರ್ವಾದ ನಮಗೆ ಧೈರ್ಯ ತಂದಿದೆ. ತಾವು ನಮ್ಮ ಕೃಪೆ ತೋರಿಸಿ ಹಣ ಕಳುಹಿಸಿದ್ದಕ್ಕೆ ಧನ್ಯವಾದಗಳು. ಆ ದೇವರು ಎಲ್ಲವನ್ನು ಸರಿಪಡಿಸಬಹುದು. ಸಿಡಿಮದ್ದಿನ ಪುಡಿಯನ್ನು ಮೀರಜ್‌ನಿಂದ ತರುವುದಾಗಿ ತೀರ್ಮಾನಿಸಿದ್ದು, ಮಳೆ ಕಡಿಮೆಯಾದ ಬಳಿಕ ಅದನ್ನು ತೆಗೆದುಕೊಂಡು ಬರುತ್ತೇವೆ. ತೇಗೂರನ್ನ ನಮ್ಮ ವಶಕ್ಕೆ ತೆಗೆದುಕೊಳ್ಳುವ ಬಗ್ಗೆ ಈ ಹಿಂದೆಯೇ ಪತ್ರ ಬರೆಯಲಾಗಿತ್ತು, ನಿಮ್ಮಿಂದ ಯಾವ ರೀತಿ ಬರುತ್ತದೆಯೋ ಆ ರೀತಿಯಾಗಿ ಆಜ್ಞೆಯನ್ನು ಅನುಸರಿಸುತ್ತೇನೆ.[೨೪]

ಇಂತಿ ನಿಮ್ಮ ಸೇವಕ

ಸಾರಾಂಶ

ಬಾಬುರಾವ್ ಭಾಸ್ಕರ್ ಪ್ರಾಂತ್ಯಾಧಿಕಾರಿಯಾಗಿ ಕಿತ್ತೂರಿಗೆ ಬಂದಂದಿನಿಂದ ಬರಗಾಲ ಆರಂಭವಾಗಿ ಹಣ ವಸೂಲಿ ಆಗುತ್ತಿಲ್ಲ. ಆದರೂ ಕೂಡಾ ಜನರ ಮನಸ್ಸನ್ನು ಗೆದ್ದು ಎಷ್ಟು ಸಾಧ್ಯವೋ ಅಷ್ಟು ತೆರಿಗೆಗಳನ್ನು ವಸೂಲಿ ಮಾಡಲು ಪ್ರಯತ್ನಿಸುತ್ತಿದ್ದೇನೆ. ಅಲ್ಲದೆ ಟಿಪ್ಪುವಿನ ಸೈನ್ಯ ದೊಡ್ಡವಾಡ ಗ್ರಾಮವನ್ನು ಮುತ್ತಿಗೆ ಹಾಕಿ ಈ ಭಾಗದ ಜನತೆಗೆ ಭಯವನ್ನು ಹುಟ್ಟಿಸಿದ್ದನು. ಆದರೆ ಅವನನ್ನು ಹಿಮ್ಮೆಟ್ಟಿಸಲು ನಾನಾ ಫಡ್ನೀಸ್ ನೀಡಿದ ಸಹಕಾರದಿಂದ ಅವನನ್ನು ಒಳಕ್ಕೆ ಬರದಂತೆ ನೋಡಿಕೊಂಡೆವು ಎಂದು ತಿಳಿಸುತ್ತಾ ತೇಗೂರನ್ನು ಹೇಗೆ ವಶಪಡಿಸಿಕೊಳ್ಳಬೇಕು ನಿಮ್ಮ ಆದೇಶದಂತೆ ನಡೆದುಕೊಳ್ಳುತ್ತೇನೆ ಎಂದು ದಾಖಲಿಸುತ್ತದೆ.

ಪತ್ರದ ಸಂಖ್ಯೆ-೨೫

ಪತ್ರ ಸಿಕ್ಕ ಸ್ಥಳ : ಡೆಕ್ಕನ್ ಕಾಲೇಜು ವಸ್ತುಸಂಗ್ರಹಾಲಯ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ದಿನಾಂಕ - ೧೬/೮/೧೭೮೭

ಉಲ್ಲೇಖ : ರುಮಾಲ್ ನಂ ೭೪

ಈ ಪತ್ರವನ್ನ ಕಿತ್ತೂರು ಪ್ರಾಂತ್ಯಾಧಿಕಾರಿಯಾದ ಬಾಬುರಾವ್ ಭಾಸ್ಕರ್‌ರವರು ತಮ್ಮ ಮೇಲಾಧಿಕಾರಿಯಾದ ನಾನಾ ಫಡ್ನೀಸ್ ಸ್ವಾಮಿಯವರ ಸನ್ನಿಧಿಗೆ ವಿನಂತಿ ಪೂರ್ವಕ ನಮಸ್ಕಾರ ವನ್ನು ತಿಳಿಸುತ್ತಾ, ೧೬/೮/೧೭೮೭ರವರೆಗಿನ ವರ್ತಮಾನವನ್ನು ವಿವರಿಸಿದ್ದಾನೆ.

ಇಲ್ಲಿಯ ವಿಶೇಷವೆನೆಂದರೆ, ಟಿಪ್ಪು ಸುಲ್ತಾನನ ಸೈನಿಕರು ಧಾರವಾಡದ ಈಚೆಗೆ ಬಂದು ವಾಸ್ತವ್ಯ ಮಾಡಿರುತ್ತಾರೆ. ಸರದಾರ ಲಾಲಿ ಸೈಯ್ಯದ್ ಹಮೀದ್, ಬುದ್ರಾ ಜಮಾಲ್ ಖಾನ್ ಮತ್ತು ಸೈಯ್ಯದ್ ಗಫಾರ್ ಎಂಬ ನಾಲ್ಕು ಸರದಾರರು ಸುಮಾರು ೧೦,೦೦೦ಕ್ಕೂ ಹೆಚ್ಚು ಸೈನಿಕರು, ೨೦೦೦ ಕುದುರೆ ಸವಾರರು, ೮ ಜೀಲೆಬಿ ತೋಪುಗಳು, ೧೨ ಸೇರು ತೂಕದ ೧೪ ಫಿರಂಗಿ ತೋಪುಗಳು ಹಾಗೂ ೪ ಸುತಾರ ನಾಲ್ (ಒಂಟೆಯ ಮೇಲೆ ಹೇರಿದ ಫಿರಂಗಿಗಳು). ಹಾಗೂ ೧೦೦ ಒಂಟೆಗಳು ಹೀಗೆ ಸೈನ್ಯವನ್ನು ಕಟ್ಟಿಕೊಂಡು ತೇಗೂರಿನ ಮೇಲೆ ದಾಳಿ ಮಾಡಿ, ನಾಳೆ ಕಿತ್ತೂರಿನ ಕಡೆಗೆ ಬರುವ ವಿಚಾರವಿದೆ. ಅವನ ಸೈನಿಕರು ಹುಬ್ಬಳ್ಳಿಗೆ ಬಂದ ತಕ್ಷಣವೇ ನಮ್ಮ ೨೦ ಜನ ಗುಪ್ತ ದಳದವರನ್ನು ೨೦ ತರಹದ ವೇಷಭೂಷಣ ಹಾಕಿ ಕಳುಹಿಸಿದ್ದೇವು, ಅವರೆಲ್ಲ ನಿನ್ನೆ ರಾತ್ರಿ ವಾಪಸ್ಸು ಬಂದರು. ಟಿಪ್ಪುವಿನ ಕಡೆಯ ಸೈನ್ಯದ ಸಂಖ್ಯೆ ಎಷ್ಟೆಂಬುದನ್ನು ತಿಳಿಸಿದ್ದಾರೆ. ನಮ್ಮ ಸೈನ್ಯದ ಸೈನಿಕರು ಹಾಗೂ ರಾಮಪ್ಪನ ಸೈನಿಕರು ಎಲ್ಲಾ ಕೂಡಿ ಸುಮಾರು ೬೦೦೦ ಕಾಲದಳ ಮತ್ತು ಕುದುರೆ ಸವಾರರು ಅಲ್ಲದೆ ಪುರಂದರ ಹಾಗೂ ಬಲವಂತರಾವ್ ಇವರ ಸೈನಿಕರು ಸುಮಾರು ೭೦೦-೮೦೦ ಜನರನ್ನು ಕೂಡಿಸಿದ್ದೇವೆ. ಆದರೆ ನಮ್ಮಲ್ಲಿ ತೋಪುಗಳಿಲ್ಲ, ಗಜಾನನ ಯಾವ ರೀತಿ ಪ್ರೇರಣೆ ಕೊಡುತ್ತಾನೋ ಆ ರೀತಿಯಲ್ಲಿ ಪ್ರೇರಪಿಸುತ್ತೇವೆ. ಈ ಪತ್ರ ಮುಟ್ಟಿದ ಕೂಡಲೆ ಸೈನಿಕರನ್ನು ಕಳುಹಿಸಿಕೊಡಬೇಕು ಹಾಗೂ ಟಿಪ್ಪುವಿಗೆ ಪತ್ರವನ್ನು ಬರೆಯಬೇಕು. ನಾವು ಹೇಳುವುದು ಸುಳ್ಳಲ್ಲ, ಇಲ್ಲಿಯ ವರ್ತಮಾನ ಸತ್ಯವಾಗಿದೆ. ಪಟವರ್ಧನ ತನ್ನ ಸೈನ್ಯವನ್ನು ಕಳುಹಿಸಿಕೊಡುವರಿದ್ದಾರೆ. ಅವರ ಸೈನ್ಯ ಬಂದರೆ ಮತ್ತಷ್ಟು ಉಪಯೋಗವಾಗುತ್ತದೆ. ವಿಶೇಷ ಮತ್ತೇನು ಇಲ್ಲ ಎಂದು ಬಾಬುರಾವ್ ಭಾಸ್ಕರ್ ತಿಳಿಸಿದ್ದಾನೆ.[೨೫]

ಸಾರಾಂಶ

ಬಾಬುರಾವ್ ಭಾಸ್ಕರ್ ತನ್ನ ೨೦ ಜನ ಗುಪ್ತದಳದವರನ್ನು ಹುಬ್ಬಳ್ಳಿಗೆ ಕಳುಹಿಸಿ, ಕಿತ್ತೂರಿನ ಕಡೆಗೆ ಬರುತ್ತಿರುವ ಟಿಪ್ಪು ಸುಲ್ತಾನನ ಸೈನ್ಯದ ಬಲ ಎಷ್ಟು ಎಂಬುದನ್ನು

ಪತ್ತೆ ಹಚ್ಚಿ ವರದಿ ಮಾಡಿದ್ದಾನೆ. ತನ್ನ ಸೈನ್ಯವನ್ನು ಒಂದುಗೂಡಿಸಿ ಸ್ಥಳೀಯ ಸೈನ್ಯಕರನ್ನು ಒಗ್ಗೂಡಿಸಿ ಟಿಪ್ಪುವಿನ ಸೈನ್ಯದ ಮೇಲೆ ಯುದ್ಧಕ್ಕೆ ಸಿದ್ಧತೆ ಮಾಡಿಕೊಂಡಿರುವುದನ್ನು ಈ ಪತ್ರದಲ್ಲಿ ಕಾಣುತ್ತೇವೆ. ಅಲ್ಲದೆ ದೇವರು ಏನನ್ನು ಪ್ರೇರೆಪಣೆ ಮಾಡುತ್ತಾನೋ ಅದರಂತೆ ಆಗುತ್ತದೆ ಎಂಬು ಮಾತನ್ನು ತಿಳಿಸಿ ಇಲ್ಲಿಯ ವಸ್ತುಸ್ಥಿತಿಯನ್ನು ವರದಿ ಮಾಡಲಾಗಿದೆ.

೫.೩. ಪುಣೆ ರಾಜ್ಯ ಪತ್ರಗಾರ ಇಲಾಖೆಯಲ್ಲಿಸಂಗ್ರಹಿಸಿದ ಮೋಡಿ ದಾಖಲೆಗಳು

ಪತ್ರದ ಸಂಖ್ಯೆ-೨೬

ಪತ್ರ ಸಿಕ್ಕ ಸ್ಥಳ : ರಾಜ್ಯ ಪತ್ರಾಗಾರ ಇಲಾಖೆ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ದಿನಾಂಕ - ೨೩/೪/೧೮೨೪

ಉಲ್ಲೇಖ : ರುಮಾಲ್ ನಂ ೩೨೪

ಈ ಪತ್ರವನ್ನ ಚಿರಂಜೀವಿ ರಾಜಶ್ರೀ ಶ್ರೀನಿವಾಸರಾವ್‌ರವರಿಗೆ ಕೃಷ್ಣರಾವ್ ಹನುಮಂತ ಇವರು ಬರೆದ ಪತ್ರವಾಗಿದೆ. ಇದರಲ್ಲಿ ಕಂಡುಬರುವ ಅಂಶವೆಂದರೆ ಕೃಷ್ಣರಾವ್ ಹನುಮಂತ ರವರ ಮಗ ರಾಜಶ್ರೀ ಶ್ರೀನಿವಾಸರಾವ್ ಆಗಿರಬೇಕೆಂದು ಕಂಡು ಬರುತ್ತದೆ. ಇಲ್ಲಿಯವರೆಗೆ ಕಿತ್ತೂರಕರ್ ದೇಸಾಯಿಯ ಮಾಮ್ಲತದಾರ ಆಗಿರುವ ಕೃಷ್ಣರಾವ್ ಹನುಮಂತ ಬರೆದ ಅಂಶವೆಂದರೆ ಇಲ್ಲಿ ಸೈನಿಕರ ಅಧಿಕಾರದ ಬಗ್ಗೆ ಆದೇಶ ಹೊರಡಿಸಿ ಸನ್ನದನ್ನು ಜಾರಿಗೊಳಿಸ ಬೇಕು...... ಅಸ್ಪಷ್ಟ .... ಆ ಪಟ್ಟಿಯಲ್ಲಿ .... ವಿಷಯವಿದೆ. ಅದು ಹೇಗೆ ಬರೆಯ ಲಾಗಿದೆ ಎಂಬುದನ್ನ ಸವಿಸ್ತಾರವಾಗಿ ಬರೆದು ತಿಳಿಸು ಮತ್ತು ವೀರಭದ್ರರಾವ್ ಇವರ ಹೆಸರಿ ನಲ್ಲಿ ಸರಂಜಾಮುಗಳನ್ನು ಏನನ್ನ ಬರೆಯಲಾಗಿದೆ, ಹಾಗೂ ಅವರಿಗೆ ಯಾವ ರೀತಿಯಲ್ಲಿ ಸನ್ನದನ್ನು ನೀಡಲಾಗಿದೆ ಎಂಬುದನ್ನ ತಿಳಿಸಬೇಕು. ಇಲ್ಲಿ ಪತ್ರ ವ್ಯವಹಾರಗಳನ್ನು ಪೇಪರುಗಳು ಖಾಲಿಯಾಗಿದೆ. ಆದಕಾರಣ ಹತ್ತು ದಸ್ತಿನ ಪೇಪರ್ ಗಂಟನ್ನ ಅಂಚೆಯ ಮೂಲಕ ಕಳಿಸ ಬೇಕು. ಕನಿಷ್ಠ ಎರಡು ದಸ್ತನ್ನಾದರೂ ಅಂಚೆಯ ಮೂಲಕ ಕಳಿಸಿ ಉಳಿದ ಪೇಪರುಗಳನ್ನ ನಾಲ್ಕೈದು ದಿನಗಳ ನಂತರ ಅಂಚೆಯ ಮೂಲಕ ಕಳುಹಿಸಿ ಅದಕ್ಕೆ ಲಕೋಟೆ ಹಚ್ಚಿ ಒಳಗೆ ಲೆಕ್ಕ ಪತ್ರಗಳಿವೆ ಎಂದು ನಮೂದಿಸಿ ಕಳುಹಿಸಬೇಕು. ಉಳಿದ ಎಂಟು ದಸ್ತುಗಳನ್ನ ಅಕಲಕೋಟೆ ವಕೀಲರು ಅಥವಾ ಬೇರೆ ಯಾರಾದರು ಬರುವಾಗ ಕಳುಹಿಸಿಕೊಡಿ. ಆದರೆ, ಎರಡು ದಸ್ತನ್ನು ಮಾತ್ರ ಈ ಪತ್ರ ಮುಟ್ಟಿದ ಕೂಡಲೇ ಕಳುಹಿಸಬೇಕು. ಈ ಮೊದಲು ನಾನು ಪತ್ರ ಬರೆದು ಕಳುಹಿಸಿದ್ದೇ, ಆದರೆ ಇಲ್ಲಿಯವರೆಗೂ ಉತ್ತರ ಬರಲಿಲ್ಲ, ಆದ್ದರಿಂದ ಬೇಗನೆ ಕಳುಹಿಸಿಕೊಡಬೇಕು ಹೆಚ್ಚಿಗೆ ವಿಷಯವಿಲ್ಲ, ಆಶೀರ್ವಾದಗಳು.[೨೬]

ಸಾರಾಂಶ

ಈ ಪತ್ರವು ಚಿರಂಜೀವಿ ರಾಜಶ್ರೀ ಶ್ರೀನಿವಾಸರಾವ್ ಎಂದು ಉಲ್ಲೇಖಿಸಿ ಕೃಷ್ಣರಾವ್ ಹನುಮಂತ ಪತ್ರ ಬರೆದಿದ್ದಾನೆ. ಅಂದರೆ, ಕೃಷ್ಣರಾವ್ ಹನುಮಂತರರಾವ್‌ವರಿಗಿಂತ ಸಣ್ಣವನಿರಬೇಕು. ಈ ಪತ್ರದಲ್ಲಿ ಸನ್ನದನ್ನು ಜಾರಿಗೊಳಿಸಲು ಉಲ್ಲೇಖಿತವಾಗಿದೆ. ತಮಗೆ ಪೇಪರನ ಅವಶ್ಯಕತೆಯಿದೆ ಅದನ್ನು ಅಂಚೆಯ ಮೂಲಕ ಕಳುಹಿಸಿಕೊಡಿ, ಯಾರಾದರೂ ಹೊಡೆದುಕೊಳ್ಳಬಹುದೆಂಬ ಸಂಶಯದಿಂದ ಒಳಗೆ ಲೆಕ್ಕಪತ್ರಗಳಿವೆ ಎಂದು ಲಕೋಟೆಯಲ್ಲಿ ನಮೂದಿಸಬೇಕು ಎಂಬ ಉಲ್ಲೇಖವನ್ನ ಕಾಣುತ್ತೇವೆ. ತಮಗೆ ಅವಶ್ಯಕತೆ ಇರುವಷ್ಟನ್ನೇ ಬೇಗನೆ ಕಳುಹಿಸು, ಉಳಿದ ಪೇಪರಗಳು ನಿಧಾನವಾಗಿ ಬರಲಿ ಎಂಬ ಉಲ್ಲೇಖ ಈ ಪತ್ರದಲ್ಲಿದೆ.

ಪತ್ರದ ಸಂಖ್ಯೆ-೨೭

ಪತ್ರ ಸಿಕ್ಕ ಸ್ಥಳ	: ರಾಜ್ಯ ಪತ್ರಾಗಾರ ಇಲಾಖೆ, ಪುಣೆ
ಭಾಷೆ	: ಮರಾಠಿ ಲಿಪಿ : ಮೋಡಿ ಬರಹ
ಕಾಲ	: ೧೮ನೇ ಶತಮಾನ
ಉಲ್ಲೇಖ	: ಕರ್ನಾಟಕ ಜಮಾವ್ ಆರ್ ನಂ. ೩೨೪

ಸಾರಾಂಶ

ಈ ಪತ್ರದಲ್ಲಿ ಕಿತ್ತೂರಿನ ಚಾರಿಟೇಬಲ್ ಕಮೀಷನರ್ (ಧರ್ಮಾದಾಯ ಅಧಿಕಾರಿಗಳು) ಸರ್ ದೇಸಾಯಿ ಇವರ ಅಧಿಕಾರಿಯ ಅವಧಿಯಲ್ಲಿ ಅನೇಕ ದಿನಗಳಿಂದ ನಡೆದುಕೊಂಡ ಬಂದ ವಿಷಯವನ್ನ ಉಲ್ಲೇಖಿಸಲಾಗಿದೆ. ಟಿಪ್ಪು ಸುಲ್ತಾನನ ಅಧಿಕಾರದ ಅವಧಿಯಲ್ಲಿ ಅವನ ಸಹಾಯಕರು ವಿಚಾರಣೆ ನಡೆಸಿ ಬಹಳ ದಿನಗಳಿಂದ ನಡೆದು ಬಂದ ವ್ಯವಸ್ಥೆಯ ಬಗ್ಗೆ ಸರಕಾರಕ್ಕೆ ತಿಳಿಸಿಕೊಟ್ಟ ಪತ್ರವಾಗಿದೆ. ಕೆಲವು ಕರ್ಯಾತಗಳ ಹೆಸರು ಮತ್ತು ಅವುಗಳ ಆದಾಯದ ಬಗ್ಗೆ ಈ ಪತ್ರದಲ್ಲಿ ಉಲ್ಲೇಖವಾಗಿದೆ.[೨೭]

ಪತ್ರದ ಸಂಖ್ಯೆ-೨೮

ಪತ್ರ ಸಿಕ್ಕ ಸ್ಥಳ	: ರಾಜ್ಯ ಪತ್ರಾಗಾರ ಇಲಾಖೆ, ಪುಣೆ
ಭಾಷೆ	: ಮರಾಠಿ ಲಿಪಿ : ಮೋಡಿ ಬರಹ
ಕಾಲ	: ೧೮ನೇ ಶತಮಾನ
ಉಲ್ಲೇಖ	: ಕರ್ನಾಟಕ ಜಮಾವ್ ಆರ್ ನಂ. ೩೨೪

ಕಿತ್ತೂರು ತಾಲೂಕಿನ ಮಹದಜಿ ಖಂಡೇರಾವ್..... ಅಸ್ಪಷ್ಟ .... ಕಿತ್ತೂರು ತಾಲೂಕಿನ ಮಾಮ್ಲತದಾರ ಅಧಿಕಾರಿಯಾದ ಅಬಾಜಿ ಬಾಬುರಾವ್ ಇವರ ಕಡೆಗೆ ಇದ್ದವು, ಇಲ್ಲಿ ವಸೂಲಿಯಾಗಬೇಕಾದ ಕಂದಾಯದ ಬಗ್ಗೆ ಉಲ್ಲೇಖವಿದೆ. ಯಾವ ಯಾವ ಊರಿನಿಂದ ಎಷ್ಟು

ಆದಾಯ ಬರಬೇಕೆಂಬುದು ಈ ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಈ ಪತ್ರವು ಜಮೀನ್ದಾರ ಮತ್ತು ಪಾಟೀಲ ಕುಲಕರ್ಣಿ ಇವರು ರೈತರಿಗೆ ಕೊಡುವ ಕಿರುಕುಳದ ಬಗ್ಗೆ ಉಲ್ಲೇಖವಾಗಿದೆ. ಇಲ್ಲಿ ವಸೂಲಾದ ಹಣದ ಜಮಾ-ಖರ್ಚಿನ ಲೆಕ್ಕವನ್ನು ಕೂಡಾ ಈ ಪತ್ರದಲ್ಲಿ ಕಾಣುತ್ತೇವೆ.[೨೮]

ಪತ್ರದ ಸಂಖ್ಯೆ-೨೯

ಪತ್ರ ಸಿಕ್ಕ ಸ್ಥಳ : **ರಾಜ್ಯ ಪತ್ರಾಗಾರ ಇಲಾಖೆ, ಪುಣೆ**

ಭಾಷೆ : **ಮರಾಠಿ ಲಿಪಿ : ಮೋಡಿ ಬರಹ**

ಕಾಲ : **೧೮ನೇ ಶತಮಾನ**

ಉಲ್ಲೇಖ : **ಕರ್ನಾಟಕ ಜಮಾವ್ ಆರ್ ನಂ. ೩೨೪**

ಈ ಪತ್ರದಲ್ಲಿ ಕಿತ್ತೂರು ತಾಲೂಕಿನ ಆಸ್ತಿಗಳು ಮಾಮ್ಲತದಾರನಾದ ಅಬಾಜಿ ಬಾಬು ರಾವ್ ಕಡೆಗೆ ಇತ್ತು. ಅದನ್ನು ಅವರಿಂದ ಬಿಡಿಸಿಕೊಂಡು.......... ಅಸ್ಪಷ್ಟ.......... ಇವರಿಗೆ ಕೊಡಲಾಗಿದೆ. ಇದರ ಬಾಬತ್ತು........... ಸನ್ನದನ್ನು ಮತ್ತು ಪತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಪತ್ರದ ಪ್ರಕಾರ........ ಇವರಿಗೆ ಕಿತ್ತೂರಿನ ಮಾಮ್ಲತನ್ನ ನೀಡಲಾಗಿದೆ. ಈ ಪ್ರಾಂತ್ಯವನ್ನ ಅತ್ಯಂತ ಪ್ರಮಾಣಿಕತನದಿಂದ ಕೆಲಸ ಮಾಡಿ ಜಮಾ ಖರ್ಚುಗಳು ಯಾವ ರೀತಿ ವಸೂಲಿ ಯಾಗುತ್ತದೆಯೋ ಹಾಗೂ ಸಿಬ್ಬಂಧಿಗಳನ್ನ, ಕಾರಕೂನರ ಖರ್ಚು-ವೆಚ್ಚವನ್ನು ತೆಗೆದು ಉಳಿದಿದ್ದನ್ನು ಕೊಟ್ಟು ಅವರ ಕಡೆಯಿಂದ ಬರೆಸಿಕೊಳ್ಳಬೇಕು. ಮಹಲಿನಿಂದ ಬರಬೇಕಾದ ಹಣವಿದ್ದರೆ, ಅದನ್ನು ಬರೆದಿಟ್ಟುಕೊಳ್ಳಬೇಕು.

ಸದಾಶಿವವಿಷ್ಣು ಮತ್ತು ಅಬಾಜಿ ಬಾಬುರಾವ್ ಇವರಿಗೆ........ ಅಸ್ಪಷ್ಟ..........ಅಬಾಜಿ ಬಾಬುರಾವ್ ಇವರ ಅಧಿಕಾರವನ್ನ ದೂರ ಮಾಡಿ ಆ ವರ್ಷದ ಅಧಿಕಾರವನ್ನ..........ಇವರಿಗೆ ಕೊಡಲಾಗಿದೆ. ಜಮೀನು ಮತ್ತು ಠಾಣೆಗಳನ್ನ ನಿಮ್ಮ ವಶದಲ್ಲಿಟ್ಟುಕೊಳ್ಳಬೇಕು. ನಿಮ್ಮ ಸಿಬ್ಬಂದಿ ಮತ್ತು ಕಾರಕೂನರ ಖರ್ಚನ್ನ ತಿಳಿಸಬೇಕು. ಅವುಗಳ ಖರ್ಚನ್ನು ತೆಗೆದು ಉಳಿದ ಬಾಕಿ ಹಣವನ್ನು ಕಮಾವಿಸದಾರರ ಕಡೆಗೆ ಕೊಟ್ಟು ನೊಂದಾಯಿಸಬೇಕು ಎಂದು ಸನ್ನದನ್ನ ಬರೆಯ ಲಾಗಿದೆ. ಅಲ್ಲದೇ ತಾಲೂಕಿನ ಜಮಿನ್ದಾರರಿಗೆ ಈ ಪತ್ರವನ್ನ ಕಳುಹಿಸಿ, ಅಧಿಕಾರವನ್ನು ನೀವೇ ತೆಗೆದುಕೊಂಡು............. ಎಂಬುವರಿಗೆ ನೀವೇ ವಹಿಸಬೇಕು ಎಂಬ ಉಲ್ಲೇಖವಿದೆ.[೨೯]

ಸಾರಾಂಶ

ಸನದ್ದನ್ನು ವಶಪಡಿಸಿಕೊಂಡದ್ದನ್ನು ದಾಖಲಿಸಿದೆ. ಅಧಿಕಾರ ವರ್ಗಾವಣೆ ಮಾಡಿದ್ದನ್ನು ಉಲ್ಲೇಖ ದಾಖಲಿಸಿದೆ.

ಪತ್ರದ ಸಂಖ್ಯೆ-೩೦

ಪತ್ರ ಸಿಕ್ಕ ಸ್ಥಳ : ರಾಜ್ಯ ಪತ್ರಾಗಾರ ಇಲಾಖೆ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ೧೮ನೇ ಶತಮಾನ

ಉಲ್ಲೇಖ : ಕರ್ನಾಟಕ ಜಮಾವ್ ಆರ್ ನಂ. ೩೨೪

ಈ ಪತ್ರವು ಕಿತ್ತೂರು ಪ್ರಾಂತ್ಯದ ಕರಿಯಾತ್ ನೇಸರ್ಗಿಗೆ ಸಂಬಂಧಿಸಿದ ಹೊಸಕೋಟೆ ಮತ್ತು ಹಣಬರಹಟ್ಟಿ ಗ್ರಾಮಕ್ಕೆ ಸಂಬಂಧಿಸಿದೆ. ಈ ಎರಡು ಗ್ರಾಮಗಳು ಮಹಿಪತ್‌ರಾವ್ ವಿಶ್ವನಾಥ ಇವರ ಕಡೆಗೆ ಬಹಳ ವರ್ಷಗಳಿಂದ ಇದ್ದವು. ಆದರೆ ಈ ವರ್ಷ ಈ ಎರಡೂ ಊರುಗಳನ್ನು ಟಿಪ್ಪುವಿನ ಸೈನ್ಯವು ವಶಪಡಿಸಿಕೊಂಡಿತು. ಅದನ್ನು ವಾಪಸ್ಸು ಪಡೆದು ನಮ್ಮ ಸರ್ಕಾರಕ್ಕೆ ಒಪ್ಪಿಸುವ ಸಲುವಾಗಿ ಈ ಪತ್ರವನ್ನ ಬರೆಯಲಾಗಿದೆ. ಮಹಿಪತ್‌ರಾವ್ ವಿಶ್ವನಾಥ ಇವರ ಕಡೆಗೆ ಹಂದೂರ ಗ್ರಾಮದ ಅಧಿಕಾರವನ್ನು ನೀಡಲಾಗಿದೆ. ಆದರೆ ಆ ಭೂಮಿಯನ್ನು ವಶಪಡಿಸಿಕೊಂಡು ಅದರ ಕಬ್ಜಾ ಸರ್ಕಾರವು ಪಡೆಯಬೇಕೆಂದು ಚಿಂತೋವಿಶ್ವನಾಥ ಇವರಿಗೆ ಬರೆದ ಪತ್ರವಾಗಿದೆ.

ಹಂದೂರು ಊರಿನ ಅಧಿಕಾರವನ್ನು ಪಾಚಾಪುರ ಕಡೆಗೆ ತಮ್ಮ ಆದೇಶದಂತೆ ಕೊಡಲಾಗಿದೆ. ಆದರೂ ಇಲ್ಲಿಯವರೆಗೆ ಅಲ್ಲಿಯ ವಸೂಲಿ, ಸಿಬ್ಬಂದಿಯ ಖರ್ಚು ಇವುಗಳನ್ನು ಮಾಡಿ ಉಳಿದ ಹಣವನ್ನು ಸರ್ಕಾರಕ್ಕೆ ಪಾವತಿಸಬೇಕು. ಸಿಬ್ಬಂದಿಯ ಖರ್ಚು ಹೆಚ್ಚಾದಲ್ಲಿ ಮಹಿಪತ್ ರಾವ್ ವಿಶ್ವನಾಥ ಸರ್ಕಾರದಿಂದ ಪಡೆದು ಪಾವತಿಸಬೇಕಿತ್ತು, ಇದರ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಆದ್ದರಿಂದ ಮಹಿಮಪತ್‌ರಾವ್ ವಿಶ್ವನಾಥ ಇವರ ಕಡೆಯ ಭೂಮಿಯನ್ನು ವಾಪಸ್ಸು ಪಡೆದುಕೊಂಡು ಚಿಂತೋವಿಶ್ವನಾಥ ಇವರ ಹೆಸರಿನಲ್ಲಿ ಸನ್ನದನ್ನು ಹೊರಡಿಸಬೇಕೆಂದು ವಿನಂತಿಸುತ್ತೇವೆ.[೩೦]

ಸಾರಾಂಶ

ಆದರೆ ಮಹಿಪತ್ ರಾವ್ ವಿಶ್ವನಾಥ ನೇಸರ್ಗಿ ಪ್ರಾಂತ್ಯದ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದು, ಆತನಿಂದ ಪ್ರಾಂತ್ಯವನ್ನು ವಾಪಸ್ಸು ಪಡೆದು ಚಿಂತೋವಿಶ್ವನಾಥ ಇವರ ಹೆಸರಿನಲ್ಲಿ ಸನ್ನದನ್ನು ಹೊರಡಿಸಬೇಕೆಂಬ ಉಲ್ಲೇಖವಿದೆ. ಕೆಳಭಾಗದಲ್ಲಿ ಉರ್ದು ಮಾಸವಾದ ಚ.೧೭ ರಜ್ಜಬ್ (ವೈಶಾಖ ಮಾಸ) ಎಂಬ ಉಲ್ಲೇಖವಿದೆ.

ಪತ್ರದ ಸಂಖ್ಯೆ-೩೧

ಪತ್ರ ಸಿಕ್ಕ ಸ್ಥಳ : ರಾಜ್ಯ ಪತ್ರಾಗಾರ ಇಲಾಖೆ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ೧೮ನೇ ಶತಮಾನ

ಉಲ್ಲೇಖ : ಕರ್ನಾಟಕ ಜಮಾವ್ ಆರ್ ನಂ. ೩೨೪

ಈ ಪತ್ರವನ್ನು ಪುರುಷೋತ್ತಮ ಕೃಷ್ಣ ಇವರ ತಂದೆಯಾದ ಕೃಷ್ಣಾಜಿ ಸದಾಶಿವರಾವ್ ಇವರ ಕಡೆಗೆ ಕಿತ್ತೂರಿನ ಅಧಿಕಾರ ನೀಡಲಾಗಿತ್ತು. ಇವರ ತಂದೆ ತೀರಿಕೊಂಡಿರುವುದರಿಂದ ಕೃಷ್ಣಾಜಿ ಸದಾಶಿವರಾವ್ ಹೆಸರನ್ನು ಕಡಿಮೆ ಮಾಡಿ ಗಣಪತರಾವ್ ರಾಮಚಂದ್ರರಾವ್ ಎಂಬುವರ ಹೆಸರಿನಲ್ಲಿ ಸನ್ನದನ್ನು ನೀಡಲಾಗಿತ್ತು. ಅವರು ತಾಲೂಕಿಗೆ ಅಧಿಕಾರವನ್ನು ವಹಿಸಿಕೊಡಲು ಬಂದಾಗ ಪುರುಷೋತ್ತಮ ಕೃಷ್ಣ ಅಧಿಕಾರವನ್ನು ಬಿಟ್ಟು ಕೊಡಲಿಲ್ಲ. ಏಕೆಂದರೆ ಕೃಷ್ಣಾಜಿ ಸದಾಶಿವರಾವ್ ತೀರಿಕೊಂಡ ಬಳಿಕ ಆತನ ಮಗ ಪುರುಷೋತ್ತಮ ಕೃಷ್ಣ ಈ ಕೆಲಸವನ್ನು ಮುಂದುವರಿಸಿದ್ದಾನೆ. ಅಲ್ಲದೆ ಅಧಿಕಾರವನ್ನು ನಡೆಸಲು ಒಪ್ಪಿಕೊಂಡಿದ್ದಾನೆ. ಆದ್ದರಿಂದ ಗಣಪತರಾವ್ ರಾಮಚಂದ್ರರಾವ್ ಇವರ ಹೆಸರಿನಲ್ಲಿ ಹೊರಡಿಸಲಾದ ಸನ್ನದನ್ನು ರದ್ದುಗೊಳಿಸಿ ಪುರೋಷತ್ತಮ ಕೃಷ್ಣ ಇವರ ಹೆಸರಿನಲ್ಲಿ ಅಧಿಕಾರವನ್ನು ಮುನ್ನೆಡೆಸಲು ಅವಕಾಶ ನೀಡಬೇಕೆಂದು ಹಾಗೂ ಸರ್ಕಾರಕ್ಕೆ ಹಣ ಜಮಾ ಮಾಡಲು ಒಪ್ಪಿಗೆ ಸೂಚಿಸಿ, ಆದೇಶ ಮಾಡಬೇಕು. ಅಲ್ಲದೆ........ ಅಸ್ಪಷ್ಟ...... ಇವರಿಂದ ೧೦,೦೦೦ ರೂಪಾಯಿ ಜಮಾ ಮಾಡಲಾಗಿದೆ.

ಇನ್ನೊಂದು ಪತ್ರ ಇದೇ ಕ್ರಮ ಸಂಖ್ಯೆಯಲ್ಲಿದ್ದು, ಕಿತ್ತೂರು ತಾಲೂಕಿನ ಸುಮಾರು ೨೫ ಗ್ರಾಮಗಳನ್ನು ಕೃಷ್ಣಾಜಿ ಸದಾಶಿವ ಇವರ ಅಧಿಕಾರದಲ್ಲಿ ನಡೆಯುತ್ತಿದ್ದವು. ಇವರು ತೀರಿಕೊಂಡ ಬಳಿಕ ಗಣಪತರಾವ್ ರಾಮಚಂದ್ರರಾವ್ ಇವರ ಕಡೆಯಿಂದ ೧೫,೦೦೦ ರೂಪಾಯಿ ಜಮಾ ಮಾಡಿಸಿ ಈ ಪ್ರಾಂತ್ಯದ ಆಡಳಿತದ ಅಧಿಕಾರವನ್ನು ನಡೆಸಲು ಅನುಮತಿ ನೀಡಲಾಯಿತು. ಅವನಿಗೆ ಪ್ರತಿವರ್ಷ ವಸೂಲಿ ಮಾಡಿ ಸರ್ಕಾರಕ್ಕೆ ಜಮಾ ಮಾಡಬೇಕು ಎಂಬ ಆದೇಶವನ್ನು ಸನ್ನದಿನ ಮೂಲಕ ಕೊಡಲಾಯಿತು. ಆದರೆ ಈ ಕೆಲಸ ಆಗಲಿಲ್ಲ, ಏಕೆಂದರೆ ಕೃಷ್ಣಾಜಿ ಸದಾಶಿವ ಸತ್ತಾಗಿನಿಂದ ಆತನ ಮಗ ಪುರುಷೋತ್ತಮ ಕೃಷ್ಣಾ ಅಧಿಕಾರವನ್ನು ನೋಡುತ್ತಿದ್ದಾನೆ ಮತ್ತು ಹಣ ವಸೂಲಿ ಮಾಡಲು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಗಣಪತರಾವ್ ರಾಮಚಂದ್ರರಾವ್ ಇವರ ಹೆಸರಿನಲ್ಲಿ ಬರೆಯಲಾದ ಸನ್ನದನ್ನು ವಜಾಗೊಳಿಸಿ, ಪುರುಷೋತ್ತಮ ಕೃಷ್ಣಾ ಇವರ ಹೆಸರಿನಲ್ಲಿ ಸನ್ನದನ್ನು ಹೊರಡಿಸಲಾಗಿದೆ. ಈ ವಿಷಯದ ಬಗ್ಗೆ ಆದೇಶಿಸಲಾಗಿದೆ.[೩೧]

ಸಾರಾಂಶ

ಕೃಷ್ಣಾಜಿ ಸದಾಶಿವ ತೀರಿಕೊಂಡ ಬಳಿಕ ಕಿತ್ತೂರಿನ ಅಧಿಕಾರವನ್ನು ಗಣಪತರಾವ್ ರಾಮಚಂದ್ರ ರಾವ್‌ರಿಗೆ ಅಧಿಕಾರ ನೀಡಲಾಯಿತು. ಆದರೆ ಕೃಷ್ಣಾಜಿ ಸದಾಶಿವ ಇವರ ಮಗ ಪುರುಷೋತ್ತಮ ಕೃಷ್ಣಾ ತಾನೇ ತಂದೆಯ ಅಧಿಕಾರವನ್ನು ಮರಣಾನಂತರ ಮುನ್ನಡೆಸಿಕೊಂಡು ಬಂದಿರುವುದರಿಂದ ಪುಣೆಯ ಅಧಿಕಾರಿಗಳು ಮತ್ತೊಂದು ಸನ್ನದನ್ನು ಹೊರಡಿಸಿ ಪುರುಷೋತ್ತಮ ಕೃಷ್ಣಾ ಹೆಸರಿನಲ್ಲಿ ಹೊರಡಿಸಿದ ಪತ್ರವಾಗಿದೆ. ಈ ಪತ್ರದ ಕಡೆಯ ಸಾಲಿನಲ್ಲಿ ಪರ್ಶಿಯನ್ ಭಾಷೆಯ ಉಲ್ಲೇಖವಿದೆ.

ಪತ್ರದ ಸಂಖ್ಯೆ-೩೨

ಪತ್ರ ಸಿಕ್ಕ ಸ್ಥಳ : ರಾಜ್ಯ ಪತ್ರಾಗಾರ ಇಲಾಖೆ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ೧೮ನೇ ಶತಮಾನ

ಉಲ್ಲೇಖ : ಕರ್ನಾಟಕ ಜಮಾವ್ ಆರ್ ನಂ. ೩೨೪

ಈ ಪತ್ರವನ್ನು ಕಿತ್ತೂರಿನ ಪ್ರಾಂತ್ಯಾಧಿಕಾರಿಯಾದ ಆನಂದರಾವ್ ರಾಮಚಂದ್ರ ಇವರ ಅಧಿಕಾರವನ್ನು ಕೊನೆಗೊಳಿಸಿ, ಇವರ ಸ್ಥಾನದಲ್ಲಿ ಗೋವಿಂದರಾವ್ ಸಖದೇವ ಇವರ ಕಡೆಗೆ ಅಧಿಕಾರವನ್ನು ಹಸ್ತಾಂತರಿಸುವ ಸನ್ನದು ಪತ್ರವಾಗಿದೆ. .... ಅಸ್ಪಷ್ಟ .... ಆನಂದ ರಾವ್ ರಾಮಚಂದ್ರ ಇವರಿಗೆ ಈಗಾಗಲೇ ನೀಡಲಾದ ಸನ್ನದನ್ನು ಕಡಿಮೆಮಾಡಿ ಆ ಸ್ಥಾನದಲ್ಲಿ ಗೋವಿಂದರಾವ್ ಸಖದೇವ ಪ್ರಾಂತ್ಯದ ಆಡಳಿತವನ್ನು ನೋಡಿಕೊಳ್ಳಬೇಕು ಮತ್ತು ಅಧಿಕಾರ ವನ್ನು ತನ್ನ ವಶಕ್ಕೆ ತೆಗೆದುಕೊಳ್ಳಬೇಕೆಂದು ಈ ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಆನಂದರಾವ್ ರಾಮಚಂದ್ರ ಈಗಾಗಲೇ ವಾರ್ಷಿಕ ಕಂದಾಯವನ್ನು ಪಡೆದುಕೊಂಡಿದ್ದರೆ ಅವರ ಖರ್ಚು ವೆಚ್ಚ ವನ್ನು ಕಳೆದು ಉಳಿದ ಹಣವನ್ನು ಗೋವಿಂದರಾವ್ ಸಖದೇವ ಇವರ ಕಡೆಗೆ ನೀಡಬೇಕು. ಆಕಸ್ಮಾತ್ ವಸೂಲಿಗಿಂತ ಖರ್ಚಿನ ಭಾಗವೇ ಹೆಚ್ಚಾಗಿದ್ದರೆ ನೀವು ಗೋವಿಂದರಾವ್ ಸಖದೇವ ರಿಂದ ಪಡೆದುಕೊಂಡು ಸರಕಾರದಿಂದ ಬಾಕಿ ಬರಬೇಕಾಗಿದೆ ಎಂದು ಪತ್ರವನ್ನು ಹಾಕಬೇಕೆಂದು ಬರೆದ ಸನ್ನದು ಪತ್ರವಾಗಿದೆ.[೩೨]

ಪತ್ರದ ಸಂಖ್ಯೆ-೩೩

ಪತ್ರ ಸಿಕ್ಕ ಸ್ಥಳ : ರಾಜ್ಯ ಪತ್ರಾಗಾರ ಇಲಾಖೆ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ೧೮ನೇ ಶತಮಾನ

ಉಲ್ಲೇಖ : ಕರ್ನಾಟಕ ಜಮಾವ್ ಆರ್ ನಂ. ೩೨೪

ಈ ಪತ್ರದ ಮೇಲ್ಭಾಗದಲ್ಲಿ ರಾಜಮುದ್ರೆಯಿದ್ದು, ರಾಜ್ಯಮಾನ್ಯ ರಾಜಶ್ರೀ ಸಖರಾಮ್ ತ್ರಯಂಬಕ ಗೋಸಾವಿ ಇವರಿಗೆ ಸಿದ್ದೇಶ್ವರ ಮಹಿಪತ್‌ರಾವ್ ಮಾಡುವ ನಮಸ್ಕಾರಗಳು ಎಂದು ಮೊದಲ ಸಾಲಿನಲ್ಲಿ ಉಲ್ಲೇಖವಾಗಿದೆ. ಈ ಪತ್ರದ ವಿಶೇಷವೆನೆಂದರೆ, ಈಗಾಗಲೇ ಕಿತ್ತೂರ ತಾಲೂಕಿನ ಅಧಿಕಾರವನ್ನು ಅಬಾಜಿ ಬಾಬುರಾವ್ ಇವರ ಕಡೆಗೆ ವಹಿಸಲಾಗಿತ್ತು, ಆದರೆ, ಇದೇ ವರ್ಷ ಈ ಅಧಿಕಾರವನ್ನು ಕಡಿಮೆ ಮಾಡಿ ರಾಜಶ್ರೀ ಮಹಾದಜಿ ಖಂಡೇರಾವ್ ಇವರಿಗೆ ವಹಿಸಲಾಗಿದೆ. ಇವರಿಗೆ ಹಣಬರಹಟ್ಟಿ, ಹೊಸಕೋಟೆ, ಕರಿಯಾತ ನೇಸರ್ಗಿ ಈ ಭಾಗದ ಕಂದಾಯ, ಗಡಿ ಸುಂಕ, ಗಣಾಚಾರಿಕೆ ಹಾಗೂ ಇನ್ನಿತರ ಕಂದಾಯವನ್ನು ವಸೂಲಿ ಮಾಡುವ

ವಿಷಯವನ್ನು ತಿಳಿಸಲಾಗಿದೆ. ಸರಕಾರಕ್ಕೆ ಏನು ಜಮಾ ಆಗುತ್ತದೆಯೊ ಅವುಗಳನ್ನು ಚಾಚು ತಪ್ಪದೇ ಸಲ್ಲಿಸಬೇಕು ಎಂದು ಈ ಸನ್ನದಿನ ಮೂಲಕ ಸಾದರಪಡಿಸಲಾಗಿದೆ. ಆದರೆ ಹಂದೂರ ಗ್ರಾಮದ ಕಂದಾಯ ವಸೂಲಿ ವ್ಯವಸ್ಥೆಯನ್ನು ಹಿಂದಿನಂತಯೇ ನಡೆದುಕೊಂಡು ಬಂದಿದೆ. ಅದನ್ನು ವಸೂಲಿ ಮಾಡಿ ಸರಕಾರದಲ್ಲಿ ಜಮಾ ಮಾಡಬೇಕೆಂದು ಉಲ್ಲೇಖಿಸಲಾಗಿದೆ. ಕಡೆಯ ಸಾಲಿನಲ್ಲಿ ಪರ್ಶಿಯನ್ ಪದಗಳಿರುವ ಒಂದು ಸಾಲು ಇದ್ದು, ಇದು ಮಹಾದಜಿ ಖಂಡೇರಾವ್‌ರವರಿಗೆ ನೀಡಿದ ಸನ್ನದು ಎಂದು ತಿಳಿದು ಬರುತ್ತದೆ.[೩೩]

ಪತ್ರದ ಸಂಖ್ಯೆ-೩೪

ಪತ್ರ ಸಿಕ್ಕ ಸ್ಥಳ : ರಾಜ್ಯ ಪತ್ರಾಗಾರ ಇಲಾಖೆ, ಪುಣೆ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ೧೮ನೇ ಶತಮಾನ

ಈ ಪತ್ರದ ಮೇಲ್ಭಾಗದಲ್ಲಿ ರಾಜಮುದ್ರೆ ಇದ್ದು, ಇದನ್ನು ಆಜ್ಞಾ ಪತ್ರವೆಂದು ಘೋಷಿಸಲಾಗಿದೆ. ರಾಜಶ್ರೀ ಪಂತ ಪ್ರಧಾನ ಇವರು ಹೊರಡಿಸಿದ ಆದೇಶವಾಗಿದ್ದು, ಕಿತ್ತೂರ ತಾಲೂಕಿನ ಪುಟಗಾಂವ ಕರಿಯಾತಿನ ಇಟಗಿ, ಪುಟಗಾಂವ ಕರಿಯಾತಿನ ದೇವರ ಶೀಗಿಹಳ್ಳಿ, ಪುಟಗಾಂವ ಕರಿಯಾತಿನ ಗಂಧಿಗವಾಡ, ಹಾಗೂ ಕಾದರವಳ್ಳಿ ಕರಿಯಾತಿನ ಹೊಸೂರು ಗ್ರಾಮದ ಅಧಿಕಾರವನ್ನು ಕಲ್ಲಪ್ಪ ವೀರನಗೌಡ ದೇಸಾಯಿ ಇವರ ಕಡೆಗೆ ನೀಡಲಾಗಿತ್ತು. ಆದರೆ ಈ ವರ್ಷದಿಂದ ಮಹಾದಜಿ ಖಂಡೇರಾವ್ ಇವರಿಗೆ ಅಧಿಕಾರ ನೀಡಿ ಆದೇಶಿಸಿ ನೀಡಿದ ಸನ್ನದು ಪತ್ರವಾಗಿತ್ತು.[೩೪]

ಸಾರಾಂಶ

ಒಟ್ಟು ನಾಲ್ಕು ಪತ್ರಗಳಿದ್ದು, ಇದರಲ್ಲಿ ಮೂರು ಪತ್ರಗಳು ಪುಟಗಾಂವ ಕರಿಯಾತಿಗೆ ಸೇರಲ್ಪಟ್ಟಿದ್ದು, ಒಂದು ಪತ್ರ ಮಾತ್ರ ಕರಿಯತ ಕಾದರವಳ್ಳಿಗೆ ಸೇರಿದೆ. ಈ ನಾಲ್ಕು ಪತ್ರಗಳ ಕ್ರಮಸಂಖ್ಯೆಗಳು ವ್ಯತ್ಯಾಸವನ್ನು ಕಾಣಬಹುದು. ಆದರೆ ಇದರಲ್ಲಿ ಅಡಕವಾದ ಅಂಶವೆಂದರೆ ಕಲ್ಲಪ್ಪ ವೀರನಗೌಡ ದೇಸಾಯಿಯವರಿಂದ ಅಧಿಕಾರವನ್ನು ಕಡಿತಗೊಳಿಸಿ ಮಹಾದಜಿ ಖಂಡೇರಾವ್ ಇವರಿಗೆ ಅಧಿಕಾರ ಹಸ್ತಾಂತರಿಸಿದ ಸನ್ನದಾಗಿರುತ್ತದೆ. ಅಲ್ಲದೆ ಕೆಳಭಾಗದಲ್ಲಿ ಚ.೯ ಮೊಹರಂ ಎಂಬ ಉಲ್ಲೇಖ ಕಂಡುಬರುತ್ತದೆ.

೫.೪. ಪುಣೆ ಭಾರತೀಯ ಇತಿಹಾಸ ಸಂಶೋಧನೆಯ ಮಂಡಳಿಯಲ್ಲಿ ಸಂಗ್ರಹಿಸಿದ ಮೋಡಿ ದಾಖಲೆಗಳು

ಪತ್ರದ ಸಂಖ್ಯೆ-೩೫

ಪತ್ರ ಸಿಕ್ಕ ಸ್ಥಳ : ಭಾರತೀಯ ಇತಿಹಾಸ ಸಂಶೋಧನೆ ಮಂಡಳ, ಪುಣೆ

ಭಾಷೆ : ಮರಾಠಿ

ಕಾಲ : ೯/೫/೧೮೦೫

ಉಲ್ಲೇಖ : ೭೦೫೯ ಪ.ಸಂ.

ಈ ಪತ್ರವನ್ನು ಹಿಂದೂ ಮರಾಠ ದಾಖಲೆಗಳು ಎಂಬ ಪುಸ್ತಕದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಪತ್ರವು ಯಶವಂತ್‌ರಾವ್ ಪಟವರ್ಧ ಇವರು ನೇಗಿನಹಾಳದಿಂದ ಮೀರಜ್‌ಗೆ ಬರೆದ ಪತ್ರವಾಗಿದೆ. ಕಿತ್ತೂರಕರ ದೇಸಾಯಿ ಇವರ ಕಡೆಯಿಂದ ಮಾತುಕತೆ ನಡೆಸಲು ತಮ್ಮ ಬಳಿಗೆ ವೀರಸಂಗಪ್ಪ ಮತ್ತು ರಾಜಶ್ರೀ ವೆಂಕಟರಾವ್ ಇಬ್ಬರು ಬಂದಿದ್ದಾರೆ. ಇಲ್ಲಿ ಮಾತುಕತೆ ನಡೆಯುತ್ತದೆ. ಆ ಸಂದರ್ಭದಲ್ಲಿ ನೇಗಿನಹಾಳದಿಂದ ಸೈನಿಕರು ಓಡಿ ಹೋಗಿದ್ದಾರೆ. ಇಲ್ಲಿನ ಸೈನಿಕರು ಊರಿಗೆ ಹೋಗಿದ್ದಾರೆ ಎಂಬ ಸುದ್ದಿಯನ್ನು ತನ್ನ ತಂದೆಯವರು ಬರೆದಿದ್ದಾರೆ ಎಂದು ಉಲ್ಲೇಖವಿದೆ.[೩೫]

ಸಾರಾಂಶ

ಕಿತ್ತೂರಿನ ಮಲ್ಲಸರ್ಜನನ ಆಸ್ಥಾನಿಕರಾದ ವೀರಸಂಗಪ್ಪ ಮತ್ತು ರಾಜಶ್ರೀ ವೆಂಕಟ ರಾವ್ ಇವರು ಯಶವಂತರಾವ್ ಪಟವರ್ಧನನ ಜೊತೆಗೆ ಮಾತುಕತೆ ನಡೆಸಲು ನೇಗಿನಹಾಳ ದಲ್ಲಿ ಸೇರಿದ ಬಗ್ಗೆ ಉಲ್ಲೇಖವಿದೆ.

ಪತ್ರದ ಸಂಖ್ಯೆ-೩೬

ಪತ್ರ ಸಿಕ್ಕ ಸ್ಥಳ : ಭಾರತೀಯ ಇತಿಹಾಸ ಸಂಶೋಧನೆ ಮಂಡಳ, ಪುಣೆ

ಭಾಷೆ : ಮರಾಠಿ

ಉಲ್ಲೇಖ : ೮೨೫೩-೫೪ ಪ.ಸಂ.

ಕಾಲ : ೯/೫/೧೮೦೫

ಈ ಪತ್ರವನ್ನು ರಾಜಶ್ರೀ ಕಾಕಾ ಸಾಹೇಬರ ಪುತ್ರನಾದ ಚಿಂತಾಮಣಿಯವರು ತಮ್ಮ ತಂದೆಗೆ ಬರೆದ ಪತ್ರವಾಗಿದೆ. ಇಲ್ಲಿಯ ವಿಶೇಷವೆನೆಂದರೆ, ನೇಗಿನಹಾಳಕ್ಕೆ ಬಂದಾಗ ಇಲ್ಲಿ ಯುದ್ಧದ ಬಗ್ಗೆ ಪತ್ರವನ್ನು ಕಳುಹಿಸಿದ್ದನು. ಇದು ಬಂದು ತಲುಪಿರಬೇಕು, ನಾನು ನೇಗಿನ ಹಾಳದಲ್ಲಿಯೇ ಇದ್ದೇನೆ. ಆಗ ಕಿತ್ತೂರಕರ ದೇಸಾಯಿ ಜನರು ಮಾತುಕತೆಗಾಗಿ ನೇಸರ್ಗಿ ಮತ್ತು ಸಂಪಗಾಂವದಿಂದ ಎರಡು ಸಲ ನಾವಿದ್ದಲ್ಲಿಗೆ ಬಂದರು, ಏನೂ ನಿರ್ಣಯವಾಗದೆ ವಾಪಸ್ಸು ಮರಳಿ ಹೋದರು. ನಂತರ ಯುದ್ಧ ಆರಂಭಿಸಿ ನೇಗಿನಹಾಳದ ಸಮೀಪ ಹೋಗಿದ್ದಾರೆ. ಅವರಲ್ಲಿ ಸುಮಾರು ೩೦೦-೪೦೦ ಜನ ಇದ್ದರು. ಆಗ ಮಾತುಕತೆ ಮಾಡುವವರು ಬಂದು ಸುಖೋಪಂತ ಕಾಳೆಯವರನ್ನು ಕರೆದುಕೊಂಡು ಹೋದರು. ದೇಸಾಯಿ ಕಡೆಯ ಆಸ್ಥಾನಿಕರಾದ ವೆಂಕಾಜಿ ರಾಮಚಂದ್ರ ಹಾಗೂ ವೀರಸಂಗಪ್ಪ ಇವರನ್ನು ಕರೆದುಕೊಂಡು ಮೊನ್ನೆ ಇಲ್ಲಿಗೆ ಬಂದಿದ್ದಾರೆ. ಏನಾಗುತ್ತದೆಯೋ ಅದನ್ನು ನೋಡಿ ತಿಳಿಸುವೆ. ದಾತರ ಭಾವೆ ಮುಂತಾದವರು ತಮ್ಮ

ಬಂಡುಕೋರರನ್ನು ಕರೆದುಕೊಂಡು ಸೈನ್ಯ ಜಾಮಾಯಿಸಿ ತಾಲೂಕಿನಲ್ಲಿ ತೊಂದರೆಯನ್ನು ಉಂಟು ಮಾಡಿದರು. ಆಗ ಬ್ರಿಟಿಷ್ ಸೈನ್ಯವು ಬಂದು ಇವರನ್ನು ಹಿಂದಕ್ಕಟ್ಟಿದ ಸುದ್ದಿ ತಿಳಿಯಿತು. ಅಲ್ಲದೆ ಮಂಗಳವೇಡದಿಂದ ಮೊನ್ನೆ ಪತ್ರ ಬಂದಿತ್ತು, ನವಾಬನ ಸೈನ್ಯ ಪರಾಂಡೆಯ ಬಳಿ ಇರುವುದನ್ನು ತಿಳಿಸಿದೆ.[೬೭]

ಇಂತಿ ನಿಮ್ಮ ಚಿಂತಾಮಣರಾವ್

ಸಾರಾಂಶ

ಚಿಂತಾಮಣರಾವ್‌ರವರು ತಮ್ಮ ತಂದೆಗೆ ಬರೆದ ಪತ್ರದಲ್ಲಿ ಕಿತ್ತೂರಕರ ದೇಸಾಯಿ ಮತ್ತು ತಮಗೂ ನಡೆದ ಯುದ್ಧದಿಂದ ಮಾತುಕತೆಗಾಗಿ ಕಿತ್ತೂರಕರ್ ದೇಸಾಯಿಯ ಆಸ್ಥಾನಿಕರನ್ನು ನೇಗಿನಹಾಳದಲ್ಲಿ ಭೇಟಿಯಾದ ಉಲ್ಲೇಖವಿದೆ. ಅಲ್ಲದೆ ಕೆಲವು ಬಂಡುಕೋರರು ದಾಂದಲೆ ಮಾಡಿದಾಗ ಬ್ರಿಟಿಷ್ ಸೈನ್ಯದ ಸಹಾಯದಿಂದ ಅವರನ್ನು ಹಿಂದಕ್ಕಟ್ಟಿದ ಸುದ್ದಿಯನ್ನು ತಮ್ಮ ತಂದೆಗೆ ತಿಳಿಸುವ ಪತ್ರ ಇದಾಗಿದೆ.

ಪತ್ರದ ಸಂಖ್ಯೆ-೩೭

ಪತ್ರ ಸಿಕ್ಕ ಸ್ಥಳ	**: ಭಾರತೀಯ ಇತಿಹಾಸ ಸಂಶೋಧನೆ ಮಂಡಳ, ಪುಣೆ**
ಭಾಷೆ	**: ಮರಾಠಿ**
ಉಲ್ಲೇಖ	**: ೭೦೫೩ ಪ.ಸಂ.**
ಕಾಲ	**: ೧/೫/೧೮೦೫**

ಆರಂಭದಲ್ಲಿ ಗಣೇಶನನ್ನು ನೆನೆಸುತ್ತಾ, ತೀರ್ಥಸ್ವರೂಪರಾದ ಕಾಕಾ ಸಾಹೇಬ ಇವರ ಸೇವೆಯಲ್ಲಿ ಮಗನಾದ ಚಿಂತಾಮಣಿರಾವ್ ಮಾಡುವ ನಮಸ್ಕಾರಗಳು. ಇಲ್ಲಿ ಎಲ್ಲವೂ ಕುಶಲ, ವಿಶೇಷವೆನೆಂದರೆ ಈ ಭಾಗದಲ್ಲಿ ರಾತ್ರಿಯ ವೇಳೆಗೆ ಎಚ್ಚರವಿರಬೇಕೆಂದು ಆಜ್ಞೆಯಾಗಿದೆ. ಆ ಪ್ರಕಾರ ನಾವು ಬಹಳ ಎಚ್ಚರಿಕೆಯಿಂದ ಬದುಕುತ್ತಿದ್ದೇವೆ. ರಾಜಶ್ರೀ ರಾಮಚಂದ್ರ ಅಪ್ಪಾಜಿ ಯವರು ಸಂಪಗಾವಿಯಲ್ಲಿ ಭೇಟಿಯಾಗಿದ್ದರು, ಆಗ ಅವರು ಒಂದು ವಿನಂತಿ ಪತ್ರವನ್ನು ಕಳುಹಿಸಿದ್ದರು, ಅದು ನಿಮಗೆ ಮುಟ್ಟಿರಬೇಕು. ಕಿತ್ತೂರಕರ್ ದೇಸಾಯಿಯವರ ಹತ್ತಿರ ನೇಗಿನ ಹಾಳ ಎಂಬ ಊರಿನಲ್ಲಿ ನಾಲ್ಕು ಬುರ್ಜುಗಳ ಒಂದು ಕೋಟೆಯಿದೆ. ಅದರಲ್ಲಿ ಸುಮಾರು ೪-೫ ನೂರು ಸೈನಿಕರು ಇದ್ದಾರೆ. ಅವರು ತೋಪುಗಳನ್ನು ತೆಗೆದುಕೊಂಡು ಇಲ್ಲಿಗೆ ಬಂದಿದ್ದಾರೆ. ಒಳಗೆನಿಂದ ಜನರಿಗೆ ತೋಪು ಹಾರಿಸಿದರು. ಸುಮಾರು ೨೫೦ ಜನ ಒಳಗಿನಿಂದ ನಡೆದು ಕೊಂಡು ಬಂದಿದ್ದಾರೆ. ಇಲ್ಲಿಯ ಸೈನ್ಯದ ಮೇಲೆ ಯುದ್ಧ ಮಾಡಿದರು, ಒಳಗಿನ ಜನರಿಗೆ ಹಿಂದಕ್ಕೆ ಕಳುಹಿಸಲಾಯಿತು. ಇಲ್ಲಿ ಸುಮಾರು ೨೦-೨೫ ಜನರು ಸಾವನ್ನು ಅನುಭವಿಸಿದರು, ೫೦-೭೫ ಜನರು ಗಾಯಾಳುಗಳಾದರು, ಕಾಲ್ದಳದ ಮುಖ್ಯಸ್ಥರಿಬ್ಬರು ಹಾಗೂ ಒಳಗಿನ ಅನೇಕ ಜನರು ಸತ್ತರು. ತೋಪುಗಳ ಸುರಿಮಳೆಯೆ ನಡೆದಿತ್ತು, ಊರಿನ ಜನರು ಮನೆಗಳಲ್ಲಿ ಆಶ್ರಯ

ಪಡೆದು ಸುಮ್ಮನಿದ್ದಾರೆ. ನಿನ್ನೆ ಸಂಪಗಾವಿಯಿಂದ ಮುಂದಕ್ಕೆ ಬಂದು ನೇಗಿನಹಾಳದವರೆಗೂ ಸೈನ್ಯ ಬಂದಿದೆ. ಮುಂದೆ ಏನಾಗುವುದೊ ಆಮೇಲೆ ತಿಳಿಸುತ್ತೇನೆ. ಗುಂಡುಗಳನ್ನು ಕಳುಹಿಸಲು ಪತ್ರ ಬರೆದಿದ್ದೇನೆ, ನೀವು ಕಳುಹಿಸಿರಬಹುದು ಮತ್ತು ಬಂದೂಕುಗಳಿಗೆ ಬೇಕಾದ ಗುಂಡುಗಳನ್ನು ಕಳುಹಿಸಬೇಕೆಂದು ಮತ್ತೊಮ್ಮೆ ವಿನಂತಿಸುತ್ತೇನೆ.[೬೭]

ಸಾರಾಂಶ

ಚಿಂತಾಮಣರಾವ್ ಪಟವರ್ಧನಿಗೂ ಕಿತ್ತೂರಿನ ಮಲ್ಲಸರ್ಜನ ದೇಸಾಯಿಗೂ ಯುದ್ಧ ನಡೆದ ಬಗ್ಗೆ ಈ ಪತ್ರದಲ್ಲಿ ದಾಖಲಿಸಿದೆ. ಇದರಲ್ಲಿ ಎರಡು ಜನ ಸೇನಾಧಿಪತಿಗಳಿಗೆ ಗಾಯ ಗಳಾಯಿತು, ಹಲವಾರು ಜನ ಸಾವನ್ನು ಅನುಭವಿಸಿದರು, ಸಾಮಾನ್ಯ ಜನರು ಮಾತ್ರ ಮನೆ ಯನ್ನು ಆಶ್ರಯಿಸಿ, ಸುಮ್ಮನಿದ್ದರು. ಈ ಸಂದರ್ಭದಲ್ಲಿ ತೋಪುಗಳ ಸುರಿಮಳೆಯೇ ನಡೆದಿತ್ತು ಎಂದು ದಾಖಲಿಸಿದೆ.

ಪತ್ರದ ಸಂಖ್ಯೆ-೩೮

ಪತ್ರ ಸಿಕ್ಕ ಸ್ಥಳ	: **ಭಾರತೀಯ ಇತಿಹಾಸ ಸಂಶೋಧನೆ ಮಂಡಳ, ಪುಣೆ**
ಭಾಷೆ	: **ಮರಾಠಿ**
ಉಲ್ಲೇಖ	: **೮೨೫೫ ಪ.ಸಂ.**
ಕಾಲ	: **೧೨/೫/೧೮೦೫**

ಈ ಪತ್ರವನ್ನು ರಾಜಶ್ರೀ ಬಾಳ ಸಾಹೇಬ ಇವರ ಮಗ ಗಣೇಶನು ತನ್ನ ತಂದೆಗೆ ಬರೆದ ಪತ್ರವಾಗಿದೆ. ಆರಂಭದಲ್ಲಿ ತಂದೆಗೆ ನಮಸ್ಕಾರವನ್ನು ತಿಳಿಸುತ್ತಾ, ೧೨.೫.೧೮೦೫ರವರೆಗೆ ಯಕ್ಕುಂಡಿಯ ಪ್ರದೇಶದಿಂದ ಪತ್ರ ಬರೆಯುತ್ತಿದ್ದು, ತಾನು ಇಲ್ಲಿ ಸಂತೋಷವಾಗಿದ್ದೇನೆ ಎಂದು ಕಳುಹಿಸಿದ ಪತ್ರವಾಗಿದೆ. ಕಿತ್ತೂರಿಗೆ ಕಪ್ಪ ಕಾಣಿಕೆಯನ್ನು ಕೊಡಲು ಒಂದು ವರ್ಷದವರೆಗೆ ಠರಾವು ಆಗಿತ್ತು. ಅದರಲ್ಲಿ ೧೫,೦೦೦ ರೂಪಾಯಿ ಕಡಿಮೆ ಮಾಡಿ ಕಿತ್ತೂರಿನ ಸೀಮೆಯನ್ನು ದಾಟಿ ಇಲ್ಲಿಯವರೆಗೆ ಬಂದಿದ್ದೇವೆ. ಮಾತುಕತೆ ಆಗಬೇಕಾಗಿದೆ, ನಂತರ ಎಲ್ಲಿಗೆ ಹೋಗಬೇಕೆಂಬುದನ್ನು ನೋಡಬೇಕು. ಸಂಪಗಾಂವ, ಬಾಗೇವಾಡಿ, ಠಿಕ್ಕರಿ, ಖಾನಪುರ ಇವುಗಳನ್ನು ಬೀಡಬೇಕು ಎಂದು ಮಾತುಕತೆಯಲ್ಲಿ ತಿಳಿಸುವವರಿದ್ದಾರೆ. ಆದರೆ, ಬಲವಂತರಾವ್ ರಾಜಿ ಇವರಿಗೆ ಆರೋಗ್ಯ ಸರಿಯಿಲ್ಲ, ಆದ್ದರಿಂದ ಈ ವಿಷಯ ತಮಗೆ ತಿಳಿಯಲಿ ಎಂಬ ಉದ್ದೇಶದಿಂದ ಈ ಪತ್ರವನ್ನು ಬರೆಯುತ್ತಿ ದ್ದೇನೆ.[೬೮]

ಸಾರಾಂಶ

ವೈಶಾಖ ಶುದ್ಧ ಚತುರ್ದಶಿಯವರೆಗೆ ಯಕ್ಕುಂಡಿಯು ನೆಮ್ಮದಿಯಿಂದ ಕೂಡಿದ್ದು, ಅಲ್ಲಿಯ ಅಧಿಕಾರಿಯಾದ ಗಣೇಶ ತನ್ನ ತಂದೆಯಾದ ರಾಜಶ್ರೀ ಬಾಳಾ ಸಾಹೇಬರಿಗೆ ಬರೆದ ಪತ್ರವಾಗಿದೆ.

ಕಿತ್ತೂರಿಗೆ ಕಪ್ಪ ಕಾಣಿಕೆಯನ್ನು ಸಲ್ಲಿಸುವ ಒಪ್ಪಂದವಾಗಿದ್ದು, ಅದರಲ್ಲಿ ೧೫,೦೦೦ ರೂಪಾಯಿ ಕಡಿಮೆ ನೀಡಲು ಗಣೇಶನು ಹೊರಟಿದ್ದಾನೆ. ಆಗ ನಡೆಯುವ ಮಾತುಕತೆ ಏನಾಗುತ್ತದೆಯೆಂಬುದನ್ನು ತಿಳಿಸುವ ಪತ್ರವಾಗಿದೆ.

ಪತ್ರದ ಸಂಖ್ಯೆ-೩೯

ಪತ್ರ ಸಿಕ್ಕ ಸ್ಥಳ : **ಭಾರತೀಯ ಇತಿಹಾಸ ಸಂಶೋಧನೆ ಮಂಡಳ, ಪುಣೆ**

ಭಾಷೆ : **ಮರಾಠಿ**

ಉಲ್ಲೇಖ : **೭೦೫೬ ಪ.ಸಂ.**

ಕಾಲ : **೩/೫/೧೮೦೫**

ಈ ಪತ್ರವನ್ನು ಬಲವಂತರಾವ್ ಅಪ್ಪಾಜಿಯವರು ನೇಗಿನಹಾಳದ ಪ್ರಾಂತ್ಯಾಧಿಕಾರಿಯಾಗಿದ್ದು, ಪುಣೆಯ ಮೇಲಾಧಿಕಾರಿಗೆ ಬರೆದ ಪತ್ರವಾಗಿದೆ. ದಿನಾಂಕ ೩.೫.೧೮೦೫ರಲ್ಲಿ ಈ ಪತ್ರವನ್ನು ಬರೆದಿದ್ದು, ಉರ್ದು ಮಾಸವಾದ ಮೊಹರಂ ತಿಂಗಳಿನಲ್ಲಿ ಈ ಪತ್ರ ಬರೆಯಲಾಗಿದೆ. ವಿಶೇಷ ವೇನೆಂದರೆ, ಕಿತ್ತೂರಕರ್ ದೇಸಾಯಿಯವರ ಕಾರಕೂನ ಮೊನ್ನೆ ಬಂದಿದ್ದನು, ಅವನ ಮಾತಿನ ಸಾರಾಂಶದ ಪ್ರಕಾರ ಸರಕಾರದಿಂದ ೯ ವರ್ಷ ಹಣ ಕೊಡಬೇಕೆಂಬ ಮಾತುಕತೆ ನಡೆದಿತ್ತು, ತಾವು ಅದರಂತೆ ನಡೆದುಕೊಳ್ಳಲಿಲ್ಲ. ನಾವು ಕಿತ್ತೂರಿಗೆ ಹೋಗಿ ಏನಂದು ಉತ್ತರವನ್ನು ತಿಳಿಸಬೇಕು ಎಂದು ಬಲವಂತರಾವ್ ಪ್ರಶ್ನೆ ಹಾಕಿದರು. ಕಿತ್ತೂರಿಗೆ ಹೋಗಿ ನಮಗೆ ಪ್ರತಿ ವರ್ಷ ೧ ರಿಂದ ೨ ಲಕ್ಷ ರೂಪಾಯಿ ಕಪ್ಪ ಪಡೆದುಕೊಳ್ಳಬೇಕು ಎಂಬ ಆದೇಶವಿದೆ. ಆದರೆ ಯಾರಿಗೂ ಉಪದ್ರವ ನೀಡದೆ ವಸೂಲಿ ಮಾಡಬೇಕೆಂಬುದು ನಮ್ಮ ಆಸೆಯಾಗಿದೆ. ಒಂಬತ್ತು ವರ್ಷಗಳ ಕಾಲ ತಾವು ಕೊಟ್ಟಿರುವ ಕಪ್ಪವನ್ನು ವಜಾಗೊಳಿಸಿ, ಉಳಿದ ಹಣವನ್ನು ವಸೂಲಿ ಮಾಡಬೇಕು, ಅಥವಾ ೨೫,೦೦೦ ರೂಪಾಯಿ ಕಪ್ಪ ನೀಡಿ ಉಳಿದ ಹಣವನ್ನು ಪಡೆದು ಕೊಳ್ಳಬೇಕು ಈ ರೀತಿ ಕರಾರು ನಡೆದಿದೆ. ಆದರೆ ಸುಖೋಪಂತ ಕಾಳೆಯವರನ್ನು ಕರೆಯಿಸಿ ಅವರಿಗೆ ವಿಷಯವನ್ನು ತಿಳಿಸಿದ ಪ್ರಕಾರ ಆ ಕರಾರಿಗೆ ಒಪ್ಪದೆ ಇದ್ದಾಗ ಕರಾರು ಮುರಿದು ಹೋಯಿತು. ಮರುದಿನ ನೇಗಿನಹಾಳವನ್ನು ಬ್ರಿಟಿಷ್ ಸೈನ್ಯವು ಸುತ್ತುವರೆದಿದೆ. ಯುದ್ಧ ಆರಂಭವಾಗಿ ಮೂರು ದಿವಸಗಳಾಯಿತು. ಒಳಗಿನಿಂದ ೬-೭ ಜನರು ಸತ್ತಿದ್ದಾರೆ, ಸುಮಾರು ೧೦ಕ್ಕೂ ಹೆಚ್ಚು ಜನ ಗಾಯಾಳುಗಳಾಗಿದ್ದಾರೆ. ಒಳಗಡೆ ಸೈನಿಕರ ಪಹಾರೆಯಿದೆ. ಇದರಲ್ಲಿ ಸುಮಾರು ೨೦೦ ಜನ ಸೈನಿಕರಿದ್ದು, ದೇಸಾಯಿಯವರ ಮಗನೂ ಕೂಡಾ ತನ್ನ ಗೆಳೆಯ ಜೊತೆಗೆ ಇದ್ದಾನೆ. ನಿನ್ನೆಯಿಂದ ನಾಲ್ಕು ಜನರು ಆಗಮಿಸಿ, ಕಪ್ಪ ಕಾಣಿಕೆ ವಿಚಾರದಲ್ಲಿ ಮಾತುಕತೆ ನಡೆಸಿದ್ದಾರೆ. ಸುಖೋಪಂತ ಕಾಳೆಯವರು ಕೂಡಾ ಒಳಕ್ಕೆ ಹೋಗಿದ್ದರು, ಒಳಗೆ ನೀರಿಲ್ಲ, ಬುರುಜಿನ ಕೆಳಗೆ ನೀರಿನ ಆಶ್ರಯವಿದೆ. ಆದರೆ ಅಲ್ಲಿಗೆ ಹೋಗಲು ಬ್ರಿಟಿಷರು ಒಪ್ಪುವುದಿಲ್ಲ, ನಿನ್ನೆ ಮಾತುಕತೆ ನಡೆದಾಗ ಸುಮಾರು ೫೦ ಕೊಡಗಳಷ್ಟು ನೀರು, ನಾಲ್ಕು

ಚೀಲದಷ್ಟು ಮಸಿಪುಡಿ ಹಾಗೂ ಸತ್ತಿರುವ ಹೆಣಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಆದರೆ ಇನ್ನೂವರೆಗೂ ಮಾತುಕತೆ ಮುಗಿದಿಲ್ಲ ಎಂಬುದು ಈ ಪತ್ರದ ಸಾರಾಂಶವಾಗಿದೆ.[೩೯]

ಸಾರಾಂಶ

ಕಿತ್ತೂರಕರ ದೇಸಾಯಿಯ ಕಾರಕೂನನು ನೇಗಿನಹಾಳಕ್ಕೆ ಬಂದಿದ್ದು, ಅವರಿಗೆ ಕೊಡಬೇಕಾದ ಹಣದ ಬಗ್ಗೆ ಚರ್ಚಿಸುತ್ತಿದ್ದನು. ಸುಮಾರು ಒಂಬತ್ತು ವರ್ಷಗಳಿಂದ ಕಪ್ಪ ಕಾಣಿಕೆಯನ್ನು ನೀಡದೆ ಇರುವುದರಿಂದ ಅದರ ವಸೂಲಿಗಾಗಿ ಕಾರಕೂನನ್ನು ಕಳುಹಿಸಿಕೊಟ್ಟಿದ್ದರು. ಅದೇ ವೇಳೆಗೆ ನೇಗಿನಹಾಳ ವನ್ನು ಬ್ರಿಟಿಷರು ಸುತ್ತುವರೆದು ದಾಂದಲೆಯೆಬ್ಬಿಸಿದರು, ಆಗ ಅನೇಕ ಜನ ಗಾಯಾಳುಗಳಾದರು. ಕೋಟೆಯ ಒಳಭಾಗದಲ್ಲಿ ನೀರಿನ ವ್ಯವಸ್ಥೆಯಿಲ್ಲ, ಊರಿನ ಹೊರಕ್ಕೆ ಹೋಗಲು ಬ್ರಿಟಿಷರು ಬಿಡುತ್ತಿಲ್ಲ ಎಂಬುದು ಬಲವಂತರಾವ್ ಅಪ್ಪಾಜಿಯವರ ಪತ್ರದ ಸಾರಾಂಶವಾಗಿದೆ.

ಪತ್ರದ ಸಂಖ್ಯೆ-೪೦

ಪತ್ರ ಸಿಕ್ಕ ಸ್ಥಳ	**: ಭಾರತೀಯ ಇತಿಹಾಸ ಸಂಶೋಧನೆ ಮಂಡಳ, ಪುಣೆ**
ಭಾಷೆ	**: ಮರಾಠಿ**
ಉಲ್ಲೇಖ	**: ೨೦೫೭ ಪ.ಸಂ.**
ಕಾಲ	**: ೬/೫/೧೮೦೫**

ಚಿರಂಜೀವಿ ಬಾಳಾ ಸಾಹೇಬ ಇವರಿಗೆ ಲಕ್ಷ್ಮೀಬಾಯಿ ಮಾಡುವ ಆಶೀರ್ವಾದಗಳು, ಈ ಪತ್ರವನ್ನು ಸಂಪಗಾವಿಯಿಂದ ಬರೆಯಲಾಗಿದ್ದು, ಸುಮಾರು ೫೦ ಜನ ದೂತರೊಂದಿಗೆ ನಿಮಗಾಗಿ ಕರಿ ದ್ರಾಕ್ಷಿಯನ್ನು ಕಳುಹಿಸುತ್ತಿದ್ದೇನೆ ಮುಟ್ಟಿದ ಮೇಲೆ ಪತ್ರ ಬರೆಯಬೇಕೆಂದು ತಿಳಿಸುತ್ತಾರೆ. ಇಲ್ಲಿಯ ವಿಶೇಷ ಸುದ್ದಿಯೆಂದರೆ ರಾಜಶ್ರೀ ನಾಗೋಪಂತ ಇವರ ಕಾರಕೂನ ಪತ್ರವನ್ನು ಬರೆದಿದ್ದಾನೆ, ಅವರ ಪ್ರಕಾರ ಸೈನ್ಯವು ಸಂಪಗಾವದಿಂದ ಮುನ್ನೆಡೆದು ನೇಗಿನಹಾಳದ ಸಮೀಪ ಒಂದು ಹೊಳೆಯ ಮೇಲೆ ವಾಸ್ತವ್ಯಮಾಡಿದೆ. ನೇಗಿನಹಾಳದ ಮೇಲೆ ದಾಳಿ ಮಾಡಲು ತೋಪುಗಳಿಂದ ಸಿದ್ಧತೆ ಮಾಡಿದ್ದು, ಬಹುಶಃ ಬುಧವಾರ ಬೆಳಗ್ಗೆ ಆ ಊರನ್ನು ಸುತ್ತುವರೆಯುವ ಸಾಧ್ಯತೆಯಿದೆ. ಕೋಟೆಯ ಸಲುವಾಗಿ ಈ ಯುದ್ಧ ನಡೆದಿದೆ. ಒಳಭಾಗದಲ್ಲಿ ಕುಡಿಯಲಿಕ್ಕೆ ನೀರಿಲ್ಲ, ಈ ಕೋಟೆಯನ್ನು ವಶಪಡಿಸಿಕೊಳ್ಳಲು ಮೊದಲು ಮಾತುಕತೆ ನಡೆಸಿ ಬಗೆಹರಿಸಿಕೊಳ್ಳಬೇಕೆಂಬ ಒಪ್ಪಂದ ವಾಗಿತ್ತು, ಆದರೆ ದಿಢೀರನೆ ಗುಂಡಿನ ದಾಳಿ ನಡೆದಿದ್ದರಿಂದ ಮಾತುಕತೆ ನಡೆಯಲಿಲ್ಲ ಎಂಬ ವಿಷಯವನ್ನು ಲಕ್ಷ್ಮೀಬಾಯಿ ತಮ್ಮ ಮಗನಾದ ಬಾಳಾ ಸಾಹೇಬ ಇವರಿಗೆ ಬರೆದ ಪತ್ರವಾಗಿದೆ.[೪೦]

ಸಾರಾಂಶ

ಈ ಪತ್ರದ ವಿಶೇಷವೆನೆಂದರೆ, ಮೊದಲ ಸಾಲಿನಲ್ಲಿ ತನ್ನ ಮಗನಿಗೆ ಕರಿ ದ್ರಾಕ್ಷಿಹಣ್ಣನ್ನು ಕಳುಹಿಸುತ್ತಿರುವ ವಿಷಯವನ್ನು ಒಳಗೊಂಡಿದೆ. ನಂತರ ಸಂಪಗಾವನ ಆಕ್ರಮಣ ಮಾಡಿ ನಂತರ ನೇಗಿನಹಾಳದ ಮೇಲೆ ನಡೆಯುವ ಯುದ್ಧದ ವಿಷಯವನ್ನು ಈ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಪತ್ರದ ಸಂಖ್ಯೆ-೪೧

ಪತ್ರ ಸಿಕ್ಕ ಸ್ಥಳ : **ಭಾರತೀಯ ಇತಿಹಾಸ ಸಂಶೋಧನೆ ಮಂಡಳ, ಪುಣೆ**

ಭಾಷೆ : ಮರಾಠಿ

ಉಲ್ಲೇಖ : ೭೦೫೦ ಪ.ಸಂ.

ಕಾಲ : ೨೧/೪/೧೮೦೫

ಈ ಪತ್ರವನ್ನು ಸಂಪಗಾವಿ ಭಾಗದಿಂದ ಬಲವಂತ ಲಕ್ಷ್ಮಣ ಎಂಬ ಪ್ರಾಂತ್ಯಾಧಿಕಾರಿ ಈ ಪತ್ರವನ್ನು ಬರೆದಿದ್ದಾನೆ. ಸ್ವಾಮಿಗಳ ಕೃಪೆಯಿಂದ ಇಲ್ಲಿಯವರೆಗೆ ಎಲ್ಲವೂ ಕ್ಷೇಮ. ತಾವು ಕಳುಹಿಸಿರುವ ಆಜ್ಞಾ ಪತ್ರ ಬಂದು ತಲುಪಿದೆ. ಇಲ್ಲಿಯ ವರ್ತಮಾನವನ್ನು ಹೇಳ ಬೇಕೆಂದರೆ, ನಿನ್ನೆ ಸೈನ್ಯವು ಬಂದು ವಾಸ್ತವ್ಯ ಮಾಡಿದೆ. ಕಿತ್ತೂರಕರ ದೇಸಾಯಿಯವರ ಆಸ್ಥಾನದ ಅಧಿಕಾರಿಯಾದ ವೀರಪ್ಪ ಮತ್ತು ಗುಣಶೇಖರ ಪಾಟೀಲ ಮಾತುಕತೆಗೆ ಬಂದಿದ್ದಾನೆ. ಅವರಿಗೆ ಸರಿಯಾದಂತಹ ರೀತಿಯಲ್ಲಿ ಮಾತುಕತೆ ನಡೆಸಲು ಆಗುತ್ತಿಲ್ಲ, ಆದ್ದರಿಂದ ದೇಸಾಯಿಯವರ ಮುಖ್ಯ ಆಸ್ಥಾನದ ಅಧಿಕಾರಿಯಾದ ಪರಪ್ಪ ಇವನಿಗೆ ಕರೆದುಕೊಂಡು ಬರಲು ಹೇಳಿಕಳುಹಿಸಿದ್ದೇವೆ. ಬಂದ ನಂತರ ಏನು ಮಾತುಕತೆ ನಡೆಯುತ್ತದೆಯೊ ಅವುಗಳನ್ನು ತಮ್ಮ ಗಮನಕ್ಕೆ ತರುತ್ತೇವೆ. ಇಲ್ಲಿ ಸೈನ್ಯದ ವ್ಯವಸ್ಥೆಯಿಂದ ಲೂಟಿಯಾಗಿದೆ. ಆದ್ದರಿಂದ ಎಲ್ಲ ವಸ್ತುಗಳು ತುಟ್ಟಿಯಾಗಿವೆ, ನೀವು ಬರಬೇಕು ಎಂದು ತಿಳಿಸಿದ್ದೀರಿ, ಆದರೆ ಎಷ್ಟೇ ಪ್ರಯತ್ನ ಮಾಡಿದರೂ ಇಲ್ಲಿಂದ ಬಿಡುಗಡೆಯಾಗುತ್ತಿಲ್ಲ. ಈಗಾಗಲೇ ಸಂಪಗಾವಿ ಮತ್ತು ಬಾಗೇವಾಡಿಯಲ್ಲಿ ನಾವು ಠಾಣೆ ಹೂಡಿದ್ದೇವೆ. ಮುಂದೆ ಏನು ಮಾತುಕತೆಯಾಗುತ್ತದೆಯೊ ಅದನ್ನು ನೋಡಿ ನಾನು ಬರುತ್ತೇನೆ. ಸ್ವಾಮಿಯವರು ನಮ್ಮ ಆರೋಗ್ಯದ ಬಗ್ಗೆ ಬರೆದಿರುವುದು ತಿಳಿದಿದೆ. ಪುಣೆಯಿಂದ ಯಾವುದೇ ಸುದ್ದಿಯು ತಿಳಿದಿಲ್ಲ, ಬ್ರಿಟಿಷರು ಕೆಲವು ಸೈನ್ಯಕರು ಬಂದಿದ್ದು, ಹೋಳ್‌ಕರವರ ಕಡೆಗೆ ಸುಮಾರು ೨ ಲಕ್ಷ ಸೈನ್ಯವಿದೆ, ಅದನ್ನು ೧೦ ಗುಂಪುಗಳಾಗಿ ವಿಂಗಡಿಸಿದ್ದಾರೆ. ಕಿತ್ತೂರಕರ ದೇಸಾಯಿ ಇವರ ಕಡೆಗೆ ೪೦೦೦ ಸೈನಿಕರು, ೮೦೦ ಕುದುರೆ ಸವಾರರು ಇದ್ದಾರೆ, ಇವರೆಲ್ಲರೂ ಈಗಾಗಲೇ ಸೇರಿದ್ದಾರೆ. ಸೈನಿಕರು ಹೊರಬಂದು ಸಣ್ಣಪುಟ್ಟ ಉಪದ್ರವವನ್ನು ಜನಸಾಮಾನ್ಯರಿಗೆ ನೀಡುತ್ತಿದ್ದಾರೆ. ಈ ಇಬ್ಬರಲ್ಲೂ ಎದುರು-ಬದುರು ನಿಂತು ಯುದ್ಧ ಮಾಡುವ ಸಾಮರ್ಥ್ಯ ಕಾಣುತ್ತಿಲ್ಲವೆಂಬುದು ಈ ಪತ್ರದ ಸಾರಾಂಶವಾಗಿದೆ.[೪೧]

ಸಾರಾಂಶ

ಬಲವಂತರಾವ್ ಲಕ್ಷ್ಮಣ ಬರೆದ ಪತ್ರದಲ್ಲಿ ಕಿತ್ತೂರಕರ ದೇಸಾಯಿಯವರ ಆಸ್ಥಾನಿಕರು ಮಾತುಕತೆಗೆ ಬಂದಾಗ ಅವರಿಗೆ ಸರಿಯಾಗಿ ಮಾತುಕತೆ ನಡೆಸಲು ಆಗುತ್ತಿಲ್ಲ, ಆದ್ದರಿಂದ ಮುಖ್ಯ ಕಾರುಭಾರಿಯನ್ನು ಕರೆತರಲು ಹೋಗಿದ್ದಾರೆ ಎಂಬುದು ಈ ಪತ್ರದ ಮೊದಲ ಕೆಲವು ಸಾಲಿನಲ್ಲಿದೆ. ಅಲ್ಲದೆ ಕಿತ್ತೂರಕರ ದೇಸಾಯಿ ಸೈನ್ಯ ಮತ್ತು ಹೋಳ್‌ಕರವರ ಸೈನ್ಯ ಎದುರು-

ಬದುರಾಗಿ ಯುದ್ಧ ಮಾಡುವ ಸಾಮರ್ಥ್ಯವಿಲ್ಲ, ಏಕೆಂದರೆ ಎರಡು ಸೈನ್ಯವು ಸಮಾನವಾಗಿದ್ದು, ಇದರಿಂದ ಸಾಮಾನ್ಯ ಜನರಿಗೆ ಬದುಕಲು ತೊಂದರೆಯಾಗುತ್ತದೆ ಎಂಬುದು ಈ ಪತ್ರದ ಮುಖ್ಯಾಂಶವಾಗಿದೆ.

ಪತ್ರದ ಸಂಖ್ಯೆ-೪೨

ಪತ್ರ ಸಿಕ್ಕ ಸ್ಥಳ : ಭಾರತೀಯ ಇತಿಹಾಸ ಸಂಶೋಧನೆ ಮಂಡಳ, ಪುಣೆ

ಭಾಷೆ : ಮರಾಠಿ

ಕಾಲ : ಮೇ ೧೮೦೫

ಸಾರಾಂಶ

ಈ ಪತ್ರವು ಚಿಂತಾಮಣರಾವ್ ಸಾಂಗಲಿಕರ್‌ರವರು ಪುಣೆಯಿಂದ ಕರ್ನಾಟಕಕ್ಕೆ ತೆರಳಿ, ಕಿತ್ತೂರಕರ್ ದೇಸಾಯಿಯವರ ದಾಳಿ ಮಾಡಿ ಸಂಪಗಾವ ಮತ್ತು ನೇಗಿನಹಾಳವನ್ನು ವಶಪಡಿಸಿ ಕೊಂಡ ಉಲ್ಲೇಖವಿದೆ. ಚಿಂತಾಮಣರಾವ್ ಸಾಂಗಲಿಕರ್‌ರವರ ಕಡೆಗೆ ೫೦೦-೭೦೦ ಜನ ಶೂರ ಸೈನಿಕರಿದ್ದು, ಈ ಎರಡು ಠಾಣೆಯನ್ನು ಸುತ್ತುವರೆದು, ೯.೫.೧೮೦೫ರಂದು ತನ್ನ ವಶಕ್ಕೆ ತೆಗೆದು ಕೊಂಡನೆಂದು ಉಲ್ಲೇಖವಿದೆ.

ಕಿತ್ತೂರಕರ್ ದೇಸಾಯಿ ಇವರ ಕಾರುಭಾರಿಗಳಾದ ವೀರಸಂಗಪ್ಪ ಮತ್ತು ವೆಂಕಟಪ್ಪ ಇಬ್ಬರು ಅಧಿಕಾರಿಗಳು ಏಪ್ರಿಲ್ ತಿಂಗಳನಲ್ಲಿಯೆ ಸಾಂಗಲಿಕರ್ ಜೊತೆಗೆ ಮಾತುಕತೆ ಮಾಡಲು ಪ್ರಯತ್ನಿಸಿದರು. ಈ ಮಾತುಕತೆಯ ಪ್ರಕಾರ ಕಿತ್ತೂರಕರ್ ದೇಸಾಯಿಯವರು ಪ್ರತಿವರ್ಷವು ೧ ೧/೪ ಲಕ್ಷ ರೂಪಾಯಿ ಕಪ್ಪ ಕಾಣಿಕೆಯನ್ನು ನೀಡಬೇಕೆಂದು ಮಾತುಕತೆ ನಡೆಯಿತು. ಆಗ ಸಾಂಗಲಿಕರ್‌ರವರು ನವಲಗುಂದ, ಬ್ಯಾಹಟ್ಟಿ, ಅಣ್ಣಿಗೇರಿ, ಸಂಪಗಾವ ಮುಂತಾದ ಊರುಗಳಿಂದ ಕಪ್ಪ ಕಾಣಿಕೆಯನ್ನು ವಸೂಲಿಮಾಡಿಕೊಂಡು ಮರಾಠರ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡನು. ಈ ಪತ್ರದಲ್ಲಿ ಕಿತ್ತೂರಕರ್ ದೇಸಾಯಿಯವರ ವಿಷಯವನ್ನು ಉಲ್ಲೇಖಿಸುತ್ತಾ ಮಲ್ಲಸರ್ಜ್ಜನನು ಕರ್ನಾಟಕ ಪ್ರಾಂತ್ಯದಲ್ಲಿ ದೊಡ್ಡ ಶಕ್ತಿಯಾಗಿತ್ತು, ಸುಮಾರು ೪೦ ವರ್ಷಗಳ ಕಾಲ ಪೇಶ್ವೆ ಯವರು ದಾಳಿ ಮಾಡಿದರು, ಮಲ್ಲಸರ್ಜ್ಜನನ್ನು ಸೋಲಿಸಲು ಸಾಧ್ಯವಾಗಿರಲಿಲ್ಲ. ಬ್ರಿಟಿಷ್ ಜನರಲ್ ವೆಲ್ಲಸ್ಲಿ ಮತ್ತು ಕಿತ್ತೂರಕರ್ ದೇಸಾಯಿ ಆಪ್ತರಾಗಿದ್ದು, ಒಪ್ಪಂದವನ್ನು ಮಾಡಿಕೊಂಡರು. ಬ್ರಿಟಿಷರು ಪೇಶ್ವೆಯವರನ್ನು ಒತ್ತಾಯಿಸಿ ಸವಣೂರಿನ ನವಾಬರಿಗೆ ೫೦,೦೦೦ ರೂಪಾಯಿ ಕೊಡಿಸಿದರು. ಆದರೆ ಕಿತ್ತೂರಕರ್ ದೇಸಾಯಿಯವರಿಗೆ ಏನನ್ನು ಕೊಡಿಸದೆ ಕಿತ್ತೂರಕರ್ ದೇಸಾಯಿಯವರನ್ನು ಪುಕ್ಕಟೆಯಾಗಿ ದುಡಿಸಿಕೊಂಡರು. ಆದರೆ, ಕೆಲಸ ಮುಗಿಸಿದ ತಕ್ಷಣ ಅವರ ವಿರುದ್ಧವೆ ತಿರುಗಿಬಿದ್ದು ೩೫,೦೦೦ ರೂಪಾಯಿ ಹಾಗೂ ೧೧ ಗ್ರಾಮಗಳನ್ನು ಕಿತ್ತೂರಿನಿಂದ ವಶಪಡಿಸಿಕೊಂಡರು. ನಂತರ ವಕೀಲರ ಮೂಲಕ ಪತ್ರವನ್ನು ಬರೆದು ಕಳುಹಿಸಿ ನೀವು ಒಳ್ಳೆಯ ರೀತಿಯಲ್ಲಿ ವ್ಯವಹರಿಸಿದರೆ ಉತ್ತಮ ಇಲ್ಲವಾದಲ್ಲಿ ಬ್ರಿಟಿಷರು ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಕಿತ್ತೂರಕರ್ ದೇಸಾಯಿ

ಪೇಶ್ವೆಯವರ ವಿರುದ್ಧ ತಿರುಗಿ ಬಿದ್ದನು. ಆಗ ಕಿತ್ತೂರಕರ್ ದಂಗೆ ನಡೆಸಿ ಪೇಶ್ವೆಯವರ ಆಡಳಿತವನ್ನು ಕೊನೆಗೊಳಿಸಿ ಕಿತ್ತೂರಕರ್ ದೇಸಾಯಿಯವರ ಆಡಳಿತ ಪ್ರದೇಶವನ್ನು ಬ್ರಿಟಿಷರು ವಶಪಡಿಸಿಕೊಂಡರೆಂದು ಈ ಪತ್ರದಿಂದ ತಿಳಿದುಬರುತ್ತದೆ.[೪೨]

೫.೫. ರಾಜ್ಯ ಪತ್ರಾಗಾರ ಇಲಾಖೆ ಕೊಲ್ಲಾಪುರದಲ್ಲಿ ಸಂಗ್ರಹಿಸಿದ ಮೋಡಿ ದಾಖಲೆಗಳು

ಪತ್ರದ ಸಂಖ್ಯೆ-೪೩

ಪತ್ರ ಸಿಕ್ಕ ಸ್ಥಳ	: ರಾಜ್ಯ ಪತ್ರಾಗಾರ ಇಲಾಖೆ, ಕೊಲ್ಲಾಪುರ
ಭಾಷೆ	: ಮರಾಠಿ ಲಿಪಿ : ಮೋಡಿ ಬರಹ
ಕಾಲ	: ೧೮ನೇ ಶತಮಾನ
ಉಲ್ಲೇಖ	: ಪತ್ರದ ಸಂಖ್ಯೆ ೪೧೧೧

ಸಾರಾಂಶ

ಪತ್ರದ ಆರಂಭದಲ್ಲಿ ಶ್ರೀರಾಮ ಎಂಬ ಉಲ್ಲೇಖವಿದೆ. ಯಾರು ಯಾರಿಗೆ ಬರೆದರೆಂಬ ಮಾಹಿತಿ ಕಂಡುಬರುವುದಿಲ್ಲ ಸಪ್ರೇಮ ನಮಸ್ಕಾರಗಳು. ವಿಶೇಷವೆನೆಂದರೆ, ನೀವು ಕಳುಹಿಸಿದ ಪತ್ರ ಬಂದು ಮುಟ್ಟಿದೆ, ವಿಷಯ ತಿಳಿದಿದೆ. ನೀವು ಬರೆದ ಪ್ರಕಾರ ರಾಜಶ್ರೀ ವೆಂಕಟರಾವ್ ರವರು ಕಿತ್ತೂರಿನ ದೇಸಾಯಿಯವರಿಗೆ ಭೇಟಿಯಾಗಿ ಬರುತ್ತಾರೆ. ನಿಮ್ಮ ಮುಂದೆ ಅವರು ಸವಿಸ್ತಾರ ಮಾಹಿತಿಯನ್ನ ನೀಡುತ್ತಾರೆ. ಅಲ್ಲದೆ ನಾಳೆ ಮುಂಜಾನೆ ಸೂರ್ಯೋದಯದ ವೇಳೆಗೆ ದೇಶ್‌ಮುಖರವರು ಸೇವೆಗೆ ಹಾಜರಾಗುತ್ತಾರೆ. ಆದ್ದರಿಂದ ಶೇಷಗಿರಿ ಪಂತ್ ಇವರನ್ನ ಕಳುಹಿಸಲಿಲ್ಲ, ನಾವೇ ಬರುತ್ತೇವೆ ಹೆಚ್ಚಿಗೆ ಏನನ್ನು ಬರೆಯಲಿ ಎಂದು ವಿನಂತಿಪೂರ್ವಕವಾಗಿ ಬರೆದು ಕಳುಹಿಸಿದ ಪತ್ರ. ಈ ಪತ್ರವು ಉರ್ದು ಮಾಸದ ರಂಜಾನ ತಿಂಗಳ ಮಂಗಳವಾರದಂದು ಬರೆದ ಪತ್ರವಾಗಿದೆ. ಇದರಲ್ಲಿ ಹೆಚ್ಚು ವಿಶೇಷ ಕಂಡುಬರುವುದಿಲ್ಲ.[೪೩]

ಪತ್ರದ ಸಂಖ್ಯೆ-೪೪

ಪತ್ರ ಸಿಕ್ಕ ಸ್ಥಳ	: ರಾಜ್ಯ ಪತ್ರಾಗಾರ ಇಲಾಖೆ, ಕೊಲ್ಲಾಪುರ
ಭಾಷೆ	: ಮರಾಠಿ ಲಿಪಿ : ಮೋಡಿ ಬರಹ
ಕಾಲ	: ೧೨-೧೧-೧೮೨೪
ಉಲ್ಲೇಖ	: ಪತ್ರದ ಸಂಖ್ಯೆ ೧೧೭೯೨

ಸಾರಾಂಶ

ಈ ಪತ್ರವು ಶ್ರೀಮನ್ ಮಹಾರಾಜ ಛತ್ರಪತಿ ಸಾಹೇಬರಿಗೆ ಮತ್ತು ಥಾಪ್ಲಿನ್ ಸಾಹೇಬ್ ಬಹದ್ದೂರ ಕಮೀಷನರ್, ಪುಣೆ ಇವರಿಗೆ ಬರೆದ ಪತ್ರವಾಗಿದೆ. ಇಲ್ಲಿ ಎಲ್ಲವೂ ಕುಶಲ,

ನಿಮಗೆ ಇಲ್ಲಿ ನಡೆಯುವ ವಿಷಯವನ್ನ ನಾವು ತಿಳಿಸುತ್ತಿರಬೇಕೆಂಬ ಪದ್ಧತಿ ಇದೆ........ ತಮ್ಮ ಪತ್ರವು .... ತಾರೀಖಿನಂದು ಬಂದು ಮುಟ್ಟಿತು. ಕಿತ್ತೂರಕರ್ ದೇಸಾಯಿ ಇವರ ಕಾರಕೂನನು ಸಿಕ್ಕಿದ್ದನು. ನಾನು ಆತನನ್ನು ವಿಚಾರಣೆ ಮಾಡುತ್ತಿದ್ದಾಗ ಆತನ ಕಡೆಯಿಂದ ಕೆಲವು ಕಾಗದ ಪತ್ರಗಳು ದೊರೆತವು. ಆ ಕಾಗದದ ಪತ್ರಗಳ ಸಮೇತ ಆತನನ್ನು ಬಂಧಿಸಿ ಆತನ ಜೊತೆಗೆ ಒಬ್ಬನನ್ನು ಬೆಳಗಾವಿಗೆ ಕಳುಹಿಸುತ್ತಿದ್ದೇನೆ. ಈತನ ಬಳಿ ಮಹಾರಾಜರ ಹೆಸರಿನಲ್ಲಿ ಬರೆದ ಪತ್ರಗಳು ಹಾಗೂ ಜನರಿಂದ ಸರ್ಕಾರಕ್ಕೆ ಬರೆದ ಪತ್ರಗಳು ಅವನ ಕಡೆ ಸಿಕ್ಕಿದವು. ಅವೆಲ್ಲವನ್ನು ತೆಗೆದುಕೊಂಡು ಬೆಳಗಾವಿಗೆ ಕಳುಹಿಸಲಾಗಿದೆ ಎಂದು ತಿಳಿಸಲು ಸಂತೋಷವಾಗಿದೆ. ಇದನ್ನು ನೋಡಿ ತಾವು ಏನನ್ನು ಆದೇಶಿಸುತ್ತಿರೋ ಅದಕ್ಕೆ ನಾವು ಬದ್ಧರಾಗಿ ದ್ದೇವೆ. ಇದು ಮಹಾರಾಜರ ಯೋಗ್ಯತೆಗೆ ಭೂಷಣ ಎಂದು ಸೇವಕ ಉಲ್ಲೇಖಿಸಿದ್ದಾನೆ. ಪತ್ರವನ್ನು ಬರೆದ ಸೇವಕನು ಆಂಗ್ಲ ಭಾಷೆಯಲ್ಲಿ ಸಹಿ ಮಾಡಿದ್ದಾನೆ. ಇದು ಮುಕ್ಕಾಮ ಕರವೀರ ಪತ್ರ ಎಂದು ಉಲ್ಲೇಖವಿದೆ.[೪೪]

ಪತ್ರದ ಸಂಖ್ಯೆ-೪೫

ಪತ್ರ ಸಿಕ್ಕ ಸ್ಥಳ : ರಾಜ್ಯ ಪತ್ರಾಗಾರ ಇಲಾಖೆ, ಕೊಲ್ಹಾಪುರ

ಭಾಷೆ : ಮರಾಠಿ ಲಿಪಿ : ಮೋಡಿ ಬರಹ

ಕಾಲ : ೧೮ನೇ ಶತಮಾನ

ಉಲ್ಲೇಖ : ಪತ್ರದ ಸಂಖ್ಯೆ ೩೮೩/೫೪೭ ೧೧೭೯೩

ಈ ಪತ್ರವನ್ನ ಅಜಮ್ ಮೀರ್ ರುಕ್ನುದೀನ್ ಹುಸೇನ್ ಖಾನ್ ಬಹದ್ದೂರ್ ಇವರ ಪತ್ರದ ಭಾಷಾಂತರಿಸಿದ ಪತ್ರವಾಗಿದೆ. ಈ ಪತ್ರದಲ್ಲಿ ಉತ್ತರಿಸಿದ ಸೇವಕನು ಈ ರೀತಿ ಉಲ್ಲೇಖಿಸಿದ್ದಾನೆ. ಸಾಹೇಬರಿಂದ ಪತ್ರಕ್ಕೆ ಉತ್ತರ ಬಂದಿಲ್ಲ, ವರ್ತಮಾನವು ತಿಳಿದಿಲ್ಲ, ದಯವಿಟ್ಟು ಪತ್ರಗಳನ್ನು ಆಗಾಗ್ಗೆ ಬರೆದು, ವರ್ತಮಾನವನ್ನು ತಿಳಿಸುತ್ತಿರಬೇಕು ಅಂತ ವಿನಂತಿ ಮಾಡಿಕೊಂಡಿದ್ದಾರೆ. ಈ ಪತ್ರದ ಎರಡನೇ ಪ್ಯಾರದಲ್ಲಿ ಸೈನಿಕರು ಮತ್ತು ಯುದ್ಧಸಾಮಗ್ರಿಗಳನ್ನು ಕಳುಹಿಸುವ ಬಗ್ಗೆ ಪತ್ರ ಬರೆಯಲಾಗಿತ್ತು. ಆದರೆ ಅದು ಬಂದು ತಲುಪಿಲ್ಲ, ಸದ್ಯಕ್ಕೆ ಯುದ್ಧ ಸಾಮಗ್ರಿಗಳ ಅವಶ್ಯಕತೆ ಇದೆ. ಏಕೆಂದರೆ, ದಾಳಿಕೋರರು ಕಿತ್ತೂರು ಸಮೀಪಕ್ಕೆ ಮುತ್ತಿಗೆ ಹಾಕಿದ್ದಾರೆ. ಆದ್ದರಿಂದ ಯುದ್ಧದ ಸಂದರ್ಭದಲ್ಲಿ ಆ ಸಾಮಗ್ರಿಗಳು ಬಂದು ತಲುಪಬೇಕು, ಹಾಗೇ ತಲುಪಿದರೆ ಮಾತ್ರ ನಮ್ಮ ಉದ್ದೇಶ ಯಶಸ್ವಿಯಾಗಿ ಈ ಭಾಗವನ್ನು ಬಂಧೋಬಸ್ತ ಮಾಡಲು ಬರುತ್ತದೆ. ಈ ವಿಷಯದ ಬಗ್ಗೆ ಯಾವುದೇ ಕೊರತೆಯಿಲ್ಲದೆ ನಾವು ಇಲ್ಲಿಯವರೆಗೆ ತಲುಪಿದ್ದೇವೆ. ಉಳಿದ ಎಲ್ಲವೂ ಕ್ಷೇಮವಾಗಿದೆ. ರತ್ನಾಕರ ಪಂಡಿತ ಮತ್ತು ಸರ್ ಲಷ್ಕರ್ ನಾನಾ ಪಾಟಣಕರ ಇವರ ಆದೇಶದ ಮೇರೆಗೆ ಈ ಪತ್ರವನ್ನ ಬರೆಯುತ್ತಿದ್ದೇನೆ. ಈ ಪತ್ರವನ್ನ ಕಳಿಸಿರುವ ದಿನಾಂಕ..... ಅಸ್ಪಷ್ಟ ೨೩/೨/ರಜ್ಜಬ್ ಎಂಬ ಉಲ್ಲೇಖ ಕಂಡುಬರುತ್ತದೆ.[೪೫]

ಸಾರಾಂಶ

ಕಿತ್ತೂರ ಸಮೀಪಕ್ಕೆ ದಾಳಿಕೋರರು ಆಗಮಿಸಿದ್ದು, ಇವುಗಳನ್ನು ಎದುರಿಸಲು ಸೈನ್ಯದ ಸಾಮಗ್ರಿಗಳ ಅವಶ್ಯಕತೆಯಿದೆ ಎಂದು ಬರೆಯಲಾಗಿದೆ.

ಪತ್ರದ ಸಂಖ್ಯೆ-೪೬

ಪತ್ರ ಸಿಕ್ಕ ಸ್ಥಳ : **ರಾಜ್ಯ ಪತ್ರಾಗಾರ ಇಲಾಖೆ, ಕೊಲ್ಹಾಪುರ**

ಭಾಷೆ : **ಮರಾಠಿ ಲಿಪಿ : ಮೋಡಿ ಬರಹ**

ಕಾಲ : **೧೮ನೇ ಶತಮಾನ,**

ಉಲ್ಲೇಖ : **ರೂಮಾಲ್ ನಂ. ೧೦, ೧೨೩೪, ಪಾನ ನಂ. ೬೩೩**

ಸಾರಾಂಶ

ಈ ಪತ್ರದಲ್ಲಿ ಮೊದಲ ಸಾಲಿನಲ್ಲಿ ಸ್ವಾಮಿಯವರ ಪಾದಾರವಿಂದಕ್ಕೆ........ ಏನೆಂದರೆ, ಇಂದಿನವರೆಗೆ ಚ........ ಅಸ್ಪಷ್ಟ........ ಸಾಹೇಬರ ಕೃಪೆಯಿಂದ ಸೇವಕನು ಮಾಡುವ ನಮಸ್ಕಾರಗಳು, ಇಲ್ಲಿ ಎಲ್ಲವೂ ಕ್ಷೇಮವಾಗಿದೆ. ಕಿತ್ತೂರ ಮಹಲ್‌ಗಳ ಪೈಕಿ ಕೆಲವು ತಾಲೂಕುಗಳು ಸರ್ಕಾರದ ವಶಕ್ಕೆ ಬರಬೇಕಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ರಾಜಶ್ರೀ ಶಿಂಧ್ಯೆ ಮತ್ತು ಸಕಾರಾಮ ಘಾಟಗೆ ಇವರ ಕಾಲದಿಂದಲೂ ಜಗಳ ನಡೆದು ಬಂದಿದೆ. ಆದರೆ ಅದರ ಇತ್ಯರ್ಥ ಇವತ್ತೇ ಇದೆ. ಆದ್ದರಿಂದ ಇಷ್ಟು ದಿವಸಗಳ ಕಾಲ ನಾವು ಎಷ್ಟು ಪ್ರಯತ್ನ ಮಾಡಿ ಬಂದೋಬಸ್ತ ಮಾಡಿದರೂ ಪ್ರಯೋಜನವಾಗಲಿಲ್ಲ, ಆದ್ದರಿಂದ ತಮ್ಮ ಮಾಹಿತಿಗಾಗಿ ಈ ಪತ್ರವನ್ನು ಬರೆಯುತ್ತಿದ್ದೇನೆ. ಈ ಪತ್ರದ ಕೆಳಗಭಾಗದಲ್ಲಿ ರವಿವಾರ ಬೆಳಗ್ಗೆ ಹುಕ್ಕೇರಿ ಸಮೀಪದಲ್ಲಿ ವಾಸ್ತವವಾಗಿ ಬರೆಯಲಾಗಿದೆ ಎಂಬ ಉಲ್ಲೇಖವಿದೆ. ಅದು ಅಷ್ಟು ಸ್ಪಷ್ಟವಾಗಿಲ್ಲ.[೪೬]

ಪತ್ರದ ಸಂಖ್ಯೆ-೪೭

ಪತ್ರ ಸಿಕ್ಕ ಸ್ಥಳ : **ರಾಜ್ಯ ಪತ್ರಾಗಾರ ಇಲಾಖೆ, ಕೊಲ್ಹಾಪುರ**

ಭಾಷೆ : **ಮರಾಠಿ ಲಿಪಿ : ಮೋಡಿ ಬರಹ**

ಕಾಲ : **೧೮ನೇ ಶತಮಾನ**

ಉಲ್ಲೇಖ : **ಪತ್ರದ ಸಂಖ್ಯೆ ೧೬೯೪೬ ನಂ. ೩೮೧೨, ಪಾ. ನಂ. ೭೩**

ಈ ಪತ್ರದ ಮೊದಲ ಸಾಲು ಉರ್ದು ಭಾಷೆಯ ವಾಕ್ಯವನ್ನ ಹೊಂದಿದೆ. ಇದರಲ್ಲಿ ಕೃಷ್ಣ ಕಮಾಂಡರ್ ಮದಪೂಜ ಬಾಪಂದರಿ ಅಯಾಮ್ ಹೂಜುರ ಪುರ ಗೂರಾತ್ ಪಂಕಾರ ಪರಂದಾಜ್ ಇವರು ಖರೀದಿ ಪತ್ರ ಮಾಡಿದ ಬಗ್ಗೆ ಉಲ್ಲೇಖವಿದೆ. ಅದರ ಪಾವತಿಯಾಗಿ ಮುಂಗಡ ಹಣವನ್ನು ಕೂಡಾ ಕೊಡಲಾಗಿದೆ. ನೌಕರರು ಅವಮಾನ ಮಾಡಿದರೆ ಅವರುಗಳಿಗೆ ಶಿಕ್ಷೆ ಕೊಟ್ಟು ನೌಕರರಿಗೆ ಹಾಜರಾಗುವಂತೆ ಒತ್ತಾಯ ಮಾಡಿ ಕ್ರಮ ಕೈಗೊಳ್ಳಲಾಗುತ್ತದೆ.

ಇಕಬಾಲ್ ಎಂಬುವರು ಕಂಪನಿ ಸರ್ಕಾರದಲ್ಲಿದ್ದಾಗ ಕಿತ್ತೂರಕರ ದೇಸಾಯಿಯವರು ತಪ್ಪು ತಿಳುವಳಿಕೆಯನ್ನು ನೀಡಿ, ಅವರನ್ನು ಅಮಾನತ್ತು ಮಾಡಿಸಲಾಯಿತು. ನಂತರ ಇದನ್ನು ಸರಿಪಡಿಸಿ ರಾಜಶ್ರೀ ಬಾಜಿರಾವ್ ಪಂಡಿತ ಪ್ರಧಾನ್ ಮತ್ತು ಅಜಿಮ್ ಜನರಲ್ ಬಹದ್ದೂರ್ ಇವರುಗಳಿಗೆ ಆದೇಶ ಪತ್ರವನ್ನು ಕಳುಹಿಸಲಾಗಿದೆ ಎಂಬ ಉಲ್ಲೇಖವಿದೆ.[೯೭]

ಸಾರಾಂಶ

ಬಿಜಾಪುರದ ಸುಲ್ತಾನರಿಗೆ, ಮಲ್ಲಸರ್ಜನಿಗೆ ಸಂಬಂಧಿಸಿದ ಪತ್ರವಾಗಿದೆ. ವಿಜಾಪುರ ಸುಲ್ತಾನರ ಸೇವಕನಾದ ಇಕ್ಬಾಲ್ ಎಂಬುವರ ಮೇಲೆ ಕಿತ್ತೂರಕರ ದೇಸಾಯಿಯವರು ತಪ್ಪು ತಿಳುವಳಿಕೆಯನ್ನು ನೀಡಿ ಅವರನ್ನು ಅಧಿಕಾರದಿಂದ ಕೆಳಗಿಳಿಸಿದ ಉಲ್ಲೇಖ ಕಂಡುಬರುತ್ತದೆ. ನಂತರ ಇದನ್ನು ಸರಿಪಡಿಸಲಾಯಿತು ಎಂಬುದನ್ನು ಸೇವಕರು ತನ್ನ ಈ ಪತ್ರದಲ್ಲಿ ಉಲ್ಲೇಖಿಸಿದ್ದಾನೆ.

ಪತ್ರದ ಸಂಖ್ಯೆ-೪೮

ಪತ್ರ ಸಿಕ್ಕ ಸ್ಥಳ	**: ರಾಜ್ಯ ಪತ್ರಾಗಾರ ಇಲಾಖೆ, ಕೊಲ್ಲಾಪುರ**
ಭಾಷೆ	**: ಮರಾಠಿ ಲಿಪಿ : ಮೋಡಿ ಬರಹ**
ಕಾಲ	**: ೧೮ನೇ ಶತಮಾನ**
ಉಲ್ಲೇಖ	**: ಪತ್ರದ ಸಂಖ್ಯೆ ೧೭೫೪**

ಶ್ರೀಮನ್ ಮಹಾರಾಜ ಛತ್ರಪತಿ ಸಾಹೇಬ ಇವರ ಸನ್ನಿಧಾನಕ್ಕೆ ನಿಯಾಜ್ ಮಂದ್ ಉಲಿ ಎಂಬುವರು ಪುಣೆಯ ಕಮೀಷನರ್ ಕಚೇರಿಗೆ ಬರೆದ ಪತ್ರವಾಗಿದೆ. ಆರಂಭದಲ್ಲಿ ನಮಸ್ಕಾರವನ್ನು ತಿಳಿಸುತ್ತಾ, ನಿಮ್ಮ ಕೃಪೆ ಇರಲಿ, ಎಂದು ಉಲ್ಲೇಖಿಸುತ್ತಾ, ಕಿತ್ತೂರಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಪತ್ರಗಳ ಮೂಲಕ ತಿಳಿಸುತ್ತಿದ್ದಾರೆ. ಕಿತ್ತೂರಕರ ದೇಸಾಯಿಯವರು ನಿಧನ ಹೊಂದಿದ್ದಾರೆ, ಅವರಿಗೆ ಗಂಡು ಸಂತಾನವಾಗಲೀ, ಅಥವಾ ವಾರಸುದಾರರಾಗಲೀ ಇಲ್ಲ ಎನ್ನುವುದು ಮಹಾರಾಜರಿಗೆ ಈಗಾಗಲೇ ಗೊತ್ತಾಗಿರಬೇಕು. ಆದರೂ ಅವರ ಕುಟುಂಬಕ್ಕೆ ಅನ್ಯಾಯವಾಗದಂತೆ ಅದನ್ನು ರಕ್ಷಿಸಬೇಕು. ಕಿತ್ತೂರಕರ ದೇಸಾಯಿ ಸತ್ತ ಮೇಲೆ ಅವರ ಆಸ್ಥಾನಿಕರು ಆಸ್ತಿಯಲ್ಲಿ ಅನ್ಯಾಯ ಮಾಡಿ ಜಗಳ ದೊಂಬಿಯನ್ನು ಮಾಡದೆ ಇರುವ ದೃಷ್ಟಿಯಿಂದ ಬಂದೋಬಸ್ತ ಮಾಡಲು ಬ್ರಿಟಿಷ್ ಅಧಿಕಾರಿ ಥ್ಯಾಕರೆ ಸಾಹೇಬ ಬಹದ್ದೂರ್, ಸರ್ ಕಲೆಕ್ಟರ್ ಇವರು ಕಿತ್ತೂರಿಗೆ ಹೋದರು. ಇವರ ಜೊತೆಗೆ ೧೦೦ ಸಿಪಾಯಿಗಳು, ೪ ತೋಪುಗಳು, ಸುಮಾರು ೧೦೦ಕ್ಕೂ ಹೆಚ್ಚು ಗೋಲಂದಾಜರು ಬೆಳಗಾವಿ ಕಡೆಗೆ ಬರುತ್ತಿದ್ದರು. ಅವರನ್ನು ಅಲ್ಲಿಗೆ ಕರೆತರಿಸಿ, ಕಂಪನಿ ಸರ್ಕಾರದಲ್ಲಿ ಯಾವ ವಿಚಾರವಿತ್ತೋ ಗೊತ್ತಿಲ್ಲ, ಅಂದರೆ ದೇಸಾಯಿಯವರ ವಂಶದಲ್ಲಿ ಅಥವಾ ಸಂಬಂಧಿಕರಲ್ಲಿ ಯಾರಾದರೂ ಯೋಗ್ಯರಿದ್ದರೆ ಸಂಸ್ಥಾನವನ್ನು ಮುನ್ನಡೆಸಬೇಕು ಎನ್ನುವ ಉದ್ದೇಶದಿಂದ ವಾರಸುದಾರರನ್ನ ನಿಶ್ಚಯಿಸಬೇಕಿತ್ತು, ಅಷ್ಟರಲ್ಲಿ ಕಿತ್ತೂರಿನಲ್ಲಿ ದಾಂದಲೆಯಾಯಿತು. ಧಾರವಾಡದಿಂದ ಪುನಃ ಥ್ಯಾಕರೆ ಸಾಹೇಬ ಬಂದು ಬಂದೋಬಸ್ತ

ಮಾಡಿದರು. ಮುನ್ಸಿಫ್ ಸಾಹೇಬರಿಗೆ ಗುಂಡು ಹಾಕಿ ಅವನ ಜೊತೆಗಿದ್ದ ಕೆಲವು ಸೈನಿಕರನ್ನು ಕೊಂದು ಹಾಕಲಾಯಿತು. ಈ ರೀತಿ ಕಂಪನಿ ಸರ್ಕಾರದ ಜೊತೆಗೆ ಕಿತ್ತೂರಿನ ಜನ ಜಗಳ ತೆಗೆದಿರುತ್ತಾರೆ. ಇದರಿಂದ ಕಂಡುಬರುವುದೇ ನೆಂದರೆ ಪಿತೂರಿ ಮಾಡುವ ಜನರು ಸಮಯವನ್ನು ನೋಡಿ ದಾಂದಲೆ ಮಾಡುವ ಸಾಧ್ಯತೆ ಇದೆ. ಆದ್ದರಿಂದ ಈ ವಿಷಯ ತಮಗೆ ಗೊತ್ತಾಗ ಬೇಕೆಂದು ನಾನು ಈ ಪತ್ರವನ್ನ ಕಳುಹಿಸು ತ್ತಿದ್ದೇನೆ. ಮಹಾರಾಜರು ಬಂದೋಬಸ್ತ ಮಾಡಲು ಆದೇಶ ಮಾಡಿ ಇಲಾಖೆಯ ಅಧಿಕಾರಿಗಳನ್ನು ಕಳುಹಿಸಿಕೊಟ್ಟು ಕಿತ್ತೂರು ಪ್ರಾಂತ್ಯವನ್ನ ರಕ್ಷಣೆ ಮಾಡಬೇಕು ಎಂಬುದು ಈ ಪತ್ರದ ಸಾರಾಂಶವಾಗಿದೆ.[೪೮]

ಸಾರಾಂಶ

ಕಿತ್ತೂರಕರ ದೇಸಾಯಿ ಮರಣ ಹೊಂದಿದ ಬಳಿಕ ಅವರ ಉತ್ತರಾಧಿಕಾರಿಯಾಗಿ ಗಂಡು ಸಂತಾನವಿಲ್ಲದ ಕಾರಣ ದೇಸಾಯಿ ಕುಟುಂಬಕ್ಕೆ ಅನ್ಯಾಯವಾಗಬಾರದು ಎಂದು ಪುಣೆಯಲ್ಲಿರುವ ದೊರೆಗಳಿಗೆ ಪ್ರಾಂತ್ಯಾಧಿಕಾರಿ ಮಾಡಿಕೊಂಡ ಮನವಿಯಾಗಿದೆ. ಅಲ್ಲದೇ, ಥ್ಯಾಕರೆಯನ್ನು ಕೊಂದು ಅನೇಕ ಜನ ಸೈನಿಕರನ್ನು ಕೊಂದಿರುವ ವಿಷಯವನ್ನು ಈ ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಅಲ್ಲದೆ, ಈ ಪ್ರಾಂತ್ಯವನ್ನು ರಕ್ಷಣೆ ಮಾಡಲು ಪುಣೆಯ ಅಧಿಕಾರಿಯಾದ ತಾವು ಆದೇಶಿಸಿ ಸೈನ್ಯವನ್ನು ಕಳುಹಿಸಬೇಕೆಂದು ಉಲ್ಲೇಖಿಸಲಾಗಿದೆ. ಸೇವಕನ ಸಹಿ ಆಂಗ್ಲ ಭಾಷೆಯಲ್ಲಿದೆ.

ಕಂಪನಿ ಸರಕಾರಕ್ಕೆ ಬರದುಕೊಟ್ಟದ್ದು

ಕುನ್ನೂರು ಮಲ್ಲಪ್ಪ ಮತ್ತು ಇಲಾಖೆಯಲ್ಲಿ ಇರುವ ಕಿತ್ತೂರು ಸಂಸ್ಥಾನದವರು ಬ್ರೀಟಿಷರಿಗೆ ಬರೆದುಕೊಟ್ಟ ಕೈಫಿಯತ್ ಈ ರೀತಿ ಇದೆ. ಈ ಮೇಲ್ಕಾಣಿಸಿದ ಶಿವಲಿಂಗರುದ್ರ ಸರ್ಜ ಸರದೇಸಾಯಿ ಆಷಾಡ ತಿಂಗಳಲ್ಲಿ ಬಹಳ ತೊಂದರೆಯಾಯಿತು. ಆಗ ಒಂದು ದಿನ ಸ್ವತಃ ಇನ್ನೇನು ನಾನು ಬದುಕುವುದಿಲ್ಲ ಎಂದು ಹೇಳಿದರು ಆ ಸಂದರ್ಭದಲ್ಲಿ ನಾನು ಮತ್ತು ಕುನ್ನೂರು ಸರದಾರ ವೀರಪ್ಪ ಅವರ ಸಮೀಪದಲ್ಲಿ ಇದ್ದೆವು. ಆಗ ಎಲ್ಲರೂ ಅಳಲಿಕ್ಕೆ ಹತ್ತಿದೆವು. ನಂತರ ದೇಸಾಯಿಯವರು ಸರದಾರ ಗುರುಸಿದ್ದಪ್ಪ ಈತನನ್ನು ಕರೆಯಿಸಿ ನಮ್ಮ ಅಣ್ಣ-ತಮ್ಮಂದಿರಾದವರು (ಸಂಬಂಧಿಕರು) ಪಾಚಾಪೂರ ತಾಲೂಕಿನಲ್ಲಿ ಬರುವ ಸಿಂದೊಳ್ಳಿ ಮತ್ತು ಮಾಸ್ತಮರಡಿ ಮತ್ತು ಮರುಗೋಡ ಆಡಳಿತ ವ್ಯಾಪ್ತಿಯಲ್ಲಿ ಬರುವ ಚಿಕ್ಕೊಪ್ಪ ಈ ಊರುಗಳಲ್ಲಿ ಇದ್ದಾರೆ ಅವರಲ್ಲಿ ಯಾರಾದರೂ ಒಬ್ಬ ಹುಡುಗನನ್ನು ನೋಡಿ ಕರೆತಂದರೆ ಅವನನ್ನು ಸಂಸ್ಥಾನದ ಉತ್ತರಾಧಿಕಾರಿಯಾಗಿ? ಮಾಡುತ್ತೇನೆಂದು ಹೇಳಿದನು. ನಂತರ ಗುರುಸಿದ್ದಪ್ಪ ಸಿಂದೊಳ್ಳಿ ಮಾಸ್ತಮರಡಿಗೆ ಹೋಗಿ ನಾಲ್ಕು ಹುಡುಗರನ್ನು ಕರೆತಂದನು ದೇಸಾಯಿಯವರ ಆದೇಶದ ಪ್ರಕಾರ ಸುಬೇದಾರ ಮಲ್ಲಪ್ಪ ಚಿಕ್ಕೊಪ್ಪಕ್ಕೆ ಹೋಗಿ ಅಲ್ಲಿ ಸಣ್ಣ ಹುಡುಗರು ಇಲ್ಲ ಎಲ್ಲರೂ ಹಿರಿಯರೇ ಇದ್ದಾರೆ ಎಂದು, ಸುಮ್ಮನೆ ಮರಳಿದನು.

ಸರದಾರ ಗುರುಸಿದ್ದಪ್ಪ ಕರೆತಂದ ನಾಲ್ಕು ಹುಡುಗರ ಪೈಕಿ ಮೂವರನ್ನು ತಿರಸ್ಕರಿಸಿ ವಾಪಾಸು ಕಳುಹಿಸಿದನು. ಶಿವಲಿಂಗಪ್ಪ ಎಂಬ ಹುಡಗನಿಗೆ ತಮ್ಮ ಮನೆಯಲ್ಲಿಟ್ಟುಕೊಂಡನು.

ಮತ್ತು ಇದರ ಬಗ್ಗೆ ತಮಗೆ ಮರಣ ಸಮಯದಲ್ಲಿ ಮಾತ್ರ ಹೇಳುತ್ತೇನೆ ಎಂದು ಹೇಳಿದನು. ಕೊನೆಗೆ ೧೧ ಸೆಪ್ಟೆಂಬರ ೧೮೨೪ ರ ಶನಿವಾರ ರಾತ್ರಿ ಸುಮಾರು ೪.೦೦ ಗಂಟೆಗೆ ದೇಸಾಯಿಯವರು ತೀರಿಕೊಂಡರು. ಆಗ ದೇಸಾಯಿಯವರು ಏನನ್ನೂ ಹೇಳಿರಲಿಲ್ಲ ನಡುವಿನ ಕಾಲದಲ್ಲಿ ದೇಸಾಯಿಯವರ ಆರೋಗ್ಯ ಸುಧಾರಿಸಿದಾಗ ಸದರಿ ಹುಡುಗನಿಗೆ ಬಟ್ಟೆ ಮುಂತಾದವುಗಳನ್ನು ಕೊಟ್ಟು ಕಳುಹಿಸಬೇಕೆಂದು ನನಗೆ ಹೇಳಿದ್ದರು ಹೀಗಿದ್ದಾಗ ಆಕಸ್ಮಿಕವಾಗಿ ದೇಸಾಯಿಯವರು ತೀರಿಕೊಂಡರು. ಬೆಳಗಿನ ಜಾವದಲ್ಲಿ ಸರದಾರ ಗುರುಸಿದ್ದಪ್ಪ ಹಿಮತ್‌ಸಿಂಗ್ ಜಮಾದಾರ ನರಸಿಂಗ್ ರಾವ್ ಗುರುಪುತ್ರ, ವೀರಪ್ಪಾ ಅವರಾದಿ ವೀರಪ್ಪ ಜಮಾದಾರಖಾನಿ ಮಲಕಪ್ಪ ಈ ಜನರಿಗೆ ಕರೆ ಕಳುಹಿಸಿದನು. ದೇಸಾಯಿಯವರು ತೀರಿಕೊಂಡಿದ್ದಾರೆ. ಮುಂದೆ ಸಂಸ್ಥಾನದ ಭವಿಷ್ಯದ ಬಗ್ಗೆ ಯಾವ ವ್ಯವಸ್ಥೆ ಮಾಡಬೇಕೆಂದು ಕೇಳಿದೆನು. ಆಗ ಅವರು ನಾವು ನೀವು ಶತ್ರುಗಳು ಆದರೆ ಅದನ್ನು ಮರೆತು ಎಲ್ಲರೂ ಕೂಡಿ ಸದರಿ ಹುಡುಗನಿಗೆ ಉತ್ತರಾಧಿಕಾರ ಕೊಡಬೇಕು. ನಮ್ಮ ನಿಮ್ಮ ಶತ್ರುತ್ವ ಮರೆತಿದ್ದೇವೆ ಎಂದು ಶಸ್ತ್ರಾಸ್ತ್ರ ಮುಟ್ಟಿ ಪ್ರಮಾಣ ಮಾಡಿದರು. ನಾವು ಕೂಡ ಅದೇ ರೀತಿಯಲ್ಲಿ ಮಾಡಿ ಆ ಹುಡುಗನಿಗೆ ಉತ್ತರಾಧಿಕಾರ ಕೊಡುವ ಪ್ರಯತ್ನ ತಿರ್ಮಾನಿಸಿದೆವು.

ಸರದೇಸಾಯಿಯವರು ಸಾಯುವಾಗ ಸದರಿ ಹುಡುಗನಿಗೆ ದತ್ತಕ್ಕೆ ತೆಗೆದುಕೊಳ್ಳಿರಿ ಎಂದು ಹೇಳಿರಲಿಲ್ಲ. ಮೊದಲೇ ಹೇಳಿದ ಪ್ರಕಾರ ನಾವು ಈ ಕೆಲಸ ಮಾಡಿದೆವು, ಇಷ್ಟೇ ಅಲ್ಲ ಆಷಾಡ ತಿಂಗಳಲ್ಲಿ ದೇಸಾಯಿಯವರಿಗೆ ತೀವ್ರ ಜ್ವರದ ತೊಂದರೆಯಾದಾಗ ಒಂದು ದಿನ ತನ್ನ ಹೆಂಡತಿಯನ್ನು ಕುಳ್ಳಿರಿಸಿಕೊಂಡು ಖಜಾನೆಯಲ್ಲಿನ ಎಷ್ಟೋ ದಾಗಿನಿಗಳನ್ನು ನನ್ನ ಕಡೆಯಿಂದ ತರಿಸಿ ಕೊಟ್ಟರು ಮತ್ತು ಒಂದು ವೇಳೆ ನಾನು ಬದುಕದೇ ಇದ್ದಲ್ಲಿ ಹೆಂಡತಿಗೆ ಎರಡು ಲಕ್ಷ ರೂ. ಕೊಡಬೇಕು ಅಂತಾ ನನಗೆ ಹೇಳಿದರು. ಈ ಸುದ್ದಿ ಯಾರಿಗೂ ಗೊತ್ತಿರಲಿಲ್ಲ ಆದ ಕಾರಣ ದೇಸಾಯಿಯವರು ರಾತ್ರಿಯೇ ತೀರಿಕೊಂಡಾಗ ಅದೇ ಕ್ಷಣಕ್ಕೆ ಆ ಹುಡುಗನನ್ನು ಉತ್ತರಾಧಿಕಾರಿಯಾಗಿ ನೇಮಿಸಬೇಕಾಗಿದ್ದು ಆದರೆ ಮುದ್ರೆ ದೇಸಾಯಿಯವರ ಖಜಾನೆಯ ಕೋಣೆಯಲ್ಲಿತ್ತು. ಆ ಕೋಣೆಯ ಬಾಗಿಲು ತೆರೆಯಲು ನಾನು ಮಲಕಪ್ಪ, ಜಮಾದಾರಖಾನಿ, ಬಸಲಿಂಗಪ್ಪ, ಮತ್ತು ಸರದಾರ ಮಲ್ಲಪ್ಪ ಇವರೆಲ್ಲರೂ ಹೋಗಿ ಕೋಣೆಯ ಬಾಗಿಲನ್ನು ತೆರೆದೆವು. ಮುದ್ರೆಯನ್ನು ತೆಗೆದುಕೊಂಡು ಸರದಾರ ಮಲ್ಲಪ್ಪ ಮುಂತಾದವರು ಕೆಳಗೆ ಹೋದರು. ನಾನು ಮತ್ತು ಬಸಲಿಂಗಪ್ಪ ಇಬ್ಬರೇ ಖಜಾನೆಯ ಕೋಣೆಯಲ್ಲಿ ನಿಂತು ಒಂದು ಪೆಟ್ಟಿಗೆ ತೆಗೆಯಲಿಕ್ಕೆ ಹೋದಾಗ ಕೀಲಿ ತೆಗೆಯಲು ಬರಲಿಲ್ಲ. ಆದಕಾರಣ ಕೀಲಿ ತೆಗೆಯಲು ಕನ್ನೂರು ವೀರಪ್ಪನಿಗೆ ಕರೆದೆವು ಅವನು ಬಂದು ಒಂದು ಪೆಟ್ಟಿಗೆಯ ಕೀಲಿ ತೆಗೆದುಕೊಟ್ಟು ಮತ್ತೆ ಕೆಳಗೆ ಹೋದನು. ಆಗ ಒಂದು ಪೆಟ್ಟಿಗೆಯಲ್ಲಿ ೧.೨೦,೦೦೦ ರೂಗಳಿದ್ದವು. ದೇಸಾಯಿಯವರ ಹಸ್ತಾಕ್ಷರದಲ್ಲಿ ಬರೆದ ಒಂದು ಯಾದಿ ಕೂಡಾ ಇತ್ತು. ಅದನ್ನು ಹರಿದುಹಾಕಿ ಸದರಿ ರೂಪಾಯಿಗಳು ಬೈಲಪ್ಪಾ ಕೋಟಗಿ, ಸಿದ್ದಲಿಂಗಪ್ಪ ವೀರಪ್ಪ ಒಣ್ಣೂರ, ಸಕ್ರೆಪ್ಪ ದಳವಾಯಿ, ರಾಮಪ್ಪ, ಅಗಸಿಬಾಗಲ್ ಇದರೊಂದಿಗೆ ಕೆಳಗಿನ ಅಂತಸ್ತಿನಲ್ಲಿರುವ ದೇಸಾಯಿಯವರ ಹೆಂಡತಿಯ ಕೋಣೆಗೆ ದುಡ್ಡನ್ನು ಕಳುಹಿಸಿಕೊಟ್ಟೆನು.

ಅದೃಷಪ್ಪನಿಗೆ ನಿನ್ನ ಕಡೆ ಎಷ್ಟು ಹಣವಿದೆ ಎಂದು ಕೇಳಿದಾಗ ಆತನು ಸುಮಾರು ೭,೫೦೦ ಲಕ್ಷ ರೂಪಾಯಿ ಇದೆ ಎಂದು ಹೇಳಿದನು ಆಗ ನಾನು ಆ ಹಣವನ್ನು ಆ ಕೋಣೆಯಿಂದ ಬೇರೆ ಕಡೆಗೆ ತೆಗೆದು ಇಡು ಎಂದು ಸೋಮವಾರ ಬೆಳಗಿನ ಜಾವದಲ್ಲಿ ಹೇಳಿದೆನು. ಆ ಪ್ರಕಾರ ಅವನು ಅದನ್ನು ತೆಗೆದು ಬೇರೆ ಕಡೆಗೆ ಗಂಟುಕಟ್ಟಿ ಇಟ್ಟನು. ಆದರೆ ಇದರಲ್ಲಿ ಏನಿಟ್ಟಿದ್ದಾನೆ ಎಂಬುದು ಗೊತ್ತಿಲ್ಲ.

ಬ್ರಿಟಿಷ್ ಪತ್ರ ವ್ಯವಹಾರ

೧೮೦೨ರಲ್ಲಿ ಲಾರ್ಡ್ ವೆಲ್ಲಸ್ಲಿಯು ಶಿರಂಗಪಟ್ಟಣದಿಂದ ಪುಣೆಗೆ ಹೋಗುವ ಮಾರ್ಗದಲ್ಲಿ ಅನೇಕ ಸಂಸ್ಥಾನಿಕರ ಸೈನ್ಯದ ಸಹಾಯ ಹಣ ಹಾಗೂ ವಸತಿ ಸೌಲಭ್ಯವನ್ನು ಪಡೆದುಕೊಂಡಿದ್ದನು. ಆಗ ಕಿತ್ತೂರಿನ ದೇಸಾಯಿಯು ಮಲ್ಲಸರ್ಜನ ಕೂಡಾ ೧೦೦ ಕುದುರೆಗಳನ್ನು, ೧೦೦ ಸೈನಿಕರನ್ನು ಬ್ರಿಟಿಷ್‌ರಿಗೆ ಕೊಟ್ಟು ಉಳಿದುಕೊಳ್ಳಲು ವ್ಯವಸ್ಥೆ ಮಾಡಿದನು. ಇದರಿಂದ ಸಂತುಷ್ಟನಾದ ವೆಲ್ಲಸ್ಲಿ ದೇಶಗತ್ತಿಯನ್ನು ಮುಂದುವರಿಸಿಕೊಂಡು ಹೋಗಲು ಅನುಮತಿ ಪತ್ರವನ್ನು ನೀಡಿದನು. ಆಗ ಪೇಶ್ವೆಗಳು ವೆಲ್ಲಸ್ಲಿಗೆ ಕಿತ್ತೂರನ್ನು ಮುಟ್ಟುಗೋಲು ಹಾಕಿಕೊಳ್ಳಲು ಸಲಹೆ ನೀಡಲು ಮಲ್ಲಸರ್ಜ ದೇಸಾಯಿಯ ಸದ್ಗುಣಗಳಿಗೆ ಮಾರು ಹೋಗಿದ್ದ ಈತ ಪತ್ರ ಬರೆದು "ನಾನು ಕಿತ್ತೂರ ರಾಜನೊಡನೆ ಯುದ್ಧ ಮಾಡ ಬಯಸುವುದಿಲ್ಲ. ತೀರಾ ಅನಿವಾರ್ಯವಾದ ಸಂದರ್ಭ ಒದಗಿ ಬಂದರೆ, ನಮ್ಮ ಎಲ್ಲ ಸೈನ್ಯವನ್ನು ಉಪಯೋಗಿಸಿಕೊಂಡು ಯುದ್ಧ ಮಾಡುತ್ತೇನೆ. ಆದರೆ, ಇಲ್ಲಿಯ ಸೈನಿಕರು ಶೂರರು ಆಗಿದ್ದಾರೆ. ಇವರೊಂದಿಗೆ ಯುದ್ಧ ಮಾಡಿದರೆ ಸಾವು-ನೋವುಗಳು ಅಧಿಕವಾಗುತ್ತದೆ. ಆದ್ದರಿಂದ, ನಾವು ಕಿತ್ತೂರಿನ ಬಗ್ಗೆ ಚಿಂತಿಸುವುದಿಲ್ಲ"[೪೯] ಎಂದು ಬರೆದ ಪತ್ರದಿಂದ ಕಿತ್ತೂರು ಬಹಳ ಪ್ರಬಲವಾಗಿದೆ ಮತ್ತು ಆಯಕಟ್ಟಿನ ಸ್ಥಳವಾಗಿದೆ ಎಂದು ತಿಳಿದು ಬರುವುದು.

ಥ್ಯಾಕ್ರೆಯು ಶಿವಲಿಂಗರುದ್ರಸರ್ಜ ದೇಸಾಯಿಯು ಬದುಕಿದ್ದನೇ ಅಥವಾ ತೀರಿಕೊಂಡನೇ ಎಂಬುದನ್ನು ತಿಳಿಯಲು ಅಂದಿನ ಸಿವ್ಹಿಲ್ ಸರ್ಜನ್ ಡಾ. ಬೆಲ್ಲರನ್ನು ಕಳುಹಿಸಿ ಮಾಹಿತಿಯನ್ನು ಸಂಗ್ರಹಿಸುತ್ತಾನೆ. ಡಾ. ಬೆಲ್ಲರವರು ನೀಡಿದ ವರದಿಯಂತೆ ಕಿತ್ತೂರಿನ ದೊರೆಗಳು ಸೆಪ್ಟೆಂಬರ್ ೧೨ರಂದು ತೀರಿಕೊಂಡರು ಎಂದು ಒಬ್ಬ ಕುದುರೆ ಸವಾರನು ತಿಳಿಸಿದನೆಂದು ಆ ಮೃತ ಶರೀರವನ್ನು ತಾನೂ ನೋಡ ಬೇಕೆಂದು ಅರಮನೆಗೆ ಹೋದಾಗ ನನ್ನ ಅಲ್ಲಿಗೆ ಕರೆದು ಒಯ್ದುದು. ಅಲ್ಲಿಯ ದಿವಾಣಿಖಾನೆಯಲ್ಲಿ ಬಟ್ಟೆ ಮತ್ತು ಆಭರಣಗಳಿಂದ ಶವವನ್ನು ಅಲಂಕರಿಸಿ ಜನರ ದರ್ಶನಕ್ಕಾಗಿ ಇಡಲಾಗಿತ್ತು. ಸೂಕ್ಷ್ಮವಾಗಿ ವೀಕ್ಷಣೆ ಮಾಡಿ ದೇಸಾಯಿಯು ಸತ್ತದ್ದು ಯಾವಾಗ ಇದರ ಅಲಂಕಾರಕ್ಕೆ ಎಷ್ಟು ಸಮಯ ಹಿಡಿದಿದೆ ಎಂಬುದನ್ನು ತಿಳಿದುಕೊಂಡು ಥ್ಯಾಕ್ರೆಗೆ ವರದಿ ಸಲ್ಲಿಸಿದ ಪತ್ರವಾಗಿದೆ. ಅದರಂತೆ, ಸೆಪ್ಟಂಬರ್ ೧೪ ರಂದು ಕುನ್ನೂರಿನ ಮಲ್ಲಪ್ಪಶೆಟ್ಟಿಗೆ ಪತ್ರ ಬರೆದು ಕಿತ್ತೂರಿನಲ್ಲಿ ನಡೆಯುವ ವಿದ್ಯಾಮಾನಗಳನ್ನು ತಿಳಿಸಲು ಈ ಪತ್ರದಲ್ಲಿ ಸೂಚಿಸಲಾಗಿದೆ.

ಚಾಪ್ಲಿನ್‌ನಿಗೆ ಥ್ಯಾಕ್ರೆಯು ಪತ್ರ ಬರೆಯುತ್ತಾ ಸರಕಾರದ ಆಜ್ಞೆ ಬರುವವರೆಗೂ ಈಗಿರುವ ವ್ಯವಸ್ಥೆಯನ್ನು ಬದಲಿಸಬಾರದೆಂದು ಹಾಗೂ ಈಗಿರುವ ಕಾರಭಾರಿಗಳ ಕೈಯಲ್ಲಿ ಅಧಿಕಾರ ವನ್ನು ಮುಂದು ವರೆಸುವದು ಸೂಕ್ತವಲ್ಲ ವೆಂಕಟರಾವ್ ಮತ್ತು ಮಲ್ಲಪ್ಪನರಂತವರೂ ಅಪಾಯ ಕಾರಿಗಳೆಂದು ಅಭಿಪ್ರಾಯಪಡುತ್ತಾನೆ.

ಅಡಿಟಿಪ್ಪಣಿಗಳು

೧. ರುಮಾಲ್ ನಂ ೭೪, ಕಡತದ ಸಂಖ್ಯೆ-೦೩, ಪತ್ರದ ಸಂಖ್ಯೆ-೦೧

೨. ರುಮಾಲ್ ನಂ ೭೪, ಕಡತದ ಸಂಖ್ಯೆ-೧೧, ಪತ್ರದ ಸಂಖ್ಯೆ-೦೨

೩. ರುಮಾಲ್ ನಂ ೭೪, ಕಡತದ ಸಂಖ್ಯೆ-೧೧, ಪತ್ರದ ಸಂಖ್ಯೆ-೦೫

೪. ರುಮಾಲ್ ನಂ ೭೪, ಕಡತದ ಸಂಖ್ಯೆ-೧೧, ಪತ್ರದ ಸಂಖ್ಯೆ-೦೪

೫. ರುಮಾಲ್ ನಂ ೭೪, ಕಡತದ ಸಂಖ್ಯೆ-೦೨, ಪತ್ರದ ಸಂಖ್ಯೆ-೦೨

೬. ರುಮಾಲ್ ನಂ ೭೪, ಕಡತದ ಸಂಖ್ಯೆ-೦೮, ಪತ್ರದ ಸಂಖ್ಯೆ-೦೯

೭. ರುಮಾಲ್ ನಂ ೭೪, ಕಡತದ ಸಂಖ್ಯೆ-೦೮, ಪತ್ರದ ಸಂಖ್ಯೆ-೧೨

೮. ರುಮಾಲ್ ನಂ ೭೪, ಕಡತದ ಸಂಖ್ಯೆ-೧೧, ಪತ್ರದ ಸಂಖ್ಯೆ-೦೬

೯. ರುಮಾಲ್ ನಂ ೭೪, ಕಡತದ ಸಂಖ್ಯೆ-೧೧, ಪತ್ರದ ಸಂಖ್ಯೆ-೦೮

೧೦.ರುಮಾಲ್ ನಂ ೭೪, ಕಡತದ ಸಂಖ್ಯೆ-೧೧, ಪತ್ರದ ಸಂಖ್ಯೆ-೧೧

೧೧.ರುಮಾಲ್ ನಂ ೭೪, ಕಡತದ ಸಂಖ್ಯೆ-೧೧, ಪತ್ರದ ಸಂಖ್ಯೆ-೦೭

೧೨.ರುಮಾಲ್ ನಂ ೭೪, ಕಡತದ ಸಂಖ್ಯೆ-೧೧, ಪತ್ರದ ಸಂಖ್ಯೆ-೦೩

೧೩.ರುಮಾಲ್ ನಂ ೭೪, ಕಡತದ ಸಂಖ್ಯೆ-೦೨, ಪತ್ರದ ಸಂಖ್ಯೆ-೦೩

೧೪.ರುಮಾಲ್ ನಂ ೭೪, ಕಡತದ ಸಂಖ್ಯೆ-೦೮, ಪತ್ರದ ಸಂಖ್ಯೆ-೦೧

೧೫.ರುಮಾಲ್ ನಂ ೭೪, ಕಡತದ ಸಂಖ್ಯೆ-೦೮, ಪತ್ರದ ಸಂಖ್ಯೆ-೧೧

೧೬.ರುಮಾಲ್ ನಂ ೭೪, ಕಡತದ ಸಂಖ್ಯೆ-೦೮, ಪತ್ರದ ಸಂಖ್ಯೆ- ೧೦

೧೭.ರುಮಾಲ್ ನಂ ೭೪, ಕಡತದ ಸಂಖ್ಯೆ-೦೮, ಪತ್ರದ ಸಂಖ್ಯೆ-೦೪

೧೮.ರುಮಾಲ್ ನಂ ೭೪, ಕಡತದ ಸಂಖ್ಯೆ-೦೮, ಪತ್ರದ ಸಂಖ್ಯೆ-೦೭

೧೯.ರುಮಾಲ್ ನಂ ೭೪, ಕಡತದ ಸಂಖ್ಯೆ-೦೮, ಪತ್ರದ ಸಂಖ್ಯೆ-೦೮

೨೦.ರುಮಾಲ್ ನಂ ೭೪, ಕಡತದ ಸಂಖ್ಯೆ-೦೮, ಪತ್ರದ ಸಂಖ್ಯೆ-೦೩

೨೧.ರುಮಾಲ್ ನಂ ೭೪, ಕಡತದ ಸಂಖ್ಯೆ-೦೮, ಪತ್ರದ ಸಂಖ್ಯೆ-೦೪

೨೨.ರುಮಾಲ್ ನಂ ೭೪, ಕಡತದ ಸಂಖ್ಯೆ-೦೮, ಪತ್ರದ ಸಂಖ್ಯೆ-೦೬

೨೩.ರುಮಾಲ್ ನಂ ೭೪, ಕಡತದ ಸಂಖ್ಯೆ-೦೮, ಪತ್ರದ ಸಂಖ್ಯೆ-೦೯

೨೪.ರುಮಾಲ್ ನಂ ೭೪, ಕಡತದ ಸಂಖ್ಯೆ-೦೮, ಪತ್ರದ ಸಂಖ್ಯೆ-೧೦

೨೫.ರುಮಾಲ್ ನಂ ೭೪, ಕಡತದ ಸಂಖ್ಯೆ-೦೮, ಪತ್ರದ ಸಂಖ್ಯೆ-೧೧

೨೬.ರುಮಾಲ್ ನಂ ೩೨೪, ಇನಾಮ್ ಕಮೀಷನ್-೧೫೨೪೬

೨೭.ಕರ್ನಾಟಕ ಜಮಾವ್ ಆರ್ ನಂ. ೩೨೪, ಇನಾಮ್ ಕಮೀಷನ್-೧೪೨೩೬

೨೮.ಕರ್ನಾಟಕ ಜಮಾವ್ ಆರ್ ನಂ. ೩೨೪, ಇನಾಮ್ ಕಮೀಷನ್-೧೨೩೪೬(೧೭೮೪ ಎ.ಡಿ.)

೨೯.ಕರ್ನಾಟಕ ಜಮಾವ್ ಆರ್ ನಂ. ೩೨೪, ಇನಾಮ್ ಕಮೀಷನ್-೧೫೩೪೬ ಸನ್ನದು

೩೦.ಕರ್ನಾಟಕ ಜಮಾವ್ ಆರ್ ನಂ. ೩೨೪, ಇನಾಮ್ ಕಮೀಷನ್-೧೫೨೪೬

೩೧.ಕರ್ನಾಟಕ ಜಮಾವ್ ಆರ್ ನಂ. ೩೨೪, ಇನಾಮ್ ಕಮೀಷನ್-೧೫೨೪೬

೩೨.ಕರ್ನಾಟಕ ಜಮಾವ್ ಆರ್ ನಂ. ೩೨೪, ಇನಾಮ್ ಕಮೀಷನ್-೧೫೩೪೬ ಸನ್ನದು

೩೩.ಕರ್ನಾಟಕ ಜಮಾವ್ ಆರ್ ನಂ. ೩೨೪, ಇನಾಮ್ ಕಮೀಷನ್-೪೧೯೨

೩೪.ಕರ್ನಾಟಕ ಜಮಾವ್ ಆರ್ ನಂ. ೩೨೪, ಇನಾಮ್ ಕಮೀಷನ್-೪೧೯೨ ಸನ್ನದು

೩೫.೭೦೫೯ - ಭಾರತೀಯ ಇತಿಹಾಸ ಸಂಶೋಧನಾ ಮಂಡಲ, ಪುಣೆ

೩೬.೭೦೬೦ - ಭಾರತೀಯ ಇತಿಹಾಸ ಸಂಶೋಧನಾ ಮಂಡಲ, ಪುಣೆ

೩೭.೭೦೫೩ - ಭಾರತೀಯ ಇತಿಹಾಸ ಸಂಶೋಧನಾ ಮಂಡಲ, ಪುಣ

೩೮.೮೨೫೫ - ಭಾರತೀಯ ಇತಿಹಾಸ ಸಂಶೋಧನಾ ಮಂಡಲ, ಪುಣೆ

೩೯.೭೦೫೬ - ಭಾರತೀಯ ಇತಿಹಾಸ ಸಂಶೋಧನಾ ಮಂಡಲ, ಪುಣೆ

೪೦.೭೦೫೭ - ಭಾರತೀಯ ಇತಿಹಾಸ ಸಂಶೋಧನಾ ಮಂಡಲ, ಪುಣೆ

೪೧.೭೦೫೦ - ಭಾರತೀಯ ಇತಿಹಾಸ ಸಂಶೋಧನಾ ಮಂಡಲ, ಪುಣೆ

೪೨.ಭಾರತೀಯ ಇತಿಹಾಸ ಸಂಶೋಧನಾ ಮಂಡಲ, ಪುಣೆ

೪೩.ಪತ್ರದ ಸಂಖ್ಯೆ ೪೧೧೧

೪೪.ಪತ್ರದ ಸಂಖ್ಯೆ ೧೧೭೮೪

೪೫.ಪತ್ರದ ಸಂಖ್ಯೆ ೩೮೩/೫೪೨ ೧೧೭೮೩

೪೬.ರೂಮಾಲ್ ನಂ. ೧೦, ೧೨೩೪, ಪಾನ ನಂ. ೬೩೩

೪೭.ಪತ್ರದ ಸಂಖ್ಯೆ ೮೧೭೮೪೬ ನಂ. ೩೮೧೨, ಪಾ. ನಂ. ೭೩

೪೮.ಪತ್ರದ ಸಂಖ್ಯೆ ೧೭೫೪

೪೯.ಅರ್ಕಸಾಲಿ ವೃಷಬೇಂದ್ರಾಚಾರ್ "ವೀರರಾಣಿ ಕಿತ್ತೂರು ಚೆನ್ನಮ್ಮ" ೨೦೦೯ ಪುಟ-೩೩

ಅಧ್ಯಾಯ ೬

ಸಮಾರೋಪ

ಭಾರತದ ಇತಿಹಾಸದಲ್ಲಿ ಸ್ವಾತಂತ್ರ್ಯಕ್ಕಿಂತ ಮೊದಲು ಅಸ್ತಿತ್ವದಲ್ಲಿದ್ದ ಅನೇಕ ಸಂಸ್ಥಾನಗಳಿಗೆ ಹೋಲಿಸದರೆ, ಕಿತ್ತೂರು ಸಂಸ್ಥಾನವು ಬಹಳ ಚಿಕ್ಕ ಸಂಸ್ಥಾನವಾಗಿದೆ. ಆಂಗ್ಲರ ದಬ್ಬಾಳಿಕೆಗೆ ಸಿಲುಕಿದ ಅನೇಕ ಸಂಸ್ಥಾನಗಳು, ಆಂಗ್ಲರ ನೀತಿಗೆ ತಲೆಬಾಗಿ, ತಮ್ಮ ಅಸ್ತಿತ್ವವನ್ನು ಮುಂದುವರೆಸಿದರು ಆಂಗ್ಲರೊಂದಿಗೆ ಸಂಧಾನ ಮಾಡಿಕೊಂಡು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದರ ಮೂಲಕ ತಮ್ಮ ಸಂಸ್ಥಾನಗಳ ಅಸ್ತಿತ್ವವನ್ನೇ ಕಳೆದುಕೊಂಡವು.

ಕಿತ್ತೂರು ಸಂಸ್ಥಾನವು ಇಂದು ಅಮರವಾಗಿ ಉಳಿಯಲು ಕಾರಣ ರಾಣಿ ಚೆನ್ನಮ್ಮಾಜಿಯು ಆಂಗ್ಲರ ವಿರುದ್ಧ ಹೋರಾಡಿ, ಇಡೀ ಭಾರತ ಇತಿಹಾಸದಲ್ಲೇ ಪ್ರಪ್ರಥಮ ವೀರ ಮಹಿಳೆ ಎನಿಸಿದ್ದಾಳೆ. ಆಂಗ್ಲರೊಂದಿಗೆ ಹೋರಾಡಿ ಕಿತ್ತೂರು ಸಂಸ್ಥಾನವು ಸೋಲನ್ನು ಅನುಭವಿಸಿತು. ಯಾವುದೇ ಸಂಸ್ಥಾನದ ಘನತೆ-ಗೌರವ ಯುದ್ಧ ಭೂಮಿಯಲ್ಲಿ ಪಡೆದ ಸೋಲು-ಗೆಲವಿನ ಮೇಲೆ ನಿಂತಿರುವುದಿಲ್ಲ. ಅಲ್ಲಿಯ ಸೈನಿಕರ ಚೈತನ್ಯ, ಅವರಲ್ಲಿನ ಸ್ಫೂರ್ತಿ, ದೇಶಪ್ರೇಮ ಮತ್ತು ಆದರ್ಶ ಅದರ ಹಿರಿಮೆಗಳನ್ನು ಎತ್ತಿ ಹಿಡಿದಿರುತ್ತದೆ. ದೇಶದ ಇತಿಹಾಸದಲ್ಲಿ ಸ್ವಾತಂತ್ರ್ಯ ಜ್ಯೋತಿಯನ್ನು ಸದಾ ಉರಿಯುವಂತೆ ಮಾಡಿ, ಸ್ವಾತಂತ್ರ್ಯದ ಕಲ್ಪನೆಯನ್ನು ನೀಡಿದ ಇವರು ತಮ್ಮ ಸರ್ವಸ್ವವನ್ನು ಪಣಕ್ಕಿಟ್ಟು ಭವ್ಯ ಮಾದರಿ ಹಾಕಿಕೊಟ್ಟ ಕಿತ್ತೂರು ಸಂಸ್ಥಾನದ ಕೊಡುಗೆ ಗಮನಾರ್ಹ. ಕಿತ್ತೂರಿನ ಜನರಲ್ಲಿ ದೇಶಭಕ್ತಿ, ಹುಮ್ಮಸ್ಸು, ಸ್ವಾತಂತ್ರ್ಯ ಪ್ರೇಮ ಇವುಗಳನ್ನು ಗೌರವಾಧರಳಿಂದ ನೀಡಿದ ರಾಣಿ ಚೆನ್ನಮ್ಮಳ ಸ್ಫೂರ್ತಿ ಇದಕ್ಕೆ ಕಾರಣವಾಗಿದೆ.

ಪೂರ್ವಾಧ್ಯಯನಗಳಲ್ಲಿ ಕಂಡು ಬರುವ ಅಂಶವೆನೆಂದರೆ ಕಿತ್ತೂರು ಸಂಸ್ಥಾನದ ಭಾಗವು ಕದಂಬ ಸಾಮ್ರಾಜ್ಯದ ಅವಿಭಾಜ್ಯ ಅಂಗವಾಗಿದ್ದು, ಇದು ಪ್ರಮುಖ ಆದಾಯದ ಕೇಂದ್ರವಾಗಿತ್ತು. ಕಿತ್ತೂರಿನ ಮೊದಲ ಹೆಸರು 'ಗೀಜಗನಹಳ್ಳಿ', ನಂತರ ಅಲ್ಲಪ್ಪಗೌಡನ ಕಾಲದಲ್ಲಿ ಸಂಪಗಾಂವ ಕೇಂದ್ರದಿಂದ ಕಿತ್ತೂರಿಗೆ ರಾಜಧಾನಿಯಾಗಿ ಸ್ಥಳಾಂತರವಾಗಿರುವುದರಿಂದ ಗೀಜಗನ ಹಳ್ಳಿಯ ಬದಲು 'ಕಿತ್ತೂರು' ಎಂಬ ಹೆಸರು ಬರಲು ಕಾರಣವಾಯಿತು.

ಕಿತ್ತೂರಿಗೆ ಸಂಬಂಧಿಸಿದ ಸಾಹಿತ್ಯಿಕ ಆಕರಗಳಿಂದ ತಿಳಿಯುವ ಗಮನಾರ್ಹ ಸಂಗತಿ. ದೊರೆ ಮಲ್ಲಸರ್ಜನ ಕಾಲದಲ್ಲಿ ಕಾದರವಳ್ಳಿ, ಬೆಳವಡಿ ಮತ್ತು ತಡಕೋಡು ಪ್ರದೇಶಗಳನ್ನು ವಿಸ್ತರಿಸುವುದರ ಮೂಲಕ ತನ್ನ ಸಾಮ್ರಾಜ್ಯವನ್ನು ವಿಸ್ತರಣೆ ಪಡೆಯಿತು. ಆ ಸಂದರ್ಭದಲ್ಲಿ ತನ್ನ ಆಡಳಿತ ವಿಭಾಗಗಳನ್ನು ಹದಿನಾಲ್ಕು ಕರಿಯಾತುಗಳನ್ನಾಗಿ ವಿಭಜಿಸಲಾಯಿತು. ಕಿತ್ತೂರು

ಸಂಸ್ಥಾನದಲ್ಲಿ ಒಟ್ಟು ೧೨ ಜನ ಅರಸರು ಆಳ್ವಿಕೆ ಮಾಡಿದ್ದು, ಅದರಲ್ಲಿ ಮಲ್ಲಸರ್ಜನ ದೊರೆಯ ಕಾಲವು ಹೆಚ್ಚು ಪ್ರಸಿದ್ಧಿ ಪಡೆಯಿತು. ಆಗ ಒಂದು ಕಡೆ ಟಿಪ್ಪು ಸುಲ್ತಾನ ಇನ್ನೊಂದು ಕಡೆ ಪೇಶ್ವೆಯರು ಹಾಗೂ ಆಂಗ್ಲರ ಪ್ರಭಾವದಿಂದ ಕಿತ್ತೂರು ಸಂಸ್ಥಾನವು ತುಳಿತಕ್ಕೆ ಒಳಗಾಯಿತು. ಹಾಗಿದ್ದಾಗಲೂ ಮಲ್ಲಸರ್ಜನ ದೊರೆಯು ಸುಮಾರು ೩೪ ವರ್ಷಗಳ ಕಾಲ ಆಳ್ವಿಕೆ ಮಾಡಿ ಆಂಗ್ಲ ಅಧಿಕಾರಿಯಾದ ಕರ್ನಲ್ ಕಲೋಸ್‌ರವರಿಂದ 'ಶಮ್‌ಷರ್‌ಜಂಗ್ ಬಹದ್ದೂರ ದೇಸಾಯಿ ಹಾಗೂ ಸವಾಯಿ ಮಾಧವ ಪೇಶ್ವೆಯವರಿಮದ ಪ್ರತಾಪರಾವ್ ಎಂಬ ಪದವಿಯನ್ನು ಪಡೆದು, ಇದರ ಸವಿನೆನಪಿಗೋಸ್ಕರ, ಮಲ್ಲಸರ್ಜನನು ನಂದಗಡದಲ್ಲಿ ಪ್ರತಾಪಗಡ ಕೋಟೆಯನ್ನು ಕಟ್ಟಿಸಿದನು.

ಮಲ್ಲಸರ್ಜನ ತರುವಾಯ ದತ್ತು ತೆಗೆದುಕೊಳ್ಳುವ ವಿಷಯದಲ್ಲಿ ಮಾಸ್ತಮರಡಿಯ ಬಾಳಪ್ಪನ ಮಗ ಶಿವಲಿಂಗನನ್ನು ಪಡೆದುಕೊಂಡ ಸಂದರ್ಭದಲ್ಲಿ ಕುನ್ನೂರು ಮಲ್ಲಪ್ಪ ಶೆಟ್ಟಿಯು, ಆಂಗ್ಲ ಅಧಿಕಾರಿಗಳಿಗೆ ಇಲ್ಲಿಯ ಆಂತರಿಕ ವಿಷಯಗಳನ್ನು ತಿಳಿಸಿ ಸಂಸ್ಥಾನದಲ್ಲಿ ಒಡಕುಂಟು ಮಾಡಿದನು. ಇದರಿಂದ ಥ್ಯಾಕರೆಯು ಕಿತ್ತೂರಿನ ಮೇಲೆ ಯುದ್ಧ ಘೋಷಿಸುವಂತಾಯಿತು. ಚೆನ್ನಮ್ಮಾಜಿಯವರೇ ಆಡಳಿತ ನಡೆಸುವ ಪರಿಸ್ಥಿತಿ ಒದಗಿ ಬಂದಾಗ ಕಲ್ಮಠದ ರಾಜಗುರುಗಳ ಉಪದೇಶದಂತೆ ಆಡಳಿತ ನಡೆಸಿ ಆಂಗ್ಲರ ವಿರುದ್ಧ ತನ್ನ ಸೈನ್ಯದ ಮೂಲಕ ಉತ್ತರ ನೀಡಿರುವುದನ್ನು ಕಾಣಬಹುದು.

ಕಿತ್ತೂರು ಸಂಸ್ಥಾನದ ಇತಿಹಾಸವನ್ನು ಅರಿಯಲು ಆಕರಗಳಾಗಿ ೨೩ ಜಾನಪದ ಹಾಡುಗಳು ನಮಗೆ ಮಾಹಿತಿ ನೀಡುತ್ತವೆ. ಇಲ್ಲಿಯ ಸಾಮಾಜಿಕ ಪರಿಸ್ಥಿತಿ, ಧಾರ್ಮಿಕ ಪರಿಸ್ಥಿತಿ ಹಾಗೂ ರಾಜಕೀಯ ವಿದ್ಯಮಾನಗಳ ನೆಲೆ, ಬೆಳಕನ್ನು ಚೆಲ್ಲಲು ಸಹಾಯ ಮಾಡಿವೆ. ಈ ರಾಜ ಮನೆತನದ ವಂಶಾವಳಿಯ ಮೇಲೂ ಜಾನಪದ ಗೀತೆಗಳು ಪ್ರಭಾವ ಬೀರಿವೆ. ಹೀಗೆ ಚೆನ್ನಮ್ಮನ ಸಾಹಸದ ಕಥೆಯನ್ನು ರಚಿಸಲು ದುಂದುಮಿ, ಕೋಲುಪದ, ಲಾವಣಿ, ಕೈಫಿಯತ್ತು, ಮೋಡಿ ದಾಖಲೆಗಳು, ಶಾಸನಗಳು ಕಿತ್ತೂರು ಸಂಸ್ಥಾನದ ಇತಿಹಾಸಕ್ಕೆ ಪ್ರಮುಖ ಆಕರಗಳೆನ್ನಬಹುದು.

ಆನಂದ ಕವಿ ಬರೆದ 'ಕಿತ್ತೂರು ಕೋಟೆಯ ನೋಟ' ಉಲ್ಲೇಖಿಸಿ ಕಿತ್ತೂರಿನ ಸೊಬಗನ್ನು ಎಂಟು ನುಡಿಗಳ ಮೂಲಕ ಸ್ತುತಿಸಿದ್ದಾನೆ. ಕೋಟೆಯ ಒಟ್ಟು ಚಿತ್ರಣ ಆರು ಸಾಲಿನ ನುಡಿಯಲ್ಲಿ ಬಹಳ ಅರ್ಥಗರ್ಭಿತವಾಗಿ ಹಾಗೂ ಸ್ಪಷ್ಟ ಚಿತ್ರಣವನ್ನು ಓದುಗನ ಮನಸ್ಸಿನ ಮೇಲೆ ಪರಿಣಾಮ ಬೀರುವಂತೆ ರಚಿಸಿದ್ದಾರೆ. ಅಲ್ಲಿಯ ಸೊಬಗು, ಸುತ್ತಲಿನ ಅಗಳ, ಉತ್ತರ ಧ್ರುವ ದರ್ಶನ ಮಾಡುವ ಕೊಳವೆ, ಮಾಣಿಕ್ಯ, ಪಚ್ಚೆ ರತ್ನಗಳನ್ನು ಸಂಗ್ರಹಿಸುವ ಕೋಣೆ ಹೀಗೆ ಶೋಭಿಸುವ ಕಿತ್ತೂರು ಅರಮನೆಯು ಕನ್ನಡ ನಾಡಿನಲ್ಲೇ ಕೀರ್ತಿ ಹೊಂದಿದೆ ಎಂದು ನುಡಿದದ್ದನ್ನು ನೋಡಿದರೆ, ಕಿತ್ತೂರು ಸಂಸ್ಥಾನ ನಾಡಿಗೆ ನೀಡಿದ ಕೊಡುಗೆಯನ್ನು ಗಮನಿಸಬಹುದು.

ಕಿತ್ತೂರು ಸಂಸ್ಥಾನವು ಕೃಷಿ ಪ್ರಧಾನವಾದ ನಾಡಾಗಿದ್ದು, ಅರಣ್ಯ ಮತ್ತು ನೀರಾವರಿ ಸೌಲಭ್ಯಗಳಿಂದ ಕೂಡಿದೆ. ಕೆರೆ-ಕಟ್ಟೆಗಳನ್ನು ಕಟ್ಟಿಸಿದ್ದರಿಂದ ಸಮೃದ್ಧವಾದ, ಯೋಗ್ಯವಾದ ಭೂಮಿಯಾಗಿತ್ತು. ಇದರ ಫಲವಾಗಿ ಮಲ್ಲಸರ್ಜನನ ಕಾಲದಲ್ಲಿ ಸುಮಾರು ೭ ಲಕ್ಷ ರೂಪಾಯಿ ವಾರ್ಷಿಕ ಆದಾಯ ಬರುವ ಮೂಲಗಳಾಗಿದ್ದವು. ಕೃಷಿ ಮಾತ್ರವಲ್ಲದೇ ಈ ಭಾಗದಲ್ಲಿ ಬೃಹತ್ತಾದ ಬಂಡೆ-ಗಲ್ಲುಗಳು, ಮರ, ಗಿಡ-ಮೂಲಿಕೆಗಳ ಕೇಂದ್ರವಾಗಿತ್ತು. ಈ ಭಾಗದಲ್ಲಿ ಸಮೃದ್ಧವಾದ ಅರಣ್ಯ ಸಂಪತ್ತಿನ ಪ್ರಭಾವದಿಂದ ನಿರ್ಮಿಸಿದ ಎಲ್ಲ ಮನೆಗಳಿಗೂ ಉತ್ತಮ ಕಟ್ಟಿಗೆ ಬಳಸಿ ಚಿತ್ರ-ಚಿತ್ತಾರಗಳಿಂದ ಕೆತ್ತನೆ ಮಾಡಿಸಿ ಸುಂದರವಾದ ಮನೆಗಳನ್ನು ನಿರ್ಮಿಸಿಕೊಂಡಿರುವುದಲ್ಲದೇ ಇಲ್ಲಿಯ ಅರಮನೆಗೆ ಮತ್ತು ಗುರುಮನೆಗೆ ಕಾಷ್ಠಶಿಲ್ಪವನ್ನೇ ಬಳಸಿರುವುದು ಕಲಾ ಸಂಸ್ಕೃತಿಯ ಕೊಡುಗೆಯಾಗಿದೆ.

ಈ ಭಾಗದಲ್ಲಿ ಹೇರಳವಾದ ಖನಿಜ ಸಂಪತ್ತು ಲಭ್ಯವಿಲ್ಲದಿದ್ದರೂ ಇಲ್ಲಿ ಮ್ಯಾಂಗನೀಜ್ ಅದಿರು, ಬಾಕ್ಸೈಟ್, ಸುಣ್ಣದಕಲ್ಲು, ಜೇಡಿಮಣ್ಣು, ಬೆಣಚು ಶಿಲೆ ಮತ್ತು ಮರಳು ಕಲ್ಲುಗಳು ದೊರೆಯುತ್ತಿದ್ದವು. ಇದೇ ಮಾದರಿಯ ಮರಳುಕಲ್ಲುಗಳು ಸವದತ್ತಿ ಭಾಗದಲ್ಲಿ ಹೇರಳವಾಗಿ ದೊರೆತಿವೆ. ಅದರಂತೆ ಎರಕದ ಮರಳುಗಳು ಇಂದಿನ ಖಾನಪುರ ತಾಲೂಕಿನ ಮಲಪ್ರಭಾ ನದಿಯ ತೀರದಲ್ಲಿ ವಿಪುಲವಾಗಿ ದೊರೆತಿರುವುದು ಇಲ್ಲಿನ ಪ್ರಾಕೃತಿಕ ಸಂಪತ್ತಿನ ಮೇಲಿನ ಪ್ರಭಾವವಾಗಿದೆ.

ಕಿತ್ತೂರಿನ ರಾಜಪರಂಪರೆಯಲ್ಲಿ ಹನ್ನೊಂದನೆಯವನಾದ ದೊರೆ ಮಲ್ಲಸರ್ಜನ ಪ್ರತಾಪರಾವ ಸರ್‌ದೇಸಾಯಿ ಶಮ್‌ಶರಜಂಗ ಬಹದ್ದೂರ ಎಂಬ ಬಿರುದಾಂಕಿತನಾಗಿದ್ದನು. ಪರಧರ್ಮ ಸಹಿಷ್ಣುವು, ಪ್ರಜಾ ಪರಿಪಾಲಕನು ಆಗಿದ್ದು, ಈತನನ್ನು ಈಶ್ವರನಿಗೆ ಹೋಲಿಸಲಾಗುತ್ತಿತ್ತು. ಈತನ ಪತ್ನಿಯರಾದ ರುದ್ರಮ್ಮ ಮತ್ತು ಚೆನ್ನಮ್ಮಾಜಿಯವರನ್ನು ಗಂಗೆ-ಗೌರಿಯಂತೆ ಪ್ರಜೆಗಳು ಕಾಣುತ್ತಿದ್ದರು.

ಕಿತ್ತೂರಿನ ಆಡಳಿತದ ವಿಷಯದಲ್ಲಿ ದತ್ತಕ ಅಂಶವು ಬಂದಾಗ, ಇವರ ಬಗ್ಗೆ ಆಂಗ್ಲರು ಸಂಶಯಪಟ್ಟರು. ಈಗ ದತ್ತಕ ತೆಗೆದುಕೊಳ್ಳಲು ಸಾಧ್ಯವಿಲ್ಲ. ದತ್ತಕ ತೆಗೆದುಕೊಂಡರೆ ಅದನ್ನು ಆಂಗ್ಲ ಸರಕಾರವು ಮಾನ್ಯಮಾಡುವುದಿಲ್ಲವೆಂದು ಅಂದಿನ ಕಲೆಕ್ಟರ್‌ರು ತಿಳಿಸಿದರು. ಒಂದು ವೇಳೆ ದತ್ತಕ ತೆಗೆದುಕೊಳ್ಳುವುದೇ ಆದರೆ, ದೇಸಾಯಿಯ ವಂಶದವರೆಂದು ಕಂಡು ಬಂದರೆ ಮಾತ್ರ, ತೆಗೆದುಕೊಳ್ಳಲು ತಿಳಿಸಬೇಕೆಂದು ಕಂಪನಿ ಸರಕಾರವು ಸುತ್ತೋಲೆಯನ್ನು ಹೊರಡಿಸಿತು. ಸಂಬಂಧಿಕರು ಯಾರು ಇಲ್ಲದಿದ್ದಾಗ ದತ್ತಕ ಮಗನೆಂಬುವನು ದೇಸಾಯಿಯ ಮನೆತನಕ್ಕೆ ಸಂಬಂಧವಿಲ್ಲವೆಂದು ಕುನ್ನೂರು ಮಲ್ಲಪ್ಪ ಶೆಟ್ಟಿ ಮತ್ತು ವೆಂಕಟರಾವ ಆಂಗ್ಲರಿಗೆ ಸುದ್ದಿಯನ್ನು ತಿಳಿಸಿದರು. ಆದ್ದರಿಂದ ಆಂಗ್ಲ ಅಧಿಕಾರಿಗಳು ಇವರಿಬ್ಬರನ್ನೇ ಇಲ್ಲಿಯ ಕಾರಭಾರಿಗಳೆಂದು ನೇಮಿಸಿ ಆದೇಶಿಸಿದರು. ಇದರಿಂದ ಸಂಸ್ಥಾನದಲ್ಲಿ ಒಕ್ಕಟ್ಟು ಒಡೆದು ಆಂತರಿಕ ಬಿಕ್ಕಟ್ಟು ಕಾಣಿಸಿಕೊಂಡಿತು. ಮಲ್ಲಪ್ಪ ಶೆಟ್ಟಿ ಮತ್ತು ವೆಂಕಟರಾಯರ ರಾಜನಿಷ್ಠೆಯ ಬಗ್ಗೆ ಸಂಶಯ ಉಂಟಾಯಿತು. ಇವರು ಆಂಗ್ಲ

ಸರಕಾರಕ್ಕೆ ಹಿತೈಷಿಗಳಾಗಿ, ಕಿತ್ತೂರಿನ ಸಂಸ್ಥಾನಕ್ಕೆ ಹಿತಶತ್ರುಗಳಾಗಿ ಕಾರ್ಯನಿರ್ವಹಿಸಲಾರಂಭಿಸಿರು. ಇಂತಹ ಪರಿಸ್ಥಿತಿಯಲ್ಲಿ ಕೌಟುಂಬಿಕ ಭಿನ್ನಾಭಿಪ್ರಾಯ ತಲೆದೋರಿ ಹೊರಗಿನ ಶತ್ರುಗಳೊಂದಿಗೆ ಸೆಣಸಾಡುವುದರ ಬದಲಿಗೆ ಒಳಗಿನ ಶತ್ರುವನ್ನು ದಮನ ಮಾಡುವುದು ಅನಿವಾರ್ಯವಾಯಿತು. ಕಿತ್ತೂರು ದೇಸಾಯಿಯ ವಂಶದಲ್ಲಿ ವಾರಸುದಾರರು ಯಾರು ಇಲ್ಲದೇ ಇದ್ದಾಗ, ಇಲ್ಲಿಯ ಮಾಸ್ತಮರಡಿಯ ದೇಸಾಯಿಯ ಮಗನನ್ನು ದತ್ತಕ್ಕೆ ತೆಗೆದುಕೊಳ್ಳಲು ನಿರ್ಧರಿಸಿದರು. ಆಗ ಆಂಗ್ಲರು ಕಿತ್ತೂರು ಸಂಸ್ಥಾನವನ್ನು ಕಬಳಿಸುವ ಪ್ರಯತ್ನದಲ್ಲಿ, ಕಿತ್ತೂರನ್ನು ವಶಕ್ಕೆ ತೆಗೆದು ಕೊಳ್ಳಲು ಪ್ರಯತ್ನಿಸಿದರು. ಇದರಿಂದ ಅಂದು ಕಿತ್ತೂರಿನಲ್ಲೇ ಉದ್ವಿಗ್ನ ಪರಿಸ್ಥಿತಿ ಉಂಟಾಯಿತು. ಆಗ ಚೆನ್ನಮ್ಮಾಜಿಯ ಸ್ವಾಭಿಮಾನವು ಹೆಡೆಯೆತ್ತಿ ನಿಂತಿತು. ಆದರೆ ಕನ್ನಡಿಗರು ಆಂಗ್ಲರ ದಾಸ್ಯವನ್ನು ಸಹಿಸಲಿಕ್ಕಿಲ್ಲವೆಂದು, ಆಂಗ್ಲರ ವಿರುದ್ಧ ರಣಕಹಳೆಯನ್ನು ಮೊಳಗಿಸಿಲು ಸನ್ನದ್ಧ ಳಾದಳು. ಅಕ್ಟೋಬರ್ ೨೩, ೧೯೨೪ರಂದು ಕಿತ್ತೂರಿನಲ್ಲಿ ಘೋರ ಕಾಳಗವಾಗಿ ಥ್ಯಾಕರೆಯ ರುಂಡವನ್ನು ಹಾರಿಸಲಾಯಿತು. ಅದೇ ಕಿತ್ತೂರು ಸಂಸ್ಥಾನದ ಪ್ರಥಮ ವಿಜಯೋತ್ಸವವಾಯಿತು. ಅದರ ಸ್ಮರಾಣರ್ಥವಾಗಿ ಇಂದಿಗೂ ಅಕ್ಟೋಬರ ೨೩ರಂದು ಈ ವಿಜಯೋತ್ಸವವನ್ನು ಆಚರಿಸ ಲಾಗುತ್ತಿದೆ.

೧೭ ಮತ್ತು ೧೮ನೇ ಶತಮಾನದಲ್ಲಿ ಕಿತ್ತೂರು ಸಂಸ್ಥಾನ ರಾಜ್ಯವನ್ನು ವಿಸ್ತರಿಸುವ ಸಲುವಾಗಿ ಅನೇಕ ಸಂಸ್ಥಾನಗಳೊಂದಿಗೆ ರಾಜಕೀಯ ಸಂಬಂಧವನ್ನು ಬೆಳೆಸಿತು. ಮುಖ್ಯವಾಗಿ ಸವಣೂರಿನ ನವಾಬರೊಂದಿಗೆ, ಪೇಶ್ವೆಯವರೊಡನೆ ಒಪ್ಪಂದ ಮಾಡಿಕೊಂಡು, ಸುಮಾರು ೮೦,೦೦೦ ರೂಪಾಯಿ ಕಪ್ಪ ಕಾಣಿಕೆಯನ್ನು ನೀಡಿ ಅಧೀನ ಅರಸರಾಗಿ ಆಳ್ವಿಕೆ ನೆಡೆಸಿದರು. ಹೈದಾರಲಿಯೊಂದಿಗೆ ಒಪ್ಪಂದ ಮಾಡಿಕೊಂಡು, ಕಿತ್ತೂರು ದೇಶಗತ್ತಿಯು ಸ್ವತಂತ್ರವಾಯಿತು. ಒಂದು ಕಡೆ ಪೇಶ್ವೆ ಇನ್ನೊಂದು ಕಡೆ ಹೈದರಾಲಿ, ಇವುಗಳ ಮಧ್ಯೆ ಕಿತ್ತೂರು ಸಂಸ್ಥಾನವಿದ್ದ ಕಾರಣ, ಅನೇಕ ಕಠಿಣ ಪರಿಸ್ಥಿತಿಯನ್ನು ಎದುರಿಸಿತು. ಇಂತಹ ಪರಿಸ್ಥಿತಿಯಲ್ಲಿ ಗೋಕಾಕದ ಪರಶುರಾಮ್‌ಬಾಹು ಪಟವರ್ಧನ ದಾಳಿ ನಡೆಸಿ ಕಿತ್ತೂರಿನ ದೊರೆ ವೀರಪ್ಪಗೌಡನು ಮುಂದೆ ತನಗೊಂದು ದಿವಸ ಎದುರಾಳಿಯಾಗಬಹುದೆಂದು ತಿಳಿದು ದಾಳಿಮಾಡಿದನು. ಅಲ್ಲದೇ ಪೇಶ್ವೆ ಅರಸರು ವೀರಪ್ಪಗೌಡನನ್ನು ೧೭೭೯ರಲ್ಲಿ ಮೀರಜ್‌ನಲ್ಲಿ ಬಂಧಿಸಿದರು. ಆತ ಮೀರಜನಲ್ಲಿಯೇ ೧೭೮೨ರಲ್ಲಿ ಸಾವನ್ನಪ್ಪಿದಾಗ ಆತನ ಮೃತ ದೇಹವನ್ನು ತಂದು ಕಲ್ಮಠದಲ್ಲಿ ಸಮಾಧಿ ಮಾಡಲಾಯಿತು. ಆತನ ತರುವಾಯ ಅಧಿಕಾರಕ್ಕೆ ಬಂದವನೇ ಮಲ್ಲಸರ್ಜನ ದೇಸಾಯಿ. ೧೭೮೫ ರಲ್ಲಿ ಟಿಪ್ಪು ಸುಲ್ತಾನನು ಗಜೇಂದ್ರಗಡ ಒಪ್ಪಂದವನ್ನು ಮಾಡಿಕೊಂಡು ಕಿತ್ತೂರನ್ನು ಮರಾಠರಿಗೆ ಬಿಟ್ಟು ಕೊಡಬೇಕಾಯಿತು. ಆಗ ಪೇಶ್ವೆ ಸರಕಾರದ ಅಧಿಕಾರಿಯಾಗಿ ಬಾಬುರಾವ್ ಭಾಸ್ಕರನನ್ನು ಕಿತ್ತೂರಿಗೆ ನೇಮಿಸಲಾಯಿತು.

ಪೇಶ್ವೆಯರು ೧೭೯೨ರಲ್ಲಿ ಆಂಗ್ಲರೊಂದಿಗೆ ಶ್ರೀರಂಗಪಟ್ಟಣ ಒಪ್ಪಂದಕ್ಕೆ ಸಹಿ ಹಾಕಿದ ಮೇಲೆ, ಆಂಗ್ಲರ ಕೈಗೊಂಬೆಗಳಂತೆ ವರ್ತಿಸಲಾರಂಭಿಸಿದರು. ೧೮೦೨ರಲ್ಲಿ ಜನರಲ್ ವೆಲ್ಲಸ್ಲಿಯು ಶ್ರೀರಂಗಪಟ್ಟಣದಿಂದ ಪುಣೆಗೆ ಹೋರಟಾಗ ಕಿತ್ತೂರಿನ ಮಾರ್ಗದಲ್ಲಿಯೇ, ಪ್ರಯಾಣ ಬೆಳೆಸಿದನು. ಮಲ್ಲಸರ್ಜನ ಆದರ-ಆತಿಥ್ಯವನ್ನು ಸ್ವೀಕರಿಸಿ ಆಂಗ್ಲರಿಗೆ ನೂರು ಜನ ಸೈನಿಕರು ಮತ್ತು ನೂರು ಕುದುರೆಗಳನ್ನು ಒಪ್ಪಿಸಿದನು. ಮಲ್ಲಸರ್ಜನನಿಗೆ ಅಂದಿನ ಉತ್ಪನ್ನ ಸುಮಾರು ೫,೦೦,೦೦೦ ರೂಪಾಯಿಗಳಷ್ಟು ಇದ್ದಿತ್ತು. ಇದರಲ್ಲಿ ಸುಮಾರು ೭೦,೦೦೦ ರೂಪಾಯಿಗಳನ್ನು ಪೇಶ್ವೆಯವರಿಗೆ ಕಪ್ಪವನ್ನಾಗಿ ನೀಡುತ್ತಿದ್ದನು. ಈತನ ಪ್ರಾಬಲ್ಯತೆಯು, ದಿನದಿಂದ ದಿನಕ್ಕೆ ಹೆಚ್ಚುವುದನ್ನು ಕಂಡು ಪೇಶ್ವೆಯರು ವೆಲ್ಲಸ್ಲಿಗೆ ಪತ್ರ ಬರೆದು ಮಲ್ಲಸರ್ಜನನ್ನ ಕಿತ್ತು ಹಾಕಿ ಆತನ ರಾಜ್ಯವನ್ನು ಕಸಿದುಕೊಳ್ಳುವಂತೆ ಸಲಹೆ ಮಾಡಿದರು. ಆದರೆ ವೆಲ್ಲಸ್ಲಿಯು ಈ ಸಲಹೆಯನ್ನು ಒಪ್ಪಲಿಲ್ಲ. ಕ್ರಿ.ಶ. ೧೮೦೯ರಲ್ಲಿ ಪೇಶ್ವೆಯು ಬಳ್ಳಾರಿಯಿಂದ ವಾಪಸ್ಸು ಬರುವಾಗ, ಮಲ್ಲಸರ್ಜನನ್ನು ಪುಣೆಗೆ ಕರೆಸಿಕೊಂಡು ವಾರ್ಷಿಕವಾಗಿ ೧,೭೫,೦೦೦ ರೂಪಾಯಿ ಕಪ್ಪ ನೀಡಬೇಕೆಂದು ಒಪ್ಪಂದ ಮಾಡಿಕೊಂಡನು. ಇದಕ್ಕೆ ಪ್ರತಿಯಾಗಿ ಮಲ್ಲಸರ್ಜನನಿಗೆ ಪ್ರತಾಪ್‌ರಾವ್ ಎಂದು ಬಿರುದು ನೀಡಲಾಯಿತು. ಆದರೂ ಪೇಶ್ವೆಯವರಿಗೆ ಕಿತ್ತೂರಿನ ಅರಸರ ಮೇಲೆ ಪ್ರೀತಿಯಾಗಲಿ, ವಿಶ್ವಾಸವಾಗಲಿ ಇರಲಿಲ್ಲ. ಮಲ್ಲಸರ್ಜನನಂತಹ ನಿಷ್ಠಾವಂತ ದೊರೆಯನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ. ಬದಲಿಗೆ ಮಲ್ಲಸರ್ಜನನ್ನು ಮೋಸದಿಂದ ಬಂಧಿಸಿ ಪುಣೆಯಲ್ಲಿರಿಸಿದರು. ಆತ ಅಲ್ಲಿಯೇ ರೋಗಕ್ಕೆ ಗುರಿಯಾಗಿ, ಆತನ ದೇಹ ಪ್ರಕೃತಿಯು ಕ್ಷೀಣಿಸಲಾರಂಭಿಸಿತು, ೧೮೧೮ರವರೆಗೂ ಕಿತ್ತೂರು ಪ್ರಾಂತ್ಯವು ಮರಾಠರ ವಶದಲ್ಲಿಯೇ ಉಳಿಯಬೇಕಾಯಿತು. ಪೇಶ್ವೆ ಸರಕಾರವು ಕಿತ್ತೂರಕರ್ ದೇಸಾಯಿಯವರನ್ನು ೧೧ ಗ್ರಾಮಗಳ ಜಹಾಗೀರುದಾರನೆಂದು ನೇಮಿಸಿ ಆದೇಶಿಸಿತು. ಇದರಿಂದ ಮರಾಠರೊಂದಿಗೆ ಸಂಬಂಧ ಬೆಳೆಸುವುದು ಕಿತ್ತೂರು ದೊರೆಗಳಿಗೆ ಅನಿವಾರ್ಯವಾಯಿತು.

೧೭೮೨ರಲ್ಲಿ ಮರಾಠರು ಇಂಗ್ಲಿಷರೊಂದಿಗೆ ಸಾಲ್‌ಬಾಯ್ ಒಪ್ಪಂದವನ್ನು ಮಾಡಿಕೊಂಡಿದ್ದರಿಂದ, ಕರ್ನಾಟಕದಲ್ಲಿಯ ಮರಾಠ ಪ್ರದೇಶಗಳನ್ನು ಇಂಗ್ಲೀಷರು ಮರಾಠರಿಗೆ ಬಿಟ್ಟುಕೊಟ್ಟರು. ಆದರೆ ಕಿತ್ತೂರನ್ನು ಮಾತ್ರ ಟಿಪ್ಪುವಿನ ಸೇನಾಪತಿಯಾದ ಸುಬ್ಬರಾವ್ ಮೋಹಿತೆ ವಶಪಡಿಸಿಕೊಂಡು ಅಮಾಯಕರನ್ನು ಕೊಲ್ಲುವುದು, ಮಾನಭಂಗಮಾಡುವುದು, ಸಂಪತ್ತನ್ನು ಲೂಟಿಮಾಡುವುದು ಹೀಗೆ ಅನೇಕ ರೀತಿಯ ಕಿರುಕುಳಗಳನ್ನು ನೀಡಲಾರಂಭಿಸಿದನು. ಇಂತಹ ಸಂದರ್ಭದಲ್ಲಿ ಬಾಬುರಾವ್ ಭಾಸ್ಕರನು ನಾನಾಫಡ್ನಿಸನಿಗೆ ಪತ್ರದ ಮೂಲಕ ತಿಳಿಸಿ ಟಿಪ್ಪುವಿನ ಸೈನ್ಯವನ್ನು ವಾಪಾಸು ಕರೆಸಿಕೊಳ್ಳಲು ತಿಳಿಸಿದರೂ, ಇದಕ್ಕೆ ನಾನಾಫಡ್ನಿಸನ ನಿರಾಸಕ್ತಿಯಿಂದ, ಕಿತ್ತೂರಿಗೆ ಬಂದೊದಗಿದ ಆಪತ್ತನ್ನು ತಪ್ಪಿಸಲಾಗಲಿಲ್ಲ. ೧೭೮೫ರಲ್ಲಿ ಮಲ್ಲಸರ್ಜನನ್ನು ಟಿಪ್ಪುವು ಬಂಧಿಸಿ ಕಪಾಳದುರ್ಗ ಕೋಟೆಯಲ್ಲಿ ಇಟ್ಟನು. ಅಲ್ಲಿಂದ ತಪ್ಪಿಸಿಕೊಂಡು ಮಲ್ಲಸರ್ಜನನು ಮರಳಿ ಕಿತ್ತೂರಿಗೆ ಬಂದನು. ಈ ಸಂದರ್ಭದಲ್ಲಿ ನಾನಾಪಡ್ನೀಸನು ಕಾರ್ಯೋನ್ಮುಖನಾಗಿ ಕೆಲವು ಅಧಿಕಾರಿಗಳನ್ನು ಸೈನ್ಯದ

ಸಮೇತ ಕಿತ್ತೂರಿಗೆ ಕಳಿಸಿದನು. ಇದಕ್ಕೆ ಕಾರಣ ತಮ್ಮ ಪ್ರತಿಷ್ಠೆಯನ್ನು ಮರಳಿ ಪಡೆಯುವ ಉದ್ದೇಶದಿಂದ ಈ ಕ್ರಮ ಕೈಗೊಂಡನು. ೧೭೮೭ರಲ್ಲಿ ಸುಬ್ಬರಾವ್ ಮೋಹಿತೆಯನ್ನು ಓಡಿಸಿ, ಕಿತ್ತೂರು ಭಾಗದಲ್ಲಿ ಶಾಂತಿಯನ್ನು ಸ್ಥಾಪಿಸಿದರು. ಗಜೇಂದ್ರಗಡ ಒಪ್ಪಂದದ ಪ್ರಕಾರ ಕಿತ್ತೂರಿಗೆ ಸ್ಥಾನಮಾನವನ್ನು ನೀಡಬೇಕೆಂದು ಟಿಪ್ಪುವು ಉಲ್ಲೇಖಿಸಿದ ಅಂಶವಿದೆ. ಸುಬ್ಬರಾವ್ ಮೋಹಿತೆಯು ತನ್ನ ಯುದ್ಧದ ವೆಚ್ಚಕ್ಕಾಗಿ ಸುಮಾರು ೨೫ ಸಾವಿರ ಹೊನ್ನುಗಳನ್ನು ಪಡೆದುಕೊಂಡನು. ಇಂತಹ ಸಂದರ್ಭದಲ್ಲಿ ಬಾಬುರಾವ್ ಭಾಸ್ಕರನು ಪೂನಾ ಸರ್ಕಾರಕ್ಕೆ ಪತ್ರ ಬರೆದು "ನಾವು ಹೇಡಿಗಳಲ್ಲ, ನಮ್ಮ ಒಡೆಯರಿಗೆ ನಮ್ಮ ಪ್ರಾಣವನ್ನು ಕೊಡಲು ಹಿಂದೇಟು ಹಾಕುವುದಿಲ್ಲ, ಆದರೆ ನಮ್ಮ ಸೈನಿಕರ ಖರ್ಚಿಗೆ ಹಣದ ಕೊರತೆ ಉಂಟಾದರೆ ನಾವು ಸಹಾಯಕರಾಗುತ್ತೇವೆ. ನಮ್ಮ ಸಿಂಹಗಳನ್ನು ಸನ್ನದ್ಧಗೊಳಸದಿದ್ದರೆ, ಈ ಪ್ರದೇಶವನ್ನು ಉಳಿಸಿಕೊಳ್ಳುವುದಾದರೂ ಹೇಗೆ?" ಎಂದು ತನ್ನ ಅಭಿಪ್ರಾಯ ತಿಳಿಸಿದನು. ಇದಕ್ಕೆ ಪ್ರತಿಯಾಗಿ ನಾನಾಫಡ್ನಿಸನು ೨೫,೦೦೦ ರೂಪಾಯಿ ಗಳನ್ನು ಕೊಟ್ಟು ಕಳಿಸಿದನು. ಕಾರಣ ಈ ಭಾಗದಲ್ಲಿ ಭೀಕರವಾದ ಬರಗಾಲ ಉಂಟಾಗಿರುವುದ ರಿಂದ ಆಹಾರದ ಕೊರತೆಯು ಉಂಟಾಗಿತ್ತು. ಆದ್ದರಿಂದ ಬಾಬುರಾವ್ ಭಾಸ್ಕರ ಇಲ್ಲಿಯ ಸೈನಿಕರಿಗೆ ಸಹಾಯ ಮಾಡಲು ಹಗಲು ರಾತ್ರಿ ಪ್ರಯತ್ನಿಸುತ್ತಿದ್ದನು. ಹೀಗೆ ಕಿತ್ತೂರು ಸಂಸ್ಥಾನವು ಮರಾಠರೊಂದಿಗೆ ಅನ್ಯೋನ್ಯವಾದ ಸಂಬಂಧ ಹೊಂದಿತ್ತೆಂಬುದು ಸ್ಪಷ್ಟವಾಗಿದೆ.

ಕಿತ್ತೂರು ಸಂಸ್ಥಾನ ಮತ್ತು ಬಿಜಾಪುರ ಸುಲ್ತಾನರಿಗೆ ಅನ್ಯೋನ್ಯ ಸಂಬಂಧವಿದ್ದಿತ್ತು, ಕಾರಣ ಬಿಜಾಪುರ ಸುಲ್ತಾನರ ಕಾಲದಲ್ಲಿ ಹಿರೇಮಲ್ಲಶೆಟ್ಟಿ ಮತ್ತು ಚಿಕ್ಕ ಮಲ್ಲಶೆಟ್ಟಿ ಎಂಬ ಇಬ್ಬರು ಸೈನ್ಯದಲ್ಲಿ ಸೇವೆ ಸಲ್ಲಿಸಿದ ಸಲುವಾಗಿ, ಈ ಸಹೋದರರಿಗೆ ಸಂಪಗಾಂವ್ ಪ್ರಾಂತ್ಯ ವನ್ನು ಉಂಬಳಿಯಾಗಿ ನೀಡಲಾಯಿತು. ಈ ಭಾಗವೆಲ್ಲವೂ ಬಿಜಾಪುರ ಸುಲ್ತಾನರಿಗೆ ಸಂಬಂಧಿಸಿದ ಪ್ರಾಂತ್ಯವಾಗಿತ್ತು. ಬಿಜಾಪುರ ಸುಲ್ತಾನರ ಪತನಾನಂತರ ಸವಣೂರಿನ ನವಾಬನು ಈ ಪ್ರಾಂತದ ಆಡಳಿತ ನೋಡಿಕೊಳ್ಳುತ್ತಿದ್ದನು. ಇದೇ ಸಮಯದಲ್ಲಿ ಕಿತ್ತೂರು ಸಂಸ್ಥಾನದ ೫ನೆಯವನಾದ ಅಲ್ಲಪ್ಪ ಗೌಡ ದೇಸಾಯಿಯ ರಾಜಧಾನಿಯನ್ನು ಸಂಪಗಾಂವದಿಂದ ಕಿತ್ತೂರಿಗೆ ಸ್ಥಳಾಂತರಿಸಿದನು. ಬಿಜಾಪುರದ ಸುಲ್ತಾನರೊಂದಿಗೆ ೧೭೭೬ರಲ್ಲಿ ಉಂಟಾದ ಭಿನ್ನಾಭಿಪ್ರಾಯದಿಂದ ಇತನ ಹೆಂಡತಿ, ಅತ್ತೆ-ಮಾವಂದಿರನ್ನು ವಿಜಾಪುರದ ಶಾಹಿಸುಲ್ತಾನರು ಬಂಧಿಸಿದರು. ನಂತರ ಅಧಿಕಾರಕ್ಕೆ ಬಂದ ಮುದಿಮಲ್ಲಪ್ಪ ದೇಸಾಯಿಯು ಕೂಡ ಅವರೊಂದಿಗೆ ಉತ್ತಮ ಸ್ನೇಹ ಸಂಬಂಧವನ್ನು ಹೊಂದಿದ್ದನು. ಆದ್ದರಿಂದ ಮುದಿಮಲ್ಲಪ್ಪ ದೇಸಾಯಿಯು ರವೂಫ್‌ಖಾನನೊಂದಿಗೆ ಒಪ್ಪಂದ ಮಾಡಿಕೊಂಡು ರಾಜ್ಯಭಾರ ಮಾಡಿದನು.

ಶ್ರೀರಂಗಪಟ್ಟಣದ ಒಪ್ಪಂದದ ಪ್ರಕಾರ ತುಂಗಭದ್ರಾ ನದಿಯ ಉತ್ತರದ ಪ್ರದೇಶಗಳನ್ನು ಪೇಶ್ವೆಯವರಿಗೆ ಬಿಟ್ಟುಕೊಡಲಾಗಿತ್ತು. ಆದರೆ ೧೭೮೭ರಲ್ಲಿ ಮಲ್ಲಸರ್ಜನ ದೇಸಾಯಿಯನ್ನು

ಬಂಧಿಸಿ, ಸರ್ವಸ್ವವನ್ನೂ ಟಿಪ್ಪು ಕಿತ್ತುಕೊಂಡು, ಅಲ್ಪ ಜೀವನಾಂಶವನ್ನು ಕೊಡಲು ನಿರ್ಧರಿಸಿ, ತನ್ನ ಪ್ರಾಂತಾಧಿಕಾರಿಯಾದ, ಬುದ್ರುತ್ ಜಮಾಲ್‌ಖಾನನನ್ನು ನೇಮಿಸಿದ್ದನು. ಆದರೆ ಮಲ್ಲಸರ್ಜನನು ಪೇಶ್ವೆಯವರೊಂದಿಗೆ ಒಪ್ಪಂದ ಮಾಡಿಕೊಂಡು ಕಪಾಳದುರ್ಗದಿಂದ ತಪ್ಪಿಸಿಕೊಂಡು, ಬರುವಾಗ ತೋರಿದ ಜಾಣ್ಮೆ, ಧೈರ್ಯ, ಸಾಹಸಗಳಿಂದ ಮಲ್ಲಸರ್ಜನನಿಗೆ ಪೇಶ್ವೆಯವರು 'ಪ್ರತಾಪ್‌ರಾವ್' ಎಂದು ಬಿರುದು ನೀಡಿರುವ ಮಲ್ಲಸರ್ಜನನ ಸಾಧನೆಯ ಪ್ರತೀಕವಾಗಿದೆ.

ಕಿತ್ತೂರು ಸಂಸ್ಥಾನ ಕೆಲವು ಅಕ್ಕಪಕ್ಕದ ದೇಶಗತಿಗಳೊಂದಿಗೆ ರಾಜಕೀಯ, ಧಾರ್ಮಿಕ ಹಾಗೂ ವೈವಾಹಿಕ ಸಂಬಂಧವನ್ನು ಹೊಂದುತ್ತಾ, ತನ್ನ ಅಸ್ತಿತ್ವವನ್ನು ಭದ್ರಪಡಿಸಿಕೊಳ್ಳಲು ಪ್ರಯತ್ನಿಸುತ್ತಿತ್ತು. ಆ ದೇಶಗತಿಯಲ್ಲಿ ಚಚಡಿ ದೇಸಗತಿಯೂ ವನಕಾಯುವವರೆಂದು ಕರೆಯಲಾಗುತ್ತಿತ್ತು. ಅಲ್ಲದೇ ಇವರನ್ನು 'ತುರ್ಕಾರ ಪಂಚಮರು' ಎಂತಲೂ ಕರೆಯುತ್ತಿದ್ದರು. ಇವರು ಕಿತ್ತೂರು ಸಂಸ್ಥಾನದೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದರು. ಆ ಸಂದರ್ಭದಲ್ಲಿ ಮಲ್ಲಸರ್ಜನ ಮೊದಲ ಪತ್ನಿ ರಾಣಿ ರುದ್ರಮ್ಮಳ ಪ್ರೇರಣೆಯಿಂದ ಇವರು ಲಿಂಗದೀಕ್ಷೆ ಪಡೆದು ವೀರಶೈವರಾದರು. ಅಲ್ಲದೇ ಕಾಗತಿ ದೇಶಗತಿಯ ೧೨ನೆಯ ದೊರೆ ಧೂಳಪ್ಪಗೌಡನ ಪತ್ನಿ ರಾಣಿ ಪದ್ಮಾವತಿಯ ಮಗಳು ರಾಣಿ ಚೆನ್ನಮ್ಮ ಕಿತ್ತೂರಿನ ಅರಸ ಮಲ್ಲಸರ್ಜನ ಪಟ್ಟದರಾಣಿಯಾಗಿದ್ದಳು. ಇನ್ನೋರ್ವ ಪತ್ನಿ ರಾಣಿ ರುದ್ರಮ್ಮ ತಲ್ಲೂರಿನ ದೇಶಗತಿಯ ವಂಶದವಳು. ಈ ದೇಶಗತಿಗಳಿಂದ ಸೈನ್ಯದ ಸಹಾಯ ಪಡೆದುಕೊಳ್ಳುತ್ತಿದ್ದರು.

ಕಿತ್ತೂರು ಸಂಸ್ಥಾನದವರು ಅನೇಕ ದೇಶಗತಿಯವರಿಗೂ ಸಹಾಯ ಹಸ್ತ ಚಾಚಿದರು. ಆಂಗ್ಲರಿಗೆ ಸಿಂಹಸ್ವಪ್ನವಾಗಿದ್ದ ತಲ್ಲೂರು ದೇಶಗತಿಯ ದೇಸಾಯಿ ಧೋಂಡಿಯ ವಾಘ (ಕ್ರಿ.ಶ. ೧೮೦೧)ನು ಮುನೋಳಿಯ ಕೋಟೆಯನ್ನು ವಶಪಡಿಸಿಕೊಳ್ಳುತ್ತಾನೆ. ಇದನ್ನು ಅರಿತ ಆಂಗ್ಲರು ಮುನೋಳಿಯ ಕೋಟೆಯನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದರು. ಇವರಿಗೆ ಅನೇಕ ಜಹಗೀರುದಾರರು ಬೆಂಬಲವನ್ನು ನೀಡಿದರು. ಆಗ ಧೋಂಡಿಯ ವಾಘನಿಗೆ ಕಿತ್ತೂರಿನ ಸಂಸ್ಥಾನಿಕರು ೧೦೦ ಅಶ್ವದಳ, ೧೦೦ ಕಾಲ್ದಳವನ್ನು' ನೀಡಿ ಸಹಕರಿಸಿದರು.

೧೮೨೪ರಲ್ಲಿ ಕಿತ್ತೂರು ಸಂಸ್ಥಾನವು ಪತನದಂಚಿನಲ್ಲಿದ್ದಾಗ, ಸಂಗೊಳ್ಳಿರಾಯಣ್ಣನು ಆಂಗ್ಲರ ವಿರುದ್ಧ ಹೋರಾಡಲು ತೀರ್ಮಾನಿಸಿ, ಕೃಷ್ಣಾ ಹಾಗೂ ಭೀಮಾ ನದಿಯ ಮಧ್ಯದಲ್ಲಿರುವ ಸುರಪುರ ಸಂಸ್ಥಾನದ ಅರಸನಾದ ರಾಜಾ ಕೃಷ್ಣಪ್ಪ ನಾಯಕನನ್ನು ಭೇಟಿಯಾದಾಗ ಕಿತ್ತೂರು ಸಂಸ್ಥಾನವು ಆಂಗ್ಲರ ವಶವಾದ ಸುದ್ದಿಯನ್ನು ತಿಳಿದು ದುಃಖಿತನಾದನು. ಅಲ್ಲಿಯ ಸೈನ್ಯದ ಸಹಾಯವನ್ನು ನೀಡಲು ದೊರೆ ಒಪ್ಪಿದನು. ಆಂಗ್ಲರನ್ನು ಹೊಡೆದೋಡಿಸಲು ಸಂಗೊಳ್ಳಿರಾಯಣ್ಣನ ಶೌರ್ಯವನ್ನು ಈ ಮೊದಲೇ ಕೇಳಿ ತಿಳಿದಿದ್ದ ರಾಜಾಕೃಷ್ಣಪ್ಪ ನಾಯಕನು ಯುದ್ಧದ ಸಾಮಗ್ರಿಗಳನ್ನು ರಾಯಣ್ಣನಿಗೆ ನೀಡುತ್ತಾನೆ. ಈ ಮಧ್ಯದಲ್ಲಿ ಆಂಗ್ಲರ ಸೈನಿಕರು, ಸಂಗೊಳ್ಳಿರಾಯಣ್ಣನನ್ನು

ಬಂಧಿಸಲು ಒಳಸಂಚು ಮಾಡಿ ನಂತರ ಆತನ ಸಂಬಂಧಿಕರಾದ, ಯಂಕನಗೌಡ, ಲಿಂಗನಗೌಡ ಮತ್ತು ಬಾಳನಾಯಕ ಎಂಬುವರು ಮೋಸದಿಂದ ಹಿಡಿದುಕೊಡುವಂತೆ ಮಾಡುತ್ತಾರೆ. ಹೀಗಾಗಿ ರಾಯಣ್ಣನನ್ನು ೨೬-೧-೧೮೩೧ರಲ್ಲಿ ಗಲ್ಲಿಗೇರಿಸುತ್ತಾರೆ.

